# ಜುಗಾರಿ ಕ್ರಾಸ್

ಪೂರ್ಣಚಂದ್ರ ತೇಜಸ್ವಿ

---

ಈ ಹೊತ್ತಗೆಯನ್ನು ಕನ್ನಡನುಡಿಯ ಸದಸ್ಯರಿಗೆ ಅಧ್ಯಯನ-ಪರಾಮರ್ಶೆಗೆ ಮಾತ್ರ ನೀಡಲಾಗಿದೆ.
ಹೊತ್ತಗೆಯನ್ನು ಕೊಂಡು ಓದಿ ಪ್ರೋತ್ಸಾಹಿಸಿ.

---

ಮಿಂಬಲೆಯಲ್ಲಿ ಕನ್ನಡ ಸಾಹಿತ್ಯಾಸಕ್ತರ ಕೂಟ
https://kannadanudi.wikidot.com

# ಮುನ್ನುಡಿ

ಈ ಕಾದಂಬರಿಯನ್ನು ಓದಿದವರು ಇದೊಂದು ರೊಮ್ಯಾಂಟಿಕ್ ಥ್ರಿಲ್ಲರ್ ಎಂದು ತಿಳಿಯಬಹುದು. ಆದರೆ ಇದು ನಿಜವಾಗಿಯೂ ಸಹ್ಯಾದ್ರಿಯ ಕಾಡುಗಳ ತಪ್ಪಲಿನಲ್ಲಿ ನಡೆಯುತ್ತಿರುವ ವಾಸ್ತವದ ಸಾಮಾಜಿಕ ಕಾದಂಬರಿ. ಕುವೆಂಪುರವರ ಕಾನೂರು ಹೆಗ್ಗಡಿತಿ, ಕಾರಂತರ ಮರಳಿ ಮಣ್ಣಿಗೆ ಕಾಲದ ಸಹ್ಯಾದ್ರಿಯ ಕಾಡುಗಳಿಗೂ ಇವತ್ತಿನ ಪರಿಸ್ಥಿತಿಗೂ ಇರುವ ಅಜಗಜಾಂತರ ವ್ಯತ್ಯಾಸಕ್ಕೆ ಈ ಕಾದಂಬರಿಯೇ ಉದಾಹರಣೆ.

ಕಾಡುಗಳು ಇವತ್ತು ಬಾಗಿಲು ತೆರೆದಿಟ್ಟ ಖಜಾನೆಗಳಾಗಿವೆ. ಈ ಕಾಡುಗಳ ಒಂದೊಂದೇ ಮರ ಎರಡು ಮೂರು ಲಕ್ಷ ಬೆಲೆಬಾಳುತ್ತದೆ. ಕಲ್ಲು ಕಳ್ಳರಿಗೆ, ಮರಗಳ್ಳರಿಗೆ, ಗಂಧ ಚಕ್ಕೆ ಕಳ್ಳ ಸಾಗಣಿಕೆ ಮಾಡುವ ಖದೀಮರಿಗೆ ಕಣ್ಣು ಹರಿಸಿದಲ್ಲೆಲ್ಲಾ ಹಣ ರಾಶಿ ಬಿದ್ದಿರುವಂತೆ ಕಾಣುತ್ತದೆ. ದುಡ್ಡು ಈ ರೀತಿ ಕೋಡಿ ಬಿದ್ದಿರುವಲ್ಲೆಲ್ಲಾ ಏನೇನು ರೂಪುಗೊಳ್ಳುತ್ತದೆಯೋ ಅದೆಲ್ಲ ಸಹ್ಯಾದ್ರಿಯ ಕಾಡಿನೊಳಗೆ ಶುರುವಾಗಿದೆ. ಕಾಡು ಕಾಳದಂಧೆಗಳ ತವರುಮನೆಯಾಗುತ್ತಿದೆ. ಕಾಡಿನಿಂದ ಉತ್ಪತ್ತಿಯಾಗುತ್ತಿರುವ ಕಾಳಧನ ನಮ್ಮ ದೇಶದ ಅತ್ಯುನ್ನತ ರಾಜಕೀಯವನ್ನು ಸಹ ನಿಯಂತ್ರಿಸುತ್ತಿದೆ. ಇಲ್ಲಿ ಕಟ್ಟುವ ಆಣೆಕಟ್ಟುಗಳಾಗಲಿ, ಮುಳುಗಡೆಯಾಗುವ ಕಾಡುಗಳಾಗಲಿ, ಕಲ್ಲು, ಅದುರುಗಳನ್ನು ತೆಗೆಯುವುದಾಗಲೀ ಜನಗಳಿಗಿಂತ ಹೆಚ್ಚಾಗಿ ರಾಜಕಾರಣಿಗಳಿಗೂ ರಾಜಕೀಯಕ್ಕೂ ಅಗತ್ಯವಾಗತೊಡಗಿದೆ. ಕಾಳವ್ಯವಹಾರಗಳ ವಿಷವೃತ್ತ ಈ ಮಟ್ಟ ತಲುಪಿದಮೇಲೆ ಕಾನೂನು ಮತ್ತು ನ್ಯಾಯಾಲಯಗಳು ಇದನ್ನು ಪ್ರತಿರೋಧಿಸಲಾರವು. ಜನಸಮಷ್ಟಿಯ ದೃಢ ನಿಶ್ಚಯ ಒಂದೇ ರಕ್ಷೆ. ಅನೇಕ ಪರಿಸರ ಆಂದೋಳನಗಳಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಭಾಗಿಯಾದಮೇಲೆ, ಈ ಚಿಕ್ಕ ಚಿಕ್ಕ ಗುಂಪುಗಳು, ಅನೇಕವೇಳೆ ಯಾವುದಕ್ಕೂ ಸಂಬಂಧಿಸದ ಮುಗ್ಧರು ಕೂಡ ಎಂತಹ ಪ್ರಾಣಾಪಾಯದ ಅಂಚಿನಲ್ಲಿ ಕಾಲಹಾಕಬೇಕಾಗುತ್ತದೆನ್ನುವುದು ನನ್ನ ಸ್ವಾನುಭವಕ್ಕೆ ಬಂತು.

ಇದೆಲ್ಲ ಈ ಕಥಾ ಭಿತ್ತಿಯ ಹಿನ್ನೆಲೆಯಷ್ಟೆ. ಒಂದು ಕಲಾಕೃತಿ ಓದುಗರ ಮನದಲ್ಲಿ ಅನುರಣಿಸುವ ನೂರಾರು ಅಂಶಗಳಲ್ಲಿ ಇದು ಒಂದು. ಆದರೆ ಒಂದು ಕಲಾಕೃತಿಯ ಅಂತಃಸ್ಸತ್ವ ಇರುವುದು ಕಾದಂಬರಿ ಓದಿದಾಗ ಏನೆನ್ನಿಸುತ್ತದೆಯೋ ಅದರಲ್ಲಿ. ನಮ್ಮ ಜೀವನದಲ್ಲಿ ಅನುಭವಗಳ ಮೊತ್ತ ಹೆಚ್ಚುತ್ತಾಹೋದಂತೆ ಕಾದಂಬರಿ ಮೈಗೂಡಿಸಿಕೊಳ್ಳುವ ಅರ್ಥಗಳ ಪ್ರಭಾವಳಿ ಮೊದಲ ಓದಿನಲ್ಲಿ ಅನ್ನಿಸಿದ್ದಕ್ಕೆ ಪೂರಕ ಎಂದಷ್ಟೆ ಹೇಳಬಹುದು.

'ಜುಗಾರಿ ಕ್ರಾಸ್' ಇನ್ನೂರ ಇಪ್ಪತ್ತೈದು ಪುಟಗಳಿದ್ದರೂ ಅದೊಂದು ಇಪ್ಪತ್ನಾಲ್ಕು ಗಂಟೆಗಳ ಸಣ್ಣಕಥೆ. ಏಕೆಂದರೆ ಸಹ್ಯಾದ್ರಿಯ ಸಾಮಾಜಿಕ ಸ್ಥಿತ್ಯಂತರಗಳ ಕಾಣ್ಕೆಯನ್ನು ಒಂದೇ ಒಂದು ಮಿಂಚಿನಲ್ಲಿ ನಿಮಗೆ ತೋರಿಸುತ್ತದೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿ

| ಅಧ್ಯಾಯ | ಪುಟ |
|---|---|
| ೧. ಜುಗಾರಿ ಕ್ರಾಸ್ | ......೧ |
| ೨. ಮೇದರಳ್ಳಿಯ ಅವಸಾನ | .......೭ |
| ೩. ದೇವಪುರದ ಛಿದ್ರ ಪ್ರತಿಮೆಗಳು | ....೧೪ |
| ೪. ಮಾತಾಡದ ಹುಡುಗಿ | .....೨೦ |
| ೫. ಹುಚ್ಚನ ಗಡಿಪಾರು | .....೨೬ |
| ೬. ಕ್ಯಾಪ್ಟನ್ ಖುದ್ದೂಸನ 'ಘಾಟಿ ಎಕ್ಸ್‌ಪ್ರೆಸ್' | .....೩೩ |
| ೭. ಗಾನ್‌ಕೇಸ್ ಸುರೇಶನ ಇತಿಹಾಸ | ....೪೦ |
| ೮. ಪುರಾತನ ಕಡತಗಳು | .....೪೬ |
| ೯. ಇಲಿ ಬೋನು | .....೫೨ |
| ೧೦. ಬಸ್ ಸ್ಟಾಂಡಿನ ಪವಾಡ | .....೫೯ |
| ೧೧. ಅಬ್ದೂಸಾಲಿಯ ಉಪದೇಶ | .....೬೬ |
| ೧೨. ಓಕೇ ಬಾಸ್! | .....೭೩ |
| ೧೩. ಚಕ್ರವ್ಯೂಹ | .....೮೦ |
| ೧೪. ಮನ್ಮಥ ಬೀಡಾ ಸ್ಟಾಲ್ | .....೮೭ |
| ೧೫. ಸುರೇಶ್ 'ಫಾರ್ ಸೇಲ್' | .....೯೪ |
| ೧೬. ಅಗ್ನಿಶಿಲೆ | ....೧೦೦ |
| ೧೭. ವಿಚಿತ್ರ ದರ್ಪಣ | ....೧೦೭ |
| ೧೮. ಸುರೇಶನ ವಿಶ್ಲೇಷಣೆ | ....೧೧೫ |
| ೧೯. ಚಳ್ಳೆಹಣ್ಣು | ....೧೨೩ |
| ೨೦. ಮೇಲ್ ಟ್ರೈನ್ | ....೧೨೯ |
| ೨೧. ಉತ್ತುಂಗ ರಾಜನ ಕಥೆ | ....೧೩೭ |
| ೨೨. ರತ್ನಮಾಲಾ | ....೧೪೪ |
| ೨೩. ನರ್ತಕಿಯೋ? ನದಿಯೋ? | ....೧೫೧ |
| ೨೪. ಪಿಸುಗುಟ್ಟಿದ ಕಾಳರಾತ್ರಿ | ....೧೫೮ |
| ೨೫. ಕತ್ತಲಿಗೆ ಜಿಗಿತ | ....೧೬೫ |
| ೨೬. ಅಶರೀರ ವಾಣಿ | ....೧೭೨ |
| ೨೭. ಪ್ರತಿರೂಪ | ....೧೭೯ |
| ೨೮. ಒಳದಾರಿ | ....೧೮೬ |
| ೨೯. ಕಮಾನು ಸೇತುವೆ | ....೧೯೩ |
| ೩೦. ಇಪ್ಪತ್ನಾಲ್ಕನೆಯ ಘಂಟೆ | ....೨೦೦ |

# ಜುಗಾರಿ ಕ್ರಾಸ್ - ೧



ಆಶ್ಚರ್ಯವಾಗಬಹುದು! ಸಹಸ್ರಾರು ಚದರಮೈಲಿ ವಿಸ್ತಾರದ ಕಾಡಿನ ನಟ್ಟನಡುವೆ ನಾಲ್ಕಾರು ದಾರಿ ಕೂಡುವ ಈ ಸರ್ಕಲ್ಲಿಗೆ ಯಾಕೆ ಜುಗಾರಿ ಕ್ರಾಸ್ ಎಂದು ಹೆಸರಿಟ್ಟಿದ್ದಾರೆ ಎಂದು! ಆ ನಿರ್ಜನ ಪ್ರದೇಶದಲ್ಲಿ ಯಾವ ಗಿರಾಕಿ ಸಿಕ್ಕುತ್ತದೆಂದು ಕಾಯುತ್ತಾ ಬಾಡಿಗೆ ಟ್ಯಾಕ್ಸಿಗಳು ನಿಂತಿರುತ್ತವೆಂದು! ಆ ಕೂಡು ರಸ್ತೆಗಳಲ್ಲಿ ಧರ್ಮಸ್ಥಳ, ಸುಬ್ರಮಣ್ಯ, ಕೊಲ್ಲೂರು, ಉಡುಪಿ, ಕಾರ್ಕಳ ಮುಂತಾದಲ್ಲಿಗೂ ಹೋಗುವ ರಸ್ತೆಗಳಿರುವುದರಿಂದ ಅಲ್ಲಿಗೆ ಹೋಗುವವರು ಟ್ಯಾಕ್ಸಿ ಮಾಡಿಕೊಂಡು ಹೋಗುತ್ತಾರೇನೋ ಎಂದು ಶಂಕಿಸಬಹುದು. ಈ ಪುಣ್ಯಕ್ಷೇತ್ರಗಳಿಗೆ ಹೋಗಬಹುದೆಂಬುದೇನೋ ನಿಜ! ಆದರೆ ಅಲ್ಲಿಗೆ ಬಂದು ಟ್ಯಾಕ್ಸಿ ಮಾಡಿಕೊಂಡು ಹೋಗುವವರು ಯಾರು? ಈ ಪ್ರಶ್ನೆಗೆ ಮಾತ್ರ ಉತ್ತರ ಕೇಳಬೇಡಿ! ಅಲ್ಲಿ ಫಾರೆಸ್ಟ್ ಚೆಕ್ ಪೋಸ್ಟಿನ ಬಳಿ ಒಂದು ದೊಡ್ಡ ಚಾ ಹೋಟೆಲ್ಲು ಸದಾ ನೊಣ ಹೊಡೆಯುತ್ತ ಬಿದ್ದಿರುತ್ತದೆ. ಅಲ್ಲಿರುವ ಇಬ್ಬರೇ ಗಿರಾಕಿ, ಫಾರೆಸ್ಟರ್ ಮತ್ತು ಗಾರ್ಡಿಗೆ ಹಡಬಿಟ್ಟಿ ಚಾ ಒದಗಿಸುತ್ತ ಅದನ್ನು ನಡೆಸುತ್ತಿರುವವರು ಯಾರು? ಅದನ್ನು ಕಟ್ಟಿಸಿದವರು ಯಾರು? ಹೀಗೆ ಈ ಭಯಂಕರ ಏಕಾಂತದ ಜುಗಾರಿ ಕ್ರಾಸ್ ನೋಡಿದವರಿಗೆ ನೂರಾರು ಕೌತುಕದ ಪ್ರಶ್ನೆಗಳು ಕಾಡುವುದರಲ್ಲಿ ಅನುಮಾನವೇ ಇಲ್ಲ.

ಜುಗಾರಿ ಕ್ರಾಸಿನ ಎಲ್ಲ ದಾರಿಗಳಿಗೂ ಒಂದೊಂದು ಬಲವಾದ ಗಳುವನ್ನು ಅಡ್ಡಲಾಗಿ ಕವೆಗೋಲಿನ ಮೇಲೆ ಕೂರಿಸಿರುತ್ತಾರೆ. ಮೊದಲು ಆ ಬಿದಿರು ಬೊಂಬುಗಳಿಗೆ

ಒಂದೊಂದು ಕೆಂಪು ಲಾಟೀನನ್ನು ಹೋಗಿ ಬರುವ ವಾಹನಗಳಿಗೆ ಸುಲಭವಾಗಿ ಗುರುತಿಸಲು ಸಾಧ್ಯವಾಗಲೆಂದು ಕಟ್ಟಿರುತ್ತಿದ್ದರು. ಆದರೆ ಅಲ್ಲಿ ನಡೆಯುವ ಕಾಳವ್ಯವಹಾರದ ದಂಧೆ ಇವ್ಯಾವುದನ್ನೂ ಗಮನಿಸುವ ಸ್ಥಿತಿಯಲ್ಲಿ ಇಲ್ಲದ್ದರಿಂದ ದಿನಕ್ಕೊಂದು ಬೊಂಬು ಮುರಿದು, ಲಾಟೀನು ಪುಡಿ ಪುಡಿಯಾಗಿ, ಅರಣ್ಯ ಇಲಾಖೆ ಈ ಲುಕ್ಸಾನು ತಡೆಯಲಾರದೆ ಲಾಟೀನು ಕಟ್ಟುವುದನ್ನು ಖೈದು ಮಾಡಿ ರಸ್ತೆ ಪಕ್ಕ ಅರಣ್ಯದಲ್ಲಿ ರಾಶಿ ಬಿದ್ದಿರುತ್ತಿದ್ದ ಬಿದಿರುಗಳನ್ನೇ ಒಂದೊಂದನ್ನು ತಂದು ಕೂರಿಸುತ್ತಿದ್ದರು. ಈ ಮಾರ್ಪಾಡಿನ ಅನಂತರವೇ ಅಲ್ಲಿನ ಫಾರೆಸ್ಟರ್ ಇಕ್ಬಾಲ್ ಸಾಬರಿಗೂ ಗಾರ್ಡ ಗುರಪ್ಪನಿಗೂ ಗೊತ್ತಾಗಿದ್ದು, ಲಂಚಕ್ಕೆ ಇಲ್ಲಿ ಹೋಗಿಬರುವ ವಾಹನಗಳನ್ನು ತಡೆದು ತಪಾಸಣೆ ಮಾಡಿ ಕೇಳಬೇಕಾದ್ದು ಇಲ್ಲ ಎಂದು. ಅದು ಸದ್ದಿಲ್ಲದೇ ಹೇಗೋ ತಾವು ಕುಳಿತಲ್ಲಿಗೇ ಬಂದು, ಮನೆಗೇ ಬೀಳುತ್ತದೆ ಎಂದು.

ಈ ಜ್ಞಾನೋದಯದ ಅನಂತರ ಅವರು ಖದೀಮರ ವಾಹನಗಳ ತಂಟೆಗೆ ಹೋಗುವುದನ್ನೇ ಬಿಟ್ಟುಬಿಟ್ಟರು. ಭತ್ತ, ಹುಲ್ಲು ಇತ್ಯಾದಿಗಳನ್ನು ಹೊತ್ತು ತರುವ ಚಿಲ್ಲರೆ ರೈತರ ಗಾಡಿಗಳಿಗೆ, ಅಂಟುವಾಳ ಸಾಗಿಸುವ ಬ್ಯಾರಿಗಳಿಗೆ, ಪುಡಿ ವ್ಯಾಪಾರಿಗಳಿಗೆ ಮಾತ್ರ ಕಾಟ ಕೊಡುತ್ತಿದ್ದರು.

ರೈತರ ಕೈಯ್ಯಲ್ಲಿ ಅವರು ದುಡ್ಡು ಕೀಳುತ್ತಿದ್ದ ವಿಧಾನ ಮಾತ್ರ ಬಹಳ ಸರಳವಾಗಿತ್ತು. ಫಾರೆಸ್ಟರ್ ಇಕ್ಬಾಲ್ ಗಾರ್ಡ ಗುರಪ್ಪನಿಗೆ ಗಾಡಿ ತಪಾಸಣೆ ಮಾಡಲು ಹೇಳುತ್ತಿದ್ದ. ಗುರಪ್ಪ ಇದಕ್ಕಾಗಿಯೇ ಮಾಡಿಟ್ಟುಕೊಂಡಿದ್ದ ತೆಳುವಾದ ಗಳುವನ್ನು ತೆಗೆದುಕೊಂಡು ಹುಲ್ಲಿನ ರಾಶಿಗೆ ಚುಚ್ಚಿ ತೂರಿಸಿ ಒಳಗೇನನ್ನಾದರೂ ಬಚ್ಚಿಟ್ಟಿದ್ದಾರೆಯೋ ನೋಡುತ್ತಿದ್ದ. ಈ ಎಲ್ಲ ಕಾರ್ಯಕ್ರಮ ನಡೆಯುತ್ತಿರಬೇಕಾದರೆ ರೈತರಿಗೆ ಅರ್ಥವಾಗಿ ಐದೋ ಹತ್ತೋ ಬಿಚ್ಚಿದನೋ ಸರಿ. ದುಡ್ಡು ಕೈಗೆ ಬಂದೊಡನೆ ಇಕ್ಬಾಲ್ "ಇಳಿಯೋ ಇಳಿಯೋ ಏನೂ ಇರೋಹಂಗೆ ಕಾಣೋದಿಲ್ಲ" ಎಂದು ಕೆಳಗಿನಿಂದಲೇ ಹೇಳುತ್ತಿದ್ದ. ದುಡ್ಡು ಬಿಚ್ಚಲಿಲ್ಲವೋ, ಗುರಪ್ಪ ಗಾಡಿ ಮೇಲಿನಿಂದಲೇ "ಗಳಕ್ಕೆ ಏನೋ ಗಟ್ಟಿ ತಾಗಿದ ಹಾಗೆ ಕಾಣ್ತದೆ ಸಾರ್" ಎಂದು ಹೇಳುತ್ತಿದ್ದ. ಸರಿ ಗಾಡಿಗೆ ತುಂಬಿದ ಹುಲ್ಲು ಮೆದೆಯನ್ನೆಲ್ಲಾ ಅನ್‌ಲೋಡು ಮಾಡು ಎಂದು ಹಿಡಿದುಕೊಳ್ಳುತ್ತಿದ್ದರು. ಐದೋ ಹತ್ತೋ ಲಂಚ ಉಳಿಸಲು ಹೋದ ರೈತ ಗಾಡಿ ಅನ್‌ಲೋಡು ಮಾಡಿ ಮತ್ತೆ ಲೋಡು ಮಾಡುವ ತೊಂದರೆಗೆ ಸಿಕ್ಕಿಕೊಂಡು ನರಂ ಆಗಿ ಬಾಲ ಮುದುರಿಕೊಳ್ಳುತ್ತಿದ್ದ.

ಆಮೇಲೆ ರೈತರ ನಾಟಕ ಶುರುವಾಗುತ್ತಿತ್ತು. ಕ್ರಮಬದ್ಧ ಪೂಜಾ ವಿಧಿಯಂತೆ ಪ್ರತಿಸಾರಿಯೂ ಪುನರಾವರ್ತನೆಯಾಗುವ ವಿಧಿಗಳಿವು. ರೈತರು ತಮ್ಮ ತೊಂದರೆ ತಾಪತ್ರಯಗಳನ್ನು ಆಮೂಲಾಗ್ರವಾಗಿ ಅವರಿಬ್ಬರೆದುರು ತೋಡಿಕೊಳ್ಳುತ್ತಿದ್ದರು. ಗಾರ್ಡ್ ಗುರಪ್ಪ ಅದಕ್ಕೆಲ್ಲಾ ಸಹಾನುಭೂತಿ ಸೂಚಿಸುತ್ತಾ "ನಾವೂ ಜನಗಳ ಕಷ್ಟಸುಖ ನೋಡೇ ಕಾನೂನು ಚಾಲಾಸ್ತೀವಿ ಅಂತಿಟ್ಟುಕೋ. ಕಾನೂನಿದೇ ಅಂತ ಕಣ್ಣು ಮುಚ್ಚಿಕೊಂಡು

ಮಖಾ ಮಾರೇ ನೋಡ್ದೇ ಇರಾಕಾಗಲ್ಲ'' ಎಂದು ತಾನು ಮಾತ್ರ ರೈತರ ಪರ ಇರುವಂತೆ ಮಾತಾಡುತ್ತಿದ್ದ. ಕೊನೆಗೆ ''ನೀವೂ ಸ್ವಲ್ಪ ನಮ್ದೂ ಕಷ್ಟ ಸುಖ ನೋಡಬೇಕು.'' ಎಂದು ದಾರಿಹೋಕರಿಗೆ ಗಂಟು ಬೀಳುತ್ತಿದ್ದರು.

ಕೂತಲ್ಲಿಗೆ ಸಂಬಳ ಮತ್ತು ಮಾಮೂಲಿ ಸಲೀಸಾಗಿ ಬಂದು ಬೀಳುತ್ತಿದ್ದರೂ ಇವರು ದಾರಿಯಲ್ಲಿ ಓಡಾಡುವ ಅಮಾಯಕರಿಗೆ ಹಿಂಸೆಕೊಡುತ್ತಿದ್ದುದಕ್ಕೆ ಕಾರಣ ಫಾರೆಸ್ಟರ್ ಇಕ್ಬಾಲ್ ಸಾಬರ ಲೋಭವೇ ಹೊರತು ಮತ್ತೇನೂ ಅಲ್ಲ. ತಮ್ಮ ಜಾತಿಯವನೊಬ್ಬ ಅರಣ್ಯ ಮಂತ್ರಿಯಾಗಿದ್ದಾಗ ಅರವತ್ತು ಸಾವಿರ ಲಂಚ ಕೊಟ್ಟು ಈ ಜಾಗಕ್ಕೆ ಹಾಕಿಸಿಕೊಂಡೆ. ಬೇರೆ ಕಡೆಗೆ ವರ್ಗ ಆಗುವುದಕ್ಕೆ ಮೊದಲು ನಾನು ಕೊಟ್ಟದ್ದಾದರೂ ಗಿಟ್ಟಬೇಡವೆ ಎಂದು ಆತನ ವಾದ. ಪ್ರತಿಯೊಬ್ಬರ ಬಳಿ ಲಂಚ ಕೇಳುವಾಗಲೂ ಅವನು ಇದನ್ನು ಘಂಟಾಘೋಷವಾಗಿ ಹೇಳುತ್ತಿದ್ದ. ಅಷ್ಟಲ್ಲದೆ ಪ್ರತಿ ತಿಂಗಳೂ ಮೇಲಿನವರಿಗೆ ಎಷ್ಟೆಷ್ಟು ಕಳಿಸಬೇಕು, ಅರಣ್ಯಾಧಿಕಾರಿಗಳು ಫಾರೆಸ್ಟ್ ಬಂಗಲೆಯಲ್ಲಿ ಉಳಿದುಕೊಂಡು ಮಜಾಮಾಡಿದ್ದಕ್ಕೆ ತನಗೆಷ್ಟು ಖರ್ಚು ಬಿದ್ದಿದೆ ಇತ್ಯಾದಿಗಳ ವಿವರಗಳನ್ನೂ ಕೊಡುತ್ತಿದ್ದ.

ಹೀಗಿದ್ದವನ ಪುಂಗಿ ಹಠಾತ್ತಾಗಿ ಬಂದ್ ಆಗಿ ಅವನು ಆಫೀಸಿನಿಂದ ಹೊರಗೆ ಬರುವುದನ್ನೇ ಸಂಪೂರ್ಣ ತ್ಯಜಿಸಿದ್ದಕ್ಕೆ ಕೆಲವು ಕ್ಷುಲ್ಲಕ ಘಟನೆಗಳು ಕಾರಣವಾದುವು.

ಒಮ್ಮೆ ಬಿಳ್ಳೂರಿಂದ ಹುಲ್ಲು ತುಂಬಿಕೊಂಡು ಬರುತ್ತಿದ್ದ ಗಾಡಿಸಾಲನ್ನು ತಡೆದು ಯಥಾಪ್ರಕಾರ ತಪಾಸಣೆಯ ನಾಟಕ ಪ್ರಾರಂಭ ಮಾಡಿದ್ದರು. ಗಾಡಿ ಸಾಲಿನಲ್ಲಿದ್ದ ಒಬ್ಬಿಬ್ಬರು ಹಸುರು ಟವಲ್ಲಿನ ರೈತರು ಯಾಕೋ ಒಳ್ಳೆ ಮೂಡಿನಲ್ಲಿರಲಿಲ್ಲ. ಜಗಳ ಪಗಳ ಆದರೆ ಅವರದೇ ಮೆಜಾರಿಟಿ ಇರುವುದನ್ನೂ ನೋಡಿದ ಮೇಲೆ ಅವರಿಗೆ ಕೊಂಚ ಧೈರ್ಯವೇ ಬಂದಿರಬೇಕು. ''ನಿನ್ನ ತಪಾಸಣೆ ಬೇಕಾದ್ದು ಮಾಡಿಕೋ. ಆದರೆ ಹುಲ್ಲು ಮಾತ್ರ ಕೆಳಗೆ ಹಾಕಿದ್ದನ್ನ ನೀವೇ ತುಂಬಿ ಲೋಡುಮಾಡಿ ಕೊಡಬೇಕು'' ಎಂದು ರಾಂಗ್ ಮಾಡುತ್ತಾ ಕುಳಿತರು.

ಒಂದು ಗಾಡಿಯ ಹುಲ್ಲನ್ನೆಲ್ಲಾ ಕೆಳಗೆ ಸುರುವಿ ಕುಳಿತಿದ್ದ ಇಕ್ಬಾಲ್ ಸಾಬಿಗೆ ರೇಗಿಹೋಯ್ತು. ತನ್ನಂಥ ಆಫೀಸರಿಗೆ ಲೋಡು ಮಾಡಿಕೊಡು ಎಂದು ಆಜ್ಞಾಪಿಸುತ್ತಿದ್ದಾರಲ್ಲಾ ಗಾಂಚಲಿ ಸೂಳೇಮಕ್ಕಳು! ನಾನೇನು ಇವರ ಜವಾನರಿಗೆ ಕೆಟ್ಟುಹೋದೆನೆ! ಎಂದುಕೊಂಡು, ತನ್ನಬಳಿ ಜೋಡು ನಳಿಗೆ ತೋಟಾ ಕೋವಿ ಇದೆಯೆಂದೂ, ಫೈರಿಂಗಿಗೆ ಸಹ ತನಗೆ ಪರವಾನಗಿ ಇದೆಯೆಂದೂ ರೋಪ್ ಹಾಕಿ ಆಫೀಸಿನೊಳಗಿಂದ ಜೋಡುನಳಿಗೆ ತೋಟಾ ಕೋವಿಯನ್ನೂ ಎರಡು ಕೆಂಬಣ್ಣದ ಎಲ್.ಜಿ ತೋಟಾಗಳನ್ನು ತಂದು ಸಹ ತೋರಿಸಿದ. ಆ ಒರಟು ರೈತರು ಕೋವಿಗೀವಿಗೆ ಬಗ್ಗುವ ಹಾಗೆ ಕಾಣಲಿಲ್ಲ. ಆ ಕಾಡಿನ ದಟ್ಟ ಏಕಾಂತದಲ್ಲಿರುವ ಈ ಇಬ್ಬರು ಕ್ಷುದ್ರ ಜೀವಿಗಳ ಬೆದರಿಕೆಗಳು ಅವರಿಗೆ ಭಯ ಹುಟ್ಟಿಸಲಿಲ್ಲ.

"ನಿನಗೇನಾದ್ರು ಬುದ್ಧಿಗಿದ್ದಿ ಇದಿಯೇನಯ್ಯ? ಡಿಪಾರ್ಟಮೆಂಟಿನೋರು ಕೊಟ್ಟಿರೋದು ಎರಡು ತೋಟ. ಅದ್ರಾಗೆಷ್ಟು ಜನಾನಾಂತ ಸಾಯಿಸ್ತೀಯ? ತೋಟ ಖಾಲಿ ಆದ್ಮೇಲೆ ನಿನ್ನತೆ?!! ಖಾಲಿ ಕೋವಿ ಹಿಡ್ಕೊಂಡು ಗುದ್ದಾಡ್ತೀಯ? ನಾವೆಷ್ಟು ಜನಾ ಇದೀವಿ, ನೀವೆಷ್ಟು ಜನಾ ಇದೀರ ಲೆಕ್ಕ ನೋಡಿದೀಯಾ?" ಎಂದು ತರಳೆ ತೆಗೆದದ್ದಲ್ಲದೆ ಗಾಡಿಗಳನ್ನೆಲ್ಲಾ ಯರ್ರಾಬಿರ್ರಿ ರಸ್ತೆಯಲ್ಲಿ ನಿಲ್ಲಿಸಿ, ಕೆಳಗೆ ಹಾಕಿದ ಹುಲ್ಲನ್ನು ಗಾಡಿಗೆ ತುಂಬಿ ಕೊಟ್ಟ ಹೊರತೂ ರಸ್ತೆ ಬಿಡುವುದಿಲ್ಲೆಂದು ಹಠ ಹಿಡಿದು ಕುಳಿತರು.

ಆಕಡೆ ಈಕಡೆ ಬಸ್ಸುಗಳೂ ಲಾರಿಗಳೂ ಹಲವಾರು ಜಮಾಯಿಸಿದುವು. ಒಬ್ಬಿಬ್ಬರು ಇಳಿದು ಬಂದು ಏನು ಸಮಾಚಾರ ಎಂದು ವಿಚಾರಿಸಿದರು. ಮಿಕ್ಕವರೆಲ್ಲಾ ವಾಹನಗಳೊಳಗೇ ಕುಳಿತುಕೊಂಡು 'ಪ್ಯಾ ಪ್ಯಾ ಪೀಪೀ' ಎಂದು ಹಾರನ್ ಕೂಗಿಸಿ ಅಸಾಧ್ಯ ಗಡಿಬಿಡಿ ಎಬ್ಬಿಸಿದರು. ಫಾರೆಸ್ಟರಿಗೆ ರೈತರ ಮೇಲೆ ನಖಶಿಖಾಂತ ಕೋಪ ಬಂದರೂ ಜಮಾಯಿಸುತ್ತಿದ್ದ ಜನಗಳನ್ನು ತನ್ನಪರವಾಗಿಸಿಕೊಳ್ಳಲು "ನಿಮ್ಮ ಮಿನಿಷ್ಟರೆ ಮಾಡಿರೋ ಕಾನೂನು. ನಿಮ್ಮದೇ ಸರ್ಕಾರ. ಕಾನೂನು ಮೀರೋಕಾಗತ್ತ ನಾವು? ಕಾನೂನು ತೆಗೆಸಿಹಾಕಿ ಬಿಡ್ರಿ. ನಾವಿಲ್ಲಿಂದ ಗುಡಾರ ಕಿತ್ಕೊಂಡು ಹೊರಟೋಗ್ತೀವಿ. ನಮಗೂ ರಗಳೆ ಇರೋದಿಲ್ಲ. ನಿಮ್ಗೂ ರಗಳೆ ಇರೋದಿಲ್ಲ" ಎಂದು ಹುಸಿ ವಿನಯ ಮತ್ತು ಕಾನೂನು ಶ್ರದ್ಧೆ ನಟಿಸುತ್ತಾ ಅಲ್ಲಿದ್ದವರಿಗೆಲ್ಲಾ ಬೇಜಾರು ಬರಿಸುವಂತೆ ಹೇಳಿದ್ದನ್ನೇ ಪದೇ ಪದೇ ಹೇಳುತ್ತ ಕಾಲ ಕಳೆಯುತ್ತಿದ್ದ.

ಸುತ್ತ ಕಾಡುಗತ್ತಲೆಯ ಗಾಢ ವಿಪಿನ. ದಾರಿಗಳು ಕಾಡಿನೊಳಗೆ ಮಾಡಿದ ಹಸುರು ಸುರಂಗಗಳಂತೆ ಕಾಣಿಸುತ್ತಿದ್ದುವು. ಅಕ್ಕಪಕ್ಕದ ಗಿರಿಶ್ರೇಣಿಗಳ ನೆತ್ತಿಗೆ ಮೋಡ ಮುತ್ತಿ ಆಗೀಗ ಕತ್ತಲು ಕವಿಯುವಂತೆ ನೆರಳು ಬೀಳುತ್ತಿತ್ತು. ಬಸ್ಸಿನೊಳಗಿದ್ದ ಹೆಂಗಸರು ಮಕ್ಕಳು ಆ ಕಾಡಿನ ಸ್ತಬ್ಧ ನೀರವತೆಗೆ ಹೆದರಿ ಕೊಂಡು ಮೂತ್ರವಿಸರ್ಜನೆಗೂ ಕೆಳಗಿಳಿಯಲಿಲ್ಲ. **ಚೆಕ್ ಪೋಸ್ಟ್** ಬಳಿ ವಾಗ್ವಾದದಲ್ಲಿ ದೇವಸ್ಥಾನದಲ್ಲಿ ತಲೆ ಬೋಳಿಸಿಕೊಂಡು ಬಂದ ಒಂದಿಬ್ಬರು ತಮಗೆ ಮುಂದೆ ಸಿಗಬೇಕಾದ ಕನೆಕ್ಷನ್ ಬಸ್ಸು ತಪ್ಪುತ್ತದೆಂದೂ, ಹಾಸನದಲ್ಲಿ ರೈಲಿಗೆ ಹೊತ್ತಾಗುತ್ತದೆಂದೂ ಅಂಗಲಾಚತೊಡಗಿದರು.

ಫಾರೆಸ್ಟರ್ ಮತ್ತೆ "ನಿಮ್ಮದೇ ಸರ್ಕಾರ........." ಇತ್ಯಾದಿ ಹಳೇ ರಿಕಾರ್ಡನ್ನೆ ಪುನರಾವರ್ತನೆ ಮಾಡುತ್ತಿರಬೇಕಾದರೆ ಯಾರೋ ಒಬ್ಬ ಲಾರಿ ಪಯಣಿಗ ಕಣ್ಣಿನವರೆಗೂ ಮಫ್ಲರ್ ಎಳೆದುಕೊಂಡಿದ್ದ ಮುಸುಡಿ ತೂರಿಸಿ "ಏ ತಿಕದ ಮೇಲೆ ಒದ್ದು ಕೋವಿ ಕಿತ್ಕೊಂಡು ಓಡಿಸ್ರೋ ಇವನ್ನ! ಯಾವನೋ ಈ ತರ್ಲೆ ನನ್ಮಗನ್ನ ಜುಗಾರಿ ಕ್ರಾಸಿಗೆ ಹಾಕಿದೋನು? ಕೇಳೋಕಡೆ ಕೇಳ್ಕೊಂಡು ಇಸ್ಕೊಳೋದು ಬಿಟ್ಟು ಹಾದಿ ಬೀದೀಲಿ ಹೋಗೋರತ್ರ ಭಿಕ್ಷ ಬೇಡ್ತಿದಾನೆ! ಥೂತ್!" ಎಂದು ಕ್ಯಾಕರಿಸಿ, ಕಫ ಉಗಿಯಲು ಗುಂಪಿನಲ್ಲಿ ಅತ್ತಿತ್ತ ಜಾಗ ಹುಡುಕಿದ.

ರೈತರಿಗೆ ತಮ್ಮಪರವಾಗಿ ವಕಾಲತ್ತು ವಹಿಸಿ ಜಗಳಕ್ಕೆ ಬಂದ ಇವನ ಮಾತಿನ

ಮರ್ಜಿ ನೋಡಿ ಆಶ್ಚರ್ಯದ ಜೊತೆಗೆ ತುಂಬಾ ಗಾಬರಿಯೂ ಆಯ್ತು. ಸರ್ಕಾರಿ ಅಧಿಕಾರಿಯಾದ ಇವನನ್ನು ಇಷ್ಟೊಂದು ತುಚ್ಛವಾಗಿ ಬಯ್ದರೆ ಫಾರೆಸ್ಟರ್ ರೇಗಿ ಖಂಡಿತ ಫೈರಿಂಗ್ ಮಾಡೇಬಿಡುತ್ತಾನೆಂದು ಹೆದರಿಹೋದರು.

ಆದರೆ ಅಲ್ಲಿದ್ದವರೆಲ್ಲಾ ಚಕಿತರಾಗುವಂತೆ ಫಾರೆಸ್ಟರ್ ಬಾಲ ಮೆಲ್ಲಗೆ ಮುದುರಿಕೊಳ್ಳತೊಡಗಿತು.

"ಆಯ್ತಪ್ಪ ಆಯ್ತು! ಗಾಡಿಗೆ ನಾವೇ ಹುಲ್ಲು ತುಂಬಿ ಕೊಡ್ತೀವಿ. ಸರೀನಾ! ಎಲ್ರಪ್ಪ, ಒಂದ್ಸಾರಿ ಹೋಗ್ತರೋರಿಗೆ ದಾರಿ ಕೊಡ್ರಪ್ಪ. ಗೌಡ್ರೆ! ನೀವು ಆ ಗಾಡಿ ಆಕಡೆ ತಗೊಳ್ಳಿ. ಇನ್ಯಾಕ್ರಿ ಸಿಟ್ಟು? ಎಲ್ಲ ಸೆಟ್ಲಾಯ್ತಲ್ಲ! ಹೋಗೋರೆಲ್ಲ ಹೋಗಿ ಬಿಡ್ಲಿ. ದಾರಿ ಕೊಡ್ರಿ. ಮುಖ್ಯ ಸರ್ಕಾರದ ಕಾನೂನಿಗೆ ಪಬ್ಲಿಕ್ ಸಪೋರ್ಟ ಸಿಕ್ಕದೇ ಇದ್ರೆ ನಾವೇನ್ಮಾಡೋಕಾಗತ್ತೆ?" ಎಂದು ಮರ್ಯಾದೆ ಉಳಿಸಿಕೊಳ್ಳುವ ಸಲುವಾಗಿ ಸ್ವಗತ ಭಾಷಣ ಗೊಣಗುತ್ತಾ ಗಾರ್ಡ ಗುರಪ್ಪನಿಗೆ ಗಾಡಿಯಿಂದ ಕೆಳಗೆಹಾಕಿರುವ ಹುಲ್ಲನ್ನೆಲ್ಲಾ ಮತ್ತೆ ಗಾಡಿಗೆ ತುಂಬಿಕೊಡಲು ಹೇಳಿದ. ರೈತರು ಗಾಡಿ ಪಕ್ಕಕ್ಕೆ ತಗೊಂಡು ರಸ್ತೆ ತೆರವುಮಾಡಿದರು. ಲಾರಿ ಬಸ್ಸುಗಳೆಲ್ಲಾ ಸರಸರ ಸಾಗಿದುವು. ಹುಲ್ಲು ತುಂಬಿಕೊಂಡ ರೈತರ ಗಾಡಿಗಳು ಕಿಂಕಿಣಿ ನಾದದೊಂದಿಗೆ ಮತ್ತೆ ಸಾಲುಗಟ್ಟಿ ಮುಂದೆ ಸಾಗಿದುವು. ಜುಗಾರಿ ಕ್ರಾಸ್ ಖಾಲಿಯಾಯ್ತು.

"ಈ ಮೂರ್ಕಾಸಿನ ಸೂಳೇಮಕ್ಳ ನಿಲ್ಸಿ ಇನ್ಮೇಲಿ ಒಂದಮ್ಡಿ ಕೇಳಬಾರ್ದು ಸಾರ್" ಎಂದು ಗಾರ್ಡ್ ಗುರಪ್ಪ ಫಾರೆಸ್ಟರಿಗೆ ಹೇಳಿದ.

ಇಕ್ಬಾಲ್ ಗುರಪ್ಪನ ಮಾತಿಗೆ ಉತ್ತರಿಸಲಿಲ್ಲ. ಆ ಮಫ್ಲರ್ ಮುಖ ಉಗಿದ ಕೂಡಲೆ ಅವನು ಹಠಾತ್ತಾಗಿ ಭೀತನಾದುದಕ್ಕೆ ಆ ಮುಖ ತಮಗೆ ಖಾಯಂ ಮಾಮೂಲಿ ಕೊಡುವ ಧಣಿಗಳೊಬ್ಬರ ಕಡೆಯವನಂತೆ, ಯಾವುದೋ ಒಂದು ಜಾಲದ ಸದಸ್ಯನಂತೆ ಅನ್ನಿಸಿತ್ತು. ಯಾವ ಕ್ಷಣದಲ್ಲಿ ಪರಮಾತ್ಮ ಯಾವ ರೂಪದಲ್ಲಿ ಅವತರಿಸಿ ಬರುತ್ತಾನೋ ಎಂದು ಸದಾ ಗುಮಾನಿಯಲ್ಲಿ ನಿರೀಕ್ಷಿಸುವ ಭಕ್ತನಂತೆ, ತಿಂಗಳು ತಿಂಗಳೂ ಬಂದು ಬೀಳುವ ಮಾಮೂಲಿ ಗಿಂಬಳ ಎಲ್ಲಿಂದ ಬರುತ್ತೆ? ಯಾರಿಂದ? ಯಾಕಾಗಿ? ಎಂದೂ ಗೊತ್ತಿಲ್ಲದ ಇಕ್ಬಾಲ್‌ನಂಥ ಅನೇಕ ಸರ್ಕಾರಿ ಅಧಿಕಾರಿಗಳು ದುಡ್ಡು ನುಂಗಿದ ಸಂತೋಷದೊಡನೆ ಸದಾ ಸಂಶಯ ಅನುಮಾನ ಗೊಂದಲ ಮತ್ತು ಅದೃಶ್ಯ ಹಂಗಿನಲ್ಲಿ ಕಾಲ ದೂಡುತ್ತಿದ್ದರು. ಕಾರ್ಯಕಾರಣ ಸಂಬಂಧವಿಲ್ಲದ ಹಣ ಬಂದು ಜೇಬಿಗೆ ಬಿದ್ದೊಡನೆ ನಿರಂತರ ಭೀತಿಯ ನೆರಳಿಗೆ ಸಿಕ್ಕಿಕೊಳ್ಳುತ್ತಿದ್ದರು. ಇದಲ್ಲದೆ ಯಾರೋ ಎಲ್ಲೋ ಏತಕ್ಕೋ ತೆಗೆದುಕೊಂಡ ನಿರ್ಣಯದ ಫಲವಾಗಿ ಅನೇಕರು ಅನೇಕ ವೇಳೆ ಅಲ್ಲಿ ಹೆಣವಾಗುತ್ತಿದ್ದರು, ಇಲ್ಲವೇ ನಾಪತ್ತೆಯಾಗುತ್ತಿದ್ದರು. ಆದ್ದರಿಂದಲೆ ಇಕ್ಬಾಲ್‌ಗೆ ಆರನೆಯ ಇಂದ್ರಿಯವೊಂದು ಅತಿ ಜಾಗರೂಕತೆ ವಹಿಸುವಂತೆ ಎಚ್ಚರಿಕೆ ಕೊಟ್ಟಿದ್ದರಲ್ಲಿ ಆಶ್ಚರ್ಯವೇನಿರಲಿಲ್ಲ!

ಅವತ್ತಿನಿಂದ ಇಕ್ಬಾಲ್ ಬೇರೆ ಸಿಸ್ಟಂ ಮಾಡಿದ. ರಸ್ತೆ ನಡುವಿನ ಅಡ್ಡ ಗಳಕ್ಕೆ ಹಿಂದುಗಡೆ ಕಲ್ಲುಕಟ್ಟಿ ತೂಕ ಹೇರಿದ. ಕಲ್ಲಿಗೆ ದಾರ ಕಟ್ಟಿ, ಆಫೀಸಿನ ಒಳಗಿಂದಲೇ ದಾರ ಎಳೆದರೆ ಸಾಕು, ಚೆಕ್ ಪೋಸ್ಟಿನ ಅಡ್ಡಬಿದಿರು ಮೇಲೆದ್ದು ಬರುವ ವಾಹನಗಳಿಗೆ ದಾರಿಕೊಡುತ್ತಿತ್ತು. ವಾಹನಗಳ ನಿರ್ಗಮನದ ಅನಂತರ ಬಿದಿರುಗಳ ಕೆಳಗಿಳಿದು ಮತ್ತೆ ರಸ್ತೆ ಬಂದಾಗುತ್ತಿತ್ತು. ಇಕ್ಬಾಲ್‌ಗೆ ಹೋಗಿ ತಪಾಸಣೆ ಮಾಡುವ ಪ್ರಮೇಯವೇ ತಪ್ಪಿತು.

ಹೆದರುಪುಕ್ಕಲನಾದ ಇಕ್ಬಾಲ್ ಅಡ್ಡಬಿದಿರು ಗಳಗಳನ್ನು ಕಿತ್ತೆಸೆದು ರಸ್ತೆ ಕಂಪ್ಲೀಟು ಖುಲ್ಲಾ ಮಾಡಲೂ ತಯ್ಯಾರಿದ್ದ. ಆದರೆ ಒಮ್ಮೊಮ್ಮೆ ಸ್ಟ್ರಿಕ್ಟ್ ಆಫೀಸರುಗಳು ಬರುತ್ತಾರೆ. "ರೂಲ್ಸ್ ಪ್ರಕಾರ ಯಾಕೆ ನೀನು ಇಲ್ಲಿ ಗೇಟ್ ಬಂದ್ ಮಾಡಿಲ್ಲ" ಎಂದು ನೋಟೀಸ್ ಕೊಟ್ಟೇ ಬಿಡುತ್ತಾರೆ. ಆಮೇಲೆ ಡಿಪಾರ್ಟ್‌ಮೆಂಟಿನ ಯಾವ್ಯಾವ ನಾಯಿ ನರಿಗಳಿಗೆಲ್ಲಾ ಕೈಕಾಲು ಹಿಡಿಯಬೇಕು! ಜುಗಾರಿ ಕ್ರಾಸ್‌ನವನು ಎಂದರೆ ಸಾಕು, ಎಲ್ಲ ಹೆಣಕ್ಕೆ ಮುತ್ತುವ ರಣಹದ್ದುಗಳಾಗುತ್ತಾರೆ! "ಅಲ್ಲಾ ಇಂಥಾ ಜಂಗ್ಲಿಯಲ್ಲಿ ಒಂದು ಜೋಡುನಳಿಗೆ ತೋಟಾ ಕೋವಿ, ಎರಡು ಎಲ್.ಜಿ. ತೋಟಾ ಇಟ್ಟುಕೊಂಡು ಇವರ ಕಾಡು ಕಾಯೋದಕ್ಕೆ ಬುದ್ಧಿ ಇದ್ದ ಸೂಳೇಮಗ ಯಾವನಾದ್ರೂ ಇಲ್ಲಿಗೆ ಬರ್‍ತಾನ? ಅದೂ ಲಂಚ ಕೊಟ್ಟು!! ಮೂರು ಕಾಸಿನ ಸಂಬಳಕ್ಕೆ ಇವರ ಕಾನೂನಿಗೋಸ್ಕರ ಪ್ರಾಣ ಬಿಡಬೇಕಾ?" ಎಂದೆಲ್ಲ ಎಷ್ಟೋ ಸಾರಿ ಇಕ್ಬಾಲ್ ಯೋಚಿಸಿದ್ದ.

ಸುರೇಶನೂ ಸುರೇಶನ ಹೆಂಡತಿ ಗೌರಿಯೂ ಒಂದು ದಿನ ಐವತ್ತು ಕೆ.ಜಿ. ಏಲಕ್ಕಿ ಮೂಟೆ ಹೊತ್ತುಕೊಂಡು ಚೆಕ್‌ಪೋಸ್ಟಿನ ಬಳಿಯ ಮರದಡಿ ನೆರಳಿನಲ್ಲಿ ಇಟ್ಟು ಬಸ್ಸಿಗೆ ಕಾಯುತ್ತಾ ಕುಳಿತಾಗ ಫಾರೆಸ್ಟರು ಒಮ್ಮೆ ಪರಿಚಯದ ನಗು ಬೀರಿ ಸುಮ್ಮನಾದುದಕ್ಕೆ ಇದೇ ಕಾರಣ.

ಮೊದಲಾಗಿದ್ದರೆ ಆ ಮೂಟೆಯೊಳಗಿರುವುದೇನು? ಎಲ್ಲಿಂದ ತಂದೆ? ನೀನೇ ಬೆಳೆದಿದ್ದಾ? ಗ್ರಾಮ ಸೇವಕನ ಸರ್ಟಿಫಿಕೇಟು ಎಲ್ಲಿ? ಇತ್ಯಾದಿ ತರಳೆ ತೆಗೆದು ಫಾರೆಸ್ಟರು ಕೊನೇ ಪಕ್ಷ ಎರಡು ಮುಷ್ಟಿ ಏಲಕ್ಕಿಯನ್ನಾದರೂ ಮನೆ ಖರ್ಚಿಗೆ ಕೇಳದೆ ಬಿಡುತ್ತಿರಲಿಲ್ಲ.

ಏಲಕ್ಕಿ ರೇಟು ತಾರಾಮಾರಿ ಏರಿತ್ತು. ಸುರೇಶ ಇನ್ನೂ ಏಲಕ್ಕಿ ಮಾರದೆ ಇಟ್ಟುಕೊಂಡಿದ್ದಕ್ಕೆ ಸಂತೋಷಪಡುತ್ತ, ದೇವಪುರದ ಯಾವ ಮಂಡಿಗೆ ಹರಾಜಿಗೆ ಒಯ್ಯಲಿ, ಎಷ್ಟಕ್ಕೆ ಹೋಗಬಹುದು, ಎಂದು ಕನಸು ಕಾಣುತ್ತ, ಬಸ್ ಕಾಯುತ್ತಾ ಕುಳಿತ. ಸುರೇಶನ ಈ ವರೆಗಿನ ಎಲ್ಲ ಹುಚ್ಚಾಟಗಳನ್ನೂ ಸಹಿಸಿದ್ದ ಅಕ್ಷರಶಃ ಸಹಧರ್ಮಿಣಿಯಾಗಿ ಸಂಗಾತಿಯಾಗಿದ್ದ ವಿಚಿತ್ರ ಹುಡುಗಿ ಗೌರಿ ಮಾತ್ರ ಏನನ್ನೂ ಯೋಚಿಸುತ್ತಿರಲಿಲ್ಲ. ವರ್ಷಕ್ಕೆ ಹತ್ತಾರುಸಾರಿ ಪೇಟೆಗೆ ಹೋಗಲು ಸಿಕ್ಕುವ ಸದವಕಾಶದಿಂದಲೇ ಅವಳಿಗೆ ಸಾಕಷ್ಟು ಸಂತೋಷವಾಗಿತ್ತು.

# ಮೇದರಳ್ಳಿಯ ಅವಸಾನ - ೨



ಮಂಗಳೂರಿನಿಂದ ಬೆಂಗಳೂರಿನ ಕಡೆಗೆ ಹೊರಟರೆ ಹತ್ತಾರು ಮೈಲು ಸಾಗುವುದರೊಳಗೆ ನಿಮಗೆ ದೂರದಿಗಂತದಲ್ಲಿ ಆಕಾಶದ ನೀಲಿಯಲ್ಲಿ ನೀಲಿಯಾಗಿ ಪರ್ವತಶ್ರೇಣಿಗಳು ಮುಗಿಲೆತ್ತರದ ಗರಗಸದ ಹಲ್ಲುಗಳಂತೆ ಅಡ್ಡಗಟ್ಟಿ ನಿಂತಿರುವುದು ಕಾಣಿಸುತ್ತದೆ. ಕಡಲ ತೀರದಿಂದ ನೀವು ಯಾವ ದಾರಿಯನ್ನೇ ಹಿಡಿಯಿರಿ ಈ ಗಿರಿತರಂಗಗಳು ನಿಮಗೆ ಇದಿರಾಗೇ ಆಗುತ್ತವೆ. ಶಿರಾಡಿ, ಆಗುಂಬೆ, ಚಾರ್ಮಾಡಿ, ಹುಲಿಕಲ್ಲು, ಬಿಸಲೆ, ಮಡಕೇರಿ, ಎಲ್ಲಿ ಯಾವ ಕಡೆಯಿಂದ ಮುಂದುವರಿದರೂ ಈ ಅಡ್ಡಗಟ್ಟಿನಿಂತ ಗಿರಿ ಶ್ರೇಣಿಗಳ ಕಿರಿದಾದ ಘಾಟಿರಸ್ತೆಯನ್ನು ಸುತ್ತಿಸುತ್ತಿ ಹತ್ತಬೇಕಾದ್ದು ಅನಿವಾರ್ಯ. ಆದರೆ ಬಯಲುಸೀಮೆ ಕಡೆಯಿಂದ ಕಡಲತಡಿಯ ಕಡೆಗೆ ಹೊರಟವರಿಗೆ ಪಶ್ಚಿಮ ಘಟ್ಟಗಳ ಪರ್ವತಶ್ರೇಣಿಗಳು ಈ ರೀತಿ ನಾಟಕೀಯವಾಗಿ ಇದಿರಾಗುವುದಿಲ್ಲ. ನಿಧಾನವಾಗಿ ಕುರುಚಲು ಕಾಡು ಪ್ರಾರಂಭವಾಗಿ ಆಮೇಲೆ ಮತ್ತಿ, ಹೊನ್ನೆ, ತೇಗ, ನಂದಿ, ಮುಂತಾದ ಉದುರೆಲೆಯ ಮರಗಳ ಕಾಡಾಗಿ ಪರಿವರ್ತನೆಯಾಗಿ ಅನಂತರ ಪರ್ವತ ಶ್ರೇಣಿಗಳು ಎದುರಾಗುವ ಹೊತ್ತಿಗೆ ದಟ್ಟ ಹಸುರಿನ ನಿತ್ಯಹರಿದ್ವರ್ಣದ ಕಗ್ಗಾಡು ಕವಿಯುತ್ತದೆ.

ದೇವಪುರದಿಂದ ಮುಂದಿನ ದಾರಿಯಂತೂ ಮೈಲಿ ಮೈಲಿಯವರೆಗೆ ಪರ್ವತದ ಏರು ತಗ್ಗುಗಳಲ್ಲಿ ನಿಬಿಡವಾಗಿ ಮೆತ್ತಿಕೊಂಡಿರುವ ಕಾಡಿನೊಳಗೆ ನುಸಿದು ಹೋಗುತ್ತದೆ.

ಯಾರಿಗಾದರೂ ಒಮ್ಮೆಲೇ ಅನಾಥರಾದಂತೆನ್ನಿಸುವ ವಿಚಿತ್ರ ಪರಿಸರ ಅದು. ದೇವಪುರದಿಂದ ಮೂರು ಮೈಲು ಹೋಗುವುದರೊಳಗೇ ಕೊನೆಯ ಕಾಫಿ ತೋಟದ ಬೇಲಿಯೂ ಮುಗಿಯುತ್ತದೆ. ಅನಂತರ ಹೆಣೆದುಕೊಂಡಂತೆ ಕವಿದಿರುವ ಕಾಡಿನ ಅಡಿ ವಾಹನಗಳು ಇರುವೆ ತೆವಳಿದಂತೆ ಮುಂದುವರಿಯಬೇಕು. ಈ ದಾರಿಯ ಎಡ ಬಲದ ಪಾತಾಳದ ಕಣಿವೆಗಳಲ್ಲಿ ಎಂದೂ ಬತ್ತದ ಅನೇಕ ಜೀವ ನದಿಗಳು ಸ್ಫಟಿಕ ಶುಭ್ರವಾದ ನೀಲಿಯ ನೀರಿನ ಹೊನಲುಗಳಾಗಿ ಬಂಡೆಯಿಂದ ಬಂಡೆಗೆ ಬೆಳ್ನೊರೆ ಕಾರುತ್ತಾ ಹಾರುವುದನ್ನು ನೋಡಬಹುದು. ರಸ್ತೆ ಸಮುದ್ರ ಮಟ್ಟಕ್ಕೆ ಆ ಹಳ್ಳಗಳ ಸಮತಳಕ್ಕೆ ಇಳಿಯುವ ಮೊದಲೇ ಆ ಹಳ್ಳಗಳೆಲ್ಲಾ ಒಂದಕ್ಕೊಂದು ಸೇರಿಕೊಳ್ಳುತ್ತಾ ದೊಡ್ಡ ಭೋರ್ಗರೆವ ನದಿಯಾಗುತ್ತದೆ. ಆದರೂ ಇದು ಪಶ್ಚಿಮದ ಕಡಲಕಡೆಗೆ ಹರಿಯುವುದರಿಂದ ಸಮುದ್ರದ ಪಾರಾವಾರ ಸೇರಲು ಹೆಚ್ಚೇನೂ ದೂರ ಹರಿಯಬೇಕಿಲ್ಲ.

ಇಷ್ಟು ನಿರ್ಜನವಾದ ಈ ರಸ್ತೆಯಲ್ಲೂ ಅಲ್ಲಲ್ಲಿ ಎಲ್ಲೋ ಒಂದೊಂದು ಮಂಕು ಹಿಡಿದ ಮನೆಗಳೂ ನಾಲ್ಕಾರು ಅಡಕೆಯ ಮರಗಳೂ ಕಣಿವೆಗಳ ತಿರುವಿನಲ್ಲಿ ಹಠಾತ್ತಾಗಿ ಕಾಣಿಸಿಕೊಂಡು ಮರೆಯಾಗುತ್ತವೆ. ಅವುಗಳಲ್ಲಿ ಆ ಕಾಡಿನ ನಡುವಿನ ಹತ್ತನೆಯದೋ ಹನ್ನೆರಡನೆಯದೋ ತಿರುವು ದಾಟಿದ ಕೂಡಲೆ ಬಲಕ್ಕೆ ಕಾಣುವ ನಾಲ್ಕಾರು ಜೋಪಡಿಗಳ ಹಾಳೂರು ನೋಡಿದವರ ನೆನಪಿನಲ್ಲಿ ಕೆಲಕಾಲ ಉಳಿದು ಕೊರೆಯುತ್ತದೆ. ಅಲ್ಲಿ ಮಲಗಿರುವ ಒಂದೆರಡು ಕಂತ್ರಿ ನಾಯಿಗಳನ್ನು ಬಿಟ್ಟರೆ ಬಹುಶಃ ಅಲ್ಲಿ ನಿಮಗೆ ಇನ್ನೊಂದು ಮಾನವಾಕೃತಿ ಕಾಣಲಾರದು.

ಸುತ್ತ ಭೀಕರವಾಗಿ ಬೆಳೆದ ಕಾಡಿನ ನಡುವೆ ಮುರುಟಿದ ಸೂರಿನ ಕುಸಿದ ಗೋಡೆಗಳ ಈ ಜೋಪಡಿಗಳು ಖಾಯಿಲೆ ಹಿಡಿದ ಮುದುಕರಂತೆ ಕಾಣುತ್ತಿದ್ದವು. ಅನೇಕ ಜೋಪಡಿಗಳ ಮೇಲೆ ಆಗಲೇ ಉರುಚಟ್ಲೆ ಬೀಳುಗಳು ಹಬ್ಬಿ ಜೋಪಡಿಗಳ ಆಕಾರವನ್ನೇ ಮರೆಸಿದ್ದವು. ಇಡೀ ಊರಿಗೆ ಊರೇ ನೆಲಸಮವಾಗಿ ಅಲ್ಲಿ ಹೆಮ್ಮರಗಳು ಬೆಳೆದು ನಿಲ್ಲುವುದು ನಾಳೆ ನಾಳಿದ್ದಿನ ಕಾಲದ ಪ್ರಶ್ನೆಯಾಗಿತ್ತು. ಅವಕಾಶ ಸಿಕ್ಕರೆ ಕೋಟೆ ಕೊತ್ತಲಗಳ ಹೆಗ್ಗಲ್ಲುಗಳನ್ನೇ ಬೇರುಗಳಿಂದ ಮೀಟಿ ಉರುಳಿಸಿ ಬೆಳೆದು ನಿಲ್ಲುವ ಕಾಡಿಗೆ, ಯಾರೋ ಹಾಕಿರುವ ತಾತ್ಕಾಲಿಕ ಜೋಪಡಿಗಳಂತೆ ಕಾಣುವ ಈ ಹಾಳೂರನ್ನು ಹೊಸಕಿ ಹಾಕುವುದೇನು ದೊಡ್ಡದೇ!

ಈ ಹಾಳೂರನ್ನು ಒಂದಾನೊಂದು ಕಾಲದಲ್ಲಿ 'ಮೇದರ ಹಳ್ಳಿ' ಅಥವಾ 'ಮೇದರಳ್ಳಿ' ಎಂದು ಕರೆಯುತ್ತಿದ್ದರು. ಅದು ಜೀರ್ಣಾವಸ್ಥೆಗೆ ಹೋಗುತ್ತಿದ್ದಂತೆಯೇ ಅದರ ಹೆಸರು ಎಲ್ಲರ ಜ್ಞಾಪಕದಿಂದಲೂ ನಾಲಗೆಯಿಂದಲೂ ಅಳಿಸಿಹೋಗಿ ಅದೊಂದು ಹಾಳೂರಾಯ್ತು. ಒಂದೆರಡು ಜೋಪಡಿಗಳಿಂದ ಆಗೀಗ ಏಳುವ ಹೊಗೆಯೊಂದೆ ಅಲ್ಲಿ ಇನ್ನೂ ಜೀವಸಂಚಾರ ಇದೆ ಎನ್ನುವುದಕ್ಕೆ ಕುರುಹಾಗಿತ್ತು. ನಾಗರೀಕತೆಯಿಂದ ಸಂಪೂರ್ಣ ಕಣ್ಮರೆಯಾಗಿ ಈ ಮಹಾರಣ್ಯದೊಳಗೆ ಕಳೆದೇ ಹೋಗಲು ಯಾರು ಏಕಾದರೂ ಕರಡದ

ಹುಲ್ಲಿನ ಜೋಪಡಿಗಳನ್ನು ಅಲ್ಲಿ ನಿರ್ಮಿಸಿದರೋ ಎಂದು ಅಚ್ಚರಿಯಾಗುತ್ತದೆ. ಈ ಮೇದರ ಹಳ್ಳಿಗೆ ಟಿಪ್ಪೂ ಸುಲ್ತಾನನ ಕಾಲದಷ್ಟು ಹಳೆಯ ಚರಿತ್ರೆ ಇದೆಯೆಂದರೆ ಯಾರಿಗೂ ನಂಬಿಕೆ ಬರುವುದಿಲ್ಲ.

ಆ ಊರಿನಲ್ಲಿ ಹುಟ್ಟಿದ ಹೆಣ್ಣುಮಗಳೊಬ್ಬಳನ್ನು ಅವಳ ಗಂಡನೇ ವ್ಯಭಿಚಾರಕ್ಕೆ ಬಲಾತ್ಕರಿಸಿದ್ದರಿಂದ ಅವಳ ಶಾಪ ತಟ್ಟಿ ಊರು ಹಾಳುಬಿತ್ತೆಂದು ಜನ ಆಡಿಕೊಳ್ಳುತ್ತಿದ್ದರು. ಆದರೆ ಊರು ಹಾಳು ಬೀಳಲು ಆರಂಭವಾದ ತರುವಾಯ ಬಡತನದ ದವಡೆಗೆ ಸಿಕ್ಕ ಆ ಊರಿನಲ್ಲಿ ಇಂಥವೆಲ್ಲ ಸಂಭವಿಸಿರಬೇಕೇ ಹೊರತು ಶಾಪದಿಂದ ಊರು ಹಾಳಾಗುತ್ತದೆಂದು ಹೇಳುವುದು ಕಷ್ಟ. ಊರುಗಳು ಹಾಳುಬೀಳಲಿ ಉದ್ಧಾರವಾಗಲಿ, ಊರಿದ್ದಲ್ಲಿ ಅವ್ಯವಹಾರ ಎಂಬ ಗಾದೆಯೇ ಇದೆಯಲ್ಲ. ಪಾಪಭೀರುಗಳೂ, ದೈವಭಕ್ತರೂ ಆದ ದೇವಪುರ ಪ್ರಾಂತದ ಜನ ತಮ್ಮ ದೈವ ಶ್ರದ್ಧೆಯ ಪ್ರತೀಕವಾಗಿ ಇಂಥ ಕಥೆಗಳನ್ನು ಹುಟ್ಟಿಸಿ ನಂಬುತ್ತಿದ್ದರು.

ಮೇದರಳ್ಳಿ ಅಲ್ಲಿ ಮೊಳಕೆಯೊಡೆದು ಚಿಗುರಿದ್ದಕ್ಕೆ ಕಾರಣ ಅದರ ಆಸುಪಾಸಿನಲ್ಲಿ ಸಾವಿರಾರು ಚದರಮೈಲಿ ಅಕ್ಷಯವಾಗಿ ಬೆಳೆದಿದ್ದ ಹೆಬ್ಬಿದಿರು, ವಾಟೆ ಬಿದಿರು, ಕಿರುಬಿದಿರು ಇತ್ಯಾದಿಗಳು. ಅಲ್ಲಿನ ಬಿದಿರು ಎಷ್ಟು ಒಳ್ಳೆಯದೆಂದರೆ ತಲೆಯಿಂದ ಬುಡದವರೆಗೆ ತೆಳ್ಳಗೆ ದಾರದಂತೆ ಸೀಳಬಹುದಿತ್ತು. ಸಿಂಗಾಪುರದ ಬೆತ್ತದಹಾಗೆ ಬೆಳ್ಳಗೆ ಹೊಳೆಯುವ ಈ ಬಿದಿರು ಬೇಕಾದ ಆಕಾರಕ್ಕೆ ಬಗ್ಗಿಸಿದರೂ ಮುರಿಯದೆ ಸಿಬಿರೇಳದೆ ಹೇಳಿದಹಾಗೆ ಕೇಳುತ್ತಿತ್ತು. ಮೇದರ ಹಳ್ಳಿಯಲ್ಲಿ ಮಾಡಿದ ಬತ್ತದ ತಡಿಕೆಗಳೂ, ಬುಟ್ಟಿ, ಮೊರ, ಕೂಣಿಗಳೂ ಕರ್ನಾಟಕದಾದ್ಯಂತ ಹೆಸರುವಾಸಿಯಾಗಿದ್ದವು. ಆದರೆ ಈ ಹಳ್ಳಿ ನಿಜಕ್ಕೂ ಪ್ರವರ್ಧಮಾನಕ್ಕೆ ಬಂದಿದ್ದು ಯೂರೋಪಿಯನ್ನರ ಕಾಲದಲ್ಲಿ. ಕಾಫಿ ತೋಟದ ದೊರೆಗಳಿಗೆ ಕಾಫಿ ಸಸಿಗಳನ್ನು ಬೆಳೆಸಲು ಬೇಕಾಗಿದ್ದ ಬಿದಿರಿನ ಚಿಕ್ಕಚಿಕ್ಕ ಕುಕ್ಕೆಗಳು ಮೇದರ ಹಳ್ಳಿಯಿಂದಲೇ ಸರಬರಾಜಾಗುತ್ತಿದ್ದುದು. ದೊಡ್ಡ ದೊಡ್ಡ ಯೂರೋಪಿಯನ್ ದೊರೆಗಳೆಲ್ಲ ಮೇದರಳ್ಳಿಗೆ ಭೇಟಿಕೊಟ್ಟು ಮುಂಗಡ ಹಣ ಕೊಟ್ಟು ಲಕ್ಷಾಂತರ ಕಾಫಿ ಕುಕ್ಕೆಗಳಿಗೆ ಆರ್ಡರ್ ಬುಕ್ ಮಾಡುತ್ತಿದ್ದರು. ಕಾಫಿ ತೋಟಗಳು ವಿಸ್ತರಿಸುತ್ತಾ ಹೋದಂತೆ ಮೇದರಳ್ಳಿಯ ವ್ಯವಹಾರಗಳೂ ವಿಸ್ತರಿಸುತ್ತಾ ಹೋದವು. ಸ್ವಾತಂತ್ರ್ಯಾನಂತರ ಬ್ರಿಟಿಷರೆಲ್ಲ ಭಾರತದಿಂದ ನಿರ್ಗಮಿಸಿದ ಮೇಲೂ ಮೇದರಹಳ್ಳಿಯ ವಹಿವಾಟೇನೂ ಕಡಮೆಯಾಗಲಿಲ್ಲ. ಮೇದರಳ್ಳಿಯ ಮೇದರಿಗೆಲ್ಲಾ ಕಾಫಿ ತೋಟಗಳಿರುವೆಡೆಗಳಲ್ಲಿ ಬಹುವಚನದ ಮರ್ಯಾದೆಯೇ ಸಿಗುತ್ತಿತ್ತು.

ಹಾಗಾದರೆ ಏಕೆ ಈ ಹಳ್ಳಿ ಹಾಳೂರಾಯ್ತು?

ಏಕೆ ಕೋಟೆ ಕೊತ್ತಲಗಳು ಏಳುತ್ತವೆ. ನಾಶವಾಗುತ್ತವೆ? ಸೂರ್ಯ ಮುಳುಗದ ಸಾಮ್ರಾಜ್ಯಗಳೂ ಚಕ್ರಾಧಿಪತ್ಯಗಳೂ ನಿಧಾನವಾಗಿ ಚರಿತ್ರೆಯ ಪುಟಗಳಲ್ಲಿ ಅಸ್ತಂಗತ ವಾಗುತ್ತವೆ?

ತಲೆ ಎತ್ತಿದ್ದು ಮತ್ತೆ ಧರೆಗುರುಳಲೇ ಬೇಕೆಂಬ ಜಡ ನಿಯಮವೋ? ಅಥವಾ ಕಾರ್ಯಕಾರಣ ಸಂಬಂಧಗಳ ಕ್ರಿಯಾವಳಿಯೋ? ಅಥವಾ ಪತಿವ್ರತೆಯರ ಶಾಪವೋ?

ಮೇದರಹಳ್ಳಿಯ ಮಟ್ಟಿಗಾದರೂ ಇತಿಹಾಸದ ಈ ರಹಸ್ಯವನ್ನು ತಿಳಿಯಲು ಸಾಧ್ಯವೆ?

ನಾಗರೀಕತೆಯೊಳಗೆ ಪ್ಲಾಸ್ಟಿಕ್ ಕಾಲಿಟ್ಟಾಗ ಈ ತೆಳ್ಳಗೆ ಪಾರದರ್ಶಕವಾಗಿ ಮಿಂಚುವ ಮೋಹಿನಿಯ ವಿಶ್ವರೂಪ ಯಾರಿಗೂ ಗೊತ್ತಿರಲಿಲ್ಲ. ಅನೇಕ ಹಳ್ಳಿ, ಮನೆತನ, ಉಡಕಟ್ಟುಗಳ ನಿರ್ನಾಮಕ್ಕೆ ಇದು ಕಾರಣವಾದೀತೆಂದು ಯಾರೂ ಕನಸು ಮನಸಿನಲ್ಲಿಯೂ ಊಹಿಸಿರಲಿಲ್ಲ. ಖಾಲಿ ಜಾಗಗಳ ಸಂದುಗೊಂದುಗಳೊಳಗೆಲ್ಲಾ ಹಬ್ಬಿ ಆಕ್ರಮಿಸುವ ಪಾರ್ಥೇನಿಯಮ್, ಯುಪೆಟೋರಿಯಮ್ ಕಳೆಗಳಂತೆ ಪ್ಲಾಸ್ಟಿಕ್, ಪಾಲಿಯುರಿಥೇನ್, ಪಾಲಿಎಥಿಲೀನ್, ಪಾಲಿಫೈಬರ್, ಪಾಲಿಮಾರ್, ಹೀಗೆ ನಾನಾ ಅವತಾರಗಳನ್ನೆತ್ತಿ ಮಾರುಕಟ್ಟೆಯ ಎಲ್ಲ ಕ್ಷೇತ್ರಗಳಿಗೆ, ಎಲ್ಲ ಅವಕಾಶಗಳಿಗೆ ಮುತ್ತಿಗೆ ಹಾಕಿತು.

ನಿಧಾನವಾಗಿ ಕಾಫಿ ಮೊಳಕೆಗಳನ್ನು ನೆಡುವ ಬಿದುರಿನ ಕುಕ್ಕೆಗಳಿಗೆ ಬದಲಾಗಿ ಪ್ಲಾಸ್ಟಿಕ್ ಚೀಲಗಳು ಬಂದವು. ಗಾಳಿ ಮಳೆ ಬಿಸಿಲು ಇವು ಯಾವುದಕ್ಕೂ ಜಗ್ಗದ ಈ ತೆಳ್ಳಗಿನ ಕಾಗದದಂಥ ಪ್ಲಾಸ್ಟಿಕ್ ಚೀಲಗಳು ಕಾಫಿ ಪ್ಲಾಂಟರುಗಳ ಮನ ಗೆಲ್ಲಲು ಕೆಲವೇ ವರ್ಷಗಳು ಸಾಕಾದವು. ಮೇದರ ಹಳ್ಳಿಯ ಬಿದುರಿನ ಕುಕ್ಕೆಗಳನ್ನಾದರೋ ಸಾವಿರಗಟ್ಟಲೆ ಸಾಗಿಸುವುದೇ ದೊಡ್ಡ ಗೋಳು. ಅವುಗಳನ್ನು ಪ್ಲಾಸ್ಟಿಕ್ ಚೀಲಗಳಂತೆ ಮಡಚಿ ತುರುಕುವ ಹಾಗೂ ಇಲ್ಲ. ಬಿದುರಿನ ಬುಟ್ಟಿಗಳಿಗೆ ಮಣ್ಣು ತುಂಬಿ ಕಾಫಿ ಸಸಿಗಳನ್ನು ನೆಡುವ ಮೊದಲು ಅವಕ್ಕೆ ಗೆದ್ದಲು ಹಿಡಿಯದಂತೆ ಮೈಲುತುತ್ತದ ನೀರಿನಲ್ಲಿ ಕುದಿಸಬೇಕು. ಎಲ್ಲಕ್ಕಿಂತ ಲಕ್ಷಗಟ್ಟಲೆ ಬೇಕಾದಾಗ ಮೇದರ ಹಳ್ಳಿಯ ಹೆಂಗಸರು ಮಕ್ಕಳಾದಿಯಾಗಿ ಎಲ್ಲ ಬುಟ್ಟಿ ಹಣೆಯಲು ಕುಳಿತರೂ ಸಕಾಲಕ್ಕೆ ಸಾಕಷ್ಟು ದೊರೆಯುತ್ತಿರಲಿಲ್ಲ. ಪ್ಲಾಸ್ಟಿಕ್ ಹಾಗಲ್ಲ. ಒಂದು ಚಿಕ್ಕ ಪ್ಯಾಕೆಟ್ಟಿನಲ್ಲಿ ಒಂದು ಲಕ್ಷ ಚೀಲಗಳಿರುತ್ತವೆ. ತೆಳ್ಳಗೆ ಬಟ್ಟೆಯಂತಿರುವ ಅವುಗಳಲ್ಲಿ ಮಣ್ಣು ತುಂಬಿ ಪಾತಿಗಳಲ್ಲಿ ಕೂರಿಸಿದರೆ ಅವಕ್ಕೆ ತುಕ್ಕು ಹಿಡಿಯುವುದಿಲ್ಲ, ಗೆದ್ದಲು ಹತ್ತಿರ ಸುಳಿಯುವುದಿಲ್ಲ. ಮಳೆ ಗಾಳಿಗೆ ಕುಂಬಾಗುವುದೂ ಇಲ್ಲ. ಬೇಕೆಂದಾಗ ಬೇಕಷ್ಟು ದೊರೆಯುತ್ತದೆ. ಎಲ್ಲೊ ಕಗ್ಗಾಡಿನ ಪಾತಾಳದಲ್ಲಿರುವ ಮೇದರ ಹಳ್ಳಿಗೆ ಹೋಗಿ "ಈಗ ಎಷ್ಟಿದೆಯೋ ಅಷ್ಟು ಕೊಡ್ರಪ್ಪಾ" ಎಂದು ಗೋಗರೆಯುವ ಪ್ರಮೇಯವೇ ಇಲ್ಲ!

ಮೊದಲು ಮೇದರಳ್ಳಿಗೆ ಜನ ಬಂದು ದುಂಬಾಲು ಬಿದ್ದು ಗೋಗರೆದು ಕುಕ್ಕೆ ತೆಗೆದುಕೊಂಡು ಹೋಗುವುದು ತಪ್ಪಿತು. ಆಮೇಲೆ ಅಡ್ವಾನ್ಸ್ ಕೊಟ್ಟು ಆರ್ಡರ್ ಬುಕ್ ಮಾಡುವುದು ನಿಂತಿತು. ಆಮೇಲೆ ಮೇದರೇ ಕುಕ್ಕೆಗಳನ್ನು ಸರದಂತೆ ಪೋಣಿಸಿ ಬಸ್ಸು ಲಾರಿಗಳ ಮೇಲೆ ಗುಡ್ಡೆ ಹಾಕಿಕೊಂಡು ಪೇಟೆಗೆ ತಂದರೆ ಮಾತ್ರ ಗಿರಾಕಿ ಇತ್ತು. ಕಾಫಿ

ಬೆಳೆಗಾರರಲ್ಲಿ ಅನೇಕ ಹಳಬರು "ಏನೇ ಆದರೂ ಪ್ಲಾಸ್ಟಿಕ್ ಕುಕ್ಕೆಗಳಲ್ಲಿ ಬಿದಿರು ಬುಟ್ಟಿಯಲ್ಲಿ ಬಂದ ಹಾಗೆ ಗಿಡ ಬರುವುದಿಲ್ಲ. ಬಿದಿರು ಬುಟ್ಟಿಯಲ್ಲಿ ಗಾಳಿಯಾಡುವ ಹಾಗೆ ಪ್ಲಾಸ್ಟಿಕ್‌ನೊಳಗೆ ಗಾಳಿಯಾಡುವುದಿಲ್ಲ" ಎಂದು ದುಬಾರಿಯಾದರೂ ಬಿದಿರು ಕುಕ್ಕೆಗಳನ್ನು ಕೊಳ್ಳುತ್ತಿದ್ದರು.

ಆ ವೇಳೆಗೆ ಸರಿಯಾಗಿ ಇನ್ನೂ ಒಂದು ದುರಾದೃಷ್ಟ ಮೇದರ ಹಳ್ಳಿಗೆ ಎರಗಿತು!

ಅರವತ್ತು ವರ್ಷಗಳಿಗೊಮ್ಮೆ ಬಿದಿರಿಗೆ ಬರುವ ನೆರೆ, ಅಥವಾ ಕಟ್ಟೆ ಪ್ರಾರಂಭವಾಯ್ತು. ಬಿದಿರು ಭತ್ತದ ರೀತಿಯಲ್ಲಿ ತೆನೆ ಬಿಟ್ಟು ಹೂವಾಗಿ ಬಿದಿರಕ್ಕಿ ಹಿಡಿದು ಮುದಿಯಾಗುತ್ತದೆ. ಭತ್ತ ತೆನೆ ಬಿಡಲು ಆರು ತಿಂಗಳು ತೆಗೆದುಕೊಂಡರೆ ಬಿದಿರು ಮಾತ್ರ ಅರವತ್ತು ವರ್ಷ ತೆಗೆದುಕೊಳ್ಳುತ್ತದೆ. ಮೇದರ ಹಳ್ಳಿಯ ಸುತ್ತಮುತ್ತ ಇರುವ ಸಾವಿರಾರು ಚದರ ಮೈಲಿಯ ಬಿದಿರು ಯಾವುದೋ ಖಾಯಿಲೆ ಹಿಡಿದಹಾಗೆ ಮೆಲ್ಲಗೆ ಹಳದಿಯಾಗತೊಡಗಿತು. ಮೇದರ ಹಳ್ಳಿಯ ಹಳಬರಿಗೆಲ್ಲ ಇದೇನೆಂದು ಚೆನ್ನಾಗಿ ಗೊತ್ತಿತ್ತು. ಇನ್ನೆಲ್ಲೋ ಇದ್ದ ಅವರು ಹಿಂದೊಮ್ಮೆ ಅಲ್ಲಿಗೆ ಬಂದು ಹಳ್ಳಿ ಕಟ್ಟಿಕೊಂಡಿದ್ದಕ್ಕೂ ಇದೇ ಕಾರಣವಂತೆ! ಕೆಲವೇ ಕಾಲದೊಳಗೆ ಪ್ರತಿಯೊಂದು ಬಿದಿರಿನ ಕವಲುಕೊಂಬೆಗಳ ತುದಿಗಳಿಂದೆಲ್ಲ ಗೋಧಿಯ ತೆನೆಗಳಂಥ ದೊಡ್ಡದೊಡ್ಡ ತೆನೆಗಳು ಹೊರಟವು. ತೆನೆಗಳೊಳಗಿನ ಬಿದಿರಕ್ಕಿಯ ಭಾರದಲ್ಲಿ ಬಲವಾದ ಹೆಬ್ಬಿದಿರುಗಳು ಕೂಡ ನೆಲಮುಖ ವಾಗಿ ಬಾಗಿ ಜೋಲತೊಡಗಿದವು. ಅಲ್ಲಿಗೆ ಆ ಬಿದುರಿನ ಆಯುಸ್ಸು ಮುಗಿದಹಾಗೇ! ಇನ್ನು ಅವುಗಳಿಂದ ಉದುರುವ ಬೀಜಗಳಿಂದ ಮತ್ತೆ ಬಿದಿರು ಮೊಳಕೆಯೊಡೆದು ಹುಟ್ಟಿ ಮೇಲೆದ್ದು, ಬುಟ್ಟಿ ಹೆಣೆಯಲು ಬಿದಿರು ದೊರಕಬೇಕಾದರೆ ಕೆಲವು ಕಾಲವೇ ಬೇಕು.

ಬಿದಿರು ಅಲ್ಲೊಂದು ಇಲ್ಲೊಂದು ಹಣ್ಣಾಗಿ ಅಕ್ಕಿ ಬಿಡುವುದಿಲ್ಲ. ಭತ್ತದ ಗದ್ದೆಗಳಂತೆಯೇ ಇಡೀ ಕಾಡಿಗೆ ಕಾಡೇ ಹಣ್ಣಾಗಿ ತೆನೆ ಬಿಟ್ಟು ಸತ್ತು ಹೋಗುತ್ತವೆ. ಬಿದಿರುಹಿಂಡಿಲಿನ ಕೆಳಗೆ ನೆಲವನ್ನೆಲ್ಲಾ ಗುಡಿಸಿ ಸೆಗಣಿ ಸಾರಿಸಿ ಉದುರುವ ಬಿದಿರಕ್ಕಿಯನ್ನೆಲ್ಲಾ ಮೇದರ ಹೆಂಗಸರು ಹಿಂದೆ ದಾಸ್ತಾನು ಮಾಡುತ್ತಿದ್ದರು. ಒಂದೊಂದು ಬಿದಿರಿನ ಅಡಿಯೂ ಕಡಿಮೆ ಎಂದರೆ ಒಂದೊಂದು ಟನ್ ಬಿದಿರಕ್ಕಿ ಬೀಳುತ್ತದೆ. ಮೇದರ ಹಳ್ಳಿಯ ಅಸುಪಾಸಿನ ಬಿದಿರಕ್ಕಿಯನ್ನೆಲ್ಲಾ ಗುಡಿಸಿದ್ದರೆ ಮೇದರ ಹಳ್ಳಿಗೆ ಇನ್ನು ಅರುವತ್ತು ವರ್ಷಕ್ಕಾಗುವಷ್ಟು ಬಿದಿರಕ್ಕಿ ಇತ್ತೇನೋ! ಆದರೆ ಆ ಬಿದಿರುಕಾಡಿನ ಸಮುದ್ರದಲ್ಲಿ ಯಾರಿಗೆ ಎಷ್ಟೆಂದು ಒಟ್ಟು ಮಾಡಲು ಸಾಧ್ಯ! ಜೊತೆಗೆ ತಮ್ಮ ಕಸುಬಿಗೆ ಶಾಶ್ವತವಾದ ನೆರೆ ಬಂದಿದೆ! ಬಿದಿರಕ್ಕಿಯ ಬೀಜದಿಂದ ಮತ್ತೊಮ್ಮೆ ಬಿದಿರು ಮೊಳಕೆಯೊಡೆದು ಚಿಗುರಿದರೂ ತಮ್ಮ ಕಸುಬು ಮಾತ್ರಾ ಇನ್ನೆಂದೂ ಚಿಗುರುವುದಿಲ್ಲ ಎಂದು ಮೇದರ ಒಳಮನಸ್ಸಿಗೆ ಚೆನ್ನಾಗಿ ಗೊತ್ತಿತ್ತು. ನಿರುತ್ತೇಜಕ ಭವಿಷ್ಯದಲ್ಲಿ, ನಿರುತ್ಸಾಹಿಗಳಾದ ಮೇದರಿಗೆ ಬೆಳಗ್ಗೆ ಎದ್ದು ಮುಖ ತೊಳೆದುಕೊಳ್ಳಲು ಸಹ ಉತ್ಸಾಹವಿರುತ್ತಿರಲಿಲ್ಲ. ಇನ್ನು ಬಿದರಕ್ಕಿ ಸಂಗ್ರಹಿಸಲು ಕಾಡು ಪ್ರಾಣಿಗಳ ಜೊತೆ ಪೈಪೋಟಿಗೆ ಯಾಕೆ ಹೋದಾರು!

ಬಿದಿರಿಗೆ ಕಟ್ಟೆ ಬರುತ್ತಿದ್ದಂತೆಯೇ ಮೇದರ ಹಳ್ಳಿಯ ಉತ್ಪನ್ನಗಳು ಪೇಟೆಗೆ ಬರುವುದು ನಿಂತುಹೋಯ್ತು. ಬಿದಿರಿನ ಬುಟ್ಟಿಗಳಿಗೆ ಜೋತುಕೊಂಡಿದ್ದ ಅಳಿದುಳಿದ ಸಂಪ್ರದಾಯಸ್ಥ ಗಿರಾಕಿಗಳೂ ಅನಿವಾರ್ಯವಾಗಿ ಪ್ಲಾಸ್ಟಿಕ್ಕನ್ನೇ ಆಶ್ರಯಿಸಿದರು. ಮೇದರ ಹಳ್ಳಿಯ ಹೆಂಗಸರು ಅತ್ಯಾಕರ್ಷಕವಾಗಿ ಕುಸುರಿ ಕೆಲಸ ಮಾಡಿ ಕಲಾಕೃತಿಗಳಂತೆ ಹೆಣೆಯುತ್ತಿದ್ದ ಬುಟ್ಟಿಗಳೂ ಮೊರಗಳೂ ಮಾರ್ಕೆಟ್ಟಿನಿಂದ ಅದೃಶ್ಯವಾದುವು.

ಮೇದರಹಳ್ಳಿಯ ಸುತ್ತಮುತ್ತ ಎಲ್ಲಿ ನೋಡಿದರೂ ಆಯುಸ್ಸು ಮುಗಿದು ಸತ್ತು ನಿಂತಿದ್ದ ದೊಡ್ಡ ದೊಡ್ಡ ರಾಕ್ಷಸಾಕಾರದ ಬಿದಿರು ಹಿಂಡಿಲುಗಳು! ಕೆಲವು ಕುಂಬಾಗಿ ಕುಸಿಯುತ್ತಿದ್ದರೆ, ಕೆಲವು ಮಳೆ ಗಾಳಿಗಳ ತುಯ್ದಾಟದಲ್ಲಿ ಅಡ್ಡಡ್ಡಲಾಗಿ ಬುಡಸಮೇತ ಮಗುಚಿ ಬಿದ್ದಿದ್ದವು. ಮೇದರ ಹಳ್ಳಿಯ ಅವನತಿಯೂ ಅಷ್ಟೇ ವೇಗವಾಗಿ ಕ್ಷಿಪ್ರವಾಗಿ ಸಂಭವಿಸಿತು. ಅವರಿದ್ದ ಕಗ್ಗಾಡಿನಲ್ಲಿ ಬೇರಾವುದೇ ಹೊಟ್ಟೆ ಪಾಡಿನ ಉದ್ಯೋಗಾವ ಕಾಶಗಳೂ ಇಲ್ಲದೆ ಅಲ್ಲಿದ್ದವರೆಲ್ಲಾ ಹೇಳಹೆಸರಿಲ್ಲದೆ ಊರು ಬಿಟ್ಟು ಚಲ್ಲಾಪಿಲ್ಲಿ ಯಾದರು.

ಮತ್ತೆ ಬಿದಿರು ಲಂಟಾನ ಕೆಂಜಿಗೆ ಜಿಗ್ಗಿನೊಳಗಿಂದ ತಲೆ ಎತ್ತುವುದರೊಳಗೆ ಅಲ್ಲಿ ಯಾರೂ ಇರಲಿಲ್ಲ!

ಬುಟ್ಟಿ ಹೆಣೆಯಲು ಮೇದರೂ ಇರಲಿಲ್ಲ! ಕೊಳ್ಳಲು ಗಿರಾಕಿಗಳೂ ಇರಲಿಲ್ಲ!

ಮೇದರ ಹಳ್ಳಿಯ ಅವಸಾನದೊಂದಿಗೆ ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲದಿದ್ದರೂ ಆ ಇಡೀ ಪ್ರಾಂತ್ಯ ಅನೇಕಾನೇಕ ಕಾಳ ದಂಧೆಗಳ ತವರು ಮನೆಯಾಯ್ತು. ಗಂಧ ಕದ್ದು ಕೇರಳಕ್ಕೆ ಸಾಗಿಸುವುದೋ! ಕಳ್ಳಭಟ್ಟಿ ಇಳಿಸುವುದೋ! ಕುಳುಮಾವಿನ ಚಕ್ಕೆ ತೆಗೆಯುವುದೋ! ಯಾರಿಗೂ ಇಲ್ಲಿ ಇಂಥದೇ ನಡೆಯುತ್ತಿದೆ ಎಂದು ಹೇಳಬರುವುದಿಲ್ಲ. ಈ ದಂಧೆಯಲ್ಲಿ ನಾಲ್ಕಾರು ಜನ ಮೇದರೂ ಸೇರಿಕೊಂಡಿರ ಬಹುದೇನೋ. ಆದರೆ ಅವರೇ ಇದಕ್ಕೆ ಕಾರಣರೆಂದಂತೂ ಹೇಳಲಾಗುವುದಿಲ್ಲ. ಇಂಥ ಕಾಳ ದಂಧೆಗಳಿಗೆ ಬೇಕಾದ ವಿಸ್ತೃತ ಜಾಲವನ್ನಾಗಲೀ ಹಣಕಾಸನ್ನಾಗಲೀ ಹೊಂದಿಸಿಕೊಳ್ಳಲು ಅವರಿಂದಂತೂ ಸಾಧ್ಯವೇ ಇರಲಿಲ್ಲ.

ಆದರೆ ಕಸದ ತೊಟ್ಟಿಗಳಿಂದ ಗುಜರಿ ಸಾಮಾನು ಸಂಗ್ರಹಿಸುವ ಕೆಲಸಕ್ಕೆ ಇಳಿದು ಕೆಲವು ಮೇದರ ಹುಡುಗರು ಬೊಂಬಾಯಿಯವರೆಗೂ ಅಡ್ಡಾಡಿ ಮಾದಕ ವಸ್ತು ಸಾಗಾಣಿಕೆ ಜಾಲದೊಳಕ್ಕೆ ಸೇರಿಬಿಟ್ಟರೆಂದೂ ಹಲವರು ಹೇಳುತ್ತಾರೆ. ಈ ಅಗಮ್ಯ ಕಾಡೊಳಗೆ ಎಲ್ಲೆಲ್ಲೋ ಗಾಂಜಾ ಬೀಜಗಳನ್ನೆಲ್ಲಾ ಬಿತ್ತಿ ಎರಚಾಡಿ ಗಾಂಜಾ ಉತ್ಪಾದಿಸಿ ಇಲ್ಲಿಂದ ದೇಶ ವಿದೇಶಗಳಿಗೆಲ್ಲಾ ಅದು ರವಾನೆಯಾಗುತ್ತೆ ಎಂದೂ ವದಂತಿ ಉಂಟು.

ಇಲ್ಲದಿದ್ದರೆ ಬರಿಯ ಹೆಸರು ಹೇಳಿದರೇ ಜನ ಹೆದರಿ ಬಿಳಿಚಿಕೊಳ್ಳುವಂಥ ಬೊಂಬಾಯಿಯ ಭಯಾನಕ ಖೇಡಿಗಳೆಲ್ಲ ಏಕೆ ಏಲಕ್ಕಿ ವ್ಯಾಪಾರದ ನೆವದಲ್ಲಿ ದೇವಪುರಕ್ಕೆ ಬಂದು ಆಗಾಗ ಠಿಕಾಣಿ ಹಾಕುತ್ತಾರೆ? ವಿಶ್ವಸಂಸ್ಥೆಯ ಮಾದಕ ವಸ್ತು ಜಾಲದ ಮ್ಯಾಪಿನಲ್ಲಿ

ಜುಗಾರಿ ಕ್ರಾಸ್ ಸಹ ಏಕೆ ಗುರುತಿಸಲ್ಪಟ್ಟಿದೆ? ಇದಕ್ಕೆಲ್ಲಾ ಸುಲಭದ ಉತ್ತರವಂತೂ ಸಿಕ್ಕುವುದಿಲ್ಲ. ಉತ್ತರ ಹುಡುಕ ಹೊರಟವರೆಲ್ಲಾ ಹೆಣವಾಗಿದ್ದನ್ನು ನೋಡಿದ ಮೇಲೆ ಜನ ಸಹ ಈಗ ಪ್ರಶ್ನೆ ಕೇಳುವುದೂ ಇಲ್ಲ. ಉತ್ತರ ನಿರೀಕ್ಷಿಸುವುದೂ ಇಲ್ಲ.



# ದೇವಪುರದ ಛಿದ್ರ ಪ್ರತಿಮೆಗಳು - ೩



ದೇವಪುರದ ಕಂಬಳಿ ವ್ಯಾಪಾರಿ ಸಿದ್ದಪ್ಪ ಫೋನ್ ಎಳೆಸಿಕೊಂಡಿದ್ದೇ ಒಂದು ದುರಂತ ಕಥೆಯ ಮುನ್ನುಡಿಯಾಗಿ ಅವನು ಸತ್ತಿದ್ದೋ, ಆತ್ಮಹತ್ಯೆ ಮಾಡಿಕೊಂಡಿದ್ದೋ, ಅಥವಾ ನಾಪತ್ತೆಯಾಗಿದ್ದೋ! ಏನೋ ಒಂದಾಯ್ತೆಂದರೆ ದೇವಪುರವನ್ನು ನಿಯಂತ್ರಿಸುತ್ತಿರುವ ಅದೃಶ್ಯ ಶಕ್ತಿಗಳೂ ಅಶರೀರ ಹಸ್ತಗಳೂ ಯಾವ ರೀತಿಯವೆಂದು ಊಹಿಸಲು ಸಾಧ್ಯವೆ? ಸಾಧ್ಯವಿಲ್ಲ ಬಿಡಿ! ದೇವಪುರವನ್ನು ನೋಡಿದರೆ ಅದೇನೂ ಕಟ್ಟಿದ ಊರಿನ ಹಾಗೆ ಕಾಣುತ್ತಿರಲಿಲ್ಲ. ಗುಡ್ಡದ ಮೇಲೆ ನೆಲದ ಅಂಕುಡೊಂಕುಗಳಿಗೆ ಅನುಸಾರವಾಗಿ ಇದ್ದ ಆ ಕೊಂಪೆ ನೋಡುವುದಕ್ಕೆ ನೆಲದೊಳಗಿಂದ ಹುಟ್ಟಿದ ಹುತ್ತದ ರೀತಿ ಕಾಣುತ್ತಿತ್ತು. ಉದ್ದೇಶಪೂರ್ವಕ ವಿನ್ಯಾಸಗಳೇ ಇಲ್ಲದ ಆ ಊರು ನೋಡಿದವರ ಮನಸ್ಸಿನಲ್ಲಿ ಭಗ್ನ ಪ್ರತಿಮೆಗಳ ದೊಡ್ಡ ಗೋಜಲಿನಂತೆ ದಾಖಲಾಗುತ್ತಿತ್ತು.

ಏಲಕ್ಕಿ ವ್ಯಾಪಾರ ಒಂದನ್ನು ಬಿಟ್ಟರೆ ದೇವಪುರದಲ್ಲಿ ಹೆಸರು ಹೇಳುವುದಕ್ಕೆ ಸಹ ಇನ್ನೊಂದು ವಹಿವಾಟು ಇರಲಿಲ್ಲ. ಹೆಚ್ಚು ಕಡಿಮೆ ಜುಗಾರಿಕ್ರಾಸಿನಂತೆಯೇ ಕಾಡಿನ ವಜ್ರಬಂಧದಲ್ಲಿ ಸಿಕ್ಕಿ ಗೊಡ್ಡು ಬಿದ್ದಿತ್ತು ಅದು. ಇತಿಹಾಸದ ಕೆಲವು ಆಕಸ್ಮಿಕಗಳಿಲ್ಲದಿದ್ದರೆ ಮೇದರಳ್ಳಿಯ ಗತಿಯೇ ಅದಕ್ಕೂ ಕಾದಿತ್ತೋ ಏನೋ! ದೇವಪುರದ ಅದೃಷ್ಟವೋ ದುರಾದೃಷ್ಟವೋ, ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ರೈಲುಮಾರ್ಗದಲ್ಲಿ

ಅದಿದ್ದಿದ್ದು, ಮಂಗಳೂರಿಗೆ ಎಸ್.ಟಿ.ಡಿ. ಕನೆಕ್ಷನ್ ಕೊಡಲು ದೇವಪುರದ ಪಕ್ಕ ದಿಣ್ಣೆಯಲ್ಲಿ ಒಂದು ಎಸ್.ಟಿ.ಡಿ. ಗೋಪುರದ ನಿರ್ಮಾಣ ಅನಿವಾರ್ಯ ಆಗಿದ್ದು, ಹೀಗೇ, ನೂರೆಂಟು ಚಿಲ್ಲರೆ ಆಕಸ್ಮಿಕಗಳು ಒಂದಕ್ಕೊಂದು ಸೇರಿ ದೇವಪುರಕ್ಕೂ ದೆಸೆ ಕೂಡಿಬಂತು. ಯಾವ ದೆಸೆಯೆಂದು ಮಾತ್ರ ನಾವು ನಿರ್ಣಯಿಸುವುದು ಕಷ್ಟ. ಶುಕ್ರ ದೆಸೆಯೋ ಶನಿ ದೆಸೆಯೋ! ಅದೆಲ್ಲಾ ಯಾವಾಗಲೂ ನಿರ್ಣಯಿಸುವವರು ಹೇಗೆ ನೋಡುತ್ತಾರೋ ಹಾಗೆ ಕಾಣುತ್ತದೆ.

ಫೋನು ಬರುವ ಮೊದಲು ಎಲ್ಲಾ ಸಲೀಸಾಗಿ ಸಾಗುತ್ತಿದ್ದ ಊರಿನಲ್ಲಿ ಈಗ ಫೋನು ಒಂದುದಿನ ಕೆಟ್ಟರೂ ಆಕಾಶವೇ ತಲೆಯ ಮೇಲೆ ಬಿತ್ತೆನ್ನುವಂತೆ ಗಲಭೆ ಗಡಿಬಿಡಿ ಆಗುತ್ತದೆ. ರಾತ್ರಿಯಾಗುತ್ತಿದ್ದ ಹಾಗೇ ಏಲಕ್ಕಿ ವ್ಯಾಪಾರಿಗಳೆಲ್ಲ ಹೈದರಾಬಾದು, ಲಕ್ನೋ, ಕಾನ್ಪುರ, ದಿಲ್ಲಿಗಳಿಗೆಲ್ಲ ಫೋನು ಹೊಡೆದು ಏಲಕ್ಕಿ ತ್ರೇಜಿಯ ಯೋಗಕ್ಷೇಮ ಕೇಳಿಕೊಳ್ಳುತ್ತಾರೆ. ಫೋನು ಬಂದ ಮೇಲೆ ಏಲಕ್ಕಿ ಮಂಡಿಯವರ ದೆಸೆ ಕೊಂಚ ಕುಲಾಯಿಸಿದ್ದೇನೋ ನಿಜ. ಆದರೆ ಏಲಕ್ಕಿಗೆ ಒಂದು ಶಾಪ ಇದೆಯಂತೆ! ಅದನ್ನು ಬೆಳೆದವನಾಗಲಿ, ಕೊಂಡವನಾಗಲಿ, ಮಾರಿದವನಾಗಲಿ ಯಾವತ್ತೂ ಉದ್ಧಾರ ಆಗ ಕೂಡದು ಅಂತ! ಅದಕ್ಕೇ ದೇವಪುರದ ಪ್ರಮುಖ ಏಲಕ್ಕಿವ್ಯಾಪಾರಿ ಮಾರ್ವಾಡಿ ಜೈನ್ "ಏಲಕ್ಕಿ ವ್ಯಾಪಾರ ಮಾಡಿ ಬರ್ಕತ್ತಾದವನ್ನ ಒಬ್ನೇ ಒಬ್ಬನ್ನ ತೋರಿಸಿದರೆ ನಾನು ಜಾತಿ ಬಿಟ್ಬಿಡ್ತೀನಿ" ಎಂದು ಎಲ್ಲರೆದುರು ಆಗಾಗ ಛಾಲೆಂಜ್ ಹಾಕುತ್ತಾ ಇರುತ್ತಾನೆ. ಏನೋ ಅವನಪ್ಪನ ಕಾಲದಲ್ಲಿ ಒಂದು ಗಿರವಿ ಅಂಗಡಿ ತೆರೆದು ಮೂಗುಬೆಟ್ಟು ಬೆಂಡೋಲೆ, ಕಾಸಿನ ಸರ ಅಡುವಿಟ್ಟುಕೊಂಡು ಚಿನ್ನಾ ಮಾಡಿಕೊಂಡಿದ್ದರಿಂದ ಇವತ್ತಿಗೂ ಅವನು ವ್ಯಾಪಾರದ ವಹಿವಾಟು ನಡೆಸುತ್ತಾ ಇದ್ದಾನಂತೆ. "ಇಲ್ಲದಿದ್ದರೆ ನಾಕು ವರ್ಷದ ಹಿಂದೆ ಬಿದ್ದ ಹೊಡೆತಕ್ಕೆ ನನ್ನ ಹೆಂಡತಿ ಮಕ್ಕಳು ಭಿಕಾರಿಗಳಾಗಿ ಬೀದಿಗೆ ಬೀಳ್ತಿದ್ದರು" ಎಂದು ಈಗಲೂ ಜೈನ್ ಉದ್ಗರಿಸುತ್ತಾನೆ. ಇಷ್ಟೆಲ್ಲಾ ಅನಾಹುತ ಅವಾಂತರ ಕಂಡರೂ ಏಲಕ್ಕಿ ಮಂಡಿ ಇಟ್ಟವನೊಬ್ಬನೂ ಮುಚ್ಚಿದ್ದು ಸರಿಯಾಗಿ ಯಾರೂ ನೋಡಿಲ್ಲ. ಅದೇ ಎಲ್ಲರಿಗೂ ಸೋಜಿಗ!

ಏಲಕ್ಕಿ ವಹಿವಾಟಿನಲ್ಲಿರುವ ಜುಗಾರಿ ಅಂಶವೇ ದೇವಪುರದಲ್ಲಿ ಏಲಕ್ಕಿ ವ್ಯಾಪಾರ ಚಿರಂಜೀವಿಯಾಗಿರುವುದಕ್ಕೆ ಕಾರಣವೆಂದು ಕಾಣುತ್ತದೆ. ಏಕೆಂದರೆ ನಾಲ್ಕು ವರ್ಷದ ಹಿಂದೆ ಏಲಕ್ಕಿ ಬೆಲೆ ಗಗನಕ್ಕೇರಿ ಎಂಟುನೂರು ಮುಟ್ಟಿದಾಗ ಕೊಂಡುಕೊಂಡು ಟನ್‌ಗಟ್ಟಲೆ ಏಲಕ್ಕಿ ಸ್ಟಾಕು ಮಾಡಿದ ಮಾರ್ವಾಡಿಗಳೆಲ್ಲ ಹದಿನೈದೇ ದಿನಕ್ಕೆ ಮತ್ತೆ ಏಲಕ್ಕಿ ಬೆಲೆ ನೂರಿಪ್ಪತ್ತು ರೂಪಾಯಿಗೆ ಕುಸಿದು ತಲೆ ಎತ್ತಲಾರದಹಾಗೆ ಪಾಪರಾಗಿ ಊರು ಬಿಟ್ಟು ಹೋದವರು, ಹೋದ ಹಣ ಮತ್ತೆ ಸಂಪಾದಿಸಬೇಕಾದರೆ ಏಲಕ್ಕಿ ಬಿಟ್ಟರೆ ಬೇರೆ ಗತಿಯೇ ಇಲ್ಲವೆಂದು ತೀರ್ಮಾನ ತಗೊಂಡು ಹಿಂದಿರುಗಿ ದೇವಪುರಕ್ಕೇ ಶರಣಾಗಿದ್ದರು. ಒಂದುಸಾರಿ ಏಲಕ್ಕಿಗೆ ಕೈ ಹಾಕಿದವ ಪಿಚಾಚಿ ಕೈಗೆ ಸಿಕ್ಕಿಕೊಂಡ ಹಾಗೇ ಸರಿ! ಹೋದ

ದುಡ್ಡು ಮತ್ತೆ ಬರುತ್ತದೆಂದೋ, ಬಂದ ದುಡ್ಡು ದ್ವಿಗುಣಗೊಳ್ಳುತ್ತದೆಂದೋ! ಅಥವಾ ಯಾರಿಗೋ ಅದೆಷ್ಟೋ ದುಡ್ಡು ಸಿಕ್ಕಿತೆಂದೋ, ನೂರೆಂಟು ತರದ ಆಸೆ ತೋರಿಸಿ ಏಲಕ್ಕಿ ಸಿಕ್ಕಿ ಬಿದ್ದವನ ಜುಟ್ಟು ಹಿಡಿದು ಕುಣಿಸಲು ಪ್ರಾರಂಭಿಸುತ್ತದೆ.

ಈ ಜುಗಾರಿಯ ಪಿತ್ಥ ಏರಿ ಈಗ ತರತರದ ಜುಗಾರಿಯವರು, ತರತರದ ಜುಗಾರಿ ಮಾರ್ಗಗಳು ಅಲ್ಲಿ ಹುಟ್ಟಿಕೊಂಡಿವೆ. ಏಕೆಂದರೆ ಫೋನು ಕೆಟ್ಟರೆ ಅಲ್ಲಿ ರೇಗಾಡುವವರು ಬರೀ ಏಲಕ್ಕಿ ವ್ಯಾಪಾರಿಗಳಲ್ಲ. ಯಾವ್ಯಾವೋ ಗುರುತು ಪರಿಚಯ ಇಲ್ಲದ ಮುಖಗಳೆಲ್ಲ ಟೆಲಿಫೋನ್ ಎಕ್ಸ್ ಛೇಂಜಿಗೆ ಹೋಗಿ ರೇಗಾಡುವುದು ಕಾಣಬಹುದು. ಓಸಿ, ಮಟ್ಕಾ, ನ್ಯೂಯಾರ್ಕ್ ಕಾಟನ್, ಯಾವ್ಯಾವುದೋ ಬಂಪರ್ ಲಾಟ್ರಿಯವರು, ಹೀಗೇ ನಮುನಮೂನೆಯ ಜನ ಅಲ್ಲಿ ಬರಬೇಕಾದ ನಂಬರೋ, ಸಿಗಬೇಕಾದ ಸಿಗ್ನಲ್ಲೋ ಸಿಗಲಿಲ್ಲವೆಂದು ಸಿಡಿಮಿಡಿಗೊಂಡು ನುಗ್ಗಾಡುತ್ತಾರೆ. ಎಲ್ಲೋ ಯಾರೋ ಒಬ್ಬ ಬಾಸ್ ಕುಳಿತುಕೊಂಡು ತಮ್ಮ ಹಣೆಬರಹವನ್ನು ನಿಯಂತ್ರಿಸುವ ಎಲ್ಲದರಲ್ಲೂ ಇಲ್ಲಿರುವವರಿಗೆ ಅಪಾರ ಶ್ರದ್ಧೆ. ರಾಜಕಾರಣಿಗಳಿಗೂ ಕೂಡ! ಮಂಡಲ ಪಂಚಾಯ್ತಿಯವರು, ಜಿಲ್ಲಾಪರಿಷತ್ತಿನವರು, ಹೀಗೆ ಯಾರನ್ನು ಬೇಕಾದರೂ ತಗೊಳ್ಳಿ, ಎಲ್ಲೋ ಡೆಲ್ಲಿಯಲ್ಲಿರುವ, ಮುಖವೂ ನೋಡದ, ಹೆಸರೂ ಕೇಳದ ಯಾರೋ ಬಾಸ್ ನಿಂದ ಲಕೋಟೆಯಲ್ಲಿ ಹುಕುಂ ಬರಲಿಲ್ಲೆಂದು ಕಾಯುತ್ತಾ ಇರುತ್ತಾರೆ. ಡೆಲ್ಲಿಗೆ ಫೋನು ಬುಕ್ ಮಾಡಿಕೊಂಡು, ಕಲ್ಲಾಗಿ ಕಾದ ಗೌತಮ ಋಷಿ ಹೆಂಡತಿ ಅಹಲ್ಯೆ ಥರ, ತಮಗೆ ತಾವೇ ವಿಧಿಸಿಕೊಂಡ ಗೃಹ ಬಂಧನದಲ್ಲಿ ಇಡೀ ಆಯುಷ್ಯ ಕಳೆದಿದ್ದಾರೆ.

ದಿನ ಕಳೆದಹಾಗೆ ದೇವಪುರದ ಹಣೆಬರಹದ ಪಗಡೆ ದಾಳ ಉರುಳಿಸುವ ಬಾಸ್ ದೂರ ದೂರವಾಗುತ್ತ ಪರೋಕ್ಷವಾಗುತ್ತ ಹೋದ. ಸಕಲೇಶಪುರದಲ್ಲಿ ಎಷ್ಟು, ಬೋದಿನಾಯಕನೂರಿನಲ್ಲೆಷ್ಟು, ಮಡಕೇರಿಯಲ್ಲೇನಾಯ್ತು ಎಂದು ಪಿಸು ಮಾತಿನಲ್ಲಿ ವಿಚಾರ ತಿಳಿದುಕೊಂಡು ತಮ್ಮ ಅವತ್ತಿನ ನಸೀಬು ಲೆಕ್ಕ ಹಾಕುತ್ತಿದ್ದ ದೇವಪುರದ ಜುಗಾರಿಮಂದಿಗೆ ಡೆಲ್ಲಿಯಿಂದ ನ್ಯೂಯಾರ್ಕಿನಿಂದ ಲಂಡನ್ನಿನಿಂದ ಚಂದ್ರ ಮಂಡಲದಿಂದ, ವಿಶ್ವದ ಅಗಾಧ ಶೂನ್ಯದಿಂದ ಆಗಾಗ ಕನೆಕ್ಷನ್ ಸಿಕ್ಕಿ ಹುಕುಂಗಳು ಬರತೊಡಗಿದಾಗ ಹಠಾತ್ತಾಗಿ ಒಮ್ಮೊಮ್ಮೆ ಗಾಬರಿಯಾಗುತ್ತಿತ್ತು. ತಾವು ಯಾರು? ಯಾಕೆ ಹೀಗಾಡುತ್ತಿದ್ದೇವೆ? ತಾವು ಹಿಡಿದಿರುವ ದಾರಿಯ ಕೊನೆ ಯಾವುದು? ಗೌತಮ ಬುದ್ಧನ ರೀತಿ ಒಂದೇ ಒಂದು ಕ್ಷಣ ಚಿಂತಾಕ್ರಾಂತರಾಗುತ್ತಿದ್ದರು! ಆದರೆ ಅವರಾರಿಗೂ ತಮ್ಮ ಮನದಲ್ಲಿ ಒಂದು ಕ್ಷಣ ಮಿಂಚುವ ಕಳವಳಕ್ಕೆ ಸಮಾಧಾನ ಹುಡುಕಿ ಹೊರಡುವ ಎದೆಗಾರಿಕೆ ಇರಲಿಲ್ಲ. ಸಾವನ್ನೋ ಅಥವಾ ಸಾವಿನಷ್ಟೇ ಕಠೋರ ಸತ್ಯವನ್ನೋ ದಿಟ್ಟಿಸಿ ನೋಡಲು ಪ್ರಾಣದ ಮೇಲಿನ ಆಸೆ ಸಂಪೂರ್ಣ ಬಿಡಬೇಕೋ ಏನೋ!

ಹಾಗಾದರೆ ಈ ಎಲ್ಲೆಲ್ಲಿಂದಲೋ ದಾರಿ ತಪ್ಪಿದಂತೆ ಎಸ್.ಟಿ.ಡಿ.ಯಲ್ಲಿ, ತಂತಿಯಲ್ಲಿ, ಪಿಸುಮಾತಿನಲ್ಲಿ, ದೇಶಾವರಿ ಉದ್ಗಾರಗಳ ರೂಪದಲ್ಲಿ ಬರುವ ಸಂದೇಶಗಳ

ಅರ್ಥವೇನು?

ಹಾಗಾದರೆ ಇವರ ಜುಗಾರಿಗಳನ್ನು ಮೀರಿದ ಮತ್ಯಾವ ಸೂಪರ್ ಜುಗಾರಿಗಳು, ಕೇವಲ ತೆರಿಗೆ ತಪ್ಪಿಸುವುದಕ್ಕಿಂತ ಮಿಗಿಲಾದ ಮತ್ಯಾವ ಕರಾಳ ಕಾಳ ವ್ಯವಹಾರಗಳು ಇಲ್ಲಿ ನಡೆಯುತ್ತಿರಬಹುದು?

ಸಿದ್ದಪ್ಪ ಆ ಊರಿನವನೇ ಅಲ್ಲ, ಅಥವಾ ದೇವಪುರ ಕಾಳ ದಂಧೆಗಳ ತೀರ್ಥಕ್ಷೇತ್ರ ಎಂದೂ ಅಲ್ಲಿಗೆ ಬಂದವನಲ್ಲ. ಪ್ರತಿ ಮಳೆಗಾಲಕ್ಕೂ ಮೊದಲು ಅವನು ಲೋಡುಗಟ್ಟಲೆ ಕಂಬಳಿಗಳನ್ನು ಚಿತ್ರದುರ್ಗದಿಂದ ತಂದು ದೇವಪುರದ ಸುತ್ತಮುತ್ತಿನ ಕಾಫಿ ಪ್ಲಾಂಟರುಗಳಿಗೆ ಸಪ್ಲೆ ಮಾಡುತ್ತಿದ್ದ. ಮಳೆಗಾಲದಲ್ಲಿ ತಲೆಯಮೇಲೆ ಕಂಬಳಿ ಕೊಪ್ಪೆ ಇಲ್ಲದಿದ್ದರೆ ಆಳುಗಳಿಗೆ ತೋಟದಲ್ಲಿ ಕೆಲಸ ಮಾಡಲು ಸಾಧ್ಯವೇ ಇಲ್ಲ. ಮಳೆಯಲ್ಲಿ ನೆನೆದು ಛಳಿ ಹಿಡಿದು ಮನುಷ್ಯರು ನಾಲ್ಕೇ ದಿನಕ್ಕೆ ಕೈಕಾಲು ಸೆಟೆದುಕೊಂಡು ಸತ್ತೇಹೋಗುತ್ತಾರೆ. ದೇವಪುರಕ್ಕೆ ಮಳೆಗಾಲದಲ್ಲಿ ಇಪ್ಪತ್ನಾಲ್ಕು ಗಂಟೆಯೂ ಮಂಜು ಮುಸುಗೇ ಇರುವುದರಿಂದ ಜನ ಕಂಬಳಿ ಕೌಚಿಕೊಂಡು ದೆವ್ವಗಳಂತೆ ರಸ್ತೆಯಲ್ಲಿ ಓಡಾಡುವುದನ್ನು ನೋಡಬಹುದು.

ಸಿದ್ದಪ್ಪ ಮೊದಲು ಪ್ರತಿಮಳೆಗಾಲಕ್ಕೂ ಮುಂಚೆ ದೇವಪುರದಲ್ಲಿ ತಾತ್ಕಾಲಿಕ ಮಳಿಗೆ ತೆರೆದು ವ್ಯಾಪಾರ ಮಾಡುತ್ತಿದ್ದವನು ವ್ಯಾಪಾರ ಕೊಂಚ ಕುದುರಿದ ಮೇಲೆ ತಾತ್ಕಾಲಿಕ ಮಳಿಗೆಯನ್ನೇ ಶಾಶ್ವತವಾಗಿ ಬಾಡಿಗೆ ಹಿಡಿದು ದೇವಪುರದ ಖಾಯಂ ನಿವಾಸಿಯಾದ. ಮಳಿಗೆಗೆ ತಾಗಿದಂತೆ ಹಿಂದಿದ್ದ ಎರಡು ರೂಮುಗಳನ್ನೂ ತಗೊಂಡು ಸಂಸಾರ ತಂದು ಕೂರಿಸಿ ವ್ಯವಹಾರ ಪ್ರಾರಂಭಿಸಿದ್ದ. ಮಳೆಗಾಲ ನಿಂತು ಕಂಬಳಿ ಸೀಜನ್ ಮುಗಿಯುತ್ತಿದ್ದಂತೆಯೇ ಕಾಫಿ ಹಣ್ಣಾಗಲು ಶುರುವಾಗುತ್ತಿತ್ತು. ಆಗ ಬಯಲು ಸೀಮೆಯ ಲಂಬಾಣಿ ತಾಂಡಾಗಳಿಂದ ಜನ ಕರೆದುಕೊಂಡು ಬಂದು ತೋಟಗಳಿಗೆಲ್ಲಾ ಕಮಿಷನ್ ಮೇಲೆ ಸಪ್ಲೆ ಮಾಡುತ್ತಿದ್ದ. ವಾಸ್ತವವಾಗಿ ಸಿದ್ದಪ್ಪನ ವಹಿವಾಟಿಗೆ ಫೋನು ಅನಾವಶ್ಯಕವೆಂದೇ ಹೇಳಬಹುದು. ಆದರೆ ಫೋನು ಇಟ್ಟುಕೊಂಡು ವ್ಯವಹಾರ ಶುರುಮಾಡಿದ್ದ ಎಂದರೆ ಕಂಬಳಿ ವ್ಯಾಪಾರದ ಜೊತೆಗೆ ಇನ್ನೂ ಯಾವ ಯಾವ ದಂಧೆಗೆ ಇವನು ಕೈ ಹಾಕಿದ್ದನೋ ಯಾರಿಗೆ ಗೊತ್ತು!

ಅವನ ಮನೆ ಕಡೆಗೆ ಬರುತ್ತಿದ್ದ ಫೋನ್ ಕಂಬದ ಗೈ ವೈರಿಗೆ ಎಮ್ಮೆ ಬೆನ್ನು ತಿಕ್ಕಿದ್ದರಿಂದ ತಂತಿಗಳೆಲ್ಲ ಅಲ್ಲಾಡಿ ಒಂದಕ್ಕೊಂದು ಸುತ್ತಿಕೊಂಡು ಯಾರಿಗೋ ಹೋಗಬೇಕಾದ ಫೋನ್ ಕರೆ ಸಿದ್ದಪ್ಪನಿಗೆ ಸಿಕ್ಕಿತು. ಸಿದ್ದಪ್ಪ ಫೋನ್ ಆಲಿಸುತ್ತಿದ್ದ ಹಾಗೇ ಬಾಯಿ ಕಳೆದುಕೊಂಡು ಬಿಡುಗಣ್ಣಾದನಂತೆ! ಫೋನ್ ಕೆಳಗಿಡುತ್ತಿದ್ದಹಾಗೇ ಬಿಳಿಚಿಕೊಂಡು ಗಡಗಡ ನಡುಗುತ್ತಿದ್ದ ಆ ಪುಕ್ಕಲ ಆದದ್ದೇನೆಂದು ಹೆಂಡತಿಗೂ ಹೇಳದೆ "ಅಯ್ಯೋ ನಾನು ಯಾಕಾದರೂ ಫೋನ್ ಹಾಕಿಸಿಕೊಂಡೆನೋ! ನಾನು ಯಾಕಾದರೂ ಫೋನ್ ಎತ್ತಿದೆನೋ!'' ಎಂದು ತಲೆತಲೆ ಚಚ್ಚಿಕೊಳ್ಳುತ್ತಾ ರಾತ್ರಿ ಎಲ್ಲಾ ಗೋಳಾಡಿ

ಬೆಳಗಿನ ಝಾವ ಮನೆ ಬಿಟ್ಟು ಹೋದವನನ್ನು ಮತ್ತೆ ಯಾರೂ ನೋಡಲಿಲ್ಲ!

ದೇವಪುರದ ಜನರಲ್ಲಿ ಬಹುಪಾಲು ಧರ್ಮಶ್ರದ್ಧೆ ಉಳ್ಳವರು. ಅಮೂರ್ತದಲ್ಲಿ ನಂಬಿಕೆ ಇರುವವರು. ಅಧ್ಯಾತ್ಮವಾದಿಗಳು. ತಿರುಪತಿ, ಧರ್ಮಸ್ಥಳ, ಈಚೆಗೆ ಅಯ್ಯಪ್ಪ ಸ್ವಾಮಿ, ಈ ಎಲ್ಲಾ ಕಡೆಗೂ ಹೋಗಿ ಶಕ್ತ್ಯಾನುಸಾರ ಹರಕೆ ಒಪ್ಪಿಸಿ ಬರುವವರು. ದುಡ್ಡು ಮಾಡುವ ಹಂಬಲ ಉಳ್ಳವರಾದರೂ ತಮ್ಮ ಅಮೂರ್ತ ಆಸೆಗಳ ವ್ಯಕ್ತ ಸಂಕೇತದಂತಿರುವ ದುಡ್ಡಿಗೂ ದೇವರಿಗೂ ನಡುವೆ ಯಾವ ವಿರೋದಾಭಾಸವನ್ನೂ ಅವರು ಕಾಣಲಿಲ್ಲ. ಅದಕ್ಕೇ ಮಟ್ಕಾ, ಲಾಟ್ರಿ, ಸಟ್ಟಾಗಳೆಲ್ಲ ಊರಿಗೆ ಕಾಲಿಟ್ಟಾಗ ಅವೆಲ್ಲಾ ತಮ್ಮ ಧಾರ್ಮಿಕ ಜೀವನದ ವಿಸ್ತರಣೆಗಳಂತೆಯೇ ಕಂಡವು. ಎಲ್ಲಿಂದಲೋ ಬರುವ ನಂಬರಿನಿಂದ ಇಲ್ಲಿ ನಡೆಯುವ ಬಟವಾಡೆ, ಯಾವುದೋ ಟಿಕೆಟ್ಟಿಗೆ ಉದುರುವ ದುಡ್ಡು ಅವರ ಅಮೂರ್ತದ ನಂಬಿಕೆಯನ್ನು ದೃಢಪಡಿಸುತ್ತಲೇ ಹೋಯ್ತು. ಕಾಸಿಗೆ ಕಾಸು ಗಂಟು ಹಾಕುತ್ತಾ ಹೋದಂತೆ ಅವರ ಆಧ್ಯಾತ್ಮಿಕ ಶ್ರದ್ಧೆಯೂ ಬೆಳೆಯುತ್ತಾ ಹೋಯ್ತು.

ಅಲ್ಲಿ ನಡೆಯುವ ಅರ್ಥವಾಗದ ಕ್ರಿಯಾ ಪರಂಪರೆಗಳಲ್ಲಿ ಸಿದ್ದಪ್ಪನ ಅಂತರ್ಧಾನ ಅವರಿಗೆ ಒಂದುಕ್ಷಣ ಕಳವಳ ಹುಟ್ಟಿಸಿದ್ದೇನೋ ನಿಜ. ಆದರೆ ಒಮ್ಮೆ ತಮ್ಮ ಹಣೆಬರಹವನ್ನು ಅಮೂರ್ತಕ್ಕೆ ಒಪ್ಪಿಸಿದ ಮೇಲೆ ಎಲ್ಲಾ ಯಾರದೋ ಲೀಲೆಯಲ್ಲವೆ? ಯಾರ ಲೀಲೆ? ಯಾರು ಈ ಬಾಸ್? ಮಂಜುನಾಥನೋ, ಅಯ್ಯಪ್ಪನೋ, ತಿಮ್ಮಪ್ಪನೋ? ಯಾರೋ ಒಬ್ಬ ಯಾರೂ ತಿಳಿಯದ ಬಾಸ್ ಎಲ್ಲೋ ಕುಳಿತುಕೊಂಡು ತಮ್ಮ ಬುದ್ಧಿಗೆ ಎಂದೆಂದೂ ಅಗ್ರಾಹ್ಯವಾದ ತರ್ಕದಿಂದ ತಮ್ಮ ಭವಿಷ್ಯ ನಿರ್ಧರಿಸುತ್ತಾನೆ. ಅವರ ಪಾಲಿಗೆ ಕೋರ್ಟು ಕಛೇರಿ ಕಾನೂನು ಇವೆಲ್ಲ ತಮ್ಮ ಬದುಕಿನ ಅಂತಿಮ ಶೂನ್ಯವನ್ನು ಮರೆಯುವ ಪ್ರಯತ್ನ ಅಷ್ಟೇ.

"ಅಲ್ರೀ ಆ ಹೆದರು ಪುಕ್ಲ ಸೂಳೇಮಗ ಸಿದ್ದಪ್ಪ ಬರೇ ಒಂದು ಫೋನು ಕೇಳಿದ್ದಕ್ಕೆ ತಲೆ ತಪ್ಪಿಸಿಕೊಂಡು ಓಡೋಗಿದಾನಲ್ಲ!"

"ಫೋನಿನ ಆಚೆ ತುದೀಲಿ ಯಾರಿದ್ರು?"

"ಅಂಥ ಯಮದೂತರು ನಮೂರ್‍ನಾಗೆ ಯಾರಿದಾರೆ?"

"ಫೋನಂದ್ರೆ ಆಚೆ ತುದಿ ನಮ್ಮೂರ್‍ನಾಗೇ ಇರಬೇಕಂತ ಏನಿದೆ? ಕನೆಕ್ಷನ್ ಸಿಕ್ಕಿದರೆ ಬೆಂಗಳೂರೋ! ಮದ್ರಾಸೋ! ಬೊಂಬಾಯೋ! ಕೈಲಾಸವೋ! ವೈಕುಂಠವೋ! ಬುಲಾವ್ ಎಲ್ಲಿಂದ ಬೇಕಾದರೂ ಬರಬಹುದು!'

"ಏನ್ಮಾತಾಡ್ತೀಯೋ ನೀನು? ಅವನಿಗೆ ಬೆದರಿಕೆ ಹಾಕಿದವರು ಇಂತೋರೊಬ್ರು ಅಂತ ಇಲ್ಲ ಅಂದ್ರೆ!"

"ಯಾವುದಯ್ಯಾ ಈ ತಂತಿ ಬಲೆಯೊಳಗೆ ಆಚೆ ತುದಿ? ಆಚೆ ತುದಿ ಅಂತ ಒಂದಿರಬೇಕೂಂತಿದೆಯಾ?"

ಈ ತರ ಜನ ನಾಲ್ಕು ದಿನ ಒಟಗುಟ್ಟಿದಂತೆ ಮಾತಾಡಿದರು. ಆಮೇಲೆ ಸಿದ್ದಪ್ಪನ

ಹೆಂಡತಿಗೆ ಕೂತು ತಿನ್ನುವಷ್ಟು ಯಾರೋ ಕೊಟ್ರಂತೆ ಎಂದು ಗುಸುಗುಸು ಸುದ್ದಿ ಹಬ್ಬಿ ಅದು ಸುಳ್ಳೋ ನಿಜವೋ ಎಂದೂ ತಿಳಿಯ ಹೋಗದೆ ಆ ಬಗ್ಗೆ ಮಾತಿರಲಿ ಯೋಚನೆಯೂ ಬರದಹಾಗೆ ಎಚ್ಚರ ವಹಿಸಿ ಬಾಯಿಗೆ ಬೀಗ ಹಾಕಿಕೊಂಡು ಜನ ಗಪ್‌ಚಿಪ್ ಆದರು. ಸರ್ವಚರಾಚರ ವಸ್ತುವಿನಲ್ಲಿಯೂ ಇರುವ ಸರ್ವಾಂತರ್ಯಾಮಿಯಾದ, ಸರ್ವಗುಣ ಸಂಪನ್ನ, ಸರ್ವ ಶಕ್ತ ಆ ಬಾಸ್‌ಗೆ ಗೊತ್ತಾದರೆ!

ಇವರೆಲ್ಲರ ಮಾತಿನ ಅಂತಿಮ ವ್ಯಕ್ತಿ ಅಥವಾ ಶಕ್ತಿ ಅಥವಾ ಅಮೂರ್ತ ಮೂರ್ತಿ ಯಾರಿರಬಹುದು?

ಯಾರಾದರೂ ಆಗಿರಲಿ! ಎಲ್ಲರ ಎಲ್ಲ ದೇವರೂ ಒಂದೇ ಅಲ್ಲವೆ? ಸಾಬರೋ ಬ್ರಾಹ್ಮಣರೋ ಲಿಂಗಾಯ್ತರೋ ಒಕ್ಕಲಿಗರೋ ಕಳ್ಳರೋ ಖದೀಮರೋ ಎಲ್ಲರ ಬಾಸ್ ಕೊನೆಗೆ ಒಬ್ಬನೇ. ಎಲ್ಲ ಧರ್ಮಗಳೂ ಸೇರುವುದು ಕೊನೆಗೆ ಒಂದೇ ಬಾಸ್ ಹತ್ತಿರ. ಯಾರು ಕೊಲೆ ಖೂನಿ ದಾನ ಧರ್ಮ ಇತ್ಯಾದಿ ಯಾವ ಕಾರ್ಯಕ್ಕೂ ಯಾರಿಗೂ ಸಮಜಾಯಿಷಿ ಕೊಡಬೇಕಾಗಿಲ್ಲವೋ ಅವನೇ ಆ ಬಾಸ್! ಅವನ ಪ್ರೀತ್ಯರ್ಥ ಕೆಲವರು ಉರುಳು ಸೇವೆ, ಕೆಲವರು ಕೊರಳು ಸೇವೆ, ಕೆಲವರು ರಕ್ತಬಲಿ, ಕೆಲವರು ನರಬಲಿ ಹೀಗೇ ನೂರೆಂಟು ತರದ ನೈವೇದ್ಯ ನೀಡಬಹುದು. ಎಲ್ಲಾ ಅವರವರ ನಂಬಿಕೆ ನಿಷ್ಠೆ, ಅಷ್ಟೇ! ನಂಬಿಕೆ ಬಾಸ್‌ಗಿಂತ ಮುಖ್ಯ. ಏಕೆಂದರೆ ನಂಬಿಕೆ ಬಾಸ್‌ನ ಸೃಷ್ಟಿಸುತ್ತದೆ, ರೂಪಿಸುತ್ತದೆ.



# ಮಾತಾಡದ ಹುಡುಗಿ - ೪



ಮೇದರಹಳ್ಳಿಯ ದ್ಯಾವಮ್ಮ ಮೂಕಿ. ಹಾಗಾಗಿ ಅವಳ ಭಾವಾಭಿವ್ಯಕ್ತಿಯೆಲ್ಲ ಕೇವಲ ಕೈಸನ್ನೆ ಬಾಯಿ ಸನ್ನೆಗಳಿಗೇ ಸೀಮಿತ. ಇಡೀ ಮೇದರ ಹಳ್ಳಿಯ ಅವಸಾನವನ್ನು, ಮೇದರ ಜನಾಂಗವೆಲ್ಲ ದಿಕ್ಕುಗೆಟ್ಟು ಚೆದುರಿ ಚಲ್ಲಾಪಿಲ್ಲಿಯಾದುದನ್ನು ಕಂಡಿದ್ದ ಅವಳಿಂದ ಶೂನ್ಯ ಮೌನವನ್ನಲ್ಲದೆ ಇನ್ನೇನನ್ನು ತಾನೆ ನಿರೀಕ್ಷಿಸಲು ಸಾಧ್ಯ. ಹಾಳು ಬಿದ್ದಿದ್ದ ಮೇದರ ಹಳ್ಳಿಯೊಳಗೆ ಒಂದೆರಡು ಗುಡಿಸಿಲುಗಳೊಳಗಿಂದ ಇನ್ನೂ ಹೊಗೆಯಾಡಲು ಅವಳೇ ಸ್ಫೂರ್ತಿ ಎಂದು ಹೇಳಬಹುದು. ಅಲ್ಲಿ ಇನ್ನೂ ಒಬ್ಬಿಬ್ಬರು ಮುದುಕರು, ದಿಕ್ಕುಗೆಟ್ಟವರು ಅಡ್ಡಾಡಿಕೊಂಡಿದ್ದರೂ, ದ್ಯಾವಮ್ಮ ಅಲ್ಲಿಂದ ನಿರ್ಗಮಿಸಿದ್ದರೆ ಬಹುಶಃ ಮೇದರ ಹಳ್ಳಿಯಲ್ಲಿ ಅದೂ ನಿಲ್ಲುತ್ತಿತ್ತೋ ಏನೋ! ಬಿದಿರಿಗೆ ಕಟ್ಟೆ ಬಂದಮೇಲೆ ದ್ಯಾವಮ್ಮನ ಗಂಡ ಹೊಟ್ಟೆಪಾಡಿಗೆ ಅದೂ ಇದೂ ಮಾಡಿ ಯಾವುದೂ ಕೈಗೆ ಹತ್ತದೆ, ಕೊನೆಗೆ ದುಡ್ಡು ಸಂಪಾದಿಸುವ ಕ್ಷಿಪ್ರ ಮಾರ್ಗ ಹುಡುಕುತ್ತಾ ಕಾಡೊಳಗಿನ ಗಂಧ ಕಡಿದು ಕೇರಳಕ್ಕೆ ಸಾಗಿಸುವವರ ಜೊತೆ ಬಿದ್ದು ಊರು ಬಿಟ್ಟ. ಆಮೇಲಿಂದ ಅವನ ಸುಳಿವೇ ಯಾರಿಗೂ ಸಿಕ್ಕಿಲ್ಲ. ಕಾದು ಕಾದು ಕೊನೆಗೆ ಅವನು ದಿವಂಗತನಾದನೆಂದೇ ತೀರ್ಮಾನಿಸಿ ದ್ಯಾವಮ್ಮ ತನ್ನ ಹೊಟ್ಟೆಪಾಡು ತಾನು ನೋಡಿಕೊಳ್ಳತೊಡಗಿಧಳು. ಮೇದರಳ್ಳಿಯ ಗಂಡಸರು ಹಠಾತ್ ಕೊಲೆಯಾಗುವುದೋ ನಾಪತ್ತೆಯಾಗುವುದೋ ಅವಳಿಗೆ ಹೊಸ ಸಂಗತಿಯೇನಾಗಿರಲಿಲ್ಲ.

ಅಲ್ಲಿನ ಸುಮಾರು ಜನ ಹೆಂಗಸರು ಬೆಳೆದ ಮಕ್ಕಳಿದ್ದರೆ ಅವರೊಡನೆಯೋ ಅಥವಾ ಕಂಡ ಗಂಡಸರನ್ನು ಕಟ್ಟಿಕೊಂಡೊ ಯಾವುಯಾವುದೋ ಪೇಟೆ ಊರುಗಳನ್ನು ಸೇರಿದ್ದರು. ಹಲವರು ದೇವಪುರದ ಬಳಿಯ ಸಂತೆ ಮಾಳದ ಹತ್ತಿರವೇ ಒಕ್ಕಲಾಗಿದ್ದರು. ದ್ಯಾವಮ್ಮನಿಗೂ "ಈ ಕಾಡಿನಾಗೆ ಕೂತುಕೊಂಡು ಏನು ಮಾಡ್ತೀಯ? ಇಲ್ಲಿ ಸತ್ತೆಯಾ? ಇದೀಯಾ? ಅಂತ ಕೇಳೋರು ಸುತ ಯಾರೂ ಇಲ್ಲ. ಈ ಹಾಳೂರ್ನಾಗೆ ಪಿಚಾಚಿಹಂಗೆ ಬದುಕೋದರ ಬದ್ಲು ಪ್ಯಾಟೆ ಕಡೀಗಾದ್ರು ಬಾ. ಬಡೋರಿಗೆಲ್ಲ ಸರ್ಕಾರದೋರು ಸೈಟು ಕೊಡ್ಬೇಕಂತಿದಾರಂತೆ" ಎಂದು ಹಲವು ಹಿತೈಷಿ ಹೆಂಗಸರು ಹೇಳಿ ಕರೆದಿದ್ದರು. ಮೂಕಿ ದ್ಯಾವಮ್ಮನ ಕಣ್ಣಿಂದ ಎರಡು ತೊಟ್ಟು ಕಂಬನಿ ಬಿಟ್ಟರೆ ಮತ್ತೇನೂ ಉತ್ತರ ಬಂದಿರಲಿಲ್ಲ.

ಅವಳಿಗೆ ಎಲ್ಲಿಗ ಹೋಗಲೂ ಮನಸ್ಸಿರಲಿಲ್ಲ!

ಕಾರು ಬಸ್ಸುಗಳ ಓಡಾಟ ಇದ್ದ ಮಾತ್ರಕ್ಕೆ ಅಲ್ಲಿನ ಜನ ಬಂದು ಇದಿಯಾ? ಸತ್ತೆಯಾ? ಎಂದು ಕೇಳುತ್ತಾರೆಂಬುದು ಸುಳ್ಳೆಂದು ಅವಳಿಗೆ ಚೆನ್ನಾಗಿ ಗೊತ್ತಿತ್ತು. ಹಾಳುಬಿದ್ದು ಕೊನೆಯುಸುರೆಳೆಯುತ್ತಿದ್ದ ಮೇದರ ಹಳ್ಳಿಯಲ್ಲಿ ಇದ್ದಷ್ಟು ನೆಮ್ಮದಿ ಅಲ್ಲಿರುವುದಿಲ್ಲೆಂದು ಅವಳಿಗೆ ಅನ್ನಿಸಿತ್ತು.

ಅವಳು ಮೇದರ ಹಳ್ಳಿಯಲ್ಲಿ ಉಳಿದುದಕ್ಕೆ ಎಲ್ಲ ತಿಳಿದಂತೆ ಆ ಊರಿನ ವ್ಯಾಮೋಹವೂ ಕಾರಣವಲ್ಲ, ಅಥವಾ ಅವಳ ಗಂಡ ಒಂದಲ್ಲ ಒಂದು ದಿನ ಬಂದಾನೆಂಬ ದೂರದ ಹಂಬಲವೂ ಅಲ್ಲ, ಅಥವಾ ಬೇರೆಕಡೆ ಬದುಕುವ ಅವಕಾಶಗಳ ಕೊರತೆಯೂ ಅಲ್ಲ. ಅವಳು ಅಲ್ಲಿದ್ದಿದ್ದು ಕೇವಲ ಮಾನವೀಯ ಗಾಂಭೀರ್ಯದಿಂದ, ಜೀವನದ ದುರಂತ ರೌದ್ರತೆಯನ್ನು ಅಂಜದೆ ನೋಡುವ ಧೈರ್ಯದಿಂದ, ಆತ್ಮಗೌರವದಿಂದ. ಇದನ್ನು ಅಲ್ಲಿರುವ ಯಾರಿಗೂ ಅರ್ಥಮಾಡಿಕೊಳ್ಳಲು ಸಾಧ್ಯವಿರಲಿಲ್ಲ.

ದ್ಯಾವಮ್ಮ ಈಗಲೂ ಬುಟ್ಟಿ ಹೆಣೆಯುತ್ತಿದ್ದಳು. ಹೆಣೆದ ಬುಟ್ಟಿಗಳನ್ನೆಲ್ಲಾ ದಾರಿಬದಿಯಲ್ಲಿ ಒಂದರಮೇಲೊಂದು ಪೇರಿಸಿಟ್ಟು ದಾರಿಯಲ್ಲಿ ಹೋಗಿ ಬರುವ ಪ್ರಯಾಣಿಕರಿಗೆ ಮಾರುತ್ತಿದ್ದಳು. ದ್ಯಾವಮ್ಮ ಬಿದುರನ್ನು ಸಣ್ಣಗೆ ಸಿಗಿದು ಎರಡು ಎಳೆಗಳಲ್ಲಿ ಹೆಣೆಯುತ್ತಿದ್ದ ಬುಟ್ಟಿಗಳು ನಿಜಕ್ಕೂ ಆಕರ್ಷಕವಾಗಿರುತ್ತಿದ್ದುವು. ನೀರನ್ನು ಸಹ ಅದರಲ್ಲಿ ಒಯ್ಯಬಹುದಾದಷ್ಟು ಬಿಗಿಯಾಗಿರುತ್ತಿದ್ದ ಬುಟ್ಟಿಗಳನ್ನು ತಗೊಂಡವರೆಲ್ಲಾ ಪ್ರಶಂಶಿಸುತ್ತಿದ್ದರು. ಅವಳ ಬುಟ್ಟಿಗಳನ್ನೂ ಮೊರಗಳನ್ನೂ ಕೊಳ್ಳಲು ದಾರಿಯಲ್ಲಿ ಹೋಗುವ ಟೂರಿಸ್ಟ್ ಬಸ್ಸುಗಳೂ ಸಹ ಅನೇಕ ವೇಳೆ ನಿಂತು ಮುಂದೆ ಹೋಗುತ್ತಿದ್ದವು. ಅಕಸ್ಮಾತ್ ಬುಟ್ಟಿಗಳೂ ಮೊರಗಳೂ ಖರ್ಚಾಗದೆ ಉಳಿದುಹೋದರೆ ದೇವಪುರದ ಸಂತೆಗೆ ಒಯ್ದು ಮಾರಿಬರುತ್ತಿದ್ದಳು.

ದ್ಯಾವಮ್ಮನ ಗಂಡ ಅವಳನ್ನು ಅಗಲಿದಾಗ ಅವಳಿಗೊಬ್ಬಳು ಚಿಕ್ಕ ಮಗಳಿದ್ದಳು. ಇನ್ನೂ ಸರಿಯಾಗಿ ಓಡಾಡಲೂ ಸಹ ಬರದ ಆ ಚಿಕ್ಕ ಕೂಸನ್ನು ಹೇಗೊ ಹೋರಾಡಿ ಈವರೆಗೂ ದ್ಯಾವಮ್ಮ ಸಾಕಿ ಸಲಹಿದ್ದಳು. ದುರಾದೃಷ್ಟವೆಂದರೆ ಆ ಹುಡುಗಿಗೂ ಮಾತು

ಬರುತ್ತಿರಲಿಲ್ಲ. ದ್ಯಾವಮ್ಮ ಮೂಕಿಯಾದ್ದರಿಂದ ಆ ಮಗುವಿಗೊಂದು ಹೆಸರಿಟ್ಟು ಕರೆಯಲೂ ಆಗದೆ ಆ ಹುಡುಗಿ ಹೆಸರೂ ಇಲ್ಲದ ಬಾಲೆಯಾಗಿ ಬೆಳೆಯಬೇಕಾಗಿ ಬಂತು. ಯಾರೊಡನೆಯೂ ಮಾತಿಲ್ಲದೆ, ಮಾತಾಡುವ ಅಗತ್ಯವೂ ಇಲ್ಲದೆ ಆ ಹುಡುಗಿಯೂ ಮೂಕಿಯಾಗೇ ಬೆಳೆಯಿತು. ತಾಯಿಗೆ ಬಾಯಿ ಬರದುದರಿಂದ ಇದೂ ಹಾಗೇ ಮೂಕಿ ಎಂದು ಎಲ್ಲರೂ ತಿಳಿದಿದ್ದರು.

ಕೆಲವು ದಿನಗಳ ಹಿಂದೆ ದೇವಪುರದಲ್ಲಿ ಇದ್ದ ದೂರದ ಸಂಬಂಧಿಯೊಬ್ಬರ ಮನೆಗೆ ದ್ಯಾವಮ್ಮನ ಜೊತೆ ಹೋಗಿ ಬಂದಾಗಲಿಂದ ಆ ಹುಡುಗಿ ಇದ್ದಕ್ಕಿದ್ದಹಾಗೆ ಮಾತಾಡತೊಡಗಿದಳು. ದ್ಯಾವಮ್ಮನಿಗೆ ಪವಾಡವನ್ನೆ ಕಂಡಷ್ಟು ಸಂತೋಷವಾಗಿತ್ತು. ನಂತರ ಮನೆಯ ಮಕ್ಕಳೊಡನೆ ಆಡುತ್ತಾಡುತ್ತ ಎಲ್ಲ ಬೆಚ್ಚಿಬೀಳುವಂತೆ ಆ ಮಗು ಇದ್ದಕ್ಕಿದ್ದಂತೆ ಮಾತಾಡತೊಡಗಿ, ಆ ಸಂಭ್ರಮದಲ್ಲಿ ದ್ಯಾವಮ್ಮ ಹಿಂದಿರುಗಿ ಬರುತ್ತ ಇದ್ದಬದ್ದ ದುಡ್ಡನ್ನೆಲ್ಲಾ ಖರ್ಚು ಮಾಡಿ ಬಟ್ಟೆಬರೆ ಕೊಂಡುಕೊಂಡಳು. ಅಚ್ಚರಿ ಎಂದರೆ ಆ ಹುಡುಗಿ ಮಾತು ಶುರು ಮಾಡಿದ ಮೇಲೆ ಮಾತಾಡುವುದನ್ನು ನಿಧಾನ ಕಲಿಯಲಿಲ್ಲ. ಎಲ್ಲ ಚೆನ್ನಾಗಿ ಕಲಿತಿದ್ದವಳಂತೆ ಚಟಚಟ ಮಾತಾಡುತ್ತಿದ್ದಳು.

ದ್ಯಾವಮ್ಮನ ಜೋಪಡಿ ಪಕ್ಕದ ಗುಡಿಸಿಲಿನ ಮುದುಕ ಕೊರಗಪ್ಪನಂತೂ ಅವಳು ಮೊದಲಬಾರಿ ಮಾತಾಡುವುದನ್ನು ಕೇಳಿದಾಗ ಕಂಬನಿದುಂಬಿ ದಿಗ್ಮೂಢನಾಗಿ "ಅಯ್ಯೋ ನನ್ನ ಮಗಳೆ! ಇದ್ಯಾಕವ್ವ ಇಷ್ಟು ದಿನ ಮೂಕಪ್ರಾಣಿ ಹಂಗೆ ಮಾತಾಡದೆ ಇದ್ದೆ? ಅದ್ಯಾವ ದುಕ್ಕ ನಿನ್ನ ನಾಲಿಗೆ ಸೇದಿಹಾಕಿತ್ತು ಹೇಳು? ನಿನ್ನ ತಾಯಿಗೇನೋ ಬಾಯಿ ಬರಲ್ಲ ಅಂದ್ರೆ ನಾನಾದ್ರೂ ಇದ್ನಲ್ಲ ನಿನ್ನ ಕಷ್ಟಸುಖ ಹೊಟ್ಟೆಉರಿ ಕೇಳಕ್ಕೆ!" ಎಂದು ತಬ್ಬಿಕೊಂಡು ಗಳಗಳ ಅತ್ತುಬಿಟ್ಟ. ಆದರೆ ಆ ಹುಡುಗಿಗೆ ಏನೂ ಇಷ್ಟು ದಿನ ಅನುಭವಿಸಿದ ಕಷ್ಟ ಸುಖಗಳ ಪರಿವೆ ಇದ್ದಹಾಗೆ ಕಾಣಲಿಲ್ಲ. ಅವಳು ಇಷ್ಟು ದಿನಗಳ ಮೌನಕ್ಕೆ ಮುಯ್ಯಿ ತೀರಿಸುವಂತೆ ಒಂದೇಸಮ ಮಾತಾಡುತ್ತಿದ್ದಳು.

ಆ ಹುಡುಗಿಗೆ ಮಾತು ಬರುತ್ತಿದ್ದಹಾಗೇ ಮಾತಿನ ಜೊತೆಗೇ ಹೊಸ ಗೀಳೊಂದು ಅಂಟಿಕೊಂಡಿತ್ತು. ಅವಳ ನೆಂಟರ ಮನೆಯ ಚಿಕ್ಕ ಹುಡುಗರು ಬೆಳಗ್ಗೆಯೇ ಎದ್ದು ರಂಜದ ಹೂವುಗಳನ್ನು ಹೆರಕಿ ಮಾಲೆ ಕಟ್ಟಿ ರಸ್ತೆ ಬದಿಯಲ್ಲಿ ನಿಂತು ಹೋಗಿಬರುವ ವಾಹನಗಳಿಗೆ ಹೂವು ಮಾರುತ್ತಿದ್ದರು. ವಾಹನಗಳಿಗೆ ಮಾಲೆ ಎತ್ತಿ ತೋರಿಸುತ್ತಾ ಮಾರಿ ಆರುಕಾಸು ಮೂರುಕಾಸು ತಗೊಳ್ಳುವಾಗ ದ್ಯಾವಮ್ಮನ ಮಗಳೂ ಅವರೊಡನೆ ನಿಂತು ಅವಳಿಗೂ ಅದೇ ಗೀಳು ಹಿಡಿದು ಬಿಟ್ಟಿತ್ತು. ಮಿಕ್ಕಿದ್ದೆಲ್ಲಾ ಮರೆತೇಹೋದರೂ ಇದೊಂದು ಮಾತ್ರ ಎಲ್ಲದನ್ನೂ ಮರೆಸಿ ನಿಂತಿತ್ತು. ಮೇದರ ಹಳ್ಳಿಯ ಸುತ್ತಮುತ್ತ ರಾಶಿರಾಶಿ ಉದುರುತ್ತಿದ್ದ ರಂಜದಹೂವುಗಳನ್ನೆಲ್ಲಾ ಒಟ್ಟುಮಾಡಿ ಮಾಲೆ ಕಟ್ಟಿ ಮಾರಬೇಕೆಂಬುದೊಂದೇ ಅವಳ ಹಠ.

ಮನೆಗೆ ಬಂದಮೇಲೆ ಅವಳಿಗೆ ತನಗೆ ತಂದ ಹೊಸ ಬಟ್ಟೆ ಬರೆ ಯಾವುದರ

ಮೇಲೂ ಕುತೂಹಲವಿರಲಿಲ್ಲ. ತಾನೂ ಹೂವು ಮಾರುತ್ತೇನೆಂದು ದ್ಯಾವಮ್ಮನಿಗೆ ಒಂದೇಸಮ ದುಂಬಾಲು ಬಿದ್ದಳು. ತನ್ನ ಜೀವದ ಜೀವವಾಗಿರುವ ಇವಳು ಕಾರು ಬಸ್ಸು ತಿರುಗುವ ರಸ್ತೆ ಬದಿಗೆ ಹೋಗಿ ಹೂ ಮಾರುತ್ತಾ ನಿಲ್ಲುವುದು ದ್ಯಾವಮ್ಮನಿಗೆ ಕೊಂಚವೂ ಇಷ್ಟವಿರಲಿಲ್ಲ. ಆದರೆ ಮಗಳ ಹೂ ಮಾರುವ ಗೀಳು ನೋಡಿ ಅವಳಿಗೂ ಕನಿಕರವಾಯ್ತು. ಬೆಳಗ್ಗೆ ಎದ್ದು ಮೇದರ ಹಳ್ಳಿಯ ಕಾಡೊಳಗಿನ ರಂಜದ ಹೂಗಳನ್ನು ಆಯ್ದು ತರಲು ಕೊನೆಗೂ ಅವಳು ಒಪ್ಪಬೇಕಾಯ್ತು.

* * * *

ಬೆಳಗ್ಗೆ ಎದ್ದು ಹೂವಿನ ದಂಡೆಗಳನ್ನೆಲ್ಲಾ ಪುಟ್ಟ ಬುಟ್ಟಿಯಲ್ಲಿ ರೆಡಿಮಾಡಿಕೊಂಡು ದ್ಯಾವಮ್ಮನ ಈ ಹೆಸರಿಲ್ಲದ ಮಗಳು ರಸ್ತೆ ಬದಿಗೆ ಬಂದು ಮಾರಾಟಕ್ಕೆ ನಿಲ್ಲಬೇಕಾದರೆ ಗಂಟೆ ಎಂಟೂವರೆ ಇರಬಹುದು. ಬಿಸಿಲೇರಬೇಕಾದ ಹೊತ್ತು. ಆದರೂ ಅವತ್ತು ಬಿಸಿಲಿರಲಿಲ್ಲ. ಚಳಿಗಾಲದಲ್ಲೂ ಒಮ್ಮೊಮ್ಮೆ ಹಿಡಿದುಬಿಡುವ ಹಿಂಗಾರು ಮಳೆಯ ಸೂಚನೆಯಂತೆ ಸಣ್ಣಗೆ ಥಂಡಿಗಾಳಿ ಬೀಸುತ್ತಿತ್ತು. ಆಕಾಶದಲ್ಲಿ ತೇಲುತ್ತಿದ್ದ ಬಿಳಿಯ ಮೋಡಗಳು ನಿಧಾನವಾಗಿ ದಟ್ಟವಾಗುತ್ತಾ ಕಪ್ಪಗಾಗುತ್ತಿದ್ದವು. ದ್ಯಾವಮ್ಮನ ಜೀವವೆಲ್ಲಾ ಮಗಳೊಡನೆ ಇದ್ದರೂ ಹೊಟ್ಟೆಪಾಡಿಗೆ ಬುಟ್ಟಿ ಹೆಣೆಯಲೇಬೇಕಾದ್ದರಿಂದ ಬಟ್ಟಗತ್ತಿ ತಗೊಂಡು ಬಿದಿರು ಸೀಳಲು ಕಾಡೊಳಗೆ ಹೋಗಿದ್ದಳು.

ಆ ಪುಟ್ಟ ಹುಡುಗಿ ಹೂ ಮಾರಲು ರಸ್ತೆಬದಿ ನಿಂತಿದ್ದಷ್ಟೆ. ಅದಕ್ಕೆ ಹೇಗೆ ಮಾರಬೇಕೆಂದು ಸಹ ಗೊತ್ತಿರಲಿಲ್ಲ. ಎಷ್ಟು ದುಡ್ಡು ಕೇಳಬೇಕೆಂದೂ ಗೊತ್ತಿರಲಿಲ್ಲ. ಒಟ್ಟಿನಲ್ಲಿ ರಸ್ತೆಬದಿ ಹೂ ಹಿಡಿದು ನಿಲ್ಲುವ ರೋಮಾಂಚನವೇ ಅವಳಿಗೆ ಆ ಕ್ಷಣದಲ್ಲಿ ಮುಖ್ಯವಾಗಿತ್ತು. ಒಂದೊಂದು ಬಸ್ಸೂ ಕಾರೂ ಭರಭರನೆ ಧೂಳೆಬ್ಬಿಸಿಕೊಂಡು ಹೋದಹಾಗೂ ನಾನಾಭಂಗಿಗಳಲ್ಲಿ ನಿಂತು ಹೂವಿನ ಮಾಲೆಯನ್ನು ವಾಹನಗಳಲ್ಲಿ ಹೋಗಿಬರುವವರ ಕಣ್ಣಿಗೆ ಕಾಣುವಂತೆ ಎತ್ತೆತ್ತಿ ಹಿಡಿದು ಮಾರಾಟದ ಮಹತ್‌ಸಾಹಸ ಮುಂದುವರಿಸಿದ್ದಳು. ತಾನು ಚಿಕ್ಕ ಹುಡುಗಿಯಾದ್ದರಿಂದ ವಾಹನಗಳವರಿಗೆ ಸರಿಯಾಗಿ ಕಾಣುತ್ತಿಲ್ಲವೇನೋ ಎಂದು ಆದಷ್ಟು ಎತ್ತರಕ್ಕೆ ಎತ್ತಿ ಹಿಡಿದು ಎರಡು ಹೆಜ್ಜೆ ಮುಂದಕ್ಕೆ ಹೋಗಿ ರಸ್ತೆಯೊಳಗೇ ನಿಂತು ತೋರಿಸಿದಳು.

ಯಾವ ಕಾರೂ ನಿಲ್ಲಲಿಲ್ಲ. ಯಾವ ಬಸ್ಸೂ ಬ್ರೇಕ್ ಹಾಕಲಿಲ್ಲ!

ಬಹುಶಃ ಇಷ್ಟು ಪುಟ್ಟಹುಡುಗಿಯ ಹತ್ತಿರ ವ್ಯಾಪಾರ ಮಾಡುವುದು ಹೇಗೆಂದು ಅವರೆಲ್ಲ ಹಿಂದೆಗೆದರೋ ಅಥವಾ ಯಾರಿಗೂ ನಿಂತು ಕೊಳ್ಳುವ ವ್ಯವಧಾನವಿರಲಿಲ್ಲವೋ!

ಪ್ರತಿ ವಾಹನ ಬರುವಾಗಲೂ ಇದಾದರೂ ನಿಲ್ಲಬಹುದೇನೋ ಎಂಬ ಪ್ರತೀಕ್ಷೆಯಿಂದಲೇ ನೋಡುತ್ತಿದ್ದಳು. ಅವಳ ಹಂಬಲಕ್ಕೆ ತಕ್ಕಂತೆ ವಾಹನ ನಿಧಾನವಾದಂತೆ ಸಹ ಕಾಣುತ್ತಿತ್ತು. ಆದರೆ ಆ ಪುಟ್ಟಹುಡುಗಿಯ ಉತ್ಸಾಹಕ್ಕೆ ತಣ್ಣೀರೆರಚುವಂತೆ ಪ್ರತಿಯೊಂದು ವಾಹನ ಹೋದಾಗಲೂ ಧೂಳು ಅವಳ ಕಣ್ಣು ಕತ್ತಲಾಗುವಂತೆ

ಕವಿಯುತ್ತಿತ್ತು.

ಆ ದಿನ ಬೆಳಗ್ಗೆಯೇ ಎದ್ದು ಮೇದರ ಹಳ್ಳಿಯ ಅಕ್ಕಪಕ್ಕದಲ್ಲೇ ಬೆಳೆದಿದ್ದ ರಂಜದ ಮರದ ಬುಡಗಳೆಡೆಗೆ ಓಡಿದ್ದಳು. ಪ್ರತಿಯೊಂದೂ ಭೂತಾಕಾರದ ರಂಜದ ಮರಗಳು. ಅವುಗಳಡಿ ಅಕ್ಷತೆ ಚೆಲ್ಲಿದಹಾಗೆ ರಾತ್ರಿಯೆಲ್ಲಾ ಉದುರಿದ್ದ ರಂಜದ ಹೂಗಳನ್ನು ಒಟ್ಟುಮಾಡಿ ಬುಟ್ಟಿ ಉಕ್ಕಿ ಚೆಲ್ಲುವ ಹಾಗೆ ತುಂಬಿ ಹೊತ್ತು ತಂದಿದ್ದಳು. ಹಳ್ಳದ ತಂಪಿನಲ್ಲಿ ಬೆಳೆದು ಬೆಳೆದು ಕಾಡಾಗಿದ್ದ ಕರಿಬಾಳೆ ಸರಲಿಗೆ ಹೋಗಿ ಬಾಳೆಪಟ್ಟೆ ತಂದು ಅಮ್ಮನಿಗೆ ಮೊದಲು ಮಾಲೆ ಕಟ್ಟಿ ಕೊಡು ಎಂದು ಅತ್ತಿತ್ತ ಹಂದಾಡದ ಹಾಗೆ ಜೋತುಬಿದ್ದಿದ್ದಳು. ಅವಳು ತಂದಿದ್ದ ಹೂವಿನ ರಾಶಿ ನೋಡಿದರೆ ಯಾರೇನು ಒಂದು ಜನ್ಮಕ್ಕೆ ಮಾಲೆ ಕಟ್ಟಿ ಮುಗಿಸುವಹಾಗೆ ಇರಲಿಲ್ಲ. ಹಳತೋ ಹೊಸತೋ ನೋಡದೆ ತರಗೋ ಕಸವೋ ಲೆಕ್ಕಿಸದೆ ಬಾಚಿ ತಂದಿದ್ದ ಹೂಗಳಲ್ಲಿ ಅರ್ಧಕ್ಕರ್ಧ ಹೂವನ್ನು ದ್ಯಾವಮ್ಮ ತೆಗೆದು ಬೇಡವೆಂದು ಎಸೆದಾಗ ಒಯ್ದು ಮಾರಲು ಮಾಲೆ ಕಡಿಮೆಯಾಗುತ್ತೆಂದು ಅವಳಿಗೆ ದುಃಖವೇ ಆಗಿತ್ತು.

ಗಾಳಿ ಜೋರಾಗುತ್ತಿತ್ತು. ಕಾಡಿನ ಮೇಲೆ ಗಾಳಿ ಮೈ ತಿಕ್ಕಿ ಕೊಂಡು ಹೋದಾಗ 'ಹೋ' ಎಂದು ಸಮುದ್ರ ಮೊರೆದಹಾಗೆ ಸದ್ದಾಗುತ್ತಿತ್ತು. ರಸ್ತೆ ಬದಿಯಲ್ಲಿ ಈ ಹುಡುಗಿಗೆ ಎತ್ತಿ ಹಿಡಿದ ಹೂವಿನ ಮಾಲೆ ಬಿಕರಿ ಮಾಡಲು ಯಾವ ಗಿರಾಕಿಯೂ ಕಾಣಲಿಲ್ಲ. ಸುತ್ತ ಕವಿದುಕೊಂಡಂತಿದ್ದ ಕಾಡಿನ ನಡುವೆ ದೂರದವರೆಗೆ ಕಾಣುತ್ತಿದ್ದ ದಾರಿಯನ್ನು ನೋಡಿ ನೋಡಿ ದ್ಯಾವಮ್ಮನ ಮಗಳಿಗೆ ಕಣ್ಣು ನೊಯ್ದವು. ಹೆಚ್ಚು ಕಡಿಮೆ ನೆಲಮಟ್ಟಕ್ಕೆ ಹತ್ತಿರಿದ್ದ ಅವಳ ಕಣ್ಣಳತೆಗೆ ಭೂತಾಕಾರದ ಮರಗಳೆಲ್ಲ ಆಕಾಶದ ಕಡೆಯಿಂದ ತನ್ನೆಡೆಗೆ ನಿಷ್ಕರುಣೆಯಿಂದ ತಿರಸ್ಕಾರದಿಂದ ನಿಟ್ಟಿಸಿದಂತೆ ಕಂಡಿತು. ಬೀಸುತ್ತಿದ್ದ ಗಾಳಿಗೆ ಬಿದಿರು ಹಿಂಡಿಲುಗಳು ಚಳಿಗೆ ಹಲ್ಲು ಕಡಿದಂತೆ ಸದ್ದು ಮಾಡಿದವು. ಅವಳು ನಿಂತು ಎಷ್ಟು ಹೊತ್ತಾಯ್ತೋ ಏನೋ? ಹೊತ್ತು ಗೊತ್ತಾಗದ ಹಾಗೆ ಈಗ ಆಕಾಶದಲ್ಲಿ ಮೋಡಗಳು ಕಿಕ್ಕಿರಿಯತೊಡಗಿದ್ದವು. ಚಿಕ್ಕ ಹುಡುಗಿಯಾದರೂ ಅವಳಿಗೆ ನಿಂತು ನಿಂತು ಕಾಲು ನೋಯತೊಡಗಿದಂತೆ ಹೃದಯಹೀನ ಪ್ರಪಂಚದ ಬಗ್ಗೆ ನಿಧಾನವಾಗಿ ದುಃಖವಾಯ್ತು. ಹೋಗಿಬರುವ ವಾಹನಗಳ ಧೂಳು ಮುಸುಗಿ ಕೈಲಿದ್ದ ಮಾಲೆಯ ರಂಜದ ಹೂಗಳೆಲ್ಲಾ ಮಂಕು ಹಿಡಿದು ಬಾಡುತ್ತಾ ಬಂದುವು.

ಕೊಂಚ ಹೊತ್ತಿನೊಳಗೇ ಹುಡುಗಿ ಕೈಲಿದ್ದ ಮಾಲೆ ಕೆಂಚಾಗಿ ಮುರುಟಿಕೊಂಡು ಅದನ್ನು ಹಿಡಿದು ನಿಲ್ಲಲು ಅವಳಿಗೇ ಅಸಹ್ಯವಾಯ್ತು. ಅದನ್ನು ದೂರ ಎಸೆದು ಬುಟ್ಟಿಯೊಳಗಿಂದ ಇನ್ನೊಂದನ್ನು ತೆಗೆದಳು.

ಮತ್ತೆ ಕಾರು, ಬಸ್ಸು, ಗಾಳಿ, ಧೂಳು, ನಿರಾಸೆ!!. ನಿಷ್ಕರುಣೆಯ ವಿಶ್ವ ಹುಡುಗಿಯ ಪ್ರೀತಿಯ ಕೊಡುಗೆಗಳನ್ನೆಲ್ಲಾ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುವಂತೆ ಕಾಣುತ್ತಿತ್ತು. ಹೂಗಳೊಡನೆ ಹುಡುಗಿಯ ಮನಸ್ಸಿನ ಉತ್ಸಾಹ ಶ್ರದ್ಧೆಗಳೆಲ್ಲಾ ಬಾಡಿದವು. ಕೈಲಿದ್ದ

ಮಾಲೆಗಳು ಬಿಸಿಲಿಗೆ ಬಾಡಿದ ಹಾಗೂ ಎಸೆದು ಒಂದೊಂದನ್ನೇ ತೆಗೆದುಕೊಳ್ಳುತ್ತ ಬುಟ್ಟಿಯೊಳಗಿದ್ದ ಮಾಲೆಗಳೆಲ್ಲಾ ಮುಗಿಯುತ್ತಾ ಬಂದುವು.

ಅಷ್ಟರಲ್ಲಿ ದೂರದಲ್ಲಿ ಒಂದು ಕರಿಯ ಅಂಬಾಸಿಡರ್ ಕಾರೊಂದು ಕಾಡೊಳಗಿಂದ ಬಂದಹಾಗೆ ರಸ್ತೆ ಬದಿಯಿಂದ ಮೆಲ್ಲಗೆ ಮೇನ್ ರೋಡಿಗೆ ದಾಟಿಕೊಂಡಿದ್ದು ಹುಡುಗಿಯ ಕಣ್ಣಿಗೆ ಬಿತ್ತು. ಆ ಕಾರು ತುಂಬ ಹೊತ್ತಿನ ಮುಂಚೆಯೇ ಅಲ್ಲಿ ಬಂದು ರಸ್ತೆಯ ಬದಿ ಕಾಡಿನ ದಟ್ಟಣೆಯಲ್ಲಿ ಹುದುಗಿ ನಿಂತಿದ್ದು ಹುಡುಗಿಯ ಕಣ್ಣಿಗೆ ಬಿದ್ದಿರಲಿಲ್ಲ. ಕಾರು ನಿಧಾನವಾಗಿ ಮೇನ್‌ರೋಡಿನಲ್ಲಿ ಹುಡುಗಿಯತ್ತ ಮುಂದುವರಿಯಿತು.

ಹುಡುಗಿ ಬೆಳಗಿನಿಂದ ಮಾಡಿದ ಅಭ್ಯಾಸ ಬಲದಿಂದಲೋ ಎಂಬಂತೆ ತನ್ನ ಕೈಲಿದ್ದ ಮಾಲೆಯನ್ನು ಬರುತ್ತಿದ್ದ ಕಾರಿನತ್ತ ಎತ್ತಿ ಹಿಡಿದಳು. ಮೆಲ್ಲಗೆ ತಳ್ಳಿದಂತೆ ತನ್ನಕಡೆಗೆ ಬರುತ್ತಿದ್ದ ಅದನ್ನು ನೋಡಿ ಇದಾದರೂ ನಿಲ್ಲಬಹುದೇನೋ ಎನ್ನುವ ಆಸೆ ಅವಳ ಕಣ್ಣಲ್ಲಿ ಮಿಂಚಿತು.



# ಹುಚ್ಚನ ಗಡಿಪಾರು - ೫



ಆ ಅಂಬಾಸಿಡರ್ ಕಾರಿನಲ್ಲಿದ್ದ ಇಬ್ಬರಲ್ಲಿ ಒಬ್ಬ ದೌಲತ್ ರಾಮ್. ಬೆಂಗಳೂರಿನ ನರ್ಸಿಂಗ್ ಹೋಂ ಒಂದರಲ್ಲಿ ವೈದ್ಯನಾಗಿ ಕೆಲಸ ಮಾಡಿಕೊಂಡಿದ್ದ ದೌಲತ್ ರಾಮ್ ನಕಲಿ ಸರ್ಟಿಫಿಕೇಟ್ ಮೇಲೆ ಡಾಕ್ಟರ್ ಕೆಲಸ ಮಾಡುತ್ತಿದ್ದರೂ ಅಸಲಿ ಸರ್ಟಿಫಿಕೇಟ್ ವೈದ್ಯರಿಗಿಂತ ಹೆಚ್ಚು ದುಡ್ಡು ಮಾಡಿದ್ದ. ಸುಳ್ಳು ದಾಖಲೆಗಳೊಂದಿಗೆ ವೈದ್ಯ ವೃತ್ತಿ ಮಾಡುತ್ತಿದ್ದ ಹಲವಾರು ಜನ ಸಿಕ್ಕಿಬಿದ್ದು ದೊಡ್ಡ ಗುಲ್ಲೆದ್ದು ಸರ್ಕಾರ ತನಿಖೆ ಶುರು ಮಾಡಿದಾಗ ದೌಲತ್ ರಾಮ್ ಹೇಳದೆ ಕೇಳದೆ ತಲೆ ತಪ್ಪಿಸಿಕೊಳ್ಳಬೇಕಾದ್ದು ಅನಿವಾರ್ಯವಾಯ್ತು. ದುಡ್ಡು ಸುಲಿಯಲು ಇಲ್ಲದ ಖಾಯಿಲೆಗಳನ್ನು ಸೃಜಿಸಿ ಬೆಂಗಳೂರಿಗೆ ಓದಲು ಬಂದಿದ್ದ ಇರಾನಿಗಳಿಗೆ ಸಾವೂದಿಗಳಿಗೆ ಸರಿಯಾಗಿ ಬೋಳಿಸಿದ್ದ ದೌಲತ್ ರಾಮನಿಗೆ ಮಾದಕ ಔಷಧಿಗಳ ಭೂಗತ ಲೋಕ ಪರಿಚಯವಾಗಿದ್ದು ಇರಾನಿಗಳಿಂದಲೇ. ಅವನ ಮೇಲಿದ್ದ ನೂರೆಂಟು ಪುಕಾರುಗಳ ದೆಸೆಯಿಂದ ಅವನೇನಾದರೂ ನಕಲಿ ದಾಖಲೆಗಳ ಡಾಕ್ಟರೆಂದು ಸಿಕ್ಕಿಬಿದ್ದಿದ್ದರೆ ರೋಗಿಗಳು ಸತ್ತ ಕೇಸುಗಳೆಲ್ಲಾ ಖೂನಿ ಕೇಸುಗಳಾಗಿ ಅವನಿಗೆ ಮರಣ ದಂಡನೆಯೇ ಗತಿಯಾಗುತ್ತಿತ್ತು. ಹಾಗಾಗಿಯೇ ವೈದ್ಯರ ದಾಖಲೆಗಳ ತನಿಖೆ ಪ್ರಾರಂಭವಾಗುತ್ತಿದ್ದಂತೆಯೇ ಅವನು

ಭೂಗತನಾಗಿ ಕಳ್ಳಸಾಗಣಿಕೆ ಜಾಲ ಸೇರಿದ. ಇವತ್ತು ನಾಳೆಯಲ್ಲಿ ಉತ್ತರಭಾರತದ ಕಡೆಗೆ ಹೊರಟು ಹೋಗಬೇಕೆಂದೇ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದ ಅವನು ಅವನಿಗೇ ತಿಳಿಯದಂತೆ ಭೂಗತ ಪ್ರಪಂಚದ ಆಳಕ್ಕೆ ಇಳಿದ. ಇದ್ದಕ್ಕಿದ್ದಂತೆ ಒಂದು ದಿನ ಅವನಿಗೆ ತನಗೆ ಇಲ್ಲಿಂದ ಎಂದೆಂದೂ ಬಿಡುಗಡೆಯೇ ಇಲ್ಲೆಂದು ಗೊತ್ತಾಯ್ತು. ಕೊಲೆ ಮಾಡುವುದು ಅಥವಾ ಕೊಲೆಯಾಗುವುದು ಈ ಎರಡರ ನಡುವೆ ಅಸ್ಥಿತ್ವದಲ್ಲಿರುವ ಈ ಭೂಗತ ಪ್ರಪಂಚದಲ್ಲಿ ಅಪರಿಚಿತವಾದುದು, ಭಯ ಹುಟ್ಟಿಸುವಂಥದು ದೌಲತ್ ರಾಮನಿಗೆ ಯಾವುದೂ ಇರಲಿಲ್ಲ. ಈಗ ಯೋಚಿಸಿದರೆ ಎಷ್ಟೋ ಜನ ಅಸಲಿ ಸರ್ಟಿಫಿಕೇಟುಗಳೊಡನೆ ನಡೆಸುವ ವೈದ್ಯವೃತ್ತಿ ಸಹ ಭೂಗತ ವ್ಯವಹಾರದಂತೆಯೇ ಕಾಣುತ್ತಿತ್ತು. ಅದೂ ಕೊಲ್ಲಿ ರಾಷ್ಟ್ರಗಳಿಂದ ವೈದ್ಯೋಪಚಾರಕ್ಕೆ ಬರುವ ಕಾಯಿಲೆಗಳ ಕೂಪಗಳಂತಿರುವ ಶ್ರೀಮಂತ ಶೇಕ್‌ಗಳನ್ನು ಸುಲಿಯಲು ನರ್ಸಿಂಗ್ ಹೋಂನವರೆಲ್ಲ ಸೇರಿ ರಚಿಸಿಕೊಂಡಿರುವ ಕೂಟ, ಅವರು ನಡೆಸುವ ಮಸಲತ್ತು, ಇವೆಲ್ಲ ದೌಲತ್ ರಾಮನಿಗೆ ಭೂಗತ ಜಗತ್ತಿನ ಸಾಕ್ಷಾತ್ ಪ್ರತಿರೂಪದಂತೆಯೇ ಕಾಣುತ್ತಿತ್ತು.

ಕಾರಿನೊಳಗಿದ್ದ ಇನ್ನೊಬ್ಬ ಕರುಣಾಕರ ಕುಟ್ಟಿ. ಹೆದರು ಪುಕ್ಕಲನಾದರೂ ಕಾರು ಲಾರಿ ನಡೆಸುವುದರಲ್ಲಿ ನಿಸ್ಸೀಮ. ಕೆಲವೇ ದಿನಗಳ ಹಿಂದೆ ಅವನ ಲಾರಿಯನ್ನು ಬೆನ್ನು ಹತ್ತಿದ ಅರಣ್ಯ ಇಲಾಖೆ ಜೀಪನ್ನೂ ಜೀಪಿನ ಜನಗಳನ್ನೂ ಅವನು ಮುಗಿಸಿದ ರೀತಿ ಹೇಗಿತ್ತೆಂದರೆ ಇವತ್ತಿಗೂ ಯಾರಿಗೂ ಅದು ಅಪಘಾತವೋ ಆತ್ಮಹತ್ಯೆಯೋ ಕೊಲೆಯೋ ಎಂದೂ ನಿರ್ಧರಿಸಲಾಗದೆ ತನಿಖೆ ಅರ್ಧದಲ್ಲೇ ನಿಂತಿದೆ. ಕುಟ್ಟಿಯ ಲಾರಿ ಎಷ್ಟೇ ಆದರೂ ಡೀಸೆಲ್ಲಿನ ಬೆಂಜ್ ಗಾಡಿ, ಜೀಪಿನ ವೇಗದಲ್ಲಿ ಓಡಲಾರದೆ ಇನ್ನೇನು ಸಿಕ್ಕಿ ಬೀಳುವುದರಲ್ಲಿತ್ತು. ಕುಟ್ಟಿ ಸ್ಟೇರಿಂಗ್ ಬಲಗಡೆ ಕನ್ನಡಿಯಲ್ಲಿ ಬೆನ್ನಟ್ಟಿ ಬರುತ್ತಿದ್ದ ಜೀಪು ನೋಡಿಕೊಂಡೇ ಬಿಡುತ್ತಿದ್ದವ, ಜೀಪು ನಾಲ್ಕೇ ಮಾರು ಇದೆ ಎನ್ನಬೇಕಾದರೆ ವೇಗವಾಗಿ ಹೋಗುತ್ತಿದ್ದ ಲಾರಿಯ ಏರ್‌ಬ್ರೇಕನ್ನು ಲಪ್ಪನೆ ಮುಂದುಗಡೆ ಕುಳಿತಿದ್ದ ದೌಲತ್ ರಾಮ್ ಮುಗ್ಗುರಿಸಿ ಮುಸುಡಿಗೆ ಸರಿಯಾಗಿ ಪೆಟ್ಟು ಮಾಡಿಕೊಳ್ಳುವಂತೆ ಒದ್ದ. ಜೀಪಿನಲ್ಲಿ ಬೆನ್ನಟ್ಟಿದ್ದ ಇಬ್ಬರಿಗೂ ಲಾರಿ ಮೀರಿಸಿ ಮುಂದೆ ಹೋಗಿ ಇವರನ್ನು ಬಲಿ ಹಾಕಬೇಕೆಂಬುದೊಂದೇ ಮನಸ್ಸಿನಲ್ಲಿದ್ದಿದ್ದು. ಮುಂದೆ ದೌಡಾಯಿಸುತ್ತಿದ್ದ ಲಾರಿ ಸಟ್ಟನೆ ನಿಂತಾಗ ಅದನ್ನು ಕನಸು ಮನಸಿನಲ್ಲಿಯೂ ಊಹಿಸದಿದ್ದ ಡಿಪಾರ್ಟಮೆಂಟಿನ ಜೀಪು ನೆಟ್ಟಗೆ ಲಾರಿ ಅಡಿ ನುಗ್ಗಿ ಚಾಸಿ ನಡುವೆ ಡಿಫರೆನ್ಷಿಯಲ್ಲಿಗೆ ಹೊಡೆಯಿತು. ಜೀಪು ಲಾರಿ ಅಡಿ ನುಗ್ಗಿದಾಗಲೇ ಎದೆ ಮಟ್ಟಕ್ಕಿದ್ದ ಲಾರಿಯ ಬಾಡಿ ಜೀಪಿನ ಚಾಲಕರ ರುಂಡ ಅಪ್ಪಚ್ಚಿ ಮಾಡಿ ಮುಗಿಸಿತ್ತು. ಮುಗಿಸಿತೋ ಇಲ್ಲವೋ ನೋಡಹೋದವರಾದರೂ ಯಾರು? ಲಾರಿ ಹಿಂಭಾಗದಲ್ಲಿ ಜೀಪು ಅಪ್ಪಚ್ಚಿಯಾದ ಸದ್ದು ಕೇಳಿಸಿಕೊಂಡೇ ಲಾರಿಯೊಳಗಿನ ಇಬ್ಬರೂ ಸಹ ಸಮಾಧಾನದಿಂದ ತಲೆಯಾಡಿಸುತ್ತ, ಹಿಂದಿರುಗಿ ಸಹ ನೋಡದೆ ತಣ್ಣಗೆ ಲಾರಿ ಬಿಟ್ಟುಕೊಂಡು ತಮ್ಮ ಪಾಡಿಗೆ ತಾವು ಹೋಗಿದ್ದರು. ಲಾರಿಯ

ಹಿಂಭಾಗಕ್ಕೆ ಕೊಂಚವೂ ಜಖಂ ಆಗಿರಲಿಲ್ಲ. ಅಜ್ಜಿ ಬಜ್ಜಿಯಾಗಿ ಬಿದ್ದಿದ್ದ ಫಾರೆಸ್ಟ್ ಜೀಪಿಗೂ, ಎಲ್ಲೋ ಗುರುವಾಯನ ಕೆರೆ ಹತ್ತಿರ ನಿಲ್ಲಿಸಿ ಹೋಗಿದ್ದ ಈ ಬೆಂಜ್ ಲಾರಿಗೂ ಸಂಬಂಧ ಕಲ್ಪಿಸಿ ಸುಳಿವು ಕಂಡು ಹಿಡಿಯುವವರು ಯಾರು? ಎರಡೂ ವಾರಸುದಾರ ರಿಲ್ಲದ ವಾಹನಗಳಾಗಿ ದೂರದೂರದ ಪೋಲೀಸ್ ಸ್ಟೇಷನ್ನುಗಳೆದುರು ಕರಾವಳಿಯ ಬಿರುಮಳೆಯಲ್ಲಿ ನೆನೆದೂ ನೆನೆದೂ ತುಕ್ಕು ತಿನ್ನುತ್ತಾ ಬಿದ್ದಿವೆ.

ದೌಲತ್ ರಾಮ್, ಕುಟ್ಟಿ ಇಬ್ಬರೂ ಮುವತ್ತೇಳನೆ ಮೈಲಿಕಲ್ಲು ದಾಟಿದ ಕೂಡಲೆ ಸಿಗುವ ದೈತ್ಯ ಮಾವಿನ ಮರದ ಪಕ್ಕ ಇದ್ದ ಲಂಟಾನದ ಮಟ್ಟಿನಲ್ಲಿ ಬಿಳಿಯ ಪ್ಲಾಸ್ಟಿಕ್‌ನಲ್ಲಿ ಸುತ್ತಿಟ್ಟಿರುವ ಒಂದು ಪ್ಯಾಕೆಟ್ ಒಯ್ಯಲು ಬಂದಿದ್ದರು. ಅದರೊಳಗೆ ಇರುವುದೇನು? ಅದರ ಮೌಲ್ಯ ಎಷ್ಟು? ಅದು ಬೇಕಾಗಿರುವುದು ಯಾರಿಗೆ? ಏನೊಂದೂ ಗೊತ್ತಿರಲಿಲ್ಲ. ಅವರಿಗೆ ಅದ್ಯಾವುದೂ ಬೇಕಾಗಿಯೂ ಇರಲಿಲ್ಲ. ಹೇಳಿದಷ್ಟನ್ನು ಹೇಳಿದ ಹಾಗೆ ಮಾಡುವುದು ಮಾತ್ರ ಅವರು ತಿಳಿದಿದ್ದು. ಅವರ ವ್ಯಾಪ್ತಿಯಿಂದಾಚೆಗೆ ಚೂರೇ ಚೂರು ಕುತೂಹಲ ತೋರಿಸಿದರೂ ಅವರ ಜೊತೆಗಾರರೇ ಅವರನ್ನು ಮುಗಿಸಿಬಿಡುವ ಸಂಭವ ಇತ್ತು. ಏಕೆಂದರೆ ಅವರೇ ಹಲವುಬಾರಿ ಆ ಕೆಲಸ ಮಾಡಿದ್ದರು. ಸಾವು ಬದುಕಿನ ಈ ವ್ಯವಹಾರದಲ್ಲಿ ದಯೆ ದಾಕ್ಷಿಣ್ಯದ ಪ್ರಶ್ನೆಯೇ ಇರುವುದಿಲ್ಲ. ಕೊಲೆ ಅಥವಾ ಆತ್ಮಹತ್ಯೆ ಎರಡೇ ಯಾವಾಗಲೂ ಆ ಭೂಗತ ಜಗತ್ತಿನಲ್ಲಿ ಎದುರಿರುತ್ತಿದ್ದ ಆಯ್ಕೆ! ಆದ್ದರಿಂದಲೇ ಅವರಿಬ್ಬರೂ ಪರಸ್ಪರ ಸಹ ಎಷ್ಟೋ ಅಷ್ಟೇ ಮಾತಾಡುತ್ತಿದ್ದುದು. ತಮ್ಮ ಮನಸ್ಸಿನ ಭಾವನೆಗಳನ್ನಾಗಲೀ ಆಲೋಚನೆಗಳನ್ನಾಗಲೀ ವ್ಯಕ್ತಪಡಿಸುವ ಭಾಷೆಯೇ ಅವರಿಂದ ನಿರ್ಗಮಿಸಿತ್ತು.

ಆ ದಾರಿಯಲ್ಲಿ ಮೂವತ್ತಾರನೆ ಮೈಲಿಕಲ್ಲಿನ ತಿರುವು ದಾಟಿದೊಡನೆ ರಸ್ತೆ ನಾಲ್ಕಾರು ಮೈಲಿ ನೇರವಾಗಿದೆ. ಆ ರಸ್ತೆ ನೀಟಿನಲ್ಲಿ ಕೊಂಚ ದೂರ ಬರುವುದರೊಳಗೆ ಕುಟ್ಟಿ ಆಘಾತವಾದವನಂತೆ ಬ್ರೇಕ್ ಹಾಕಿ ಕಾರು ನಿಧಾನ ಮಾಡಿದ. ಅವರಿಗೆ ಗುರುತು ಹೇಳಿದ್ದ ಮಾವಿನ ಮರದ ಕೆಳಗೇ ಏನೋ ಚಲನೆ ಕಾಣುತ್ತಿದೆ! ಯಾರೋ ನಿಂತಿದ್ದಾರೆ!

!................

ಎಲ್ಲೋ ಏನೋ ಎಡವಟ್ಟಾಗಿದೆ!

!................

ದೆವ್ವ ಸಹ ಸುಳಿಯದ ಈ ರಸ್ತೆಯಲ್ಲಿ ಯಾರು ಅಲ್ಲಿ ನಿಂತಿರುವುದು?

ಕುಟ್ಟಿ ಕಾರು ದೂರದಲ್ಲೇ ನಿಲ್ಲಿಸಿ ದಿಟ್ಟಿಸಿ ನೋಡಿದ. ಯಾವುದೋ ಚಿಕ್ಕ ಹುಡುಗಿ! ಹಾಗಿದ್ದರೆ ಇನ್ಯಾರೋ ದೊಡ್ಡವರೊಬ್ಬರು ಅಲ್ಲಿರಲೇ ಬೇಕು! ಕಾಲ ಸರಿಯುತ್ತಾ ಇದೆ! ಬೇಗ ಕೆಲಸ ಮುಗಿಸಿ ಬಿಡೋಣ ಎಂದರೆ ಇದ್ಯಾವ ಗೋಳು!

ಕುಟ್ಟಿ ಮೆಲ್ಲಗೆ ಕಾರನ್ನು ರಸ್ತೆ ದಾಟಿಸಿ ಪಕ್ಕಕ್ಕೆ ತಗೊಂಡು ಮಾವಿನ ಮರ ಕಾಣುವಂತೆ ನಿಲ್ಲಿಸಿಕೊಂಡ. ಅವರಿಬ್ಬರೂ ಕಾರಿನಿಂದ ಇಳಿಯಲಿಲ್ಲ. ತಮ್ಮ

ಕಾರ್ಯಕ್ರಮದಲ್ಲಿ ಏನು ಚೂರು ಅದಲುಬದಲಾಗಲಿ ಅವರ ಮನಸ್ಸು ಹಠಾತ್ತನೆ ಏನೋ ಆಪತ್ತನ್ನು, ವೈರಿಗಳ ಪ್ರತಿವ್ಯೂಹವನ್ನು, ಅಪಾಯವನ್ನು ಶಂಕಿಸುತ್ತಿತ್ತು. ಕಾಡುಮೃಗಗಳಂತೆ ಮೈಯ್ಯೆಲ್ಲಾ ಕಣ್ಣಾಗಿ ಬದುಕುವುದು ಅವರ ರಕ್ತದಲ್ಲೇ ಸೇರಿಹೋಗಿತ್ತು.

ದೂರದಿಂದ ಮೌನವಾಗಿ ಬೃಹದಾಕಾರದ ಮಾವಿನ ಮರದ ಬುಡದಲ್ಲಿ ನಿಂತಿದ್ದ ಆ ಹುಡುಗಿಯನ್ನು ನೋಡತೊಡಗಿದರು. ಹುಡುಗಿಯ ಕಡೆಗೆ ನೋಡುತ್ತಿದ್ದರೂ ಅವರ ದೃಷ್ಟಿ ಹುಡುಕುತ್ತಿದ್ದುದು ಅತ್ತಿತ್ತ. ಅವಳ ಅಕ್ಕಪಕ್ಕದ ಸಂದುಗೊಂದುಗಳಲ್ಲಿ ಏನಾದರೂ ಚಲನೆ, ಏನಾದರೂ ಸಂಶಯಾಸ್ಪದವಾದದ್ದು ಕಾಣುತ್ತದೆಯೋ ಎಂದು.

* * * *

ದೌಲತ್ ರಾಮನಿಗೆ ಕಾರೊಳಗೆ ಕುಳಿತು ಕುಳಿತು ಬೇಸರವಾಯ್ತು. ಅವರು ಅಲ್ಲಿ ಕಾಲ ಕಳೆದಿದ್ದು ಅಷ್ಟರೊಳಗೇ ಇದ್ದರೂ ಕ್ಷಣ ಗಂಡಾಂತರವನ್ನು ಶಂಕಿಸುತ್ತಾ ಅದುಮಿಟ್ಟ ಸ್ಪ್ರಿಂಗಿನಂತೆ ಕುಳಿತರೆ ಗಡಿಯಾರದ ಮುಳ್ಳು ಪ್ರಚಂಡ ವೇಗದಲ್ಲಿ ತಿರುಗುತ್ತದೆ. ಒಂದೊಂದು ಸೆಕೆಂಡುಗಳು ಒಂದೊಂದು ಯುಗಗಳಾಗುತ್ತವೆ.

"ಏನಿರಬಹುದು ಆ ಪ್ಯಾಕೆಟ್ಟಿನಲ್ಲಿ. ಗಂಧವೋ! ಅಫೀಮೋ! ಗಾಂಜಾನೋ! ಚಿನ್ನವೋ! ವಜ್ರವೈಡೂರ್ಯಗಳೋ!" ದೌಲತ್ ರಾಮನ ತಲೆಯೊಳಗೆ ನೂರಾರು ಆಲೋಚನೆಗಳು ಓಡಿದುವು. ಅವುಗಳಲ್ಲಿ ಯಾವುದನ್ನೂ ಅಪ್ಪಿತಪ್ಪಿಯೂ ಕುಟ್ಟಿಯ ಬಳಿ ಅವನು ಪಿಸು ಮಾತಿನಲ್ಲಿಯೂ ಉಸುರಲು ಸಾಧ್ಯವಿರಲಿಲ್ಲ.

ವಜ್ರಗಳೆ! ಅವನ ತಲೆಯೊಳಗೆ ವಜ್ರ ಕ್ವಚಿತ್ತಾಗಿ ಇಣುಕಿದ ಕೂಡಲೆ ಆಲೋಚನಾ ಲಹರಿ ಇನ್ನೆತ್ತಲೋ ತುಯ್ಯತೊಡಗಿತು. ದೌಲತ್ ರಾಮನ ತಲೆಯೊಳಗೆ ದೇವಪುರದವರೆಲ್ಲಾ ಸೇರಿ ಊರಿನ ಹುಚ್ಚ ಕುಂಟರಾಮನನ್ನು ಹೆಡೆಮುರಿ ಕಟ್ಟಿ ವ್ಯಾನು ಮಾಡಿಕೊಂಡು ತಗೊಂಡುಹೋಗಿ ಎಲ್ಲೋ ದೇಶಾಂತರ ಮತ್ತೆ ಹಿಂದಿರುಗದಂತೆ ತಳ್ಳಿ ಬಂದರಂತೆ ಎನ್ನುವುದು ಜ್ಞಾಪಕಕ್ಕೆ ಬಂತು. ದೇವಪುರದಲ್ಲಿ ಕುಂಟರಾಮ ಇದ್ದಿದ್ದಾಗಲಿ, ಅವನನ್ನು ಹೆಡೆಮುರಿಕಟ್ಟಿ ಸಾಗಿಸಿದ್ದಾಗಲಿ, ಅವನನ್ನು ಫೈಸಲ್ ಮಾಡಬೇಕೆಂದು ಹುಕುಂ ಬರದಿದ್ದರೆ ದೌಲತ್ ರಾಮನ ಗಮನಕ್ಕೆ ಬರುವುದು ಸಾಧ್ಯವೇ ಇರಲಿಲ್ಲ. ಕುಂಟ ರಾಮನನ್ನು ವ್ಯಾನಿನಲ್ಲಿ ದೇಶಾಂತರ ಸಾಗಿಸುವುದೋ, ಅಥವಾ ಅವನು ಎಲ್ಲೂ ಪತ್ತೆ ಇರದುದನ್ನು ನೋಡಿದರೆ ಕೊಂದೇಬಿಟ್ಟಿರುವುದೋ ನೋಡಿದರೆ ದೇವಪುರಕ್ಕೆ ಅವನು ಎಂಥ ಕಾಟ ಕೊಟ್ಟಿರಬಹುದೆಂದು ಊಹಿಸಬಹುದು.

ಕುಂಟರಾಮ ದೇವಪುರದವನೇ ಅಲ್ಲ. ಪಶ್ಚಿಮ ಘಟ್ಟಗಳ ಯಾವುದೋ ಒಂದು ಗಿರಿ ನೆತ್ತಿಗೆ ವಿಮಾನ ಢಿಕ್ಕಿ ಹೊಡೆದಾಗ ಅದನ್ನು ಹುಡುಕಿ ಸಾಗಿಸಲು ಬಂದ ಮಿಲಿಟರಿ ಅಧಿಕಾರಿಗಳ ಜೊತೆ ಬಟ್ಲರಾಗಿ ಬಂದವನು. ಅವನ ಪೂರ್ತಿ ನಾಮಧೇಯ ರಾಮಪ್ರಸಾದ್ ಎಂದು. ಸರ್ಚ್ ಪಾರ್ಟಿ ಜೊತೆ ಕಾಡುಹತ್ತಿದ ರಾಮಪ್ರಸಾದ ಮತ್ತೆ

ಅನೇಕ ದಿನ ಪತ್ತೆಯೇ ಇರಲಿಲ್ಲ. ಢಿಕ್ಕಿ ಹೊಡೆದ ವಿಮಾನ ಪತ್ತೆಮಾಡಿ ಎಲ್ಲ ಸಾಗಿಸಿಕೊಂಡು ಮಿಲಿಟರಿಯವರು ಹೋದರೂ ಈ ಆಸಾಮಿಯ ಅಡ್ರಸ್ಸೇ ಇರಲಿಲ್ಲ. ಅನೇಕ ದಿನಗಳ ತರುವಾಯ ದೇವಪುರದ ಪೇಟೆಯಲ್ಲಿ ಕಾಣಿಸಿಕೊಂಡಾಗ ಇವನನ್ನು ಯಾರೂ ಯಾರೆಂದು ಗುರುತಿಸಲಿಲ್ಲ. ರಾಮಪ್ರಸಾದ್ ಗುರುತು ಹೇಳಿಕೊಳ್ಳುವ ಸ್ಥಿತಿಯಲ್ಲೂ ಇರಲಿಲ್ಲ. ಏಕೆಂದರೆ ಅವನು ಹೆಚ್ಚೂ ಕಡಿಮೆ ಅರೆಹುಚ್ಚನಾಗಿದ್ದ. ಅವನನ್ನು ಜನ ಅರೆಹುಚ್ಚನೆಂದು ತೀರ್ಮಾನಿಸಿದ್ದೇಕೆಂದರೆ ಅವನ ಮಾತೆಲ್ಲ ಅಸಂಬದ್ಧಗಳ ಕಂತೆಯಾಗಿತ್ತು. ವಜ್ರ ನೋಡಿದ್ದೇನೆ, ರತ್ನಮೂಲ ಕಂಡು ಹಿಡಿದಿದ್ದೇನೆ, ಇತ್ಯಾದಿ ಇತ್ಯಾದಿ. ಆ ಕಣಿವೆಯಲ್ಲಿ ಹರಿಯುವ ದೋಣಿಹೊಳೆಯ ಹಿಂದಿನ ಹೆಸರು 'ರತ್ನಮೂಲ' ಆಗಿದ್ದರಿಂದ ಅದರ ಮೂಲ ಇವನು ಕಂಡುಹಿಡಿದು ಯಾರಿಗೂ ಏನೂ ಆಗಬೇಕಾಗಿರಲಿಲ್ಲ. ಆ ಹುಚ್ಚನ ಬಳಿ ಇದ್ದ ಮೂರುನಾಲ್ಕು ಕಲ್ಲು ಚೂರುಗಳನ್ನು ಕಂಡು ನಕ್ಕು ಅವನ ಕಾಲಿಗೆ ಇಲಾಜು ಮಾಡಿಸಿಕೊಳ್ಳಲು ಭಿಕ್ಷ ಹಾಕಿದ್ದರು.

ರಾಮಪ್ರಸಾದನ ಅವಸ್ಥೆ, ಮನಃಸ್ಥಿತಿ ಹೇಗಿತ್ತೆಂದರೆ ಅವನು ವಜ್ರ ಗುರುತಿಸುವುದೂ ಸಾಧ್ಯವಿರಲಿಲ್ಲ, ಅವನು ತಂದಿದ್ದು ವಜ್ರವೇ ಆಗಿದ್ದರೂ ಯಾರೂ ನಂಬುತ್ತಿರಲಿಲ್ಲ. ಹುಚ್ಚರಿರಲಿ ಅವನನ್ನು ಹುಚ್ಚನೆನ್ನುತ್ತಿದ್ದ ದೇವಪುರದ ಮಂದಿಗಾದರೂ ಕಲ್ಲು ಮಣ್ಣಿನೊಡನೆ ಕಾಣಸಿಗುವ ವಜ್ರ ಗುರುತಿಸಲು ಸಾಧ್ಯವಿತ್ತೆ ಎನ್ನುವುದು ಬೇರೆ ಪ್ರಶ್ನೆ.

ಹುಚ್ಚರಾಮ ದೇವಪುರದ ಪೇಟೆಯಲ್ಲಿ ಕಾಣಿಸಿಕೊಳ್ಳಬೇಕಾದರೆ ಹುಚ್ಚರ ಸರ್ವ ಗುಣ ಲಕ್ಷಣಗಳ ಸಾಕ್ಷಾತ್ ಸ್ವರೂಪವಾಗಿದ್ದ. ಮೈಗೆ ಸುತ್ತಿದ್ದ ಹರುಕು ಚಿಂದಿ! ಕಂಕುಳಲ್ಲೊಂದು ಮುರುಕಲು ಕೋಲು! ಎಡಗಾಲಿಗೆ ನಾಲ್ಕಾರು ಕಡೆ ಬೀಳು ಬಿಗಿದುಕೊಂಡು ಕುಂಟುತ್ತಾ ಬಂದವ, ಕಾಡಿನಲ್ಲಿ ಮಂಡಲದ ಹಾವು ಹೆಬ್ಬೆರಳಿಗೆ ಕಚ್ಚಿತೆಂದೂ, ವಿಷ ಮೇಲಕ್ಕೇರದಂತೆ ಬೀಳು ಬಿಗಿದಿದ್ದೇನೆಂದೂ ಹೇಳಿದ. ಅದು ನಿಜವೋ ಏನೋ! ಏಕೆಂದರೆ ಯಾರೋ ಪುಣ್ಯಾತ್ಮರು ಅವನ ಬಾತುಕೊಂಡಿದ್ದ ಎಡಗಾಲಿನ ಹೆಬ್ಬೆರಳನ್ನು ತೆಗೆಸಿಹಾಕಿ ಇಲಾಜು ಮಾಡಿಸಿದ ಮೇಲೂ ಕಾಲು ಅಲ್ಲಿಂದ ಮುಂದಕ್ಕೆ ಕೊಳೆಯುತ್ತಾ ಬಂತು.

ಹುಚ್ಚರಾಮನನ್ನು ಹೆಡೆಮುರಿಕಟ್ಟಿ ಊರಿಂದ ಸಾಗಿಸಬೇಕಾಗಿ ಬಂದಿದ್ದು ಈ ಕಾರಣಕ್ಕಲ್ಲ. ದಿನಾ ಸಾಯಂಕಾಲ ಕುಡಿದುಕೊಂಡು ಬಾಯಿಗೆ ಬಂದಹಾಗೆ ಕಂಡಕಂಡವರ ಮೇಲೆಲ್ಲ ಒದರುತ್ತ ಊರಿನ ದೊಡ್ಡ ಮನುಷ್ಯರನೇಕರ ಅನೇಕ ಸ್ವಂತ ವಿಷಯಗಳ ಬಗ್ಗೆಯೆಲ್ಲಾ ಬಾಯಿಮಾಡುತ್ತ, ಇವನ ವಜ್ರ ವೈಡೂರ್ಯಗಳನ್ನು ಕದ್ದು ದೊಡ್ಡಮನುಷ್ಯರಾದರೆಂದು ಕೂಗುತ್ತ, ಕೊನೆಕೊನೆಗೆ ಅವನ ಕೂಗನ್ನು ಹುಚ್ಚನ ಮರುಳು ಮಾತುಗಳೆಂದು ಕಡೆಗಣಿಸಿ ಓಡಾಡಲಸಾಧ್ಯವಾಗಿ ಪರಿಣಮಿಸಿತ್ತು.

ದೌಲತ್‌ರಾಮ್‌ಗೆ ಈ ಹುಚ್ಚನ ಗಲಾಟೆಗೆ ಇತಿಶ್ರೀ ಹಾಕಬೇಕೆಂದು ಆರ್ಡರ್

ಬಂದಾಗಲೇ ಚಕಿತನಾಗಿ ಹುಚ್ಚನ ಹುಚ್ಚು ಉದ್ಗಾರಗಳನ್ನು ಗಮನಿಸಿದ್ದು. ಬಾಯಿಗೆ ಬಂದಹಾಗೆ ಒದರುವುದನ್ನು ಬಿಟ್ಟರೆ ಇವನು ಮಾಡಿರುವ ಅಪರಾಧವಾದರೂ ಮತ್ತೇನು?

ಹಾಗಾದರೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಏನೋ ಒಂದು ಸತ್ಯ ಬೊಗಳಿದ್ದಾನೆ ಇವನು!...........

ಇಲ್ಲದಿದ್ದರೆ ಯಾಕೆ ಇವನು ಸುಖಾಸುಮ್ಮನೆ ಮರಣ ದಂಡನೆ ಮೈಮೇಲಿ ತಂದು ಕೊಳ್ಳುತ್ತಿದ್ದ?..........

ಈ ಹುಚ್ಚನ ಅಸಂಖ್ಯ ಅಸಂಬದ್ಧ ಚೀರಾಟಗಳಲ್ಲಿ ಹಾಗಾದರೆ ಯಾವುದೋ ಒಂದು ಸತ್ಯ! ಸುಸಂಬದ್ಧ!!!!..........

ಆದರೆ ಯಾವುದು?!!!..........

ಕಾಡಿನ ನೀರವದಲ್ಲಿ ಕಾರಿನಲ್ಲಿ ಕುಳಿತು ದೌಲತ್ ರಾಮ್ ಕಾಲ ಕಳೆಯಲು ಯೋಚಿಸಿದ. ಅವನಿಗೇನೂ ಹಣ ಮಾಡಬೇಕೆಂಬ ಹಂಬಲವೂ ಇರಲಿಲ್ಲ. ಏಕೆಂದರೆ ಭೂಗತ ಲೋಕದಲ್ಲಿ ಎಷ್ಟು ಖರ್ಚು ಮಾಡಬಹುದೋ ಅಷ್ಟೂ ಅವನ ಬಳಿ ಇತ್ತು. ಅದರಿಂದಾಗಿಯೇ ಈ ರಹಸ್ಯ ತಿಳಿಯುವ ಕುತೂಹಲವೂ ಅವನಲ್ಲಿರಲಿಲ್ಲ. ತನ್ನ ಮೇರೆ ಮೀರಿ ಪ್ರಾಣಾಪಾಯಕ್ಕೆ ತುತ್ತಾಗುವುದೂ ಅವನಿಗೆ ಬೇಕಿರಲಿಲ್ಲ. ಸುಮ್ಮನೆ ಕುಳಿತು ಮಾಡುವುದೇನೆಂದು ಮಾತ್ರ ಅವನು ಯೋಚಿಸುತ್ತಿದ್ದುದಿರಬೇಕು.

ಕುಟ್ಟಿ ಒಂದುಸಾರಿ ವಾಚು ನೋಡಿಕೊಂಡ. ಕಾಲ ಮೀರುತ್ತಾ ಇದೆ! ಈ ಕಗ್ಗಾಡಿನಲ್ಲಿ ಇದೊಂದು ಬೀದಿ ಬೊಮ್ಮಟಿ ಸುಮ್ಮನೆ ಹೂವಿನ ಮಾಲೆ ಎತ್ತಿ ಹಿಡಿದು ಅದೇ ಜಾಗದಲ್ಲಿ ಆಗಿನಿಂದ ನಿಂತಿರುವುದರ ಅರ್ಥವೇನು? ಅವನ ಗುಮಾನಿ ಸಂಶಯ ಅನುಮಾನಗಳ ಜಗತ್ತಿನಲ್ಲಿ ಪ್ರತಿಯೊಂದೂ ಶಕುನಗಳಂತೆ ಕಾಣುತ್ತಿದ್ದವು.

ಆದರೆ ಅವಳು ಎತ್ತಿ ಹಿಡಿಯುವ ಮಾಲೆಗಳಿಗೆ ಯಾವ ಗಿರಾಕಿಯೂ ಇಲ್ಲ! ಒಂದೇ ಒಂದು ಕಾರೂ ನಿಂತಿದ್ದನ್ನು ನೋಡಲಿಲ್ಲ! ಹಾಗಾದರೆ ಯಾಕೆ ನಿಂತಿದೆ ಈ ಭಿಕಾರಿ ಅಲ್ಲಿ? ನಮ್ಮ ದಂಧೆ ಇನ್ನೊಂದು ನರಕ್ರಿಮಿಗೆ ಗೊತ್ತಾಗಬಾರದು! ಹುಡುಗಿ ಇರಲಿ! ಮಗು ಇರಲಿ! ಅಥವಾ ಹೊಟ್ಟೆ ಒಳಗಿನ ಭ್ರೂಣ ಇರಲಿ!

"ಇನ್ನು ಹತ್ತು ನಿಮಿಷ! ಅದರ ನಸೀಬು ಇನ್ನು ಹತ್ತೇ ನಿಮಿಷ!" ಅಸಹನೆಯಿಂದ ಹಲ್ಲು ಕಡಿಯುತ್ತ ಮೂತ್ರಕ್ಕೆ ಅವಸರವಾದವರ ರೀತಿ ಗೊಣಗಿದ ಕುಟ್ಟಿ.

"ರೈಟ್" ಎಂದ ದೌಲತ್ ರಾಮ್.

"ಮತ್ತೆ ಅದರಪ್ಪನೋ, ಅವ್ವನೋ ಅಕ್ಕ ಪಕ್ಕ ಇದ್ದರೆ ಅದನ್ನೂ"

"ರೈಟ್"


"ಇಂಥದೇ ಒಂದು ಮಗು ಕೋರ್ಟಿನಲ್ಲಿ ಹೌದು ಅಂತ ತಲೆ ಆಡಿಸಿದ್ದಕ್ಕೆ ಬ್ರೋಕರ್ ಉನ್ನಿ ಹನ್ನೆರಡು ವರ್ಷ ಒಳಗೆ ಹೋದ. ಗೊತ್ತಲ್ಲ?"

"ರೈಟ್"

ಕುಟ್ಟಿ ಮತ್ತೆ ಮಾತಾಡಲಿಲ್ಲ. ದೌಲತ್ ರಾಮ್ ರೈಟ್ ಎಂದರೆ ಏನರ್ಥ, ಹೋಲ್ಡಾನ್ ಎಂದರೆ ಏನರ್ಥ ಎಂದು ಅವನಿಗೆ ಗೊತ್ತಿತ್ತು. ಇಬ್ಬರೂ ಮೌನವಾಗಿ ಹತ್ತುನಿಮಿಷ ಗಡು ಕೊಟ್ಟುಕೊಂಡು ಕಾಯತೊಡಗಿದರು. ಹತ್ತು ನಿಮಿಷ ಎಂದರೆ ಹತ್ತು ವರ್ಷ ಅವರ ಪಾಲಿಗೆ.



# ಕ್ಯಾಪ್ಟನ್ ಖುದ್ದೂಸನ 'ಘಾಟಿ ಎಕ್ಸ್‌ಪ್ರೆಸ್' - ೬



ಕೊಲೆಗಡುಕರು ಎಂದರೆ ವಿಶಿಷ್ಟ ವ್ಯಕ್ತಿಗಳೆಂದೂ, ಕೊಲೆಯನ್ನು ಒಂದು ಮಹಾ ಸಾಹಸದಂತೆ ಅವರು ಜರುಗಿಸುತ್ತಾರೆಂದೂ ಊಹಿಸುವುದು ತಪ್ಪು. ಅದೂ ಈ ಭೂಗತ ವಂಚಕ ಪ್ರಪಂಚದಲ್ಲಿ ಕೊಲ್ಲದಿದ್ದರೆ ಪರಿಣಾಮ ತಾನು ಸಾಯಬೇಕಾಗುತ್ತದೆ ಎಂದಾದಗಲಂತೂ ಜೀವಿಸುವುದಕ್ಕಾಗಿ ಬದುಕಿರುವವನು ಉಸಿರಾಡುವ ಹಾಗೆ ಇವೆಲ್ಲಾ ನಡೆಯುತ್ತದೆ. ದೌಲತ್ ರಾಮ್ ಯಾರನ್ನಾದರೂ ಖತಂ ಮಾಡಬೇಕೆಂದಿದ್ದರೆ ಆ ಪ್ರಾಣಿಯ ಕಣ್ಣುಗಳನ್ನು ಮಾತ್ರ ನೋಡುತ್ತಿರಲಿಲ್ಲ. ಅದು ಮನುಷ್ಯರಾಗಲಿ, ಕುರಿ ಕೋಳಿಯಾಗಲಿ, ಅದರ ಕಣ್ಣುಗಳನ್ನು ಮಾತ್ರ ನೋಡಬೇಡ! ಇದೊಂದು ಸರಳ ಸೂತ್ರವನ್ನು ಮಾತ್ರ ಅವನು ಅನುಸರಿಸುತ್ತಿದ್ದ.

ದ್ಯಾವಮ್ಮನ ಮಗಳನ್ನು ಪರಂಧಾಮಕ್ಕೆ ಕಳಿಸಲು ನಿರ್ಧರಿಸಿ ಕಾರು ಮುಂದೆ ಹೊರಟಾಗ, ಅದರ ನೆತ್ತಿಯ ಮೇಲೆ ಮುಷ್ಟಿಯಿಂದ ಒಂದೇ ಒಂದು ಗುದ್ದು ಗುದ್ದಿದ್ದರೆ ಸಾಕು, ಇನ್ನೂ ಮೂಳೆ ಗಟ್ಟಿ ಇಲ್ಲದ ಅದರ ಎಳೆಯ ನೆತ್ತಿ ಕೋಳಿ ಮೊಟ್ಟೆಯಂತೆ ಅಜ್ಜಿಬಜ್ಜಿಯಾಗಿ, ಕಮಕ್ಕಿಮಕ್ ಎನ್ನದೆ ಅದರ ಉಸಿರು ಉಡುಗುತ್ತದೆ ಎಂದುಕೊಂಡ ದೌಲತ್ ರಾಮ್ ಹಾಗೆ ಮಾಡದಿದ್ದುದು ಅದರ ಕಣ್ಣು ನೋಡಿದ್ದಕ್ಕಲ್ಲ. ಹುಡುಗಿಯ

ಹತ್ತಿರ ಕಾರು ನಿಲ್ಲಿಸಿದಾಗ ದೌಲತ್ ರಾಮ್ ಕಾರು ಬಾಗಿಲು ತೆಗೆಯುವುದಕ್ಕೂ ಮೊದಲೇ ದೂರದಲ್ಲೆಲ್ಲೋ ಕಾರೋ ಬಸ್ಸೋ ಬರುವ ಸದ್ದಾಯ್ತು. ಮುಂದೇನೆಂದು ಮಿಂಚಿನಂತೆ ಯೋಚನೆ ಮಾಡಿದ ದೌಲತ್ ರಾಮ್ ಚಕ್ಕನೆ ಒಂದು ನೋಟು ತೆಗೆದು ಹುಡುಗಿ ಕೈಗೆ ಕೊಟ್ಟು, ಕೈಯ್ಯಲ್ಲಿದ್ದ ಬುಟ್ಟಿ ಕಿತ್ತುಕೊಂಡಂತೆ ತೆಗೆದುಕೊಂಡು, ''ಹೋಗು, ಹೋಗು'' ಎಂದು ಗದರಿ ಹೇಳಿದ.

ಬೆಳಗಿನಿಂದ ನಿಂತೂ ನಿಂತೂ, ಪ್ರತಿಯೊಂದು ವಾಹನ ಬಂದಾಗಲೂ ಪ್ರತೀಕ್ಷೆಯಿಂದ ಕಾದೂ ಕಾದೂ ಹತಾಶೆಯಲ್ಲಿ ದುಃಖದಲ್ಲಿ ತನ್ನ ಕೈಯ್ಯಲ್ಲಿ ಒಣಗುತ್ತಿದ್ದ ಕೊನೆಯ ಹೂ ಮಾಲೆಯನ್ನು ಎತ್ತಿ ಹಿಡಿದ ದ್ಯಾವಮ್ಮನ ಮಗಳಿಗೆ ದೌಲತ್ ರಾಮನ ವರ್ತನೆ ಎಷ್ಟು ದುಃಖ ತಂದಿತೆಂದರೆ ನೆತ್ತಿಯ ಮೇಲೆ ಮುಷ್ಟಿಯಿಂದ ಅಪ್ಪಳಿಸಿದ ಹಾಗೇ ಆಯ್ತು! ಮರಗಳೆಲ್ಲ ಹುಚ್ಚರ ಹಾಗೆ ತಲೆ ಕೆದರಿಕೊಂಡು ಗಾಳಿಗೆ ತೂರಾಡುತ್ತ ಹಿಯ್ಯಾಳಿಸಿ ನಗುವಂತೆ, ನೋಡಿದಷ್ಟುದ್ದಕ್ಕೂ ಹಾಸಿ ಬಿದ್ದಿರುವ ರಸ್ತೆ ಕಠೋರ ಜೀವನದಂತೆ, ಮೋಡ ಕಿಕ್ಕಿರಿದಿದ್ದ ಆಕಾಶ, ಅವಳನ್ನು ಮುಚ್ಚಿ ಕೂಡಿಹಾಕಿದ ಡಬ್ಬಿ ಮುಚ್ಚಲದಂತೆ ಅಸಹನೀಯವಾಗಿ ಕಂಡಿತು. ಬೆಳಗ್ಗೆ ಬರುತ್ತಾ ಬುಟ್ಟಿಯ ತುಂಬ ಮಾಲೆಗಳೊಂದಿಗೆ ಹೊತ್ತು ತಂದಿದ್ದ ಅವಳ ಕಿನ್ನರ ಕನಸುಗಳೆಲ್ಲ ಧೂಳು ಹಿಡಿದು ಮುರುಟಿ ದುರ್ಭರವಾದುವು. ಹುಡುಗಿಯ ಕಣ್ಣೊಳಗೆ ನೀರು ತುಂಬಿ ಪ್ರಪಂಚವೆಲ್ಲ ಮಂಜು ಮಂಜಾಯ್ತು.

ಆ ಹುಡುಗಿ ಹುಲ್ಲಿನ ಮಧ್ಯೆ ಬೈತಲೆ ಎಳೆದಂತಿದ್ದ ಕಾಲು ದಾರಿಯಲ್ಲಿ ಮೌನವಾಗಿ ಮ್ಲಾನವದನದಲ್ಲಿ ತಿರುಗಿ ಮಾತೇ ಆಡದೆ ಹೊರಟು ಹೋದಳು. ಬಂದಿದ್ದ ಮಾತು ಮತ್ತೊಮ್ಮೆ ಶಾಶ್ವತವಾಗಿ ನಿರ್ಗಮಿಸಿತ್ತು!

ದುಡ್ಡು ಕೊಟ್ಟಿದ್ದಕ್ಕೆ ಕಣ್ಣೀರು ಹಾಕುತ್ತ ಹುಡುಗಿ ಹೊರಟು ಹೋಗಿದ್ದೇಕೆಂದು ಅಚ್ಚರಿಪಡಲು ದೌಲತ್ ರಾಮನಿಗೆ ಪುರುಸೊತ್ತೂ ಇರಲಿಲ್ಲ. ಅವನು ಅದನ್ನು ಗಮನಿಸಲೂ ಇಲ್ಲ. ಈ ಹಾಳು ಹುಡುಗಿ ದೆಸೆಯಿಂದ ತಮಗೆ ವೃಥಾ ಕಾಲ ಹರಣವಾಯ್ತಲ್ಲ ಎಂದಷ್ಟೆ ಅವನು ಯೋಚಿಸಿದ್ದು.

ಪಾಕೆಟ್ ತಗೊಂಡು ಕಾರಿನಲ್ಲಿ ಕುಳಿತಾಗ ಕುಟ್ಟಿ ದೌಲತ್ ರಾಮ್ ಮಾಡಿದ್ದು ಸರಿಯೋ ತಪ್ಪೋ ಎಂದು ಯೋಚಿಸುತ್ತಿದ್ದ. ಅವನು ಇನ್ನೇನು ಮಾಡಬಹುದಿತ್ತು ಎಂದು ಯೋಚಿಸಿದ. ಆದರೆ ಆ ಬಗ್ಗೆ ಒಂದು ಮಾತನ್ನೂ ಆಡಲಿಲ್ಲ. ಕಾರನ್ನು ರಿವರ್ಸ್ ತೆಗೆಯಲು ಎಲ್ಲೋ ಬರುತ್ತಿದ್ದ ಬಸ್ಸೋ ಲಾರಿಯೋ ಹೋಗಲೆಂದು ಕೊಂಚ ಹೊತ್ತು ಕಾದರೂ ಏನೂ ಬರಲೇ ಇಲ್ಲ!

ಅವನು ಕಾರು ತಿರುಗಿಸಿ ವಾಪಸ್ ಹೊರಟ ಮೇಲೂ ಇಬ್ಬರಿಗೂ ಏನೋ ಗುಮಾನಿ! ತಾವು ಕೇಳಿದ ಸದ್ದು ಯಾವುದು? ಎಲ್ಲಿ ಹೋಯ್ತು ಆ ವಾಹನ?

ಹಲವು ಮೈಲಿ ಹೋಗಿದ್ದರಷ್ಟೆ! ಹಿಂದಿನಿಂದ ಹಾರನ್ ಶಬ್ದ!

ಒಂದು ಪೋಲೀಸ್ ಜೀಪು ಭರಾಟೆಯಿಂದ ಧೂಳೆಬ್ಬಿಸಿ ಇವರನ್ನು ಮೀರಿಸಿ ಮುಂದೆ ಹೋಯ್ತು. ಅದರ ಹಿಂದೆಯೇ ಇನ್ನೊಂದು ಕಾರು!

ರಸ್ತೆಯಲ್ಲಿ ಅವು ಎಬ್ಬಿಸಿದ ಧೂಳಡಗಿದ ಮೇಲೆ ಕಾರನ್ನು ನಿಧಾನ ಪಕ್ಕಕ್ಕೆ ನಿಲ್ಲಿಸಿ ಇಬ್ಬರೂ ಮುಖಮುಖ ನೋಡಿಕೊಂಡರು.

"ಟೈಗರ್‌ಗಳು ಪುತ್ತೂರು ಹತ್ತಿರ ಸಿಲೋನಿಗಳ ಕ್ಯಾಂಪಿಗೆ ಬಂದಿದ್ದಾರೆ ಅಂತ ವರ್ತಮಾನ ಇತ್ತು ಕುಟ್ಟಿ. ಅದಕ್ಕೇ ಇರಬೇಕು ಓಡಾಟ! ನೀನು ನಡಿ" ಎಂದ ದೌಲತ್ ರಾಮ್.

"ಈ ಕಾರು ಮಾಲೀಕ ಕಂಪ್ಲೇಂಟ್ ಕೊಟ್ಟಿರೋಲ್ಲವ?" ಕುಟ್ಟಿ ಪ್ರಶ್ನೆ ಕೇಳಿ ನಕ್ಕ.

"ಕಾರು ಲಿಫ್ಟ್ ಮಾಡಿರೋದು ಕಣ್ಣಾನೂರಿನಲ್ಲಿ!"

"ಎಲ್ಲಾದರೇನು?"

"ಅದಿರೋದು ಕೇರಳ ಸ್ಟೇಟ್"

"ಅದೆಷ್ಟು ಮಹಾ ದೂರ ಇಲ್ಲಿಗೆ?"

"ಸ್ಟೇಟಿಂದ ಸ್ಟೇಟಿಗೆ ಅಂದರೆ ಸರ್ಕಾರಗಳಿಗೆ ದೂರಾನೇ. ಅದೆಲ್ಲ ಸರ್ಕಾರಗಳ ಜೂರಿಸ್ಡಿಕ್ಷನ್ ಮೇಲಿದೆ."

"ನಿನ್ನ ಪುರಾಣನೆಲ್ಲ ಯಾವನಾದ್ರು ನಸೀಬು ಕೆಟ್ಟೋನಿದ್ರೆ ಹೇಳು"

"ಅದ್ಯಾಕವೆಲ್ಲ ಮಾತು. ಏನ್ಮಾಡೋಣ ಈಗ ಅಷ್ಟು ಹೇಳು"

"ಏನಿಲ್ಲ, ಕಾರಿಗೆ ನಮೋನಮಃ ಅಷ್ಟೆ, ಮತ್ತೇನಿಲ್ಲ"

ಹಾಗೆಂದವನೇ ಕುಟ್ಟಿ ಕಾರು ಸ್ಟಾರ್ಟ್ ಮಾಡಿದವ ಕೊಂಚ ದೂರ ಅತ್ತಿತ್ತ ನೋಡುತ್ತಾ ಮುಂದೆ ಬಿಟ್ಟವನು ಕಾಡೊಳಗೆ ಕಾರು ಒಳಗೆ ನುಗ್ಗಿಸುವಷ್ಟು ದಾರಿ ಕಂಡಕೂಡಲೇ ಸ್ಟೇರಿಂಗ್ ತಿರುಗಿಸಿದ. ಐದೇ ನಿಮಿಷದೊಳಗೆ ಕಾರಿಗೆ ವಿದಾಯ ಹೇಳಿ ಅವರಿಬ್ಬರೂ ದಾರಿಯಲ್ಲಿ ದೇವಪುರದ ಕಡೆಗೆ ನಡೆಯತೊಡಗಿದರು. *

* * * * *

ಜುಗಾರಿಕ್ರಾಸಿನಲ್ಲಿ ಸುರೇಶ ಗೌರಿ ಬಸ್ಸಿನೊಳಗೆ ಹತ್ತಿ ಕುಳಿತು ಕೊಂಚ ಹೊತ್ತಾದರೂ ಕ್ಯಾಪ್ಟನ್ ಖುದ್ದೂಸನ ಎಕ್ಸ್‌ಪ್ರೆಸ್ ಬಸ್ಸು ಮಾತ್ರ ಹೊರಡುವ ಸೂಚನೆಗಳು ಕಾಣಲಿಲ್ಲ. ಖುದ್ದೂಸ್ ಸರ್ಕಾರಿ ಬಸ್ಸಿಗೆ ಕೆಲಸಕ್ಕೆ ಸೇರುವ ಮೊದಲು ಮೀನು ಹಿಡಿಯುವ ದೊಡ್ಡ ಟ್ರಾಲರ್ ದೋಣಿಗೆ ಕ್ಯಾಪ್ಟನ್ ಆಗಿದ್ದನಂತೆ. ಆದ್ದರಿಂದಲೇ ಅವನು ಬಸ್ ಡ್ರೈವರ್ ಆದಮೇಲೂ ತನ್ನನ್ನು ತಾನು ಕ್ಯಾಪ್ಟನ್ ಎಂದೇ ಕರೆದುಕೊಳ್ಳುತ್ತಿದ್ದ. ಮೆಲ್ಲಗೆ ದೋಣಿಯಂತೆಯೇ ಚಲಿಸುತ್ತಿದ್ದ ಅವನ ಬಸ್ಸು ಶೆಟ್ಲು ಗಾಡಿಯಾದರೂ ಎಲ್ಲರೂ ತಮಾಷೆಗಾಗಿ ಅದನ್ನು 'ಖುದ್ದೂಸ್ ಎಕ್ಸ್‌ಪ್ರೆಸ್' ಎಂದು ಕರೆಯುತ್ತಿದ್ದರು.

ಜುಗಾರಿಕ್ರಾಸಿನಲ್ಲಿ ಇಳಿದು ಮೂರು ರೂಪಾಯಿ ಕೊಡಬಂದ ಉದ್ವೇಗೌಡನಿಗೂ ಬಸ್ ಕಂಡಕ್ಟರ್‌ಗೂ ಎಷ್ಟು ದುಡ್ಡು ಕೊಡಬೇಕೆನ್ನುವುದರ ಬಗ್ಗೆ ಜಟಾಪಟಿ ಹತ್ತಿದ್ದೇ ಖುದ್ದೂಸ್ ಎಕ್ಸ್‌ಪ್ರೆಸ್ ತಡವಾಗಲು ಕಾರಣ.

ಟಿಕೆಟ್ ಕೊಡದೆ ಎಂತಿದ್ದರೂ ಹಡಬಿಟ್ಟಿ ದುಡ್ಡು ಕಂಡಕ್ಟರು ಹೊಡಕೊಳ್ಳುತ್ತಿದ್ದಾನೆ. ಆದರಲ್ಲಿ ಚೌಕಾಶಿ ಎಂಥದು! ಸಿಕ್ಕಿದ್ದೇ ಲಾಭ ಅಂತ ಕೊಟ್ಟಷ್ಟು ದುಡ್ಡು ಜೇಬಿಗೆ ಇಳಿಬಿಡೋದು ಬಿಟ್ಟು ಅದರಲ್ಲೂ ಚೌಕಾಶಿ ಮಾಡುತ್ತಿದ್ದಾನಲ್ಲಾ ಎನ್ನುವುದೇ ಉದ್ವೇಗೌಡನ ಪಾಯಿಂಟು.

ಟಿಕೆಟ್ಟಿಲ್ಲದೆ ಜನ ಸಾಗಿಸೋದು ಎಂಥ ರಿಸ್ಕು! ದಾರೀಲಿ ಯಾವನಾದ್ರು ಚೆಕ್ಕಿಂಗ್‌ನವನು ಕೈ ಅಡ್ಡಾ ಹಾಕಿ ನನ್ನ ಮೇಲೆ ಕೇಸು ಹಾಕಿದರೆ ಇವನಪ್ಪ ಬಂದು ಬಿಡಿಸುತ್ತಾನ? ಟಿಕೆಟ್ ಬ್ಯಾಡ ಅಂದ್ರೂ ಅರ್ಧ ಚಾರ್ಜಾದರೂ ಕೊಡಬೇಡವ ಇವನು? ನಾವೇನು ಇಲ್ಲಿ ಧರ್ಮಕ್ಕೆ ಇದೀವಾ? ಎನ್ನುವುದು ಕಂಡಕ್ಟರ್ ಮಹಾಶಯನ ಮರ್ಜಿ.

ಇಬ್ಬರ ವಾದದಲ್ಲು ಕೆಲವು ಒಳ್ಳೆಯ ಪಾಯಿಂಟ್‌ಗಳಿದ್ದುದರಿಂದ ಜನಕ್ಕೆ ಈ ಧರ್ಮಸೂಕ್ಷ್ಮ ಬಿಡಿಸುವುದು ಕಷ್ಟವಾಯ್ತು

ಉದ್ವೇಗೌಡ ಮೂರು ರೂಪಾಯಿ ಬಿಚ್ಚುವಹಾಗಿಲ್ಲ! ಅಲ್ಲಿಯವರೆಗೂ ಬಸ್ಸು ಮುಂದುವರಿಯುವ ಹಾಗೂ ಇಲ್ಲ.

ಅರ್ಜಂಟಿದ್ದವನೊಬ್ಬ "ನೀವಿಬ್ರೂ ಮಾಡ್ತಿರೋದೇ ಹಲ್ಕಾ ಕೆಲಸ, ಅಂತದ್ರಾಗೆ ಬಸ್ ಬ್ಯಾರೆ ತಡಾ ಮಾಡ್ತಿದೀರ" ಎಂದಿದ್ದಕ್ಕೆ

"ಯೋಯ್ ತಿಕಮುಚ್ಕಂಡು ಕುಂತ್ಗಳಯ್ಯಾ ಸುಮ್ಕೆ, ನಿಂಗೆ ಕೈ ಅಡ್ಡಾಕ್ದಲ್ಲೆಲ್ಲಾ ನಿಲ್ಸಿ ಹತ್ತಿಸ್ಕಂಬಂದಿದುಕ್ಕೆ ತಲೆಯೆಲ್ಲಾ ಮಾತಾಡಬ್ಯಾಡ" ಎಂದು ಕಂಡಕ್ಟರ್ ಮಹಾಶಯನೂ

"ಇವ್ನ ಯಾವನೋ ಧರ್ಮರಾಯಂಗ್ ಹುಟ್ಟೋನು ಬಂದಾ ನೋಡ್ರಪ್ಪಾ ನಾಯ ಹೇಳಕ್ಕೆ" ಎಂದು ಉದ್ವೇಗೌಡನೂ ಕಂಡಕ್ಟರ್ ಜೊತೆಯೇ ಜಂಟಿ ಹೇಳಿಕೆ ಕೊಟ್ಟು, ಇಬ್ಬರು ಜಗಳವಾಡುತ್ತಿದ್ದವರೂ ತನ್ನ ವಿರುದ್ಧ ಮಾತ್ರ ಒಟ್ಟಾಗಿದ್ದನ್ನು ನೋಡಿ ಗಾಬರಿಯಾಗಿ ಅವನು ಸುಮ್ಮನಾದ.

ಉದ್ವೇಗೌಡನಿಗೆ ರಿಯಾಯ್ತಿ ತೋರಿಸಿದರೆ ಒಳಗೆ ಟಿಕೆಟ್ಟಿಲ್ಲದೆ ಕುಳಿತಿರುವ ಅನೇಕರು ಉದ್ವೇಗೌಡ ಹಾಕಿಕೊಟ್ಟ ದಾರಿಯಲ್ಲೇ ಸಾಗುತ್ತಾರೆಂದು ಗೊತ್ತಿದ್ದೇ ಕಂಡಕ್ಟರು ಮೂರುರೂಪಾಯಿ ತಾನೆ! ಎಂದು ಡೀಲ ಬಿಡಲಿಲ್ಲ. ಉದ್ವೇಗೌಡನ ಮೊಂಡಾಟಕ್ಕೆ ಜಗ್ಗದೆ "ಈಗ ಒಳ್ಳೆ ಮಾತ್ನಲ್ಲಿ ಮೂರು ರೂಪಾಯಿ ಬಿಚ್ತೀಯಾ? ಇಲ್ಲಾ ತಿಕೀಟು ಹರೀಲಾ? ನಂಗೂ ಬ್ಯಾಡ, ನಿಂಗೂ ಬ್ಯಾಡ, ಸರ್ಕಾರ್ಕೆ ಹೋಗ್ಲಿ ತಗಾ. ಅಲ್ಲಿಂದಿಲ್ಲಿಗೆ ಹನ್ನೆರಡು ರೂಪಾಯಿ ಚಾರ್ಜು. ಇಲ್ಲಿ ಮಡಗು ಗೌಡ" ಎಂದು ಬ್ರಹ್ಮಾಸ್ತ್ರ ಬಿಟ್ಟು, ಟಿಕೆಟ್ ಪುಸ್ತಕ ತೆಗೆದು ಟಿಕೆಟ್ ಹರಿದುಬಿಡುತ್ತೇನೆನ್ನುವಂತೆ ಅಭಿನಯಿಸಿದ.

ಹಾಗೆನ್ನುತ್ತಿದ್ದಂತೆಯೇ ಉದ್ದೇಗೌಡ ಗಾಬರಿ ಬಿದ್ದು "ಅಯ್ಯಯ್ಯೋ ತಡ್ಯೋ ತಡ್ಯೋ! ತಗ ಮಾರಾಯ ದುಡ್ಡು, ಟಿಕೇಟು ಹರುದ್ರೆ ನಾನೆಲ್ಲಿಂದ ತರ್ಲಿ ಅಷ್ಟೊಂದುಡ್ನ" ಎಂದು ಬೇಗ ಬೇಗ ಬಕ್ಕಣದಿಂದ ಮುದ್ದೆ ಮುದ್ದೆಯಾಗಿದ್ದ ಒಂದೊಂದು ರೂಪಾಯಿಯ ಮೂರು ನೋಟುಗಳನ್ನು ತೆಗೆದು ಕೊಟ್ಟ.

ಅಲ್ಲಿಗೆ ದೊಡ್ಡ ಸಮಸ್ಯೆ ಬಗೆಹರಿದಂತಾಗಿ ಪ್ರಯಾಣಿಕರು ನಿಟ್ಟುಸಿರು ಬಿಟ್ಟರು. ನ್ಯಾಯ ಹೇಳಿ ಉಗಿಸಿಕೊಂಡವ ಮಾತ್ರ "ಇನ್ನು ಎಷ್ಟು ಹೊತ್ತಿಗೆ ಹೋದರೆ ಏನು ಬಿಡಿ! ರಾಹುಕಾಲ ಶುರ್ವಾಗೇ ಹೋಯ್ತು" ಎಂದು ಹೇಳಿ ಖಿನ್ನನಾದನು.

ಸುತ್ತ ಮಲೆತು ನಿಂತಿದ್ದ ಮಾಲೆ ಮಾಲೆ ಪರ್ವತಗಳು, ಕಿಕ್ಕಿರಿದಿದ್ದ ಕಾಡಿನ ದಟ್ಟಣೆ, ಮೋಡ ಕವಿದು ಕತ್ತಲಾಗುತ್ತಿದ್ದ ಆಕಾಶ, ಈ ಭೀಷಣ ಹಿನ್ನೆಲೆಯಲ್ಲಿ ಆ ಢಕಲೋ ಬಸ್ಸು ಹಾಸ್ಯಾಸ್ಪದವಾಗಿ ಕಾಣುತ್ತಿತ್ತು. ಘಾಟಿ ರಸ್ತೆ ಹತ್ತಬೇಕಾದರೆ ರೇಡಿಯೇಟರ್ ಬಿಸಿಯಾಗುತ್ತೆಂದು ಅದರ ಮುಂದುಗಡೆ ಗ್ರಿಲ್ ತೆಗೆದು ಡ್ರೈವರ್ ಮಹಾಶಯ ಒಳಗಿಟ್ಟಿದ್ದ. ಹಾಗಾಗಿ ಬಸ್ಸು ಮೂಗು ಕತ್ತರಿಸಿದ ಮುಖದಂತೆ ಕಾಣುತ್ತಿತ್ತು. ದೇವಪುರದ ಬೋರ್ಡನ್ನು ಗಡಿಬಿಡಿಲ್ಲಿ ತಲೆಕೆಳಗಾಗಿ ಇಟ್ಟಿದ್ದನ್ನು ಯಾರೂ ಗಮನಕ್ಕೆ ತೆಗೆದುಕೊಂಡಿರಲಿಲ್ಲ. ಒಂದುಕಡೆಯ ಸ್ಪ್ರಿಂಗುಗಳೆಲ್ಲಾ ಸಂತೆದಿನ ಹಾಕುತ್ತಿದ್ದ ಓವರ್‌ಲೋಡಿನ ದೆಸೆಯಿಂದಾಗಿ ಕುಗ್ಗಿ ಬೆಂಡಾಗಿ ಇಡೀ ಬಸ್ಸು ಒಂದುಕಡೆಗೆ ವಾಲಿಕೊಂಡಿತ್ತು. ಘಾಟಿಯ ತಿರುವುಗಳಲ್ಲಂತೂ ಹೊರಗಿನಿಂದ ನೋಡುವವರಿಗೆ ಬಸ್ಸು ಇನ್ನೇನು ಬಿದ್ದೇ ಹೋಗುತ್ತದೆ ಎನ್ನುವಂತೆ ಕಾಣುತ್ತಿತ್ತು. ಬಸ್ಸಿನ ಬಾಡಿಯ ಮೇಲೂ ಗಾಜುಗಳ ಮೇಲೂ ಕರ್ನಾಟಕದ ರಾಜಕೀಯ ಚಟುವಟಿಕೆಗಳ ಅಸಂಬದ್ಧ ಪ್ರಲಾಪಗಳನ್ನೆಲ್ಲಾ ಘೋಷಣೆಗಳ ರೂಪದಲ್ಲಿ ನೋಡಬಹುದಿತ್ತು. ಅನೇಕ ಊರುಗಳ ಬಂದ್‌ಗಳೂ, ಅನೇಕ ಪಾರ್ಟಿಗಳ ಹೋರಾಟಗಳೂ, ರಸ್ತೆ ರೋಕೋಗಳೂ, ಅನೇಕ ಮಂತ್ರಿಗಳಿಗೆ ಧಿಕ್ಕಾರಗಳೂ ತಲೆಕೆಳಗಾಗಿ ಕುಳಿತಿದ್ದ ದೇವಪುರದ ಬೋರ್ಡನ್ನು ಹಿನ್ನೆಲೆಗೆ ತಳ್ಳಿ ಬಸ್ಸಿನ ಮೇಲೆ ಪ್ರಧಾನವಾಗಿ ರಾರಾಜಿಸುತ್ತಿದ್ದುವು. ಘಟ್ಟದ ಕೆಳಗಿನ ಸಮುದ್ರಮಟ್ಟದ ಸೆಖೆಗೋ, ಅಥವಾ ಎಡಪಕ್ಕದಲ್ಲಿ ಏದುಸಿರು ಬಿಡುತ್ತಾ ಬೊಬ್ಬೆ ಮಾಡುತ್ತಿದ್ದ ಎಂಜಿನ್ನಿನ ಶಾಖಕ್ಕೋ ಒಟ್ಟಿನಲ್ಲಿ ಶರಟು ಬಿಚ್ಚಿ ಡೊಳ್ಳು ಹೊಟ್ಟೆ ಬಿಟ್ಟುಕೊಂಡ ಡ್ರೈವರಣ್ಣ ಎರಡು ಕೈಲೂ ಸ್ಟೇರಿಂಗು ಹಿಡಿದು ಕುಳಿತಿದ್ದ. ಬಲಗಾಲನ್ನು ಆಕ್ಸಿಲರೇಟರ್ ಮೇಲೂ ಎಡಗಾಲನ್ನು ಗೇರ್‌ಲಿವರ್ ಮೇಲೂ ಇಟ್ಟುಕೊಂಡು ಕುಳಿತಿದ್ದ ಕ್ಯಾಪ್ಟನ್ ಖುದ್ದೂಸನ ಎಲ್ಲಾ ಅವಯವಗಳೂ ಬಸ್ಸಿನ ಸಾರಥ್ಯದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಭಾಗವಹಿಸಿದ್ದುವು. ಘಾಟಿ ಉಬ್ಬನ್ನು ಹತ್ತುವಾಗ ಅದರ ಗೇರ್ ಸ್ಲಿಪ್ ಆಗದಂತೆ ಎಡಗಾಲಿನಿಂದ ಅವನು ಗೇರ್ ಲಿವರನ್ನು ಒತ್ತಿ ಹಿಡಿಯದಿದ್ದರೆ ಬಸ್ ನ್ಯೂಟ್ರಲ್ ಆಗಿಬಿಡುತ್ತಿತ್ತು. ಹಿಂದೊಮ್ಮೆ ಮೇದರ ಹಳ್ಳಿ ಟರ್ನಿಂಗಿನಲ್ಲಿ ಗಾಡಿ ಇದ್ದಕ್ಕಿದ್ದಂತೆ ನ್ಯೂಟ್ರಲ್ ಆಗಿ ಬಸ್ ಹಿಂದಕ್ಕೆ ಹೋಗಲು ಶುರುವಾಗಿ ಅನೇಕ ಪ್ರಯಾಣಿಕರಿಗೆ

ಪರಂಧಾಮಕ್ಕೇ ಟಿಕೆಟ್ ಸಿಗುವುದರಲ್ಲಿತ್ತು. ಕಂಡಕ್ಟರಿನ ಸಮಯಪ್ರಜ್ಞೆಯಿಂದಲೂ, 'ಗಾಟ್ಬಾ ದೇವ್ ಜೇ'ಎಂದು ಡ್ರೈವರ್ ಆರ್ತನಾದ ಮಾಡಿದ್ದರಿಂದಲೂ, ಮೂವತ್ತೇಳು ಜನ ಪ್ರಯಾಣಿಕರ ಪ್ರಾಣ ಅವತ್ತು ಉಳಿಯಿತು. ಕಂಡಕ್ಟರ್ ಬಸ್ಸು ಹಿಂದಕ್ಕೆ ಹೋಗದಂತೆ ಗಟ್ಬಾ ಕೊಟ್ಟರೂ ಬಸ್ಸು ಎರಡು ಸಾರಿ ಧಡಲ್ ಧಡಲ್ ಎಂದು ಅದನ್ನು ಹತ್ತಿಳಿದು ಸುದೈವಕ್ಕೆ ಹೇಗೋ ಮೂರನೇ ಸಾರಿ ನಿಂತಿತು. ಆ ಬಸ್ಸಿನ ಝುಕಂ ಆಗಿರುವ ಬ್ರೇಕ್ ಪೈಪ್‌ಗಳೂ, ಗಟರ್ ಕೊಟ್ಟಿರುವ ಟೈರುಗಳೂ, ಬ್ಯಾಂಡೇಜ್ ಬಿಗಿದಂತೆ ಬಟ್ಟೆ ಸುತ್ತಿರುವ ರೇಡಿಯೇಟರ್ ಹೋಸ್‌ಗಳೂ! ಗೊತ್ತಿದ್ದವರ್ಯಾರೂ ಅಷ್ಟೊಂದು ನಿರಾತಂಕವಾಗಿ ಆ ಬಸ್ಸಿನಲ್ಲಿ ಕುಳಿತುಕೊಳ್ಳುತ್ತಿದ್ದರೇ ಹೇಳಲಾಗದು.

ಜುಗಾರಿಕ್ರಾಸ್ ದಾಟಿ ಘಾಟಿ ಪ್ರಾರಂಭವಾಗುತ್ತಿದ್ದಹಾಗೇ ಕಂಡಕ್ಟರ್ ಮಹಾಶಯ "ನೋಡ್ರಿ ಗಂಡಸರೆಲ್ಲಾ ಕಿಟಕಿ ಮುಚ್ಗಳಿ, ಹೆಂಗಸರೆಲ್ಲಾ ಕಿಟಗಿ ತೆಕ್ಕೊಳ್ರಮ್ಮಾ! ತಲೆ ಸುತ್ತು ಬಂದರೆ, ಹೊಟ್ಟೆ ತೊಳೆಸಿದರೆ ತಲೆ ಆಚೆಗೆ ಹಾಕಿ ಉಗೀರಿ. ಅಲ್ಲೆ ಸೀಟು ಮ್ಯಾಲೆಲ್ಲಾ ಅವಂತ್ರ ಮಾಡಬ್ಯಾಡ್ರಿ" ಎಂದು ಕೂಗಿದ. ಹೆಂಗಸರು ವಾಂತಿ ಮಾಡಿದ್ದು ಹಿಂದೆ ಕುಳಿತಿರುವ ಗಂಡಸರ ಮೂತಿಗೆಲ್ಲಾ ಬಿದ್ದು ಗಲಾಟೆಗಳಾಗದೆ ಇರಲೆಂದೇ ಅವನು ಈ ಮುಂಜಾಗ್ರತಾ ಕ್ರಮ ಕೈಗೊಂಡಿದ್ದು.

ಅವನ ಕಡೆ ಕೊಂಕು ನೋಟ ಬೀರಿದ ಒಂದಿಬ್ಬರು ಗಂಡಸರತ್ತ ತಿರುಗಿ "ಏನ್ಮಾಡ್ತೀರಾ! ದೇವಸ್ಥಾನದ ಊಟ, ಧರ್ಮಕ್ಕೆ ಸಿಗ್ತೂ ಅಂತ ತಾರಾಮಾರಿ ತಿನ್ಬಿಡ್ತಾರೆ" ಎಂದು ವ್ಯಂಗ್ಯವಾಗಿ ಹೇಳಿ ಸುರೇಶನಿಗೆ ಎರಡು ಟಿಕೆಟ್ಟು ಹರಿದು ಕೊಡುತ್ತಾ ಚಿಲ್ಲರೆ ವಾಪಸ್ ಕೊಡದೆ ಅವನ ಎರಡು ಮೂಟೆಗಳ ಲಗ್ಗೇಜ್ ಛಾರ್ಜು ಎಂದು ದಬಾಯಿಸಿದ. ಸುರೇಶ ಜಗಳ ಮಾಡುವ ಮೂಡಿನಲ್ಲಿರಲಿಲ್ಲ. ಅಲ್ಲದೆ ಕೆಲವೇ ಕ್ಷಣಗಳ ಹಿಂದೆ ಉದ್ದೇ ಗೌಡನ ಜೊತೆ ಕಂಡಕ್ಟರ್ ಜಗಳ ಆಡಿದ್ದನ್ನು ನೋಡಿದ ಯಾವನೂ ಅವನೊಡನೆ ತರಳೆಗೆ ಇಳಿಯಲು ಇಷ್ಟಪಡುತ್ತಿರಲಿಲ್ಲ.

'ಅವರೆ ಹಂಕಲ್' ಹತ್ತಿರ ಒಂದು ಮ್ಯಾರೇಜ್ ಪಾರ್ಟಿ ಕೈ ಅಡ್ಡ ಹಾಕಿ ಬಸ್ಸಿನ ತುಂಬಾ ತುಂಬಿಕೊಂಡರು. ಮುಂದೆ ಜಾಗ ಇದೆಯೋ ಇಲ್ಲವೋ ಒಂದನ್ನೂ ಲೆಕ್ಕಿಸದೆ "ಹೋಗ್ರಿ ಮುಂದೆ, ಹೋಗ್ರಿ ಮುಂದೆ" ಎಂದು ಹೆಂಗಸರು ಮಕ್ಕಳೆಂದು ನೋಡದೆ ಎಲ್ಲರ ಮುಕಳಿಗೂ ಕೈ ಹಚ್ಚಿ ಬುಟ್ಟಿಗೆ ಸಾಮಾನು ತುರುಕಿದಂತೆ ಕಂಡಕ್ಟರ್ ಅವರನ್ನು ತುರುಕಿದ. ಜರಬರ ಎನ್ನುತ್ತಿದ್ದ ಹೊಸ ಸೀರೆ ಪಂಚೆಗಳನ್ನು ಉಟ್ಟುಕೊಂಡಿದ್ದ ಗಂಡಸರು ಹೆಂಗಸರು ಎಲ್ಲ ಒಬ್ಬರ ಮೇಲೆ ಒಬ್ಬರು ಬಿದ್ದು, ಒಬ್ಬರ ಕಾಲು ಒಬ್ಬರು ತುಳಿದು ಗಂಡಸರ ಮೇಲೆ ಹೆಂಗಸರೂ, ಹೆಂಗಸರ ಮೇಲೆ ಗಂಡಸರೂ ಕಿಸಿಕಿಸಿ ರೇಗಾಡಿದರು.

ಮೇದರ ಹಳ್ಳಿ ದಾಟಿ ಒಂದು ಮೈಲಿ ಹೋಗಿ ಎಡಕ್ಕೆ ತಿರುಗಿದ ಕೂಡಲೆ ಇಬ್ಬರು ಅಪರಿಚಿತ ಪ್ಯಾಂಟ್ ಧಾರಿ ವ್ಯಕ್ತಿಗಳು ಬಸ್ಸಿಗೆ ಕೈ ಅಡ್ಡ ಮಾಡಿ ಬಸ್ ಹತ್ತಿಕೊಂಡರು. ಅವರನ್ನು ಹತ್ತಿಸಿಕೊಳ್ಳುವಾಗ "ಇನ್ನೂ ಮುಂದೋಗು! ಮುಂದೋಗು!

ಎಲ್ಲಿಗಂತ ಹೋಗದು, ಇವನಪ್ಪನ ಮನೀಗೆ'' ಎಂದು ಮುಂದೆ ಹೋಗಲು ಜಾಗವಿಲ್ಲವೆಂದು ಗೊಣಗಿದ ಒಬ್ಬ ಮ್ಯಾರೇಜ್ ಪಾರ್ಟಿಯವನಿಗೆ ''ಕೈಕಾಲು ಚಾಚಿಕೊಂಡು ಕೂತ್ಕೋಬೇಕಂತಿದ್ದರೆ ಅಲ್ಲೇ ಮಾವನ ಮನೇಲೆ ಇರ್ಬೇಕಿತ್ತು. ಬಸ್ಸಿಗ್ಯಾಕಯ್ಯ ಹತ್ತಿದೆ? ಇದ್ರೊಳಗೆ ನಾ ಹೇಳ್ದಂಗೆ ಕೇಳಬೇಕು''ಎಂದು ಕಂಡಕ್ಟರ್ ಕೂಗಿದ. ಯಾರೂ ಕಂಡಕ್ಟರ್ ಮಾತನ್ನು ಗಂಭೀರವಾಗಿ ಪರಿಗಣಿಸಿ ಜಗಳವಾಡಲಿಲ್ಲ. ಕೂತು ಕೂತು ಬೇಜಾರಾಗಿ ಬೋರಾದ ಎಲ್ಲ ಪ್ರಯಾಣಿಕರಿಗೂ ಕಂಡಕ್ಟರ್ ಮಾತುಗಳು ಲಘು ಮನರಂಜನೆಯನ್ನೊದಗಿಸುತ್ತಿತ್ತಷ್ಟೆ. ಮೊದಲೇ ಕುಳಿತಿದ್ದವರು ಕಂಡಕ್ಟರ್ ವಾಗ್ಬಾಣಗಳಿಗೆ ಹೊಸದಾಗಿ ಹತ್ತಿದವರು ತುತ್ತಾಗುವುದನ್ನು ನೋಡಿ ಆನಂದಿಸುತ್ತಿದ್ದರು.

ಆದರೆ ಹೊಸದಾಗಿ ಹತ್ತಿದ ಈ ಇಬ್ಬರ ಮೇಲೆ ಮಾತ್ರ ಕಂಡಕ್ಟರನ ಯಾವ ವಾಗ್ಬಾಣಗಳೂ ಹೋಗಲಿಲ್ಲ. ಅವರ ಮುಖದಲ್ಲಿ ಕಾಣುತ್ತಿದ್ದ ಕಾಠಿಣ್ಯವೋ ಕ್ರೌರ್ಯವೋ ಅಥವಾ ಅವರ ಅಪರಿಚಿತ ಮುಖಗಳೋ! ಏನೋ ಒಂದು ಕಂಡಕ್ಟರನ ನಾಲಗೆಗೆ ತಡೆ ಹಾಕಿತ್ತು. ಕೂರಲು ಜಾಗವಿಲ್ಲದೆ ನುಗ್ಗಾಡಿಕೊಂಡು ಬಂದು ಸುರೇಶನಿಗೂ ಏಲಕ್ಕಿ ಮೂಟೆಗೂ ನಡುವೆ ನಿಂತ ಅವರನ್ನೊಮ್ಮೆ ಸುರೇಶ ನೋಡಿದ. ತೀರಾ ಅಪರಿಚಿತವಾಗಿ ಕಂಡ ಅವರ ಬಗ್ಗೆ ಅವನಿಗೇನೂ ಅನ್ನಿಸಲೇ ಇಲ್ಲ. ಆ ರಸ್ತೆಯಲ್ಲಿ ಅಪರಿಚಿತ ಮುಖಗಳಿಗೇನೂ ಕೊರತೆ ಇರಲಿಲ್ಲ.

ಬಸ್ಸಿನ ಜಗ್ಗಾಟದಲ್ಲಿ ತೂರಾಡಿ ತೂರಾಡಿ ಕೊನೆಗೆ ಅವರಿಬ್ಬರೂ ಅವನ ಮೂಟೆಗಳ ಮೇಲೇ ಕುಳಿತುಬಿಟ್ಟರು.

# ಗಾನ್‌ಕೇಸ್ ಸುರೇಶನ ಇತಿಹಾಸ - ೭



ದೇಶವೆಲ್ಲಾ ಜೆಪಿ ಆಂದೋಳದ ಬಿರುಗಾಳಿಯಲ್ಲಿ ತತ್ತರಿಸುತ್ತಿರಬೇಕಾದರೆ ಬಾಟನಿ ಮೇಷ್ಟ್ರು ಗಂಗೂಲಿ ಮಾತ್ರ ಜೆಪಿಗೆ ಫೂಲ್, ರಿಯಾಕ್ಷನರಿ, ಸ್ಕ್ಯಾಂಡ್ರಲ್, ವಿದೇಶೀ ಏಜಂಟ್ ಎಂದು ಬಯ್ಯುತ್ತಿದ್ದ. ಈ ಕ್ರಾಂತಿ ಎಲ್ಲಾದರೂ ಯಶಸ್ವಿಯಾದರೆ ನಮ್ಮ ಪ್ರೋಗ್ರಾಮೆಲ್ಲಾ ಹತ್ತು ವರ್ಷ ಮುಂದಕ್ಕೆ ಹೋದಹಾಗೇ ಎಂದು ತನ್ನ ಶಿಷ್ಯೋತ್ತಮರಿಗೆ ಪ್ರತಿದಿನ ಪ್ರವಚನ ಕೊಡುತ್ತಿದ್ದ. ಆದರೆ ಎಲ್ಲ ಊಹಿಸಿದ್ದಕ್ಕಿಂತ ವೇಗವಾಗಿ ಘಟನಾವಳಿಗಳು ನಡೆದು ದೇಶ ವಿಪ್ಲವದ ಹಂತಕ್ಕೆ ಬಂದೇ ಬಿಟ್ಟಿತ್ತು.

ಹಠಾತ್ತಾಗಿ ಒಂದು ದಿನ ಸಂಜೆ ಭಾರತದ ಬಾನುಲಿಗಳು ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಘೋಷಣೆಯಾದುದನ್ನು ಹೇಳಿದುವು.

ಎಮರ್ಜನ್ಸಿ ಘೋಷಣೆಯಾದಾಗ ಅದರ ಪೂರ್ವಾಪರಗಳನ್ನೂ ಪರಿಣಾಮ ಗಳನ್ನೂ ಸರಿಯಾಗಿ ತಿಳಿಯದ ಸುರೇಶನಿಗೂ ಅವನ ಇಬ್ಬರು ಮಿತ್ರರಿಗೂ ಅನ್ನಿಸಿದ್ದು ಕೂಡಲೇ ಹೋಗಿ ಗಂಗೂಲಿ ಮೇಷ್ಟರನ್ನು ನೋಡಬೇಕೆಂದು. ಇವರು ಗಂಗೂಲಿ ಮನೆಗೆ

ಹೋದಾಗ ಗಂಗೂಲಿ ಭಯಂಕರ ಗಂಭೀರ ಮೋರೆ ಹಾಕಿಕೊಂಡು ಯಾರೋ ರಾಜಕಾರಣಿಗೆ ವೀರಾವೇಷದ ಭಾಷಣ ಬಿಗಿಯುತ್ತಿದ್ದ.

"ಈಗ ವಿ ಮಸ್ಟ್ ಆ್ಯಕ್ಟ್, ಇನ್ನು ಸುಮ್ಮನೆ ಕೂರೋದಕ್ಕೆ ಆಗಲ್ಲ ಬಿಡಿ. ಯು ನೋ! ನಮ್ಮ ಬಾಯ್ಸ್ ರೆಡಿ ಇದಾರೆ. ಹೇಗೆ, ಎಲ್ಲಿಂದ ಅನ್ನೋದೆಲ್ಲಾ ಬ್ಲೂ ಪ್ರಿಂಟ್ ಸಿದ್ಧ ಮಾಡಿಟ್ಟಿದೇವೆ. ನಮಗೆ ನಿಮ್ಮಂಗೆ ನಾನ್ ವಯಲೆನ್ಸ್, ಅಹಿಂಸೆ ಅವೆಲ್ಲಾ ಆಗೋಲ್ಲ"

"ಅಲ್ರೀ ಗಂಗೂಲಿ, ನಾನ್ ವಯಲೆನ್ಸ್ ಅಲ್ಲದೆ ಬೇರೆ ಇನ್ನೇನು ಮಾಡ್ತೀರ್ರಿ, ಮದ್ದು ಗುಂಡು ಇರೋದೆಲ್ಲಾ ಸರ್ಕಾರದೋರ ಹತ್ರ. ಯಾವುದರಲ್ಲಿ ವಯಲೆನ್ಸ್ ಮಾಡ್ತೀರ? ಆಗೋ ಹೋಗೋದೇನಾದ್ರು ಇದ್ರೆ ಹೇಳ್ರಿ"

"ಗೌರ್ನಮೆಂಟ್ ಹತ್ರ ಎಷ್ಟಿದೆ ಮದ್ದು ಗುಂಡು? ನಿಮಗೆ ಲೆಕ್ಕ ಕೊಡಲಾ! ಇಡೀ ದೇಶದಲ್ಲಿರೋ ಮದ್ದುಗುಂಡೆಲ್ಲಾ ತಗೊಂಡ್ರೂ ಕೇವಲ ಏಳು ನಿಮಿಷ ಹಾರಿಸಬಹುದಷ್ಟೆ. ಓನ್ಲಿ ಸೆವನ್ ಮಿನಿಟ್ಸ್. ಅದಕ್ಯಾಕೆ ಹೆದರ್ಕೋ ಬೇಕು?"

"ಹೆದರೋ ಪ್ರಶ್ನೆ ಅಲ್ಲಾ ಕಣ್ರಿ, ನೀವು ಹಿಂಗೆಲ್ಲಾ ಹೇಳಿಕೊಂಡು ತಿರುಗಿದರೆ ಯಾರ್‍ಯಾರೋ ಮಾಡಿದ ಅನಾಚಾರಾನೆಲ್ಲಾ ತಂದು ನಿಮ್ಮ ತಲೆಗೆ ಕಟ್ಟಿಡ್ತಾರೆ! ಎಮರ್ಜನ್ಸಿ ಅಂದರೆ ಆಪಾದನೆಗಳು ಸುಳ್ಳೋ ನಿಜಾನೋ ಅಂತ ವಿಚಾರಣೆ ಸೈತ ಇಲ್ಲಾ ಕಣ್ರಿ"

"ನಾನ್‌ಸೆನ್ಸ್, ಇದಕ್ಕಿಂತ ಹೆಚ್ಚು ಕಷ್ಟ ಮಾವೋ ಚೈನಾದಲ್ಲಿ ಅನುಭವಿಸಿದಾನೆ. ಅದಕ್ಕೆಲ್ಲಾ ಏನೇನ್ ತಿರುಮಂತ್ರ ಅಂತ ಸ್ಪಷ್ಟವಾಗಿ ಬರ್ದಿಟ್ಟುಬಿಟ್ಟಿದಾನೆ. ನಮ್ಮುಡುಗರಿಗೆ ಒಂದ್ಮಾತು ಹೇಳಿದರೆ ಸಾಕು. ಅವರ್ ಬಾಯ್ಸ್ ಬ್ಲಾಸ್ಟ್ ಮಾಡಿಬಿಡ್ತಾರೆ!"

"ಅಲ್ರೀ ಮಿಲಿಟೆರಿ ಅಂದರೆ ಪೋಲೀಸ್ ಅಂದರೆ ಅವರಿಗೆ ಟ್ರೇನಿಂಗ್ ಇರುತ್ತೆ ಮೇಷ್ಟ್ರೆ. ನೀವು ಯಾವತ್ತಾದರೂ ಬಂದೂಕ ಹಿಡಿದಿದೀರಾ? ನಿಮ್ಮ ಬಾಯ್ಸ್‌ಗೇನಾದರೂ ಟ್ರೇನಿಂಗ್ ಇದಿಯ? ಹೇಳ್ರಿ"

"ನಮ್ಮ ಬಾಯ್ಸ್ ಖಾಲಿ ಮೆಣಸಿನ ಪುಡೀಲಿ ಪೋಲೀಸ್‌ನೋರ ಲಾಠಿ ಚಾರ್ಜು ಫೇಸ್ ಮಾಡಿದಾರೆ ಗೊತ್ತಾ! ಪೋಲೀಸಿನವರೂ ಮಿಲಿಟರಿಯವರೂ ಎಷ್ಟಾದರೂ ಸಂಬಳಕ್ಕಿರೋರು. ಐಡಿಯಾಲಜಿಗೆ ಫೈಟ್ ಮಾಡೋರಿಗೂ ಚೆಂಗೂಲಿಯವರಿಗೂ ಹೋಲಿಸ್ತೀರಾ!"

"ಐಸೀ! ಐಸೀ!" ಎಂದ ಬಂದವ. ಗಂಗೂಲಿ ಉತ್ತರಗಳು ಪಾಠ ಓದಿ ಪರೀಕ್ಷೆಯಲ್ಲಿ ಬರೆಯುವ ಉತ್ತರಗಳಂತೆ ಅವನಿಗೆ ಕಂಡುವು. ಪರೀಕ್ಷೆಗೂ ಜೀವನಕ್ಕೂ ವ್ಯತ್ಯಾಸ ಗೊತ್ತಿದ್ದ ಮೇಷ್ಟರ ತರ ಗಂಗೂಲಿ ಕಾಣಲಿಲ್ಲ. ಅದೂ ಅಲ್ಲದೆ ಸುರೇಶನೂ ಅವನ ಮಿತ್ರರೂ ಬಂದು ಬಾಗಿಲು ತಟ್ಟಿದಾಗ ಬೆಚ್ಚಿಬಿದ್ದು ಬಾಗಿಲು ತೆರೆಯುವ ಮುನ್ನ ಕಿಟಕಿಯಿಂದ ಇಣುಕಿದ್ದು, ಅವರು ಸುರೇಶನ ಮನೆಯವರೆಗೆ ಬಂದಿದ್ದೇ ದೊಡ್ಡ ಸಾಹಸವೆನ್ನುವಂತೆ ಮಾತಾಡಿದ್ದು, ಮನೆಯ ಬಳಿ ಓಡಾಡುವವರನ್ನೆಲ್ಲಾ ಸಿಐಡಿಗಳೆಂದು

ಭಾವಿಸಿ ಹಿಗ್ಗಿದ್ದು ಇವನ್ನೆಲ್ಲ ನೋಡಿದಮೇಲೆ ಬಂದಿದ್ದಾತನಿಗೆ ಮಾತಾಡುವ ಯಾವ ಉತ್ಸಾಹವೂ ಉಳಿಯಲಿಲ್ಲ. ''ಪರ್ವಾಗಿಲ್ಲ, ಕುತ್ಗಳಿ ಕುತ್ಗಳಿ'' ಎಂದು ಗಂಗೂಲಿ ಹೇಳಿದರೂ ಕೇಳದೆ ಎಲ್ಲರಿಗೂ ನಮಸ್ಕಾರ ಮಾಡಿ ಆತ ನಿಟ್ಟುಸಿರಿನೊಂದಿಗೆ ನಿರ್ಗಮಿಸಿದ.

ಸುರೇಶ ಒಳಹೋಗಿ ಕುಳಿತಾಗ ಗಂಗೂಲಿ ಬಾಯ್ಸ್ ಬಾಯ್ಸ್ ಎಂದು ಹೇಳುತ್ತಿರುವುದು ತಮ್ಮನ್ನು ಉದ್ದೇಶಿಸಿಯೇ ಎಂದು ಗೊತ್ತಾಗಲಿಲ್ಲ. ಬಂದವ ಎದ್ದು ಹೋದಮೇಲೆ ಸುರೇಶ ಮತ್ತು ಅವನ ಮಿತ್ರರ ಕಡೆ ತಿರುಗಿ ''ನೋಡಿದ್ರಾ ಪೊಲಿಟೀಶಿಯನ್ಸ್ ಎಲ್ಲಾ ಇಲ್ಲಿಗೆ ಕನ್ಸಲ್ಟ್ ಮಾಡೋದಕ್ಕೆ ಬರ್ತಿದ್ದಾರೆ! ಇಷ್ಟುರವರೆಗೂ ಈ ಗಂಗೂಲಿ ಏನೋ ಹೇಳ್ತಾನೆ ಅಂತ ಉದಾಸ್ನ ಮಾಡ್ತಿದ್ರು. ಈಗ ಅರ್ಥ ಆಗ್ತಿದೆ ಇವರಿಗೆ ನನ್ಮಾತು!'' ಎಂದು ಯಾವುದೋ ಪ್ರೇಮ ಪ್ರಕರಣ ತಿಳಿಸುವವನಂತೆ ಹೆಮ್ಮೆಯಿಂದ ಹೇಳಿ ಹುಡುಗರ ಕಡೆ ತಿರುಗಿ ಕಣ್ಣು ಮಿಟುಕಿಸಿದ. ''ಇನ್ನು ಮೇಲೆ ಮಾತ್ರ ನೀವು ಭಾಳ ಕೇರ್‌ಫುಲ್ಲಾಗಿರಬೇಕು. ಏನಿದ್ರೂ ಕತ್ಲಾದಮೇಲೇ ಇಲ್ಲಿಗೆ ಬರಬೇಕು. ವಿ ಮಸ್ಟ್ ಗೋ ಅಂಡರ್ ಗ್ರೌಂಡ್. ನಾನಿನ್ನು ಎಲ್ಲಿರ್ತೀನಿ ಏನ್ಮಾಡ್ತೀನಿ ಹೇಳಕ್ಕಾಗಲ್ಲ'' ಎಂದು ಅತ್ತಿತ್ತ ನೋಡುತ್ತ ಪಿಸುಮಾತಿನಲ್ಲಿ ಎಚ್ಚರಿಸಿದ.

ಸುರೇಶನೂ ಅವನ ಮಿತ್ರರೂ ಗಂಗೂಲಿ ಮಾತು ಕೇಳಿ ಹಿರಿ ಹಿರಿ ಹಿಗ್ಗಿದರು......

ಖುದ್ದೂಸನ ಘಾಟಿ ಎಕ್ಸ್‌ಪ್ರೆಸ್ಸಿನಲ್ಲಿ ಕುಳಿತು ಸುರೇಶ ದೂರ ಕುಳಿತಿದ್ದ ಗೌರಿ ಕಡೆಗೆ ನೋಡುತ್ತಿದ್ದನೇ ಹೊರತು, ಅವನ ಮನಸ್ಸು ಮೂಟೆಯ ಮೇಲೆ ಕುಳಿತಿದ್ದ ಆಗಂತುಕರಂತೆಯೇ ತಾನೂ ಅಲ್ಲಿಗೆ ಆಗಮಿಸಿದ್ದನ್ನೂ ಅದಕ್ಕೆ ಕಾರಣಗಳನ್ನೂ ನೆನೆಯುತ್ತಾ ಇತ್ತು. ಆಗಿನದನ್ನೆಲ್ಲಾ ನೆನೆಸಿಕೊಂಡರೆ ಗಾಂಪರೊಡೆಯರ ಶಿಷ್ಯರ ಕತೆಗಳಂತೆನ್ನಿಸಿ ನಾಚಿಗೆ ನಗು ಎರಡೂ ಬರುತ್ತಿತ್ತು. ಕಾಲ ಕಳೆದಹಾಗೂ ಹಳೆಯದೆಲ್ಲಾ ಕಾಮಿಡಿ ಹಾಗೆ ಕಾಣ್ತದಲ್ಲಾ ಅದೇ ನನ್ನ ಜೀವನದ ಟ್ರಾಜಿಡಿ ಎಂದು ಮನಸ್ಸಿನಲ್ಲೇ ಅಂದುಕೊಂಡ ಅವನು.

ಗಂಗೂಲಿಯ ಕ್ರಾಂತಿ ಕೈ ಬಿಟ್ಟಮೇಲೆ ಗೌರಿಯನ್ನು ಮದುವೆಯಾಗಲು ದೊಡ್ಡ ವೀರಾವೇಶದ ಹೋರಾಟ ಮಾಡಿ ಹೀರೋ ತರ ಮದುವೆಯಾಗುತ್ತಿದ್ದೇನೆಂದುಕೊಂಡಿದ್ದ ಅವನಿಗೆ ಅಲ್ಲೂ ಫೂಲ್ ಆಗಿದ್ದು ಗೊತ್ತಾಗಿದ್ದು ನಿಧಾನವಾಗಿ. ಬಸ್ಸಿನೊಳಗೆ ಕುಳಿತುಕೊಂಡು ಯೋಚಿಸಿದಂತೆಲ್ಲ ಸುರೇಶನಿಗೆ ನಿಷ್ಕಾರಣವಾಗಿ ಅಥವಾ ಸಕಾರಣವಾಗೇ ನಾಚಿಗೆಯಾಗತೊಡಗಿತು. ಹೆಂಡತಿ ಮೇಲೆ ಸಿಟ್ಟು ಬಂದು ''ಈ ಪೆದ್ದು ಮುಂಡೆ ದೆಸೆಯಿಂದಲೇ ಇದೆಲ್ಲ ಆಗಿದ್ದು'' ಎಂದು ಗೊಣಗಿದ. ಸುರೇಶ ಹೇಳಿದ್ದನ್ನೆಲ್ಲ ನಂಬಿಕೊಂಡು 'ಹ್ಞೂ'ಎಂದು ಗೋಣಾಡಿಸುವುದರಿಂದಲೇ ಸುರೇಶನ ಹುಚ್ಚಾಟಗಳು ಅಡೆತಡೆ ಇಲ್ಲದೆ ಮುಂದುವರಿಯುತ್ತಿರುವುದೆಂದು ಇತರರು ನಂಬಿದ್ದರು. ಸುರೇಶನಿಗೂ ಆಗಾಗ್ಗೆ ಹಾಗೆನ್ನಿಸಿ ಸಿಟ್ಟು ಬರುತ್ತಿತ್ತು. ಎಂತೆಂಥ ಉನ್ನತಾದರ್ಶಗಳನ್ನೆಲ್ಲಾ ಇವಳಿಗಾಗಿ

ತ್ಯಾಗ ಮಾಡಿದೆ ಎಂದು ಸಿಟ್ಟಿನಲ್ಲಿ ಯೋಚಿಸಿ, ಆ ಉನ್ನತಾದರ್ಶಗಳ ಬಗ್ಗೆ ಯೋಚಿಸಿದ ಕೂಡಲೆ ಗಂಗೂಲಿ ತಲೆಯೊಳಗೆ ಬಂದು ಆದರ್ಶಗಳ ಬಗ್ಗೆಯೂ ನಾಚಿಗೆಯಾಯ್ತು. 'ಥತ್' ಎಂದು ಯೋಚನೆಗಳಿಗೆ ತಡೆ ಹಾಕಿ ಕೆಲಸ ನೋಡೋಣ ಎಂದು ಗತಕಾಲದಿಂದ ವರ್ತಮಾನಕ್ಕೆ ಇಳಿದರೂ ಖುದ್ದೂಸನ ಎಕ್ಸ್‌ಪ್ರೆಸ್ ಘರ್ಜಿಸುತ್ತಾ ಘಾಟಿಯ ತಿರುವುಗಳಲ್ಲಿ ಇನ್ನೂ ತೆವಳುತ್ತಲೇ ಇದೆ. ಸುರೇಶನಿಗೆ ಇದೇನೂ ಕೊನೆ ಮುಟ್ಟುವ ಪಯಣವೆಂದು ಅನ್ನಿಸಲಿಲ್ಲ.

* * * *

ಸುರೇಶ ಒಬ್ಬ ವಿಶ್ವವಿದ್ಯಾಲಯದ ಎಂ.ಎ ಪದವೀಧರ ಎಂದರೆ ಯಾರಿಗೂ ಆಶ್ಚರ್ಯವಾಗುವುದು ಸಹಜ. ಆದರೆ ಅವನ ಕತೆ ಪೂರ್ತಿ ತಿಳಿದವರು ಮಾತ್ರ ಮೊದಲಲ್ಲಿ ಆಶ್ಚರ್ಯಪಟ್ಟರೂ ಅಲ್ಪ ಕಾಲದಲ್ಲೇ ಇದು ಮೆಂಟಲ್ ಕೇಸು ಎಂದು ನಿರ್ಧರಿಸಿ ಅಚ್ಚರಿಪಡುವುದನ್ನು ನಿಲ್ಲಿಸುತ್ತಾರೆ. ಆದರೆ ಯಾರು ಏನು ತಿಳಿದರೇನು! ಸುರೇಶ ಮಾತ್ರ ಕನಸು ಕಾಣುತ್ತಾ ಹುಚ್ಚಾಟಗಳ ಬೆನ್ನು ಹತ್ತುವುದನ್ನು ಎಂದೂ ಬಿಟ್ಟವನೇ ಅಲ್ಲ

ಇಲ್ಲದಿದ್ದರೆ ನಿನ್ನ ಪಾಡು ನೀನು ನೋಡಿಕೋ ಎಂದು ಅವನಪ್ಪ ಕೊಟ್ಟ ಹತ್ತು ಲಕ್ಷ ರೂಪಾಯಿಗಳನ್ನು ತಿನ್ನದೆ ಕುಡಿಯದೆ ಜುಗಾರಿ ಸಹ ಆಡದೆ ಕೆಲವೇ ಕಾಲದಲ್ಲಿ ಮಂಗಮಾಯ ಮಾಡಿದ್ದಾದರೂ ಹೇಗೆ ಯೋಚಿಸಿ. ಸುರೇಶ ಮಲಯಾದಿಂದ ಬಂದವನು. ಅವನಪ್ಪ ಕರ್ನಾಟಕದವರೇ ಆದರೂ ಮಲಯಾಕ್ಕೆ ಹೋಗಿ ರಬ್ಬರ್ ತೋಟ ಮಾಡಿಕೊಂಡು ನೆಲಸಿ ಎಷ್ಟೋ ವರ್ಷಗಳಾಗಿದ್ದುವು. ಮಲಯಾದ ಸ್ಕಾಲರ್ಷಿಪ್ಪಿನ ಮೇಲೆ ಮೈಸೂರಿಗೆ ಓದಲು ಬಂದ ಸುರೇಶ ಕನ್ನಡ ಸಾಹಿತ್ಯ ಓದಲು ಆರಿಸಿಕೊಂಡ. ಆಗಲೇ ಅವರಪ್ಪನಿಗೆ ಇದು ಗಾನ್‌ಕೇಸ್ ಎಂದು ತೀವ್ರವಾಗಿ ಅನ್ನಿಸಿತ್ತು. ಆದರೆ ತಾನು ಮಲಯಾ ದೇಶಕ್ಕೆ ರಬ್ಬರ್ ತೋಟ ಮಾಡಲು ಹೊರಟಾಗಲೂ ಬಹಳಷ್ಟು ಜನ ಹೀಗೇ ಹೇಳಿದ್ದರಿಂದ ಅವರು ಸುರೇಶನ ಆಸೆಗೆ ಅಡ್ಡ ಬರಲಿಲ್ಲ. ಮಲಯಾದ ಯಾವುದೋ ಯೂನಿವರ್ಸಿಟಿ ಯಲ್ಲಿ ದ್ರಾವಿಡ ಭಾಷೆಗೆ ಒಂದು ಡಿಪಾರ್ಟಮೆಂಟು ತೆರೆಯುತ್ತಾರೆಂದೂ ಆಗ ಕನ್ನಡ ಭಾಷೆ ಅಧ್ಯಯನ ಮಾಡಿದ್ದವರಿಗೆ ತುಂಬಾ ಸ್ಕೋಪ್ ಇರುತ್ತದೆಂದೂ ಸುರೇಶ ತಂದೆ ಹತ್ತಿರ ಹೇಳಿದ್ದ. ಅವನ ತಂದೆಗೆ ಇವನು ಯೂನಿವರ್ಸಿಟಿಯಲ್ಲಿ ಚಾಕರಿ ಮಾಡಿ ಆಗಬೇಕಾದ್ದು ಏನೂ ಇರಲಿಲ್ಲ. ಆದರೂ ಇವನ ಹುಚ್ಚಾಟಗಳಿಗೂ ಏನೋ ಒಂದು ಉದ್ದೇಶವಿರುವುದನ್ನು ನೋಡಿ ಸುಮ್ಮನಾಗಿದ್ದರು.

ಕನ್ನಡ ಸಾಹಿತ್ಯ ಅಧ್ಯಯನ ಮಾಡಲು ಬಂದ ಸುರೇಶ ಕೊನೆಗೆ ಕುಮರಿ ಹತ್ತಿರ ಏಲಕ್ಕಿ ಬೆಳೆಯಲು ನಿಂತಿದ್ದೊಂದು ಅತಿ ವಿಚಿತ್ರ ಕಥೆ.

ಅದಕ್ಕೆ ಬಹು ಮುಖ್ಯ ಕಾರಣ ಅವನ ಗುರು ಬಾಟನಿ ಅಧ್ಯಾಪಕ ಗಂಗೂಲಿ ಎಂದೇ ಹೇಳಬಹುದು. ಕನ್ನಡ ಸಾಹಿತ್ಯ ಓದುತ್ತಿದ್ದವನಿಗೆ ಬಾಟನಿ ಲೆಕ್ಚರರ್

ಗಂಟುಬಿದ್ದಿದ್ದು ಹೇಗೆಂದು ಅಚ್ಚರಿಪಡುವ ಅಗತ್ಯ ಇಲ್ಲ. ಏಕೆಂದರೆ ಇಂಥ ವಿಚಿತ್ರಗಳು ಸುರೇಶನ ಜೀವನದಲ್ಲಿ ಪ್ರತಿನಿತ್ಯ ನಡೆಯುತ್ತಾ ಇರುತ್ತವೆ. ಅದೇನು ಅವನ ನಸೀಬೇ ಅಂಥದ್ದೋ! ಅಥವಾ ಎಲ್ಲ ತಿಳಿದಿರುವಂತೆ ಅವನ ಅತಿಬುದ್ಧಿಯ ಹುಚ್ಚೋ ಹೇಳಲಾಗುವುದಿಲ್ಲ. ಇಪ್ಪತ್ತುನಾಲ್ಕು ಗಂಟೆಯೂ ನಾಳೆ ನಾಳಿದ್ದಿನ ಒಳಗೆ ಕ್ರಾಂತಿ ಗ್ಯಾರೆಂಟಿ ಎಂದು ಹೇಳುತ್ತಿದ್ದ ಗಂಗೂಲಿ ಮಾತಿಗೆ ಮರುಳಾಗಿ ಸುರೇಶ ತಾನೂ ಒಬ್ಬ ನಕ್ಸಲೈಟ್ ಎಂದು ಹೇಳಿಕೊಂಡು ತಿರುಗುತ್ತಾ ಇದ್ದ. ಇಂಥವರೇ ಇನ್ನೊಂದಿಬ್ಬರು ಗಂಗೂಲಿ ಶಿಷ್ಯವೃತ್ತಿ ಮಾಡಿಕೊಂಡಿದ್ದವರೂ ಇವನೊಡನಿದ್ದರು. ಆದರೆ ಇವನು ಮಲಯಾದವನಾಗಿದ್ದು ಇಂಡಿಯಾದಲ್ಲಿ ಕ್ರಾಂತಿ ಮಾಡುವುದು ಹೇಗೆ ಎನ್ನುವುದೇ ದೊಡ್ಡ ಪ್ರಶ್ನೆಯಾಗಿತ್ತು. ಅಷ್ಟರಲ್ಲಿ ಅವನ ಊಹೆಗೆ ವ್ಯತಿರಿಕ್ತವಾಗಿ ಮಲಯಾದಲ್ಲೇ ಕ್ರಾಂತಿ ಸಂಭವಿಸಿ ಅಲ್ಲಿದ್ದ ಭಾರತೀಯರನ್ನೆಲ್ಲಾ ಓಡಿಸಲಾಯ್ತು. ಪುಣ್ಯಕ್ಕೆ ಆಸ್ತಿಪಾಸ್ತಿಯನ್ನೆಲ್ಲಾ ಮಾರಿ ದುಡ್ಡು ದುಗ್ಗಾಣಿಯನ್ನು ತಮ್ಮ ತಮ್ಮ ದೇಶಗಳಿಗೆ ಒಯ್ಯಲು ಆ ದೇಶದ ಸರ್ಕಾರ ಅನುಮತಿ ಕೊಟ್ಟಿದ್ದರಿಂದ ಸುರೇಶನ ತಂದೆ ಭಿಕಾರಿಗಳಾಗಿ ನಿರಾಶ್ರಿತರಂತೆ ಭಾರತಕ್ಕೆ ಬರಬೇಕಾದ ಪರಿಸ್ಥಿತಿ ತಪ್ಪಿತು. ಅದೇ ಸಮಯದಲ್ಲಿ ಭಾರತದ ರೂಪಾಯಿ ಅಪಮೌಲ್ಯ ಆಗಿದ್ದರಿಂದ ಅವರು ತಂದ ಡಾಲರಿಗೆ ಬೇಕಷ್ಟು ಹಣವೂ ಸಿಕ್ಕಿತ್ತು. ಬಂದವರು ಬೆಂಗಳೂರಿನಲ್ಲಿ ನೆಲೆಸಿದ ಮೇಲೆ ಸುರೇಶ ಓದುತ್ತೇನೆಂದು ಹೇಳಿ ನಡೆಸುತ್ತಿದ್ದ ಕಾರುಬಾರುಗಳನ್ನೆಲ್ಲಾ ಕೇಳಿ ರೇಗಿಹೋದರು. ಮಲಯಾದಲ್ಲಿ ಕ್ರಾಂತಿಯ ಬಿಸಿ ಚೆನ್ನಾಗಿ ತಟ್ಟಿದ್ದ ಅವರಿಗೆ ಮತ್ತೆ ಮಗ ಅದನ್ನು ಜಪಿಸಿದ್ದು ನೋಡಿ ಸಿಟ್ಟು ನೆತ್ತಿಗೇರಿತ್ತು. ನಿನ್ನ ಪಾಲು ನೀನು ತಗೊಂಡು ಹೋಗೆಂದು ಹೇಳತೊಡಗಿದರು.

ತಂದೆ ಆಸ್ತಿಯಲ್ಲಿ ಪಾಲು ತಗೊಳ್ಳುವುದು ಕ್ರಾಂತಿಕಾರಿಗೆ ತರವಲ್ಲ ಎಂದು ಸುರೇಶ ದುಡ್ಡು ತಗೊಳ್ಳಲು ನಿರಾಕರಿಸಿದ.

ಇಂಡಿಯಾದಲ್ಲಿ ಎಮರ್ಜನ್ಸಿ ಘೋಷಣೆಯಾದ ಎರಡು ದಿನಕ್ಕೆ ಗಂಗೂಲಿ ರಜಾ ಹಾಕಿ ನಾಪತ್ತೆಯಾದ. ಸುರೇಶ ಹಾಗಾದರೆ ಗಂಗೂಲಿ ಕ್ರಾಂತಿ ಸಂಭವಿಸುತ್ತೆಂದು ಹೇಳುತ್ತಿದ್ದ ನಾಳೆ ನಾಳಿದ್ದಿನ ಕಾಲಾವಧಿ ಈಗ ಒಂದೆರಡು ಗಂಟೆಗಳಷ್ಟು ಹತ್ತಿರಕ್ಕೆ ಬಂದಿರಬಹುದೆಂದು ತಿಳಿದ. ಹೆದರು ಪುಕ್ಕಲ ಗಂಗೂಲಿ ಅರೆಸ್ಟು ಲಿಸ್ಟಿನಲ್ಲಿ ನಿನ್ನ ಹೆಸರೂ ಇದೆ ಎಂದು ಯಾರೋ ಹೇಳಿದ್ದಕ್ಕೇ ರಜಾ ಹಾಕಿ ಊರಿಗೆ ಓಡಿಹೋಗಿದ್ದನೆನ್ನುವುದು ಸುರೇಶನಿಗೆ ಗೊತ್ತಿರಲಿಲ್ಲ. ಹದಿನೈದು ದಿನ ಕಳೆದಮೇಲೆ ಮೆಲ್ಲಗೆ ತಲೆಹಾಕಿದ ಗಂಗೂಲಿ ಇನ್ನೇನು ಕ್ರಾತಿಯಾಗಲಿದೆಯೆಂದೂ, ಕ್ರಾಂತಿಕಾರಿಗಳೆಲ್ಲ ಈಗಲೇ ಊರು ಬಿಟ್ಟು ಗ್ರಾಮಾಂತರಗಳಿಗೆ ಹೋಗಿಬಿಡಬೇಕೆಂದೂ ಪಿಸುಮಾತಿನಲ್ಲಿ ಟಾಪ್ ಸೀಕ್ರೆಟ್ ಹೇಳುವ ಹಾಗೆ ಹೇಳಿದ. ಎಂ.ಎ ಮುಗಿಸಿ ಪಿ.ಹೆಚ್.ಡಿ ಮಾಡುತ್ತಿದ್ದ ಸುರೇಶನಿಗೆ ಯೂನಿವರ್ಸಿಟಿಗೆ ಹೇಗಾದರೂ ವಿದಾಯ ಹೇಳಲು ಒಂದು ನೆವ ಬೇಕಾಗಿತ್ತು.


ಗಂಗೂಲಿ ಕ್ರಾಂತಿ ಮಾಡುವಂತಿದ್ದರೆ ಸುತ್ತಮುತ್ತ ಕಾಡುಗಳಿರುವ ಕಡೆ

ಆರಂಭಿಸುವುದೇ ಯಾವಾಗಲೂ ಒಳ್ಳೆಯದೆಂದು ಚೆ ಗೆವಾರ, ಮಾವೋ, ವಿಯತ್ನಾಮ್ ಮೊದಲಾದವುಗಳ ಉದಾಹರಣೆಗಳನ್ನೆಲ್ಲಾ ಕೊಟ್ಟು ಸರ್ಕಾರಗಳೊಡನೆ ಹೇಗೆ ಗೆರಿಲ್ಲಾ ಯುದ್ಧ ಮಾಡಬೇಕು, ಹೇಗೆ ಹಳ್ಳಿಗಳನ್ನೆಲ್ಲಾ ವಶಪಡಿಸಿಕೊಂಡು ಅವರಿಗೆ ತರಬೇತಿ ಕೊಡಬೇಕು, ಹೇಗೆ ಹಳ್ಳಿಗಳತ್ತಣಿಂದ ಪೇಟೆಗಳನ್ನು ವಶಪಡಿಸಿಕೊಳ್ಳುತ್ತಾ ಬರಬೇಕು ಇತ್ಯಾದಿಗಳನ್ನೆಲ್ಲಾ ಕೊರೆದಿದ್ದ. ''ಟೆಲಿಫೋನ್ ವೈರು ಕಟ್ ಮಾಡಿ ದಾರಿಯ ಒಂದೆರಡು ಕಲ್ವರ್ಟುಗಳನ್ನು ಬ್ಲಾಸ್ಟ್ ಮಾಡಿದರೆ ಸಾಕು, ಹಳ್ಳಿಗಳೆಲ್ಲಾ ಲಿಬರೇಟ್ ಆಗಿ ನಮ್ಮ ಜೊತೆ ಸೇರಿಬಿಡ್ತಾರೆ. ಆಮೇಲೇನ್ಮಾಡಬೇಕೂಂತ ಗೊತ್ತಿದೆಯಲ್ಲಾ ನಿಮಗೆ! ಸುಮ್ಮನೆ ಮಾವೋ ಪುಸ್ತಕದ್ದು ಸೆವಂತ್ ಛಾಪ್ಟರು ಫಾಲೋ ಮಾಡಿ'' ಎಂದೆಲ್ಲಾ ಕೊರೆದು ಈ ಗಾಂಪರ ಗುರು ಶಿಷ್ಯರನ್ನೆಲ್ಲಾ ಓದು ಬಿಡಿಸಿ ಹಳ್ಳಿಗಳ ಕಡೆ ಸಾಗಹಾಕಿದ. ವಿಟ್ಲದ ಕಡೆ ಯಾವುದೋ ಕಂಪೆನಿ ತೋಟದಲ್ಲಿ ಮೇನೇಜರ್ ಕೆಲಸ ಮಾಡುತ್ತೇನೆಂದು ತಂದೆಯಿಂದ ಶಿಫಾರಸ್ ಪತ್ರ ತಗೊಂಡು ಸುರೇಶ ಕ್ರಾಂತಿ ಮಾಡಲು ಪ್ರಶಸ್ತವಾದ ಜಾಗ ಹುಡುಕಿ ಹೊರಟ.

ಘಟ್ಟದ ತಗ್ಗುಗಳಲ್ಲಿ ಬಸ್ಸು ಸಮುದ್ರ ಮಟ್ಟಕ್ಕೆ ಇಳಿಯುತ್ತಾ ಬಂದಂತೆ ಸುರೇಶನ ಮನಸ್ಸು ಸಂಪೂರ್ಣ ಬದಲಾವಣೆಯಾಯ್ತು. ಎಮರ್ಜನ್ಸಿಯಲ್ಲಿ ಇಡೀ ದೇಶ ಕುದಿಯುತ್ತಾ ಬದಲಾವಣೆಗಾಗಿ ಹಾತೊರೆಯುತ್ತಿದೆ ಎಂದು ಗಂಗೂಲಿ ಹೇಳಿದ್ದು ಯಾಕೋ ಸರಿ ಕಾಣಲಿಲ್ಲ ಅವನಿಗೆ. ಯಾರಿಗೂ ದೇಶದಲ್ಲಿ ಎಮರ್ಜನ್ಸಿ ಇದೆ ಎನ್ನುವುದೂ ಸಹ ಗೊತ್ತಿರುವಂತೆ ಕಾಣಲಿಲ್ಲ. ಒಂದುಕಡೆಯಿಂದ ಒಂದೊಂದಾಗಿ ಹಳ್ಳಿಗಳನ್ನೆಲ್ಲಾ ಲಿಬರೇಟ್ ಮಾಡುತ್ತ ಪೇಟೆಗಳತ್ತ ಮುಂದುವರಿಯಬೇಕೆಂದು ಉಪದೇಶ ಕೊಟ್ಟು ಮಾವೋ ಮಾಡಿದ ಟೆಕ್ನಿಕ್ ಮಾಡಿರೆಂದು ಹೇಳಿದ್ದ ಗಂಗೂಲಿಯ ಪುಸ್ತಕದ ಬದನೇಕಾಯಿಗಳು, ಬಾಯಿ ಬಡಾಕಿಗಳು ಎಷ್ಟು ಗಂಭೀರವಾಗಿ ಯೋಚಿಸಿದರೂ ನಗು ಬರುವಷ್ಟು ಹಾಸ್ಯಾಸ್ಪದವಾಗಿ ಕಾಣತೊಡಗಿದೆವು.

ಆದರೇನು ಮಾಡುವುದು! ಕ್ರಾಂತಿಗೆ ವಿದಾಯ ಹೇಳಿ ಮಾವೋ ಪುಸ್ತಕದ ಸೆವಂತ್ ಛಾಪ್ಟರ್ ಕೈ ಬಿಟ್ಟರೂ ಮತ್ತೆ ಊರಿಗೆ ಹೋಗುವುದು ಆಗದ ಮಾತು. ಹೊಸದೇನಾದರೂ ಹುಚ್ಚಾಟ ಮನಸ್ಸಿಗೆ ಬರುವವರೆಗೂ ಕಾಲ ಕಳೆಯೋಣ ಎಂದು ಅಪ್ಪನ ಶಿಫಾರಸ್ ಪತ್ರ ತೋರಿಸಿ ಒಂದು ಕಂಪೆನಿ ರಬ್ಬರ್ ತೋಟದಲ್ಲಿ ಕೆಲಸಕ್ಕೆ ಸೇರಿದ. ಆ ತೋಟದ ಡೈರೆಕ್ಟರ್ ಮಗಳೇ ಗೌರಿ. ಗೌರಿಯ ಅಪ್ಪ ಸುರೇಶನಿಗೆ ಮಗಳನ್ನು ಮದುವೆ ಮಾಡಲು ಕೆಲವು ದಿನಗಳ ಹಿಂದಷ್ಟೇ ಸುರೇಶನ ತಂದೆ ಬಳಿ ಪ್ರಸ್ತಾಪ ಮಾಡಿದ್ದು ಸುರೇಶನಿಗೆ ಗೊತ್ತಿರಲಿಲ್ಲ.

# ಪುರಾತನ ಕಡತಗಳು! - ೮



ರಬ್ಬರ್ ಪ್ಲಾಂಟೇಶನ್ ಮ್ಯಾನೇಜಿಂಗ್ ಡೈರೆಕ್ಟರ್ ವಿಠ್ಠಲ ರೈಗೆ ನಿಜವಾಗಿಯೂ ತಲೆನೋವು ಶುರುವಾಗಿದ್ದು ಈ ಎಂ.ಎ ಗ್ರ್ಯಾಜುಯೆಟ್ಟು ದೋಣಿ ಹೊಳೆಯಲ್ಲಿ ಮೀನು ಹಿಡಿದುಕೊಂಡು ತಿರುಗಲು ಶುರುಮಾಡಿದಾಗ. ಬಿ ಬ್ಲಾಕ್ ಮ್ಯಾನೇಜರ್ ಸುರೇಶ ತಮ್ಮ ಮಗಳು ಗೌರಿಯನ್ನು ಬಹಳ ಹಚ್ಚಿಕೊಂಡಿದ್ದಾನೆಂದು ವರ್ತಮಾನ ಬಂದಾಗಲೂ ಅವರಿಗೇನೂ ಅಂಥ ಬೇಜಾರಾಗಲಿ ಕಳವಳವಾಗಲಿ ಆಗಿರಲಿಲ್ಲ. ಒಳ್ಳೆ ಹುಡುಗ, ಓದಿದವನು, ಅವನಪ್ಪನೇನೋ ಇವನನ್ನು ಗಾನ್‌ಕೇಸ್ ಎಂದು ಹೇಳಿದರೂ ಮದುವೆಯಾಗದ ಹುಡುಗರು ಯಾವಾಗಲೂ ಹಾಗೇ ಅಲ್ಲವೆ! ತಮ್ಮ ಮೂಗಿನ ನೇರಕ್ಕೆ ಇಲ್ಲ ಎಂದ ಕೂಡಲೆ ಅಪ್ಪಂದಿರು ಹೀಗೆನ್ನುವುದು ಸಹಜ! ಎಂದು ಯೋಚಿಸಿದ್ದರು. ಬಂದ ಹೊಸತರಲ್ಲಿ ಈ ಮಹಾನುಭಾವ ಗೌರಿಗೆ ಬಹಳ ಅನುರೂಪನಾಗಿಯೇ ಅವರಿಗೆ ಕಂಡಿದ್ದ. ಅವರಿಗೆ ಇವನ ಹುಚ್ಚಾಟಗಳ ಮೊದಲ ಸುಳಿವು ಸಿಕ್ಕಿದ್ದು ಈ ಅವಿವೇಕಿ ದೋಣಿಹೊಳೆ ದಂಡೆಗುಂಟ ಏನೋ ಮಾಡುತ್ತ ತಿರುಗಿಕೊಂಡು ಇರುತ್ತಾನೆ ಎನ್ನುವ ವರ್ತಮಾನ ಬಂದಾಗ.

ದೋಣಿಹಳ್ಳದ ಜಾಡು ಹಿಡಿದು ಸುಮಾರು ಜನ ಹಾಳಾಗಿ, ಪಾಪರಾಗಿ,

ಹುಚ್ಚರಾಗಿ, ಹೆಂಡಿರು ಮಕ್ಕಳನ್ನೆಲ್ಲ ಬೀದಿಪಾಲು ಮಾಡಿದ್ದು ಅವರು ಕಣ್ಣಾರೆ ಕಂಡಿದ್ದರು. ಮನುಷ್ಯ ನುಗ್ಗಲಾರಂದಥ ಕಗ್ಗಾಡಿನೊಳಗಿಂದ, ಅಗಮ್ಯ ಪರ್ವತಶ್ರೇಣಿಗಳ ಭೀಕರ ಕೊರಕಲುಗಳೊಳಗಿಂದ, ಕಮರಿಗಳೊಳಗಿಂದ, ಹರಿದುಬರುವ ನೂರಾರು ನದಿ ಝರಿಗಳೇ ದೋಣಿಹೊಳೆಗೆ ಮೂಲ. ದೋಣಿಹೊಳೆ ಅದರಪಾಡಿಗೆ ಅದು ಹರಿದುಕೊಂಡು ಹೋಗುತ್ತಿದ್ದರೆ ವಿಠ್ಠಲ ರೈಗೆ ಅದರ ಮೇಲೇನೂ ಕೋಪವಿರುತ್ತಿರಲಿಲ್ಲ. ಆದರೆ ಅದರ ಜಾಡು ಹಿಡಿದು ಜನ ಹಾಳಾಗಲು ಬೇರೆಯದೇ ವಿಶಿಷ್ಟ ಕಾರಣ ಇತ್ತು.

ಈ ಸುಡುಗಾಡು ನದಿ ಮಳೆಗಾಲದಲ್ಲಿ ಭಯಂಕರ ನೆರೆ ಬಂದು ಇಳಿದಮೇಲೆ ಆಗೀಗ ಒಂದೊಂದು ಕೆಂಪು ಕಲ್ಲುಗಳನ್ನು ತಂದು ಮರಳ ದಂಡೆಯಮೇಲೆ ಎಸೆದು ಹೋಗುತ್ತಿತ್ತು. ಹೊತ್ತಿ ಉರಿಯುತ್ತಿರುವ ಕೆಂಡದಹಾಗೆ ಕಾಣುತ್ತಿದ್ದ ಈ ಕಲ್ಲಿನ ಚೂರನ್ನು ಕಂಡವನ ಕಥೆ ಶಾಶ್ವತವಾಗಿ ಮುಗಿದ ಹಾಗೆಯೇ. ಆ ಕೆಂಪು ಕಲ್ಲಿನ ಗುರುತ್ವಾಕರ್ಷಣೆಗೆ ಸಿಕ್ಕವನು ಯಾರಿಗೂ ಅದನ್ನು ಹೇಳುತ್ತಲೂ ಇರಲಿಲ್ಲ. ಅದನ್ನು ಪ್ರತಿರೋಧಿಸಿ ಪಾರಾಗಲೂ ಸಾಧ್ಯವಿರಲಿಲ್ಲ. ಹಾಗಾಗಿ ದೋಣಿ ಹಳ್ಳದ ದಂಡೆ ಹಿಡಿದು ಹೊರಟವನನ್ನು ಮತ್ತೆ ನೋಡಿದ್ದೇ ಅಪರೂಪ.

ಆ ಕಾಡಿನಲ್ಲೊಂದು ಮೈಮರೆಸುವ ಬಳ್ಳಿ ಇದೆಯಂತೆ! ಅದು ಅಕಸ್ಮಾತ್ ಯಾರಿಗಾದರೂ ತಾಗಿದರೆ, ತಾಗಿದವನಿಗೆ ಬಂದ ದಾರಿ ಸಂಪೂರ್ಣ ಮರೆತೇ ಹೋಗುತ್ತದಂತೆ. ಹಾಗಾಗಿ ದನ ಕರು ಕಳೆದು ಹೋದರೂ ಸಹ ಅಲ್ಲಿಯ ಆಸುಪಾಸಿನ ಜನ ದೋಣಿ ಹೊಳೆಯ ದಂಡೆ ಹಿಡಿದು ಯಾವತ್ತೂ ಆ ಭೀಕರ ಕಾಡಿಗೆ ಕಾಲ್ನಡೆಗಳನ್ನು ಹುಡುಕಿ ಹೋಗುತ್ತಿರಲಿಲ್ಲ. ಏಕೆಂದರೆ ಎಷ್ಟೋ ಸಾರಿ ಕಳೆದುಹೋದ ಜಾನುವಾರುಗಳು ಹಿಂದಿರುಗಿ ಬಂದರೂ ಹುಡುಕಿ ಹೋದವರು ಮಾತ್ರ ಹಿಂದಿರುಗಿರಲಿಲ್ಲ. ಯಾಕೆ ಯಾರಾದರೂ ದೋಣಿಹೊಳೆಯ ಜಾಡು ಹಿಡಿದು ಇದ್ದಕ್ಕಿದ್ದಂತೆ ನಾಪತ್ತೆಯಾಗುತ್ತಾರೋ ಇವತ್ತಿಗೂ ಯಾರಿಗೂ ಸರಿಯಾಗಿ ಗೊತ್ತಿಲ್ಲ. ಏಕೆಂದರೆ ನಾಪತ್ತೆಯಾದವರು ಯಾರೂ ಯಾರಿಗೂ ಇದುವರೆಗೂ ಏನನ್ನೂ ಹೇಳಿ ಹೋಗಿಲ್ಲ.

ಇದು ಅಸ್ಪಷ್ಟವಾಗಿ ಅಲ್ಪಸ್ವಲ್ಪ ಬೆಳಕಿಗೆ ಬಂದಿದ್ದೂ ಕೂಡ ಮಂಗಳೂರು ಬೆಂಗಳೂರು ರೈಲು ಮಾರ್ಗ ಹಾಕಲು ಆ ಕಾಡಿನ ಗಿರಿನೆತ್ತಿಗಳಲ್ಲೆಲ್ಲೋ ಕಾರ್ಯಾರಂಭ ಮಾಡಿದ್ದರಿಂದ. ಇದ್ದಕ್ಕಿದ್ದಹಾಗೇ ಕೆಲವರು ಕೆಲಸಗಾರರೂ ಓವರ್ಸೀಯರ್‌ಗಳೂ ಕೆಲವು ವೇಳೆ ಜ್ಯೂನಿಯರ್ ಎಂಜಿನಿಯರ್‌ಗಳೂ ಆಗಿಂದಾಗ್ಗೆ ನಾಪತ್ತೆಯಾಗತೊಡಗಿದಾಗ. ಆ ಬಗ್ಗೆ ಗಾಂಜಾ ಆಫೀಮುಗಳಿಂದ ಹಿಡಿದು ಕೆಂಪು ಕಲ್ಲು, ವಜ್ರಗಳವರೆಗೆ ನೂರೆಂಟು ಕಥೆಗಳಿದ್ದಾವೆನ್ನಿ! ಅದರಲ್ಲಿ ಕೆಂಪು ಕಲ್ಲು ಕಂಡು ದೋಣಿ ಹೊಳೆ ಜಾಡು ಹಿಡಿದರು ಎನ್ನುವುದೂ ಒಂದು. ಸುರಂಗ ತೋಡಲು ತಂದ ಡೈನಮೈಟ್ ಕದ್ದು ದೋಣಿಹೊಳೆಗೆ ಹಾಕಿ ಮೀನು ಹಿಡಿಯಲು ಹೋದ ಓವರ್‌ಸೀಯರ‍್ರು, ಒಬ್ಬ ವರ್ಕರ‍್ರು ಇಬ್ಬರೂ ನಾಪತ್ತೆಯಾದರು. ಹೊಳೆ ದಂಡೆಯಲ್ಲಿ ಅವರಿಗೆ ವಜ್ರ ಸಿಕ್ಕಿ, ಅವರಿಬ್ಬರೂ ದಂಡೆಗುಂಟ

ಹೋಗಿ ಕಾಡೊಳಗೆ ಹೊಕ್ಕರು ಎಂದು ಎಲ್ಲ ಹೇಳುತ್ತಾರೆ. ಇದರಲ್ಲಿ ಸುಳ್ಳೆಷ್ಟು ನಿಜ ಎಷ್ಟು ತಿಳಿಯದೆ ಕೊನೆಗೆ ಸರ್ಕಾರ ಸಿ.ಓ.ಡಿ. ತನಿಖೆಯನ್ನೇ ಮಾಡಿಸಿತು. ಆದರೆ ಅದರಲ್ಲಿ ಸಾಬೀತಾಗಿದ್ದು ಸ್ಟೋರಿನಿಂದ ಡೈನಮೈಟು ಕಳವಾಗಿದ್ದು ಮಾತ್ರ.

ಈ ದೋಣಿ ಹೊಳೆಯ ಹಗರಣಗಳಿಗೆ ದೊಡ್ಡ ಚರಿತ್ರೆಯೇ ಇರಬಹುದು. ಇದರ ಹಳೆಯ ಹೆಸರೇ ರತ್ನಮೂಲ ಎಂದಾದರೆ ಈ ಘೋರಾರಣ್ಯದ ಕತೆಗಳಲ್ಲಿ ಒಂದು ಎಳ್ಳಿನಷ್ಟಾದರೂ ವಾಸ್ತವಾಂಶ ಇರಬಹುದೇನೋ! ಮಾವೋ ಬರೆದ ರೆಡ್ ಬುಕ್ಕಿನ ಏಳನೆ ಛಾಪ್ಟರ್ ಕಾರ್ಯಗತ ಮಾಡಲು ಎಲ್ಲಾ ಬಿಟ್ಟು ಸುರೇಶ ಇಲ್ಲಿಗೇ ಬಂದಿದ್ದು ಅವನ ವಿಧಿ ವಿಲಾಸ ಎಂದು ವಿಧಿಯಲ್ಲಿ ನಂಬಿಕೆ ಇಲ್ಲದವರಿಗೂ ಒಂದೊಂದು ಸಾರಿ ಅನ್ನಿಸಿಬಿಡುತ್ತದೆ.

ಬಂದ ಒಂದಷ್ಟು ದಿನ ಎಲ್ಲಾ ಅನ್ನ ತಿನ್ನುವ ಮನುಷ್ಯರಂತೆಯೆ ಸರ್ವೇ ಸಾಧಾರಣವಾಗಿ ವರ್ತಿಸುತ್ತಿದ್ದ ಇವನು ಇದ್ದಕಿದ್ದಹಾಗೇ ಅಡ್ಡದಾರಿ ಹಿಡಿದಿದ್ದು ಹೇಗೆ? ವಿಠ್ಠಲ ರೈಗಳು ಕೌತುಕದಿಂದ ಯೋಚಿಸಿದರು. ಬಿಡುವು ದೊರೆಯುತ್ತಿದ್ದಹಾಗೇ ದೋಣಿ ಹೊಳೆಯ ದಂಡೆಯಲ್ಲಿ ಕುಳಿತಿರುತ್ತಾನಂತಲ್ಲ! ಹಾಗಾದರೆ ನಿಜಕ್ಕೂ ಇವನಿಗೆ ಅಲ್ಲೇನಾದರೂ ಕೆಂಪು ಕಲ್ಲು ಸಿಕ್ಕಿರಬಹುದೆ? ಅಥವಾ ಕಟ್ಟು ಕತೆಗಳನ್ನು ಕಟ್ಟಿಕೊಂಡು ಕಾಲಹರಣ ಮಾಡುತ್ತಿದ್ದಾನೋ? ಗೌರಿ ಬಳಿಯಾದರೂ ಬಾಯಿ ಬಿಟ್ಟಿರಬಹುದೆಂದು ಅವಳನ್ನೂ ಕೇಳಿ ನೋಡಿದರು. ಅವಳೇನೋ ಇವನು ಮೀನು ಹಿಡಿಯಲು ಹೋಗುತ್ತಿದ್ದಾನೆಂದು ಹೇಳಿದಳು. ಈ ವಯಸ್ಸಿನಲ್ಲಿ ಸುರೇಶ ಹುಡುಗಿ ಹತ್ತಿರ ಮಾತಾಡುತ್ತ ಕಾಲ ಕಳೆಯುವುದಕ್ಕಿಂತ ಮೀನು ಹಿಡಿಯುವುದರಲ್ಲಿ ಹೆಚ್ಚಿ ಉತ್ಸಾಹ ತೋರಿಸುತ್ತಿರುವುದು ವಿಠ್ಠಲ ರೈಗಳಿಗೆ ವಿಪರೀತ ಅಸಹಜವಾಗಿ ಕಂಡಿತು. ಅವರಪ್ಪ ಇವನು ಗಾನ್‌ಕೇಸೆಂದು ಹೇಳಿದ್ದರಲ್ಲಿ ಏನೋ ಸತ್ಯಾಂಶ ಇದೆಯೆಂದೇ ಅವರಿಗೂ ಗುಮಾನಿ ಶುರುವಾಯ್ತು. ಈ ಮಂಕು ಹುಡುಗಿಗೆ ಏನೋ ಸುಳ್ಳು ಹೇಳಿದ್ದಾನೆಂದು ಅವರಿಗೆ ಸ್ಪಷ್ಟವಾಯ್ತು. ಆದರೆ ಅವನ ಮೇಲೆ ಶಂಕಿಸುವುದಾದರೆ ಏನೇನನ್ನೆಲ್ಲಾ ಶಂಕಿಸಬಹುದಲ್ಲವೆ! ಜುಗಾರಿಕ್ರಾಸಿನ ಭೂಗತ ವ್ಯವಹಾರಗಳ ದೆಸೆಯಿಂದ ಅವರಿಗೆ ಅವನ ನಡವಳಿಕೆಯ ಅರ್ಥ ಏನೆಂದು ಸ್ಪಷ್ಟವಾಗಿ ಊಹಿಸಲು ಮಾತ್ರ ಸಾಧ್ಯವಾಗಲಿಲ್ಲ.

ಏನಾದರಾಗಲಿ ಇನ್ನುಮೇಲೆ ಕೊಂಚ ಬಿಗಿಯಾಗಿ ಇರಬೇಕೆಂದು ನಿರ್ಧರಿಸಿದರು. ಗೌರಿಗೆ ಹೀಗೆ ವಯಸ್ಸಿಗೆ ಬಂದ ಹುಡುಗಿ ಅವನ ಜೊತೆ ಅಡ್ಡಾಡಿಕೊಂಡಿದ್ದರೆ ನೋಡಿದವರು ಏನೆನ್ನುತ್ತಾರೆಂದು ಕೂಗಾಡಿದರು.

* * * *

ಸುರೇಶ ದೋಣಿ ಹೊಳೆ ದಂಡೆಗೆ ಮೀನು ಹಿಡಿಯಲು ಹೋಗುತ್ತಿದ್ದುದು ನಿಜವಾಗಿತ್ತು!

ಅವನಿದ್ದ ಕಂಪೆನಿ ತೋಟ ಒಂದಾನೊಂದು ಕಾಲದಲ್ಲಿ ಯೂರೋಪಿಯನ್

ದೊರೆಗಳದ್ದು. ಅಲ್ಲಿ ಆಫೀಸಿನೊಳಗೆ ಲಾಟುಕಟ್ಟಿ ಬಿದ್ದಿದ್ದ ಹಳೆಯ ಕಾಲದ ಕಡತಗಳನ್ನೆಲ್ಲ ಒಮ್ಮೆ ಸುಮ್ಮನೆ ಕುತೂಹಲಕ್ಕೆ ಸುರೇಶ ತಿರುವಿ ನೋಡಿದ. ಸುಮಾರು ಮುನ್ನೂರು ವರ್ಷಗಳ ಹಿಂದಿನ ಹಳೆಯ ಕಂತೆಗಳು ಅವು. ಬಹುಪಾಲು ಅದರಲ್ಲಿ ಇದ್ದಿದ್ದು ತೋಟದ ಲೆಕ್ಕ, ಆಳುಕಾಳುಗಳ ಸಂಬಳದ ವಿಚಾರ ಇತ್ಯಾದಿಗಳೇ. ಅವುಗಳೊಡನೆ ಒಂದು ಧೂಳು ಹಿಡಿದ ಗಾಜಿನ ಬೀರಿನಲ್ಲಿ ಮೀನು ಹಿಡಿಯುವ ತರತರದ ಗಾಳಗಳೂ, ಕೋಲು, ದಾರಗಳೂ, ಜೊತೆಗೆ ಒಂದು ಡೈರಿ ಮತ್ತು ಯಾರೋ ಮಾಡಿಟ್ಟಿದ್ದ ವಿವರವಾದ ನೋಟ್ಸು ಟಿಪ್ಪಣಿಗಳ ಕಂತೆಕಂತೆ ಕಡತಗಳೂ ದೊರೆತುವು.

ಸುರೇಶನ ಸ್ವಧರ್ಮಗಳೆಲ್ಲ ಒಮ್ಮೆಲೆ ಮರುಕಳಿಸಿದುವು. ಗಂಗೂಲಿ ಒದಗಿಸಿದ್ದ ಮಾವೋ ಸಾಹಿತ್ಯವನ್ನು ಹೇಗೆ ಕುತೂಹಲ ಶ್ರದ್ಧೆಗಳಿಂದ ಓದಿದ್ದನೋ ಹಾಗೇ ಇದನ್ನೂ ಓದತೊಗಿದ. ಮೊದಲಲ್ಲಿ ಆ ಯೂರೋಪಿಯನ್ ಇಂಡಿಯಾ ದೇಶದ ಹೆಂಗಸರ ಮೇಲೆ ಮುಚ್ಚುಮರೆ ಇಲ್ಲದೆ ಬರೆದಿದ್ದ ಡೈರಿ ಅವನನ್ನು ಆಕರ್ಷಿಸಿದ್ದು. ಆದರೆ ಮುಂದುವರಿದಂತೆ ಆ ಡೈರಿ ಬರೆದ ಮನಸ್ಸು ಕೇವಲ ಭಾರತಕ್ಕೆ ಮಜಾಮಾಡಲು ಬಂದ ಒಬ್ಬ ಯೂರೋಪಿಯನ್ನನ ಮನಸ್ಸಿನಂತೆ ತೋರಲಿಲ್ಲ. ಆಗಿನ ಪಶ್ಚಿಮ ಘಟ್ಟದ ಕಾಡುಗಳ ಭೀಕರ ದುರ್ಗಮ ಸನ್ನಿವೇಶಗಳಲ್ಲಿ ಸಾವು ಬದುಕಿನ ಹೋರಾಟ ನಡೆಸಿ ಅವರು ಇಲ್ಲೆಲ್ಲಾ ಪ್ಲಾಂಟೇಶನ್‌ಗಳನ್ನು ಪ್ರಾರಂಭಿಸಿದ್ದು ಆ ಬರಹಗಳಲ್ಲಿ ಚೆನ್ನಾಗಿ ಗೊತ್ತಾಗುತ್ತಿತ್ತು. ಓದುತ್ತ ಓದುತ್ತ ಮುನ್ನೂರು ವರ್ಷ ಹಿಂದೆ ಬಾಳಿ ಬದುಕಿ ಯೋಚಿಸಿದ್ದ ಆ ಮನಸ್ಸು ಸುರೇಶನ ಅಂತಃಕರಣವನ್ನು ಅನುರಣಿಸುವಂತೆ ಮಾಡಿತು.

ಆದರೆ ಸುರೇಶ ಚಕಿತನಾಗಿದ್ದು ಆ ಟಿಪ್ಪಣಿ ಬರೆದಾತ ಮಹಷೀರ್ ಹೆಸರಿನ ಮೀನುಗಳಮೇಲೆ ಮಾಡಿಕೊಂಡಿದ್ದ ಟಿಪ್ಪಣಿ ನೋಡಿ. ದೋಣಿಹೊಳೆಯಲ್ಲಿ ಇರುವ ಇವು ಹಿಮಾಲಯದ ನದಿಗಳಿಂದ ಇಲ್ಲಿಯವರೆಗೆ ಬಂದಿದ್ದು ಹೇಗೆಂದು ಪದೇಪದೇ ಆಶ್ಚರ್ಯ ವ್ಯಕ್ತಪಡಿಸುತ್ತಾ, ಇವುಗಳನ್ನು ಗಾಳದಲ್ಲಿ ಹಿಡಿಯಲು ತಾನು ಮಿಕ್ಕ ಜೀವಮಾನವನ್ನೇ ವ್ಯಯಿಸಲು ತಯ್ಯಾರಾಗುತ್ತೇನೆಂದು ಅವನು ಪದೇಪದೇ ಮಹಷೀರ್‌ಗಳನ್ನು ಹೊಗಳುವಲ್ಲೆಲ್ಲಾ ಸೂಚಿಸುತ್ತಾ ಬಂದಿದ್ದ. ದೋಣಿಹೊಳೆಯ ಯಾವುಯಾವುದೋ ಉಪನದಿಗಳ ಹೆಸರುಗಳನ್ನೂ ಆ ದುರ್ಗಮ ಕಾಡಿನ ಭೀಕರ ಕೊರಕಲುಗಳಿಂದ ಅವು ಉದ್ಭವಿಸುವ ಬಗೆಯನ್ನೂ ಹೇಳುತ್ತ ಅವುಗಳ ಬಗ್ಗೆ ಕಾವ್ಯ ಬರೆದಿರುವ ಜಿರಾಜ ಕವಿ ಎನ್ನುವವನ ಅಭಿಪ್ರಾಯವನ್ನು ಅನುಮೋದಿಸಿದ್ದ.

ಯಾವನಿವನು ಜಿರಾಜ? ಕನ್ನಡ ಸಾಹಿತ್ಯವನ್ನೇ ಐದುವರ್ಷ ಅಭ್ಯಾಸ ಮಾಡಿದ ತನಗೂ ಗೊತ್ತಿಲ್ಲದ ಇವನು ಈ ಫರಂಗಿಯವನಿಗೆ ಹೇಗೆ ಗೊತ್ತಾದ? ಕನ್ನಡದ ಕಾವ್ಯ ಓದಿ ಸ್ಪಂದಿಸುವಷ್ಟು ಈ ಫರಂಗಿಯವನಿಗೆ ಭಾಷಾಪಾಂಡಿತ್ಯ ಇತ್ತೆ?

ಐದು ವರ್ಷ ಹಳೆಗನ್ನಡದ ಕಗ್ಗಗಳನ್ನೆಲ್ಲಾ ಓದಿದ್ದಕ್ಕೋ ಏನೋ ಜಿರಾಜ ಕವಿಯ ಬಗ್ಗೆ ಹೆಚ್ಚು ಯೋಚಿಸಲಿಲ್ಲ ಸುರೇಶ.

ಆದರೆ ಇವನ ಟಿಪ್ಪಣಿ ನೋಟ್ಸ್‌ಗಳ ಬಹುಭಾಗವನ್ನು ಆಕ್ರಮಿಸಿರುವ ಮಹಷೀರ್ ಎಂದರೆ ಎಂಥದು! ಸುರೇಶನಿಗೆ ಕುತೂಹಲ ತಡೆಯಲಾಗಲಿಲ್ಲ. ಅಲ್ಲೇ ಇದ್ದ ಗಾಳ ದಾರಗಳ ಸಹಾಯದಿಂದ ಅನೇಕ ದಿನ ಹೊಳೆದಂಡೆಯಲ್ಲಿ ಲಾಟರಿ ಹೊಡೆದು ಸುಸ್ತಾಗಿ ಕ್ವಾಟ್ರಸ್ಸಿಗೆ ಬಂದು ಮಲಗಿದ. ಮೀನು ಹಿಡಿಯುವುದರಲ್ಲಿ ಯೂರೋಪಿಯನ್ನರಿಗಿರುವ ಶ್ರದ್ಧಾಸಕ್ತಿಗಳ ಬಗ್ಗೆ ಅವನಿಗೆ ವಿಪರೀತ ಅಚ್ಚರಿಯಾಯ್ತು. ಹೆಣ್ಣು ಹೊನ್ನು ಮಣ್ಣು ಮೂರೇ ಮನುಷ್ಯನಿಗೆ ತಲೆಕೆಡಿಸುವುದೆಂದು ತಿಳಿದಿದ್ದರೆ ಇದ್ಯಾವುದೋ ನಾಲ್ಕನೆಯದೊಂದರ ಹಿಂದೆ ಬಿದ್ದಿದಾನಲ್ಲ ಈ ಮೂರ್ಖ ಎಂದು ಡೈರಿ ಬರೆದವನ ಬಗ್ಗೆ, ಹೊಳೆ ದಂಡೆಯಿಂದ ಹಿಂದರುಗಿದಾಗೆಲ್ಲ ಅವನು ಆಶ್ಚರ್ಯಪಡುತ್ತ ಯೋಚಿಸಿ ಮಲಗಲುತ್ತಿದ್ದ.

ಆದರೆ ಗೌರಿಯನ್ನು ಬಿಟ್ಟರೆ ಅವನಿಗೆ ಅಲ್ಲಿ ಬೇರೆ ಆಸಕ್ತಿಗಳು ಯಾವುದೂ ಇಲ್ಲದ್ದರಿಂದಲೋ ಏನೋ ಆ ಯೂರೋಪಿಯನ್ನನ ಡೈರಿಯನ್ನು ಓದುತ್ತಲೇ ಹೋದ. ನಿಷ್ಕಾರಣವಾಗಿ ಆ ಪುರಾತನ ಕಡತಗಳು ಅವನ ಕುತೂಹಲವನ್ನು ಕೆರಳಿಸುತ್ತಲೇ ಹೋದುವು. ಹೊಳೆ ದಂಡೆಯ ನೀರವ ಏಕಾಂತದಲ್ಲಿ ಕುಳಿತು ಮುನ್ನೂರು ವರ್ಷಗಳ ಹಿಂದಿನ ಸನ್ನಿವೇಶ ಮನಃಸ್ಥಿತಿಗಳನ್ನು ಕಲ್ಪಿಸಿಕೊಳ್ಳುವುದು ಏನೋ ಒಂದುಥರ ರೋಮಾಂಚಕವಾಗಿ ಕಂಡಿತ್ತು ಅವನಿಗೆ.

ಒಂದು ದಿನ ಒಂದು ವಿಚಿತ್ರ ಘಟನೆ ಹಠಾತ್ತಾಗಿ ಸಂಭವಿಸಿ ಸುರೇಶನಿಗೆ ನೋಟ್ಸಿನ ಪ್ರತಿಯೊಂದು ಪದವೂ ರೇಡಿಯಂ ಡಯಲಿನಹಾಗೆ ಸ್ವಯಂಪ್ರಭೆ ಬೀರತೊಡಗಿತು.

ಸುರೇಶ ಕಾಡಿನೊಳಗೆ ಬಹಳ ದೂರ ಬಂದಿದ್ದ. ಆ ಕಾಡಿಗೋ ಅಥವಾ ಆ ಹೊಳೆಗೋ ಏನೋ ಒಂದು ವಿಚಿತ್ರ ಅಲೌಕಿಕತೆ ಇದೆ ಎನ್ನಿಸುತ್ತಿತ್ತು. ನದಿಯ ಜಾಡಿನಲ್ಲಿ ಕಾಡಿನ ಒಳಗೊಳಗೆ ಹೋದಹಾಗೂ ಮನಷ್ಯನ ಸುಪ್ತಪ್ರಜ್ಞೆಯ ಆಳಾಳಕ್ಕೆ ಇಳಿದಂತೆ! ಸಾವಿನ ನಿಗೂಢತೆಯನ್ನು ಅರಸಿದಂತೆ ಅನ್ನಿಸುತ್ತಿತ್ತು. ಸುತ್ತ ಚಿತ್ರವಿಚಿತ್ರವಾದ ಕರಿಯ ಕಲ್ಲುಗಳು! ಮಿಲಿಯಾಂತರ ವರ್ಷಗಳಿಂದ ನೀರು ಹರಿದು ಹರಿದು ಕನ್ನಡಿಯಷ್ಟು ನುಣ್ಣಗಾಗಿ ಕನ್ನಡಿಯಂತೆಯೇ ಹೊಳೆಯುತ್ತಿದ್ದವು. ಅವುಗಳ ನಡುವೆ ತೂರಿದ ಹತ್ತಿಯ ಮುದ್ದೆಗಳಂತೆ ಭೋರ್ಗರೆಯುತ್ತ ದೋಣಿಹೊಳೆ ನುಗ್ಗಿ ವಿಸ್ತಾರವಾದ ಕಮರಿಯೊಂದರಲ್ಲಿ ವಿರಮಿಸಿ ಮುಂದುವರಿಯುತ್ತಿತ್ತು. ಆ ಮಡುವಿಗೆ ಗಿರಿಗಿರಿ ತಿರುಗಿಸಿ ಸುಯ್ದು ಗಾಳ ಎಸೆದಕೂಡಲೆ ದಾರಕ್ಕೆ ಕಟ್ಟಿದ್ದ ಬೆಳ್ಳಿಯ ಸ್ಪೂನು ಫಳಫಳ ಮಿಂಚಿನ ಮರಿಯಂತೆ ಸಂಜೆಯ ಇಳಿಬಿಸಿಲಿನಲ್ಲಿ ಮಿನುಗುತ್ತ ಸುಯ್ಯನೆ ಹಾರಿ ಮಡುವಿನ ಆಳದ ನೀಲಿಯ ನೀರಿಗೆ ಬಿತ್ತು. ಸುರೇಶನಿಗೆ ಬಿದ್ದಿದ್ದಷ್ಟೆ ಗೊತ್ತು! ಮುಂದೇನಾಯ್ತೆಂಬುದೆಲ್ಲಾ ಅಸ್ಪಷ್ಟ! ನೀರಿನ ನಡುವೆ ದೊಡ್ಡ ಆಸ್ಫೋಟನೆಯಾದಂತಾಗಿ ಯಾರೋ ಧಿಕ್ಕನೆ ಎಳೆದಂತೆ, ತಳ್ಳಿದಂತೆ! ಸುರೇಶ ತತ್ತರಿಸಿ ತಡಬಡಾಯಿಸಿ ಚೇತರಿಸಿಕೊಂಡು, ಏನಾಯ್ತೆಂದು ನೋಡುವುದರೊಳಗೆ ಕೈಯ್ಯಲ್ಲಿದ್ದ ಗಾಳ, ದಾರ ಎಲ್ಲ ಮಾಯ!

ಯಾಕೋ ಏನೋ ಎದೆ ಡವಡವ ಹೊಡೆದುಕೊಳ್ಳುತ್ತಿತ್ತು. ನಿರ್ಭೀತಿಯಿಂದಲೇ ನಿಂತಿದ್ದ ಅವನ ಕೈ ಕಾಲುಗಳೂ ಸಣ್ಣಗೆ ನಡುಗುತ್ತಿದ್ದುವು. ಅಲ್ಲಿನ ನಿಃಶಬ್ದವೋ! ನೀರವ ಏಕಾಂತವೋ! ಕಾಲಪ್ರವಾಹದಂತೆ ಯೂರೋಪಿಯನ್ನನ ಕಣ್ಣೆದುರೂ ಇದೇರೀತಿ ಹರಿಯುತ್ತಲೇ ಇದ್ದ ದೋಣಿಹೊಳೆಯ ವಿಚಿತ್ರ ಸನ್ನಿಧಿಯೋ! ಸುರೇಶ ಅದನ್ನೆಲ್ಲ ವಿಶ್ಲೇಷಣೆ ಮಾಡಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಲೇ ಇಲ್ಲ. ಆದರೆ ಅವತ್ತಿನಿಂದ ತಟಕ್ಕನೆ ಸುರೇಶನಿಗೆ ಯಾಕೆ ಮಹಷೀರ್ ಮೀನು ಯುರೋಪಿಯನ್ನನ ಟಿಪ್ಪಣಿಯ ಬಹುಭಾಗ ಆಕ್ರಮಿಸಿದೆ ಎಂದು ಅರ್ಥವಾಗತೊಡಗಿತು. ಯಾಕೆ ಜೀವಮಾನವನ್ನೆ ಮುಡಿಪಾಗಿಡುತ್ತೇನೆಂದು ಪದೇ ಪದೇ ಅವನು ಬರೆದುಕೊಂಡಿದ್ದಾನೆ ಅರ್ಥವಾಯ್ತು. ಆ ಹಳೆಯ ಕಡತಗಳಿಗೆಲ್ಲ ಇದ್ದಕ್ಕಿದ್ದಂತೆ ಪ್ರಾಣಸಂಚಾರವಾಗಿ ಅದನ್ನು ಬರೆದ ಯೂರೋಪಿಯನ್ನನ ಆಲೋಚನೆಗಳು ಜೀವ ತುಂಬಿ ತುಡಿಯಲಾರಂಭಿಸಿದವು.

ಆದರೆ ಇತರರಿಗೆ ಮಾತ್ರ ಇವನಿಗೆ ಏನಾಗಿದೆಯೆಂದು ಅರ್ಥವಾಗಲಿಲ್ಲ. ಏಕೆಂದರೆ ಅದರ ವಿಷಯ ಸುರೇಶ ಯಾರಲ್ಲಿಯೂ ಚಕಾರ ಎತ್ತಲಿಲ್ಲ. ಅವನಿಗೆ ಹೇಳಬೇಕೆಂದು ಅನ್ನಿಸಲೂ ಇಲ್ಲ.

ಆ ಹಳೆಯ ಹಾಳು ಕಡತಗಳನ್ನು ಬೆದಕುತ್ತಾ, ಯಾರಿಗೂ ಅರ್ಥವಾಗದ ವಿಚಿತ್ರ ವ್ಯವಹಾರಗಳಲ್ಲಿ ತೊಡಗಿಕೊಂಡಿರುವ ಸುರೇಶನನ್ನು ನೋಡಿ ದಿನದಿಂದ ದಿನಕ್ಕೆ ಇವನು ಗಾನ್ ಕೇಸ್ ಎನ್ನುವುದು ವಿಠ್ಠಲ ರೈಗಳಿಗೆ ಖಚಿತವಾಗುತ್ತ ಹೋಯ್ತು. ಈ ಹಲ್ಲಂಡೆ ಮುಂಡೇಗಂಡನಿಗೆ ಮಗಳನ್ನು ಕೊಟ್ಟರೆ ಮಗಳನ್ನು ಶ್ಮಶಾನಕ್ಕೆ ಕಳಿಸಿದ ಹಾಗೇ ಎಂದು ತೀರ್ಮಾನಿಸಿ ತಮ್ಮ ಎಚ್ಚರಿಕೆಯನ್ನು ನಿರ್ಲಕ್ಷಿಸಿ ಅವನೊಡನೆ ಮಾತಾಡಲು ಹೋಗುತ್ತಿದ್ದ ಮಗಳ ಮೇಲೆ ಸಿಕ್ಕಾಪಟ್ಟೆ ರೇಗಾಡಿದರು.

ಅಲ್ಲಿಂದಾಚೆಗೆ ಸುರೇಶನಿಗೂ ಅವನಿಗೆ ಕೆಲಸ ಕೊಟ್ಟ ವಿಠ್ಠಲ ರೈಗಳಿಗೂ ಸಂಬಂಧ ವಿನಾಕಾರಣ ಸೂಕ್ಷ್ಮವಾಗುತ್ತಾ ಹೋಯ್ತು. ಗೌರಿಯನ್ನು ಸುರೇಶನಿಂದ ವಿಮುಖವಾಗಿಸಲು ಬೇರೆಬೇರೆ ತರದ ಒತ್ತಡಗಳನ್ನು ಅವರು ತರತೊಡಗಿದರು. ಸುರೇಶ ದೋಣಿ ಹೊಳೆಯ ಕಡೆ ಗಮನಹರಿಸುವುದನ್ನೂ ನಿಲ್ಲಿಸಿ ಹೊಸದಾಗಿ ಶುರುವಾದ ಈ ಯುದ್ಧರಂಗದ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿ ಬಂತು.

# ಇಲಿ ಬೋನು! - ೯



ಗೌರಿ ಬಸ್ಸಿನ ಗಡಿಬಿಡಿಯಲ್ಲಿ ಸುರೇಶನ ಕಡೆ ನೋಡಿದಳು. ಸುರೇಶನಿಗೂ ಅವಳಿಗೂ ನಡುವೆ ಯಾರೋ ಇಬ್ಬರು ಅಡ್ಡ ಕುಳಿತಿದ್ದರಿಂದ ಸುರೇಶ ಅವಳಿಗೆ ಕಾಣುತ್ತಿರಲಿಲ್ಲ. ಅಡ್ಡ ಕುಳಿತಿದ್ದ ಅವರಿಬ್ಬರ ಮುಖಗಳನ್ನೇ ನೋಡಿದಳು. ಅವರನ್ನು ನೋಡಿದ ಕೂಡಲೆ ಅವಳಿಗನ್ನಿಸಿದ್ದು ಮೊದಲನೆಯದು ಇವರಿಬ್ಬರೂ ಇಲ್ಲಿಗೆ ಅಪರಿಚಿತರು! ಎರಡನೆಯದು ಇವರಿಬ್ಬರೂ ಒಳ್ಳೆಯವರಲ್ಲ ಎಂದು. ಹುಡುಗಿಯರನ್ನು ಹಿಡಿದು ಬೊಂಬಾಯಿಗೆ ಸಾಗಿಸುವುದರಿಂದ ಹಿಡಿದು ಗಾಂಜಾ ಅಫೀಮಿನವರೆಗೆ ಇಲ್ಲಿ ನಡೆಯುವ ನೂರಾರು ವ್ಯವಹಾರಗಳಲ್ಲಿ ಯಾವುದೋ ಒಂದಕ್ಕೆ ಸಂಬಂಧಿಸಿದವರು ಎಂದು ಅವಳಿಗೆ ಸ್ಪಷ್ಟವಾಗಿ ಅನ್ನಿಸಿತು. ಆದರೆ ಅವಳಿಗೆ ಹೆದರಿಕೆಯೇನೂ ಆಗಲಿಲ್ಲ. ಸ್ತ್ರೀ ಸಹಜವಾದ ಅದೊಂದು ಗುಣ ಮಾತ್ರ ಅವಳಲ್ಲಿರಲೇ ಇಲ್ಲ. ಮಂಗಳೂರಿನಲ್ಲಿ ಮೈಕ್ರೋ ಬಯಾಲಜಿ ಓದುತ್ತಾ ಇದ್ದವಳು ರಜಕ್ಕೆ ಊರಿಗೆ ಬಂದಾಗ ಅವಳಿಗೆ ಏನೆನ್ನಿಸಿತೋ ಏನೋ, ಮತ್ತೆ ಓದಲು ಹೋಗಲೇ ಇಲ್ಲ. ರೈಗಳು ಒಂದೆರಡು ಸಾರಿ ಹೇಳುವುದೇನೋ ಹೇಳಿದರು, ಇಷ್ಟು ಓದಿ ಈಗ ಕೈ ಬಿಡಬಾರದು ಎಂದು. ಆದರೆ ಅವರಿಗೆ ಚೆನ್ನಾಗಿ ಗೊತ್ತಿತ್ತು ಇವಳು ಒಂದುಸಾರಿ ನಿರ್ಧರಿಸಿದರೆ ಮೇಲೆ ಯಾರ ಮಾತನ್ನೂ ಕೇಳುವ ಜಾತಿಯೇ ಅಲ್ಲ ಎಂದು. ಸುರೇಶನಿಂದ ವಿಮುಖಗೊಳಿಸಲು ಪ್ರಯತ್ನಿಸಿ

ದಾಗಲೂ ಅವರು ಇದೇ ತೊಂದರೆ ಅನುಭವಿಸಬೇಕಾಯ್ತು. ಎಂತೆಂಥವರನ್ನೋ ಮದುವೆಯಾಗುವುದಿಲ್ಲೆಂದು ತಿರಸ್ಕರಿಸಿದವಳು ಸುರೇಶನನ್ನು ಬಿಟ್ಟರೆ ಯಾರನ್ನೂ ಆಗುವುದಿಲ್ಲೆಂದು ಹಠ ಹಿಡಿದು ಕುಳಿತಳು. ಮದುವೆ ಅನಿವಾರ್ಯವಾದಾಗ ಹೆಂಡತಿ ಕಟ್ಟಿಕೊಂಡು ಬೀದಿಗೆ ಬಿದ್ದಾನೆಂದು ಸುರೇಶನ ತಂದೆಯೇ ಮುಂದಾಗಿ ಅವನಿಗೆ ಅವನ ಪಾಲೆಂದು ಹತ್ತು ಲಕ್ಷ ಕೊಟ್ಟು ರಬ್ಬರ್ ತೋಟ ಮಾಡಿರೆಂದು ಗಂಡ ಹೆಂಡರಿಗೆ ದಿನವೆಲ್ಲಾ ಬುದ್ಧಿವಾದ ಹೇಳಿದ್ದರು.

ಸುರೇಶ ರಬ್ಬರ್ ತೋಟ ಮಾಡಲು ಕಾಡನ್ನೇನೋ ಕೊಂಡ, ಸುಮ್ಮನೆ ಹತ್ತು ಲಕ್ಷ ಬ್ಯಾಂಕಿನಲ್ಲಿ ಬಿಸಾಕಿದ್ದರೆ ಸುರೇಶನಿಗೆ ಹೊಟ್ಟೆಪಾಡಿಗೆ ತಕ್ಕಷ್ಟು ಬಡ್ಡಿ ಬರುತ್ತಿತ್ತು! ಅದು ಬಿಟ್ಟು ತೋಟ ಮಾಡಲು ಕಾಡು ಕೊಂಡಿದ್ದೆ ದೊಡ್ಡ ಅಚಾತುರ್ಯಕ್ಕೆ ಕಾರಣವಾಗಿದ್ದು. ಗಂಡ ಹೆಂಡತಿ ಇಬ್ಬರಲ್ಲಿ ಒಬ್ಬರಿಗಾದರೂ ಲೋಕಜ್ಞಾನ ಇದ್ದಿದ್ದರೆ ಹೇಗೋ ಇವರ ಸಂಸಾರ ನೌಕೆ ಸುಗಮವಾಗಿ ಸಾಗುವ ಸಂಭವ ಇತ್ತು. ಆದರೆ ಇಬ್ಬರೂ ಒಂದೇ ತರದವರು. ಸುರೇಶನ ಕನಸುಗಾರಿಕೆಗೆ, ಹುಚ್ಚಾಟಗಳಿಗೆ ಮೆಚ್ಚಿಯೇ ಇವಳು ಅವನನ್ನು ಕಟ್ಟಿಕೊಂಡಿರಬೇಕಾದರೆ ಯಾರೇನು ಮಾಡಲು ಸಾಧ್ಯ? ಕಾಡು ಕೊಂಡಿದ್ದು ಹಾರುವ ಮಂಗಕ್ಕೆ ಏಣಿ ಹಾಕಿಕೊಟ್ಟಂತಾಗಿ ಇಬ್ಬರೂ ದಿನಕ್ಕೊಂದೊಂದು ಯೋಜನೆ ಹಾಕಿ ಕಾಡು ಕೊಂಡು ಉಳಿದಿದ್ದ ದುಡ್ಡಷ್ಟನ್ನೂ ಮಾಯ ಮಾಡಿದರು. ರಬ್ಬರ್ ಗಿಡ ಒಂದನ್ನು ಬಿಟ್ಟು ಮಿಕ್ಕಿದ್ದೆಲ್ಲಾ ಹಾಕಿದರು. ಸೀ ಐಲೆಂಡ್ ಕಾಟನ್ನು, ಕಾಶ್ಮೀರದ ಕಂಟೆಂಡರ್ ಬೀನ್ಸು, ಹಾಲೆಂಡಿನ ಆಲೂಗಡ್ಡೆ, ಆಫ್ರಿಕಾದ ಅಸ್ಸಿರಿಯಾ ಮ್ಯುಟುಂಡ ನೆಲಗಡಲೆ, ಇವುಗಳಲ್ಲದೆ ಕಾಶ್ಮೀರದಿಂದ ಕೇಸರಿ, ಸಿಲೋನಿನಿಂದ ದಾಲ್ಚಿನ್ನಿ, ಇನ್ನೂ ಎಂತೆಂಥವೋ ಪ್ರಯೋಗಗಳು ನಡೆದುವು. ಅವರ ಲೆಕ್ಕಾಚಾರದ ಪ್ರಕಾರವೇ ಎಲ್ಲ ನಡೆದಿದ್ದರೆ ಇಷ್ಟು ಹೊತ್ತಿಗೆ ಅವರಿಬ್ಬರೂ ಕೋಟ್ಯಾಧಿಪತಿಗಳೇ ಸರಿ. ಲೆಕ್ಕಾಚಾರಗಳನ್ನೆಲ್ಲ ಅವರು ಇನ್ನೊಬ್ಬರ ಬಾಯಿ ಮುಚ್ಚಿಸಲಿಕ್ಕಾಗಿ ಕೊಡುತ್ತಿದ್ದುದೇ ಹೊರತು ಅವರಾದರೂ ಅದನ್ನು ನಂಬಿದ್ದರೆ ಹೇಳಬರುವುದಿಲ್ಲ. ಜೊತೆಗೆ ಮಾಡಿದ್ದೆಲ್ಲ ಮಣ್ಣುಗೂಡಿತಲ್ಲ ಎಂದು ಒಂದು ಚೂರಾದರೂ ಬೇಸರವಿಲ್ಲದೆ ಒಂದನ್ನು ಕೈಬಿಟ್ಟು ಇನ್ನೊಂದು ಹುಚ್ಚಾಟ ಅವರು ಪ್ರಾರಂಭಿಸುತ್ತಿದ್ದುದನ್ನು ನೋಡಿ ಆಸುಪಾಸಿನವರಿಗೆಲ್ಲಾ ಓದಿದವರು ಮನೆ ಹಾಳುಮಾಡುತ್ತಾರೆಂಬ ನಾಣ್ಣುಡಿಯಲ್ಲಿ ಸಂಪೂರ್ಣ ನಂಬಿಕೆ ಬಂತು. ಆ ಕಾಡಿನಲ್ಲಿ ಬಿಸಾಡಿದಲ್ಲೆಲ್ಲಾ ಹುಟ್ಟಿಕೊಂಡು ಬೆಳೆಯುತ್ತಿದ್ದ ಏಲಕ್ಕಿ ಇಲ್ಲದಿದ್ದರೆ ಸುರೇಶನಿಗೆ ಹೊಟ್ಟೆಪಾಡಿಗೂ ತೊಂದರೆ ಇತ್ತೆಂಬುದರಲ್ಲಿ ಅನುಮಾನವೇ ಇಲ್ಲ. ಕೋತಿ, ಅಳಿಲು, ಹಕ್ಕಿ, ತಿಂದು ಹಿಕ್ಕೆ ಹಾಕಿದಲ್ಲೆಲ್ಲ ಏಲಕ್ಕಿ ಹುಟ್ಟಿ, ಧರ್ಮಕ್ಕೆ ದುಡ್ಡು ಸಿಕ್ಕ ಹಾಗೆ ಸುರೇಶನಿಗೆ ಸಿಗುತ್ತಿತ್ತು. ಆದರೆ ಎಷ್ಟು ದುಡ್ಡು ಬಂದರೂ ಏನುತಾನೆ ಪ್ರಯೋಜನ? ಅದು ಬರುವುದಕ್ಕೂ ಮೊದಲೆ ಅದಕ್ಕೆ ಬೇಕಾದಷ್ಟು ದಾರಿಗಳು ಇವರ ತಲೆಯೊಳಗೆ ರೆಡಿ ಇರುತ್ತಿದ್ದುವು. ಇವರಿಬ್ಬರಿಗೂ ಮನೆ ಕಡೆ ದುಡ್ಡು ಕಾಸು ಚೆನ್ನಾಗಿರುವುದರಿಂದಲೇ

ಈ ರೀತಿ ಐಲುಪೈಲು ವ್ಯವಹಾರ ಮಾಡಿಕೊಂಡು ಕಾಲಕಳೆಯುತ್ತಿದ್ದಾರೆಂದು ರೈಗಳೂ ಸುರೇಶನ ತಂದೆಯೂ ತಿಳಿದಿದ್ದರೂ ಅವರ ಊಹೆಗೆ ವ್ಯತಿರಿಕ್ತವಾಗಿ ಇವರು ದುಡ್ಡಿಗಾಗಿ ಯಾವತ್ತೂ ಯಾರ ಮನೆಯ ಮೆಟ್ಟಿಲನ್ನೂ ಹತ್ತಲಿಲ್ಲ. ಬೀಗರು, ಶೆಡ್ಡಕರು, ಬ್ಯಾಂಕಿನಲ್ಲಿ ಶ್ಯೂರಿಟಿ ಕೊಟ್ಟವರು, ಎಲ್ಲ ಇವರ ಆಟ ಇವತ್ತು ಮುಗಿಯಬಹುದು, ನಾಳೆ ಮುಗಿಯಬಹುದು ಎಂದು ನಿರೀಕ್ಷಿಸುತ್ತಲೇ ಇದ್ದರೂ ಇವರ ಸಂಸಾರ ನೌಕೆ ಕ್ಯಾಪ್ಟನ್ ಖುದ್ದೂಸನ ಘಾಟಿ ಎಕ್ಸ್‌ಪ್ರೆಸ್ ತರ ನಿಲ್ಲದೆ ಸಾಗುತ್ತಲೇ ಇತ್ತು.

ಗೌರಿ ಅವರಿಬ್ಬರು ಆಗಂತುಕರ ಮುಖ ನೋಡಿ ಏನನ್ನೋ ಯೋಚನೆ ಮಾಡುತ್ತಿರಬೇಕಾದರೆ ಒಂದು ಪೋಲೀಸ್ ಜೀಪು ಹಿಂದುಗಡೆಯಿಂದ ಒಂದೇಸಮ ಹಾರನ್ ಮಾಡಿದ ಸದ್ದು ಕೇಳಿಸಿತು. ಎತ್ತಿನ ಗಾಡಿ ತರ ಸಾಗುತ್ತಿದ್ದ ಖುದ್ದೂಸ್ ಎಕ್ಸ್‌ಪ್ರೆಸ್ ಹಿಂದೆ ಧೂಳು ಕುಡಿಯುತ್ತ ಯಾರಾದರೂ ಎಷ್ಟು ದೂರ ತಾನೆ ಬರಲು ಸಾಧ್ಯ. ಜೀಪಿನಲ್ಲಿದ್ದವರೆಲ್ಲ ಸಿಕ್ಕಾಪಟ್ಟೆ ಅಸಹನೆಯಿಂದ ಹಾರನ್ ಮಾಡಿ ಕೈ ಬೀಸಾಡಿದ್ದನ್ನು ನೋಡಿದ ಕಂಡಕ್ಟರ್ ಬಸ್ಸಿನೊಳಗಿಂದಲೇ "ಸೆಡ್ ಸೈಡ್" ಎಂದು ಅಬ್ಬರಿಸಿ ಕೂಗಿದ. ಜೀಪು ಮುಂದೆ ಹೋಯ್ತು.

ದೌಲತ್ ರಾಮ್, ಕುಟ್ಟಿ ಇಬ್ಬರೂ ಮುಖಮುಖ ನೋಡಿಕೊಂಡರು. ಬಸ್ಸು ಇನ್ನೊಂದೆರಡು ಮೈಲು ದೂರ ಮುಂದುವರಿದಾಗ ದೂರದ ಘಾಟಿ ತಿರುಗಣೆಯಲ್ಲಿ ಜೀಪು ನಿಲ್ಲಿಸಿಕೊಂಡು ಕಾಖಿ ಸಮವಸ್ತ್ರಧಾರಿಗಳು ನಿಂತಿದ್ದರು. ಅದನ್ನು ಕಂಡವನೇ ಬಸ್ಸಿನೊಳಗೆ ಕುಳಿತಿದ್ದ ಕುಟ್ಟಿ ಬೋನಿನೊಳಗೆ ಸಿಕ್ಕಿಕೊಂಡ ಕಾಡು ಮೃಗದಂತೆ ಮಿಸುಕಾಡಿದ. ದೌಲತ್ ರಾಮನಿಗೂ ಕೊಂಚ ಗಾಬರಿಯಾದರೂ ಅದನ್ನು ಕೊಂಚವೂ ತೋರಿಸಿಕೊಳ್ಳದೆ ಸಮಾಧಾನದಲ್ಲಿರು ಎನ್ನುವಂತೆ ಕುಟ್ಟಿಯ ಬೆನ್ನು ತಟ್ಟಿದ.

ಅವರನ್ನೆ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಗೌರಿಗೆ ಪೋಲೀಸ್ ಜೀಪು ಅವರನ್ನು ಮೀರಿಸಿ ಮುಂದೆ ಹೋಗುತ್ತಲೂ ಈ ಆಗಂತುಕರ ಚರ್ಯೆಯಲ್ಲಾದ ಸೂಕ್ಷ್ಮ ಬದಲಾವಣೆಗಳೆಲ್ಲ ಚೆನ್ನಾಗಿ ಗೊತ್ತಾಯ್ತು.

ಬಸ್ಸು ಹತ್ತಿರಾದಂತೆ ಜೀಪಿನ ಪಕ್ಕ ನಿಂತಿದ್ದ ಖಾಕಿ ಧಾರಿಗಳು ಬಸ್ಸನ್ನೇ ಗಮನಿಸುತ್ತ ನಿಂತವರು ಇನ್ನೇನು ಕೈ ಅಡ್ಡಮಾಡುತ್ತಾರೆನ್ನುವಂತೆ ಅರುಗಾದರೂ ಬಸ್ಸಿಗೆ ನಿಲ್ಲಿಸಲು ಹೇಳಲಿಲ್ಲ. ಬಸ್ಸು ಕೊಯ್ಯಯ್ಯೋ ಎಂದು ಕೂಗುತ್ತ ಏದುಸಿರು ಬಿಡುತ್ತ ಅವರನ್ನು ದಾಟಿ ಮುಂದೆ ಹೋಯ್ತು. ಬಸ್ಸಿನ ಹಿಂಭಾಗದ ಗಾಜಿನಿಂದ ದೂರಾಗುತ್ತಿದ್ದ ಜೀಪನ್ನೂ ಅದರ ಸಿಬ್ಬಂದಿಯನ್ನೂ ದಿಟ್ಟಿಸಿ ನೋಡಿದ ದೌಲತ್ ರಾಮನ ಮುಖದಲ್ಲಿ ಒಂದು ಕಿರುನಗೆ ಹೌದೋ ಅಲ್ಲವೋ ಎನ್ನುವಂತೆ ಕ್ಷೀಣವಾಗಿ ಮಿಂಚಿತು. ಕುಟ್ಟಿಯ ಬೆನ್ನನ್ನು ಅವನು ಮತ್ತೊಮ್ಮೆ ತಟ್ಟಿದ್ದು ಯಾರ ಗಮನಕ್ಕೂ ಬರಲಿಲ್ಲ.

ಆದರೆ ಕುಟ್ಟಿಗೆ ಮಾತ್ರ ಕೊಂಚವೂ ಸಮಾಧಾನವಾಗಲಿಲ್ಲ. ಏನೋ ಅಪಾಯದ ವಾಸನೆ ಅವನಿಗೆ ಸ್ಪಷ್ಟವಾಗಿ ಹೊಡೆಯುತ್ತಿತ್ತು. ಪ್ಯಾಕೆಟ್ಟು ತರುವಲ್ಲೇ ಆ ಹುಡುಗಿ

ನಿಂತಿದ್ದು, ಅಲ್ಲಿ ಕಾಯುತ್ತ ಸಮಯ ಹಾಳು ಮಾಡಬೇಕಾಗಿ ಬಂದಿದ್ದು, ಅವಳನ್ನು ಮುಗಿಸದೆ ದೌಲತ್ ರಾಮ್ ದುಡ್ಡು ಕೊಟ್ಟು ಕಳಿಸಿದ್ದು, ಆಮೇಲೆ ಕಾಡೊಳಗೆ ಕಾರು ನಿಲ್ಲಿಸಿ ಕಾರಿಗೆ ವಿದಾಯ ಹೇಳಬೇಕಾಗಿ ಬಂದಿದ್ದು, ಎಲ್ಲ ಅಪಶಕುನಗಳು! ಪೋಲೀಸರಿಗೆ ಜಾಡು ಹಿಡಿದು ಬರಲು ಒಳ್ಳೆಯ ಹೆಜ್ಜೆಗುರುತುಗಳ ಸರಣಿಯನ್ನೇ ನಿರ್ಮಿಸಿ ಬಂದಿದ್ದೇವೆ. ಒಂದು ಚೂರು ಎಡವಟ್ಟಾದರೂ ಹೇಗೂ ನಮಗೆ ಸಾವೇ ಗತಿ! ಪೋಲೀಸರ ಕೈಗೆ ಸಿಕ್ಕಿಬಿದ್ದರೂ ಸತ್ತಹಾಗೇ, ತಪ್ಪಿಸಿಕೊಂಡು ನಮ್ಮವರ ಕೈಗೆ ಸಿಕ್ಕಿಕೊಂಡರೂ ಸತ್ತಹಾಗೇ! ಸದಾ ಸಾವಿನ ನೆರಳಿನಲ್ಲಿ ಭಯದಲ್ಲಿ ಎಷ್ಟು ದಿನ ತಾನೇ ಬದುಕಿರಲು ಸಾಧ್ಯ? ಈಗಲೇ ನನಗೆ ರಕ್ತದೊತ್ತಡ ಇದೆ ಎಂದು ಡಾಕ್ಟರು ವಾರ್ನಿಂಗ್ ಕೊಟ್ಟಿದ್ದಾರೆ. ಕೈಗೊಂದಷ್ಟು ದುಡ್ಡಾದಕೂಡಲೇ ಈ ದಂಧೆಗೆ ವಿದಾಯ ಹೇಳಬೇಕೆಂದು ಮಾಡಿದ್ದೆನಲ್ಲಾ! ಎಂಥ ಮೂರ್ಖ ನಾನು. ಈಗ ಜೀವ ಉಳಿಸಿಕೊಂಡು ಪಾರಾಗಲು ನನಗೆ ಉಳಿದಿರುವುದೊಂದೇ ದಾರಿ. ಹೇಗಾದರೂ ಮಾಡಿ ದೇಶ ಬಿಟ್ಟು ಕೊಲ್ಲಿ ದೇಶಗಳ ಕಡೆಗೆ ಓಡಿಹೋಗುವುದು. ಅದಾದರೂ ಸಾಧ್ಯವೆ? ಈ ಭೂಗತ ಗ್ಯಾಂಗುಗಳ ವ್ಯಾಪ್ತಿ ವಿಸ್ತೀರ್ಣ ಎಷ್ಟೆಂದು ಯಾರಿಗೆ ಗೊತ್ತು? ಸತ್ತು ಸ್ವರ್ಗಕ್ಕೆ ಹೋದರೂ ಬೆಂಬಿಡದೆ ಹಿಂಬಾಲಿಸುತ್ತಾರೋ ಏನೋ! ಕುಟ್ಟಿಗೆ ಇದ್ದಕ್ಕಿದ್ದಹಾಗೆ ಬೇಸರ ದುಃಖ ದುಮ್ಮಾನ ಎಲ್ಲ ಉಂಟಾದವು . ಕೆಲವು ಕಾಲದ ಹಿಂದಷ್ಟೆ ದಾರಿಬದಿಯಲ್ಲಿ ಹೂಮಾಲೆ ಹಿಡಿದು ನಿಂತಿದ್ದ ಹುಡುಗಿಯನ್ನು ಮುಲಾಜು ನೋಡದೆ ಹರುವೆ ಸೊಪ್ಪು ಕತ್ತರಿಸಿದಂತೆ ಕತ್ತರಿಸಿ ಹಾಕೆಂದು ದೌಲತ್ ರಾಮನಿಗೆ ಸಲಹೆ ಕೊಟ್ಟಿದ್ದ ಕುಟ್ಟಿ, ಈಗ ತನ್ನ ಪ್ರಾಣಕ್ಕೇ ಬರಬಹುದೆಂದು ಅನ್ನಿಸಿದಾಗ ಮಾತ್ರ ಚಿಂತಾಕ್ರಾಂತನಾಗಿದ್ದ.

ಆದರೂ ಕುಟ್ಟಿ ತಾನಿನ್ನೂ ಈ ದಂಧೆಗೆ ವಿದಾಯ ಹೇಳಬಹುದಾದ ಸಾಧ್ಯತೆಯೊಳಗೇ ಇದ್ದೇನೆಂದು ತಿಳಿದಿದ್ದ. ಏಕೆಂದರೆ ಕುಟ್ಟಿಗೇ ಆಗಲಿ ದೌಲತ್ ರಾಮನಿಗಾಗಲಿ ಈ ಕಾಳ ದಂಧೆಯ ಅತಿ ಮುಖ್ಯ ವಿಷಯಗಳಾವುವೂ ಗೊತ್ತಿರಲಿಲ್ಲ. ಅಥವಾ ಅವರ ಮೇಲಿನವರು ತಿಳಿಸಿರಲಿಲ್ಲ. ಅಗತ್ಯ ಬಿದ್ದಾಗ ಇವರಿಗೆ ಕೆಲಸ ಕೊಡುತ್ತಿದ್ದರಷ್ಟೆ. ಕುಟ್ಟಿ ಕೈಯ್ಯಲ್ಲಿದ್ದ ಪ್ಯಾಕೆಟ್ಟಿನಲ್ಲಿ ಏನಿದೆ ಎನ್ನುವುದಾಗಲಿ, ಯಾರು ಅದನ್ನು ಅಲ್ಲಿ ತಂದಿಟ್ಟಿದ್ದಾರೆ ಎನ್ನುವುದಾಗಲಿ, ಯಾರಿಗೆ ಅದು ಬೇಕಾಗಿದೆ ಎನ್ನುವುದನ್ನಾಗಲಿ ತಿಳಿಯುವುದು ಅವರಿಗೆ ಇಷ್ಟವೂ ಇರಲಿಲ್ಲ. ತಿಳಿಯಲೆತ್ನಿಸುವುದು ಅತ್ಯಂತ ಅಪಾಯಕಾರಿ ಎಂದೂ ಅವರಿಗೆ ಗೊತ್ತಿತ್ತು. ಆದರೆ ತಮಗೆ ಗೊತ್ತಿಲ್ಲದಿರುವುದು ಇತರರಿಗೆ ಅಥವಾ ಎಲ್ಲೋ ಕುಳಿತು ಎಲ್ಲ ನಿರ್ದೇಶಿಸುತ್ತಿರುವ ಬಾಸ್‌ಗೆ ಅಥವಾ ಬಾಸ್‌ಗಳಿಗೆ ಗೊತ್ತಿದೆಯೆ?

ಇದೇ ಭೂಗತ ಜಗತ್ತಿನ ದೊಡ್ಡ ಸಮಸ್ಯೆ! ಇಲ್ಲಿ ಏನು ನಡೆಯುತ್ತಿದೆ ಎನ್ನುವುದು ಯಾರಿಗೆ ಗೊತ್ತು? ಸಿ.ಓ.ಡಿ.ಯವರಿಗೋ, ಸಿ.ಬಿ.ಐನವರಿಗೋ, ಸಿ.ಐ.ಎನವರಿಗೋ, ಇಂಟರ್ ಪೋಲ್‌ನವರಿಗೋ? ಯಾರು ಸಿಕ್ಕಿಕೊಂಡರೂ ಏನು ಬಾಯಿ ಬಿಟ್ಟರೂ

ಆದರಿಂದ ನಿಜವಾಗಿಯೂ ಇಲ್ಲಿ ಏನು ನಡೆಯುತ್ತಿದೆ ಎನ್ನುವುದರ ಸ್ಪಷ್ಟ ಚಿತ್ರಣ ಹೊರಬರುವ ಹಾಗೆ ಇರಲಿಲ್ಲ. ಯಾರಾದರೂ ಒಬ್ಬರ ಪ್ರಜ್ಞಾಪೂರ್ವಕ ಪ್ರಯತ್ನದಿಂದ ಹುಟ್ಟಿ ರೂಪುಗೊಂಡು ವಿಕಾಸವಾಗುತ್ತ ಬಂದಿರುವ ವ್ಯವಸ್ಥೆಯೆ ಇದು?

ಜುಗಾರಿ ಕ್ರಾಸ್, ದೇವಪುರಗಳ ಆಸುಪಾಸಿನ ಸಾವಿರಾರು ಪರ್ವತ ಶ್ರೇಣಿಗಳಲ್ಲಿ ಒಂದಲ್ಲ ಒಂದಕ್ಕೆ ಪ್ರತಿ ವರ್ಷ ವಿಮಾನಗಳು ಢಿಕ್ಕಿ ಹೊಡೆದು ಉರುಳಿ ಬೀಳುತ್ತವೆ. ಈ ಪರ್ವತಗಳ ಕಬ್ಬಿಣದ ಅದುರಿನ ಕಲ್ಲು ಬಂಡೆಗಳೆಲ್ಲ ಅಯಸ್ಕಾಂತ ಶಿಲೆಗಳಂತೆ! ಆ ಮಹಾ ಶಿಲಾಫಲಕಗಳು ಇದ್ದಕ್ಕಿದ್ದಂತೆ ಒಮ್ಮೊಮ್ಮೆ ಪ್ರಭಾವ ಬೀರಿ ವಿಮಾನಗಳ ಕಾಂಪಾಸಿಗೆ ದಿಕ್ಕು ತಪ್ಪಿಸಿ ಅವು ನೇರವಾಗಿ ಬಂದು ಶಿಖರಾಗ್ರಗಳಿಗೆ ಢಿಕ್ಕಿ ಹೊಡೆಯುತ್ತವೆ. ಜುಗಾರಿ ಕ್ರಾಸ್, ದೇವಪುರದ ಗುರುತ್ವಾಕರ್ಷಣೆ ಸಹ ಹೀಗೇ ಎಂದು ಹೇಳಬಹುದು. ಕೇವಲ ಒಂದು ಲಾಟರಿ ಟಿಕೆಟ್ಟು ತಗೊಳ್ಳುವ ಜೂದಾಳಿಯೂ ತನ್ನ ಕ್ರಿಯಾವಳಿಯ ಅಂತಿಮ ಸಾಧ್ಯತೆ ಜುಗಾರಿ ಕ್ರಾಸ್ ಎಂದು ತಿಳಿಯುತ್ತಾನೆ.

ಒಂದಲ್ಲ ಒಂದು ಹಂತದಲ್ಲಿ ಒಬ್ಬರಲ್ಲ ಒಬ್ಬರು ಇದನ್ನು ತಿಳಿಯುವ ಚಪಲಕ್ಕೆ, ಇಲ್ಲಿ ತಮ್ಮ ನಸೀಬನ್ನು ಪರೀಕ್ಷೆಗೊಡ್ಡುವ ಚಪಲಕ್ಕೆ ತುತ್ತಾಗುತ್ತಾರೆ! ಹಾಗಾಗೇ ಜುಗಾರಿ ಕ್ರಾಸ್, ದೇವಪುರ ಎಂದರೆ ಜೂಜುಗಾರರ ಅಂತಿಮ ಹಂತ. ಅವರು ಉರುಳಿಸುವ ಕೊಟ್ಟ ಕೊನೆಯ ದಾಳ. ಇಲ್ಲಿ ಪಣಕ್ಕಿಟ್ಟಿರುವುದು ಮೇಲು ನೋಟಕ್ಕೆ ದುಡ್ಡಿನಂತೆ ಕಂಡರೂ ಒಳಹೊಕ್ಕು ನೋಡಿದರೆ ದಾಳ ಹೆಣ ಎರಡೂ ಒಟ್ಟೊಟ್ಟಿಗೇ ಉರುಳುತ್ತವೆ. ಇದು ಸಾವು ಬದುಕಿನ ಜೂಜು.

ಆದರೆ ಇದು ಯಾರ ಲೀಲೆ! ಯಾರ ಮೋಜು!?

* * * *

ಗೇರ್ ಲಿವರ್ ಮೇಲೆ ಎಡಗಾಲನ್ನೂ, ಆಕ್ಸಲರೇಟರ್ ಮೇಲೆ ಬಲಗಾಲನ್ನೂ ಇಟ್ಟುಕೊಂಡು ಅಲ್ಲಾಡದೆ ಕುಳಿತು ಬಸ್ ಬಿಡುತ್ತಿದ್ದ ಕ್ಯಾಪ್ಟನ್ ಖುದ್ದೂಸ್‌ಗೆ ಮತ್ತೆ ಹಿಂದಿನಿಂದ ತುತ್ತೂರಿ ಊದಿದ ಹಾಗೆ ಜೀಪ್ ಹಾರನ್ ಶಬ್ದ ಕೇಳುತ್ತಲೂ ಕೊಂಚ ಕಿರಿಕಿರಿಯಾಯ್ತು. ಹಿಂದಿನಿಂದ ಕಂಡಕ್ಟರು ಸೈಡ್ ಸೈಡ್ ಎಂದು ಕೂಗುತ್ತಲೂ

''ಅಲ್ಲಿ ಕೊಟ್ಟಿರೋದೇನು ಸೈಡ್ ಅಲ್ಲವಾ? ಈ ಘಾಟಿ ರಸ್ತೇಲಿ ಇನ್ನೆಷ್ಟು ಸೈಡಿಗೆ ಹೋಗ್ತೀಯ? ಪ್ಯಾಸೆಂಜರ್‌ಗಳೆಲ್ಲಾ ಮನೇಲಿ ಹೇಳ್ಬಂದಿದಾರೇನು ಕೇಳ್ಬಿಡು? ಆಮೇಲೆ ಬೇಕಾದರೆ ಇನೂ ಲೆಫ್ಟಿಗೆ ಹೊಡಕೋತೀನಿ'' ಎಂದು ಅಸಹನೆಯಿಂದ ಕಂಡಕ್ಟರಿಗೆ ಹೇಳಿದ.

''ನಮಗೆ ಯಾಕಣ್ಣಾ ಕಾಖಿಬಟ್ಟೆಯೋರತ್ರ ಮಾತು. ಇನ್ನು ಬಸ್ಸು ನಿಲ್ಸಿ ಸುಂಸುಮ್ನೆ ಲೈಸನ್ಸ್ ಕಿತ್ತಿಟ್ಕೋತಾರೆ. ಆಗ್ಲಿಂದ ಹಾರನ್ ಮಾಡ್ತಿದಾರೆ. ಸ್ವಲ್ಪ ಗಾಡಿ ಸ್ಲೋ ಮಾಡಿ ಅರುಗಿಗೆ ತಗೊಂಡು ಜಾಗ ಕೊಡು'' ಎಂದು ಕಂಡಕ್ಟರ್ ಹೇಳಿದ.

ಜೀಪ್ ಬಲಗಡೆ ಸೈಡ್ ತಗೊಂಡು ಮುಂದೆ ಹೋದಮೇಲೆ ''ಬಟ್ಟೆ ನೋಡಿದರೆ

ಯಾಕೋ ನಮ್ಮ ಪೋಲೀಸ್ ಕಂಡಂಗೆ ಕಾಣೋದಿಲ್ಲ.'' ಎಂದು ಗೊಣಗುಟ್ಟಿದ ಖುದ್ದೂಸನಿಗೆ ''ಪೋಲೀಸ್ ಅಂದ್ಮೇಲೆ ಪೋಲೀಸ್! ನಮ್ಮ ಪೋಲೀಸ್ ನಿಮ್ಮ ಪೋಲೀಸ್ ಅನ್ನೋದೆಲ್ಲ ಇಲ್ಲ ತಗೋ'' ಎಂದ ಕಂಡಕ್ಟರ್ ಮಹಾಶಯ.

ಜೀಪ್ ಮುಂದೆ ಹೋಗುವುದನ್ನೇ ದಿಟ್ಟಿಸಿ ನೋಡುತ್ತಿದ್ದ ಕುಟ್ಟಿಗೆ ಸಮಾಧಾನ ಮಾಡುವವನಂತೆ ದೌಲತ್ ರಾಮ್ ಮತ್ತೊಮ್ಮೆ ಬೆನ್ನಿನ ಮೇಲೆ ಮೆಲ್ಲಗೆ ತಟ್ಟಿದ. ಅವನಿಗೆ ಕಾರು ಕಾಡೊಳಗೆ ತಳ್ಳಿ ಬಸ್ಸು ಹತ್ತೋಣ ಎಂದು ಕುಟ್ಟಿ ಹೇಳಿದ್ದು ಸರಿ ಎಂದೆನ್ನಿಸಿತು. ರಸ್ತೆಯಲ್ಲಿ ಇದ್ದಕ್ಕಿದ್ದಂತೆ ಕಾಖಿ ಬಟ್ಟೆಗಳ ಓಡಾಟ ನೋಡಿದಮೇಲೆ ಅವನಿಗೂ ತೀವ್ರ ಅನುಮಾನಗಳು ಪ್ರಾರಂಭವಾಗಿದ್ದುವು. ಜೀಪ್ ಧೂಳೆಬ್ಬಿಸುತ್ತ ಎಲ್ಲೂ ನಿಲ್ಲದೆ ಕಣ್ಮರೆಯಾದ ಮೇಲೆ ಮತ್ತೆ ಹಿಂದುಗಡೆ ಗಾಜಿನ ಮುಖಾಂತರ ನೋಡಿದ ಅವನ ಕಣ್ಣಿಗೆ ಮತ್ತೊಂದು ಪೋಲೀಸ್ ವ್ಯಾನು ಬರುತ್ತಿರುವುದು ಕಣ್ಣಿಗೆ ಬಿತ್ತು.

ಈಗ ಮಾತ್ರ ದೌಲತ್ ರಾಮನ ಮುಖದಲ್ಲಿ ಕೊಂಚ ಚಿಂತೆಯ ಗೆರೆಗಳು ಮೂಡಿದುವು. ಹೆದರು ಪುಕ್ಕಲನಾದ ಕುಟ್ಟಿಯಂತೂ ನಿಜಕ್ಕೂ ಗಾಬರಿಯಾದ! ಗಾಬರಿಯ ಕಣ್ಣುಗಳಲ್ಲಿ ಅತ್ತಲೇ ನೋಡುತ್ತಿದ್ದ ಕುಟ್ಟಿಯ ತಲೆಯನ್ನು ದೌಲತ್ ರಾಮ್ ಅತ್ತ ತಿರುಗಿಸಿ ಆಕಡೆಗೆ ನೋಡು ಎನ್ನುವಂತೆ ಕಣ್ಣಿನಲ್ಲೇ ಸಂಜ್ಞೆ ಮಾಡಿದ. ಬಸ್ಸೊಳಗಿನ ಸಾರ್ವಜನಿಕರ ಕಣ್ಣಿಗೆ ಇವರ ದುಗುಡ ಗಡಿಬಿಡಿಗಳು ಬೀಳದಿರಲೆಂದು ಅವನು ಈ ಮುಂಜಾಗ್ರತೆ ವಹಿಸಿದ್ದು.

ಜೀಪಿಗೆ ಸೈಡು ಕೊಟ್ಟು ನಿಟ್ಟುಸಿರು ಬಿಡುತ್ತ ಆಗತಾನೆ ರಸ್ತೆ ಮಧ್ಯಕ್ಕೆ ಬಂದಿದ್ದ ಕ್ಯಾಪ್ಟನ್ ಸಾಹೇಬರಿಗೆ ಮತ್ತೆ ಹಾರನ್ ಸದ್ದು ಕೇಳಿ ರೇಜಿಗೆಯಾಯ್ತು. ಸೈಡ್ ಸೈಡ್ ಎಂದು ಕೂಗಿದ ಕಂಡಕ್ಟರಿಗೆ ''ನನಗೇನು ಕಿವಿಗಿವಿ ಕೇಳಕ್ಕಿಲ್ಲ ಅಂತ ಮಾಡಿಕೊಂಡಿದ್ದೀ ಯೇನಯ್ಯ? ಅದ್ಯಾಕೆ ಹಂಗೆ ಹಿಂದಗಡಿಂದ ಹೊಯ್ಕೋತೀಯಾ?'' ಎಂದು ಸೈಡಿಗೆ ಹೋಗಬೇಕಲ್ಲ ಅನ್ನುವ ಸಿಟ್ಟನ್ನೆಲ್ಲ ಕಂಡಕ್ಟರ್ ಕಡೆಗೆ ತಿರುಗಿಸಿದ. ಕೊಂಚ ದೂರದಲ್ಲಿ ದೇವಪುರದ ಮನೆಗಳೂ, ಎಸ್.ಟಿ.ಡಿ ಗೋಪುರ ಇತ್ಯಾದಿಗಳೂ ಕಾಣಿಸುತ್ತಿದ್ದವು.

''ಪೋಲೀಸ್ ವ್ಯಾನು, ಜೀಪು ಓಡಾಡೋದನ್ನು ನೋಡಿದರೆ ದೇವಪುರದಲ್ಲಿ ಏನಾದರೂ ಗಲಾಟೆ ಆಗಿದೆಯಾ ಅಂತ! ಅಥವಾ ಮಿನಿಷ್ಟ್ರುಗಿನಿಷ್ಟ್ರು ಬರೋ ಪ್ರೋಗ್ರಾಂ ಇರಬಹುದು'' ಎಂದು ಕಂಡಕ್ಟರು ಗೊಣಗುತ್ತಿದ್ದ ಡ್ರೈವರಿಗೆ ವಿವರಣೆ ಕೊಟ್ಟ.

ಖುದ್ದೂಸ್ ಮುಂದೆ ಹೋಗಿ ಎಂದು ಕೈಯ್ಯಾಡಿಸುವುದಕ್ಕೂ ಮೊದಲೆ ಪೋಲೀಸ್ ವ್ಯಾನಿನ ಡ್ರೈವರ್ ಭರಾಟೆಯಿಂದ ನುಗ್ಗಿಸಿಕೊಂಡು ಮುಂದೆ ಹೋದ. ''ಈ ನನ್ಮಕ್ಕಳಿಗೆ ಸ್ಟೇರಿಂಗ್ ಎದುರು ಕೂತುಬಿಟ್ಟರೆ ಸಾಕು, ಮಸ್ತಿ'' ಎಂದು ತಿರಸ್ಕಾರದಿಂದ ಅನ್ನುತ್ತ ಕಿಟಕಿಯಿಂದ ಉಗಿಯಲು ಹಣಕಿದ ಖುದ್ದೂಸನಿಗೆ ಮತ್ತೆ ಹಾರನ್ ಸದ್ದು ಕೇಳಿತು.

ಕಂಡಕ್ಟರ್ ಡ್ರೈವರಿಗೆ ಹೇಳಿದ ಸಮಜಾಯಿಷಿ ಕುಟ್ಟಿಗೂ ದೌಲತ್ ರಾಮನಿಗೂ ಕೇಳಿಸಿತು. ವಾಸ್ತವವಾಗಿ ಅದು ''ವರಿಗೇ ಹೇಳಿದ ಸಾಂತ್ವನದ ಮಾತುಗಳಂತೆ ಅನ್ನಿಸಿತ್ತು.

ಅವರಿಬ್ಬರ ಮನಸ್ಸೂ ಹೌದಲ್ಲ! ಯಾಕಾಗಿರಬಾರದು, ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಎನ್ನುವಂತೆ ರಸ್ತೆಯಲ್ಲಿ ಸುಳಿದವರೆಲ್ಲಾ ನಮ್ಮನ್ನು ಬೆನ್ನಟ್ಟಿದವರೇ ಎಂದು ನಾವು ತಿಳಿದರೆ ಅದು ನಮ್ಮ ಭ್ರಾಂತಿ ಅಷ್ಟೆ. ಭ್ರಾಂತರಂತೆ ವರ್ತಿಸಿದರೆ ನಾವಾಗಿ ಪೋಲೀಸರ ಕೋಳಕ್ಕೆ ಕೈಹಾಕಿದ ಹಾಗೆ ತಾನೆ! ಎಂದು ಇಬ್ಬರೂ ತಮ್ಮ ತಮ್ಮ ರೀತಿಯಲ್ಲಿ ಈ ರೀತಿ ಯೋಚಿಸಿ ತಮ್ಮ ಗಾಬರಿ ಶಮನ ಮಾಡಿಕೊಳ್ಳಲು ಪ್ರಯತ್ನಿಸಿದರು.

ಆದರೆ ಹದ್ದುಬಸ್ತಿಗೆ ತಂದುಕೊಳ್ಳಲೆಳಸುತ್ತಿದ್ದ ಅವರ ಮನಸ್ಸಿಗೆ ಇದ್ದಕ್ಕಿದ್ದಂತೆ ಒಂದು ಸಿಡಿಲೇ ಹೊಡೆಯಿತು! ಇಡೀ ಬಸ್ಸು ಅವರಿಗೆ ಒಂದು ಸಾಕ್ಷಾತ್ ಇಲಿ ಬೋನಾಯ್ತು!

ಮುಂದೆ ಹೋದ ಪೋಲೀಸ್ ವ್ಯಾನನ್ನು ಚಿಂತೆಯ ಕಣ್ಣುಗಳಿಂದ ದಿಟ್ಟಿಸುತ್ತಿದ್ದ ಕುಟ್ಟಿ ಮತ್ತು ದೌಲತ್ ರಾಮನ ಮುಖ ಬಿಳಿಚಿಕೊಳ್ಳುವಂತೆ ಅವರ ಕಣ್ಣೆದುರೇ ಅವರು ಕೆಲವೇ ಹೊತ್ತಿನ ಹಿಂದೆ ಕಾಡಿನೊಳಗೆ ತಳ್ಳಿ ಬಂದಿದ್ದ ಕರಿಯ ಅಂಬಾಸಿಡರ್ ಕಾರು ಬಸ್ಸನ್ನು ಹಿಂದೆ ಹಾಕಿ ಪೋಲೀಸ್ ವ್ಯಾನನ್ನು ಹಿಂಬಾಲಿಸಿಕೊಂಡು ಮುಂದೆ ಹೋಯ್ತು. ಕುಟ್ಟಿ ತನ್ನ ಮೃತ್ಯುವನ್ನೇ ಕಂಡಂತೆ ತತ್ತರಿಸಿಹೋದ. ದೌಲತ್ ರಾಮ್ ಸಹ ಕೊಂಚ ಅಧೀರನಾದ!

ಇದು ನಿಜವಾಗಿಯೂ ಅಪಾಯದ ಚಿನ್ಹೆ! ಪೋಲೀಸರು ಏನೋ ಜಾಡು ಹಿಡಿದು ನಮಗೆ ಬಹಳ ಸಮೀಪಕ್ಕೆ ಬಂದಿರಬೇಕು! ಇಡೀ ಈ ವ್ಯವಹಾರವೆಲ್ಲ ಏನೋ ಒಂದು ಸಂಚಿರಬೇಕು! ಇಲ್ಲದಿದ್ದರೆ ನಾವು ಕಾರು ನಿಲ್ಲಿಸಿ ಬಸ್ಸು ಹತ್ತುತ್ತಿದ್ದ ಹಾಗೇ ಯಾರೋ ಅದನ್ನು ಸ್ಟಾರ್ಟ್ ಮಾಡಿಕೊಂಡು ನಮ್ಮನ್ನೇ ಓವರ್ ಟೇಕ್ ಮಾಡಿಕೊಂಡು ಹೋಗಲು ಸಾಧ್ಯವೆ? ಗಾಬರಿತುಂಬಿದ ಕಣ್ಣುಗಳಲ್ಲಿ ದೌಲತ್‌ರಾಮ್ ಮತ್ತು ಕುಟ್ಟಿ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

ಕುಟ್ಟಿ ತಡೆಯಲಾರದೆ ''ಕೆಲಸ ಹೇಳಬೇಕಾದರೆ ಅವನು ಒಬ್ಬೊರಿಗೆ ಇಪ್ಪತ್ತು ಸಾವಿರ ಅಂತ ಹೇಳಿದಾಗಲೇ ನನಗೆ ಅನುಮಾನ ಆಯ್ತು! ಇದರಲ್ಲಿ ಏನೋ ಕರಾಮತ್ತು ಇದೆ ಅಂತ ಅನ್ನಿಸ್ತು!'' ಎಂದು ಪಿಸುಮಾತಿನಲ್ಲಿ ದೌಲತ್ ರಾಮನ ಕಿವಿಯೊಳಗೆ ಪಿಸುಗುಟ್ಟಿದ. ''ಎಷ್ಟೋಸಾರಿ ಬಾಸ್ ಬಾಸ್‌ಗಳ ಮಧ್ಯೆ ಭಿನ್ನಾಭಿಪ್ರಾಯ ಬಂದರೆ ಭಕ್ತರ ಪ್ರಾಣಾರ್ಪಣೆಯಲ್ಲಿ ಮುಕ್ತಾಯವಾಗುತ್ತೆ. ಈಗಲೂ ಹೀಗೇ ಏನೋ ಆಗಿ ನಾವು ಈ ಇಲಿ ಬೋನಿನೊಳಗೆ ಸಿಕ್ಕಿ ಬಿದ್ದಿದ್ದೇವೆ!!'' ಇಂಥ ನೂರೆಂಟು ಯೋಚನೆಗಳಲ್ಲಿ ಕುಟ್ಟಿಗೆ ಮುಂದೇನು ಮಾಡವುದು ಹೊಳೆಯಲಿಲ್ಲ.

# ಬಸ್ ಸ್ಟ್ಯಾಂಡಿನ ಪವಾಡ - ೧೦



ಎಷ್ಟೋ ಸಾರಿ ದುಷ್ಟರು ಕಷ್ಟಕ್ಕೆ ಸಿಕ್ಕಿಕೊಂಡಾಗ, ಕಳ್ಳರು ಸಿಕ್ಕಿಬಿದ್ದಾಗ ಕೊನೆಗೂ ಸತ್ಯಕ್ಕೆ ನ್ಯಾಯಕ್ಕೆ ಜಯವಾಗುತ್ತದೆ ಎಂದು ಜನ ಅಂದುಕೊಳ್ಳುತ್ತಾರೆ. ಭೂಮಿಯಲ್ಲಿ ರಾಕ್ಷಸರ ಹಾವಳಿ ಅತಿಯಾದಾಗ ದೇವರು ಬಂದು ಅವರಿಗೆಲ್ಲ ತಕ್ಕ ಶಿಕ್ಷೆ ವಿಧಿಸುತ್ತಾನೆ ಎಂದು ದೈವಭಕ್ತರು ದೃಢವಾಗಿ ನಂಬಿದ್ದಾರೆ. ಆದರೆ ವಾಸ್ತವವನ್ನು ಗಮನಿಸಿದಾಗ ಸಾಧಾರಣವಾಗಿ ರಾಕ್ಷಸರಿಗೇನೋ ಶಿಕ್ಷೆಯಾಗಿರುತ್ತೆ. ಆದರೆ ಅದು ದೇವರಿಂದಾಗಲಿ ನ್ಯಾಯ ಧರ್ಮಗಳಿಂದಾಗಲಿ ಆಗಿರದೆ ಅದಕ್ಕೆ ಇನ್ನೊಬ್ಬ ದೊಡ್ಡ ರಾಕ್ಷಸನೇ ಕಾರಣ ಎಂದು ಜನಗಳಿಗೆ ಬಹುಬೇಗ ಗೊತ್ತಾಗುತ್ತದೆ. ದುಷ್ಟರನ್ನು ದೊಡ್ಡ ದುಷ್ಟರೂ, ಖೇಡಿಗಳನ್ನು ದೊಡ್ಡ ಖೇಡಿಗಳೂ, ಪಾತಕಿಗಳನ್ನು ಇನ್ನೂ ದೊಡ್ಡ ಪಾತಕಿಗಳೂ, ಬಲಿಹಾಕುವುದನ್ನು ಧರ್ಮಪ್ರತಿಷ್ಠಾಪನೆ ಎಂದು ತಾತ್ಕಾಲಿಕವಾಗಿ ಜನ ತಿಳಿಯುತ್ತಾರೆ. ಆಮೇಲೆ ಅವರಿಗೆ ಭ್ರಮ ನಿರಸನವಾಗುತ್ತದೆ. ಆಗ ಕಳೆದು ಹೋದ ಕಾಲವೇ ಎಷ್ಟೋ ವಾಸಿ ಇತ್ತೆಂದು ಯೋಚಿಸುತ್ತಾರೆ. ನಮ್ಮ ದೈವ ಭಕ್ತರ ಪ್ರಪಂಚದಲ್ಲಿ ಹೇಗೋ ಗೊತ್ತಿಲ್ಲ. ಆದರೆ ಕುಟ್ಟಿ, ದೌಲತ್ ರಾಮರ ಭೂಗತ ಜಗತ್ತಿನಲ್ಲಿ ಮಾತ್ರ ಭಗವಂತ ಎಂದೂ ಬಂದು ಧರ್ಮಪ್ರತಿಷ್ಠಾಪನೆಗೆ ಪ್ರಯತ್ನಿಸುವುದಿಲ್ಲ. ಅಲ್ಲಿ ಹೋರಾಟ ಆಗುವುದು ಯಾವಾಗಲೂ ರಾಕ್ಷಸ ರಾಕ್ಷಸರ ನಡುವೆಯೇ. ಈ ಖದೀಮರ ತಳತಂತ್ರಗಳು

ಹೊರಬಿದ್ದು ಅನೇಕರು ಬಂದೀಖಾನೆ ಸೇರಬೇಕಾಗುವುದು ಪೋಲೀಸರಿಂದಾಗಲಿ ನ್ಯಾಯಾಲಯಗಳಿಂದಾಗಲಿ ಅಲ್ಲವೇ ಅಲ್ಲ. ಅವರವರ ನಡುವಿನ ವೈಮನಸ್ಯವೇ ಇದಕ್ಕೆ ಕಾರಣ. ಒಮ್ಮೆ ಕುಟ್ಟಿಯ ಜೊತೆಗಾರರಿಬ್ಬರು ಹೊರಗಿದ್ದರೆ ತಮ್ಮ ಖೂನಿ ಖಾತರಿ ಯೆಂದಾದಾಗ ಬೇಕೆಂದೇ ಪೋಲೀಸರ ಕೈಗೆ ಸಿಕ್ಕಿಬಿದ್ದು ಇಲ್ಲದ ಮೊಕದ್ದಮೆಗಳನ್ನು ಮೈಮೇಲಿ ಎಳೆದುಕೊಂಡು ಬಂದೀಖಾನೆ ಸೇರಿ ಪ್ರಾಣ ಉಳಿಸಿಕೊಂಡಿದ್ದರು. ತಾವು ಕಾಡೊಳಗೆ ತಳ್ಳಿ ಬಂದಿದ್ದ ಅಂಬಾಸಿಡರ್ ಕಾರು ಹಠಾತ್ತಾಗಿ ತಮ್ಮ ಕಣ್ಣೆದುರೇ ಬಸ್ಸನ್ನು ಓವರ್‌ಟೇಕ್ ಮಾಡಿ ಮುಂದೆ ಹೋದಾಗ ಕುಟ್ಟಿಗೂ ದೌಲತ್ ರಾಮನಿಗೂ ಥಟ್ಟನೆ ಹೊಳೆದಿದ್ದು ಇದೇ. ಪೋಲೀಸರು ತಮ್ಮ ಜಾಡು ಹಿಡಿದರು ಎಂದರೆ ಸಾಕು, ಭೂಗತ ಜಗತ್ತಿನಲ್ಲಿ ಅದರ ಅರ್ಥ, ತಮ್ಮೊಳಗೇ ಯಾರೋ ತಮಗೆ ಉಲ್ಟಾ ಹೊಡೆದಿದ್ದಾರೆ ಎಂದು. ಅವರಿಬ್ಬರ ಮನಸ್ಸೂ ತಮ್ಮ ತಲೆಯೊಳಗಿನ ಗೊಂದಲ ಗೋಜಲುಗಳೊಳಗೆ 'ತಮ್ಮನ್ನು ಹಿಡಿಸುವುದರಿಂದ ಯಾರಿಗೆ ತಾನೆ ಲಾಭವಿರಬಹುದು' ಎಂದು ಒಂದೇಸಮ ಯೋಚಿಸುತ್ತಿತ್ತು. ತಾವು ಯಾಕೆ ಇಲ್ಲಿ ಬಂದಿದ್ದೇವೆ? ಈ ಪ್ಯಾಕೆಟ್ಟಿನಲ್ಲಿ ಏನಿದೆ? ಅದು ಯಾರಿಗೆ ಬೇಕಾಗಿದೆ ಒಂದೂ ಗೊತ್ತಿಲ್ಲದ ಅವರಿಗೆ ಆ ದಿಕ್ಕಿನಲ್ಲಿ ಎಷ್ಟು ಯೋಚಿಸಿದರೂ ಏನೂ ಹೊಳೆಯಲಿಲ್ಲ. ಇಷ್ಟೆಲ್ಲಾ ಯೋಚಿಸಿದರೂ ಅವರ ಮನಸ್ಸಿಗೆ ಒಂದೇ ಒಂದು ಸಾರಿಯೂ ಆ ಪ್ಯಾಕೆಟ್ಟಿನೊಳಗೇನಿದೆ ಒಡೆದು ನೋಡಿಬಿಡಬೇಕೆಂಬ, ಯಾರಿಗೆ ಇದು ಬೇಕಾಗಿದೆ ತಿಳಿದುಬಿಡಬೇಕೆಂಬ, ಛಲ ಹುಟ್ಟಲಿಲ್ಲ. ಮನಸ್ಸು ಚಂಚಲ ಎನ್ನುತ್ತಾರೆ. ಆದರೆ ಅಭ್ಯಾಸಬಿದ್ದ ಮನಸ್ಸುಗಳು ಬಗ್ಗಿಸಲು ಉಕ್ಕಿಗಿಂತ ಗಡಸು ಎನ್ನುವುದು ಇವರಿಬ್ಬರ ಚಿತ್ತವೃತ್ತಿ ನೋಡಿದರೆ ಗೊತ್ತಾಗುತ್ತಿತ್ತು.

ಬಸ್ ದೇವಪುರಕ್ಕೆ ಹತ್ತಿರಾಗುತ್ತಿತ್ತು. ಪೋಲೀಸರಿಗೆ ಏನೋ ಸುಳಿವು ಸಿಕ್ಕಿದೆ! ಏನನ್ನೋ ಹುಡುಕುತ್ತಿದ್ದಾರೆ! ಎನ್ನುವುದಂತೂ ಈ ಇಬ್ಬರಿಗೂ ತೀರಾ ಸ್ಪಷ್ಟವಾಗಿತ್ತು. ಅದೂ ಇದೂ ಯೋಚನೆ ಮಾಡಿಕೊಂಡು ಕಾಲಹರಣ ಮಾಡಲು ಸಾಧ್ಯವೇ ಇರಲಿಲ್ಲ. ದೇವಪುರದಲ್ಲಿ ಬಸ್ ನಿಲ್ಲುತ್ತಿದ್ದಹಾಗೆ ಚೆಕ್ಕಿಂಗ್ ನಡೆಯುತ್ತೆ. ಬಸ್ ತಪಾಸಣೆ ಮಾಡುವುದಂತೂ ಬಡ್ಡೀಮಕ್ಕಳಿಗೆ ನೀರು ಕುಡಿದಷ್ಟು ಸುಲಭ! ಸುಮ್ಮನೆ ಬಾಗಿಲ ಹತ್ತಿರ ನಾಲ್ಕು ಜನ ಬಂದು ನಿಂತು ಒಬ್ಬೊಬ್ಬರನ್ನಾಗಿ ಇಳಿಯುವಂತೆ ಹೇಳಿದರೆ ಮುಗಿಯಿತು. ಕುಟ್ಟಿ, ದೌಲತ್‌ರಾಮ್ ಇಬ್ಬರೂ ಇದ್ದ ಸಮಯಾವಕಾಶದಲ್ಲಿ ತಪ್ಪಿಸಿಕೊಂಡು ಹೋಗಲು ಏನು ಮಾಡಬಹುದು ಎಂದು ವೇಗವಾಗಿ ಯೋಚಿಸಿದರು. ಕುಟ್ಟಿ ಇಲ್ಲೆ ಬಸ್ ನಿಲ್ಲಿಸಿ ಇಳಿದುಬಿಡೋಣ ಎಂದು ಹೇಳಿದ. ಎಲ್ಲರೆದುರು ಬಸ್ ನಿಲ್ಲಿಸಿ ಇಬ್ಬರೇ ಇಳಿದರೆ ಪೋಲೀಸರಿಗೆ ಅದಕ್ಕಿಂತ ಒಳ್ಳೆಯ ಸುಳಿವು ಬೇರೆ ಇಲ್ಲ. ಒಂದು ಸಾರಿ ಕಂಡಕ್ಟರನ್ನು ಕೇಳಿದರೆ ಸಾಕು, ದೇವಪುರಕ್ಕೆ ಟಿಕೆಟ್ ತಗೊಂಡು ಮಧ್ಯ ದಾರಿಯಲ್ಲಿ ಇಳಿದು ಹೋದವರು ಯಾರುಯಾರೆಂದು ಸುಲಭವಾಗಿ ಗುರುತಿಸಿ ಹೇಳಿಬಿಡುತ್ತಾನೆ. ಆದ್ದರಿಂದ ಮಧ್ಯದಲ್ಲಿ ತಾವಿಬ್ಬರೇ ಇಳಿಯುವುದು ಅತ್ಯಂತ ಅಪಾಯಕರ ಎಂದು ತೀರ್ಮಾನಿಸಿ

ದೌಲತ್‌ರಾಮ್ ಬೇಡವೆಂದು ಹೇಳಿದ. ದೇವಪುರಕ್ಕೆ ತಾಗಿಕೊಂಡಿರುವ ಕುಂಬಾರಗುಂಡಿ ಹತ್ತಿರ ಯಾರಾದರೂ ಬಸ್ ನಿಲ್ಲಿಸಿ ಇಳಿಯುವುದಿದ್ದರೆ ನಾವೂ ಅವರ ಜೊತೆ ಇಳಿಯೋಣ ಎಂದು ಹೇಳಿದ.

ಕುಂಬಾರ ಗುಂಡಿ ಹತ್ತಿರಾಯ್ತು. ಕುಂಬಾರ ಗುಂಡಿ ಬಳಿಯ ದೊಡ್ಡ ತೆಂಗಿನ ಮರವೇ ಬಸ್ ನಿಲ್ದಾಣ. ಅಲ್ಲಿ ಕುಟ್ಟಿ ದೌಲತ್ ರಾಮರ ರಕ್ತ ತಣ್ಣಗಾಗುವಂತೆ ತೆಂಗಿನ ಮರಕ್ಕೆ ಕೊಂಚವೇ ದೂರದಲ್ಲಿ ಪೋಲೀಸ್ ಜೀಪು ನಿಂತಿರುವುದು ಅವರ ಕಣ್ಣಿಗೆ ಬಿತ್ತು!

ಬಸ್‌ಸ್ಟಾಂಡ್ ಗಡಿಬಿಡಿಯಲ್ಲಿ ತಪಾಸಣೆಯ ವ್ಯವಹಾರ ಬೇಡೆಂದು ಇಲ್ಲೇ ಹಿಡಿಯಲು ಬಂದು ನಿಂತಿರುವುದು ಅವರಿಗೆ ಸರ್ವಸ್ಪಷ್ಟವಾಯ್ತು.

ಏಲಕ್ಕಿ ಮೂಟೆಯ ಮೇಲೆ ಕುಳಿತಿದ್ದ ದೌಲತ್‌ರಾಮ್ ಬಸ್ ಓಲಾಟಕ್ಕೆ ಕೊಂಚ ಜರುಗಿದವನಂತೆ ಸುರೇಶನ ಕಡೆಗೆ ಜರುಗಿ ಏಲಕ್ಕಿ ಮೂಟೆ ಬಾಯಿಗೆ ಹಗ್ಗದಲ್ಲಿ ಕಟ್ಟಿದ್ದ ಸರುಗುಣಿಕೆ ಗಂಟನ್ನು ಚಕ್ಕನೆ ಎಳೆದು ಬಿಚ್ಚಿ, ಕುಟ್ಟಿಯ ಮೈ ಮುಟ್ಟಿ ಸನ್ನೆ ಮಾಡಿದ. ಕುಟ್ಟಿ ಏಳಲು ಕೈ ಊರುವವನಂತೆ ಪ್ಯಾಕೆಟ್ ಸಮೇತ ಕೈಯ್ಯನ್ನು ಪಕ್ಕ ಮೂಟೆಯ ಮೇಲಿಟ್ಟು ಕೈಯ್ಯೂರಿ ಎದ್ದು ನಿಂತ. ಎದ್ದು ನಿಂತಾಗ ಪ್ಯಾಕೆಟ್ಟು ಕುಟ್ಟಿ ಕೈಯ್ಯಲ್ಲಿರಲಿಲ್ಲ. ಅದನ್ನು ಮಿಂಚಿನ ವೇಗದಲ್ಲಿ ಏಲಕ್ಕಿ ಮೂಟೆಯ ತಳದವರೆಗೂ ತಳ್ಳಿ ದೌಲತ್‌ರಾಮ್ ಮೂಟೆಯ ಗಂಟು ಬಿಗಿದ. ಯಾರಿಗೂ ಏನೂ ಗೊತ್ತಾಗಲೇ ಇಲ್ಲ! ಆಗಾಗ್ಗೆ ಮೂಟೆ ಕಡೆ ನೋಡುತ್ತಿದ್ದ ಗೌರಿ ಕೂಡ ಎತ್ತಲೋ ನೋಡುತ್ತಿದ್ದಳು.

''ಕುಂಬಾರ‍್ಗುಂಡೀಲಿ ಇಳಿಯೋರ‍್ಯಾರ‍್ರೀ'' ಎಂದು ಕಂಡಕ್ಟರ್ ಅಭ್ಯಾ ಬಲದಿಂದ ಎಂಬಂತೆ ಕೂಗಿ ಅತ್ತಿತ್ತ ನೋಡಿ ಯಾರೂ ಇಲ್ಲದುದನ್ನು ಕಂಡು, ''ಯಾರಿಲ್ಲಾ ರೈಟ್ ರೈಟ್'' ಎಂದು ಕೂಗಿದ. ಬಸ್ ಕುಂಬಾರ ಗುಂಡಿ ದಾಟಿ ದೇವಪುರದ ಸ್ಟೇಷನ್ ಕಡೆಯಿಂದ ಬಸ್‌ಸ್ಟಾಂಡ್ ಕಡೆಗೆ ಮುಂದುವರಿಯಿತು.

ದೌಲತ್‌ರಾಮ್ ಕಡೆಗೆ ಮುಂದೇನೆನ್ನುವಂತೆ ನೋಡಿದ ಕುಟ್ಟಿಗೆ ಸ್ವಲ್ಪ ಸಮಾಧಾನದಲ್ಲಿರು ಎನ್ನುವಂತೆ ದೌಲತ್‌ರಾಮ್ ಸಂಜ್ಞೆ ಮಾಡಿದ.

* * * *

ದೇವಪುರದ ಬಸ್ ಸ್ಟಾಂಡಿನಲ್ಲಿ ಕುಟ್ಟಿ ಕಣ್ಣಿಗೆ ಬಿದ್ದ ಕಾಖಿ ಯೂನಿಫಾರಂಗಳು ಎರಡೇ ಎರಡಾದರೂ ಸಾದಾ ಉಡುಪಿನವರು ಹಲವರಾದರೂ ಇದ್ದೇ ಇರುತ್ತಾರೆಂದು ಅನ್ನಿಸಿತು. ಆದರೂ ದಾರಿಯುದ್ದಕ್ಕೂ ಹಿಂದೆ ಮುಂದೆ ಹಲವಾರು ಬಾರಿ ತಿರುಗಾಡಿದ ಪೋಲೀಸ್ ವಾಹನಗಳ ಮೆರವಣಿಗೆ ನೋಡಿದ್ದ ಅವರು ದೇವಪುರದ ಬಸ್ ಸ್ಟಾಂಡಿನಲ್ಲಿ ಅವರೇ ತುಂಬಿರುತ್ತಾರೆಂದು ಊಹಿಸಿದ್ದರು. ಆದರೆ ಅವರ ಊಹೆಗೆ ವ್ಯತಿರಿಕ್ತವಾಗಿ ಬಸ್ ಸ್ಟಾಂಡ್ ಮಾಮೂಲಿಯಾಗಿ ಎಲ್ಲ ಸಾಫ್ ಸೀದಾ ಇರುವಂತೆ ಕಂಡಿತು. ಕಾಡಿನಲ್ಲಿ ತಳ್ಳಿಬಂದಿದ್ದ ಅಂಬಾಸಿಡರ್ ಕಾರನ್ನು ಅವರು ಕಂಡಿಲ್ಲದಿದ್ದರೆ ಕಂಡಕ್ಟರ್ ಮಹಾಶಯ

ಹೇಳಿದ ಹಾಗೆ ದೇವಪುರಕ್ಕೆ ಮಿನಿಸ್ಟರು ಆಗಮಿಸಬಹುದೆಂದು ಪೋಲೀಸರ ಓಡಾಟ ಎಂದೇ ತಿಳಿಯುತ್ತಿದ್ದರೋ ಏನೋ.

ಕೈಲಿದ್ದ ಪ್ಯಾಕೆಟ್ಟನ್ನು ಸುರೇಶನ ಏಲಕ್ಕಿ ಮೂಟೆಯೊಳಗೆ ತುರುಕಿದ ಮೇಲೆ ಕುಟ್ಟಿಗೇನೋ ಕೊಂಚಕಾಲ ಸಮಾಧಾನ ಆಯ್ತು.

"ಸದ್ಯಕ್ಕಂತೂ ಬೀಸುವ ದೊಣ್ಣೆ ತಪ್ಪಿ ಅದನ್ನು ಯಾವನದೊ ತಲೆಗೆ ದಾಟಿಸಿಯಾಗಿದೆ. ಬಸ್ಸಿಳಿದು ದೂರ ಹೋಗಿ ನೋಡುವುದು. ಯಾರ ಮೂಟೆಯೋ ಏನೋ! ಮೂಟೆಯನ್ನೇನಾದರೂ ಪೋಲೀಸರು ಸೀಜ್ ಮಾಡಿದರೋ! ಹಾಗಿಂದಹಾಗೇ ಜಾಗ ಖಾಲಿ ಮಾಡಿದರಾಯ್ತು. ಆಕಸ್ಮಾತ್ ಪೋಲಿಸರು ಚೆಕ್ ಮಾಡದೆ ಬಿಟ್ಟರೋ ಆಮೇಲೆ ಹ್ಯಾಗೋ ಪ್ಯಾಕೆಟ್ಟು ವಸೂಲಿ ಮಾಡಿಕೊಂಡರಾಯ್ತು. ಅದೇನು ದೊಡ್ಡ ಕೆಲಸವಲ್ಲ. ಅವನ್ಯಾವನು ತಂದಿದಾನೋ ಪತ್ತೆ ಮಾಡಿ ಅವನು ಕೇಳಿದಷ್ಟು ದುಡ್ಡು ಬಿಸಾಕಿ ಇಡೀ ಮೂಟೆಯನ್ನೆ ಕೊಂಡರೂ ನಡೆಯುತ್ತೆ!" ದೌಲತ್‌ರಾಮ್ ಅತ್ಯಂತ ವೇಗವಾಗಿ ಮುಂದಿನ ವ್ಯೂಹಗಳನ್ನೆಲ್ಲಾ ಯೋಚಿಸಿ ಕುಟ್ಟಿಗೆ ಪಿಸುದನಿಯಲ್ಲಿ ಹೇಳಿದ.

ಕುಟ್ಟಿಗೆ ತಮಗೆ ಈ ಕೆಲಸ ಹೇಳಿದ ಲಾಟ್ರಿಟಿಕೆಟ್ ಶಾಸ್ತ್ರಿ ಮೇಲೆ ಅಸಾಧ್ಯ ಸಿಟ್ಟು ಬಂದಿತ್ತು. "ನಾನು ಪಾಶಿಗೆ ಹೋದ್ರು ಪರ್ವಾಗಿಲ್ಲ. ಆ ಬೋಸುಡಿಮಗನ ಮೂಳೆ ಮುರಿಯೋದು ಮಾತ್ರ ಗ್ಯಾರೆಂಟಿ. ಈ ಅಡ್ನಾಡಿ ಸೂಳೇಮಗನ ದೆಸೆಯಿಂದ್ಲೇ ಕಂಬ್ಳಿಸಿದ್ದಪ್ಪ ಊರ್ಬಿಟ್ಟು ಓಡೋಗಿದ್ದು. ಈ ದಂಧೇಲಿದ್ಮೇಲೆ ಯಾವನ ನಸೀಬು ಹ್ಯಾಗೆ ಅಂತ ಹೇಳಕ್ಕಾಗಲ್ಲ. ಇಂಥೋರೊಂದು ನಾಕು ಜನಾನ ತೆಗೆದು ಹೋದ್ರೆ ಕಟ್ಕೊಂಡಿರೋ ಪಾಪ ಒಂಚೂರು ಕಡಮೇನಾದ್ರು ಆಗತ್ತೆ" ಎಂದು ದೌಲತ್‌ರಾಮ್ ಕಿವಿಯಲ್ಲಿ ಉಸುರಿದ.

"ಮೊದಲು ನಮ್ಮ ಕೂಲಿ ಇಪ್ಪಿಪ್ಪತ್ತು ಸಾವಿರ ಇಸ್ಕೊಳೋ ದಾರಿ ನೋಡೋಣ. ದುಡ್ಡು ಸಿಕ್ಕೋ ಹಂಗಿದ್ರೆ ಯಾರ ಮೂಳೆ ಬೇಕಾದ್ರು ಮುರಿಯೋಣ. ಕೂಲಿಸಿಕ್ಕದೇ ಇರೋ ಕೆಲಸ ನನಗೆ ಹೇಳಬೇಡ!" ಎಂದು ಖಂಡತುಂಡವಾಗಿ ದೌಲತ್‌ರಾಮ್ ಕುಟ್ಟಿಯ ಭಾವೋದ್ವೇಗದ ನಿರ್ಧಾರವನ್ನು ಖಂಡಿಸಿದ. ಆದರೆ ಕುಟ್ಟಿಗೆ ಮಾತ್ರ ಕೋಪ ಹತ್ತಿಕ್ಕಲು ಅಸಾಧ್ಯವಾಗಿತ್ತು.

ಬಸ್‌ಸ್ಟಾಂಡಿನಲ್ಲಿ ಬಸ್ ನಿಲ್ಲುತ್ತಿದ್ದಂತೆಯೇ ಒಂದಷ್ಟು ಜನ ಕಿಟಕಿಯಿಂದ ಜಾಗ ಬುಕ್ ಮಾಡಲು ಎಂತೆಂಥದನ್ನೋ ತುರುಕಲು ಪ್ರಯತ್ನಿಸುತ್ತ ಬಸ್ಸಿಗೆ ಮುತ್ತಿದರು. ಭಿಕ್ಷುಕರನೇಕರು ತಮ್ಮ ಕರುಣಾಜನಕವಾದ ಪ್ಯಾನ್ಸಿಡ್ರೆಸ್ಸು ಸರಿಯಾಗಿದೆಯೆ ಒಮ್ಮೆ ಅವಲೋಕಿಸಿ ಗಂಟಲು ಸರಿಮಾಡಿಕೊಳ್ಳುತ್ತ ಭಿಕ್ಷಾಟನೆಗೆ ಸಿದ್ಧರಾದರು.

ಕಂಡಕ್ಟರು ಬಾಗಿಲಬಳಿ ನಿಂತಿದ್ದವನು ಬಸ್ ನಿಂತಕೂಡಲೆ ಕೆಳಗಿಳಿದು ಕೂಲಿಗಳಿಗೆ "ಏ, ತಡೀರ್‍ರೋ ಚೆಕ್ಕಿಂಗ್‌ನವರು ಚೆಕ್ ಮಾಡಬೇಕಂತೆ" ಎಂದು ಕೂಗಿದ. ಆದರೂ ಕಾಖಿ ಬಟ್ಟೆಯವರನ್ನು ಒತ್ತರಿಸಿ ಹತ್ತುವವರು ದಬಾಯಿಸಿ ನುಗ್ಗುತ್ತಿದ್ದರು.

ಬಾಗಿಲ ಪಕ್ಕದಲ್ಲೇ ಕುಳಿತಿದ್ದ ಕುಟ್ಟಿಗೂ ದೌಲತ್ ರಾಮನಿಗೂ ಬಸ್ ನಿಲ್ಲುತ್ತಿದ್ದಂತೆಯೇ ಇಳಿದು ಹೊರನಿಲ್ಲುವುದು ಕಷ್ಟವಾಗಲಿಲ್ಲ. ಖಾಲಿ ಕೈ ಬೀಸಿಕೊಂಡು ಇಳಿದ ಇವರ ಕಡೆ ಇನ್‌ಸ್ಪೆಕ್ಟರು ಕಣ್ಣೆತ್ತಿ ಸಹ ನೋಡಲಿಲ್ಲ. ಇಬ್ಬರಿಗೂ ಬಸ್ಸಿನೊಳಗೆ ಬಹಳ ಹೊತ್ತಿನಿಂದ ಕುಳಿತು ಒಂದಕ್ಕೆ ವಿಪರೀತ ಅವಸರವಾಗಿತ್ತು. ಈ ಗಡಿಬಿಡಿ ಗೊಂದಲಗಳಲ್ಲಿ ಎಕ್ಸೈಜಿನವರು ಚೆಕ್ಕಿಂಗ್ ಮಾಡಿ ಮುಗಿಸಬೇಕಾದರೆ ತುಂಬಹೊತ್ತು ಬೇಕಾಗುತ್ತದೆ. ಒಂದ ಮಾಡಿ ಬಂದು ಮುಂದೇನಾಗುತ್ತೆ ಎಂದು ದೂರದಿಂದ ವೀಕ್ಷಿಸೋಣ ಎಂದು ತೀರ್ಮಾನ ಮಾಡಿ ಬಸ್‌ಸ್ಟಾಂಡಿನ ಆಚೆ ಇದ್ದ ಕಕ್ಕಸ್ಸಿನ ಕಡೆಗೆ ಹೋದರು.

"ಎಲಕ್ಕಿಯವೆರಡೂ ಹಳದಿ ಅಮೋಫಾಸ್ ಮೂಟೆ. ಜ್ಞಾಪಕ ಇಟ್ಟುಕೋ" ಎಂದು ಕುಟ್ಟಿ ಹೇಳಿದ.

"ಇಬ್ಬರಲ್ಲೊಬ್ಬರು ಅಲ್ಲೇ ಇದ್ದಿದ್ದರೆ ಒಳ್ಳೆಯದಿತ್ತು" ಎಂದ ದೌಲತ್ ರಾಮ.

"ಯಾಕೆ? ಅದರ ಮೇಲೆ ಕೂತಿದ್ದೋರು ನಾವಿಬ್ರೇ ಅಂತ ಎಲ್ಲರಿಗೂ ಗೊತ್ತಿದೆ. ಪೋಲಿಸಿನವರ ನಿಗಾ ಬೀಳಲಿ ಅಂತಾನಾ?" ಎಂದು ಕುಟ್ಟಿ ಅಪಹಾಸ್ಯದ ದನಿಯಲ್ಲಿ ಕೇಳಿದ.

ಒಂದಷ್ಟು ಜನ ಇವರು ಇಳಿದ ಬಸ್ಸಿನ ಕಡೆಗೆ ನೋಡುತ್ತಾ "ಓ! ಏನೋ ಚೆಕ್ಕಿಂಗ್ ನಡೀತಾ ಇದೆ! ಹಂಗಾರೆ ಬಸ್ ಹೊರಡದು ಇನ್ನೂ ತಡ ಕಾಣ್ತದೆ!" ಎಂದು ಮಾತಾಡಿಕೊಳ್ಳುತ್ತ ಇವರು ಇಳಿದ ಬಸ್ಸಿನ ಕಡೆಗೆ ಲಗುಬಗೆಯಿಂದ ಧಾವಿಸಿದರು.

* * * * *

ಕುಟ್ಟಿ, ದೌಲತ್‌ರಾಮ್ ಅತ್ತ ಹೋದಕೂಡಲೆ ಬಸ್ ಬಾಗಿಲು ಬಳಿ ದೊಡ್ಡದೊಂದು ಅನಾಹುತ ಆಯ್ತು!

ರಾಯಚೂರು ಕಡೆಯ ಬೋಳಮ್ಮ ಒಂದು ಡ್ರೈವರ್ ಸೀಟಿನ ಹಿಂದುಗಡೆಯೇ ಕುಳಿತಿದ್ದಿದ್ದು ಮುಗ್ಗುಲು ವಾಸನೆ ಹೊಡೆಯುತ್ತಿದ್ದ ತನ್ನ ಬಟ್ಟೆ ಗಂಟನ್ನು ಹೊತ್ತುಕೊಂಡು ದಡದಡ ಎಲ್ಲರನ್ನೂ ತಳ್ಳಿಕೊಂಡು ಮುನ್ನುಗ್ಗಿತು. ಅದೇನು ವಿಧವೆ ಎಂದು ತಲೆ ಬೋಳಿಸಿಕೊಂಡಿದ್ದಳೋ ಅಥವಾ ದೇವಸ್ಥಾನದಲ್ಲಿ ಮುಡಿ ಕೊಟ್ಟು ತಲೆ ನುಣ್ಣಗಾಗಿತ್ತೋ! ಯಾರಿಗೆ ಗೊತ್ತು! ದೇವಪುರದಲ್ಲಿ ಆಕೆ ರಾಯಚೂರು ಬಸ್ಸು ಹಿಡಿಯಬೇಕಿತ್ತು. ಆದರೆ ಆಕೆ ಧಡಧಡ ನುಗ್ಗಿದ್ದು ರಾಯಚೂರು ಬಸ್ಸು ಹತ್ತಿಕೊಳ್ಳುವುದಕ್ಕಲ್ಲ. ಏಕೆಂದರೆ ರಾಯಚೂರು ಬಸ್ಸು ಇನ್ನೂ ಬಂದೇ ಇರಲಿಲ್ಲ.

ಖುದ್ದೂಸ್ ಎಕ್ಸ್‌ಪ್ರೆಸ್ ಘಾಟಿ ಹತ್ತಲು ಪ್ರಾರಂಭಿಸಿದಾಗಲೇ ನಾಲ್ಕು ಅಡಿ ದೂರದಲ್ಲಿ ಏದುಸಿರು ಬಿಡುತ್ತ ಹೊಗೆ ಕಾರುತ್ತಿದ್ದ ಎಂಜಿನ್ನಿನ ಡೀಸೆಲ್ ವಾಸನೆಗೆ ಮುದುಕಿಯ ಹೊಟ್ಟೆ ತೊಳಸಲು ಶುರುವಾಯ್ತು. ಕಂಡಕ್ಟರು ಕಿಟಕಿ ತೆಗೆದು ವಾಂತಿ ಮಾಡ್ರಿ ಎಂದು ಮನವಿ ಮಾಡಿದಾಗ ಆಕೆ ಹೊಟ್ಟೆಯೊಳಗೆ ಕಾರ ಕಡೆಯುವ ಸದ್ದು ಶುರುವಾಗಿತ್ತು. ಆದರೇನು ಮಾಡುವುದು! ಆ ಹೊಟ್ಟೆಯ ತಳಮಳ ವಾಂತಿಯಲ್ಲಿ

ಪರ್ಯಾವಸಾನವಾಗುತ್ತೊ, ಭೇದಿಯಲ್ಲಿ ಪರ್ಯಾವಸಾನವಾಗುತ್ತೋ ತಿಳಿಯದ ಆ ಮುದುಕಿ ಪಿಳಿಪಿಳಿ ಕಣ್ಣು ಬಿಡುತ್ತ ಕುಳಿತಿತ್ತು. ರಾಯಚೂರಿಗೆ ತಲುಪುವವರೆಗೂ ಹಸಿವಾಗಬಾರದೆಂದು ಮುನ್ನೆಚ್ಚರಿಕೆ ಕ್ರಮವಾಗಿ ದೇವಸ್ಥಾನದ ಧರ್ಮಾರ್ಥವನ್ನು ತಾರಾಮಾರಿ ತಿಂದಿದ್ದು ಆ ಪರಮಾತ್ಮನಿಗೆ ಪ್ರೀತಿಯಾಗಲಿಲ್ಲ ಎನ್ನುವುದು ಘಾಟಿ ತಿರುಗಣೆಯಲ್ಲಿ ಪ್ರತಿಸಾರಿ ಬಸ್ ತಿರುಗಿದಾಗಲೂ ಆಕೆಗೆ ಅನುಭವಗಮ್ಯ ವಾಗತೊಡಗಿತ್ತು.

ದೇವರೇ ಎಂದು ಭಗವನ್ನಾಮ ಸ್ಮರಣೆ ಮಾಡುತ್ತ ದೇವಪುರದವರೆಗೂ ಹೇಗೋ ತಡೆದುಕೊಂಡಿದ್ದ ಆಕೆಯ ಸ್ಥಿತಿ ಬಸ್‌ಸ್ಟಾಂಡ್ ತಲುಪುವ ವೇಳೆಗೆ ಪರಾಕಾಷ್ಠೆ ಮುಟ್ಟಿತು. ಇನ್ನು ತಡೆಯಲಸಾಧ್ಯವಾಗಿ ಬಸ್ಸು ನಿಂತಿದ್ದೇ ತಡ ಎದ್ದು ಓಡಿ ಬಂದಿದ್ದಳು. ಆದರೆ ಬಾಗಿಲಿಗೆ ಗಿಟ್ಟ ಹೊಡೆದಂತೆ ಜನ ನಿಂತಿದ್ದನ್ನೂ, ಕಣ್ಣಿಗೆ ಕಾಣುವವರೆಗೂ ಬರಿಯ ತಲೆಗಳೇ ಕಾಣುತ್ತಿದ್ದುದನ್ನು ನೋಡಿ ಆಕೆಗೆ ಝಂಗಾಬಲವೇ ಉಡುಗಿಹೋಯ್ತು. ''ವಾಂತಿಯಾಗುತ್ತೆ, ಜಾಗಬಿಡಿ'' ಎಂದು ಮೂರುನಾಲ್ಕುಬಾರಿ ಕೂಗಿದರೂ ಯಾರೂ ಕೇಳಿಸಿಕೊಳ್ಳಲೇ ಇಲ್ಲ. ಅದರ ಬದಲು ಇನ್‌ಸ್ಪೆಕ್ಟರು ಇಳಿಯುವವರನ್ನು ತಡೆಯಿರಿ ತಡೆಯಿರಿ ಎಂದು ಜಬರ್ದಸ್ತು ಮಾಡುತ್ತ ಹಿಂದಕ್ಕೇ ತಳ್ಳುತ್ತಿದ್ದ. ಮುದುಕಿ ಹಾಗೂ ಮತ್ತೊಂದು ಸಾರಿ ಜಾಗ ಬಿಡುವಂತೆ ಕೇಳಿಕೊಂಡಿತು. ಅದನ್ನು ಏನೆಂದು ಸಹ ಗಮನಿಸದೆ ಇನ್‌ಸ್ಪೆಕ್ಟರ್ ತಾಳು ತಾಳು ಎಂದು ಅಧಿಕಾರಶಾಹಿಯ ಮರ್ಜಿಯಲ್ಲಿ ತಲೆಯಾಡಿಸಿದ.

ಬೋಳಮ್ಮ ಮತ್ತೊಮ್ಮೆ ಮನವಿ ಮಾಡಲು ಬಾಯಿ ಬಿಟ್ಟಾಗ ಮಾತಿನ ಬದಲು ಹೊಟ್ಟೆಯೊಳಗಿಂದ ಸಿಡಿದು ಹೊರಹೊಮ್ಮಿದಂತೆ ಭಯಂಕರ ವಾಂತಿಯ ಧಾರೆಯೊಂದು ಹೊರಹೊಮ್ಮಿತು. ಇನ್‌ಸ್ಪೆಕ್ಟರು ಆಫೀಸರು ಎದುರೇ ಇದ್ದುದರಿಂದ ಅದರ ನೇರ ಬಿರುಮಳೆಗೇ ಅವರು ಸಿಕ್ಕಿಕೊಂಡರು. ದೂರ ಇದ್ದವರಿಗೆ ತುಂತುರು ಮಳೆಯ ಸ್ನಾನ! ಅರ್ಧ ಬಕೆಟ್ ದುರ್ಗಂಧಪೂರಿತ ವಾಂತಿ ಬೋಳಮ್ಮನ ಬಾಯಿಂದ ಆಸ್ಫೋಟಿಸಿದ ಕೂಡಲೆ ''ಅಯ್ಯಯ್ಯೋ ಹಾಳ್ಮುಂಡೆ ಕಕ್ತಿದಾಳೆ ಕಣ್ರೋ!'' ಎಂದು ಕೂಗಾಡುತ್ತ ನುಗ್ಗುತ್ತಿದ್ದವರೆಲ್ಲ ಹಿಂದಿರುಗಿ ಇಮ್ಮಡಿ ರಭಸದಲ್ಲಿ ಅಕ್ಕಪಕ್ಕದವರನ್ನೆಲ್ಲಾ ತಳ್ಳುತ್ತ, ಬೀಳಿಸುತ್ತ, ಢಿಕ್ಕಿ ಹೊಡೆಯುತ್ತ ಓಡಿದರು. ಆದರೂ ಮುದುಕಿ ಹೊಟ್ಟೆಯೊಳಗೆ ಅಲ್ಲಿದ್ದವರಿಗೆಲ್ಲ ಸ್ನಾನ ಮಾಡಿಸುವಷ್ಟಿತ್ತೆಂದು ಕಾಣುತ್ತದೆ. ಎದುರಿಗಿದ್ದ ಕಾಖಿ ಯೂನಿಫಾರಂಗಳ ಕತೆಯಂತೂ ಮುಗಿದೇ ಹೋಗಿತ್ತು. ಅವರ ಹುಬ್ಬು ಮೀಸೆಗಳ ಮೇಲೆಲ್ಲ ದುರ್ವಾಸನೆಯ ಬೇಳೆತೊವ್ವೆ, ಕರಿಬೇವಿನ ಎಲೆಗಳು ಕುಳಿತಿದ್ದವು. ಜೇಬುಗಳಲ್ಲೆಲ್ಲಾ ವಾಂತಿ ತುಂಬಿಕೊಂಡಿತ್ತು. ಆ ಅಸಹ್ಯದ ಪರಮಾವಧಿಯಲ್ಲಿ ಅವರಿಗೆ ಅವರ ಕರ್ತವ್ಯ ಉದ್ದೇಶ ಎಲ್ಲ ಮರೆತು ಹೋದವು. ಮುದುಕಿ ಮತ್ತೊಮ್ಮೆ ಬಾಯಿ ಕಳೆಯುವ ಮೊದಲೇ ಎಲ್ಲರೊಡನೆ ಒಬ್ಬರಾಗಿ ಅವರೂ ಓಡಿದರು. ಗುಂಪಿನ ಮೇಲೆ ಲಾಠಿ ಚಾರ್ಜ ಮಾಡಿ ಚದುರಿಸಿದಂತಾಗಿ ಅಲ್ಲಿದ್ದವರೆಲ್ಲಾ ಮೈ ಕೈ ತೊಳೆದುಕೊಳ್ಳಲೋ,

ಬಟ್ಟೆ ಬದಲಾಯಿಸಲೋ, ಸ್ನಾನ ಮಾಡಲೋ, ಬಸ್ ಸ್ಟಾಂಡನ್ನೇ ಬಿಟ್ಟು ಓಡಿಹೋದರು. ಸುರೇಶನೂ, ಗೌರಿಯೂ ಎಲ್ಲರೊಟ್ಟಿಗೆ ಇಳಿದು, ಇಳಿಯುತ್ತಾ ವಾಂತಿ ತುಳಿದಿದ್ದರಿಂದ ಅಸಹ್ಯವಾಗಿ, ಕಾಲು ತೊಳೆದುಕೊಳ್ಳಲು ಚೀಲ ಹೊತ್ತುಕೊಂಡು ಬೇಗ ಬೇಗ ನಡೆದು ಎತ್ತಲೋ ಹೋದರು.

ಕುಟ್ಟಿ ದೌಲತ್‌ರಾಮ್ ಇಬ್ಬರೂ ಒಂದ ಮಾಡಿ ಪ್ಯಾಂಟ್ ಗುಂಡಿ ಹಾಕಿಕೊಳ್ಳುತ್ತಾ ಆಚೆ ಬಂದು ಬಸ್ ಕಡೆಗೆ ನೋಡಿದಾಗ ಅವರಿಗೆ ಪಾರ್ಶ್ವವಾಯು ಹೊಡೆದಂತಾಯ್ತು! ಅವರು ಬಂದ ಬಸ್ಸೊಂದೇ ಖಾಲಿ ನಿಂತಿತ್ತು. ಡ್ರೈವರೂ ಇಲ್ಲ! ಕಂಡಕ್ಟರೂ ಇಲ್ಲ! ಪೋಲೀಸರೂ ಇಲ್ಲ! ಎಕ್ಸೈಜಿನವರೂ ಇಲ್ಲ! ಹತ್ತುವವರೂ ಇಲ್ಲ! ಇಳಿಯುವವರೂ ಇಲ್ಲ! ಏಲಕ್ಕಿ ತುಂಬಿ ತಂದಿದ್ದ ಅಮೋಘಾಸಿನ ಹಳದಿ ಮೂಟೆಗಳೂ ಇಲ್ಲ! ಒಂದಷ್ಟು ಕಾಗೆಗಳೂ ನಾಯಿಗಳೂ ಬಸ್ಸಿನ ಬಾಗಿಲು ಹತ್ತಿರ ಮುತ್ತಿಕೊಂಡು ಎಂಥದನ್ನೋ ಮೂಸಿ ನೋಡುತ್ತ ನೆಕ್ಕುತ್ತ ನಿಂತಿದ್ದವು. ಅವರಿಬ್ಬರಿಗೂ ಒಮ್ಮೆಲೇ ಕಣ್ಣು ಕತ್ತಲು ಬಂದಂತಾಯ್ತು. ಪೋಲೀಸರ ಕೈಗೆ ಅಕಸ್ಮಾತ್ ಸಿಕ್ಕಿಬಿದ್ದಿದ್ದರೂ ಅವರಿಗೆ ಇಷ್ಟು ಆಘಾತವಾಗುತ್ತಿರಲಿಲ್ಲವೇನೋ!



# ಅಬ್ಬೂಸಾಲಿಯ ಉಪದೇಶ! - ೧೧



"ಸುರೇಶಣ್ಣಾ, ಓ ಸುರೇಶಣ್ಣಾ!" ಎಂದು ದೇವಪುರದ ಪೇಟೆ ಬೀದಿಯಲ್ಲಿ ಹೋಗುತ್ತಿರಬೇಕಾದರೆ ಯಾರೋ ಗಟ್ಟಿಯಾಗಿ ಸುರೇಶನ ಹೆಸರು ಹಿಡಿದು ಕೂಗಿದ್ದು ಕೇಳಿಸಿತು. ಧ್ವನಿ ಕೇಳಿಯೇ ಅದು ಏಲಕ್ಕಿ ವ್ಯಾಪಾರಿ ಅಬ್ಬೂಸ್‌ಆಲಿ ದನಿ ಎಂದು ಸುರೇಶನಿಗೆ ಸ್ಪಷ್ಟವಾಯ್ತು. "ಇನ್ನು ಇವನ ಹರಿಕತೆ ಬೇರೆ ಕಾಲು ಗಂಟೆ ಕೇಳಬೇಕು" ಎಂದು ಮೂಟೆಯನ್ನು ದಾರಿಪಕ್ಕದ ನೆರಳಲ್ಲಿ ಇಡುತ್ತ ಗೌರಿ ಗೊಣಗಿದಳು. ಅವನು ಯಾವಾಗಲೂ ಏಲಕ್ಕಿ ಕಡಿಮೆ ಬೆಲೆಗೆ ಕೊಳ್ಳುತ್ತಾನೆಂದು ಅವನ ಮೇಲೆ ಗೌರಿಗೆ ಅಸಹನೆ. ಯಾರು ಯಾವ ರೇಟಿಗೆ ಕೊಂಡರೂ ಅವಳಿಗೆ ಮೋಸ ಹೋಗಿದ್ದೇವೆಂದು ಯಾವಾಗಲೂ ಅನ್ನಿಸುತ್ತಲೇ ಇರುತ್ತದೆ. ಅದರಲ್ಲೂ ಸುರೇಶ ಏನನ್ನಾದರೂ ಕೊಂಡರೆ ಅಥವಾ ಮಾರಿದರಂತೂ ಸರಿಯಾಗಿ ಟೋಪಿ ಬಿದ್ದೇ ಇರುತ್ತಾನೆನ್ನುವುದರಲ್ಲಿ ಅವಳಿಗೆ ಅಚಲ ನಂಬಿಕೆ. ಸುರೇಶನಂತೂ ಇದೊಂದು ಅವಳ ಮನಸ್ಸಿನ ಖಾಯಿಲೆ ಎಂದೇ ತೀರ್ಮಾನ ಮಾಡಿದ್ದ. ಅವಳ ಹತ್ತಿರ ಎಷ್ಟೇ ದುಡ್ಡಿರಲಿ ಹತ್ತುಪೈಸ ಐದುಪೈಸ ಕಡಮೆಗೆ ಸಿಗುತ್ತದೆಂದು ನೂರಾರು ಅಂಗಡಿಗಳಲ್ಲಿ ರೇಟು ಕೇಳಿಕೊಂಡು ತಿರುಗುವುದು ನೋಡಿದರೆ ಯಾರಿಗೂ ಹಾಗನ್ನಿಸುವುದು ಸಹಜ. ಗೌರಿ ಸುರೇಶ ಸೇರಿಕೊಂಡು ಸಾವಿರಾರು ರೂಪಾಯ ಪೋಲು ಮಾಡಿದ್ದರೂ, ಚೌಕಾಶಿ ಮಾಡದೆ ವ್ಯಾಪಾರ ಮಾಡುವವರನ್ನು ಕಂಡರೆ ಗೌರಿಗೆ ಸಿಟ್ಟು. ಏನೇನೋ ಕೊಳ್ಳಬೇಕೆಂದು ಕಾರ್ಯಕ್ರಮ ಇಟ್ಟುಕೊಂಡು ಗೌರಿ ಪೇಟೆಗೆ ಬಂದಿದ್ದರಿಂದ

ಇವತ್ತು ಅಂಗಡಿ ಅಂಗಡಿ ಸುತ್ತಿಸಿ ಪ್ರಾಣ ತೆಗೆಯುತ್ತಾಳೆಂದು ಸುರೇಶ ಬಸ್ ಹತ್ತುವಾಗಲೆ ಅಂದುಕೊಂಡಿದ್ದ.

ಅಬ್ಬೂಸಾಲಿ ಅವನ ಪೆಟ್ಟಿಗೆ ಅಂಗಡಿಯಿಂದ ಇಳಿದು ಸುರೇಶನ ಕಡೆಗೆ ಬರುತ್ತಿರಬೇಕಾದರೆ "ನೋಡ್ರಿ ಅವನ ಹತ್ತಿರ ಪಂಚಾತಿಗಿ ಹೊಡೀತಾ ಇಲ್ಲೇ ಕೂತರೆ ನಾ ಸುಮ್ಮನಿರೋಲ್ಲ. ನನಗೆ ಸುಮಾರು ಕೆಲಸ ಇದೆ ಇವತ್ತು" ಎಂದು ಸುರೇಶನ ಕಡೆಗೆ ತಿರುಗಿ ಗೊಣಗಿದಳು.

"ಮೂಟೆ ಒಂದು ನಿಮಿಷ ಮರದ ನೆರಳಲ್ಲಿಟ್ಟು ಸುಧಾರಿಸಿಕೋ ಮಾರಾಯ್ತಿ! ಸುಮಾರು ಕೆಲಸ ಎಂಥದು ನಿಂದು? ತುರಿಯೋ ಮಣೆ, ಬ್ಲೌಸ್ ಪೀಸು ಹುಡುಕೋದು ತಾನೆ! ಅದಕ್ಕೆ ಸಾಯಂಕಾಲದವರೆಗೂ ಟೈಮ್ ಇದೆಯಲ್ಲಾ! ಬೇಕಾದರೆ ಹೋಟೆಲಿನಲ್ಲಿ ರೂಮು ತಗೊಂದು ನಾಳೆ ಸಾಯಂಕಾಲದವರೆಗೂ ಹುಡುಕು" ಎಂದು ಅವಳ ಷಾಪಿಂಗ್ ಚಪಲವನ್ನು ಸುರೇಶ ಅಪಹಾಸ್ಯ ಮಾಡಿದ.

"ಏನ್ರಮ್ಮಾ ನೀವು? ನಾನು ಅಲ್ಲೇ ಅಂಗಡಿ ಮೇಲೆ ಕೂತಿದ್ದೀನಿ! ನನಗೊಂದು ಮಾತು ಹೇಳಿದರೆ ಮೂಟೆ ತಂದು ಕೊಡ್ತಿರಲಿಲ್ವಾ? ಅಂಗಡಿ ಎದುರ ನೀವು ಹೋಗಿದ್ದು ನನಗೆ ಕಣ್ಣೇ ಕಾಣ್ಲಿಲ್ಲ." ಎಂದು ಗೌರಿ ಮೂಟೆ ಹೊತ್ತುಕೊಂಡು ಹೋಗುತ್ತಿರುವುದು ದೊಡ್ಡ ಅಚಾತುರ್ಯ ಎನ್ನುವಂತೆ ಮಾತಾಡಿ, ಸುರೇಶನ ಕಡೆಗೆ ತಿರುಗಿ "ಅವರಿಗೇನ್ನೋ ಹೇಳೋದಕ್ಕೆ ನಾಚಿಗೆ ಅಂದರೆ ನಿಮಗಾದರೂ ಗೊತ್ತಾಗಬ್ಯಾಡವ?" ಎಂದು ಅಬ್ಬೂಸ್ ಅಲಿ ಬರಬರುತ್ತಲೇ ವಿಷಾದ ಸೂಚಿಸಿದ.

ಅವನ ವಿಶ್ವಾಸದ ನುಡಿಗಳನ್ನು ಕೇಳಿ ಗೌರಿಗೆ ಅವನ ಬಗ್ಗೆ ಇದ್ದ ಅಸಹನೆ ಕೊಂಚ ಕಡಮೆಯಾಯ್ತು. "ಹಂಗೇನಿಲ್ಲ ಅಬ್ಸಾಲಿ. ಮೂಟೆ ನೋಡಕ್ಕೆ ಹಿಂಗೆ ಕಾಣ್ತದಷ್ಟೆ! ತೂಕ ಏನಿಲ್ಲ." ಎಂದಳು.

"ನಿಮ್ಮನೇಗೆ ಬಂದು ಎಷ್ಟುಸಾರಿ ಯಾಪಾರ ಮಾಡಿದೀನಿ! ಎಷ್ಟು ಸಾರಿ ಕಾಪಿ ಟೀ ಕುಡ್ಕೊಂಡು ಬಂದಿದೀನಿ! ಒಂದು ದಿನ ನಿಮ್ಮ ಮೂಟೆ ಹೊತ್ಕೊಂಬಂದು ಕೊಟ್ರೆ ನಮ್ಮ ಕೈ ಸವೆದು ಹೋಗತ್ತ? ಹೇಳಿ" ಎಂದು ಅಬ್ಬೂಸಾಲಿ ಗೌರಿಗೆ ಪ್ರಶ್ನೆ ಕೇಳಿದ. ಅಬ್ಬೂಸಾಲಿ ಮಾತುಗಾರಿಕೆಯ ಪರಿಚಯ ಚೆನ್ನಾಗಿದ್ದ ಗೌರಿ ಅವನು ಅಷ್ಟೊಂದು ಉಪಚಾರ ಆತ್ಮೀಯತೆ ವ್ಯಕ್ತಪಡಿಸಿದ್ದು ನೋಡಿ ಏನೋ ವ್ಯವಹಾರ ಪ್ರಾರಂಭಿಸಲೆಂದೇ ಈ ಪೀಠಿಕೆ ಹಾಕುತ್ತಿದ್ದಾನೆ ಎಂದು ಅನುಮಾನಿಸಿದಳು. ಆದರೂ ಅಬ್ಬೂಸಾಲಿ ಅವರಿಗೆ ಅಲ್ಲಿದ್ದ ಮಿಕ್ಕ ಎಲ್ಲಾ ಏಲಕ್ಕಿ ದಳ್ಳಾಳಿಗಳಿಗಿಂತ ಹೆಚ್ಚು ಪರಿಚಯದವನಾಗಿದ್ದ.

"ಅದಿರ್ಲಿ, ಈಗೇನಾಗಬೇಕು ನಿನಗೆ ಸಾಬು?" ಎಂದು ನೇರವಾಗೇ ಗೌರಿ ಪ್ರಶ್ನೆ ಕೇಳಿದಳು.

"ನಂಗೇನಾಗಬೇಕು ಗೌರಿಯಮ್ಮಾ? ಈ ಸಾಬಿ ಏಲಕ್ಕಿ ಬಾಚಿಕೊಳ್ಳೋದಕ್ಕೆ ಮಾತಾಡಿಸಿಕೊಂಡು ಬಂದ ಅಂತ ತಿಳೀ ಬ್ಯಾಡ್ರಿ! ಈಗ ಇಲ್ಲೀತಂಕ ಬಂದಿದೀರ. ನಾಲ್ಕು

ಹೆಜ್ಜೆ ನನ್ನ ಅಂಗಡೀವರೆಗೆ ಬಂದು ಒಂದ್ಲೋಟ ಕಾಪಿ ಕುಡಿದು ಹೋಗ್ರಿ. ನನಗೆ ಇಸ್ವಾಸ ಮುಖ್ಯ. ಯಾಪಾರಾ ಎಲ್ಲ ಆಮೇಲೆ'' ಎಂದು ಅಬ್ಬೂಸ್ ಆಲಿ ಅವರಿಬ್ಬರನ್ನೂ ಕರೆದ.

''ಇನ್ನೊಂದುಸಾರಿ ಬರ್ತೀವಿ ಮಾರಾಯ. ಇವತ್ತು ನಮಗೆ ಇನ್ನೂ ವಿಪರೀತ ಕೆಲಸ ಇದೆ.'' ಎಂದು ಸುರೇಶ ಹೇಳಿದ.

''ಸುರೇಶಣ್ಣಾ, ನಾನು ಯಾಪಾರಕ್ಕೆ ಅಂತ ಕರೀತಾ ಇಲ್ಲ. ಇಸ್ವಾಸ ಅಷ್ಟೆ. ಯಾಲಕ್ಕಿ ನೀವು ಕೊಟ್ರೂ ನಂಗೆ ಈಗ ಬ್ಯಾಡ. ಒಂದು ತಿಂಗಳಿಂದ ನಂದು ಯಾಪಾರ ಬಂದ್ ಮಾಡಿದೀನಿ'' ಎಂದು ಹೇಳಿ ಅಂಗಡಿಗೆ ಬರಲು ಸಾಬಿ ಒತ್ತಾಯಿಸಿದ.

''ಯಾಕೋ ಮಾರಾಯ? ಏಲಕ್ಕಿಗೆ ಒಳ್ಳೆ ರೇಟು ಬರೋ ಟೈಮಿಗೆ ವ್ಯಾಪಾರ ಬಂದ್ ಮಾಡಿದೀನಂತಿ?'' ಎಂದು ಗೌರಿ ಕುತೂಹಲದಿಂದ ಕೇಳಿದಳು. ಸುಮ್ಮನೆ ಕುತೂಹಲ ಕೆರಳಿಸಿ ಹರಟೆ ಮುಂದುವರಿಸಲಷ್ಟೆ ಸಾಬಿ ಹೀಗೆ ಹೇಳುತ್ತಿದ್ದಾನೆ ಎಂದು ಅವಳು ತಿಳಿದಳು. ಏಕೆಂದರೆ ಅಬ್ಬೂಸ್ ಆಲಿಯದು ಜನ್ಮ ಜನ್ಮಾಂತರಗಳಿಂದ, ತಲೆತಲಾಂತರಗಳಿಂದ ಏಲಕ್ಕಿ ವ್ಯಾಪಾರದಲ್ಲೇ ಮುಳುಗಿ ಎದ್ದ ಮನೆತನ. ಅವನಪ್ಪನ ಕಾಲದ ಅವನ ಶ್ರೀಮಂತಿಕೆಯನ್ನೂ ಅವನು ಸಂಪಾದಿಸಿರುವ ಹಾಗೂ ಕಳೆದಿರುವ ದುಡ್ಡಿನ ಲೆಕ್ಕವನ್ನೂ ಗೌರಿ ಅವನ ಬಾಯಿಂದ ಕೊನೆಯ ಪಕ್ಷ ಒಂದು ನೂರುಸಾರಿಯಾದರೂ ಕೇಳಿರಬಹುದು ಈಗಲೂ ಸಹ ಅವನು ಕರೆಯುತ್ತಿರುವುದು ವ್ಯಾಪಾರಕ್ಕಲ್ಲದಿದ್ದರೆ, ತನ್ನ ಗತಕಾಲದ ವೈಭವಗಳನ್ನು ವರ್ಣಿಸಿ ಮತ್ತೊಮ್ಮೆ ಇಬ್ಬರೆದುರು ನಿಟ್ಟುಸಿರು ಬಿಡುತ್ತ ಕೂರುವುದಕ್ಕಿರಬೇಕು.

''ಯಾಕೇಂತ ಹೇಳ್ತೀನಿ ಬನ್ನಿ. ನಡು ಬೀದೀಲಿ ನಿತ್ಕೊಂಡು ಕೇಳಿದರೆ ಹೆಂಗೆ ಹೇಳಿ!'' ಎಂದು ಮತ್ತೊಮ್ಮೆ ಸಾಬು ಆಗ್ರಹಪಡಿಸಿದ.

ವಾಂತಿ ಮೆಟ್ಟಿದ್ದ ಮೆಟ್ಟುಗಳನ್ನು ತೊಳೆದುಕೊಳ್ಳಬೇಕೆಂದು ಸರಸರ ಕಾಲು ಹಾಕುತ್ತಿದ್ದ ಅವರಿಗೆ ಅಲ್ಲಿಂದ ಇಲ್ಲಿಯವರೆಗೆ ನಡೆದು, ಸಾಬಿ ಹತ್ತಿರ ಮಾತಾಡಿ ಮುಗಿಸುವ ವೇಳೆಗೆ ಅದು ಮರತೇ ಹೋಗುವ ಹಾಗಾಗಿತ್ತು. ಆಗೀಗ ಇಬ್ಬರ ಮನಸ್ಸಿನಲ್ಲೂ ಅದು ಸುಳಿದರೂ ಆಗಲೇ ಸಗಣಿ ಕೊಚ್ಚೆ ಇತ್ಯಾದಿ ಇಪ್ಪತ್ತಾರನ್ನು ಮೆಟ್ಟಿದ್ದರಿಂದ ವಿಶೇಷವಾಗಿ ಅದನ್ನು ತೊಳೆಯಬೇಕೆಂದು ಅನ್ನಿಸಲಿಲ್ಲವೋ ಏನೋ.

''ಮಾರಾಯಾ ಯಾಕೋ ಇವತ್ತು ಇದ್ದಕ್ಕಿದ್ದಹಾಗೆ ಮೋಡ ಕವಿದು ಮಳೆ ಬರುವಹಾಗಿದೆ. ಇನ್ನು ಪಿರಿಪಿರಿ ಸೋನೆ ಹಿಡೀತಂದರೆ ನಮ್ಮದು ಇವತ್ತಿನ ಕೆಲಸ ಕಂಪ್ಲೀಟು ಹಾಳೇ! ನಿನಗೆ ಹೇಳಿದರೆ ಅರ್ಥವಾಗುವುದಿಲ್ಲ'' ಎಂದು ಗೊಣಗುತ್ತ ಸುರೇಶ ಗೌರಿ ಜೊತೆ ಮನಸ್ಸಿಲ್ಲದ ಮನಸ್ಸಿನಿಂದ ಅಬ್ಬೂಸಾಲಿ ಅಂಗಡಿ ಕಡೆಗೆ ಕಾಲು ಹಾಕಿದ.

* * * *

ಏಲಕ್ಕಿ ಸೀಸನ್ನಿನ ಕಾಲದಲ್ಲಿ ದೇವಪುರದ ಬಸ್ ಸ್ಟಾಂಡಿನಲ್ಲಿ ಏಲಕ್ಕಿ ದಳ್ಳಾಳಿಗಳು

ಕಾಗೆ, ಕಂತ್ರಿನಾಯಿಗಳ ರೀತಿಯಲ್ಲಿ ಹೊಂಚುಹಾಕಿಕೊಂಡು ಕಾಯುತ್ತ ಕುಳಿತಿರುತ್ತಾರೆ. ಚಿಕ್ಕ ಪುಟ್ಟ ಗಂಟಿನೊಡನೆ ಇಳಿಯುವ ಪ್ರತಿಯೊಬ್ಬನನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾರೆ. ಅವರಿವರ ತೋಟದಲ್ಲಿ ಅಷ್ಟಿಷ್ಟು ಕದ್ದು ಒಂದು ಕೆ.ಜಿ ಎರಡು ಕೆ.ಜಿ ಮಾಡಿಕೊಂಡು ಬರುವವರನ್ನು ಅವರ ಮುಖ ನೋಡಿಯೇ ದಳ್ಳಾಳಿಗಳು ಸುಲಭವಾಗಿ ಗುರುತಿಸಿ ಬಿಡಬಲ್ಲರು. ಒಂದೆರಡು ಕೆ.ಜಿ ತರುವವರಿಗೆ, ಚಿಕ್ಕ ಪುಟ್ಟ ಬೆಳೆಗಾರರಿಗೆ ದೇವಪುರದ ಮಂಡಿಗಳಲ್ಲಿ ನಾನಾ ತರದ ತೊಂದರೆಗಳಿವೆ. ಅವರಿಗೆ ದುಡ್ಡಿನ ತುರ್ತು ಇರುವುದನ್ನು ತಿಳಿದು ಅವರ ಮಾಲನ್ನು ಹರಾಜಿಗಿಡದೆ ಮಂಡಿ ಸಾಹುಕಾರರೆ ಒಂದು ರೇಟು ಹೇಳಿ ಅವನ ಮಾಲನ್ನು ಹೇಗಿದೆ ಎಂದೂ ಕಣ್ಣೆತ್ತಿ ನೋಡದೆ ''ಅಲ್ಲಿಟ್ಟು ಹೋಗು'' ಎಂದು ಅವನ ಗಂಟಿಗೆ ಒಂದು ಮೂಲೆ ತೋರಿಸಿ ಬಿಡುತ್ತಾರೆ. ಏಲಕ್ಕಿಯನ್ನು ಎಳಬಿಸಿಲಿನಲ್ಲಿ ಒಣಗಿಸಿ, ಗೋಣಿತಾಟಿನಲ್ಲಿ ತಿಕ್ಕಿ ಅದಕ್ಕೆ ಪಾಲಿಷ್ ಕೊಟ್ಟು, ಅದನ್ನೊಂದು ಅಮೂಲ್ಯ ಪದಾರ್ಥವೆಂದು ಪರಿಭಾವಿಸಿ ತಂದ ಚಿಕ್ಕ ಪುಟ್ಟವರಿಗೆ ಈ ಮಂಡಿ ಸಾಹುಕಾರರ ತಿರಸ್ಕಾರದ ಧೋರಣೆ ಆಘಾತಕಾರಿಯಾಗಿರುತ್ತದೆ. ಎಷ್ಟೋ ಜನ ರೈತರು ಎಷ್ಟೇ ಬಡವರಾದರೂ ಆತ್ಮಗೌರವ ಉಳ್ಳವರು. ಜಮೀನಿನ ಒಡೆಯನಾದುದರಿಂದ ತಾನೊಬ್ಬ ಜಮೀನ್ದಾರನೆಂಬ ಹೆಮ್ಮೆ ಅವನ ಸುಪ್ತ ಪ್ರಜ್ಞೆಯ ಆಳದಲ್ಲಿ ಇದ್ದೇ ಇರುತ್ತದೆ. ಮಂಡಿ ಸಾಹುಕಾರರ ಹತ್ತಿರ ವ್ಯವಹಾರಕ್ಕೆ ಹೋದರೆ ತಾನು ಕಳೆದುಕೊಳ್ಳುವ ಲಾಭಕ್ಕಿಂತ ಮುಖ್ಯವಾಗಿ ತಾನು ಕಳೆದುಕೊಳ್ಳಬೇಕಾದ ಆತ್ಮಗೌರವ ಆತನನ್ನು ಬಾಧಿಸುತ್ತದೆ. ಮಂಡಿ ಸಾಹುಕಾರರಿಗೂ ದೊಡ್ಡ ದೊಡ್ಡ ವರ್ತಕರಿಗೂ ರೈತನ ಆತ್ಮಗೌರವವನ್ನು ಹೊಸಕಿಹಾಕಿ ತಮ್ಮ ಶ್ರೀಮಂತಿಕೆಯ ಅಟ್ಟಹಾಸ ಮೆರೆಯುವುದು ಲಾಭಕ್ಕಿಂತಲೂ ಮುಖ್ಯವಾದ ಮಾನಸಿಕ ಅಗತ್ಯವಾಗಿರುತ್ತದೆ. ಇಲ್ಲದಿದ್ದರೆ ಅವರ ಬ್ಯಾಂಕಿನ ಪಾಸ್ ಬುಕ್ಕಿನಲ್ಲಿ ಸಂಖ್ಯೆಗಳ ಮುಂದು ಸೇರಿಸುತ್ತಾ ಹೋಗುವ ಸೊನ್ನೆಗಳು ಅರ್ಥವನ್ನೇ ಕಳೆದುಕೊಳ್ಳುತ್ತವೆ. ಸೊನ್ನೆ ಸಾಲುಗಳ ಹಿಂದೆ ಸಂಖ್ಯೆ ಹಾಕಿದ ಕೂಡಲೆ ಸೊನ್ನೆಗಳೆಲ್ಲಾ ಹೇಗೆ ಅರ್ಥವತ್ತಾಗುತ್ತವೆಯೋ ಹಾಗೇ ದುಡ್ಡಿದ್ದವರಿಗೆ ಇತರರು ನೀಡುವ ಮರ್ಯಾದೆಯ ಅರ್ಥ ಅವರು ದುಡ್ಡಿಲ್ಲದವರತ್ತ ತೋರಿಸುವ ತಿರಸ್ಕಾರದ ಮೇಲೆ ನಿಂತಿದೆ.

ಈ ಮಂಡಿ ಸಾಹುಕಾರರ ಮತ್ತು ಚಿಕ್ಕಪುಟ್ಟ ಪುಡಿ ಬೆಳೆಗಾರರ ಮನೋ ವಿಕಲತೆಗಳನ್ನು ಏಲಕ್ಕಿ ದಳ್ಳಾಳಿಗಳಷ್ಟು ಚೆನ್ನಾಗಿ ಯಾರೂ ಅರ್ಥ ಮಾಡಿಕೊಂಡಿಲ್ಲ. ಪುಡಿ ರೈತರನ್ನು ಹೊಗಳಿ, ಅವನೇ ತನ್ನ ಧಣಿ ಎಂದು ನಂಬಿಕೆ ಬರುವಂತೆ ಮಾತಾಡಿ, ನಿನ್ನೆ ಬಂದಿದ್ದರೆ ನೀನು ಹೇಳಿದ ರೇಟು ಇತ್ತು, ಇವತ್ತು ರೇಟು ಡೌನಾಗಿದೆ, ಎಲ್ಲಾ ಬಿಟ್ಟು ಇವತ್ತು ತಂದಿದ್ದೀಯಲ್ಲ, ಎಂದು ವ್ಯಸನ ಸೂಚಿಸಿ, ಹೋಗಲಿ ನಾಲ್ಕು ದಿನ ಇಡುವಂತಿದ್ದರೆ ಇಡು, ರೇಟು ಇಂಪ್ರೂ ಆದೀತೆಂದು ಸಲಹೆ ಕೊಟ್ಟು, ಬೋಡಿ, ಸಕಲೇಶಪುರ, ಮಡಕೇರಿ, ಮೂಡಿಗೆರೆ ರೇಟುಗಳನ್ನೆಲ್ಲಾ ಅವನ ನೆತ್ತಿಗೆ ತಿಕ್ಕಿ, ಏಲಕ್ಕಿ ತಂದವನ ತಲೆ ರುಮ್ ಎಂದು ಕಕಮಕ ಹಿಡಿಯುವಂತೆ ಮಾಡುತ್ತಾರೆ. ಏಲಕ್ಕಿ ವ್ಯಾಪಾರ

ಮಾಡಲೆಂದೇ ಅವರು ವಿಶಿಷ್ಟವಾದ ಭಾಷೆ, ನುಡಿಕಟ್ಟುಗಳನ್ನು ರೂಪಿಸಿಕೊಂಡು ಅವುಗಳ ಕಲಾತ್ಮಕ ಉಪಯೋಗ ಮಾಡುತ್ತಿದ್ದರು. ರೈತರು ನಂಬಲಿ ನಂಬದಿರಲಿ ಅವರನ್ನು ಹೊಗಳಿಕೆಯ ಸಮ್ಮೋಹನಕ್ಕೆ ಸಿಕ್ಕಿಸುವುದು ಹೇಗೆಂದು ತಿಳಿದಿದ್ದರು. ಕಳ್ಳರಿಗೇ ಒಂದು ತಂತ್ರ, ಪೂರಾ ಚಿಕ್ಕ ಬೆಳೆಗಾರರಿಗೆ ಒಂದು ವಿಧಾನ, ಕೊಂಚ ದೊಡ್ಡವರಿಗೇ ಬೇರೆ ಮಾತುಗಾರಿಕೆ, ಇವೆಲ್ಲವನ್ನೂ ಅವರ ಬಳಿ ನೋಡಬಹುದಿತ್ತು. ದೀಪಾವಳಿ ಉಗಾದಿ ಹಬ್ಬಗಳಲ್ಲಂತೂ ತಂದ ಏಲಕ್ಕಿ ಹಿಂದಕ್ಕೆ ಒಯ್ಯುವುದಿಲ್ಲೆಂದು ಗೊತ್ತಿದ್ದ ಅವರು ಹಬ್ಬ ಹುಡಿಹಾರಿಸುತ್ತಿದ್ದರು.

ಇವರ ಕಂತ್ರಿ ವಿದ್ಯೆ, ಮೈಮರೆಸುವ ಮಾತುಗಾರಿಕೆ, ರೇಟು ಇಳಿಯುತ್ತಿದೆ ಎಂದು ಇವರು ಕೊಡುತ್ತಿದ್ದ ಸುಳ್ಳು ಮಾಹಿತಿ ಮುಂತಾದವೆಲ್ಲ ರೈತರಿಗೆ ಗೊತ್ತಿಲ್ಲದೆ ಇರುವುದೇನಲ್ಲ. ಅದಕ್ಕೇ ಚಿಕ್ಕ ಚಿಕ್ಕ ರೈತರು ಪೇಟೆಗೆ ಏಲಕ್ಕಿ ತರುವುದಕ್ಕಿಂತ ಈ ಏಲಕ್ಕಿ ಬ್ಯಾರಿಗಳು ಮನೆ ಹತ್ತಿರ ಬಂದಾಗ ವ್ಯಾಪಾರ ಮಾಡುತ್ತಿದ್ದುದೇ ಹೆಚ್ಚು. ಅಲ್ಲಿ ಮನೆಯ ಹೆಂಗಸರು ಹತ್ತು ಹತ್ತು ಪೈಸೆಗೂ ಒಂದು ಗಂಟೆ ಚೌಕಾಶಿ ಮಾಡಿ ಬ್ಯಾರಿಗಳ ತಲೆಗೆ ರೇಜಿಗೆ ಹಿಡಿಸುತ್ತಿದ್ದರು. ಒಂದೊಂದು ಎರಡೆರಡು ಕೆ.ಜಿ ಏಲಕ್ಕಿಯನ್ನು ವ್ಯಾಪಾರ ಮಾಡುವುದು ಇಬ್ಬರಿಗೂ ಅರ್ಧ ದಿನದ ಕೆಲಸ. ಅದರಲ್ಲಿ ಅರ್ಧ ಕಾಲ ವ್ಯಾಪಾರಕ್ಕೆ ವ್ಯಯವಾದರೆ ಅರ್ಧ ಕಾಲ ಊರು ಪಂಚಾಯ್ತಿಗೆ ವ್ಯಯವಾಗುತ್ತಿತ್ತು. ಕೊಯ್ಲು, ಕಟಾವು ಎಲ್ಲ ಮುಗಿದ ಮೇಲೆ ಮಲೆನಾಡಿನ ರೈತರಿಗೆಲ್ಲ ಬೇಕಾದಷ್ಟು ಪುರುಸೊತ್ತು ಇರುತ್ತದೆ. ಒಕ್ಕಲಾಟ ಮುಗಿಸಿ ರೋಹಿಣಿ ಮಳೆ ಬರುವವರೆಗೂ ದೊರೆಯುವ ವಿರಾಮದಲ್ಲಿ ಬಹುಪಾಲು ಬರೇ ನಂಟರಮನೆ ತಿರುಗುವುದರಲ್ಲಿ ಕಳೆದರೂ ಮಿಕ್ಕಿದ್ದು ಕಳೆಯುವುದು ಈ ರೀತಿ ಕೆಲಸಕ್ಕೆ ಬಾರದ ಚೌಕಾಶಿಯಲ್ಲಿ.

ಸುರೇಶ ಬಸ್ಟ್ಯಾಂಡಿನಲ್ಲಿ ಇಳಿದಾಗ ಏಲಕ್ಕಿಯೊಂದಿಗೆ ಇಳಿಯುವ ಪ್ರತಿಯೊಬ್ಬನಿಗೂ ಕಾಗೆ ಮುತ್ತಿಕೊಂಡಂತೆ ಮುತ್ತಿಕೊಳ್ಳುವ ದಳ್ಳಾಳಿಗಳೊಬ್ಬರೂ ಕಾಣದುದನ್ನು ನೋಡಿ ನಿಜಕ್ಕೂ ಅಚ್ಚರಿಯಾಗಿತ್ತು. ರೇಟು ಕಂಡಾಪಟ್ಟೆ ಇಳಿದರೆ ಒಮ್ಮೊಮ್ಮೆ ಮಂಡಿಗಳೆಲ್ಲಾ ಹರಾಜು ಮುಂದೂಡಿ, ವ್ಯವಹಾರ ನಿಲ್ಲಿಸಿಬಿಡುತ್ತಿದ್ದರು. ಆಗ ದೇವಪುರದ ಪೇಟೆಗಳೆಲ್ಲ ಬಿಕೋ ಎಂದು ಹಾಳುಸುರಿದುಕೊಂಡಿರುತ್ತಿದ್ದುವು. ಬಸ್ ಸ್ಟ್ಯಾಂಡಿನಲ್ಲಿ ದಳ್ಳಾಳಿಗಳ ಗೈರುಹಾಜರಿ ನೋಡಿದ ಸುರೇಶನೂ ಇದನ್ನೆ ಶಂಕಿಸಿದ್ದ. ಅಬ್ಬೂಬ್‌ಆಲಿ ಜೊತೆ ಮಾತಾಡುವಾಗಲೇ ಅವನಿಗೆ ನಿಜವಾದ ಕಾರಣ ಗೊತ್ತಾಗಿದ್ದು.

* * * *

"ಇನ್ನು ನಮ್ಮಂಥವರಿಗೆ ಅಲ್ಲ ಗೌರಿಯಮ್ಮ ಏಲಕ್ಕಿ ಯಾಪಾರ. ನಮ್ಮಂಥ ಸಣ್ಣಪುಟ್ಟೋರು ಯಾಲಕ್ಕೀಗೆ ಕೈ ಹಾಕಂಗೇ ಇಲ್ಲ. ನಿನ್ನೆನ ಕತೆ ಕೇಳಿದ್ರ? ಇರಾನಿಗೆ ಯಾಲಕ್ಕಿ ಶಿಪ್‌ಮೆಂಟಿಗೆ ಅಗ್ರಿಮೆಂಟ್ ಆಗಿದೆಯಂತೆ ಅಂತ ವರ್ತಮಾನ ಬರ್ತಿದ್ದ ಹಂಗೇ, ಬರೀ ವರ್ತಮಾನಕ್ಕೇ ಏಲಕ್ಕಿ ರೇಟು ಕೇಜಿಗೆ ನೂರು ರೂಪಾಯಿ ಜಂಪಾಗಿ

ಬಿಡ್ತು. ಇವತ್ತಿನ ರೇಟು ಹೇಳಿದರೆ ನೀವು ನಂಬ್ತೀರ? ನಿನ್ನೆ ಆರುನೂರು ರೂಪಾಯಿ ಇದ್ದಿದ್ದು ಇವತ್ತು ಎಂಟುನೂರ ನಲವತ್ತು ರೂಪಾಯಿ ಅಂತೆ!'' ಸಾಬು ವಿಷಾದದಿಂದ ಹೇಳಿದ.

ಸುರೇಶನೂ ಗೌರಿಯೂ ಅದನ್ನು ಕೇಳಿ ಹಿರಿಹಿರಿ ಹಿಗ್ಗಿದರು. ಒಬ್ಬರಿಗೆ ವಿಷಾದದ ಸಮಾಚಾರ ಆದರೆ ಇನ್ನೊಬ್ಬರಿಗೆ ಅದು ಪರಮಾನಂದದ ಸಮಾಚಾರ. ದೇವಪುರವೆನ್ನುವ ಜೂಜಿನ ರಂಗದಲ್ಲಿ ಇಂಥವು ಸರ್ವೇಸಾಮಾನ್ಯ ದೃಶ್ಯ.

''ನಾನು ಅದಕ್ಕೇ ಯಾಲಕ್ಕಿ ವ್ಯವಹಾರಾನೆ ಖೈದು ಮಾಡಿಬಿಟ್ಟೆ ಸುರೇಶಣ್ಣ. ಬರೇ ಖಾಲಿ ಹತ್ತು ಕೇಜಿ ಏಲಕ್ಕಿ ವ್ಯವಹಾರ ಮಾಡೋದಕ್ಕೆ ಎಷ್ಟು ದುಡ್ಡ ಬೇಕು ಲೆಕ್ಕ ಹಾಕಿ? ನಮ್ಮಂಥೋರು ಈ ರೇಟಲ್ಲಿ ಯಾಲಕ್ಕಿ ಕೊಂಡು ಮಕ್ಳೂ ಮರಿ ಸಾಕಕ್ಕುಂಟ ಹೇಳಿ? ನನ್ಗೇನೋ ಇರೋನೊಬ್ಬನೇ ಮಗ. ಆದ್ರೂ ಹಾಳು ಸೂಳೇಮಗ ಎಂಟು ಜನ ಹೆಣ್ಮಕ್ಕಳಾದ ಮೇಲೆ ಹುಟ್ಟಿದಾನೆ! ಏನ್ಮಾಡ್ತೀರ? ಅವನ್ನೆಲ್ಲಾ ಸಾಕಿಕೊಂಡು ಮದ್ವೆ ಮಾಡಿ ಹೊಸಲು ದಾಟಿಸಬೇಕಾದರೆ ನಂದು ಚಮ್ಡಾ ನಿಕಾಲಾಗೋಗ್ತದೆ ತಗೊಳ್ಳಿ. ಏನೊ ಧೈರ್ಯ ಮಾಡಿ ದುಡ್ಡು ಹಾಕೋಣ ಅಂದ್ರೆ ರೇಟು ಯಾಕೋ ಹುಚ್ಚು ನಾಯಿತರ ಆಡ್ತಿದೆ. ಅದ್ಕೇ ಇದು ನಮ್ಮಂಥೋರಿಗೆ ಒಳ್ಳೆಕಾಲ ಅಲ್ಲಾಂತ ಕೈಕಟ್ಗೊಂಡು ಕೂತ್ಬಿಟ್ಟಿದೀನಿ. ಬಸ್ ಸ್ಟ್ಯಾಂಡಿನಲ್ಲಿ ನೀವೇ ನೋಡಿರ್ಬೇಕಲ್ಲ ನೊಣ ಮುತ್ತಿದಂಗೆ ಮುತ್ಕೋತಿದ್ರಲ್ಲ ದಳ್ಳಾಳಿಗಳು, ಒಬ್ರಾರ ಇದ್ರ ಇವತ್ತು? ಯಾಲಕ್ಕಿ ತೇಜಿ ದಿನದಿಂದ ದಿನಕ್ಕೆ ನೂರು ನೂರು ರೂಪಾಯಿ ಜಂಪ್ ತಗೋತಿದ್ದಂಗೆ ಕಾಗೆ ಗುಂಪಿಗೆ ಕಲ್ಲಾಕಿದಂಗೆ ದಿಕ್ಕಾಪಾಲಾಗಿ ಹೊದ್ರು'' ಎಂದು ಅಬ್ಬೂಸ್ ಅಲಿ ತಾನು ತಾತ್ಕಾಲಿಕವಾಗಿ ವ್ಯವಹಾರ ನಿಲ್ಲಿಸಿದ್ದರ ಕಾರಣ ಕೊಟ್ಟ.

''ಅಲ್ಲೋ ಸಾಬು, ನಿನ್ನತ್ರ ವ್ಯಾಪಾರ ಮಾಡೀ ಮಾಡೀ ತಲೆ ಬೋಳಿಸ್ಕೊಂಡು ನಮಗೂ ಸಾಕಾಗಿ ಹೋಗಿದೆ. ಏನೊ ಒಂದು ಸಾರಿ ಒಳ್ಳೆರೇಟು ಸಿಗ್ತದೆ ಅಂತ ಖುಷೀಲಿದ್ದರೆ, ನೀನು ನೋಡಿದರೆ ಏನೋ ಆಗಬಾರ್ದು ಆಗೋಯ್ತು ಅನ್ನೋ ಹಂಗೆ ಮಾತಾಡ್ತೀಯಲ್ಲಾ! ಪ್ರತಿಸಾರೀನೂ ಮನೆಹತ್ರ ಹಳ್ಳೆಣ್ಣೆ ಮುಸುಡಿ ಹಾಕಿಕೊಂಡು ಬಂದು 'ಈಗ ರೇಟು ಡೌನು' ಅಂತ ಹೇಳಿ ಹತ್ತು ರೂಪಾಯಿ ಇಪ್ಪತ್ತು ರೂಪಾಯಿ ಕಡಮೇಲೇ ಕೊಳ್ತಿದ್ದೆ! ಈಗ ರೇಟು ಬಂದ್ರೂನು ನಿನ್ನ ಮೂತಿ ಹಳೇತರಾನೇ ಇದೆಯಲ್ಲ! ನೀನೂ ಉದ್ಧಾರ ಆಗಬಾರ್ದು, ನಿನ್ನ ಜೊತೆ ವ್ಯವಹಾರ ಮಾಡ್ತೋರೂ ಉದ್ಧಾರ ಆಗಬಾರ್ದು ಅಂತಾನೇನೋ ನಿನ್ನ ಮರ್ಜಿ'' ಎಂದು ಕಿಚಾಯಿಸುವ ದನಿಯಲ್ಲಿ ಸುರೇಶ ಅಬ್ಬೂಸಾಲಿಗೆ ಜೋರು ಮಾಡಿದ.

''ಸುರೇಶಣ್ಣ, ನಿಮಗೆ ಎಷ್ಟು ರೇಟು ಕೊಟ್ಟರೂ ಈ ಸಾಬಿ ತಲೆ ಹೊಡೆದ ಅಂತಾನೇ ಹೇಳ್ತೀರ. ಹೋದಸಾರಿ ನಾನು ಕೇಳಿದ ರೇಟಿಗೆ ಕೊಡದೆ ನೀವು ತಂದು ಹರಾಜಿಗಿಟ್ರು ಆಗಿದ್ದೇನು? ನನ್ಗಿಂತ ಇಪ್ಪತ್ರೂಪಾಯಿ ಕಡಮೆಗೆ ಕೊಟ್ಟು ಹೋಗಿದ್ದು

ನಂಗೆ ಗೊತ್ತಿಲ್ವಾ! ಈ ಸಾಬಿ ಬೈಸ್ಕೊಳ್ಳೋಕೆ ಸಿಗ್ತಾನಲ್ಲ ಅದಕ್ಕೆ ಬೈತೀರ ಅಷ್ಟೆ. ಮಂಡಿ ಸೌಕಾರಂಗೆ ಬಯ್ತೀರ? ಅವನು ಕೊಟ್ಟಿದ್ದು ಇಸ್ಕೊಂಡು ಮನೇಗೆ ಹೋಗ್ತೀರ.'' ಅಬ್ಬೂಸಾಲಿ ತನ್ನ ಪ್ರತಿವಾದ ಮಂಡಿಸಿದ.

ದಾರಿಯಲ್ಲಿ ಹೋಗುವವರನ್ನು ಕರೆದು ಕೂರಿಸಿದ ಸಾಬಿಯ ಮರ್ಜಿಯನ್ನೂ, ಹಳೆ ಪಂಚಾಯ್ತಿಗಳನ್ನು ಎತ್ತಿಕೊಂಡು ಜಗಳವಾಡುತ್ತಿರುವ ಸುರೇಶನ ಮರ್ಜಿಯನ್ನೂ ನೋಡಿ ಒಂದುಕಡೆ ಗೌರಿಗೆ ನಗು, ಇನ್ನೊಂದುಕಡೆ ಸಿಟ್ಟು.'' ಹೊತ್ತಾಯ್ತು ಬನ್ನಿ. ಮಂಡೀಲಿ ಹರಾಜು ಮುಗಿದ ಮೇಲೆ ಮೂರು ಕಾಸಿಗೆ ಕೊಟ್ಟು ಬರೋಹಂಗಾದರೆ ಕಷ್ಟ'' ಎಂದು ಸುರೇಶನಿಗೆ ಮುಂದಿನ ಕೆಲಸಗಳನ್ನು ಜ್ಞಾಪಿಸಿದಳು.

''ಗೌರಿಯಮ್ಮಾ! ನೀವು ಒಂದು ಕೆಲಸ ಮಾಡಿ. ನಾಳೆವರೆಗೂ ತಡೆಯೋ ಹಂಗಿದ್ರೆ ಹಾವೇರಿಕಡೆ ಪಾರ್ಟಿ ಒಂದು ಯಾಲಕ್ಕಿ ಖರೀದಿಗೆ ಬರ್ತಿದೆ. ನಿಮಗೆ ಒಳ್ಳೇ ರೇಟು ಗ್ಯಾರೆಂಟಿ ಕೊಡಿಸ್ತೀನಿ. ನಂಗೆ ಕೇಜಿಗೆ ಐದು ರೂಪಾಯ ಕಮಿಶನ್ ಕೊಡಿ ಸಾಕು. ನನಗಂತೂ ಇವತ್ತಿನ ರೇಟಿನಲ್ಲಿ ನಿಮ್ಮ ಮಾಲು ಕೊಳ್ಳಕ್ಕಾಗಲ್ಲ.'' ಎಂದು ಹಾಗೂ ಹೇಗೋ ಒಂದು ವ್ಯವಹಾರ ಕುದುರಿಸಲು ಪ್ರಯತ್ನಿಸಿದ ಅಬ್ಬೂಸ್ ಆಲಿ.

''ನೀ ಸುಮ್ಮನಿರು ಮಾರಾಯ! ದಿನಕ್ಕೊಂದೊಂದು ತರ ರೇಟು ಆಗ್ತಿದೆ ಅಂತ ವ್ಯಾಪಾರಾನೇ ನಿಲ್ಲಿಸಿದೀಯ. ನಮಗೆ ಮಾತ್ರ ನೀನು ಜನ ಕರ್ಕೊಂಡು ಬರೋವರೆಗೆ ಕಾಯಿರಿ ಅಂತ ಹೇಳ್ತೀಯಲ್ಲ'' ಎಂದು ಗೌರಿ ಅವನ ಮೇಲೆ ರೇಗಿದಳು.

# ಓಕೇ ಬಾಸ್! - ೧೨



"ಬದ್ಮಾಷ್ ನನಮಗನೆ, ಯಾವನ ಜೊತೆ ಮಿಲಾಕತ್ತಾಗಿ ಈ ಕೆಲಸ ಮಾಡಿದೆ ಬೊಗುಳ್ತೀಯೋ, ಇಲ್ಲಾ ಸಾಯ್ತೀಯೋ?" ಎಂದು ಸಿಟ್ಟುಬಂದ ಕುಟ್ಟಿ ಕಟಕಟ ಹಲ್ಲು ಕಡಿದು ಹೇಳಿದ.

ಇವರಿಬ್ಬರೂ ಸಮಾಧಾನದಲ್ಲೇ ಲಾಟರಿ ಟಿಕೆಟ್ ಶಾಸ್ತ್ರಿ ಹತ್ತಿರ ಆದ ಅನಾಹುತವನ್ನೆಲ್ಲ ವಿವರಿಸಿ ಮುಂದೇನೆಂದು ಸಲಹೆ ಕೇಳಲು ಬಂದಿದ್ದರೂ ಶಾಸ್ತ್ರಿ ಮೆಲ್ಲಗೆ ತಪ್ಪನ್ನೆಲ್ಲ ಇವರ ಮೇಲೆ ಎತ್ತಿಹಾಕುವಂತೆ ಉಲ್ಟಾ ಮಾತಾಡಿದ. "ನಿಮ್ಮನ್ನು ಯಾರು ಆ ಕದ್ದ ಕಾರಿನಲ್ಲಿ ಹೋಗಿ ಅಂತ ಹೇಳಿದವರು? ಯಾವುದೋ ಕೆಲಸ ಮಾಡಿ ಪೋಲೀಸಿನವರ ನಿಗಾ ಮೈ ಮೇಲೆ ಎಳಕೊಂಡು, ಈಗ ನಾನು ನಸ್ಲಿ ಹರಾಂ ಕೆಲಸ ಮಾಡಿದೀನಿ ಎಂದರೆ ಯಾರು ನಂಬ್ತಾರೆ? ಈಗಲೇ ಹೇಳಿದೇನೆ, ನಿಮಗೆ ಹೇಳಿದ ಮಾಲು ಕಳೆದು ಹೋಗಿದ್ದಕ್ಕೆ ನಾನಂತೂ ಜವಾಬ್ದಾರಿ ಅಲ್ಲ." ಎಂದು ಖಂಡತುಂಡ ಹೇಳಿ ನುಣಿಚಿಕ್ಕೊಲು ಯತ್ನಿಸಿದ.

ಆಗಲೇ ಕುಟ್ಟಿಗೆ ನಖಶಿಖಾಂತ ಸಿಟ್ಟು ಬಂದಿದ್ದು. ಕುಟ್ಟಿ ಕೊಲೆಯ ಬೆದರಿಕೆ ಹಾಕಿದ್ದು ನೋಡಿ ಒಂದೇ ಒಂದು ಚೂರೂ ಶಾಸ್ತ್ರಿಗೆ ಹೆದರಿಕೆಯಾಗಲಿಲ್ಲ. ಅತ್ತ ಇತ್ತ ನೋಡಿ ಯಾರೂ ಇಲ್ಲದುದನ್ನು ದೃಢಪಡಿಸಿಕೊಂಡು ನಸುನಗುತ್ತ "ನಿನಗೇನು ದೇವರು ತಲೆ ಒಳಗೆ ಮೆದುಳು ಕೊಟ್ಟಿಲ್ಲವ? ಅಥವಾ ಗ್ರಹಗತಿ ಚೆನ್ನಾಗಿಲ್ಲವ? ಈಗ ಆಗಿರೋ

ಅನಾಹುತಕ್ಕೆ ನಾನೂ ನೀನೂ ಬದುಕಿ ಉಳಿದರೆ ಸಾಕಾಗಿದೆ. ಆಮೇಲೆ ಬೇಕಾದರೆ ಕೊಲ್ಲೋದೋ ಕಡಿಯೋದೋ ಏನಿದ್ರೂ ಯೋಚನೆ ಮಾಡುವಿಯಂತೆ'' ಎಂದ.

ಕುಟ್ಟಿಯ ದುಡುಕಿನ ಮಾತುಗಳಿಂದ ದೌಲತ್‌ರಾಮನಿಗೆ ಬೇಸರವಾಯ್ತು. ಈಗ ತಮ್ಮನ್ನು ಪಾರು ಮಾಡುವುದಕ್ಕಾಗಲಿ, ಅಥವ ಮುಂದಿನ ಕ್ರಮ ಏನೆಂದು ಹೇಳಲಿಕ್ಕಾಗಲಿ ಶಾಸ್ತ್ರಿ ಬಿಟ್ಟರೆ ಇನ್ಯಾರೂ ಗತಿಯೇ ಇರಲಿಲ್ಲ. ಅಂಥದರಲ್ಲಿ ಅವನನ್ನು ಎದುರು ಹಾಕಿಕೊಂಡರೆ ನಮ್ಮ ಕಥೆಯೇನು ಎಂದು ದೌಲತ್‌ರಾಮ್ ಚಿಂತಿಸಿದ! ಅಷ್ಟರಲ್ಲಿ ಕುಟ್ಟಿಗೂ ತಮ್ಮ ಸಂದಿಗ್ಧ ಪರಿಸ್ಥಿತಿ ತಲೆಗೆ ಬಂದಿರಬೇಕು. ಜೊತೆಗೆ ಈಗ ಆಗಿರುವ ಅಚಾತುರ್ಯದಿಂದ ಎಲ್ಲರಿಗೂ ಪ್ರಾಣಕ್ಕೆ ಬಂದಿದೆ ಎಂದು ಶಾಸ್ತ್ರಿ ಸೂಚಿಸಿದ್ದು ಅವನಿಗೆ ಸಮಾಧಾನ ತಂದಿತ್ತು.

''ಹಂಗಿದ್ದರೆ ಪೋಲೀಸಿನವರು ನಮ್ಮ ಬೆನ್ನು ಹತ್ತಿದ್ದಕ್ಕೂ, ಆ ಪ್ಯಾಕೆಟ್ಟಿಗೂ ಏನೂ ಸಂಬಂಧ ಇಲ್ಲಾಂತೀಯ?'' ಎಂದು ಕುಟ್ಟಿ ಕೊಂಚ ಸಮಾಧಾನದ ದನಿಯಲ್ಲಿ ಶಾಸ್ತ್ರಿಯನ್ನು ಕೇಳಿದ.

''ನಾಮ ತಿಳಿದ ಹಾಗೆ, ನನ್ನ ಬುದ್ಧಿಗೆ ತೋಚುವ ಹಾಗೆ, ಇರುವ ಹಾಗೆ ಕಾಣುತ್ತ ಇಲ್ಲ. ಇದರ ಮೇಲೆ ಯಾವುದು ಹೇಗೋ ನನಗೆ ಗೊತ್ತಿಲ್ಲ. ಇವೆಲ್ಲ ವ್ಯವಹಾರ ಹ್ಯಾಗೆ ಅಂತ ನಿಂಗೊತ್ತಲ್ಲ ಕುಟ್ಟಿ! ಯಾರಿಗೂ ಏನೂ ಗೊತ್ತಿರೋಲ್ಲ. ಒಟ್ರಾಸಿ ದೇವ್ರೇ ಗತಿ ಅಂತ ಧೈರ್ಯ ಮಾಡಬೇಕಷ್ಟೆ!'' ಎಂದು ಶಾಸ್ತ್ರಿ ಹೇಳಿದ.

ಶಾಸ್ತ್ರಿ ಹೇಳಿದ್ದರಲ್ಲಿ ಸತ್ಯಾಂಶ ಇದ್ದರೂ ಈ ಧೋರಣೆಯನ್ನಿಟ್ಟುಕೊಂಡು ಅವನು ತಮ್ಮನ್ನು ಅಪಾಯಕ್ಕೆ ಸಿಗಿಸಿದ್ದನಲ್ಲ ಎಂದು ಕುಟ್ಟಿ ಸಿಟ್ಟು ಇನ್ನೂ ಪೂರ್ಣ ಇಳಿದಿರಲಿಲ್ಲ.

''ನೋಡೋ ಶಾಸ್ತ್ರಿ, ನೀನು ಬೇಕಾದ್ದು ಹೇಳು, ನಾನು ನಂಬೋಲ್ಲ. ಇದರಲ್ಲಿ ಯಾವೋನೋ ಸೂಳೇಮಗ ಉಲ್ಟಾ ಹೊಡೆದಿದ್ದಾನೆ ಅಂತ ಗ್ಯಾರೆಂಟಿ ಕೊಡ್ತೀನಿ ನಿಂಗೆ. ಪೋಲೀಸ್‌ನೋರು ಪ್ಯಾಕೆಟ್ ಜಾಡು ಹಿಡಿದೇ ಬಂದಿದ್ದೂ ಅಂತಾದರೆ, ಅಲ್ಲಿ ಪ್ಯಾಕೆಟ್ ಇಟ್ಟ ಪಾರ್ಟಿದೇ ಈ ಕೆಲಸ, ಅದರಾಗೇನು ಇತ್ತು? ಅದು ಯಾರಿಟ್ಟಿದ್ದು? ಅಷ್ಟು ಹೇಳು ಸಾಕು. ಮಿಕ್ಕಿದ್ದೆಲ್ಲ ನನಗೆ ಬಿಟ್ಟಿಡು.'' ಎಂದು ಕುಟ್ಟಿ ಹೇಳಿದ. ದೌಲತ್ ರಾಮನಿಗೆ ಕುಟ್ಟಿ ಹುಂಬನಂತೆ ಮಾತಾಡುವ ಹಾಗೆ ಕಂಡಿತು. ಶಾಸ್ತ್ರಿ ಎಂಥವನೋ! ಅವನ ಕೈವಾಡ ಏನಿದೆಯೋ! ಸರಿಯಾಗಿ ತಿಳಿಯದೆ ಕುಟ್ಟಿ ತೀರ ಕುಡುಕಿ ಮಾತಾಡುದ್ದಾನೆಂದು ದೌಲತ್‌ರಾಮನಿಗೆ ಅನ್ನಿಸಿತು.

''ನಿನಗೇನಾದರು ತಲೆ ಇದಿಯೇನಯ್ಯ! ಈ ಧಂದೇಲಿ ಅದೇನು? ಎತ್ತ? ಯಾರಿಟ್ಟಿದಾರೆ? ಯಾರಿಗೆ ಬೇಕಾಗಿದೆ? ಅದಕ್ಕೆ ಎಷ್ಟು ದುಡ್ಡು? ಎಲ್ಲ ಕತೆ ಹೇಳಿ ನಿನಗೆ ಕೆಲಸ ಕೊಡ್ತಾರ? ಅದೆಲ್ಲ ಗುಟ್ಟು ಗೋತ್ತಾದರೆ ಇಲ್ಲಿದ್ದೋರೆಲ್ಲ ಅದೇ ಸಂಪಾದನೆಗೆ ಇಳಿಯೋದಿಲ್ಲವೇನಯ್ಯ. ನಿನಗೆ ಅದೆಲ್ಲ ಗೊತ್ತಿದ್ದು ಯಾರಿಗಾದರೂ ಹೇಳೋದಾದರೆ ಎಷ್ಟು ದುಡ್ಡು ಬೇಕಾದರೂ ಕೊಟ್ಟು ಕೇಳೊದಕ್ಕೆ ತಯಾರಿರೋ ಜನ

ಇರ್ತಾರೆ ಗೊತ್ತ? ಇಡೀ ಈ ವ್ಯವಹಾರದ ದುಡ್ಡು ಎಷ್ಟೆಷ್ಟೋ ಕೋಟಿ, ಈಗ ನೀನು ಕೇಳಿದ ಎರಡು ಪ್ರಶ್ನೆ ಮೇಲೆ ನಿಂತಿದೆ! ನಾನೇ ಪ್ಯಾಕೆಟ್ ಬಿಚ್ಚಿ ನೋಡಿದ್ರೂ ನಂಗೇನೂ ಗೊತ್ತಾಗ್ತಿರಲಿಲ್ಲ. ನೀನು ಕೇಳಿದ ಪ್ರಶ್ನೆಗೆ ಈ ಜನ್ಮದಲ್ಲಿ ಉತ್ತರ ಸಿಗೋದಿಲ್ಲ ಅನ್ನೋದು ಮಾತ್ರ ಚೆನ್ನಾಗಿ ತಿಳಿದಿರು.'' ಶಾಸ್ತ್ರಿ ಬಹಳ ಸಹನೆಯಿಂದ ಕೆಲವು ಅಪಾಯಕಾರಿ ಪ್ರಶ್ನೆಗಳಿಗೆ ಕುಟ್ಟಿಗೆ ಸೂಕ್ತ ತಿಳುವಳಿಕೆ ಕೊಡುತ್ತಿದ್ದಾನೆಂದು ದೌಲತ್‌ರಾಮನಿಗೆ ಅನ್ನಿಸಿತು.

ಶಾಸ್ತ್ರಿ ಮುಂದುವರಿಸಿದ ''ಈ ತರ ಮಾತಾಡಿದರೆ ನಿನಗೆ ಬಹಳ ದಿನ ಆಯುಸ್ಸು ಇಲ್ಲ ಅನ್ನೋದು ಮಾತ್ರ ತಿಳುಕೋ. ನಿನಗೆ ಸುಮ್ಮನೆ ಉದಾಹರಣೆಗೆ ಹೇಳ್ತೀನೆ. ಮೊನ್ನೆ ಕೇರಳದ ಬೀಚ್‌ನಿಂದ ಯುರೇನಿಯಂ ಸಾಗಿಸ್ತಿದ್ದೋರನ್ನ ಹಿಡಿದರಲ್ಲ. ಅದೇನು ಅಂತ ಸಾಗಿಸ್ತಿದ್ದೋರಿಗೆ ಗೊತ್ತಿತ್ತ? ಹೇಳಿದರೂ ಗೊತ್ತಾಗುತ್ತ? ಅದಕ್ಕೆ ಇಲ್ಲಿ ಏನಾದರೂ ಬೆಲೆ ಉಂಟ? ಇರಾಕಿಗೆ ಹೋಗ್ತಿತ್ತು ಅಂತಾರೆ. ಇರಾನಿಗೆ ಹೋಗ್ತಿತ್ತು ಅಂತಾರೆ. ಪಾಕೀಸ್ತಾನಕ್ಕೆ ಹೋಗ್ತಿತ್ತು ಅಂತಾರೆ. ಅದು ಎಲ್ಲಿಗೆ ಹೋಗ್ತಿತ್ತು? ಯಾಕೆ ಹೋಗ್ತಿತ್ತು? ಅದರ ಬೆಲೆ ಏನು? ಇವೆಲ್ಲ ಯಾವ ಬ್ರಹ್ಮನಿಗೂ ಗೊತ್ತಾಗೋಲ್ಲ. ಅದು ಎಲ್ಲಿಗೆ ತಲುಪ ಬೇಕೋ ಅಲ್ಲಿಗೆ ತಲುಪಿದ ಮೇಲೇ ಅದಕ್ಕೆ ಬೆಲೆ. ನಾನೂ ನೀನೂ ಆ ಪ್ಯಾಕೆಟ್ ಕದ್ದುಕೊಂಡು ಹೋದರೂ ಅದಕ್ಕೆ ಒಂದು ಬೀಡಿ ಸೈತ ಸಿಗೋದಿಲ್ಲ'' ಶಾಸ್ತ್ರಿ ಮಾತಿನಿಂದ ಅವನು ಕಾಳಧಂದೆಯನ್ನು ಬಹಳ ಆಳವಾಗಿ ಅರ್ಥ ಮಾಡಿಕೊಡಂತೆ ಇಬ್ಬರಿಗೂ ಕಂಡಿತು.

''ಯಾರು ಆ ಪ್ಯಾಕೆಟ್ಟು ಅಲ್ಲಿಟ್ಟರು? ಅದರೊಳಗೆ ಏನಿತ್ತು? ಅಷ್ಟು ಹೇಳಿಬಿಡು ಮಿಕ್ಕಿದ್ದು ನಾನು ನೋಡಿಕೊಳ್ತೀನಿ ಅಂತ ಠೇಂಕಾರ ಮಾಡಿದೆಯಲ್ಲ, ಹೇಳೋದಕ್ಕೆ ನನಗೆ ಗೊತ್ತಿರುತ್ತ? ಹೇಳಿದರೆ ನಿಮಗೆ ಗೊತ್ತಾಗುತ್ತ? ಹೇಳಿದ್ದನ್ನು ನೀವು ನಂಬ್ತೀರ?'' ಶಾಸ್ತ್ರಿ ಪ್ರಶ್ನೆ ಕೇಳಿ ಮಾತು ಮುಗಿಸಿದ ಮೇಲೆ ಮೂವರಿಗೂ ಮುಂದೇನು ಎಂದು ಚಿಂತೆ ಶುರುವಾಯ್ತು.

ಬಸ್ಸು ಇಳಿದು ಒಂದ ಮಾಡಿ ಬರುವುದರೊಳಗೇ ಬಸ್ಸಿಗೆ ಮುತ್ತಿಕೊಂಡ ಜನ, ಬಾಗಿಲ್ಲಿ ನಿಂತಿದ್ದ ಚೆಕ್ಕಿಂಗ್‌ನವರು, ಡ್ರೈವರು, ಕಂಡಕ್ಟರು, ಭಿಕ್ಷುಕರು ಎಲ್ಲ ಹಿಂದೆಂದೋ ಕಂಡಿದ್ದ ಕನಸಿನಂತೆ ಮಂಗಮಾಯವಾಗಿದ್ದನ್ನು ನೋಡಿದಾಗ ಏನು ನಡೆದಿರಬಹುದೆಂದು ಅವರಿಗೆ ಊಹಿಸಲು ಸಾಧ್ಯವಾಗಲೇ ಇಲ್ಲ. ಕೊನೆಗೆ ಕಂಡಕ್ಟರ್ ಬಸ್‌ಸ್ಟಾಂಡಿನ ಮೂಲೆಯಲ್ಲೆಲ್ಲೋ ಚಿಲ್ಲರೆ ಎಣಿಸುತ್ತ, ತನ್ನ ಪಾಲೆಷ್ಟು, ಸರ್ಕಾರದ ಪಾಲೆಷ್ಟು ಎಂದು ಲೆಕ್ಕ ಹಾಕುತ್ತಿರುವುದನ್ನು ನೋಡಿ ಅವನ ಬಳಿ ಹೋಗಿ ''ಬಸ್ ಹೊರಡುವುದು ಎಷ್ಟು ಹೊತ್ತಿಗೆ'' ಎಂದು ಕೇಳಿದರು. ''ಹೇಗೆ ಹೊರಡೋದು! ಆ ಬೋಳಮ್ಮ ಒಂದು ಹೆಡಿಗೆ ಕಕ್ಕಿದಾಳಲ್ಲ! ತೋಟಿ ಕರಕೊಂಬಂದು ಕ್ಲೀನು ಮಾಡಿಸಿದ ಹೊರ್ತು ಬಸ್ಸಿನೊಳಗೆ ಯಾರೂ ಕೂರಬೇಡ್ರಿ'' ಎಂದು ಕಂಡಕ್ಟರ್ ಅಪ್ಪಣೆ ಕೊಟ್ಟ. ಕುಟ್ಟಿಗೂ ದೌಲತ್‌ರಾಮನಿಗೂ ಆಮೇಲೆ ಬಸ್‌ಸ್ಟಾಂಡಿನ ಜನ ಇದ್ದಕ್ಕಿದ್ದಂತೆ ಅಂತರ್ಧಾನವಾಗಿದ್ದೇಕೆಂದು ಅಸ್ಪಷ್ಟವಾಗಿ ಹೊಳೆಯಿತು. ಹಾಗಿದ್ದರೆ ಮೂಟೆ ಯಾರದ್ದು? ಅದನ್ನು ಹೊತ್ತುಕೊಂಡವ ಎತ್ತ ಹೋದ?

ಈಗ ಅವನನ್ನು ಎಲ್ಲಿ ಹುಡುಕುವುದು? ಒಂದೂ ಅರ್ಥವಾಗಲಿಲ್ಲ.

ಅವರು ಹೊರಡುವ ಮೊದಲು ಶಾಸ್ತ್ರಿ ಅವರಿಗೆ ಸ್ಪಷ್ಟವಾಗಿ ಹೇಳಿದ್ದ. "ಪ್ಯಾಕೆಟ್ಟು ತಂದು ರಂಗಪ್ಪ ಡಾಕ್ಟರ ನರ್ಸಿಂಗ್‌ಹೋಮ್ ಹಿಂದಿರುವ ಕಸದ ಡಬ್ಬಿಯೊಳಗೆ ಯಾರೂ ಇಲ್ಲದ ಸಮಯ ನೋಡಿ ಹಾಕಿ. ಆಮೇಲೆ ತಾನು ಲಾಟರಿ ಟಿಕೆಟ್ಟು ಮಾರುತ್ತ ಬೇಕರಿ ಮೆಟ್ಟಿಲ ಮೇಲೆ ಕುಳಿತಿರುತ್ತೇನೆ. ಸೀದ ಅಲ್ಲಿಗೆ ಬನ್ನಿ. ಬಂದವರು, ಎರಡು ಲಾಟ್ರಿ ಟಿಕೆಟ್ಟು ಕೊಟ್ಟಿರುತ್ತೇನೆ. ಅದನ್ನು ನನಗೆ ಕೊಟ್ಟು, ಇದಕ್ಕೆ ಏನಾದರೂ ಬಂದಿದೆಯ ಕೇಳಿ. ಮುಂದಿನ ಬಟವಾಡೆ ನಾನು ನೋಡಿಕೊಳ್ಳುತ್ತೇನೆ" ಎಂದು ಸವಿವರವಾಗಿ ತಿಳಿಸಿದ್ದ. ಆದರೆ ಎಲ್ಲ ತಲೆಕೆಳಗಾಗಿ ಹೋಯ್ತು. ಈಗೇನು ಮಾಡುವುದು? ಶಾಸ್ತ್ರಿ ಹತ್ತಿರ ಹೋಗಲು ಸಹ ಅವರಿಗೆ ದಿಗಿಲಾಯ್ತು. ಆ ಕಂತ್ರಿ ಮನುಷ್ಯನೇ ನಮ್ಮನ್ನು ಪೋಲೀಸರಿಗೆ ಸಿಕ್ಕಿಸಲು ಉಪಾಯ ಮಾಡಿದ್ದವನಾದರೆ ಅಲ್ಲಿಗೆ ಹೋಗುವುದು ಇನ್ನೂ ಅಪಾಯ ಅಲ್ಲವೆ? ಆದರೆ ಅವನನ್ನು ಬಿಟ್ಟರೆ ಈ ಬಗ್ಗೆ ಮುಂದೇನೆಂದು ಕೇಳಲು ಬೇರೆ ಗತಿಯೇ ಇಲ್ಲ! ಅವನು ನಮಗೆ ಕೆಲಸ ಕೊಟ್ಟೇ ಇಲ್ಲ ಎನ್ನುವಂತೆ ಇರೋಣ ಎಂದರೆ ಅದರ ಪರಿಣಾಮಗಳೇನೋ ಯಾರಿಗೆ ಗೊತ್ತು. ಪ್ರಾಣಾಪಾಯದಿಂದ ಹಿಡಿದು ಹೊಟ್ಟೆ ಪಾಡಿಗೆ ಯಾವ ಉದ್ಯೋಗವೂ ಇಲ್ಲದೆ ಬೀದಿಗೆ ಬೀಳುವವರೆಗೆ ಯಾವುದು ಬೇಕಾದರೂ ಆಗಬಹುದು.

ಇಬ್ಬರಿಗೂ ಇಪ್ಪತ್ತು ಸಾವಿರದ ಆಸೆ ತೋರಿಸಿ ನಿಷ್ಕಾರಣವಾಗಿ ತಮ್ಮನ್ನು ಇಂಥ ಕಠೋರ ಬಿಕ್ಕಟಿಗೆ ಸಿಕ್ಕಿಸಿದ ಶಾಸ್ತ್ರಿ ಮೇಲೆ ಎಲ್ಲಿಲ್ಲದ ಸಿಟ್ಟು ಬಂತು. ಕೊನೆಗೂ ಧೈರ್ಯ ಮಾಡಿ, ಹೋಗಿ ಶಾಸ್ತ್ರಿಗೆ ಹೇಳುವುದು, ಅವನೇನಾದರೂ ಈ ಹಲಾಲುಖೋರ್ ಕೆಲಸದಲ್ಲಿ ಶಾಮೀಲಾಗಿದ್ದಾನೆಂದು ಅನ್ನಿಸಿದರೆ ಅವನಿಗಿಂತ ಮೊದಲೆ ನಾವೇ ಅವನಿಗೆ ನಮ್ಮಕ್ ಹರಾಮ್ ಮಾಡಿಬಿಡುವುದು ಎಂದು ತೀರ್ಮಾನಿಸಿಕೊಂಡು ಶಾಸ್ತ್ರಿ ಕೊಟ್ಟಿದ್ದ ಲಾಟರಿ ಟಿಕೆಟ್ಟು ಕೈಯ್ಯಲ್ಲಿ ಹಿಡಿದು ಶಾಸ್ತ್ರಿ ಹುಡುಕಿಕೊಂಡು ಪೇಟೆ ಬೀದಿಯಲ್ಲಿ ಬೇಕರಿ ಕಡೆಗೆ ಹೊರಟರು. "ಅವನೇನಾದರು ನಮ್ಮಕ್ ಹರಾಮಿ ಕೆಲಸ ಮಾಡಿರಲಿ. ನೀನು ಚೂರಿ ಚಾಕು ಏನನ್ನೂ ತೆಗೀ ಬೇಡ. ನಾನು ನೋಡಿಕೊಳ್ಳುತ್ತೇನೆ. ಬೀಜಕ್ಕೆ ಒಂದೇ ಒಂದು ವತ್ತ ವದ್ದರೆ ಸೂಳೇಮಗ ನಿತ್ತ ನಿಟ್ಟಿನಲ್ಲಿ ಕಮಕ್ಕಿಮಕ್ ಅನ್ನದೆ ಬಿದ್ದು ಬಿಡಬೇಕು" ಎಂದು ಕುಟ್ಟಿ ದೌಲತ್ ರಾಮನ ಎದುರು ಆಣೆ ಭಾಷೆ ಹಾಕಿದ. ತಮ್ಮ ಹತ್ತಿರ ಈ ರೀತಿ ಅಡ್ಡನಾಡಿ ಕೆಲಸ ಹೇಳಿ ತೊಂದರೆಗೆ ಸಿಕ್ಕಿಸಿದರೆ ತಾವೂ ಅಪಾಯಕಾರಿಗಳು ಎಂದು ತೋರಿಸಿಯೇ ಬಿಡಬೇಕೆಂದು ಇಬ್ಬರೂ ನಿರ್ಧರಿಸಿ ಹೊರಟರು.

ಆದರೆ ಶಾಸ್ತ್ರಿ ಹುಡುಕಿ ಹೊರಟಾಗ ಅವರು ನಿಜಕ್ಕೂ ದಿಗ್ಭ್ರಾಂತರಾಗಿದ್ದರು. ಕಣ್ಣುಕಾಣದ ಕುರುಡರು ಜನಜಂಗುಳಿಯಲ್ಲಿ ದಾರಿಗಾಣದೆ ತೆವಳಾಡುವಂತಿತ್ತು ಅವರ ಸ್ಥಿತಿ. ತಮ್ಮ ಕಥೆ ಮುಗಿದ ಹಾಗೇ ಎಂಬುದು ಖಂಡಿತವಾದರೆ ಅವನ ಕಥೆಯಯನ್ನೂ ಪರಿಸಮಾಪ್ತಿ ಮಾಡಬೇಕೆಂದು ತೀರ್ಮಾನಿಸಿದ್ದರೇ ಹೊರತು ಅವನಿಗೆ ಬೀಜಕ್ಕೆ ಒದ್ದು

ಸಾಯಿಸುವುದರಿಂದ ತಮಗೆ ಪ್ರಯೋಜನವೇನೂ ಇಲ್ಲವೆನ್ನುವುದು ಅವರಿಗೆ ಚೆನ್ನಾಗಿ ಗೊತ್ತಿತ್ತು.

ಶಾಸ್ತ್ರಿಗೆ ಅವರು ಟಿಕೆಟ್ ಕೊಟ್ಟಾಗ ಟಿಕೆಟ್ ನೋಡುವವನಂತೆ ನಟಿಸಿ, ಒಂದು ಟಿಕೆಟ್ಟಿಗೆ ಏನೋ ಬಂದಹಾಗಿದೆ, ನೋಡೋಣ ರೂಮಿನ ಹತ್ತಿರ ಬನ್ನಿ ಎಂದು ಹೇಳಿ, ಮತ್ತೆ ಅಲ್ಲಿ ಟಿಕೆಟ್ ತೋರಿಸಲು ಬಂದವರ ಟಿಕೆಟ್‌ಗಳನ್ನು ನೋಡುತ್ತಾ ಕುಳಿತ. ಆಗಿರುವ ಅಚಾತುರ್ಯ ಗೊತ್ತಿಲ್ಲದ ಶಾಸ್ತ್ರಿ ಅನವಶ್ಯಕ ಕಾಲ ಹರಣ ಮಾಡುತ್ತಿರುವುದಕ್ಕೆ ಮನದಲ್ಲೇ ಕಸಿವಿಸಿಪಡುತ್ತ ಇಬ್ಬರೂ ಅವನ ರೂಮಿನ ಕಡೆಗೆ ನಡೆದರು.

* * * *

ಶಾಸ್ತ್ರಿ ರೂಮಿನಲ್ಲಿ ಮೂವರೂ ಚಿಂತಾಕ್ರಾಂತರಾಗಿ ಆಳವಾದ ಯೋಚನೆಯಲ್ಲಿ ಮುಳುಗಿದ್ದರು. ಮೂರು ಜನವೂ ಒಟ್ಟಿಗೆ ಆಪತ್ತಿಗೆ ಸಿಕ್ಕಿಕೊಂಡಿರುವುದು ಅವರಿಗೆ ವೇದ್ಯವಾಗಿತ್ತು.

''ಶಾಸ್ತ್ರಿ ನಿನಗೆ ಈ ಕೆಲಸ ಹೇಳಿದವರು ಯಾರು?'' ಕುಟ್ಟಿ ಕೇಳಿದ.

ದೌಲತ್‌ರಾಮನಿಗೆ ಕುಟ್ಟಿ ಕೇಳುತ್ತಿರುವುದು ಒಂದು ನಿರರ್ಥಕ ಪ್ರಶ್ನೆ ಎಂದು ಚೆನ್ನಾಗಿ ಗೊತ್ತಿತ್ತು.

''ನೀನಿನ್ನೂ ಹುಡುಗಾಟದಲ್ಲಿ ಇದ್ದೀಯ ಕುಟ್ಟಿ. ನಿನ್ನ ಮಾತು ಕತೆ ನೋಡಿದರೆ ಕಸುಬುದಾರನ ತರ ಕಾಣುತ್ತಿಲ್ಲ. ಆ ಪ್ರಶ್ನೆ ಇನ್ನೊಂದುಸಾರಿ ಕೇಳಬೇಡ'' ಎಂದು ಹೇಳಿ ಶಾಸ್ತ್ರಿ ಮತ್ತೆ ಗಾಢವಾದ ಆಲೋಚನೆಯಲ್ಲಿ ಮುಳುಗಿದ.

ದೌಲತ್‌ರಾಮ್, ಕುಟ್ಟಿ ಇಬ್ಬರೂ ಆಲೋಚಿಸುವವರಂತೆ ಕುಳಿತಿದ್ದರೂ ಅವರ ತಲೆಯೊಳಗೆ ಚಿಂತೆ ಒಂದು ಬಿಟ್ಟು ಬೇರೇನೂ ಇರಲಿಲ್ಲ. ಏಕೆಂದರೆ ಶಾಸ್ತ್ರಿ ಜೊತೆ ಇಷ್ಟು ಮಾತಾಡಿದ ಮೇಲೂ ಅವರು ಕಗ್ಗತ್ತಲಲ್ಲೇ ಇದ್ದರು. ಬಸ್ ಇಳಿದಾಗ ಇದ್ದ ದಿಗ್ಭ್ರಾಂತಿಯೇ ಇನ್ನೂ ಅವರಿಗೆ ಕವಿದಿತ್ತು.

ಶಾಸ್ತ್ರಿ ಕೊಂಚಹೊತ್ತಿನ ಅನಂತರ ಏನೋ ತೀರ್ಮಾನ ತೆಗೆದುಕೊಂಡವನಂತೆ ಎಚ್ಚತ್ತು ''ಈಗ ನಾನು ಹೇಳಿದ ಹಾಗೆ ಮಾಡಬೇಕು. ಹೆಚ್ಚು ಹೊತ್ತಿಲ್ಲ ನಮಗೆ. ಈಗಾಗಲೇ ಕೈ ಮೀರಿ ಹೋಗಿದ್ದರೂ ಹೋಗಿರಬಹುದು. ನೀವು ಮೊದಲು ಹೋಗಿ ಆ ಏಲಕ್ಕಿ ಮೂಟೆ ಯಾರದು? ಯಾವ ಮಂಡಿಗೆ ಹೋಯ್ತು ಅದು ಪತ್ತೆ ಮಾಡಿ ಕೂಡಲೆ ನನಗೆ ತಿಳಿಸಬೇಕು. ಎರಡು ಮೂಟೆ ಏಲಕ್ಕಿ ಅಂತೀರ! ನೂರು ಕೇಜಿ ಅಂದರೂ ಇವತ್ತಿನ ರೇಟಿನಲ್ಲಿ ಎಷ್ಟೇ ಚೌಕಾಶಿ ಮಾಡಿದರೂ ಹತ್ತಿರ ಹತ್ತಿರ ಒಂದು ಲಕ್ಷ ಬೇಕು. ನಮಗಂತೂ ಈಗಿಂದೀಗಲೆ ಅದು ಹೊಂದಿಸೋದಕ್ಕೆ ಆಗೊದಿಲ್ಲ. ಅದಕ್ಕೇ ಒಂದು ಕೆಲಸ ಮಾಡೋಣ. ನಾನು ಹೋಗಿ ಇಂಥವರ ಹತ್ತಿರ, ಇಂಥ ಏಲಕ್ಕಿ ಮೂಟೆ ಒಳಗೆ ಪ್ಯಾಕೆಟ್ ಇದೆ. ಹೋಗಿ ಹರಾಜಿನಲ್ಲಿ ಹಿಡೀರಿ ಅಂತ ಹೇಳಿಬಿಡ್ತೀನಿ. ಹ್ಯಾಗಾಗುತ್ತೋ ನೋಡೋಣ''

"ಯಾರಿಗೆ ಹೇಳ್ತೀಯ ಶಾಸ್ತ್ರಿ? ಮತ್ತೆ ಗುಟ್ಟು ತಿಳಿಯೋದಕ್ಕೆ ಬೆದಕುತ್ತಾ ಇದ್ದಾರೆಂದು ತಿಳೀಬೇಡ. ಈಗ ನೀನು ನಮ್ಮೊಮ್ನೊಬ್ಬನ ಕೈಲಿ ಏಲಕ್ಕಿ ಮೂಟೆ ಒಳಗೆ ಪ್ಯಾಕೆಟ್ ಹಾಕಿ ಕಳಿಸಿದೀಯ ಅಂತ ತಾನೆ ಹೇಳೋದು?" ದೌಲತ್‌ರಾಮ್ ಕೇಳಿದ. ಆದಷ್ಟನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಅವನು ಪ್ರಯತ್ನಿಸಿದ.

"ಹೌದು! ಈಗ ಇನ್ನೇನೂ ಮಾಡೋಕಾಗದ ಹಾಗೆ ಪರಿಸ್ಥಿತಿ ಇದೆ!"

"ಇರಲಿ ಬಿಡು. ಈಗ ಆ ಪಾರ್ಟಿಗೆ ವರ್ತಮಾನ ಹೋಗಿರುತ್ತೆ. ನರ್ಸಿಂಗ್ ಹೋಂ ಹಿಂದಿನ ಕಸದ ಡಬ್ಬಿಯಲ್ಲಿ ಪ್ಯಾಕೆಟ್ ಇಲ್ಲಾಂತ! ಅಲ್ವ"

"ಇರಬಹುದು"

"ಹಾಗಾದರೆ ಈ ಕೆಲಸಕ್ಕೆ ನೀನು ನಮ್ಮನ್ನು ಕಳಿಸಿರೋದು, ನಾವು ತಂದು ಅದನ್ನು ಅಲ್ಲಿ ಹಾಕಬೇಕೆಂದಿದ್ದಿದ್ದು, ಇದು ಯಾವುದೂ ನಿನ್ನ ಬಿಟ್ಟರೆ ಬೇರೆ ಯಾರಿಗೂ ಗೊತ್ತಿಲ್ಲ ಅಲ್ಲವ?"

"ಪೋಲೀಸಿನವರು ಬಸ್ ಬೆನ್ನು ಹತ್ತಿದ್ದು ಬೇರೆ ಯಾವುದೋ ಕೇಸಿಗೆ ಎಂದಾದರೆ ಮಾತ್ರ ಈ ವಿಷಯ ಯಾರಿಗೂ ಗೊತ್ತಿಲ್ಲ. ಈ ದಂಧೆ ಜಾಡು ಹಿಡಿದೇ ಬಂದಿದ್ದು ಎಂದಾದರೆ ಯಾರಿಗೋ ವಾಸನೆ ಸಿಕ್ಕಿದೆ ಎಂದು ತಿಳಿದು ಹುಷಾರಾಗ ಬೇಕು! ಆದರೆ ನನ್ನ ಅಂದಾಜಿನ ಪ್ರಕಾರ ಈ ವಿಷಯ ಯಾರಿಗೂ ಗೋತ್ತಿಲ್ಲ ಅನ್ನೋದು ಖಂಡಿತ"

"ನಿನ್ನ ಮಾತು ಕೇಳಿದರೆ ಆ ಪ್ಯಾಕೆಟ್ ಬೇಕಾಗಿರೋ ಪಾರ್ಟಿ ಇಲ್ಲೇ ಇದ್ದಾರೆ?" ಕುಟ್ಟಿ ಮತ್ತೆ ಪೆದ್ದು ಪೆದ್ದಾಗಿ ಪ್ರಶ್ನೆ ಕೇಳಿದ.

"ಹುಚ್ಚ, ಚೂರುಪಾರು ನನ್ನ ಕಿವಿಗೆ ಬಿದ್ದಿದ್ದರ ಪ್ರಕಾರ ಅದು ಹೋಗ ಬೇಕಾಗಿರೋದು ಎಲ್ಲಿಗೋ! ಅವರೆಲ್ಲ ಇಲ್ಲಿಯವರೆಗೆ ಯಾಕೆ ಬರ್ತಾರೆ? ನಮಗೆಲ್ಲ ಚಾಕರಿ, ಹೊಟ್ಟೆ ಪಾಡು ನಡೆಯ ಬೇಡವ?"

"ಆ ಪ್ಯಾಕೆಟ್ ಹೋಗಬೇಕಾಗಿರೋದು ಎಲ್ಲಿಗೆ?" ಕುಟ್ಟಿ ಕೇಳಿದ

"ಆಮ್‌ಸ್ಟರ್ಡ್ಯಾಮ್"

"ಎಲ್ಲಿದೆ ಆ ಊರು?"

"ನಿನಗೆಷ್ಟು ಗೊತ್ತಿದೆಯೋ ನಂಗೂ ಅಷ್ಟೆ ಗೊತ್ತಿರೋದು!"

ಕುಟ್ಟಿ ಮಧ್ಯೆ ಬಾಯಿಹಾಕಿ ಮಾತಿನ ದಿಕ್ಕು ತಪ್ಪಿಸುತ್ತಿರುವುದನ್ನು ಕಂಡು ದೌಲತ್‌ರಾಮನಿಗೆ ಸಿಟ್ಟು ಬಂತು.

"ಕುಟ್ಟಿ, ಹೀಗೇ ಮಾತಾಡ್ತ ಮಾತಾಡ್ತ ಒಂದಿನ ಕೈಗೆ ಕೋಳ ಬೀಳುತ್ತೆ. ಆಗ ನಿನಗೆ ಗೊತ್ತಾಗುತ್ತೆ ಯಾವ ಯಾವ ಊರು ಎಲ್ಲೆಲ್ಲಿದೆ ಅಂತ. ಶಾಸ್ತ್ರಿ ಈ ಸಮಾಚಾರ ಆಮೇಲಿ ಮಾತಾಡೋಣ. ಈಗ ಮುಂದಿರೋ ವಿಷಯ ಆ ಏಲಕ್ಕಿ ಮೂಟೆ ಹರಾಜಿನಲ್ಲಿ ಹಿಡಿದರೆ ಎಲ್ಲ ನಿಂದೇ ಏರ್ಪಾಡು ಅಂತ ಆಗುತ್ತೆ ಅಲ್ಲವ?"

"ಹೌದು! ನಿಮ್ಮ ವಿಷಯ ಪ್ರಸ್ತಾಪ ಆಗೋದೇ ಇಲ್ಲ"

“ಸರಿ, ಈಗ ಆ ಪಾರ್ಟಿಗೆ ಏಲಕ್ಕಿ ತರೋನು ನಮ್ಮೋನೆ ಅಂತ ಹೇಳಿರ್ತೀಯ! ಅದನ್ನ ತಂದ ಸಂಬ್ಳ ಅವನಿಗೇ ಸಿಕ್ಕುತ್ತೆ”

“ಸಂಬಳ ಅಂತ ಯಾರು ಕೊಡ್ತಾರೆ! ಅದನ್ನೂ ಏಲಕ್ಕಿ ರೇಟಿಗೆ ಸೇರಿಸಿ ನಾಲ್ಕು ಕಾಸು ಹೆಚ್ಚಿಗೆ ಕೊಡಬಹುದು. ಅಷ್ಟೆ! ಅದನ್ನ ತಪ್ಪಿಸೋದಕ್ಕೆ ಆಗಲ್ಲ. ಯಾಕೆಂದರೆ ನಾವು ನಾಟಕ ಆಡಿದ ಮೇಲೆ ಸರಿಯಾಗೇ ಆಡಬೇಕು”

“ಸರಿ, ನೀನು ನಾಟಕಾನಾದರೂ ಆಡು. ಸಿನೆಮಾನಾದರೂ ಆಡು. ಒಟ್ಟಿನಲ್ಲಿ ಹಾವು ಹೊಡೆದು ಹದ್ದಿಗೆ ಹಾಕಿದ ಹಾಗೆ, ಯಾವೋನೋ ಹಾದೀಲಿ ಹೋಗೋನಿಗೆ ನಮ್ಮ ಸಂಬಳ ಕೊಡಿಸೋ ಹಾಗಿದ್ದರೆ ಇದೇನು ಲಾಟರಿ ಟಿಕೆಟ್ಟು ವ್ಯವಹಾರಾಂತ ತಿಳುಕೊಂಡೆಯ? ಇವತ್ತು ಕೊಳ ಹಾಕಿಸಿಕೊಂಡು ಕಂಬಿ ಎಣಿಸಬೇಕಾದವರು ಹ್ಯಾಗೋ ಕೂದಲೆಳೇಲಿ ಪಾರಾಗಿ ಬಂದಿದ್ದೀವಿ ಗೊತ್ತಾಯ್ತ?” ಎಂದು ದೌಲತ್‌ರಾಮ್ ಶಾಸ್ತ್ರಿ ಎದುರು ತಿರುಗಿ ಬಿದ್ದ. ಅವನಿಗೆ ಈಗ ಕುಟ್ಟಿಗೆ ಬಂದಹಾಗೇ ಸಿಟ್ಟು ಬಂದಿತ್ತು. ಇದರೊಡನೆ ಮಾತಿನ ಭರದಲ್ಲಿ ಈ ವ್ಯವಹಾರದಲ್ಲಿ ಇವರಿಬ್ಬರ ಪಾಲಿರುವುದು ಶಾಸ್ತ್ರಿಗೆ ಬಿಟ್ಟರೆ ಇನ್ನು ಯಾರಿಗೂ ಗೊತ್ತಿಲ್ಲ ಎನ್ನುವ ಗುಟ್ಟನ್ನು ಶಾಸ್ತ್ರಿಯೇ ಬಾಯಿ ಬಿಟ್ಟಿದ್ದ. ಈ ವ್ಯವಹಾರದಲ್ಲಿ ಏನು ಎಡವಟ್ಟಾಗಿ ತೊಂದರೆ ಬರುವುದಾದರೂ ಅದು ಶಾಸ್ತ್ರಿಯಿಂದ ಮಾತ್ರ ಎಂದು ಗೊತ್ತಾದ ಮೇಲೆ ದೌಲತ್‌ರಾಮನಿಗೆ ಧೈರ್ಯ ಬಂದಿತ್ತು.

ಶಾಸ್ತ್ರಿ ಸಮಾಧಾನ ಮಾಡಿದ. “ಇಷ್ಟು ಹೊತ್ತೂ ಯೋಚನೆ ಮಾಡುತ್ತಿದ್ದಿದ್ದು ಏನನ್ನ ಅಂತ ತಿಳಿದಿದೀರ? ಕೆಲಸ ನೀವು ಕಂಪ್ಲೀಟು ಮಾಡಿ. ಆಮೇಲೆ ಮಜೂರಿ ಮಾತಾಡಿ ಆ ಪ್ಯಾಕೆಟ್ಟು ಎಲ್ಲಿಗೆ ಡೆಲಿವರಿಯಾಗಬೇಕೋ ಅಲ್ಲಿಗೆ ಹೋಗಬೇಕು. ಆಮೇಲೆ ಸಂಬಳ. ಮಧ್ಯ ಏನಾದರೂ ಎಡವಟ್ಟಾಗಿ ಠುಸ್ ಅಂದರೆ ನನಗೂ ಇಲ್ಲ. ನಿಮಗೂ ಇಲ್ಲ. ಅದು ಮಾತ್ರ ನಾನು ನಿಮಗೆ ಈಗಲೇ ಹೇಳಿದೇನೆ” ಎಂದು ಸಮಾಧಾನ ಮಾಡುತ್ತಲೇ ಎಚ್ಚರಿಸಿದ ಶಾಸ್ತ್ರಿ.

“ಓಕೇ ಬಾಸ್!” ಎಂದು ಇಬ್ಬರೂ ಹೇಳಿ, ಆ ಹಳದಿ ಅಮೋಫಾಸ್ ಮೂಟೆ ಮಾಲೀಕ ಯಾರು? ಯಾವ ಮಂಡಿಗೆ ಹರಾಜಿಗೆ ಅದನ್ನು ಒಯ್ದ, ಪತ್ತೆ ಮಾಡಲು ಹೊರಟರು.

# ಚಕ್ರವ್ಯೂಹ - ೧೩



ಸುರೇಶ ಏಲಕ್ಕಿ ಮೂಟೆ ಹುಚ್ಚೇಗೌಡರ ಮಂಡಿಗೆ ತರುತ್ತಿರಬೇಕಾದರೆ ಅವನಿಗೆ ತನ್ನನ್ನು ಯಾರೋ ಗಮನಿಸುತ್ತಿದ್ದಾರೆ ಎಂದು ತೀವ್ರವಾಗಿ ಅನ್ನಿಸಿತು. ಹಿಂದೊಮ್ಮೆ ದೋಣಿ ಹೊಳೆಯ ದಂಡೆಯಲ್ಲೂ ಹೀಗೇ ಅನ್ನಿಸಿತ್ತು. ಕಾಡಿನ ಮಧ್ಯೆ ಒಬ್ಬನೇ ನೀರವ ಏಕಾಂತದಲ್ಲಿ ಕುಳಿತು ಕಾಲಪ್ರವಾಹದಂತೆ ಹರಿಯುತ್ತಿದ್ದ ಹೊಳೆಯನ್ನೇ ದಿಟ್ಟಿಸುತ್ತ ಯೋಚಿಸುತ್ತಿದ್ದ. ಆನೆಗಳು ಹೊಳೆಯಲ್ಲಿ ಅರೆಮುಳುಗಿ ಸ್ನಾನ ಮಾಡುತ್ತಿದ್ದಂತೆ ಅಲ್ಲಲ್ಲಿ ಹೊಳೆಯ ನಡುವೆ ಭೀಮಾಕಾರದ ಬಂಡೆಗಳು! ಹೊಳೆಯ ಕಡೆಗೆ ಬಗ್ಗಿ ಕವಿದಿದ್ದ ಕಾಡಿನ ನೆರಳಿನಿಂದ ಮಸಿಚೆಲ್ಲಿದಂತೆ ನದಿಯ ದಂಡೆಯೆಲ್ಲ ಕರ್ರಗೆ ಕಾಣುತ್ತಿತ್ತು. ಸುರೇಶ ಮರಳಿನ ಮೇಲೆ ಕುಳಿತು ಅಲ್ಲಿದ್ದ ಪರ್ವತಾಗ್ರಗಳ ಮಹಾ ಅಯಸ್ಕಾಂತ ಶಿಖರಗಳ ಬಗ್ಗೆ ಯೋಚಿಸುತ್ತಿರುವಾಗ ಅವನಿಗೆ ಹಠಾತ್ತಾಗಿ ತಾನು ಯಾರಿಂದಲೋ ಗಮನಿಸಲ್ಪಡುತ್ತಿದ್ದೇನೆ ಎಂದು ಸ್ಪಷ್ಟವಾಗಿ ಅನ್ನಿಸಲಾರಂಭಿಸಿತು.

ಯಾರೂ ಇಲ್ಲದ ನೀರವ ಕಾನನ! ಗಾಳಿ ಸಹ ಇಲ್ಲದ ಸ್ತಬ್ಧ ಜಗತ್ತು! ಹರಿಯುತ್ತಿರುವ ನದಿಯೊಂದೇ ಆ ಸ್ಥಾವರ ವಿಶ್ವದಲ್ಲಿದ್ದ ಜಂಗಮ ಸಂಕೇತ! ಹಾಗಿದ್ದರೂ ಸ್ಪಷ್ಟವಾಗಿ ಅನುಮಾನಕ್ಕೆಡೆ ಇಲ್ಲದಂತೆ ತನ್ನಮೇಲೆ ಯಾರೋ ದೃಷ್ಟಿ ಕೇಂದ್ರೀಕರಿಸಿದ್ದಾರೆಂದು ಸುರೇಶನಿಗೆ ತೀವ್ರವಾಗಿ ಅನ್ನಿಸಿತು. ಸುರೇಶ ತಿರುಗಿ ನೋಡಿದ! ಏನೂ ಇಲ್ಲ! ಹೊಳೆಯಾಚೆ ಇದ್ದ ಹಾಗೇ ಬೆನ್ನ ಹಿಂದೆಯೂ ದಟ್ಟವಾದ ಕಾಡು ಹೆಪ್ಪುಗಟ್ಟಿದ ಹಸುರಿನ ಮುದ್ದೆಯಂತೆ ಬಿದ್ದಿದೆ. ಸುರೇಶನಿಗೆ ಆಶ್ಚರ್ಯವಾಯ್ತು! ಏನೂ

ಇಲ್ಲದಿದ್ದದರೂ ಅವನ ಪಂಚೇಂದ್ರಿಯಗಳಿಗೆ ತಿಳಿದಷ್ಟೇ ಸ್ಪಷ್ಟವಾಗಿ ಪ್ರಖರವಾಗಿ ಹೀಗನ್ನಿಸಲು ಏನುಕಾರಣ ಎಂದು. ಎದ್ದು ಬೆನ್ನಹಿಂದಿನ ಕಾಡಿನತ್ತ ಎರಡು ಹೆಜ್ಜೆ ಹಾಕಿದ. ಏನೋ ಕಾಡೊಳಗೆ ಸರಿದ ಹಾಗೆ! ಮರದಿಂದ ಹಣ್ಣೆಲೆ ಉದುರಿ ಬಿದ್ದಾಗ ಚರಕ್ ಎಂದು ಸದ್ದಾಗುವಂತೆ ಕ್ಷೀಣವಾಗಿ ಸದ್ದು! ಸುರೇಶ ಇನ್ನೂ ನಾಲ್ಕು ಹೆಜ್ಜೆ ಹೋಗಿ ಕಾಡೊಳಗೇ ನೋಡಿದ. ಅಲ್ಲಿ ನೆಲವೆಲ್ಲಾ ಒದ್ದೆ ಇತ್ತು. ಕಾಡು ಪ್ರಾಣಿಗಳು ಓಡಾಡಿದ ಒಂದೆರಡು ಹೆಜ್ಜೆಗುರುತುಗಳಿದ್ದವು. ಕಾಡು ಕುರಿ, ಹಂದಿ, ಹುಲಿ ಇತ್ಯಾದಿ. ಆದರೆ ಸುರೇಶನಿಗೆ ಆಘಾತವಾಗಿದ್ದು ಹೆಜ್ಜೆ ಗುರುತುಗಳನ್ನು ನೋಡಿಯಲ್ಲ! ಹುಲಿಯ ಹೆಜ್ಜೆ ಗುರುತಿನ ಪಡಿಯಚ್ಚಿನೊಳಗೆ ಸುತ್ತಲಿನ ಜೌಗು ನೀರು ತೆಳ್ಳಗೆ ಇನ್ನೂ ತುಂಬಿಕೊಳ್ಳುತ್ತಾ ಇದ್ದುದನ್ನು ನೋಡಿ! ಹುಲಿ ಸುರೇಶ ಬರುವುದಕ್ಕೆ ಒಂದೆರಡು ಕ್ಷಣ ಮುಂದಷ್ಟೆ ಆ ಜೌಗನ್ನು ದಾಟಿ ಹೋಗಿದೆ! ಸುರೇಶನಿಗೆ ಅವನ ಆರನೆಯ ಇಂದ್ರಿಯ ಕೊಟ್ಟ ಎಚ್ಚರಿಕೆ ಹುಸಿ ಅನ್ನಿಸಿಕೆಯಲ್ಲ!

ಈಗ ಮತ್ತೆ ಹಾಗೇ ಅನ್ನಿಸಿದ್ದು ನೋಡಿ ಸುರೇಶನಿಗೆ ಅನುಮಾನವಾಯ್ತು. ತಿರುಗಿ ನೋಡಿದರೆ ಬೆನ್ನ ಹಿಂದೆ ಯಾರು ಯಾರೋ ಏನೇನೋ ಮಾಡುತ್ತ ತಂತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದಾರೆ! ಅನೇಕರು ಸುರೇಶನ ಕಡೆಗೂ ಆಗೀಗ ನೋಡುತ್ತಲೂ ಇದ್ದಾರೆ! ಅವರಲ್ಲಿ ಯಾರು ಉದ್ದೇಶ ಪೂರ್ವಕವಾಗಿ ನೋಡುತ್ತಿದ್ದಾರೆಂದು ಅನುಮಾನಿಸುವುದು! ಕಾಡಿನಲ್ಲಿ ಹುಲಿ ಹೆಜ್ಜೆ ನೋಡಿ ಪತ್ತೆಮಾಡಿದಷ್ಟು ಸುಲಭವಾಗಿ ಊರಿನಲ್ಲಿ ಜಾಡು ಹಿಡಿಯಲು ಸಾಧ್ಯವಿಲ್ಲ. ಅಷ್ಟಲ್ಲದೆ ಬಸ್ ಇಳಿಯುತ್ತಲೇ ಚೆಕ್ಕಿಂಗ್‌ನವರು ಸ್ಟಾಂಡಿನಲ್ಲಿ ಗಲಭೆ ಗಡಿಬಿಡಿ ಮಾಡಿದ್ದು ಇತ್ಯಾದಿಗಳೆಲ್ಲ ಇನ್ನೂ ಅವನ ಸ್ಮೃತಿಯೊಳಗಿದ್ದುದರಿಂದ ತನಗೆ ಹಾಗೆನ್ನಿಸುತ್ತಿರಬಹುದೆಂದು ಸುರೇಶ ಅದನ್ನು ಲಕ್ಷಕ್ಕೆ ತೆಗೆದುಕೊಳ್ಳದೆ ಮುನ್ನಡೆದ.

ಗೌರಿ ಹೊತ್ತಿದ್ದ ಮೂಟೆಯನ್ನು ಒಯ್ದು, ಕೊಟ್ಟು ಬರಲು ಅಬ್ಬೂಸಾಲಿ ಅವನ ಮಗನನ್ನು ಕಳಿಸಿದ್ದ. ದಾರಿಯಲ್ಲಿ ನಾಲ್ಕಾರು ಜನ ಸುರೇಶನಿಗೂ ಗೌರಿಗೂ ದೇಶಾವರಿ ಮಾತಾಡಲು ಸಿಕ್ಕಿದರು. ಏಲಕ್ಕಿ ರೇಟು ತಾರಾಮಾರಿ ಏರಿದ್ದರಿಂದ ಸುರೇಶನ ಏಲಕ್ಕಿ ಮೂಟೆ ನೋಡಿ ಒಂದಿಬ್ಬರು ಮೊದಲೇ ಕೊಟ್ಟವರು ಹೊಟ್ಟೆ ಉರಿದುಕೊಂಡರು. ಇನ್ನು ಕೆಲವರು ಇನ್ನೂ ತಡ ಮಾಡಿ ಕೊಡುವುದು ಒಳ್ಳೆಯದು, ಏಕೆಂದರೆ ಏಲಕ್ಕಿ ರೇಟು ಇನ್ನೂ ಏರಲಿದೆ ಎಂದು ಸಲಹೆಯನ್ನೂ ಕೊಟ್ಟರು. ದೇವಪುರದ ಮಂದಿ ತಾವು ದಾರಿಯಲ್ಲಿ ಸಿಗುವವರಿಗೆ ಸ್ನೇಹಿತರೋ ಹಿತೈಷಿಗಳೋ ಎಂದು ತೋರಿಸಿಕೊಳ್ಳಲು ಉಚಿತ ಸಲಹೆ ಕೊಡುವುದು ಕಡ್ಡಾಯವೆಂದು ತಿಳಿದಿದ್ದಾರೆ. ಅಬ್ಬೂಸಾಲಿಯ ಅಂಗಡಿಯಿಂದ ಹುಚ್ಚೇಗೌಡರ ಮಂಡಿಯವರೆಗೆ ಬರುವುದರೊಳಗೆ ಸುರೇಶ ಹತ್ತಾರುತರದ ಸಲಹೆ ಸದುಪದೇಶಗಳನ್ನು ಎದುರಿಸಬೇಕಾಯ್ತು. ಇಷ್ಟೆಲ್ಲಾ ಮಾತು ಕತೆ ಆಡಿಕೊಂಡು ಬಂದರೂ ಸುರೇಶ ಮನಸ್ಸಿನಾಳದಲ್ಲಿ ತನ್ನನ್ನು ಯಾರೋ ಗಮನಿಸುತ್ತಿದ್ದಾರೆ, ಹಿಂಬಾಲಿಸುತ್ತಿದ್ದಾರೆ

ಎನ್ನುವ ಅನ್ನಿಸಿಕೆ ಇದ್ದೇ ಇತ್ತು. ಸುರೇಶ ಹುಚ್ಚೇಗೌಡರ ಮಂಡಿ ಕಡೆ ತಿರುಗುತ್ತಲೂ ನಾಟಕೀಯವಾಗಿ ಅವನಿಗೆ ಹಾಗನ್ನಿಸುವುದು ನಿಂತುಹೋಯ್ತು.

ಹುಚ್ಚೇಗೌಡರು ಅವತ್ತು ಹರಾಜು ಬರಖಾಸ್ತು ಮಾಡುವ ಯೋಚನೆಯಲ್ಲಿದ್ದರು. ಸುಮಾರು ಜನ ಕಿಕ್ಕಿರಿದಿದ್ದರೂ ಅವತ್ತು ಹರಾಜಿಗೆ ಏಲಕ್ಕಿ ಬಂದಿದ್ದು ಯಾರದೋ ಹತ್ತೇ ಕೆ.ಜಿ. ಮಿಕ್ಕವರೆಲ್ಲಾ ಯಾರ್‍ಯಾರದು ಎಷ್ಟೆಷ್ಟಕ್ಕೆ ಹೋಗುತ್ತೆ ಎಂದು ತಮಾಷೆ ನೋಡುವ ಕುತೂಹಲಕ್ಕಷ್ಟೆ ಬಂದು ಮುತ್ತಿಕೊಂಡಿದ್ದವರು. ಸುಮಾರು ಜನ ಇನ್ನೇನು ಹೊರಡಬೇಕೆಂದಿದ್ದವರು ಸುರೇಶನ ಮೂಟೆಗಳನ್ನು ನೋಡುತ್ತಲೇ ಹರಾಜು ನಡೆಯಬಹುದೆಂದು ಊಹಿಸಿ ನಿಂತರು.

''ಏ ಚುನ್ನಿಲಾಲ್ ಮಂಡೀಲಿ ಇರ್ತಾರಂತ ಕಾಣ್ತದೆ. ಓಡು ಓಡು ಓಡು, ಹುಚ್ಚೇಗೌಡರ ಮಂಡೀಲಿ ಹರಾಜು ಉಂಟಂತೆ ಅಂತ ಹೇಳ್ಬಿಡು. ಓಡು ಓಡು'' ಎಂದು ಯಾರೋ ಯಾರನ್ನೋ ಓಡಿಸಿದರು.

ಅವರನ್ನು ಕರೆಯಲು ಹೋಗುತ್ತಿದ್ದವನಿಗೆ ''ಏ ಹಂಗೇ ತೋಳೂರ್‍ನೋರ ಮಂಡಿ, ಕಲ್ಲುಕೊಪ್ಪದ ಮಂಡೀಗೂ ಹೋಗಿ ಒಂದ್ಮಾತು ಹೇಳ್ಬಿಟ್ಟು ಬಾರೋ'' ಎಂದು ಹುಚ್ಚೇಗೌಡರು ಗಟ್ಟಿದನಿಯಲ್ಲಿ ಕೂಗಿ ಹೇಳಿ ಆಮೇಲೆ ಹರಾಜಿಗೆ ನೆರೆದಿದ್ದವರ ಕಡೆಗೆ ತಿರುಗಿ ''ಹೇಳೋದು ಹೇಳ್ಬಿಡೋದು ನಾವು ಆಮೇಲೆ ಯಾಕೆ ನಮಗೊಂದು ನಿಷ್ಠೂರ! ನಮಗೆ ಹೇಳದೆ ಒಳಗಿಂದ ಒಳಗೇ ವ್ಯವಹಾರ ನಡೆಸಿದ್ರು ಅಂತ'' ಎಂದು ಹೇಳುತ್ತಾ ಸುರೇಶನಿಗೆ ಏಲಕ್ಕಿ ಮೂಟೆ ಒಳಗಿಡಲು ಸೂಚಿಸಿ ''ಏನು ಬಿಸಿಲು ಕಾಯೋ? ಗೂಡು ಕಾಯೋ?'' ಎಂದು ಪ್ರಶ್ನೆ ಕೇಳಿದರು.

''ಗೂಡು ಕಾಯೆಲ್ಲ ಮುನ್ನೂರರಹಂಗೆ ತಿಂಗಳು ಮುಂಚೇನೆ ಕೊಟ್ಬಾಯ್ತಲ್ಲ. ಇನ್ನೇನಿದ್ರು ಬಿಸಿಲು ಕಾಯೆ ನಮ್ಮ ಹತ್ರ'' ಎಂದು ಉತ್ತರಿಸಿದ ಸುರೇಶ. ಸುರೇಶನ ಹಿಂದೆ ಗೌರಿ ನಿಂತಿದ್ದನ್ನು ಗಮನಿಸಿ ಹುಚ್ಚೇಗೌಡರು ''ಬನ್ನಿ ಬನ್ನಿ, ನೀವು ಒಳಗೆ ಬನ್ನಿ, ಏನು ನೀವೂ ಬಂದುಬಿಟ್ರಲ್ಲ ಇಷ್ಟು ದೂರ'' ಎಂದು ಪ್ರಶ್ನೆ ಕೇಳಿದರು. ಗೌರಿ ನಸುನಗುತ್ತ ''ಪೇಟೇಲಿ ಕೆಲಸ ಇತ್ತು. ಹಾಗಾಗಿ ಬಂದೆ'' ಎಂದು ಹೇಳಿ ಗಂಡಸರ ಗುಂಪಿನಿಂದ ದೂರ ಒಳಗೆ ನಿಂತಳು.

ಹುಚ್ಚೇಗೌಡರು ಸುರೇಶನ ಕಡೆಗೆ ತಿರುಗಿ ''ಗೂಡುಕಾಯಿ, ಹಸುರು ಕಾಯಿ, ಬಿಳೀಕಾಯಿ ಎಲ್ಲಕ್ಕೂ ರೇಟು ಬಂದಿದೆ ತಗೊಳ್ಳಿ. ಏನು ಹೆಚ್ಚಿಗೇಂದರೆ ಐದ್ಹತ್ತು ರೂಪಾಯಿ ವ್ಯತ್ಯಾಸ ಅಷ್ಟೆ. ಅಂದರೆ ಎಷ್ಟು ದಿನ ಈ ರೇಟು ನಿಲ್ತದೆ ಅನ್ನೋದು ಮಾತ್ರ ಹೇಳಕ್ಕಾಗಲ್ಲ'' ಎಂದು ಆಶ್ವಾಸನೆ ಕೊಡುವಂತೆ ಹೇಳಿದರು. ಇವರ ಮಾತು ಸಾಗುತ್ತಿರಬೇಕಾದರೆ ಇನ್ನೂ ಒಂದಷ್ಟು ಜನ ಬೇರೆ ಬೇರೆ ಮಂಡಿಗಳಲ್ಲಿ ಹರಾಜು ನಿರೀಕ್ಷಿಸುತ್ತ ಕುಳಿತಿರುವ ವ್ಯಾಪಾರಿಗಳನ್ನು ಕರೆಯಲು ಓಡಿದರು.

* * * *

ದೇವಪುರದ ಮಂಡಿ ವ್ಯಾಪಾರಿಗಳು ಎಂದರೆ ಒಂದು ಮಾಫಿಯಾ ಗ್ಯಾಂಗ್ ಎಂದು ಹೇಳಬಹುದು. ಸರ್ಕಾರದ ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡನ್ನು, ಬೆಳೆಗಾರರ ಸಹಕಾರಿ ಸಂಘಟನೆಯನ್ನು, ಕೊನೆಗೆ ಏಲಕ್ಕಿ ಬೋರ್ಡ್ ಸ್ಥಾಪಿಸಿದ ಕಾರ್ಡಮಮ್ ಟ್ರೇಡಿಂಗ್ ಕಾರ್ಪೊರೇಷನ್ನನ್ನು, ಎಲ್ಲವನ್ನೂ ನಷ್ಟ ಮಾಡಿಕೊಂಡು ನಾಶವಾಗುವಂತೆ ಮಾಡಿದ ಕೀರ್ತಿ ಈ ಖದೀಮರ ಮಾಫಿಯಾ ಗ್ಯಾಂಗಿಗೆ ಸಲ್ಲಬೇಕು. ತಮ್ಮತಮ್ಮೊಳಗೇ ಒಬ್ಬರ ಕುತ್ತಿಗೆ ಒಬ್ಬರು ಕುಯ್ಯುವ ಕೆಲಸ ಇವರು ಸತತವಾಗಿ ನಡೆಸುತ್ತಲೇ ಇರುತ್ತಾರಾದರೂ, ತಮ್ಮ ವ್ಯಾಪಾರದ ಹಿತಾಸಕ್ತಿಗೆ ಧಕ್ಕೆ ಬರುತ್ತದೆಂದ ಕೂಡಲೇ ಎಲ್ಲರೂ ಒಟ್ಟಾಗಿ ಆ ಸಂಸ್ಥೆ ಅಥವಾ ಸಂಘಟನೆಯನ್ನು ಮುಳುಗಿಸುತ್ತಾರೆ. ಹೀಗೆ ಅಡಿಯಿಂದ ಮುಡಿಯವರೆಗೆ ಇಂಥ ಖದೀಮರಿಂದ ತುಂಬಿರುವುದರಿಂದಲೇ ಏಲಕ್ಕಿ ವ್ಯವಹಾರ ಎಂದರೆ ಪಕ್ಕಾ ಜೂಜಾಗಿದೆ. ಏಲಕ್ಕಿ ಬೆಲೆ ಯಾವ ಕಾರಣಕ್ಕಾಗಿ ಏರುತ್ತದೆ, ಯಾವ ಕಾರಣಕ್ಕಾಗಿ ಇಳಿಯುತ್ತದೆ ಎನ್ನುವುದನ್ನು ತಜ್ಞರು, ಪರಿಣತರು, ಸರ್ಕಾರ ಅಥವಾ ಏಲಕ್ಕಿ ಮಂಡಳಿ ಯಾರಿಗೂ ಪತ್ತೆ ಮಾಡಲಾಗಲಿ ಹೇಳಲಾಗಲಿ ಸಾಧ್ಯವೇ ಇಲ್ಲ. ಏಲಕ್ಕಿ ಬೆಳೆದು ಲಾಭ ಮಾಡುವ ಬಿಸಿಲ್ಗುದುರೆಗಳ ಹಿಂದೆ ಓಡಿ ಓಡಿ ಸುಸ್ತಾದ ಅನೇಕ ರೈತರು ಸಂಪೂರ್ಣ ಭ್ರಮ ನಿರಸನ ಹೊಂದಿ ಏಲಕ್ಕಿ ಗಿಡಗಳನ್ನೇ ಕಿತ್ತೆಸೆದು ಬೇರೇನೇನನ್ನೋ ಬೆಳೆಯ ತೊಡಗಿದ್ದಾರೆ. ಏಲಕ್ಕಿ ಬೆಳೆದವನಾಗಲಿ ಕೊಂಡವನಾಗಲಿ ಬರ್ಕತ್ತಾಗುವುದಿಲ್ಲ ಎನ್ನುವ ನಾಣ್ಣುಡಿಗೆ ಕಾರಣ ಶಾಪವೂ ಅಲ್ಲ. ಶನಿಯೂ ಅಲ್ಲ. ದೇವಪುರದ ಜನಗಳ ಜೂಜುಕೋರತನವೇ ಮೂಲ ಕಾರಣ.

ಏಲಕ್ಕಿ ಹರಾಜಿಗೆ ಏಲಕ್ಕಿ ತಗೊಂಡು ಹೋದರೆ ಈ ಮಂಡಿ ವ್ಯವಹಾರ ಕೇವಲ ಅವನ ಏಲಕ್ಕಿ ಹರಾಜು ಹಾಕಿ, ತಮ್ಮ ಕಮಿಷನ್ ಮುರಿದುಕೊಂಡು ಅವನಿಗೆ ದುಡ್ಡು ಕೊಟ್ಟು ಕಳಿಸುವುದರಲ್ಲಿ ಪರ್ಯಾವಸಾನವಾಗುವುದೇ ಇಲ್ಲ. ಏಲಕ್ಕಿ ಬೆಳೆಗಾರ ಹತ್ತಾರು ಕೆ.ಜಿ ಬೆಳೆಯುವವನಾದರೆ ಅಲ್ಲಿಟ್ಟು ಹೋಗೆಂದು ಆಜ್ಞಾಪಿಸುವುದು ಇದ್ದೇ ಇದೆ. ನೂರಾರು ಕೆ.ಜಿ ಬೆಳೆಯುವವನಾದರೆ ಅವನನ್ನು ಬುಟ್ಟಿಗೆ ಕೆಡವಲು ಬೇರೆ ಮಾರ್ಗವನ್ನೇ ಅನುಸರಿಸಲಾಗುತ್ತೆ. ಏಲಕ್ಕಿ ಹರಾಜಿಗಿಟ್ಟು ಒಳ್ಳೆ ಬೆಲೆ ಬರಲಿಲ್ಲೆಂದು ಏಲಕ್ಕಿ ವಾಪಸ್ ಒಯ್ಯಲಾಗಲಿ, ಬೇರೊಂದು ಮಂಡಿಗೆ ಒಯ್ಯಲಾಗಲಿ ಬಿಡುವುದೇ ಇಲ್ಲ. ನಾಳೆ ದೊಡ್ಡ ಹರಾಜಿದೆ, ನಾಳಿದ್ದು ಹೈದರಾಬಾದಿನವರು ಬರುತ್ತಾರೆ, ಮತ್ತೊಂದು ದಿನ ಎಕ್ಸ್‌ಪೋರ್ಟರುಗಳು ಬರುತ್ತಾರೆ ಎಂದು ಇಪ್ಪತ್ತಾರು ತರ ಹೇಳಿ ಏಲಕ್ಕಿ ತಂದವನ ಮೂಟೆಯನ್ನು ಅಲ್ಲಿಂದ ಎತ್ತಲು ಬಿಡುವುದಿಲ್ಲ. ನೂರುಗಟ್ಟಲೆ ಕೆಜಿ ತಂದವನಾದರೂ ಖರ್ಚಿಗೆ ಕಾಸಿಲ್ಲದೆ ಎಷ್ಟು ದಿನ ತಾನೇ ತಳ್ಳುತ್ತಾನೆ. ಒಳ್ಳೆ ರೇಟು ಬರುವವರೆಗ ಇಲ್ಲೇ ಇರಲಿ ಏಲಕ್ಕಿ ಎಂದು ಒಂದಷ್ಟು ಅಡ್ವಾನ್ಸ್ ಕೊಡುತ್ತಾರೆ. ಅಲ್ಲಿಗೆ ಆ ಬೆಳೆಗಾರನಿಗೂ ಮಂಡಿ ಸಾಹುಕಾರನಿಗೂ ಕೊನೆಯೇ ಇಲ್ಲದ ಪರಾವಲಂಬನೆಯ ವಿಚಿತ್ರ ಭಾಂದವ್ಯ ಬೆಳೆಯಲಾರಂಭಿಸುತ್ತೆ. ಯಾವಾಗಲೂ ಇಲ್ಲಾ ಬೆಳೆಗಾರನ ಸಾಲ ಇವರ ಮೇಲಿರುತ್ತೆ,

ಇಲ್ಲವೇ ಇವನ ಏಲಕ್ಕಿ ಅವನ ಮಂಡಿಯಲ್ಲಿರುತ್ತೆ. ಬೆಳೆಗಾರನ ತಲೆ ಇವರು ಬೋಳಿಸುತ್ತ, ಮಂಡಿ ಸಾಹುಕಾರನ ಬಳಿ ಅವರು ಸಾಲ ಸೋಲ ಕೀಳುತ್ತ, ಒಬ್ಬರನ್ನೊಬ್ಬರು ನಿರಂತರವಾಗಿ ದ್ವೇಷಿಸುತ್ತ, ದೂಷಿಸುತ್ತ, ತಲೆತಲೆಮಾರುಗಳವರೆಗೆ ಮುಂದುವರಿಯುವ ಕರ್ಮಬಂಧ ಇದು. ಈ ದ್ವೇಷಪೂರಿತ ಅನ್ಯೋನ್ಯತೆಯನ್ನು ವ್ಯಾಪಾರದ ಪರಿಭಾಷೆಯಲ್ಲಿ ವಿವರಿಸಲು ಸಾಧ್ಯವೇ ಇಲ್ಲ.

* * * *

ಕೈಲಾಸ್ ಬಾರ್ ಮ್ಯಾನೇಜರ್ ಕುನ್ನಿ ಸುರೇಶನ ಏಲಕ್ಕಿಗೆ ಕೇಜಿಗೆ ಸಾವಿರ ರೂಪಾಯಿ ಕೂಗಿದಾಗ ಒಂದಿಬ್ಬರು ಹರಾಜಿಗೆ ಬಂದಿದ್ದ ವ್ಯಾಪಾರಿಗಳಿಗೆ ರೇಗಿಹೋಯ್ತು. ಐವತ್ತು ಕೆ.ಜಿ ಏಲಕ್ಕಿಗೆ ಐವತ್ತು ಸಾವಿರ ಎಣಿಸುವ ತಾಕತ್ತಿಲ್ಲದ ಕುನ್ನಿ ಹುಚ್ಚಾಪಟ್ಟೆ ಕೂಗಿ ಹರಾಜು ಹಾಳುಮಾಡಲು ಬಂದಿದ್ದಾನೆಂದು ತಿಳಿದು ಹೆಚ್ಚೇಗೌಡರಿಗೂ ಸಿಟ್ಟು ಏರಿತು. ಸೆಕೆಂಡ್ಸ್ ಮದ್ಯ ಮಾರುವುದು, ಇಸ್ಪೀಟು ಕ್ಲಬ್ಬು ಅನಧಿಕೃತವಾಗಿ ನಡೆಸುವುದು, ಸೂಳೆಗಾರಿಕೆ ನಡೆಸುವುದು ಇವೆಲ್ಲ ಅವನ ಬಾರಿನಲ್ಲಿ ನಡೆಯುತ್ತಿವೆಯೆಂದು ಅವನ ಹೋಟೆಲಿನ ಮೇಲೆ ರೈಡ್ ಮಾಡಿ ಅವನನ್ನು ಕೆಲವುದಿನ ಪೋಲೀಸರು ಒಳಗೆ ಹಾಕಿದ್ದರು. ಬೇಲ್ ಮೇಲೆ ಈಚೆಗೆ ಬಂದಿದ್ದ ಅವನು ಪಾಪರಾಗಿ ಹೋಟೆಲು ಮುಚ್ಚುವ ಸ್ಥಿತಿಗೆ ಬಂದಿದ್ದು ಎಲ್ಲರಿಗೂ ಗೊತ್ತಿದ್ದ ವಿಷಯ. ಇಂಥ ಪ್ರಶ್ನಾರ್ಹ ವ್ಯಕ್ತಿ ಹರಾಜಿಗೆ ಬಂದು ಬಾಯಿಗೆ ಬಂದ ರೇಟು ಕೂಗಿದರೆ ಅಲ್ಲಿದ್ದ ಕಸಬುದಾರ ವ್ಯಾಪಾರಿಗಳಿಗೆ ಸಿಟ್ಟು ಬರದೆ ಇರುತ್ತದೆಯೆ?

ಎಲ್ಲರಿಗೂ ಮಂಡಿ ಮರ್ಚಂಟ್ ಹುಚ್ಚೇಗೌಡರ ಮೇಲೇ ಸಿಟ್ಟು ಬಂತು. ಎಲ್ಲೋ ಇದ್ದವರನ್ನು ಕರೆಸಿ ಇಲ್ಲಿ ವಿನಾಕಾರಣ ಉಭಯ ಸಂಕಟಕ್ಕೆ ಸಿಕ್ಕಿಸಿದರಲ್ಲ ಎಂದು. ಒಮ್ಮೊಮ್ಮೆ ಮಂಡಿಯವರು ತಾವೇ ಕೊಂಡಿದ್ದ ಮಾಲನ್ನು ಹರಾಜಿಗಿಟ್ಟಾಗ ರೇಟು ಹೆಚ್ಚಿಸಲು ತಮ್ಮವರನ್ನೇ ಹರಾಜು ಕೂಗಲು ನಿಲ್ಲಿಸಿ, ಹೆಚ್ಚುಹೆಚ್ಚಿಗೆ ಕೂಗಿಸಿ, ವ್ಯಾಪಾರ ಮಾಡಲು ಬಂದ ಅಸಲಿ ವ್ಯಾಪಾರಿಗಳನ್ನು ಪೇಚಿಗೆ ಸಿಕ್ಕಿಸುತ್ತಿದ್ದುದೂ ಉಂಟು. ಕೆಲವರಿಗೆ ಹುಚ್ಚೇಗೌಡರ ಮೇಲೆ ಈ ರೀತಿ ಅನುಮಾನ ಬಂದರೂ, ದೇವಪುರದಲ್ಲೆಲ್ಲಾ ಪ್ರಖ್ಯಾತ ಫೋರ್‌ಟ್ವೆಂಟಿ ಎಂದು ಗೊತ್ತಿರುವ ಕುನ್ನಿಯ ಸಹಾಯ ತೆಗೆದುಕೊಳ್ಳಲು ಅವರು ಮುಂದಾಗುತ್ತಾರೆಂದು ಭಾವಿಸಲು ಸಾಧ್ಯವಿರಲಿಲ್ಲ. ಆದರೂ ಕೆಲವರು ಸಿಟ್ಟು ತೀರಿಸಿಕೊಳ್ಳಲು "ಈರೀತಿ ಮಾಡಿದರೆ ಇನ್ನು ನೀವು ಕರೆದರೆ ಬರುವುದಿಲ್ಲ" ಎಂದು ಹುಚ್ಚೇಗೌಡರಿಗೆ ಎಚ್ಚರಿಕೆ ಕೊಟ್ಟರು.

ಹುಚ್ಚೇಗೌಡರು ಗಂಭೀರವಾಗಿ "ಏಯ್ ಕುನ್ನಿ, ನಿನ್ನ ಹತ್ತಿರ ಈಗಿಂದೀಗ ಎಣಿಸೋದಕ್ಕೆ ಕ್ಯಾಶ್ ಇದೆಯ? ಹಾಗಿದ್ದರೆ ಮಾತ್ರ ಇಲ್ಲಿ ರೇಟು ಕೂಗು. ಐವತ್ತು ಕೇಜಿಗೆ ಎಷ್ಟು ರೂಪಾಯ ಎಣಿಸಬೇಕಾಗುತ್ತೆ ಏನಾದರೂ ಅಂದಾಜಿದೆಯ ನಿನಗೆ. ಈಗ ನೀನು ಹುಚ್ಚಾಪಟ್ಟೆ ರೇಟು ಕೂಗಿ, ಕೊಳ್ಳೋದಕ್ಕೆ ಬಂದಿದ್ದವರು ವಾಪಾಸ್

ಹೋದಮೇಲೆ ನೀನೇನಾದರೂ ದುಡ್ಡು ಆಮೇಲೆ ಕೊಡುತ್ತೇನೆ, ಟೈಮ್ ಕೊಡಿ ಎಂದು ಹೇಳಿದೆಯೋ! ಹುಷಾರ್'' ಎಂದು ಕಟುವಾಗಿ ಎಚ್ಚರಿಸಿದರು.

ವ್ಯಾಪಾರಕ್ಕಿಟ್ಟಮೇಲೆ ಯಾರು ಕೂಗಿದರೇನು? ಹರಾಜು ಇವರಪ್ಪನದು ಎನ್ನುವಹಾಗೆ ಮಾತಾಡುತ್ತಾರಲ್ಲ ಈ ತಲೆಹಿಡುಕರು! ಎಂದು ಕುನ್ನಿಗೆ ಒಳಗೊಳಗೇ ಕಂಡಾಪಟ್ಟೆ ಸಿಟ್ಟು ಬಂದರೂ, ಬಂದ ಕಾರ್ಯಸಾಧನೆ ಬಹಳ ಮುಖ್ಯವಾಗಿದ್ದರಿಂದ ಅದನ್ನೊಂದು ಚೂರೂ ತೋರಿಸಿಕೊಳ್ಳದೆ ರೇಗಿಬಿದ್ದ ಎಲ್ಲರ ಕಡೆಗೆ ಹಲ್ಲು ಕಿರಿಯುತ್ತ ''ಸಿಟ್ಟು ಮಾಡಬ್ಯಾಡ್ರಿ, ಒಬ್ರು ತಿರುಪತಿ ಪ್ರಸಾದಕ್ಕೆ ಏಲಕ್ಕಿ ಹಾಕುತ್ತೇವೆ ಅಂತ ಹರಕೆ ಮಾಡ್ಕೊಂಡೋರು ಎಷ್ಟು ದುಡ್ಡಾದ್ರು ಪರ್ವಾಗಿಲ್ಲ, ಯಾಲಕ್ಕಿ ಮಾತ್ರ ಬೇಕೇ ಬೇಕು ಅಂತ ಹೇಳಿದ್ದಕ್ಕೆ ನಾನು ಬಂದೆ. ಇಲ್ಲದಿದ್ದರೆ ನಾನ್ಯಾಕೆ ಈ ವ್ಯವಹಾರಕ್ಕೆ ಇಳೀಲಿ ಹೇಳ್ರಿ? ನಿಮ್ಮ ಹತ್ರ ಪೈಪೋಟಿ ಮಾಡಕ್ಕೆ ನನಗೆ ಯೋಗ್ಯತೆ ಇದೆಯ? ನೀವೆಲ್ಲ ದೊಡ್ಡಮನಸ್ಸು ಮಾಡಿ ಬಿಟ್ಟುಕೊಟ್ಟರೆ ಅವರು ದೇವರ ಕೆಲಸ ನಡೆಸಬಹುದು. ಇಲ್ಲದಿದ್ದರೆ ಇಲ್ಲ!'' ಎಂದು ಹೇಳಿ ಅಲ್ಲಿದ್ದವರ ಕಡೆ ತಿರುಗಿ ಮತ್ತೊಮ್ಮೆ ಹಲ್ಲು ಕಿರಿದ.

''ಬಂದವನೇ ಒಂದು ಮಾತು ದೇವರ ಹರಕೆಗೆ ಅಂತ ಹೇಳಿದ್ದರೆ ನಾವೇ ಗಿರಾಕಿ ಹತ್ತಿರ ಹೇಳಿ ಒಪ್ಪಂದ ಮಾಡಿಸ್ತಿರಲಿಲ್ಲವ? ಏನು ನಿನಗೊಬ್ನಿಗೇನಾ ದೇವರಮೇಲೆ ಭಕ್ತಿ? ಅದ್ಯಾಕೆ ಹರಾಜೊಳಗೆ ಬಾಯಿ ಹಾಕಿ ತಾರಾಮಾರಿ ಕೂಗಬೇಕು? ಹೀಗೆ ಮಾಡಿದರೆ ವ್ಯಾಪಾರಿಗಳು ಏನು ತಿಳುಕೋತಾರೆ ಸ್ವಲ್ಪ ಯೋಚನೆ ಮಾಡಬೇಕು? ನಾವೇ ಏನೋ ಹಕೀಕತ್ತು ನಡೆಸ್ತಿದೀವಿ ಅಂತ ತಾನೆ?'' ಎಂದು ಹುಚ್ಚೇಗೌಡರಿಗೆ ಕೊಂಚ ಸಮಾಧಾನ ವಾದರೂ ನೆರೆದಿದ್ದ ವ್ಯಾಪಾರಿಗಳ ಸಿಟ್ಟು ಶಮನ ಮಾಡಲು ರೇಗಾಡಿದರು.

ಹುಚ್ಚೇಗೌಡರು ಮೂಟೆ ತೂಕ ಮಾಡಿಸಿ,''ಐವತ್ಮೂರು ಕೇಜಿ. ಅದರಾಗೆ ಮೂಟೆ ತೂಕ ಅಂತ ಅರ್ಧ ಕೇಜಿ ಕಳದ್ರೆ ಐವತ್ತೆರಡೂವರೆ ಕೇಜಿ. ಅಂದರೆ ಐವತ್ತೆರಡು ಸಾವಿರದ ನೂರು ರೂಪಾಯಿ ಆಯ್ತು. ಅದರಲ್ಲಿ ಮಂಡಿ ಕಮಿಷನ್ನು ಕೆಜಿಗೆ ನಾಲ್ಕು ರೂಪಾಯ ಹಂಗೆ ಇನ್ನೂರ ಹತ್ರೂಪಾಯಿ ಇಲ್ಲಿಟ್ಟು ಆಮೇಲೆ ಮಾಲು ತಗೊಂಡು ಹೋಗಿ. ಏನ್ರಿ ಸುರೇಶ? ನಿಮ್ಮದು ಒಪ್ಪಿಗೆ ಉಂಟ? ಮಾಲು ತಂದೋರನ್ನ ಈ ರೇಟು ಆಗಬಹುದ ಅಂತ ಒಂದು ಮಾತೂ ಕೇಳದೆ ವ್ಯವಹಾರ ಮಾಡ್ತಿದೀವಲ್ಲಪ್ಪ!'' ಎಂದು ಜೋಕ್ ಮಾಡಿ ಸುರೇಶನ ಕಡೆಗೆ ನೋಡಿದರು.

ಇನ್ನೇನು ಹರಾಜು ಬರಖಾಸ್ತು ಆದ ಹಂಗೇ ಎಂದು ನಿರ್ಧರಿಸಿ ಅಲ್ಲಿದ್ದ ವ್ಯಾಪಾರಿಗಳಲ್ಲಿ ಹಲವರು ಹೊರಡಲು ರೆಡಿಯಾಗುತ್ತಿದ್ದರು. ಅಷ್ಟರಲ್ಲಿ ''ತೋಳೂರ್ ಮಂಡಿಯಲ್ಲಿ ಹರಾಜು ಶುರುವಾಗುತ್ತೆ'' ಎಂದು ಯಾವನೋ ಬಂದು ವರ್ತಮಾನ ಕೊಟ್ಟ. ಲೋಡಿಗೆ ಒರಗಿಕೊಂಡು ಕುಳಿತಿದ್ದ ಒಂದಷ್ಟು ಜನ ವ್ಯಾಪಾರಿಗಳು ಅವನ ಮಾತು ಕೇಳಿ ಲಗುಬಗೆಯಿಂದ ಎದ್ದರು.

ಗೌರಿ ಸುರೇಶನ ಕಡೆಗೆ ತಿರುಗಿ ಪಿಸುದನಿಯಲ್ಲಿ ರೇಗುತ್ತಾ ಇದ್ದಳು. "ತೂಕ ಸರಿಯಾಗಿ ನೋಡಿದಿರೇನ್ರಿ ಅಂದರೆ 'ಹ್ಞೂ ಹ್ಞೂ' ಅಂತ ಗೋಣು ಅಲ್ಲಾಡಿಸಿದಿರಿ? ನಿಮ್ಮ ಲೆಕ್ಕ ಪ್ರಕಾರ ಆದರೆ ಎರಡೂವರೆ ಕೇಜಿ ಪಂಗನಾಮ ಆಗಿತ್ತಲ್ಲ!" ಎಂದು ಸಿಡುಕಿದಳು.

ಅವಳ ಆಕ್ಷೇಪಣೆಗೆ ಸಮರ್ಪಕ ಉತ್ತರ ಹೊಳೆಯದೆ "ಅಷ್ಟೇ ತಾನೆ" ಎಂದ ಸುರೇಶ. "ಏನು ಅಷ್ಟೇ ತಾನೆ! ಎರಡೂವರೆ ಸಾವ್ರ" ಎಂದು ಮತ್ತೆ ಗೌರಿ ಅವನ ಕಡೆಗೆ ತಿರುಗಿ ಗುರ್ರೆಂದಳು. ಇವರಿಬ್ಬರೂ ಪಿಸುಮಾತಿನಲ್ಲಿ ಕೆಸ್ ಪುಸ್ ಎಂದು ಮಾತಾಡಿಕೊಳ್ಳುತ್ತಿರುವುದನ್ನು ನೋಡಿ ರೇಟು ಇವರಿಬ್ಬರಿಗೂ ಒಪ್ಪಿಗೆಯಾಗಲಿಲ್ಲವೆಂದೇ ತಿಳಿದ ಕುನ್ನಿ ಇವರ ಹತ್ತಿರ ಬಂದು ಮೆಲ್ಲಗೆ "ಈ ರೇಟಿಗೆ ಒಪ್ಪಿ. ಮತ್ತೆ ಅಲ್ಲಿ ಚೆಕ್ ಇಸ್ಕೊಳೋಕೆ ಬಂದಾಗ ಹೆಚ್ಚು ಕಮ್ಮಿ ಮಾಡ್ಕೊಳೋಣ. ಇಲ್ಲಿ ನಾನು ರೇಟು ಕೂಗಿದರೆ ಜನ ಮೈಮೇಲೆ ಬೀಳ್ತಾರೆ" ಎಂದು ಗುಟ್ಟಾಗಿ ಹೇಳಿದ.

ದೇವಪುರದ ವಹಿವಾಟಿನ ಕುಯುಕ್ತಿ ಕುತಂತ್ರ ಅಧ್ವಾನಗಳ ಪರಿಚಯ ಸಾಕಷ್ಟು ಇದ್ದ ಸುರೇಶನಿಗಾಗಲಿ ಗೌರಿಗಾಗಲಿ ಕುನ್ನಿ ಮಾತಿನಿಂದ ಅಚ್ಚರಿಯೇನೂ ಆಗಲಿಲ್ಲ. ಯಾರು ಏನಾದರೂ ಮಾಡಿಕೊಳ್ಳಲಿ ನಮಗೆ ಒಳ್ಳೆ ರೇಟು ಸಿಕ್ಕರೆ ಸಾಕೆಂದುಕೊಂಡು ತಲೆಯಲ್ಲಾಡಿಸಿದರು.

ದೇವಪುರದ ಹರಾಜಿನಲ್ಲಿ ಬಿಕರಿ ಮಾಡಿದರೆ ಮಾಲು ತಗೊಂಡು ಹೋಗುವುದಕ್ಕೂ ಹಣ ಪಾವತಿ ಮಾಡುವುದಕ್ಕೂ ಮಂಡಿಯವರು ವ್ಯಾಪಾರಿಗಳಿಗೆ ಹದಿನೈಕು ದಿನ ಟೈಮ್ ಕೊಡುತ್ತಿದ್ದರು. ಆದರೆ ಏಲಕ್ಕಿ ಹಾಕಿದವರಿಗೆ ಮಾತ್ರ ವ್ಯಾಪಾರಿಗಳ ಪರವಾಗಿ ಮಂಡಿ ಸಾಹುಯಕಾರರೇ ಚೆಕ್ ಕೊಟ್ಟುಬಿಡುತ್ತಿದ್ದರು. ಕುನ್ನಿ ವ್ಯವಹಾರದಲ್ಲಿ ಮಾತ್ರ ಅವನು ಫೋರ್‌ಟ್ವೆಂಟಿ ಎನ್ನುವುದು ಗೊತ್ತಿದ್ದರಿಂದಲೂ, ಜೊತೆಗೆ ಅವನೇ ಕೂಡಲೆ ಚೆಕ್ ಕೊಡಿಸುತ್ತೇನೆಂದು ಹೇಳಿದ್ದರಿಂದಲೂ ಆ ಜವಾಬ್ದಾರಿಗಳನ್ನೆಲ್ಲಾ ಸುರೇಶನಿಗೇ ಕಟ್ಟಿ, ಮಂಡಿ ಕಮಿಷನ್ ಪಾವತಿ ಮಾಡಿ ಮೂಟೆ ಒಯ್ಯಿರೆಂದು ಹೇಳಿ, ಹುಚ್ಚೇಗೌಡರು ಸುಮ್ಮನಾದರು.



# ಮನ್ಮಥ ಬೀಡಾ ಸ್ಟಾಲ್ - ೧೪



"ಕೆ.ಜಿಗೆ ಸಾವಿರ ಕೂಗಿ ಕರ್ಕೊಂಡು ಬಂದಿದೀನಿ ಅಂತ ಹೇಳೋದು ಹೇಳ್ಬಿಡ್ತೀನಿ. ಆದರೆ ನೀವು ಮಾತ್ರ ಸ್ವಲ್ಪ ಟೈಟಾಗಿರಿ ಆಯ್ತ! ಎಷ್ಟಾದ್ರು ಪರ್ವಾಗಿಲ್ಲ, ಅವೆರಡು ಮೂಟೆ ಯಾಲಕ್ಕಿ ಬೇಕೇ ಬೇಕು ಅಂತ ಹೇಳಿತ್ತು ಪಾರ್ಟಿ. ಏನ್ಮಾಡ್ತೀರಾ! ಹರಾಜಲ್ಲಿ ಹತ್ರೂಪಾಯ ಹೆಚ್ಗೆ ಕೂಗಿದ್ರೆ ಹೊಡ್ಕೋಕೆ ಬರ್ತಾರೆ ವ್ಯಾಪಾರಿಗಳು! ನಮ್ಗ್ ಏನಿಲ್ಲ, ನಿಮ್ಗೆ ನಾಲಕ್ಕಾಸು ಹೆಚ್ಗೆ ಸಿಕ್ರೆ ಅಷ್ಟೆ ಸಂತೋಷ. ನಮ್ಮ ಕಮಿಷನ್ನು ಪಾರ್ಟಿಗಳೇ ಕೊಡ್ತಾರಲ್ಲ." ಎಂದು ಫೋರ್‌ಟ್ವೆಂಟಿ ಕುನ್ನಿ ಸುರೇಶನ ಭಾರೀ ಆಪ್ತನಂತೆ ಗುಟ್ಟಾಗಿ ಹೇಳಿದ.

ದೇವಪುರದಲ್ಲಿ ಏಲಕ್ಕಿ ಮಾರಿಸಿಕೊಡಲು ಹೇಗೆ ದಳ್ಳಾಳಿಗಳಿದ್ದಾರೋ ಹಾಗೇ ಕೊಂಡುಕೊಡಲೂ ದಳ್ಳಾಳಿಗಳಿದ್ದಾರೆ. ಎಷ್ಟೋ ಜನ ದೊಡ್ಡ ದೊಡ್ಡ ವ್ಯಾಪಾರಿಗಳೇ ದೂರ ದೂರದ ಊರುಗಳಿಂದ ಫೋನ್ ಮುಖಾಂತರ ಮಾತಾಡಿ ಈ ದಳ್ಳಾಳಿಗಳ ಕೈಲಿ ಏಲಕ್ಕಿ ಕೊಳ್ಳಲು ಹೇಳುತ್ತಾರೆ. ಆದ್ದರಿಂದ ಕುನ್ನಿ ಬಂದು ಕೂಗಿದ್ದೂ. ಆಮೇಲೆ ಸುರೇಶನನ್ನು ಕರೆದುಕೊಂಡು ದುಡ್ಡುಕೊಡಿಸಲು ಹೊರಟಿದ್ದೂ ಎಲ್ಲರಿಗೂ ಮಾಮೂಲಿ ವ್ಯವಹಾರವಾಗಿಯೇ ಕಂಡಿತು. ಆದರೆ ವ್ಯಾಪಾರದಲ್ಲಿ ದಗಲಬಾಜಿ ಹೆಚ್ಚಾಗುತ್ತ ಈಗ ಅವೆಲ್ಲ ಕಡಮೆಯಾಗಿದೆ. ಅದೂ ಕುನ್ನಿಯಂಥವನನ್ನು ಮಧ್ಯವರ್ತಿಯನ್ನಾಗಿ

ನಿಯಮಿಸಿಕೊಂಡವನು ಯಾವನೋ ತಲೆಮಾಸಿದ ಬಕ್ರಾ ಇರಬೇಕು ಎಂದು ಹುಚ್ಚೇಗೌಡರು ಊಹಿಸಿದರು. ಏನಾದರಾಗಲಿ ಮಂಡಿ ಕಮಿಷನ್ ಕೊಟ್ಟು ಮಾಲು ಒಯ್ಯುವಹಾಗಿದ್ದರೆ ನಮಗೇನು ಎಂದುಕೊಂಡರು.

ದಾರಿಯಲ್ಲಿ ಕುನ್ನಿಯ ಗುಪ್ತಸಮಾಲೋಚನೆ ಕೇಳಿದ ಸುರೇಶನಿಗೂ ಅದು ಅಸಹಜವಾಗಿ ಕಾಣಲಿಲ್ಲ. ಈ ಮಧ್ಯವರ್ತಿಗಳ ದಳ್ಳಾಳಿಗಳ ನಡೆನುಡಿಗಳೇ ಹೀಗೆ. ವ್ಯಾಪಾರಿಗಳು ದೂರ ಇದ್ದಾಗ ಬೆಳೆಗಾರನ ಹಿತೈಷಿಗಳಂತೆ ನಟಿಸುತ್ತಾ ವ್ಯಾಪಾರಿಯ ವಿರುದ್ಧ ಮಸಲತ್ತು ಮಾಡಲು ಹೇಳಿಕೊಡುವುದು. ಬೆಳೆಗಾರ ಅತ್ತ ತಿರುಗಿದೊಡನೆ ವ್ಯಾಪಾರಿಗಳಿಗೆ ಬೆಳೆಗಾರರಿಗೆ ಹೇಗೆ ಟೋಪಿ ಹಾಕಬೇಕೆಂದು ಹೇಳಿಕೊಡುವುದು, ಇದು ಅವರೆಲ್ಲರ ನಡೆನುಡಿಯಲ್ಲಿ ಹಾಸುಹೊಕ್ಕಾಗಿತ್ತು. ವ್ಯಾಪಾರ ಧರ್ಮ ಎಂದರೆ ಇದೇ ಎಂದು ನಿಸ್ಸಂಶಯವಾಗಿ ನಂಬಿ ತಮ್ಮ ನಡೆನುಡಿಗಳಲ್ಲಿ ನಿರ್ಯೋಚನೆಯಿಂದ ಇದನ್ನು ಪಾಲಿಸುತ್ತಿದ್ದರು. ಆದ್ದರಿಂದ ಜನರ ಗುಂಪಿನಿಂದ ದೂರಾದೊಡನೆ ಕುನ್ನಿ ಅವನಿಗೆ ಏಲಕ್ಕಿ ಕೊಳ್ಳಲು ಹೇಳಿದ ಪಾರ್ಟಿ ಹತ್ತಿರ ಹೇಗೆ ಹೆಚ್ಚು ದುಡ್ಡು ಕೀಳಬೇಕೆಂದು ಚುಚ್ಚಿ ಕೊಡುತ್ತಾ ಮೀರ್‌ಸಾದಕ್ ಕೆಲಸ ಶುರುಮಾಡಿದಾಗ ಸುರೇಶ ಅದನ್ನು ವಿಶಿಷ್ಟವಾಗಿ ಗಮನಕ್ಕೂ ಸಹ ತಗೊಳ್ಳದೆ ತಲೆಯಲ್ಲಾಡಿಸುತ್ತ ಅವನೊಡನೆ ಸರಸರ ಮುಂದುವರಿದ. ಕುನ್ನಿ ಸುರೇಶನಿಗೆ ಹೆಚ್ಚು ಪರಿಚಯ ಇರಲಿಲ್ಲ. ದೇವಪುರದ ಸ್ಥಳೀಯರಿಗೆ ಕುನ್ನಿಯ ಫೋರ್‌ಟ್ವೆಂಟಿ ಖ್ಯಾತಿ ಗೊತ್ತಿದ್ದಂತೆ ಸುರೇಶನಿಗೂ ಗೊತ್ತಿದ್ದರೆ ಕೊಂಚ ಜಾಗರೂಕತೆ ವಹಿಸುತ್ತಿದ್ದನೋ ಏನೋ! ಆದರೂ ಮಂಡಿಯಲ್ಲಿ ಹುಚ್ಚೇಗೌಡರು ಕುನ್ನಿಗೆ ಬಯ್ದ ಧೋರಣೆಯಿಂದ, ಮತ್ತು ಕುನ್ನಿ ಅಂಗಲಾಚಿಕೊಂಡು ಆಡಿದ ಮಾತುಗಳಿಂದ ಅವನೇನೂ ಅಂಥ ಗೌರವ ಮರ್ಯಾದೆ ಕೊಡಬೇಕಾದ ಕುಳವಲ್ಲವೆನ್ನುವುದು ಮಾತ್ರ ಅಸ್ಪಷ್ಟವಾಗಿ ಗೊತ್ತಾಗಿತ್ತು.

''ನೋಡ್ರಿ ಕುನ್ನಿ! ನಿಮ್ಮ ಪಾರ್ಟಿ ಹೊರಗಡೆ ಬ್ಯಾಂಕ್ ಚೆಕ್ ಕೊಟ್ಟರೆ ನಾನು ತಗೊಳ್ಳೋದಿಲ್ಲ. ಅದು ಮಾತ್ರ ಈಗಲೆ ಹೇಳಿದೇನೆ. ಏನಿದ್ರೂ ಲೋಕಲ್ ಬ್ಯಾಂಕ್ ಚೆಕ್ಕು. ಅದಾಗದಿದ್ರೆ ಕ್ಯಾಷು.''

''ಏನ್ ಸಾರ್ ಹಿಂಗೆ ಮಾತಾಡ್ತೀರ! ನಾಳೆ ನಿಮ್ಮ ಮುಖ ನೋಡಬೇಕಾಗಿರೋನು ನಾನು. ಪಾರ್ಟಿ ಮುಖ ಪರಿಚಯ ಆಗಿ ನನಗೆ ಇನ್ನೂ ಅರ್ಧಗಂಟೆ ಸೈತ ಆಗಿಲ್ಲ. ಅಂಥದರಲ್ಲಿ ದೇಶಾಂತರದ ಚೆಕ್ ಕೊಟ್ಬಿಟ್ಟು ಅಷ್ಟು ಮಾಲು ತಗೊಂಡು ಹೋಗ್ಬಿಟ್ರೆ, ನಾಳೆ ನೀವು ಕೇಳೋದು ಯಾರಿಗೆ ಹೇಳ್ರಿ? ನನಗೆ ತಾನೆ! ಹರಾಜಿಗೆ ಬರೋದಕ್ಕೆ ಮೊದಲೇ ಇದನ್ನೆಲ್ಲ ಹೇಳ್ಬಿಟ್ಟು ಬಂದಿದೀನಿ. ದೇವರಿಗೆ ಹರಕೆ ಹಾಕ್ಕೊಂಡಿದಾರಲ್ಲಾಂತ ನಾನು ಇದಕ್ಕೆ ಕೈ ಹಾಕಿದ್ದಷ್ಟೆ. ಇವತ್ತು ನಾನು ಕಷ್ಟದಲ್ಲಿ ಇರಬಹುದು. ಆದರೆ ದೇವರು ಮತ್ತೊಬ್ಬರಿಗೆ ಮೋಸ ಅನ್ಯಾಯ ಮಾಡೋ ಬುದ್ಧಿ ಮಾತ್ರ ಈವರ್ಗೂ ಕೊಟ್ಟಿಲ್ಲ ತಿಳ್ಕಳಿ''

"ಹಂಗಾರೆ ನಿಮಗೆ ಇವರು ಗುರುತಿನ ಪಾರ್ಟಿ ಅಲ್ವ.!"

"ಗುರ್ತ ಪರಿಚಯ ಕಟ್ಕೊಂಡೇನ್ಮಾಡ್ತೀರ ಸಾರ್? ಗುರ್ತ ಪರಿಚಯ ಇದ್ದೋರೆ ಅಲ್ಲವ ನನಗೆ ಬಿಸಿನೆಸ್‌ನಲ್ಲಿ ಕುತ್ಗೆ ಕುಯ್ದೋರು. ಅವನತ್ರ ದುಡ್ಡಿದ್ದರೆ, ನಿಮ್ಮತ್ರ ಮಾಲಿದ್ದರೆ ಚೌಕಾಸಿಮಾಡಿ ವ್ಯವಹಾರ ಮುಗಿಸೋದು, ಅಷ್ಟೆ. ಈಗ ಹರಾಜಲ್ಲಿ ಇದ್ರಲ್ಲ ಎಲ್ಲ ಗುರ್ತ ಪರಿಚಯ ಇದ್ದೋರು ತಾನೆ! ಹೆಂಗಾಡಿದರು ನೋಡಿದ್ರಾ! ಕೆ.ಜಿಗೆ ನೂರು ರೂಪಾಯಿ ಹೆಚ್ಗೆ ಕೂಗಿದ್ದಕ್ಕೆ! ವಾಪಾರದಲ್ಲಿ ಮಾತ್ರ ಗುರ್ತ ಪರಿಚಯ ಸ್ನೇಹ ಇವೆಲ್ಲ ಕಟ್ಕೊಂಡು ಹೋದ್ರೆ ನೀವು ಹಾಳಾಗಿ ಹೋಗ್ತೀರಿ"

ಗುರುತು ಪರಿಚಯ ಇಲ್ಲದ ಪಾರ್ಟಿ ಎಂದು ಸುರೇಶ ಗುಮಾನಿ ಮಾಡಿ ವ್ಯಾಪಾರ ಮಾಡಲು ಹಿಂದೆಗೆದಾನೆಂದು ಮುಂಜಾಗ್ರತೆ ಕ್ರಮವಾಗಿ ಗುರುತು ಪರಿಚಯ ಇರುವವರೆಲ್ಲ ಖೇಡಿಗಳೆಂದೂ ದಗಾಖೋರರರೆಂದೂ ಕುನ್ನಿ ನಡುಬೀದಿಯಲ್ಲಿ ಘೋಷಿಸಿದ. ನೀತಿ ನಿಯಮಗಳನ್ನು ನ್ಯಾಯ ಧರ್ಮಗಳನ್ನು ಖೇಡಿಗಳು, ಖದೀಮರು, ಕಪಟಿಗಳು, ದೈವಭಕ್ತರಿಗಿಂತ ಸಮರ್ಥವಾಗಿ ಉಪಯೋಗಿಸುತ್ತಾರೆನ್ನುವುದಕ್ಕೆ ಕುಟ್ಟಿ ಒಳ್ಳೆಯ ಉದಾಹರಣೆಯಾಗಿದ್ದ. ಅವನ ಫೋರ್‌ಟ್ವೆಂಟಿ ವ್ಯವಹಾರಗಳು ಸರಿಯಾಗಿ ಗೊತ್ತಿಲ್ಲದ ಸುರೇಶನಿಗೆ ಅವನ ಮಾತಿನಲ್ಲೂ ಸತ್ಯಾಂಶ ಗೋಚರಿಸಿತು.

ಮೇಲೆ ಮೋಡ ದಟ್ಟವಾಗುತ್ತಿತ್ತು. ಸುರೇಶ ಕುನ್ನಿ ಜೊತೆ ಸರಸರ ಅವನ ಕೈಲಾಸ್ ಬಾರಿನ ಕಡೆಗೆ ಕಾಲು ಹಾಕಿದ. ಕುನ್ನಿ ಹೇಳುವ ಪಾರ್ಟಿ ಯಾವನೋ ಏನೋ! ಲೋಕಲ್ ಚೆಕ್ಕು ಕೊಟ್ಟರೂ ಅದು ಕ್ಯಾಶ್ ಆದ ಹೊರತೂ ನಂಬುವ ಹಾಗಿಲ್ಲ. ಕೈಗೆ ದುಡ್ಡು ಸಿಕ್ಕಮೇಲೇ ಏಲಕ್ಕಿ ಮೂಟೆ ಕೊಡಿ ಎಂದು ಮಂಡಿಗೆ ತಿಳಿಸಬಹುದಲ್ಲವೆ! ಬ್ಯಾಂಕ್ ಟೈಮಾಗುವುದರೊಳಗೇ ವ್ಯವಹಾರ ಮುಗಿಸಬೇಕು. ಗೌರಿ ಬೇರೆ ಷಾಪಿಂಗ್ ಎಂದು ಅಂಗಡಿ ಅಂಗಡಿ ಸುತ್ತಿಸುತ್ತಾಳೆ. ಎಂತಿದ್ದರೂ ಕೆ.ಜಿಗೆ ಸಾವಿರ ರೂಪಾಯಿ ಸಿಕ್ಕಿದ್ದು ನೋಡಿದ್ದಾಳೆ. ತುರಿಯೋ ಮಣೆ; ಬ್ಲೌಸ್ ಪೀಸ್ ಜೊತೆಗೆ ಇನ್ನೊಂದೆರಡು ಐಟಂಗಳನ್ನು ಈಗಾಗಲೇ ಸೇರಿಸಿಕೊಂಡಿರುತ್ತಾಳೆ!........

ಸುರೇಶನೇನೋ ವ್ಯವಹಾರ ಚಟಪಟನೆ ಮುಗಿಸಿ ಜುಗಾರಿ ಕ್ರಾಸ್ ಮೇಲೆ ಹೋಗುವ ಕೊನೆ ಬಸ್ಸನ್ನಾದರೂ ಹಿಡಿಯಬೇಕೆಂದಿದ್ದ. ಆದರೆ ಈ ಕುನ್ನಿ ವ್ಯವಹಾರ ಆ ರೀತಿ ಮುಗಿಯುವ ತರ ಕಾಣಲಿಲ್ಲ. ಐದು ಬೆರಳಿಗೂ ಉಂಗುರ, ಕುತ್ತಿಗೆಯಲ್ಲಿ ಎರಡೆಳೆ ಚಿನ್ನದ ಸರ ಇತ್ಯಾದಿ ಹಾಕಿಕೊಂಡಿದ್ದ ಟೋಪಿಧಾರಿ ವ್ಯಕ್ತಿ ಒಬ್ಬ ಒಂದು ಹೆಂಗಸಿನೊಡನೆ ಕುನ್ನಿಯ ಬಾರ್ ಅಂಡ್ ರೆಸ್ಟೋರೆಂಟಿನಲ್ಲಿ ಕುಳಿತಿದ್ದ. ಜೊತೆಗಿದ್ದಾಕೆ ಆತನ ಹೆಂಡತಿಯೋ ಏನೋ! ಆಕೆಯಂತೂ ನಾಟಕದ ರಾಣಿ ಪಾರ್ಟು ಮಾಡುವವರಂತೆ ಅಡಿಯಿಂದ ಮುಡಿಯವರೆಗೆ ನಮುನಮೂನೆಯ ಚಿನ್ನಾಭರಣಗಳನ್ನು ಧರಿಸಿದ್ದಳು. ಆತನ ಟೋಪಿ ಇತ್ಯಾದಿಗಳನ್ನು ಅವಲೋಕಿಸಿದರೆ ಮತ್ತು ಆ ಹೆಂಗಸಿನ ವೇಷಭೂಷಣಗಳನ್ನು ನೋಡಿದರೆ ಮಾರ್ವಾಡಿಗಳೆಂದು ಊಹಿಸಬಹುದಿತ್ತು. ಸಂಸಾರ ಕರೆದುಕೊಂಡು ಬಂದವ ಈ ಕುನ್ನಿ

ಪಡಖಾನೆಯಲ್ಲಿ ರೂಮು ಮಾಡಿಕೊಂಡು ಇದ್ದಾನೆನ್ನುವುದು ನಂಬಲು ಸಾಧ್ಯವಿರಲಿಲ್ಲ. ಕುನ್ನಿ ಸುರೇಶನನ್ನು ತೋರಿಸಿ "ಇವರ ಏಲಕ್ಕಿಯನ್ನೇ ಬಿಕರಿ ಮಾಡಿರುವುದು" ಎಂದು ಹೇಳಿದ ಕೂಡಲೆ ಟೋಪಿ ಮನುಷ್ಯ ಮರು ಮಾತಾಡದೆ ಎದ್ದು ತನ್ನ ಜೊತೆ ಬರುವಂತೆ ಸಂಜ್ಞೆ ಮಾಡಿ ಹೋಟೆಲಿನಿಂದ ಕೆಳಗೆ ಪೇಟೆ ಬೀದಿ ಕಡೆಗೆ ಹೊರಟ. ಹೆಂಗಸು ಸಹ ತಲೆಗೆ ಮುಸುಗೆಳೆದುಕೊಂಡು ಇವರನ್ನು ಹಿಂಬಾಲಿಸಿದಳು. ಎರಡು ಹೆಜ್ಜೆ ಇವರೊಡನೆ ಬಂದವನು ಮತ್ತೆ ಹಿಂದಿರುಗಿ ಹೋಟೆಲಿನೊಳಗೆ ತಲೆಹಾಕಿ ಕುನ್ನಿ ಜೊತೆ ಏನೋ ಮಾತಾಡಿದ. ಬಹುಶಃ ರೇಟು ಇತ್ಯಾದಿಗಳನ್ನು ಕೇಳಿಕೊಳ್ಳುತ್ತಿದ್ದಾನೆಂದು ಸುರೇಶ ಊಹಿಸಿದ. ಈತನ ಮಾತು ಸುರೇಶನಿಗೆ ಕೇಳದಿದ್ದರೂ ಕುನ್ನಿ "ಹೌದು, ಹೌದು. ಹಳದಿ ಅಮೋಘಾಸ್ ಮೂಟೆ" ಎಂದು ಹೇಳಿದ್ದು ಕೇಳಿಸಿತು.

ಸುರೇಶನಿಗೆ ಕುನ್ನಿ ತಮ್ಮ ಜೊತೆ ಬರದೆ ಹೋಟೆಲಿನಲ್ಲೇ ಉಳಿದಿದ್ದು, ಕುನ್ನಿಯ ಕೊಳಕಾದ ಮೂರನೆ ದರ್ಜೆಯ ಬಾರ್ ಅಂಡ್ ರೆಸ್ಟೋರೆಂಟಿನಲ್ಲಿ ಈ ಹೆಂಗಸಿನೊಡನೆ ಅವನು ಕುಳಿತಿದ್ದು, ಇವೆಲ್ಲ ಏನೋ ವಿಚಿತ್ರ ಎನ್ನಿಸಿತು. ಎಲ್ಲಕ್ಕಿಂತ "ಹೌದು, ಹಳದಿ ಅಮೋಘಾಸ್ ಮೂಟೆ" ಎಂದು ಕುನ್ನಿ ಹೇಳಿರಬೇಕದರೆ ಈ ಟೋಪಿ ಮಾರ್ವಾಡಿ ಆ ಬಗ್ಗೆ ಏನೋ ಕೇಳಿರಬೇಕಲ್ಲವೆ? ಕೇಳಿದ್ದರೆ ಹರಾಜಿಗೇ ಬಂದಿಲ್ಲದ ಇವನಿಗೆ ಅದು ಗೊತ್ತಾಗಿದ್ದಾದರೂ ಹೇಗೆ? ಕೈಲಾಸ್ ಬಾರಿನಿಂದ ಟೋಪಿ ಮಾರ್ವಾಡಿ ಜೊತೆ ಪೇಟೆ ಕಡೆಗೆ ನಡೆದು ಬರುತ್ತಾ ಸುರೇಶ ಕುತೂಹಲದಿಂದ ಯೋಚಿಸಿದ. ಈ ಮಾರ್ವಾಡಿಗಳೆಲ್ಲ ಜೈನರಲ್ಲವೆ? ಜೈನರು ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊರುತ್ತಾರ? ಸುರೇಶನ ಮನಸ್ಸಿನಲ್ಲಿ ಸುಳಿದ ಒಂದು ಸಣ್ಣ ಸಂಶಯದ ಎಳೆ ಸಹಜವಾದುದನ್ನೆಲ್ಲ ಅಸಹಜವೆನ್ನುವಂತೆ ಪರಿವರ್ತಿಸುವ ಹಾಗೆ ಕಂಡಿತು. ಸುರೇಶ ಮತ್ತೆ ತನ್ನ ಯೋಚನಾ ಲಹರಿಗೆ ವಿರುದ್ಧವಾಗಿ ಯೋಚನೆ ಮಾಡಲಾರಂಭಿಸಿದ. ಕುನ್ನಿಯೇ ಹಳದಿ ಅಮೋಘಾಸ್ ಮೂಟೆಯನ್ನು ಗುರುತಿಸಲು ಸುಲಭವೆಂದು ಯಾಕೆ ಪ್ರಸ್ತಾಪಿಸಿರಬಾರದು! ಜೈನರೂ ಹಿಂದೂಗಳ ದೇವರಿಗೆ ಯಾಕೆ ಹರಕೆ ಹೊತ್ತಿರಬಾರದು? ಸಾಬರ ದೇವರಿಗೆಲ್ಲಾ ಹರಕೆ ಹೊತ್ತು ಎಷ್ಟೋ ಹಿಂದೂಗಳು ದರ್ಗಾಗಳಿಗೆ ಉರೂಸ್‌ಗಳಿಗೆ ಹೋಗುವುದಿಲ್ಲವೆ! ಎಂದೆಲ್ಲ ಯೋಚಿಸಿದ.

ಟೋಪಿ ಮಾರ್ವಾಡಿ ಸುರೇಶನನ್ನು ನೆಟ್ಟಗೆ ಜೀವನ್‌ಲಾಲನ ಜೂಯಲರಿ ಮಾರ್ಟಿಗೆ ಕರೆದುಕೊಂಡು ಹೋದ. ಜೀವನ್‌ಲಾಲನ ಜೊತೆ ಒಳಗೆ ಹೋಗಿ ಏನೇನೋ ಮಾತಾಡಿ ಹೊರಬಂದಮೇಲೆ ಟೋಪಿ ಮಾರ್ವಾಡಿ ಸುರೇಶನಕಡೆ ತಿರುಗಿ "ಇವರ್ದು ಚೆಕ್ ಆಗಬೌದ?" ಎಂದು ಕೇಳಿದ. ಇಡೀ ದೇವಪುರಕ್ಕೇ ಶ್ರೀಮಂತ ಕುಳವೆಂದು ಹೆಸರುವಾಸಿಯಾಗಿರುವ ಜೀವನ್‌ಲಾಲನ ಚೆಕ್ ತೆಗೆದುಕೊಳ್ಳಲು ಯಾವ ತೊಂದರೆಯೂ ಕಾಣಲಿಲ್ಲ ಸುರೇಶನಿಗೆ.

"ಏನು ಕೊಡಬೇಕು?" ಜೀವನ್‌ಲಾಲ್ ಕೇಳಿದ.

"ಹರಾಜಿನಲ್ಲಿ ಕೆ.ಜಿಗೆ ಸಾವಿರ ಕೂಗಿದಾರೆ ಕುನ್ನಿ. ಮತ್ತೆ ಚೆಕ್ ಕೊಡಬೇಕಾದರೆ ಪಾರ್ಟಿ ಹತ್ತಿರ ಹೆಚ್ಚುಕಮ್ಮಿ ಮಾಡೋಣ ಎಂದು ಹೇಳಿದ್ರು" ಎಂದು ಸುರೇಶ ಹೇಳಿದ. ಚೌಕಾಶಿಯಲ್ಲಿ ಸ್ವಲ್ಪ ಟೈಟಾಗಿರಿ ಎಂದು ಕುನ್ನಿ ಸುರೇಶನಿಗೆ ಸೂಚನೆ ಕೊಟ್ಟಿದ್ದರೂ, ಕೆ.ಜಿಗೆ ಸಾವಿರ ರೂಪಾಯಿ ಸಿಕ್ಕಿರಬೇಕಾದರೆ ಮತ್ತೆ ಹೆಚ್ಚಿಗೆ ಹಣವನ್ನು ಯಾವುದರ ಆಧಾರದ ಮೇಲೆ ಕೇಳುವುದೆಂದು ಸುರೇಶನಿಗೆ ಸುತರಾಂ ಹೊಳೆಯಲಿಲ್ಲ. ಗೌರಿಯನ್ನಾದರೂ ಮಂಡಿ ಹತ್ತಿರ ನಿಲ್ಲಿಸದೆ ಕರೆದುಕೊಂಡು ಬಂದಿದ್ದರೆ ಈ ಮಾರ್ವಾಡಿಗಳಿಬ್ಬರಿಗೂ ಸಾಕು ಬೇಕಾಗುವಷ್ಟು ಚೌಕಾಶಿ ಮಾಡಿಸಬಹುದಿತ್ತು ಎಂದು ಮನದಲ್ಲೆ ಅಂದುಕೊಂಡು ಚೌಕಾಶಿ ಮಾಡಲು ಏನಾದರೂ ಕಾರಣಗಳು ಹೊಳೆಯುತ್ತವೆಯೆ ಯೋಚಿಸುತ್ತಾ ನಿಂತ. ಮಾರ್ವಾಡಿಗಳಿಬ್ಬರೇ ಅವರ ಭಾಷೆಯಲ್ಲಿ ಏನನ್ನೋ ಗುನುಗಾಡಿಕೊಂಡು ಸುರೇಶನನ್ನು ಕೇಳದೆ ಏಕಪಕ್ಷೀಯವಾಗಿ ತೀರ್ಮಾನ ಮಾಡಿ ಚೆಕ್ ಬರೆದು ಸುರೇಶನ ಕೈಗೆ ಕೊಟ್ಟರು. ಸುರೇಶ ಚೆಕ್ ಕಡೆಗೆ ದೃಷ್ಟಿ ಹರಿಸಿದಾಗ ಅರವತ್ತು ಸಾವಿರಕ್ಕೆ ಬರೆದಹಾಗೆ ಕಾಣಿಸಿತು.

"ಒಂದು ಕೆಲಸ ಮಾಡಿ. ಈಗಾಗಲೇ ಬ್ಯಾಂಕ್ ಟೈಮ್ ಆಗುತ್ತ ಬಂದಿದೆ. ಇದನ್ನ ಕಮಿಷನ್ ಏಜಂಟರ ಹತ್ತಿರ ಕ್ಯಾಶ್ ಮಾಡಿಸಿಕೊಳ್ಳಿ. ಬ್ಯಾಂಕಿಗೆ ಕೊಟ್ಟರೆ ನಮಗೆ ಲೆಕ್ಕಕ್ಕೆ ತೊಂದರೆ" ಎಂದು ಜೀವನ್‌ಲಾಲ್ ಹೇಳಿದ. ಚೌಕಾಶಿ ಮಾಡಲು ಏನಾದರೂ ಒಂದು ಕಾರಣ ಯೋಚಿಸುತ್ತಿದ್ದ ಸುರೇಶನಿಗೆ ಥಕ್ಕನೆ ಇದೊಂದು ಕಾರಣ ಹೊಳೆಯಿತು.

"ಏಜಂಟರ ಕಮಿಷನ್ನೇ ಸುಮಾರಾಗ್ತದೆ. ಅದನ್ನೂ ಸೇರಿಸಿ ಬಿಡಿ" ಎಂದೆನ್ನುತ್ತ ಚೆಕ್ ಜೀವನ್‌ಲಾಲನ ಕೈಗೆ ಹಿಂದಿರುಗಿಸಿದ. ಮತ್ತೆ ಮಾರ್ವಾಡಿಗಳಿಬ್ಬರೂ ಚೆಕ್ ನೋಡುತ್ತ ಮಾತಾಡಿಕೊಂಡು ಅನಂತರ ಚೆಕ್ಕನ್ನು ಹಾಗೇ ಸುರೇಶನ ಕೈಗೆ ಕೊಡುತ್ತ ಜೀವನ್‌ಲಾಲ್ "ತಗೊಳ್ಳಿ, ಹೆಚ್ಚಿಗೆ ಆಸೆ ಮಾಡಬಾರದು. ಅದನ್ನೆಲ್ಲಾ ಸೇರಿಸಿ ಚೆಕ್ ಬರೆಸಿದಾರಂತೆ. ಮತ್ತೊಂದು ಸಾರಿ ತಂದಾಗ ಅಡ್ಜಸ್ಟ್ ಮಾಡ್ತಾರೆ ಅವರು. ನೀವು ಏನಿದ್ರೂ ಚೆಕ್ ಬರೆಯೋದಕ್ಕೆ ಮೊದಲೇ ನಿಮ್ಮ ರೇಟು ಹೇಳಬೇಕಿತ್ತು. ಅವರು ಒಂದುಸಾರಿ ಚೆಕ್ ಬರೆಸಿದ ಮೇಲೆ ಮತ್ತೆ ಎರಡನೇಸಾರಿ ಬರೆಸೋದಿಲ್ಲ" ಎಂದು ಮನವಿ ಮಾಡಿಕೊಳ್ಳುವ ದನಿಯಲ್ಲಿ ಹೇಳಿದ. ಸುರೇಶ ದುಡ್ಡು ನೋಡಿಲ್ಲದವನೇನಲ್ಲ. ಅಲ್ಲದೆ ಮಾರ್ವಾಡಿ ಅರುವತ್ತು ಸಾವಿರದ ಬದಲು ಆರು ಲಕ್ಷ ಕೊಟ್ಟಿದ್ದರೂ ಅದನ್ನು ಮಟ್ಟ ಹಾಕಲು ಸೂಕ್ತ ಮಾರ್ಗಗಳು ಸುರೇಶನ ಗೌರಿಯ ತಲೆಯೊಳಗೆ ಬೇಕಾದಷ್ಟಿದ್ದುವು. ಕಮಿಷನ್ ಸೇರಿಸಿಕೊಡಿ ಎಂದು ಚೌಕಾಶಿ ಮಾಡುವುದು ಕಾಲ ಹರಣ ಎಂದು ದೃಢವಾಗಿ ಸುರೇಶನಿಗೆ ಅನ್ನಿಸಿತು. ಸುರೇಶ ಆ ಚೆಕ್ಕನ್ನು ಏಜಂಟರ ಹತ್ತಿರವೇ ಕ್ಯಾಶ್ ಮಾಡಿಸುತ್ತಿದ್ದನೋ ಏನೋ! ಏಕೆಂದರೆ ದೇವಪುರದ ಬ್ಯಾಂಕಿನಲ್ಲಿ ಸುರೇಶನ ಡೆವಲಪ್‌ಮೆಂಟ್ ಲೋನು, ಕ್ರಾಪು ಲೋನು ಇವೆಲ್ಲಾ ಇದ್ದುದರಿಂದ ಅಲ್ಲಿ ಕ್ಯಾಶ್ ಮಾಡಿಸಲು ಹೋದರೆ ಅವರ ಹತ್ತಿರ ಇನ್ನು ಈ ಬಗ್ಗೆ ಚರ್ಚೆ ಚೌಕಾಶಿ ನಡೆಸಬೇಕಾಗುತ್ತೆ.

ಏಜಂಟರ ಹತ್ತಿರ ಚೆಕ್ ಕ್ಯಾಶ್ ಮಾಡಿಸುವುದು ಮಾರ್ವಾಡಿಗೆ ತೋರಿಸುವ ರಿಯಾಯ್ತಿಗಿಂತ ಹೆಚ್ಚಾಗಿ ಅವನಿಗೇ ಹಿತವಾಗಿ ಕಂಡಿತು. ಚೆಕ್ಕಿನ ತಾರೀಖು ಸರಿಯಾಗಿದೆಯೆ ಒಮ್ಮೆ ನೋಡಿ ಜೇಬಿಗೆ ಹಾಕಿಕೊಳ್ಳುತ್ತ ಅಲ್ಲಿಂದ ಹೊರಬಿದ್ದ. ಮಾರ್ವಾಡಿ ಮೋಡಿ ಅಕ್ಷರದಲ್ಲಿ ಬರೆದಿದ್ದ ಮೊಬಲಗನ್ನೂ ಸರಿಯಾಗಿ ಓದಿ ನೋಡಲಿಲ್ಲ. ಸಂಖ್ಯೆಗಳಲ್ಲಿ ರೂಪಾಯಿ ನಮೂದಿಸುವಲ್ಲಿ ಅರುವತ್ತು ಸಾವಿರದ ಹಿಂದೆ ಚೆಕ್ಕಿನ ಬಾಕ್ಸ್ ಪ್ರಿಂಟಾಗಿರುವ ಗೀರಿನ ಪಕ್ಕ ಒಂದು ಬರೆದಿರುವುದನ್ನೂ ಗಮನಿಸಲಿಲ್ಲ. ಮಾರ್ವಾಡಿ ಐವತ್ತೆರಡೂವರೆ ಕೆ.ಜಿಗೆ ಒಟ್ಟು ಅರುವತ್ತು ಸಾವಿರ ಕೊಟ್ಟರೆ ಅಲ್ಲಿಗೆ ಕೇಜಿಗೆ ಎಷ್ಟಾಯ್ತು? ಎಂದು ಲೆಕ್ಕ ಹಾಕುತ್ತ ಜೀವನ್‌ಲಾಲನ ಜುಯಲರಿಮಾರ್ಟಿನ ಮೆಟ್ಟಲಿಳಿದ.

ಅವನು ಚೆಕ್ಕನ್ನು ಸರಿಯಾಗಿ ನೋಡಿದ್ದರೆ ಯೋಚಿಸಬೇಕಾಗಿದ್ದು ನಿಜವಾಗಿಯೂ ಒಂದು ಲಕ್ಷ ಅರುವತ್ತು ಸಾವಿರಕ್ಕೆ! ಅಥವಾ ತನಗೇ ಅರಿವಿಲ್ಲದಂತೆ ತಾನು ಕಾಲಿಟ್ಟಿದ್ದ ಜಟಿಲ ರಹಸ್ಯ ಒಂದರ ಬಗ್ಗೆ ಎನ್ನುವುದು ಅರಿವಾಗುತ್ತಿತ್ತು.

* * * *

"ಮನ್ಮಥ ಬೀಡಾ ಸ್ಟಾಲ್" ಪ್ರೊಪ್ರೈಟರ್ ಶೇಷಪ್ಪ ಸೆಟ್ಟಿ ಉರುಫ್ ಶೇಷಪ್ಪನೇ ದೇವಪುರದಲ್ಲಿ ಚೆಕ್ಕುಗಳಿಗೆಲ್ಲಾ ಕಮಿಷನ್ ಏಜಂಟ್. ಮಂಗಳೂರು ಕಡೆಯ ಸೆಟ್ಟರ ಜಾತಿಗೆ ಸೇರಿದ ಶೇಷಪ್ಪ ಕಾಮತ್ ಹೋಟೆಲಿನ ಎದುರು ಬೀಡಾ ಬೀಡಿ ಸಿಗರೇಟುಗಳ ಪುಟ್ಟ ಅಂಗಡಿ ಇಟ್ಟುಕೊಂಡು ಎಷ್ಟೋ ದಿನಗಳಿಂದ ಅಲ್ಲಿ ವ್ಯಾಪಾರ ನಡೆಸುತ್ತಿದ್ದ. ಏಲಕ್ಕಿ ಮಂಡಿಯಲ್ಲಿ ವ್ಯಾಪಾರಿಗಳು ಮತ್ತು ಮಂಡಿ ಸಾಹುಕಾರರು, ದಳ್ಳಾಳಿಗಳು ಬೆಳೆಗಾರರಿಗೆ ಕೊಡುತ್ತಿದ್ದ ಯಾವ ಚೆಕ್ಕೇ ಆಗಲಿ, ಯಾವ ಬೆಳೆಗಾರ ಅದನ್ನು ಎಷ್ಟು ಹೊತ್ತಿಗೆ ಬೇಕಾದರೂ ಒಯ್ದು ಅವನ ಅಂಗಡಿ ಕದ ತಟ್ಟಲಿ, ಶೇಷಪ್ಪ ಚೆಕ್ ತೆಗೆದುಕೊಂಡು ದುಡ್ಡು ಕೊಡುತ್ತಿದ್ದ. ಅವನು ಚೆಕ್ಕಿಗೆ ರೂಪಾಯಿಗೆ ಇಂತಿಷ್ಟೆಂದು ಕಮಿಷನ್ ಮುರಿದುಕೊಳ್ಳುತ್ತಿದ್ದುದರಿಂದ ಅವನನ್ನು ಕಮಿಷನ್ ಏಜಂಟರೆಂದೂ ಕರೆಯುತ್ತಿದ್ದರು. ಶೇಷಪ್ಪನ ಮೇಲೆ ಅನೇಕ ತರದ ದೂರು ಆರೋಪಗಳಿದ್ದರೂ ಏಲಕ್ಕಿ ಬೆಳೆಗಾರರಿಗೆ, ಅದರಲ್ಲೂ ಸಣ್ಣಪುಟ್ಟ ಬೆಳೆಗಾರರಿಗೆ ಚೆಕ್ಕಿಗೆ ದುಡ್ಡು ಕೊಡುತ್ತಿದ್ದುದರಿಂದ ಬಹಳ ಪ್ರಿಯ ವ್ಯಕ್ತಿಯಾಗಿದ್ದ. ಅವನು ತನ್ನ ಕೆಲಸಕ್ಕೆ ಪ್ರತಿಫಲವಾಗಿ ಸಾಕಷ್ಟು ಕಮಿಷನ್ ಮುರಿದುಕೊಂಡರೂ ಬ್ಯಾಂಕುಗಳ ಅಧಿಕಾರಶಾಹಿಯ ರೇಜಿಗೆಗಳ ದೆಸೆಯಿಂದ ಹೆದರಿದ ರೈತರು ನೆಟ್ಟಗೆ ಶೇಷಪ್ಪನ 'ಮನ್ಮಥ ಬೀಡಾ ಸ್ಟಾಲಿ'ಗೆ ಹೋಗಿ ಕಮಿಷನ್ ಕೊಟ್ಟು ಹಣ ತೆಗೆದುಕೊಂಡು ಹೋಗುತ್ತಿದ್ದರು. ಬ್ಯಾಂಕಿಗೆ ಹೋದ ಸಣ್ಣ ಪುಟ್ಟವರಿಗೂ ಅಧಿಕಾರಿಗಳು ಅಕೌಂಟು ಓಪನ್ ಮಾಡೆಂದು ಪೀಡಿಸುವುದೂ, ಚೆಕ್ ಕಲೆಕ್ಷನ್ನಿಗೆ ಹೋಗಿದೆ ಎಂದು ಸತಾಯಿಸುವುದೂ, ಹಳೆಯ ಹಂದಿಸಾಲ, ಎಮ್ಮೆಸಾಲ, ಕೋಳಿಸಾಲಗಳಿಗೆ ದುಡ್ಡು ಮುರಿದುಕೊಳ್ಳುವುದೂ ಮಾಡುತ್ತಿದ್ದರು. ಏಜಂಟ್ ಶೇಷಪ್ಪನ ಹತ್ತಿರವಾದರೋ ಇದ್ಯಾವ ತೊಂದರೆಯೂ ಇರಲಿಲ್ಲ.

ಶೇಷಪ್ಪನ ಅದೃಷ್ಟ ಖುಲಾಯಿಸಿದ್ದು ಇದರಿಂದಲ್ಲ. ಮಂಡಿ ಮರ್ಚೆಂಟುಗಳೆಲ್ಲ ಲೆಕ್ಕ ಕೊಡದ ಕಾಳಧನ ಕೂಡಿಡಲಾರಂಭಿಸಿದ ಮೇಲೆ ವರಮಾನ ತೆರಿಗೆ ಅಧಿಕಾರಿಗಳು, ಮಾರಾಟತೆರಿಗೆ ಅಧಿಕಾರಿಗಳು ಅವರ ಮಂಡಿಗಳ ಮೇಲೆಲ್ಲಾ ಧಾಳಿಮಾಡಿ ಕೊನೆಗೆ ಕಾಳಧನವನ್ನು ತಡೆಯುವ ಕ್ರಮವಾಗಿ ಮಂಡಿ ವಹಿವಾಟು ಏನಿದ್ದರೂ ಚೆಕ್ಕುಗಳಲ್ಲೇ ನಡೆಸಬೇಕೆಂದು ತಾಕೀತು ಮಾಡಿ ಕಾನೂನು ತಂದರು. ಇದಾದಮೇಲೆ ಶೇಷಪ್ಪನಿಗೆ ದೆಸೆ ಕುಲಾಯಿಸಿತು. ವ್ಯಾಪಾರಿಗಳು ಚೆಕ್ಕಿನಲ್ಲೇನೋ ವ್ಯವಹಾರ ಮಾಡುತ್ತಿದ್ದರು. ಆದರೆ ಆ ಚೆಕ್ ಮಾತ್ರ ಬ್ಯಾಂಕಿಗೆ ಹೋಗಿ ದಾಖಲಾಗದಹಾಗೆ ನೋಡಿಕೊಳ್ಳುತ್ತಿದ್ದರು. ಎಲ್ಲರೂ ಬೇಕೆಂದೆ ಬ್ಯಾಂಕ್ ಅವಧಿ ಮುಗಿದಮೇಲೇ ಹರಾಜಿಗೆ ಏಲಕ್ಕಿ ತಂದ ಬೆಳೆಗಾರರಿಗೆ ಚೆಕ್ ಕೊಡುತ್ತಿದ್ದರು. ದೂರದ ಊರುಗಳಿಗೆ ಹೋಗಬೇಕಾದ ರೈತರು ಕೇವಲ ಚೆಕ್ ಕ್ಯಾಶ್ ಮಾಡಲಿಕ್ಕಾಗಿ ದೇವಪುರದಲ್ಲಿ ಉಳಿದು ಮಾರನೆಯ ದಿನ ದುಡ್ಡು ತಗೊಂಡು ಹೋಗಬೇಕೆಂದಾದರೆ ಅದು ಶೇಷಪ್ಪನ ಕಮಿಷನ್ನಿಗಿಂತ ದುಬಾರಿಯಾಗುತ್ತಿತ್ತು. ಆದ್ದರಿಂದಲೇ ಏಲಕ್ಕಿ ಬೆಳೆಗಾರರು ನಿರ್ಯೋಚನೆಯಿಂದ ಕಮಿಷನ್ ಕೊಟ್ಟು ದುಡ್ಡು ತೆಗೆದುಕೊಂಡು, ಕಮಿಷನ್ ಕೊಡಲು ಕೊಂಚವೂ ಗೊಣಗದೆ ನಗುನಗುತ್ತ ಮನೆಗೆ ಬಸ್ ಹತ್ತುತ್ತಿದ್ದರು. ದುಡ್ಡು ಕೊಟ್ಟ ಶೇಷಪ್ಪ ಅನಂತರ ಅವರವರ ಚೆಕ್ಕನ್ನು ಆಯಾ ಮಂಡಿಗಳಿಗೆ ಹಿಂದಿರುಗಿಸಿ ದುಡ್ಡು ತೆಗೆದುಕೊಳ್ಳುತ್ತಿದ್ದ. ಈ ಸೇವೆಗಾಗಿ ಮಂಡಿ ಸಾಹುಕಾರರ ಬಳಿಯೂ ಅವನು ಕಮಿಷನ್ ತೆಗೆದುಕೊಳ್ಳುತ್ತಿದ್ದನೆಂದು ತೋರುತ್ತದೆ. ಈ ವಹಿವಾಟಿನಲ್ಲಿ ಮಂಡಿಸಾಹುಕಾರರ ಕಳ್ಳಲೆಕ್ಕ ಸುಳ್ಳುಲೆಕ್ಕಗಳ ಪರಿಚಯ ಅವನಿಗಿದ್ದುದರಿಂದ ವ್ಯಾಪಾರಿಗಳು ಅವನನ್ನು ಚೆನ್ನಾಗಿಟ್ಟುಕೊಂಡಿದ್ದುದರಲ್ಲಿ ಅಸಹಜವಾದುದೇನೂ ಇರಲಿಲ್ಲ. ಚೆಕ್ಕಿನಲ್ಲೇ ವ್ಯಾಪಾರವೆಲ್ಲಾ ನಡೆಯುತ್ತಿದ್ದರೂ ಚೆಕ್ಕುಗಳು ಮಾತ್ರ ಸಾಹುಕಾರರು ಮತ್ತು ಶೇಷಪ್ಪನ ನಡುವೆಯೇ ಸುತ್ತಿಸುತ್ತಿ ಪ್ರದಕ್ಷಿಣೆ ಬಂದು ಕಸದ ಬುಟ್ಟಿ ಸೇರುತ್ತಿದ್ದುವು. ಏಜಂಟರ ಹತ್ತಿರ ಕ್ಯಾಶ್ ಮಾಡಿಸಿಕೊಳ್ಳಿ ಎಂದು ಜೀವನ್‌ಲಾಲ್ ಸುರೇಶನಿಗೆ ಮನವಿ ಮಾಡಿಕೊಂಡಿದ್ದು ಈ ಕಾರಣಕ್ಕೇ.

# ಸುರೇಶ್ 'ಫಾರ್ ಸೇಲ್!' - ೧೫



ಸುರೇಶನ ಏಲಕ್ಕಿ ಅರುವತ್ತು ಸಾವಿರಕ್ಕೆ ಮಾರಾಟವಾಯ್ತೆಂದು ತಿಳಿದಕೂಡಲೆ ಶಾಸ್ತ್ರಿ ಸುರೇಶನನ್ನು ಹೆನ್ರಿ ಮತ್ತು ಜಾನಿ ಗ್ಯಾಂಗಿಗೆ ಇಪ್ಪತ್ತು ಸಾವಿರಕ್ಕೆ ಮಾರಿ, ಕುಟ್ಟಿ, ದೌಲತ್‌ರಾಮ್‌ಗೆ ಕೈಯ್ಯಿಂದ ಹತ್ತು ಹತ್ತು ಕೊಟ್ಟು, ಸಧ್ಯಕ್ಕೆ ಅಷ್ಟಕ್ಕೇ ಅಡ್ಜಸ್ಟ್ ಮಾಡಿಕೊಳ್ಳಿರೆಂದು ಹೇಳಿ ಕೈ ತೊಳೆದುಕೊಂಡ. ಈ ವ್ಯವಹಾರದಲ್ಲಿ ಶಾಸ್ತ್ರಿ ಕಮಿಷನ್ ಎಷ್ಟೋ! ಇದರಲ್ಲಿ ಅವನಿಗೆ ಲಾಸ್ ಆಯಿತೋ? ಪ್ರಾಫಿಟ್ ಆಯ್ತೋ? ಕುಟ್ಟಿ ದೌಲತ್‌ರಾಮರಿಗೆ ತಿಳಿಯುವುದಾದರೂ ಹೇಗೆ? ತಾವು ಮಾಡಿದ ಎಡವಟ್ಟು ಕೆಲಸಕ್ಕೆ ಎಲ್ಲಿ ತಲೆದಂಡ ಕೊಡಬೇಕಾದೀತೋ ಎಂದು ಗಾಬರಿಯಲ್ಲಿದ್ದ ಅವರಿಬ್ಬರೂ ಮರುಮಾತಾಡದೆ ದುಡ್ಡು ಇಸುಗೊಂಡರು.

ಮನುಷ್ಯರನ್ನು ಮನುಷ್ಯರು ಮಾರಾಟ ಮಾಡುವ ವ್ಯವಸ್ಥೆ ಇನ್ನೂ ಇದೆಯೆ ಎಂದು ಆಶ್ಚರ್ಯವಾಗಬಹುದು! ಎಲ್ಲೋ ಏಲಕ್ಕಿ ಮಾರಾಟ ಮಾಡಿ ದುಡ್ಡು ಎಣಿಸಿಕೊಳ್ಳಲು ಓಡಾಡುತ್ತಿರುವ ಸುರೇಶನನ್ನು ಇನ್ನೆಲ್ಲೋ ಶಾಸ್ತ್ರಿ ಜಾನಿಗೆ ಮಾರುವುದಾದರೂ ಹೇಗೆ?

ದೇವಪುರ ಒಂದು ಸಂಪೂರ್ಣ ತಲೆಕೆಳಗಾದ ತ್ರಿಶಂಕು ಪ್ರಪಂಚ. ಅಲ್ಲಿದ್ದಷ್ಟು ನ್ಯಾಯ, ನೀತಿ, ಸತ್ಯ, ಶಿಸ್ತು, ಸಮಯಪ್ರಜ್ಞೆ, ನಿಯಮನಿಷ್ಠೆ ಬೇರೆಲ್ಲೂ ಇರಲಿಲ್ಲ! ಆದರೆ ಅದೆಲ್ಲ ಖದೀಮರ ಕಾಳಪ್ರಪಂಚದಲ್ಲಿ. ಬೆಳಗೆದ್ದರೆ ಮೋಸ, ದಗ, ವಂಚನೆ, ಲಂಚ ಇತ್ಯಾದಿಗಳು ಸರ್ವವ್ಯಾಪಿಯಾಗಿರುವುದು ದೇವಪುರದ ಸಾಮಾಜಿಕ ಜೀವನದಲ್ಲಿ

ಕಾಣಬಹುದಿತ್ತು. ಆದರೆ ಅದಕ್ಕೆ ತದ್ವಿರುದ್ಧವಾಗಿ ಯಾವಯಾವ ಮೌಲ್ಯಗಳು ಸಾಮಾಜಿಕ ಜೀವನದಲ್ಲಿ ಕಳೆದು ಹೋಗಿವೆಯೋ ಅವಷ್ಟೂ ಕಟ್ಟುನಿಟ್ಟಾಗಿ ದೇವಪುರದ ಕಾಳಪ್ರಪಂಚದಲ್ಲಿ ಅನುಸರಿಸಲ್ಪಡುತ್ತಿದ್ದುದನ್ನು ನೋಡಬಹುದು. ಮನುಷ್ಯಪ್ರಜ್ಞೆಯ ಯಾವ ವಿಕೃತ ತರ್ಕ, ಯಾವ ಮನೋವಿಕಲತೆ ದೇವಪುರದ ಸಂಸ್ಕೃತಿಯನ್ನು ಈ ರೀತಿ ತಲೆಕೆಳಗಾಗುವಂತೆ ತಿರುಚಿತ್ತೋ ಅರ್ಥವಾಗುವುದಿಲ್ಲ.

ಉದಾಹರಣೆಗೆ ವ್ಯಾಪಾರಿಗಳು ಕ್ಯಾಶ್ ಆಗದ ಚೆಕ್ಕುಗಳನ್ನು ಕೊಡುವುದು, ಬೇಕೆಂದೇ ತಪ್ಪು ದಿನಾಂಕದ ಚೆಕ್ ಕೊಡುವುದು, ಕೊಟ್ಟ ಚೆಕ್ಕಿಗೆ ಹಣ ತುಂಬಿಸದೆ ತಡ ಮಾಡುವುದು ಇತ್ಯಾದಿಗಳನ್ನೆಲ್ಲ ಯಥೇಚ್ಛವಾಗಿ ಮಾಡುತ್ತಿದ್ದರೂ ಆ ಯಾವ ತಕರಾರುಗಳನ್ನೂ ಕಮಿಷನ್ ಏಜಂಟ್ ಶೇಷಪ್ಪ ಅನುಭವಿಸಿಯೇ ಗೊತ್ತಿಲ್ಲ. ಯಾರ ಚೆಕ್ ಬೇಕಾದರೂ ಆಗಲಿ ಅದು ಎಷ್ಟು ದುಡ್ಡಿನದು ಬೇಕಾದರೂ ಆಗಿರಲಿ, ಶೇಷಪ್ಪನ ಬಾಗಿಲು ಬಡಿದರೆ ಹಣ ಪಾವತಿಯಾಗುತ್ತಿತ್ತು. ಮಟ್ಕಾ ಓಸಿ ರೀತಿಯ ಜುಗಾರಿಗಳಲ್ಲಂತೂ ಬರೀ ಬಾಯಿ ಮಾತಿನ ಮೇಲೇ ಲಕ್ಷಾಂತರ ರೂಪಾಯಿಯ ವ್ಯವಹಾರ ಅಡೆತಡೆಗಳಿಲ್ಲದೆ ಸಲೀಸಾಗಿ ನಡೆಯುವುದನ್ನು ನೋಡಬಹುದಿತ್ತು. ಯಾವ ರಸೀತಿಯೂ ಇರುತ್ತಿರಲಿಲ್ಲ, ಯಾವ ಸ್ಟಾಂಪ್ ಪೇಪರೂ ಇರುತ್ತಿರಲಿಲ್ಲ. ಹೆಚ್ಚೆಂದರೆ ನಂಬರು ಮರೆತು ಹೋಗದಿರಲೆಂದು ಯಾವುದಾದರೂ ಸಿಗರೇಟು ಪ್ಯಾಕಿನ ಮೇಲೆ ಗುರುತು ಹಾಕಿಕೊಟ್ಟಿರುತ್ತಾರಷ್ಟೆ! ಬೆಳಗ್ಗೆ ಅವರು ಅದನ್ನು ತೋರಿಸುವ ಅಗತ್ಯವೂ ಇರಲಿಲ್ಲ. ಅವರ ನಂಬರಿಗೆ ದುಡ್ಡು ಬಂದಿದ್ದರೆ ಕರೆದು ಬಟವಾಡೆ ನಡೆಯುತ್ತಿತ್ತು. ಆಡಿದ ಮಾತಿಗೆ ತಪ್ಪದಿರುವುದು, ಹೇಳಿದ ಟೈಮಿಗೆ ಹೇಳಿದ ಜಾಗಕ್ಕೆ ಕಳ್ಳಮಾಲುಗಳ ಡೆಲಿವರಿ ಕೊಡುವುದು, ಯಾವುದು ಕೇಳುತ್ತೀರಿ! ಒಂದು ಉಚ್ಚ ನಾಗರೀಕತೆಯ ಎಲ್ಲ ಗುಣ ಲಕ್ಷಣಗಳೂ ಅಲ್ಲಿತ್ತು. ಆದರೆ ಎಲ್ಲ ಕಾಳಜಗತ್ತಿನಲ್ಲಿ! ಅದೇ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ, ಇತರೆ ಸರ್ಕಾರಿ ಸ್ಕೀಮುಗಳ ಹಣದಲ್ಲಿ ನೋಡಿದರೆ ಅಧ್ಯಕ್ಷರಿಂದ ಹಿಡಿದು ಕಾರ್ಯದರ್ಶಿ ಹಾಗೂ ಸದಸ್ಯರವರೆಗೆ ಪ್ರತಿಯೊಬ್ಬರೂ ಪ್ರತಿ ಹಂತದಲ್ಲೂ ತಿಂದು ತೇಗಿ ಅವುಗಳ ಬಾಗಿಲು ಮುಚ್ಚಿಸಿದ್ದರು. ಸ್ಟಾಂಪ್ ಪೇಪರಿನ ಮೇಲೆ ದಸ್ಕತ್ ಹಾಕಿ ಬರೆದು ಕೊಟ್ಟ ಅಗ್ರಿಮೆಂಟುಗಳಿಗೇ ಪಂಗನಾಮ ಎಳೆದವರೆಲ್ಲ ಸಿಗರೇಟು ಬೆಂಕಿಪೊಟ್ಟಣದ ಮೇಲೆ ಗೀಚಿದ ಸಂಜ್ಞೆಗಳಿಗೆ ಚಾಚೂ ತಕರಾರೆತ್ತುತ್ತಿರಲಿಲ್ಲ.

ಲಾಟ್ರಿಟಿಕೆಟ್ ಶಾಸ್ತ್ರಿ ಸಹ ಕೆಲವು ದಿನಗಳವರೆಗೆ ಈ ಜೂಜಾಟದ ಧಂದೆ ನಡೆಸಿದರೂ ಅವನು ಊರೂರು ತಿರುಗುತ್ತ ಲಾಟ್ರಿಟಿಕೆಟ್ ಮಾರುತ್ತಿದ್ದುದರಿಂದ ಮಟ್ಕಾ ಓಸಿಗಳನ್ನು ನಡೆಸಲು ತೊಂದರೆಯಾಗಿ ಈಗ ಹತ್ತಾರು ರಾಜ್ಯಗಳ ಲಾಟ್ರಿಟಿಕೆಟ್‌ಗಳನ್ನು ಮಾರುತ್ತ ಅದನ್ನೆ ಜೋರಾಗಿ ನಡೆಸುತ್ತಿದ್ದ. ಅದಕ್ಕಿಂತ ಮುಖ್ಯವಾಗಿ ಸರ್ಕಾರಿ ಲಾಟರಿಜೊತೆಗೆ ಅದರೊಳಗೇ ತನ್ನದೊಂದು ಸ್ವಂತ ಸಬ್‌ಲಾಟರಿಯನ್ನೂ ನಡೆಸುತ್ತಿದ್ದ. ಅದಕ್ಕೆಂದು ಅವನೇನೂ ಸ್ವಂತ ಲಾಟರಿ ಲೈಸನ್ಸನ್ನು ಪಡೆದಿರಲಿಲ್ಲ, ಅಥವಾ ಸ್ವಂತ

ಲಾಟರಿ ಟಿಕೆಟ್‌ಗಳನ್ನೂ ಮುದ್ರಿಸಿರಲಿಲ್ಲ. ಅವನು ಮಾರುವ ಸರ್ಕಾರಿ ಲಾಟರಿ ಟಿಕೆಟ್ಟುಗಳ ನಂಬರುಗಳಿಗೇ ಸ್ವಂತ ಅವನ ಬಳಿ ಬೇರೆಯಾಗಿ ದುಡ್ಡು ಕಟ್ಟುವ ಸೌಲಭ್ಯ ಒದಗಿಸಿದ್ದ. ಸರ್ಕಾರ ಪ್ರಕಟಿಸುವ ಬಹುಮಾನಿತ ಸಂಖ್ಯೆಗಳ ಹಿಂದಿನವಕ್ಕೆ ಮುಂದಿನವಕ್ಕೆ ಇಂತಿಷ್ಟೆಂದು ದುಡ್ಡು ಕಟ್ಟುವ ನೂರಾರುತರದ ಜುಗಾರಿ ಸೌಲಭ್ಯವನ್ನು ಅವನು ಕಲ್ಪಿಸಿದ್ದರಿಂದ ಸರ್ಕಾರಿ ಲಾಟರಿಯನ್ನು ಅವಲಂಬಿಸಿಯೇ ಅವನದೊಂದು ಉಪಲಾಟರಿ ಜಾಲ ವಿಸ್ತೃತವಾಗಿ ಬೆಳೆದಿತ್ತು. ಇದು ಎಲ್ಲರಿಗೂ ಗೊತ್ತಿದ್ದರೂ ಸರ್ಕಾರಿ ಲಾಟರಿಗೆ ಅವನ ಉದ್ಯಮ ತಳಕುಹಾಕಿಕೊಂಡಿದ್ದರಿಂಪ ಯಾರೂ ಅವನಿಗೆ ಏನೂ ಮಾಡುವಹಾಗೆ ಇರಲಿಲ್ಲ.

ಆದರೆ ಶಾಸ್ತ್ರಿ ಜನ ಊಹಿಸಿದ್ದಕ್ಕಿಂತ ಹೆಚ್ಚಿನ ಖದೀಮನೆನ್ನುವುದು ಕಾಳಜಗತ್ತಿನ ಕೆಲವರಿಗೆ ಮಾತ್ರ ಗೊತ್ತಿತ್ತು. ಅವನ ಲಾಟರಿಯಲ್ಲಿ ಯಾರಿಗಾದರೂ ಲಕ್ ಹೊಡೆದು ಬಂಪರ್ ಕೊಡಬೇಕಾಗಿ ಬಂದಾಗ ಗುಟ್ಟಾಗಿ ಅವರನ್ನು ಪಿಕ್‌ಪಾಕೆಟ್ ಜಾನಿಗೆ ಅರ್ಧ ರೇಟಿಗೆ ಮಾರಿಬಿಡುತ್ತಿದ್ದ. ಪಿಕ್ ಪಾಕೆಟ್ಟಿನವರು ದುಡ್ಡಿರುವ ಆದ್ಮಿಗಳನ್ನು ಬೇರೆ ಬೇರೆ ಗ್ಯಾಂಗಿನವರಿಗೆ ಮಾರುವುದೂ ಕೊಳ್ಳುವುದೂ ಭೂಗತ ಜಗತ್ತಿನಲ್ಲಿ ಆಗಿಂದಾಗ್ಗೆ ನಡೆಯುತ್ತದೆ. ಇದಕ್ಕೆ ಕಾರಣ ಅವರ ಕಾಳ ದಂಧೆಗೆ ಪ್ರತಿಯೊಂದು ಗ್ಯಾಂಗುಗಳೂ ಅವರವರ ಕಾರ್ಯ ಕ್ಷೇತ್ರಗಳನ್ನು ಕಟ್ಟುನಿಟ್ಟಾಗಿ ನಿಗದಿ ಮಾಡಿಕೊಂಡು ಪಾಲಿಸುವುದು. ಬೇರೆ ಬೇರೆ ಪೇಟೆಗಳಲ್ಲಿ ಕಾರ್ಯ ನಿರ್ವಹಿಸುವ ಗ್ಯಾಂಗುಗಳು ತಮ್ಮ ಗಡಿ ಬಿಟ್ಟು ಆಚೆಕಡೆ ಕಾರ್ಯ ನಿರ್ವಹಿಸುವಂತಿರಲಿಲ್ಲ. ದಸರಾ, ಕ್ರಿಸಮಸ್, ಜಾತ್ರೆ, ಪರಿಷೆಗಳಲ್ಲಿ ಮಾತ್ರ ಈ ಕಾನೂನಿಗೆ ವಿನಾಯ್ತಿ. ಹಾಗೆಂದೇ ಜಾನಿಗ್ಯಾಂಗು ದರ್ಗಾಕ್ಕೆ ಹೋಗಿ ಪ್ರಾಣಾಪಾಯಕ್ಕೆ ಸಿಕ್ಕಿಕೊಂಡಿದ್ದು.

ಬಸ್ಸಿನಲ್ಲೋ ರೈಲಿನಲ್ಲೋ ಯಾವನದೋ ಜೇಬಿನ ಪರ್ಸನ್ನೋ ಸೂಟ್‌ಕೇಸನ್ನೋ ಲಪಟಾಯಿಸಲು ಹಿಂಬಾಲಿಸಿಕೊಂಡು ಬಂದವರು, ಇವರು ಎಗರಿಸುವ ಮೊದಲೆ ಅವನು ಹಣದೊಡನೆ ಇವರ ಗಡಿ ದಾಟಿಬಿಟ್ಟರೆ, ಅದಕ್ಕೆ ಈ ಕಾಳದಂಧೆಗಳ ಖದೀಮರು ಒಳ್ಳೆ ಏರ್ಪಾಡು ಮಾಡಿಕೊಂಡಿದ್ದಾರೆ. ಹಿಂಬಾಲಿಸಿಕೊಂಡು ಬಂದ ಗ್ಯಾಂಗಿನವರು ಬೇರೆ ಊರಿನ ಗ್ಯಾಂಗಿನವರಿಗೆ ಆ ಆದ್ಮಿಯನ್ನು ಚೌಕಾಶಿಮಾಡಿ ಅರ್ಧ ದುಡ್ಡಿಗೋ ಕಾಲು ದುಡ್ಡಿಗೋ ಪರ್ಸೆಂಟೇಜ್ ಮಾತಾಡಿ ಮಾರಿಬಿಡುತ್ತಾರೆ. ಕೆಲಸ ಮುಗಿದಮೇಲೆ ಇವೆಲ್ಲ ಚಾಚೂ ತಪ್ಪದೆ ಸಂದಾಯವಾಗುತ್ತಿದ್ದುದು ದೇವಪುರದ ಕಾಳಜಗತ್ತಿನ ನಿಯಮನಿಷ್ಠೆಗೆ ಇನ್ನೊಂದು ಉದಾಹರಣೆಯಷ್ಟೆ. ದುಡ್ಡಿದ್ದವನ್ನು ಕಷ್ಟಪಟ್ಟು ಪತ್ತೆ ಮಾಡಿ ಹಿಂಬಾಲಿಸಿಕೊಂಡು ಬಂದವನಿಗೂ ಅವನು ಪಟ್ಟ ಕಷ್ಟಕ್ಕೆ ತಕ್ಕ ಪ್ರತಿಫಲ ದೊರೆಯುವುದರಿಂದ, ಗ್ಯಾಂಗು ಗ್ಯಾಂಗುಗಳ ನಡುವೆ ಹಿಂದೆಲ್ಲ ನಡೆಯುತ್ತಿದ್ದಂಥ ಹೊಡೆದಾಟ ಮಾರಾಮಾರಿಗಳು ಈಗ ನಡೆಯುವುದೇ ಇಲ್ಲ. ಈ ವ್ಯವಹಾರ ತಿಳಿದಿದ್ದ ಶಾಸ್ತ್ರಿ ಪಿಕ್‌ಪಾಕೆಟ್ ಜಾನಿ ಜೊತೆ ಆಗಾಗ ವ್ಯಾಪಾರ ಮಾಡುತ್ತಿದ್ದ. ಇವನ ಲಾಟರಿ ದಂಧೆಯಲ್ಲಿ ಸಾವಿರಗಟ್ಟಲೆ ಬಟವಾಡೆ

ಮಾಡಿ ಏನಾದರೂ ಕೈಕಚ್ಚಿಸಿಕೊಳ್ಳುವ ಸಂದರ್ಭ ಬಂದರೆ ಅಂಥವರನ್ನು ಪಿಕ್‌ಪಾಕೆಟ್ ಜಾನಿಗೆ ಚೌಕಾಶಿ ಮಾಡಿ ಎಷ್ಟಕ್ಕಾಯಿತೋ ಅಷ್ಟಕ್ಕೆ ಮಾರಿ ಸಿಕ್ಕಷ್ಟನ್ನು ಗಿಟ್ಟಿಸಿಕೊಳ್ಳುತ್ತಿದ್ದ. ಇವನಿಗೆ ಟಿಕೆಟ್ಟು ತೋರಿಸಿ ದುಡ್ಡ ತಗೊಂಡು ಹೊರಟವರು ದಾರಿಯಲ್ಲಿ ದುಡ್ಡೋ ಪರ್ಸೋ ನಾಪತ್ತೆಯಾಗಿರುವುದು ನೋಡಿ "ಎಷ್ಟೇ ಆದರೂ ಅನ್ಯಾಯದ ದುಡ್ಡು. ಈಗಿನ ಕಾಲದಲ್ಲಿ ದುಡಿದ ದುಡ್ಡೇ ದಕ್ಕುವುದಿಲ್ಲ. ಇನ್ನು ಲಾಟರಿದುಡ್ಡು ದಕ್ಕುತ್ತ! ಲಾಟರಿ ದುಡ್ಡಿನಲ್ಲಿ ಉದ್ಧಾರ ಆದೋನು ಒಬ್ನಾರ ಇದಾನ!" ಎಂದು ಉದ್ಗರಿಸುತ್ತ, ಹೊಟ್ಟೆ ಉರಿ ತಡಕೊಂಡು ತಮಗಾದ ಮೋಸದಲ್ಲಿ ಯಾವುದೋ ಒಂದು ಆಧ್ಯಾತ್ಮಿಕ ಸಂದೇಶ ಹುಡುಕುತ್ತ ಮನಸ್ಸನ್ನು ಸಂತೈಸುತ್ತಿದ್ದರು. ಈ ವಂಚನೆಯಲ್ಲಿ ಶಾಸ್ತ್ರಿಯ ಕೈವಾಡವಿರಬಹುದೆಂದು ಅವರಿಗೆ ಕಿಂಚಿತ್ತೂ ಅನುಮಾನ ಹುಟ್ಟುತ್ತಿರಲಿಲ್ಲ. ಲಾಟರಿಯ ಶಿಸ್ತು ಪ್ರಾಮಾಣಿಕತೆಗಳನ್ನು ಕಟ್ಟು ನಿಟ್ಟಾಗಿ ಅನುಸರಿಸುತ್ತಿದ್ದ ಶಾಸ್ತ್ರಿಗೆ ಅದು ಬಹು ಮುಖ್ಯವಾಗಿತ್ತು. ಏಕೆಂದರೆ ಇವನ ಲಾಟರಿದಂಧೆಗೆ ಪ್ರಾಮಾಣಿಕತೆ ಬಹು ಮುಖ್ಯವಾದ ಬಂಡವಾಳ. ಇವನು ಫೋರ್‌ಟ್ವೆಂಟಿ ಎಂದು ಜನಗಳಿಗೆ ಕೊಂಚವೇ ಕೊಂಚ ಅನುಮಾನ ಬಂದರೂ, ಲಾಟರಿಯಲ್ಲಿ ಹಣ ಪಾವತಿ ಮಾಡಲು ಕೊಂಚವೇ ಹಿಂದುಮುಂದು ನೋಡಿದರೂ, ಅವನ ಇಡೀ ಲಾಟರಿಸಾಮ್ರಾಜ್ಯ ಹೇಳಹೆಸರಿಲ್ಲದೆ ಹೋಗುತ್ತಿತ್ತು. ಈ ಕಾರಣದಿಂದಲೇ ಶಾಸ್ತ್ರಿ ಲಾಟರಿ ದಂಧೆಯಲ್ಲಿ ಯಾವತ್ತೂ ಧೋಕಾ ವ್ಯವಹಾರ ಮಾಡದೆ ಜಾನಿ ಗ್ಯಾಂಗಿನ ಸಹಾಯದಿಂದ ಎಷ್ಟಾಯ್ತೋ ಅಷ್ಟನ್ನು ಗಿಟ್ಟಿಸುತ್ತಿದ್ದುದು.

ಜಾನಿ ಗ್ಯಾಂಗಿಗೆ ದುಡ್ಡು ಯಾರ ಪರ್ಸಿನಲ್ಲಿದೆ? ಯಾವುದು ಖಾಲಿ ಎಂದು ತಿಳಿಯುವುದು ಅತಿಮುಖ್ಯವಾಗಿತ್ತು. ಆದ್ದರಿಂದಲೇ ಯಾರಬಳಿ ಹಣ ಎಷ್ಟು ಇದೆ ಎಂದು ತಿಳಿಸಿದವನಿಗೆ ಅರ್ಧಕ್ಕರ್ಧ ದುಡ್ಡು ಕೊಟ್ಟು ಕೊಳ್ಳಲು ಸಹ ಅವರು ತಯಾರಿದ್ದುದು. ಮೊದಲೆಲ್ಲ ಇವರು ಹೆಂಗಸರ ಕುತ್ತಿಗೆಯ ಚಿನ್ನ, ಕಿವಿಯ ಆಭರಣಗಳು ಇತ್ಯಾದಿಗಳನ್ನು ನಿರ್ದಾಕ್ಷಿಣ್ಯವಾಗಿ ಕಿವಿ ಮೂಗು ಹರಿದು ಕಿತ್ತುಕೊಂಡು ಓಡುವ ಕೆಲಸ ಮಾಡುತ್ತಿದ್ದರು. ಕೊಲೆ ಖೂನಿಗಳಿಗೆ ಯಾವರೀತಿಯಿಂದಲೂ ಹೇಸದ ಜನವಾದರೂ, ಇವರು ಈಚೆಗೆ ಹೆಂಗಸರ ಕುತ್ತಿಗೆಗೆ ಕೈ ಹಾಕುವುದನ್ನು ವರ್ಜಿಸಿದ್ದು ಧರ್ಮಬುದ್ಧಿಯಿಂದಲ್ಲ. ಫಕೀರ್ ಮಹಮ್ಮದರ ದರ್ಗಾದಲ್ಲಿ ಬುರ್ಖಾ ಹಾಕಿಕೊಂಡು ಈ ಗ್ಯಾಂಗಿನವರು ಹೆಂಗಸರ ಗುಂಪಿನಲ್ಲಿ ಕಳ್ಳತನ ಮಾಡುತ್ತಿರಬೇಕಾದರೆ ಸಿಕ್ಕಿಕೊಂಡರು. ಹೆಚ್ಚೆಂದರೆ ನಾಲ್ಕು ಹೊಡೆದು ಬಿಟ್ಟುಬಿಡಬಹುದು ಅಥವಾ ಪೋಲೀಸಿಗೆ ಕೊಡಬಹುದು ಎಂದು ಇವರು ತಿಳಿದಿದ್ದರು. ಆದರೆ ಹೆಂಗಸರ ಮೈಮೇಲೆ ಕೈ ಹಾಕಿದ್ದಕ್ಕೆ ಇವರ ಗ್ಯಾಂಗಿಗೆ ಯಾವರೀತಿ ಹೊಡೆತಗಳು ಬಿದ್ದುವೆಂದರೆ ಮನುಷ್ಯರು ಇಷ್ಟೊಂದು ನಿಷ್ಕರುಣೆಗಳಾಗಬಹುದೆಂಬುದನ್ನು ಅವರು ಊಹಿಸಿಯೂ ಇರಲಿಲ್ಲ. ಅವರನ್ನೆಲ್ಲಾ ದುರ್ಗಾ ನಡೆಯುವಷ್ಟು ದಿನವೂ ಮರಕ್ಕೆ ಕಟ್ಟಿಹಾಕಿ ಅನ್ನ ನೀರು ಕೊಡದೆ ದರ್ಗಾಕ್ಕೆ ಬಂದವರೆಲ್ಲಾ ಚಚ್ಚಿದ್ದರು. ಹೆಂಗಸರ ಮೈಮೇಲೆ ಕೈ ಹಾಕಿದ ಈ ನೀಚರನ್ನು

ದಂಡಿಸುವುದು ತಮ್ಮ ಭಗವದಾರಾಧನೆಯ ಒಂದು ಭಾಗವೆಂದೇ ಜನ ಭಾವಿಸಿದ್ದರು. ಕೊಲೆ ಖೂನಿ ಮಾಡಿದವರಾದರೂ ಬಚಾವಾಗಬಹುದು. ಹೆಂಗಸರ ಕಿವಿ ಮೂಗುಗಳಿಗೆ ಜಖಂ ಮಾಡುವವರಿಗೆ ಉಳಿಗಾಲವೇ ಇಲ್ಲವನ್ನವಂತೆ ಅವರಿಗೆ ದಂಡನೆಯಾಯ್ತು. ಅಷ್ಟು ದಿನಗಳ ಉಪವಾಸ, ಹೊಡೆತ, ಮೂಳೆ ಮುರಿತಗಳಿಂದ ಸಾಕ್ಷಾತ್ ಸಾವಿನ ಸಮ್ಮುಖದಿಂದಲೇ ಅವರು ಉಳಿದು ಬಂದಿದ್ದರು.

ಶಾಸ್ತ್ರಿ ಸುರೇಶನನ್ನು ಮಾರಾಟ ಮಾಡಲು ಹೋದಾಗ ಶಾಸ್ತ್ರಿ ಹೇಳುವ ಬಡಾ ಆದ್ಮಿ ಶಾಸ್ತ್ರಿ ಹತ್ತಿರ ಬಂಪರ್ ಹೊಡೆದವನೇ ಇರಬೇಕೆಂದು ಜಾನಿ ತಿಳಿದಿದ್ದ. ಆದರೆ ಆ ಆಸಾಮಿ ಲಾಟರಿ ಟಿಕೆಟ್ಟಿನವನಲ್ಲ. ಏಲಕ್ಕಿಗೆ ದುಡ್ಡು ಕಂಡಾಪಟ್ಟೆ ಏರಿದ್ದರಿಂದ ಬಂಪರ್ ಹೊಡೆದಿರುವವನು ಎಂದು ತಿಳಿದೊಡನೆ ಜಾನಿ ಅಷ್ಟೊಂದು ಕುತೂಹಲ ತೋರಿಸಲಿಲ್ಲ. ಅದಕ್ಕೆ ಮುಖ್ಯ ಕಾರಣ ಏಲಕ್ಕಿ ವ್ಯವಹಾರ ಚೆಕ್ ಮುಖಾಂತರ ನಡೆಯುವುದು. ಕೈಯ್ಯಲ್ಲಿ ಕ್ಯಾಶ್ ಇಲ್ಲದ ಪಾರ್ಟಿ ಎಂಥ ಬಡಾ ಆದ್ಮಿಯಾದರೂ ಜಾನಿಗೆ ಮೂರು ಕಾಸಿನ ಪ್ರಯೋಜನವೂ ಇರಲಿಲ್ಲ.

''ಅವನ ಚೆಕ್ ತಗೊಂಡು ನಾವೇನು ಮಾಡೋಣ ಶಾಸ್ತ್ರಿ? ಚೆಕ್ ಬೇಕಾದರೆ ಎಗರಿಸಿಕೊಂಡು ತಂದು ನಿನಗೇ ಕೊಡುತ್ತೇನೆ. ನಮಗೇ ಇಪ್ಪತ್ತು ಸಾವಿರ ಕೊಟ್ಟು ಮಿಕ್ಕಿದ್ದೆಲ್ಲ ನೀನೇ ಇಟ್ಟುಕೋ. ಅವನ ಚೆಕ್ ತಗೊಂಡು ಬ್ಯಾಂಕಿಗೆ ಹೋಗೋದೂ ಒಂದೇ, ನೆಟ್ಟಗೆ ಲಾಕಪ್ಪಿಗೆ ಹೊಗೋದು ಒಂದೇ. ನಿನಗೇನು ಅಷ್ಟೂ ಗೊತ್ತಾಗೋಲ್ಲವ'' ಎಂದು ಜಾನಿ ಜೊತೆ ಇದ್ದ ಹೆನ್ರಿ ಶಾಸ್ತ್ರಿ ಕಡೆಗೆ ಗುರುಗುಟ್ಟಿದ.

''ಮುಚ್ಚಿಕೊಂಡು ಹೇಳಿದಷ್ಟು ಕೇಳ್ರಯ್ಯ. ಚೆಕ್ ತಗೊಂಡೋರೆಲ್ಲ ಹೋಗಿ ಏಜಂಟ್ ಹತ್ತಿರ ಕ್ಯಾಶ್ ತಗೊಂಡು ಹೋಗೋದು ಗೊತ್ತಿಲ್ಲವ. ನಾನೇನು ಇವತ್ತೇ ನಿಮ್ಮತ್ರ ವ್ಯವಹಾರ ಮಾಡ್ತಿದ್ದೀನ?'' ಎಂದ ಶಾಸ್ತ್ರಿ.

''ನೋಡೋ ಅವೆಲ್ಲ ಬ್ಯಾಡ! ಈಗ ನಿಂದು ಕಮಿಷನ್ ನಿನಗೆ ಕೊಡ್ತೀವಿ. ಚೆಕ್ ಏನಾದರೂ ಅವನು ಬ್ಯಾಂಕಿಗೆ ಸಬ್ಮಿಟ್ ಮಾಡಿ ಬಸ್ ಹತ್ತಿದಾ ಅಂದರೆ ನಮ್ಮ ದುಡ್ಡು ಬಡ್ಡಿ ಸಮೇತ ವಾಪಸ್ ಮಾಡಬೇಕು. ಒಪ್ಗೋತೀಯಾ'' ಎಂದು ಕರಾರು ಹಾಕುವವನಂತೆ ಜಾನಿ ಶಾಸ್ತ್ರಿಗೆ ಹೇಳಿದ.

''ಒಂದು ಕೆಲಸಾ ಮಾಡಿ! ನಿಮಗೆ ಈಗ ದುಡ್ಡು ಕೊಡಿ ಅಂತ ನಾನೇನು ಕೇಳಿದನ? ಅವನು ದುಡ್ಡು ಕ್ಯಾಶು ಮಾಡಿಸಿದ್ದು ನೋಡಿಕೊಂಡೇ ನನಗೆ ದುಡ್ಡು ಕೊಡ್ರಿ. ಇಲ್ಲಾಂದರೆ ನಿಮದೆಲ್ಲಾ ಕೆಲಸ ಪೂರೈಸಿಕೊಂಡೇ ನನ್ನ ಕಮಿಷನ್ ಚುಗ್ತಾ ಮಾಡ್ರೋ! ಯಾರು ಬ್ಯಾಡಾಂದೋರು'' ಎಂದ ಶಾಸ್ತ್ರಿ. ಜಾನಿ ಗ್ಯಾಂಗಿನ ಹತ್ತಿರ ಹುಡುಗಾಟ ಅಪಾಯಕರ ಎಂದು ಗೊತ್ತಿದ್ದ ಶಾಸ್ತ್ರಿ ಜಾನಿಗೆ ಒಪ್ಪಂದಕ್ಕೆ ಬರಲು ಬೇಕಾದಷ್ಟು ಸಮಯಾವಕಾಶವನ್ನೇ ಕೊಟ್ಟ.

ಇಷ್ಟಾದರೂ ಜಾನಿ ಗ್ಯಾಂಗಿಗೆ ಅವನು ಲಾಟರಿ ದುಡ್ಡಿನವನಲ್ಲ ಎನ್ನುವುದರಿಂದ

ಕೊಂಚ ಉತ್ಸಾಹ ತಗ್ಗಿದ್ದು ಮಾತ್ರ ನಿಜ. ಶಾಸ್ತ್ರಿ ತಂದು ಕೊಡುತ್ತಿದ್ದ ಕೇಸ್‌ಗಳ ಬಗ್ಗೆ ಅವರು ಆಸಕ್ತಿ ವಹಿಸುತ್ತಿದ್ದುದಕ್ಕೆ ಕಾರಣ ಸಾಧಾರಣವಾಗಿ ಜೂಜಾಡುವವರೆಲ್ಲ ಹಡಬಿಟ್ಟಿ ದುಡ್ಡು ಸಿಗುತ್ತಿದ್ದಹಾಗೇ ಒಂದೆರಡು ಕ್ವಾರ್ಟರನ್ನಾದರೂ ಏರಿಸಿ ಗರಮ್ಮಾಗಿ ಮನೆ ತಲುಪುವವರು. ಖುಷಿ ಕೋಪ ಸಂತೋಷ ದುಃಖಗಳ ಉನ್ಮಾದದಲ್ಲಿರುವ ಅವರ ಜೇಬಿನ ದುಡ್ಡು ಎಗರಿಸುವುದು ಜಾನಿ ಗ್ಯಾಂಗಿಗೆ ಯಾವತ್ತೂ ಕಷ್ಟವಾಗಿರಲಿಲ್ಲ. ದುಡಿದ ದುಡ್ಡಾದರೆ ಯಾವಾಗಲೂ ಜನ ಜೋಪಾನ ಮಾಡುವುದು ಹೆಚ್ಚು. ಎಷ್ಟೋಸಾರಿ ಚಾಕು ಚೂರಿ ಸಹ ತೋರಿಸಿ ಕೆಲಸ ನಡೆಸಬೇಕಾದ ಪ್ರಮೇಯ ಬರುತ್ತೆ. ಆದ್ದರಿಂದಲೇ ಜಾನಿ ಗ್ಯಾಂಗಿನವರು ಜುಗಾರಿ ಆದ್ಮಿ ಅಲ್ಲ ಎಂದಾದಾಗ ಕೊಂಚ ಯೋಚನೆ ಮಾಡಿದ್ದು.

ಆದರೆ ಹಾಗೆಂದು ಸುಮ್ಮನೆ ಬಿಡುವಹಾಗೂ ಇಲ್ಲ! ಒಂದಲ್ಲ ಎರಡಲ್ಲ, ಅರವತ್ತು ಸಾವಿರ! ಜೊತೆಗೆ ಶಾಸ್ತ್ರಿ ಬೇರೆ ದುಡ್ಡು ಕೈಗೆ ಬಂದ ಮೇಲೇ ನನ್ನ ಬಾಕಿ ಚುಕ್ತಾ ಮಾಡಿ ಎಂದು ಹೇಳುತ್ತಿದ್ದಾನೆ!



# ಅಗ್ನಿಶಿಲೆ - ೧೬



ಏಜಂಟ್ ಶೇಷಪ್ಪ ವಿನೋದಶೀಲ ವ್ಯಕ್ತಿ. ಯಾವಾಗಲೂ ಬೀಡ ಬಾಯಲ್ಲಿ ಜಗಿಯುತ್ತ ಉತ್ತರ ಭಾರತದವರ ತರ ಜುಬ್ಬ, ಕಚ್ಚೆಪಂಚೆ ಉಟ್ಟುಕೊಂಡು, ಹಣೆಗೆ ಕುಂಕುಮ ಇಟ್ಟುಕೊಂಡು, ಆಗಾಗ್ಗೆ ಅಧ್ವಾನದ ಹಿಂದಿ ಉಪಯೋಗಿಸಿ ಹೋಗಿಬರುವವರ ಹತ್ತಿರ ಸತತವಾಗಿ ಒಟಗುಡುತ್ತ ವ್ಯಾಪಾರದಲ್ಲಿ ತೊಡಗಿರುತ್ತಾನೆ. ಇಪ್ಪತ್ತಾರು ತರದ ವೀಳ್ಯದೆಲೆಗಳು, ಡಬ್ಬಿಗಳು, ನಮುನಮೂನೆಯ ಸುಗಂಧಪೂರಿತ ಪುಡಿಗಳು, ಎಲ್ಲ ಅವನ ಫಳ ಫಳ ಹೊಳೆಯುವ ಹಿತ್ತಾಳೆ ಹರಿವಾಣದ ಸುತ್ತ ಸಾಲುಗಟ್ಟಿ ನಿಂತಿರುತ್ತವೆ. ಹತ್ತಾರು ತರದ ಮಸಾಲೆಗಳನ್ನು ಬೀಡಾದಲ್ಲಿ ಸುತ್ತಿ, ಅದನ್ನು ಹೇಗೆ ಬಾಯೊಳಗೆ ಹಲ್ಲಿನ ನಡುವೆ ಇಟ್ಟು ಜಗಿದು ರಸ ಹೀರಬೇಕೆಂಬುದನ್ನು ಸಹ ಅವನು ಗಿರಾಕಿಗಳಿಗೆ ಕೊರೆಯುತ್ತಾನೆ. ಈ ಶೇಷಪ್ಪನನ್ನು ಒಮ್ಮೆ ಪೋಲೀಸರು ಸ್ಟೇಷನ್ನಿಗೆ ಎಳಕೊಂಡು ಹೋಗಿದ್ದರು. ಆದರೆ ಯಾಕೆ ಎನ್ನುವುದು ಮಾತ್ರ ಯಾರಿಗೂ ಸರಿಯಾಗಿ ಗೊತ್ತಿರಲಿಲ್ಲ. ಶೇಷಪ್ಪ ಮಾದಕ ಔಷಧ ವ್ಯಸನಿಗಳಿಗೆ ಬೀಡಾದಲ್ಲಿ ಅಫೀಮು ಗಾಂಜಾಗಳನ್ನು ಹಾಕಿ ಕೊಡುತ್ತಾನೆ, ಒಮ್ಮೆ ಕೈ ತಪ್ಪಿ ಅಭ್ಯಾಸವಿಲ್ಲದ ಯಾರೋ ಒಬ್ಬರಿಗೆ ಹಾಕಿ ಕೊಟ್ಟು ಅವರಿಗೆ ದಾರಿಮಧ್ಯೆ ಮತಿಭ್ರಮಣೆಯಾಗಿ ಹುಚ್ಚುಹುಚ್ಚಾಗಿ ಆಡಿದರಂತೆ. ಅದು ಪೋಲೀಸರ ಗಮನಕ್ಕೆ ಬಂದು ಶೇಷಪ್ಪನನ್ನು ಸ್ಟೇಷನ್ನಿಗೆ ಕರೆಸಿ ಒಳಗೆ ಹಾಕುತ್ತೇವೆಂದು ಹೆದರಿಸಿ ಕಳಿಸಿದರಂತೆ, ಎನ್ನುವುದು ಒಂದು ವದಂತಿ. ಶೇಷಪ್ಪ ಅದನ್ನೆ ತನ್ನ ವ್ಯಾಪಾರದ ಅನುಕೂಲಕ್ಕೆ ಉಪಯೋಗಿಸಿಕೊಂಡಿದ್ದು ಮಾತ್ರ ಅವನ ಚಾಣಾಕ್ಷತನಕ್ಕೆ ಸಾಕ್ಷಿ.

"ಏನು ಶೇಷಪ್ಪ, ನಿನ್ನ ಪೋಲೀಸಿನವರು ಒಳಗೆ ಹಾಕಿದ್ದರಂತೆ! ಎಂತ ಮಾಡಿದೆ ಮಾರಾಯ?" ಎಂದು ಒಮ್ಮೆ ಸುರೇಶ ಕೇಳಿದ. ಆಗೀಗ ಸುರೇಶ ಅವನ ಬಳಿ ಚೆಕ್ ಕೊಟ್ಟು ಹಣ ತೆಗೆದುಕೊಳ್ಳುತ್ತಿದ್ದುದರಿಂದ ಅವನಿಗೆ ಅಷ್ಟಿಷ್ಟು ಶೇಷಪ್ಪನ ಪರಿಚಯ ಇತ್ತು. ಅನೇಕ ವರ್ಷಗಳ ಹಿಂದೆ ಶೇಷಪ್ಪ ಘಟ್ಟದ ಕೆಳಗಿನಿಂದ ಮೇಲೆ ಬಂದ ಹೊಸದರಲ್ಲಿ ಗೌರಿಯ ತಂದೆಯಿಂದ ಅಲ್ಪಸ್ವಲ್ಪ ಸಹಾಯ ಸಹ ಅವನಿಗೆ ಸಿಕ್ಕಿತ್ತು. ಇದೆಲ್ಲದರ ಹಿನ್ನೆಲೆಯಲ್ಲಿ ಅವನು ಸುರೇಶನ ಜೊತೆಗೂ ಗೌರಿ ಜೊತೆಗೂ ಕೊಂಚ ಸಲುಗೆ ಸ್ನೇಹದಿಂದ ವರ್ತಿಸುತ್ತಿದ್ದ.

"ಏನ್ಮಾಡ್ತೀರ ಸುರೇಶಣ್ಣ! ಈಗ ನೂರೆಂಟು ಜನ ಬರ್ತಾರೆ ಪಾನ್ ಹಾಕೋಕೆ. ಒಬ್ಬರು ಬನಾರಸ್ ಪಾನ್ ಕೇಳ್ತಾರೆ, ಒಬ್ಬರು ಕಲ್ಕತ್ತ ಕೇಳ್ತಾರೆ, ಒಬ್ಬರು ಅಂಬಾಡಿ, ಒಬ್ಬರು ಮನ್ಮಥಾ ಬೀಡಾ! ಅವರಿಗೆಲ್ಲ ಮದುವೆ ಆಗಿದೆಯ? ಮಕ್ಳಿದಾವ? ಎಲ್ಲ ಜಾತಗ ಕೇಳ್ಕೊಂಡು ಪಾನ್ ಕೊಡೋದಕ್ಕಾಗತ್ತ? ಹೇಳಿ ನೀವೆ!"

ಸುರೇಶನಿಗೆ ಶೇಷಪ್ಪನ ವಿವರಣೆ ಅರ್ಥವಾಗದುದನ್ನು ಕಂಡು ಶೇಷಪ್ಪ ಇನ್ನಷ್ಟು ಸ್ಪಷ್ಟವಾಗಿ ವಿವರಿಸಿದ. "ಯಾವ್ನೋನೋ ಮನ್ಮಥ ಬೀಡಾ ಹಾಕ್ಕೊಂಬಿಟ್ಟು ಮಸ್ತಿ ಹತ್ತಿ ಕಂಡಕಂಡ ಹೆಗಸರ ಮೇಲೆಲ್ಲ ಕೈ ಹಾಕೋಕೆ ಹೋದನಂತೆ. ಪೋಲೀಸಿನವರು ನಿಂದೇ ತಪ್ಪು ಅಂತ ನನ್ನ ಒಳಗೆ ಹಾಕ್ತೀವಿ ಅಂದರೆ ನಾನೇನು ಮಾಡಲಿ? ಅದಕ್ಕೇ ಇನ್ನು ಮೇಲೆ ಮದುವೆ ಆದೋನು ಅಂತ ತಾಶೀಲ್ದಾರರ ಹತ್ರ ಸರ್ಟಿಫಿಕೇಟ್ ತಂದೋರಿಗೆ ಮಾತ್ರ ಮನ್ಮಥ ಬೀಡಾ ಕೊಡ್ತೀನಿ. ಬ್ಯಾರೆಯೋರಿಗೆ ಕೊಡೋದೇ ಇಲ್ಲ. ನಿಮಗೊಬ್ಬರಿಗೆ ಬೇಕಾರೆ ಸರ್ಟಿಫಿಕೇಟ್ ಇಲ್ಲದೆ ಕೊಡೋಣ. ನಿಮಗೆ ಮದುವೆಯಾಗಿರೋದು ನಂಗೊತ್ತು!" ಎಂದು ಹೇಳಿ ಸುರೇಶನ ಕಡೆ ನೋಡಿ ನಸು ನಕ್ಕು ಕಣ್ಣು ಮಿಟುಕಿಸಿದ.

"ಶೇಷಪ್ಪ, ಬರೇ ತಾಶೀಲ್ದಾರರ ಹತ್ರ ಸರ್ಟಿಫಿಕೇಟ್ ತಂದರೆ ಸಾಲದು. ಅವರವರ ಹೆಂಡತೀರ ಹತ್ರಾನೂ ಇವನಿಗೆ ನಿನ್ನ ಮನ್ಮಥ ಬೀಡಾ ಕೊಡಬಹುದು ಅಂತ ಸರ್ಟಿಫಿಕೇಟ್ ತರಬೇಕಲ್ಲವ?"

"ಕರೆಕ್ಟ್, ಸುರೇಶಣ್ಣ, ಈ ಹಾಳು ಬೀಡಾ ದೆಸೆಯಿಂದ ನಾಳೆ ಮಕ್ಳು ಹೆರಬೇಕಾದೋರು ಅವರು ತಾನೆ. ಅದಕ್ಕೆ ಒಂದು ಕೆಲಸ ಮಾಡ್ತೀನಿ. ಮನ್ಮಥ ಬೀಡಾ, ಒಂದೊಂದು ಪ್ಯಾಕೆಟ್ಟು ನಿರೋದ್ ತಗೊಂಡೋರಿಗೆ ಮಾತ್ರ ಅಂತ ಬೋರ್ಡು ಹಾಕಿಬಿಡ್ತೀನಿ. ಎರಡೂ ಖರ್ಚಾಗಲಿ! ಏನಂತೀರ?"

ಶೇಷಪ್ಪನ ಬಳಿ ಈತರ ಪೋಲಿ ಪೋಲಿ ಹರಟೆ ಕೇಳುವುದಕ್ಕೇ ಅಲ್ಲಿಗೆ ಬೀಡಾ ಹಾಕಿಕೊಳ್ಳಲು ಗಿರಾಕಿಗಳು ಹೋಗುತ್ತಿದ್ದರು. ಯಾವ ಅವ್ಯವಹಾರದ ದೆಸೆಯಿಂದ ಇವನನ್ನು ಸ್ಟೇಷನ್ನಿಗೆ ಕರೆಸಿದ್ದರೋ ಏನೋ. ಕೇಳಿದವರಿಗೆಲ್ಲಾ ಸುರೇಶನಿಗೆ ಹೇಳಿದಂತೆ ಮನ್ಮಥ ಬೀಡಾ ಬಗ್ಗೆ ದಂತಕತೆಯೊಂದನ್ನು ಸೃಷ್ಟಿಸಿ ಶೇಷಪ್ಪ ತಮಾಷೆ ಮಾಡುತ್ತ ಮನ್ಮಥ ಬೀಡಾ ಜಾಹೀರಾತು ಮಾಡುತ್ತಿದ್ದ.

* * * *

ಸುರೇಶ ಜೀವನ್ ಲಾಲನ ಚೆಕ್ಕು ತಗೊಂಡು ಹುಚ್ಚೇಗೌಡರ ಮಂಡಿಗೆ ಹೋಗಿ, ಹುಚ್ಚೇಗೌಡರಿಗೆ ಮಾಲು ಡೆಲಿವರಿ ಕೊಡಲು ಹೇಳಿ, ಮಂಡಿ ಕಮಿಷನ್ ಚುಕ್ತಾ ಮಾಡಿ, ಅಲ್ಲಿಂದ ಶೇಷಪ್ಪನ ಮನ್ಮಥ ಬೀಡಾ ಸ್ಟಾಲ್ ಕಡೆಗೆ ಹೊರಟ. ಚೆಕ್ ಕೈಯ್ಯಲ್ಲೇ ಇಟ್ಟುಕೊಂಡೂ ಎಷ್ಟಕ್ಕೆ ಬರೆದಿದ್ದಾರೆಂದು ನೋಡದೆ "ಅವರುವತ್ತು ಸಾವಿರಕ್ಕೆ ಮಾರಾಟ ಆಯ್ತು" ಎಂದು ಸುರೇಶ ಹೇಳಿದ್ದನ್ನು ಕೇಳಿಕೊಂಡು ಗೌರಿ ಹಿಗ್ಗಿದಳು.

"ಏನ್ ಸುರೇಶಣ್ಣ! ಹೆಣ್ತಿ ಸಮೇತ ಬಂದುಬಿಟ್ಟಿದೀರಲ್ಲ ಬೀಡ ಕೊಳ್ಳೋಕೆ! ನಿಮಗೆ ಪರ್ವಾ‌ಇಲ್ಲ, ಸರ್ಟಿಫಿಕೇಟ್ ಬ್ಯಾಡ ಅಂತ ಅವತ್ತೇ ಹೇಳಿರ್ಲಿಲ್ಲವ ನಾನು" ಎಂದು ಸುರೇಶನನ್ನು ಕಾಣುತ್ತಿದ್ದ ಹಾಗೇ ಶೇಷಪ್ಪ ತಮಾಷೆ ಮಾಡಿದ. ಆದರೆ ಸುರೇಶ ಕೈಗಿತ್ತ ಚೆಕ್ ನೋಡಿದವನೇ ಇದ್ದಕ್ಕಿದ್ದ ಹಾಗೇ ಗಂಭೀರನಾದ! ಸದಾ ತಮಾಷೆ ಮಾಡುತ್ತ ಇರುತ್ತಿದ್ದ ಶೇಷಪ್ಪನ ಮುಖ ಗಂಭೀರವಾಗಿದ್ದನ್ನು ನೋಡಿ ಗೌರಿಗೂ ಸುರೇಶನಿಗೂ ಆಶ್ಚರ್ಯವಾಯ್ತು. ಗೌರಿ ಸುರೇಶ ಇಬ್ಬರೂ ಪರಸ್ಪರ ಮುಖಮುಖ ನೋಡಿಕೊಂಡರು. ಅಷ್ಟರಲ್ಲಿ ಯಾರೋ ಗಿರಾಕಿ ಸಿಗರೇಟು ಕೇಳಿಕೊಂಡು ಬಂದ. ಶೇಷಪ್ಪ "ಒಂದು ನಿಮಿಷ ಬಂದೆ" ಎಂದು ಹೇಳಿ ಆ ಗಿರಾಕಿಯತ್ತ ಗಮನ ಹರಿಸಿದ. ಶೇಷಪ್ಪನ ಮುಖ ಚಹರೆ ಬದಲಾದುದನ್ನು ಕಂಡು ಕೊಂಚ ಆತಂಕಗೊಂಡ ಗೌರಿ "ಏನ್ರಿ ಚೆಕ್ ಡೇಟು ರುಜು ಎಲ್ಲ ಸರಿಯಾಗಿದೆಯ ನೋಡಿದ್ರ?" ಎಂದು ಸುರೇಶನನ್ನು ಪಿಸುಮಾತಿನಲ್ಲ ಕೇಳಿದಳು. "ಚೆಕ್ ನಿನ್ನ ಕೈಲೇ ಕೊಟ್ಟಿದ್ದೆ! ನನ್ನ ಕೇಳೋದರ ಬದಲು ನೀನೇ ನೋಡಬಹುದಿತ್ತಲ್ಲ" ಎಂದು ಸುರೇಶ ಅವಳಿಗೆ ಪ್ರತ್ಯುತ್ತರ ಕೊಟ್ಟಿದ್ದರಿಂದ ಅವಳಿಗೆ ರೇಗಿತು. ಚೆಕ್ ತಂದೋರು ನಾನೋ ನೀವೋ ಎಂದು ಕೇಳಿ ಜಗಳ ಆರಂಭಿಸಲು ಅವಳ ಬಾಯಿ ಕಡಿಯುತ್ತಿದ್ದರೂ, ಗಿರಾಕಿ ಕಳಿಸಿಕೊಟ್ಟ ಶೇಷಪ್ಪನ ಗಮನ ಇತ್ತ ಹರಿದಿದ್ದರಿಂದ ಸುಮ್ಮನಾದಳು.

ಚೆಕ್ ಹಿಡಿದುಕೊಂಡಿದ್ದ ಶೇಷಪ್ಪ "ಸುರೇಶಣ್ಣ ಒಂಚೂರು ಒಳಗೆ ಬನ್ನಿ. ಕ್ಯಾಶ್ ಕೊಡ್ತೀನಿ" ಎಂದು ಒಳಗೆ ಕರೆದು ಗೌರಿಕಡೆಗೆ ತಿರುಗಿ "ಬನ್ನಿಯಮ್ಮ ನೀವ್ಯಾಕೆ ಹೊರಗೆ ನಿಲ್ತೀರಿ" ಎಂದು ಅವಳನ್ನೂ ಕರೆದ. ಸುರೇಶನೂ ಗೌರಿಯೂ ಹೆಚ್ಚು ಮೊತ್ತದ ಹಣವಾದುದರಿಂದ ಹಾಗೆ ಕರೆಯುತ್ತಿದ್ದಾನೆಂದು ತಿಳಿದು ನಸುಗತ್ತಲಿನ ಅವನ ಅಂಗಡಿ ಒಳಗೆ ನಡೆದರು.

"ಯಾಕೋ ಮಾರಾಯ? ಏನಾದ್ರು ಧೋಕಾ ಚೆಕ್ಕೊ" ಎಂದು ಒಳಗೆ ಹೋಗುತ್ತ ಸುರೇಶ ಪ್ರಶ್ನಿಸಿದ.

"ಛುಛು! ಹಂಗೇನಿಲ್ಲ ಸುರೇಶಣ್ಣ, ಬನ್ನಿ ಬನ್ನಿ" ಎನ್ನುತ್ತ ಒಳನಡೆದು ಗೌರಿ ಸುರೇಶನಿಗೆ ಕುಳಿತುಕೊಳ್ಳಲು ಹೇಳಿ, ಚೆಕ್ ನಿರ್ದೇಶಿಸುತ್ತ "ಯಾರು ಕೊಟ್ಟರು ನಿಮಗೆ ಈ ಚೆಕ್?" ಎಂದು ಸುರೇಶನನ್ನು ಕೇಳಿದ.

“ಜೀವನ್‌ಲಾಲ್”

“ಎಷ್ಟು ದಿನದಿಂದ ನಿಮಗೆ ಇವನ ಹತ್ರ ವ್ಯವಹಾರ ಇದೆ”

“ನನ್ನ ಲೇವಾದೇವಿ ಎಲ್ಲ ಬ್ಯಾಂಕಿನಲ್ಲೆ ಶೇಷಪ್ಪ”

“ಮತ್ತೆ ಈ ಚೆಕ್ಕು?”

“ಇವತ್ತು ಏಲಕ್ಕಿ ಹರಾಜಿಗೆ ತಂದಿದ್ದೆ, ಅವನು ತಗೊಂಡು ಹಣ ಪಾವ್ತಿ ಮಾಡಿದಾನಷ್ಟೆ”

“ಏಲಕ್ಕಿ ಅಂದರೆ!”

“ಏಲಕ್ಕಿ”

“ನನ್ನ ಹತ್ತಿರ ಮುಚ್ಚುಮರೆ ಮಾಡಬೇಡಿ”

ಸುರೇಶನಿಗೂ ಗೌರಿಗೂ ಈ ಪಾನ್‌ವಾಲಾನ ಹತ್ತಿರ ಅವನು ಕೇಳುವ ಪ್ರಶ್ನೆಗಳಿಗೆಲ್ಲ ಉತ್ತರ ಒಪ್ಪಿಸುವುದು ತಮ್ಮ ಆತ್ಮಗೌರವಕ್ಕೆ ಕಡಿಮೆ ಎನ್ನಿಸಿತು. ಆದರೂ ಅವರಿಬ್ಬರಲ್ಲೂ ಆಗಲೆ ಸಣ್ಣ ಕುತೂಹಲದ ಎಳೆಯೊಂದು ಹೆಡೆ ಎತ್ತಲಾರಂಭಿಸಿತ್ತು.

“ಮತ್ತೇನಂತ ನಿನ್ನ ಅಂದಾಜು?” ಗೌರಿ ಕುತೂಹಲಕ್ಕೆ ಕೇಳಿದಳು.

“ಜುಗಾರಿ ಕ್ರಾಸಲ್ಲಿ ಏಲಕ್ಕಿ ಅಂದರೆ ಭಾಳ ಅರ್ಥ ಉಂಟಮ್ಮ. ಏಲಕ್ಕಿ ಸಪ್ಲೆ ಅಂದರೆ ಗಾಂಜ, ಅಫೀಮು. ಕೆಂಪು ಕಲ್ಲು, ಗಂಧ, ಏನು ಬೇಕಾದರೂ ಆಗಬಹುದು. ನೀವು ಹರಾಜಿಗೆ ಇಟ್ಟ ಏಲಕ್ಕಿ ಅಂದಮೇಲೆ ಅದು ಏಲಕ್ಕೀನೆ ಬಿಡಿ” ಎಂದು ಅರ್ಥವಾದವನ ದನಿಯಲ್ಲಿ ಶೇಷಪ್ಪ ಹೇಳಿದ.

“ಶೇಷಪ್ಪ, ಈವರೆಗೂ ನಾನು ಗಾಂಜ ಗಿಡ ಹ್ಯಾಗಿರುತ್ತೆ ಅಂತ ಸಹಿತ ನೋಡಿಲ್ಲ. ನೀನೇನಾದ್ರು ನಿನ್ನ ಮನ್ಮಥ ಬೀಡಾಕ್ಕೆ ಹಾಕಿ ಕೊಡೋದಕ್ಕೆ ಅಂತ ಇಟ್ಟಿದೀಯೋ ಗೊತ್ತಿಲ್ಲ. ಇನ್ನು ಅಫೀಮು ಅಂತ ಹೆಸರು ಮಾತ್ರ ಓದಿ ಗೊತ್ತಷ್ಟೆ. ಕೆಂಪು ಕಲ್ಲಿನ ಕತೆ ಬೇಕಾದಷ್ಟು ಕೇಳಿದೀನಿ, ಲಾರಿ ತಗೊಂಡು ಬಾ! ದೋಣಿಹೊಳೆ ದಂಡೇಲಿ ಕೆಂಪು, ನೀಲಿ, ಹಳದಿ ಯಾವ್ಯಾವ ತರದ್ದು ಬೇಕು ಹೇಳು. ತುಂಬಿ ಕೊಡ್ತೀನಿ. ಮತ್ತೆ ಗಂಧ ಗಿಂಧ ಅವೆಲ್ಲ ಕದಿಯೋರು ಪೂರ್ತಿ ಕದ್ದು ಮುಗಿಸಿಯಾಗಿದೆ. ಬೇರನ್ನು ಸಮೇತ ನಮ್ಮ ಕಾಡಲ್ಲಿ ಬಿಟ್ಟಿಲ್ಲ. ಆ ಕಟ್ಟುಕತೆಗಳನ್ನೆಲ್ಲ ಕಟ್ಟಿಕೊಂಡು ನಮಗೆ ಪ್ರಶ್ನೆ ಕೇಳ್ತ ಕೂರಬೇಡ. ಜನ ಹೇಳ್ತಾರೆ ಬೇಕಾದಷ್ಟು. ಪುರುಸೊತ್ತಿದ್ದೋರಿಗೆ ಬೇರೆ ಏನು ಕೆಲಸ ಹೇಳು. ಶೇಷಪ್ಪ ಬೀಡಾದಲ್ಲಿ ಅಫೀಮು ಸೇರಿಸಿ ಕೊಡುತ್ತಾನೆ ಅಂತ ನಿನಗೇ ಹೇಳಿಲ್ಲವ!” ಎಂದು ಸುರೇಶ ಶೇಷಪ್ಪನ ಪ್ರಶ್ನೆಗಳಿಗೆ ಅಸಡ್ಡೆಯಿಂದ ಉತ್ತರಿಸಿದ.

“ದೋಣಿಹೊಳೆ ದಂಡೆಯಲ್ಲಿ ಕೆಂಪು ಕಲ್ಲು ನೋಡಿದೀರ?”

“ಕೆಂಪುದೊಂದೆ ಅಲ್ಲ! ಎಲ್ಲಾ ತರದ್ದು”

“ಸುರೇಶಣ್ಣ, ಸುಮ್ಮನೆ ಉಡಾಫೆ ಹೊಡೀಬೇಡಿ. ನಾನು ಯಾರಿಗೂ ತೋರಿಸಿಲ್ಲ ಇಷ್ಟರವರೆಗೆ. ನಿಮಗೆ ತೋರಿಸ್ತೀನಿ ತಡೀರಿ” ಎಂದವನೆ ಶೇಷಪ್ಪ ಬೀರೊಳಗಿಂದ ಒಂದು

ಪುಟ್ಟ ಡಬ್ಬಿ ತೆಗೆದು ಮುಚ್ಚಲ ಮೇಲೆತ್ತಿದ.

ಆ ಕ್ಷಣ ಸುರೇಶನಿಗೆ ತನ್ನ ಮಾತು ಎಂಥ ಉಡಾಫೆ ಎಂದು ಚೆನ್ನಾಗಿ ಗೊತ್ತಾಯ್ತು. ಕೆಂಪು ಕಲ್ಲು ಎಂದರೆ ಅದು ಬರಿಯ ಹೆಸರಷ್ಟೆ. ಅದು ಸಾಕ್ಷಾತ್ ಘನೀಭವಿಸಿದ ಬೆಂಕಿ, ಅಗ್ನಿಶಿಲೆ! ಆ ಕೋಣೆಯ ನಸುಗತ್ತಲಲ್ಲಿ ಬೆಂಕಿಕಡ್ಡಿ ಗೀಚಿದ ತಕ್ಷಣ ಉದ್ಭವಿಸುವ ಬೆಂಕಿಯಂತೆ, ಡಬ್ಬಿ ಮುಚ್ಚಲ ಮೇಲೆತ್ತುತ್ತಿದ್ದ ಹಾಗೇ ಜ್ವಾಲೆಯಂತೆ ಅದು ಅವರ ಕಣ್ಣೆದುರು ಕಂಗೊಳಿಸಿತು. ಅವಾಕ್ಕಾಗಿ ಗೌರಿ ಮತ್ತು ಸುರೇಶ ಉಗುಳು ನುಂಗುತ್ತ ಆ ರಕ್ತ ವರ್ಣದ ಬೆಂಕಿಯನ್ನು ದಿಟ್ಟಿಸಿದರು. ಆ ಒಂದು ಕ್ಷಣ ಅವರು ಅ ಕಲ್ಲಿಗಾಗಿ ಕೊಲೆ ಖೂನಿ ಮೋಸ ವಂಚನೆ ಯಾವುದನ್ನು ಬೇಕಾದರೂ ಮಾಡಲು ತಯ್ಯಾರಿದ್ದರು. ಆಕಾಂಕ್ಷೆಯ ಬೆಂಕಿ ಅವರ ಕಣ್ಣುಗಳಲ್ಲಿ ಮಿಂಚಿತು.

ಅದು ಶೇಷಪ್ಪನಿಗೂ ಅರಿವಾಯ್ತೋ ಎನ್ನುವಂತೆ ಶೇಷಪ್ಪ ಆ ಡಬ್ಬಿಯ ಮುಚ್ಚಲ ಟಪ್ಪನೆ ಮುಚ್ಚಿ ಸುರೇಶನ ಕಡೆಗೆ ನೋಡಿದ.

"ಇಲ್ಲ ಶೇಷಪ್ಪ ಇಂಥದನ್ನು ನಾನು ನನ್ನ ಜೀವಮಾನದಲ್ಲೇ ನೋಡಿಲ್ಲ" ಎಂದು ಪಿಸುದನಿಯಲ್ಲಿ ಸುರೇಶ ಹೇಳಿದ.

ಗೌರಿ ಪಾನಮತ್ತಳಂತೆ ಡಬ್ಬಿಯೊಳಗಿನ ಕೆಂಪು ಕಲ್ಲನ್ನು ನಿಟ್ಟಿಸುತ್ತಿದ್ದವಳು ಶೇಷಪ್ಪ ಡಬ್ಬಿ ಮುಚ್ಚಿದ ಕೂಡಲೆ ಬೆಚ್ಚಿಬಿದ್ದು ವಾಸ್ತವ ಪ್ರಪಂಚಕ್ಕೆ ಇಳಿದಳು. "ಹಾಗಾದರೆ ಕೆಂಪು ಕಲ್ಲು ಸಿಕ್ಕೋದು ಸುಳ್ಳಲ್ಲ!" ಎಂದು ತನಗೆ ತಾನೆ ಎಂಬಂತೆ ಹೇಳಿಕೊಂಡಳು.

"ಕೆಂಪು ಕಲ್ಲು ಬರೇ ನೋಡಕ್ಕೆ ಚೆನ್ನಾಗಿದ್ರೆ ಸಾಲದಮ್ಮ. ಅದರದ್ದು ಜಾತಕ ನೋಡಿಸಬೇಕು. ಅದರದ್ದು ಜಾತಕ ನೋಡಿಸಿ ಆಮೇಲೆ ಅದನ್ನ ಕುಯ್ಸಿಸಿ ಪಾಲಿಷ್ ಮಾಡಿಸೋದು. ಲಕ್ಷಣ ಚೆನ್ನಾಗಿಲ್ದಿರೋ ಕಲ್ಲಾದರೆ ಇಡೀ ಮನೆತನಾನೆ ತೆಗೆದುಬಿಡ್ತವೆ!" ಎಂದು ಶೇಷಪ್ಪ ವಿವರಣೆ ಕೊಟ್ಟ.

"ನಿನಗೆ ಯಾರು ಕೊಟ್ಟರು ಶೇಷಪ್ಪ ಈ ಕಲ್ಲು?"

"ಆ ಮೂಕಿ ದ್ಯಾವಮ್ಮನ ಗಂಡ!"

"ಯಾರು, ಕಾಡಿನಲ್ಲಿ ಬುಟ್ಟಿ ಮಾರ್ತಾಳಲ್ಲ"

"ಹೂ, ಅವಳ ಗಂಡ!"

"ಅರೆ! ಅವನು ಸತ್ತು ಹೋಗಿದಾನೆ ಅಂತಾರಲ್ಲ ಶೇಷಪ್ಪ" ಗೌರಿ ಅಚ್ಚರಿಯಿಂದ ಕೇಳಿದಳು. ಕುತೂಹಲ ನಿಧಾನವಾಗಿ ಅವಳನ್ನು ಅವಳಿಗೆ ಅರಿವೇ ಆಗದಹಾಗೆ ಜುಗಾರಿಕ್ರಾಸಿನ ತೊಡಕುಗಳ ಆಳಗಳಿಗೆ ಎಳೆಯುತ್ತಿತ್ತು.

"ಇರಬಹುದು ಗೌರಮ್ಮ, ನಾನು ನಿಮ್ಮನ್ನ ಒಳಗೆ ಬನ್ನಿ ಅಂತ ಕರ್ದಿದ್ದು ಈ ಸಮಾಚಾರ ಹೇಳೋದಕ್ಕೇ. ಜೀವನ್‌ಲಾಲನ ಚೆಕ್ಕು ಕ್ಯಾಶ್ ಮಾಡಿಸಿಕೊಂಡೋರಲ್ಲಿ ಮೂರು ನಾಕು ಜನ ಇವತ್ತಿಗೂ ಪತ್ತೆ ಇಲ್ಲ. ಅದರಲ್ಲಿ ಕಂಬಳಿ ಸಿದ್ದಪ್ಪ ಒಬ್ಬ. ದ್ಯಾವಮ್ಮನ ಗಂಡ ಒಬ್ಬ. ಹಾಗಂತ ನೀವೇನು ಹೆದರ್ಕೋಕ್ಕೆ ಬೇಡಿ. ಚೆಕ್ಕಿಗೂ ಅವರು

ನಾಪತ್ತೆಯಾಗಿದ್ದಕ್ಕೂ ಯಾವ ಸಂಬಂಧವೂ ಇಲ್ಲದೆ ಇರಬಹುದು. ಅಷ್ಟರಮೇಲೂ ನಿಮಗೆ ಏನಾದ್ರು ಗಂಡಾಂತರ ಉಂಟು ಅಂತ ಅನ್ನಿಸಿದರೆ ನಂಗೆ ಒಂದು ಮಾತು ಹೇಳಿ'' ಶೇಷಪ್ಪ ಗಂಭೀರವಾಗಿ ಆಶ್ವಾಸನೆ ಕೊಡುವವನಂತೆ ಗೌರಿಗೆ ಹೇಳಿದ.

''ಏನು ಶೇಷಪ್ಪ, ಹಂಗಾದರೆ ದೇವಪುರದಲ್ಲಿ ನಿಂದೂ ಒಂದು ಗ್ಯಾಂಗ್ ಇರುವಹಾಗೆ ಕಾಣ್ತದೆ!'' ಎಂದು ಚಕಿತನಾಗಿ ಅರ್ಧ ತಮಾಷೆ ಅರ್ಧ ಕುತೂಹಲದ ದನಿಯಲ್ಲಿ ಕೇಳಿದ ಸುರೇಶ. ಇವರಿಬ್ಬರ ದನಿಯಲ್ಲಿ ಒಂದು ಚೂರಾದರೂ ಗಾಬರಿ ಕಳವಳ ಇಲ್ಲದ್ದು ನೋಡಿ ಶೇಷಪ್ಪನಿಗೆ ಅಚ್ಚರಿಯಾಯ್ತು. ದೇವಪುರ, ಜುಗಾರಿಕ್ರಾಸ್‌ಗಳ ಭೂಗತವ್ಯವಸ್ಥೆ ಮತ್ತು ಗ್ಯಾಂಗುಗಳ ತಿಳುವಳಿಕೆ ಇವರಿಗೆ ಲವಲೇಶವೂ ಗೊತ್ತಿಲ್ಲದಿರಬಹುದು ಎಂದು ಊಹಿಸಿದ.

''ಸುರೇಶಣ್ಣಾ, ನನ್ನ ವಿಷಯ ನಿಮಗೆ ಸ್ವಲ್ಪ ಹೇಳಬೇಕು. ಕೇಳಿ. ನಾನು ಹೆಣ್ತಿ ಮಕ್ಳು ಊರಲ್ಲಿ ಬಿಟ್ಟು ಇಲ್ಲಿ ಹೊಟ್ಟೆ ಪಾಡಿಗೆ ದುಡೀತಿದ್ರೆ ಈ ದೇವಪುರದೋರು ನನಗೇ ಕುತ್ತಿಗೆಗೆ ತಂದಿದ್ರು. ನನ್ನ ಪೋಲೀಸಿನವರು ಒಳಗೆ ಹಾಕಕ್ಕೆ ಮಾಡಿದ್ರು ಅಂತಾರಲ್ಲ ಅದು ನಿಜ. ಆದರೆ ಮನ್ಮಥ ಬೀಡಾಕ್ಕೂ ಅದಕ್ಕೂ ಯಾವ ಸಂಬಂಧವೂ ಇಲ್ಲ. ನನ್ನ ಹತ್ರ ಚೆಕ್ ಕೊಟ್ಟು ಕ್ಯಾಶ್ ತಗೊಂಡಿದ್ರಲ್ಲಿ ಒಂದಷ್ಟು ಪರಮಾಯಿಶಿ ಕೋಟಾ ನೋಟುಗಳು ಬಂದುಬಿಟ್ಟವು. ಅದು ಹ್ಯಾಗೆ ಅವನ್ನು ಕೋಟಾ ಅಂತ ಪತ್ತೆಮಾಡಿದರೋ ಭಗವಂತನಿಗೇ ಗೊತ್ತು. ಸೆಂಟ್ರಲ್ ಸಿ.ಐ.ಡಿಗಳಾಗಿದ್ದಕ್ಕೆ ಅವರಿಗೆ ಪತ್ತೆ ಮಾಡಕ್ಕೆ ಆಯ್ತಂತ ಕಾಣ್ತದೆ. ನೋಡಿ ಹ್ಯಾಗಿದೆ ಈ ಖದೀಮರ ಕರಾಮತ್ತು! ಚೆಕ್ ನನ್ನ ಮುಖಾಂತರ ಕ್ಯಾಶ್ ಮಾಡಿಸಿಕೊಳ್ತಾರೆ ಅನ್ನೋದನ್ನೆ ಉಪಯೋಗಿಸಿಕೊಂಡು ಕೋಟೆಗಟ್ಟಲೆ ರೂಪಾಯಿ ಚಲಾವಣೆಗೆ ಬಿಟ್ಟಿಟ್ಟಿದಾರೆ!''

''ಹಂಗಾದರೆ ಈಗ ನಾವು ನಿನ್ನ ಹತ್ರ ದುಡ್ಡಿಗೆ ಬಂದಿದೀವಲ್ಲೋ ಮಾರಾಯ'' ಎಂದು ಸುರೇಶ ತಮಾಷೆ ಮಾಡಿದ.

''ಥು, ಪೂರ್ತಿ ಕೇಳಿ ಸುರೇಶಣ್ಣಾ, ನೀವು ತಮಾಷೆ ಮಾಡ್ತೀರ ಈಗ! ನನಗೆ ಬಂದಿದ್ದು ಹನ್ನೆರಡು ವರ್ಷ ಒಳಗೆ ಹೋಗೋ ಗಂಡಾಂತ್ರ! ನಾನು ಇದ್ದಿದ್ದು ಇದ್ದಂಗೆ ಹೇಳ್ಬಿಟ್ಟೆ ಸಿ.ಐ.ಡಿಗಳಿಗೆ. ಕಳ್ಳನೋಟಿನ ಖದೀಮರನ್ನ ಹಿಡ್ಕೊಡೋದಕ್ಕೆ ಸಹಾಯ ಮಾಡ್ತೀನಿ, ಅಪ್ರೂವರ್ ಆಗ್ತೀನಿ ಅಂತ ಒಪ್ಕೊಂಡು ಹೊರಗಡೆ ಬಂದೆ ಸುರೇಶಣ್ಣಾ. ನಾನು ಯಾರ್‍ಯಾರ ಚೆಕ್ ವಾಪಸ್ ಕೊಟ್ಟು ದುಡ್ಡಿಸ್ಕೋಳ್ತೀನಿ ಅದನ್ನೆಲ್ಲ ಸಿ.ಐ.ಡಿಗಳು ನೋಡ್ತಾರೆ. ಅಂತದ್ರಲ್ಲಿ ನಿಮಗೆ ಹ್ಯಾಗೆ ಈಗ ಕಳ್ಳನೋಟು ಕೊಡೋದಕ್ಕಾಗತ್ತೆ ಸ್ವಲ್ಪ ಯೋಚನೆ ಮಾಡಿ? ಒಂದು ವಿಚಾರ ಮನಸ್ಸಲ್ಲಿ ಇಟ್ಟುಕೊಳ್ಳಿ. ಈಗ ನಾನು ಹೇಳಿದೆನಲ್ಲ ಅದನ್ನೆಲ್ಲ ನಾನು ಬದ್ಕಿರೋವರೆಗೂ ನೀವಿಬ್ರೂ ಯಾರ ಹತ್ರಾನೂ ಹೇಳಬಾರ್ದು, ಆಯ್ತ. ಇದೆಲ್ಲ ನನ್ನ ಹೆಂಡತಿಗೆ ಸುತ ಗೊತ್ತಿಲ್ಲ'' ಎಂದು ಶೇಷಪ್ಪ ಅವನ ಮನ್ಮಥ ಬೀಡಾ ಹಗರಣದ ಒಳಗುಟ್ಟು ಬಿಟ್ಟ. ಹೊರಗಡೆ ಅಂಗಡಿಯಲ್ಲಿ ಯಾರೂ ಇಲ್ಲದ್ದು ನೋಡಿ

ಕೆಲವು ಗಿರಾಕಿಗಳು ಕಾದು ಕಾದು ಕೆಮ್ಮಿ ಕ್ಯಾಕರಿಸಿ ಯಾರೂ ಬರದುದನ್ನು ಕಂಡು ಹಿಂದಿರುಗಿದರು.


"ನಾನು ಅಪ್ರೂವರ್ ಆಗ್ತೀನಿ ಅಂತ ಹೇಳಿ ಹೊರಗೆ ಬಂದಮೇಲೆ ಇದ್ದಕ್ಕಿದ್ದಹಾಗೆ ಕಳ್ಳನೋಟು ಈಕಡೆಗೆ ಬರೋದೆ ನಿಂತು ಹೋಯ್ತು ಸುರೇಶಣ್ಣಾ. ಅಂದರೆ ಏನರ್ಥ ಹೇಳಿ! ಪೋಲೀಸ್ ಒಳಗೇ ಯಾರೋ ನಮ್ಮಕ್ ಹರಾಮ್ ಇದ್ದಾರೆ ಅಂತಲ್ವ? ಇದೆಲ್ಲ ನೋಡಿ ಸೆಂಟ್ರಲ್ ಸಿ.ಐ.ಡಿಗಳು ಇದನ್ನೆಲ್ಲ ಉಸ್ತುವಾರಿ ನೋಡೋದಕ್ಕೆ ಕಂಪ್ಲೀಟು ಬೇರೆ ಜನಾನೆ ಬಿಟ್ಟಿಟ್ಟಿದಾರೆ. ಅವರು ಯಾರು ಏನು ಅಂತ ನಂಗೆ ಮಾತ್ರ ಈಗ ಗೊತ್ತು. ಅದಕ್ಕೇ ಹೇಳಿದ್ದು ನಿಮಗೆ ಗಂಡಾಂತರ ಇದೆ ಅಂತಾದರೆ ನನಗೆ ಹೇಳಿ ಅಂತ. ನಾನು ರಕ್ಷಣೆ ಒದಗಿಸ್ತೀನಿ." ಶೇಷಪ್ಪನ ಮಾತಿನಲ್ಲಿ ಒಂದು ರೀತಿ ಹೆಮ್ಮೆ ಇತ್ತು.

ಅಷ್ಟರಲ್ಲಿ ಯಾರೋ ಗಿರಾಕಿ ಹೊರಗಿನಿಂದ ಶೇಷಪ್ಪನನ್ನು ಹೆಸರು ಹಿಡಿದು ಕರೆಯುವುದು ಕೇಳಿಸಿತು. ಬರೇ ಬೀಡಿ ಬೆಂಕಿ ಪೊಟ್ಟಣಕ್ಕಾದರೆ ಸ್ವಲ್ಪ ಹೊತ್ತು ಕಾದು ಯಾರೂ ಇಲ್ಲದಿರುವುದನ್ನು ನೋಡಿ ಹೊರಟು ಹೋಗುತ್ತಿದ್ದರೋ ಏನೋ! ಯಾರೋ ಚೆಕ್ಕಿಗೆ ಹಣಕ್ಕಾಗಿ ಬಂದವರೇ ಇರಬೇಕು! ದುಡ್ಡು ತಗೊಂಡೇ ಬಸ್ಸು ಹತ್ತಲು ದೃಢ ನಿರ್ಧಾರ ಮಾಡಿದಂತಿತ್ತು ಅವರು. ಶೇಷಪ್ಪ ಒಳಗಿನಿಂದಲೆ "ಬಂದೆ ಬಂದೆ" ಎಂದು ಹೇಳಿ ಗಡಿಬಿಡಿಯಿಂದ ಒಳಗಿನ ಇನ್ನೊಂದು ರೂಮಿಗೆ ಹೋಗಿ ದುಡ್ಡೆಣಿಸಿ ನೋಟಿನ ಕಂತೆಗಳನ್ನು ಒಂದು ಕರಿಯ ಪ್ಲಾಸ್ಟಿಕ್ ಚೀಲದಂಥ ಪ್ಯಾಕೆಟ್ಟಿನೊಳಗೆ ಹಾಕಿಕೊಂಡು ತಂದು ಸುರೇಶನ ಕೈಗಿತ್ತು "ಎಣಿಸಿಕೊಳ್ಳಿ" ಎಂದು ಹೇಳಿ, ಹೊರಗೆ ಅಂಗಡಿಯ ಗಿರಾಕಿಗಳಿಗೆ ಗಮನ ಕೊಡಲು ಹೋದ.

ಸುರೇಶ ಪ್ಯಾಕೆಟ್ಟಿನ ಒಳಗಿರುವ ನೋಟಿನ ಕಂತೆಗಳನ್ನೊಮ್ಮೆ ನೋಡಿ ಮತ್ತೆ ಮುಚ್ಚಿ ಹೊರಡಲು ಎದ್ದ. ಗೌರಿಯ ತಲೆಯಲ್ಲಿ ಶೇಷಪ್ಪ ತೋರಿಸಿದ ಕೆಂಪು ಕಲ್ಲಿನ ಮೋಹಕ ರೂಪ ಇನ್ನೂ ಮತ್ತು ಹಿಡಿಸುವಂತೆ ಕಂಗೊಳಿಸುತ್ತಲೇ ಇತ್ತು. ಇಲ್ಲದಿದ್ದರೆ ಅವಳಾದರೂ ಶೇಷಪ್ಪ ಕೊಟ್ಟಿದ್ದನ್ನು ಕೇವಲ ದುಡ್ಡೆಣಿಸುವ ಚಪಲಕ್ಕಾದರೂ ಎಣಿಸುತ್ತ ಕುಳಿತುಕೊಳ್ಳುತ್ತಿದ್ದಳು.

ಸುರೇಶ, ಗೌರಿ ಇಬ್ಬರೂ ದೇವಪುರದ ಎಲ್ಲೋ ನಡೆಯುವ ಕಾಳವ್ಯವಹಾರಗಳ ಗೊಡವೆ ನಮಗೇಕೆ ಎಂದೇ ನಿರಾಸಕ್ತರಾಗಿದ್ದರು. ತಮ್ಮ ಏಲಕ್ಕಿಗೆ ಸಿಕ್ಕ ಅರುವತ್ತು ಸಾವಿರ ತಗೊಂಡು ಮನೆ ದಾರಿ ಹಿಡಿಯುವುದನ್ನಷ್ಟೆ ಅವರು ಚಿಂತಿಸಿದ್ದು. ಶೇಷಪ್ಪ ಇಷ್ಟು ಹೇಳಿದ ಮೇಲೂ ಅವರಿಗೆ ತಾವು ನುಗ್ಗಿರುವ ರಹಸ್ಯಮಯ ಚಕ್ರವ್ಯೂಹದ ಪರಿವೆಯೇ ಇರಲಿಲ್ಲ. ಜೀವನ್‌ಲಾಲ್ ಕೊಟ್ಟ ಚೆಕ್ಕನ್ನು ಸ್ಪಷ್ಟವಾಗಿ ನೋಡದೆ ಮೊದಲನೆ ತಪ್ಪು ಮಾಡಿದವರು ಶೇಷಪ್ಪ ಕೊಟ್ಟ ಹಣ ಎಣಿಸದೆ ಎರಡನೆಯ ತಪ್ಪು ಮಾಡಿದರು.

# ವಿಚಿತ್ರ ದರ್ಪಣ - ೧೭



ಸುರೇಶ ನೋಟಿನ ಪ್ಯಾಕೆಟ್ ಹಿಡಿದು ಗೌರಿಯೊಡನೆ ಹೊರಬಂದಾಗ ಶೇಷಪ್ಪ ಯಾರದೋ ಚೆಕ್ಕಿಗೆ ಬಟವಾಡೆ ಮಾಡುತ್ತಿರುವುದು ಕಾಣಿಸಿತು. "ನನ್ನದು ಎರಡು ಪರ್ಸೆಂಟ್ ಮುರ್ಕೊಂಡು ಕೊಟ್ಟಿದೀನಿ ಸುರೇಶಣ್ಣಾ" ಎಂದು ಶೇಷಪ್ಪ ಸುರೇಶನಿಗೆ ಹೇಳಿದ. ಸುರೇಶ ಮರುಮಾತಾಡದೆ ತಲೆಯಾಡಿಸುತ್ತ ಅಂಗಡಿ ಮೆಟ್ಟಿಲಿಳಿದ. ಇನ್ನು ಗೌರಿಯ ಷಾಪಿಂಗ್ ಶುರುವಾಗುತ್ತದಲ್ಲ ಎಂದು ಯೋಚಿಸುತ್ತ ಮಾನಸಿಕವಾಗಿ ಅದಕ್ಕೆ ತಯಾರಾಗುತ್ತ "ನಿನ್ನದು ಅದೇನೇನಿದೆ ಕೊಳ್ಳೋದಕ್ಕೆ ಬೇಗ ಕೊಡುಬಿಡೋಣ" ಎಂದು ಗೌರಿ ಕಡೆ ತಿರುಗಿ ಹೇಳಿದ.

ಶೇಷಪ್ಪನ ಅಂಗಡಿಯಿಂದ ನಾಲ್ಕು ಹೆಜ್ಜೆ ಬಂದಿದ್ದರಷ್ಟೆ! ಅಷ್ಟರಲ್ಲಿ "ಸುರೇಶಣ್ಣಾ" ಎಂದು ಶೇಷಪ್ಪ ಮತ್ತೆ ಕರೆಯುವುದು ಕೇಳಿಸಿತು. ಸುರೇಶ ಹೋದಾಗ "ಇಲ್ಲಿ ಹತ್ರ ಬನ್ನಿ" ಎಂದು ಹತ್ತಿರಕ್ಕೆ ಕರೆದು " ಒಂದು ಬೀಡ ಹಾಕಿಕೊಂಡು ಹೋಗಿ" ಎಂದು ಹೇಳುತ್ತ ಬೀಡ ಎಲೆ ತೆಗೆದು ಅದಕ್ಕೆ ಸುಣ್ಣ ಸವರತೊಡಗಿದ. ಈ ಸಾರಿ ಶೇಷಪ್ಪನ ಚರ್ಯೆ ಸುರೇಶನಿಗೆ ವಿಚಿತ್ರವಾಗಿ ಕಂಡರೂ ಶೇಷಪ್ಪ ಏನನ್ನೋ ಹೇಳಲು ಕರೆದು ಈ ನಾಟಕ ಆಡುತ್ತಿದ್ದಾನೆ ಎಂದು ಸ್ಪಷ್ಟವಾಗಿ ಅನ್ನಿಸಿತು. ಅವನ ಅಕ್ಕಪಕ್ಕ ಯಾರೂ ಇರಲಿಲ್ಲ. ಆದರೂ ಹೇಳಬೇಕಾದುದನ್ನು ಹೇಳಲು ಯಾಕೆ ಧೇನಿಸುತ್ತಿದ್ದಾನೆಂದು ತಿಳಿಯಲಿಲ್ಲ. ಬೀಡ ಕಟ್ಟುತ್ತ ಮುಖ ಹತ್ತಿರಕ್ಕೆ ತಂದು "ಸುರೇಶಣ್ಣಾ, ಹಿಂದಕ್ಕೆ ತಿರುಗಿ ನೋಡಬೇಡಿ! ನನ್ನ ಬೆನ್ನ ಹಿಂದೆ ದೊಡ್ಡ ಕನ್ನಡಿ ಇದೆಯಲ್ಲ ಅದರಲ್ಲಿ ನೋಡಿ, ನಾನು ಹೇಳ್ತೀನೆ" ಎಂದು ತಲೆ ಬಗ್ಗಿಸಿಕೊಂಡು ಬೀಡ ಕಟ್ಟುತ್ತಲೇ ಹೇಳಿದ. ಒಂದು ನಿಮಿಷ ಬಿಟ್ಟುಕೊಂಡು ಬಾಯಲ್ಲಿದ್ದ ಎಲೆ ಅಡಿಕೆ ಉಗಿಯುತ್ತಲೇ ರಸ್ತೆ ಕಡೆಗೊಮ್ಮೆ ಓರೆ ನೋಟ ಬೀರಿ

‘‘ನೋಡ್ತಿದೀರ?’’ ಎಂದು ಬೀಡಾಕ್ಕೆ ಗುಲ್ಕನ್ ಹಾಕುತ್ತ ಕೇಳಿದ.

ಸುರೇಶ ಶೇಷಪ್ಪನ ಬೆನ್ನಹಿಂದೆ ಇದ್ದ ದೊಡ್ಡ ನಿಲುವುಗನ್ನಡಿಯನ್ನು ನೋಡಿದ. ಅವನ ಅಂಗಡಿಯಗಲಕ್ಕೂ ಇದ್ದ ಆ ಕನ್ನಡಿ ಅಂಗಡಿ ಎದುರಿದ್ದ ಸಮಸ್ತವನ್ನೂ ಬಿಂಬಿಸಿತ್ತು. ಅದನ್ನೆ ಕೊಂಚಹೊತ್ತು ನೋಡಿದರೆ ನಿಧಾನವಾಗಿ ನಾವು ಅಂಗಡಿಯೊಳಗಿದ್ದೇವೋ ಹೊರಗಿದ್ದೇವೋ ಎನ್ನುವ ಭ್ರಮೆ ಶುರುವಾಗುತ್ತಿತ್ತು. ಆದರೆ ಆ ಕನ್ನಡಿಯ ದೋಷವೋ ಏನೋ! ಅದರಲ್ಲಿ ಚಲಿಸುವ ಬಿಂಬಗಳು ಅತ್ತಿತ್ತ ಸರಿದಂತೆ ರಬ್ಬರ್ ವಸ್ತುಗಳ ರೀತಿ ಉದ್ದವಾಗುತ್ತ ಒಮ್ಮೊಮ್ಮೆ ಕುಗ್ಗುತ್ತ ಒಮ್ಮೊಮ್ಮೆ ಇನ್ನೇನು ಹಿಸಿದೇಹೋಗುವಂತೆ ಅಗಲವಾಗುತ್ತ ಕನ್ನಡಿಯ ಯಾವುದೋ ಒಂದು ಭಾಗವನ್ನು ದಾಟುತ್ತಲೂ ಮತ್ತೆ ಯಥಾ ಸ್ಥಿತಿಗೆ ಬರುತ್ತಿದ್ದವು. ರಸ್ತೆಯಲ್ಲಿ ಕಾಣುತ್ತಿದ್ದ ಹಲವಾರು ಫೋನ್ ಕಂಬಗಳಲ್ಲಿ ಒಂದೆರಡು ಬಳ್ಳಿಯಂತೆ ಬಾಗಿದ್ದವು. ತಂತಿಗಳು ನಡುನಡುವೆ ಹಾವಿನ ಮಾದರಿಯಲ್ಲಿ ಹರಿದಿದ್ದವು. ಸುರೇಶ ಕನ್ನಡಿಯಲ್ಲಿ ನೋಡಿದಾಗ ರಸ್ತೆಯಲ್ಲಿ ಬರುತ್ತಿದ್ದ ಎಮ್ಮೆಯೊಂದು ಮುಂದುವರಿಯುತ್ತಿದ್ದಂತೆಯೇ ಹಠಾತ್ತಾಗಿ ಭೂತಾಕಾರವಾದ ಆನೆಯಂತಾಗಿ ಮತ್ತೆ ಎರಡು ಹೆಜ್ಜೆಯೊಳಗೆ ನಾಯಿಯಷ್ಟು ಚಿಕ್ಕದಾಗಿ ಮತ್ತೆ ಎರಡು ಹೆಜ್ಜೆಗೆ ಸಾಧಾರಣ ಎಮ್ಮೆಯಾಗಿ ಮುಂದುವರಿದು ಕನ್ನಡಿಯ ಫ್ರೇಮನ್ನು ದಾಟಿ ಹೋಯ್ತು. ಸುರೇಶನಿಗೆ ನಿಜವಾಗಿಯೂ ಆ ಕನ್ನಡಿಯ ವಿಶ್ವದ ಬಗ್ಗೆ ಕುತೂಹಲ ಹುಟ್ಟಿತು. ಕನ್ನಡಿ ನಿಜವಾಗಿಯೂ ಅವನಿಗೆ ದೇವಪುರದ ಅಂತರಂಗದ ವಿಶ್ವರೂಪ ಎನ್ನಿಸಿತು.

‘‘ನೋಡ್ತಿದೀನಿ ಮಾರಾಯ, ಖಾಲಿ ರಸ್ತೆ ಕಾಣ್ತದೆ’’ ಎಂದು ಸುರೇಶ ಕನ್ನಡಿ ಕಡೆಗೆ ನೋಡುತ್ತ ಹೇಳಿದ.

‘‘ಆ ಫೋನುಕಂಬಕ್ಕೆ ವಾಲಿಕೊಂಡು ಇಬ್ಬರು ನಿಂತಿದಾರೆ ನೋಡಿ’’

‘‘ಹ್ಞೂ ನೋಡಿದೆ.’’

‘‘ಕುತ್ತಿಗೇಗೆ ಕೆಂಪು ಮಫ್ಲರು ಸುತ್ತಿಕೊಂಡು ನಿಂತಿದಾನಲ್ಲ. ಅವನ್ನ ಹಾಗೇ ಅವನ ಪಕ್ಕದಲ್ಲಿರೋನನ್ನ ಸರಿಯಾಗಿ ನೋಡಿಕೊಳ್ಳಿ, ಪಕ್ಕಾ ಖೇಡಿಗಳು ಅವರು.’’

‘‘ಥು, ಈ ದೇವಪುರದಲ್ಲಿ ನೀನು ಕನ್ನಡಿ ಯಾವ ಕಡೆಗೆ ತಿರುಗಿಸಿದ್ರೂ ಖೇಡಿಗಳೇ ಕಣ್ಣಿಗೆ ಬೀಳ್ತಾರೆ ಶೇಷಪ್ಪ. ಅದನ್ನೇನು ಅಂತ ದೊಡ್ಡದಾಗಿ ನೋಡೋದಕ್ಕೆ ಹೇಳ್ತಿದೀಯ ನನಗೆ.’’

‘‘ಇದರಲ್ಲೆಲ್ಲ ನೀವು ಕುಶಾಲು ಮಾಡೋದಲ್ಲ ಸುರೇಶಣ್ಣ. ಬೆಳಗಿನಿಂದ ಮೂರ್ನಾಕು ಸಾರಿ ಅವನು ಇಲ್ಲೇ ಸುತ್ತಾಡಿದಾನೆ! ಹಂಗಂದ ಮೇಲೆ ಅವನು ದೇಶಾವರಿ ದಾರಿ ಹೋಕ ಮಾತ್ರ ಅಲ್ಲ ತಿಳ್ಕಳಿ. ಅವನಿಗೆ ಏನೋ ಸುಳಿವು ಸಿಕ್ಕಿದೆ.’’

‘‘ಸರಿಯಪ್ಪ. ನನ್ನ ಈಗೇನ್ಮಾಡು ಅಂತಿ’’

‘‘ಏನೂ ಮಾಡಬೇಡ್ರಿ. ಅವನೇನಾದ್ರು ನಿಮ್ಮನ್ನ ಹಿಂಬಾಲಿಸಿಕೊಂಡು ಬಂದರೆ ನನಗೊಂದು ಮಾತು ತಿಳಿಸಿಬಿಡಿ.’’

"ಏನು ಶೇಷಪ್ಪ ಸುಮ್ಮನೆ ಹಾದಿಯಲ್ಲಿ ಹೋಗುವವರನ್ನೆಲ್ಲ ತೋರಿಸಿ ಯಾಕೆ ಕಂಡಕಂಡವರ ಮೇಲೆಲ್ಲ ಗುಮಾನಿ ಮಾಡುವ ಹಾಗೆ ಮಾಡ್ತಿದೀಯ ಮಾರಾಯ! ಸುಮ್ಮನೆ ನಮ್ಮ ಪಾಡಿಗೆ ನಾವು ನಮ್ಮ ಕೆಲಸ ನೋಡೋಣ. ಅಷ್ಟರ ಮೇಲೆ ಹೋದರೆ ಹೋಗೋದು ನಮ್ಮ ಕೈಯ್ಯಲ್ಲಿರೋ ದುಡ್ಡು ತಾನೆ! ಪ್ರಾಣ ಅಲ್ವಲ್ಲ?"

"ನಿಮ್ಮ ಧೈರ್ಯಕ್ಕೆ ಮೆಚ್ಚಿದೆ. ದೇವರು ಒಳ್ಳೇದು ಮಾಡಲಿ ನಿಮಗೆ. ಆ ಹೆಣ್ಮಗಳನ್ನ ಬೇರೆ ಕರ್‍ಕೊಂಡು ಬಂದಿದೀರ! ಹಂಗೆಲ್ಲ ಹುಂಬಾಟ ಮಾಡಕ್ಕೆ ಹೋಗ ಬೇಡ್ರಿ. ಹುಷಾರಾಗಿರಿ! ಒಬ್ಬರು ಬಟವಾಡೆ ತಗೊಂಡು ಹೋಗ್ತಿದ್ದ ರೈಟರನ್ನ ಖೂನಿ ಮಾಡಿದವರು ಇವರು. ಎಷ್ಟು ರೂಪಾಯಿಗೆ ಗೊತ್ತ? ಖಾಲಿ ಇನ್ನೂರು ರೂಪಾಯಿಗೆ!"

ಸುರೇಶ ಅಲ್ಲಿಂದ ಹೊರಡುತ್ತ ಕಂಬಕ್ಕೆ ವಾಲಿಕೊಂಡು ನಿಂತವನನ್ನು ಕೊನೆಯ ಬಾರಿ ಸರಿಯಾಗಿ ನೋಡಲು ಮತ್ತೊಮ್ಮೆ ಕನ್ನಡಿ ಕಡೆಗೆ ದಿಟ್ಟಿಸಿದಾಗ ಮತ್ತೊಂದು ಮುಖ ಅವನ ಬೆನ್ನಿಗೆ ಕೊಂಚ ಹತ್ತಿರದಲ್ಲಿ ಕಂಡು ಅವನು ಆಶ್ಚರ್ಯಚಕಿತನಾಗಿ ಹಿಂದಕ್ಕೆ ತಿರುಗಿ ನೋಡಿದವನೇ "ಹಲ್ಲೋ, ಇದೇನಯ್ಯ ಇಲ್ಲೀ!" ಎಂದು ಆಶ್ಚರ್ಯೋದ್ಗಾರ ತೆಗೆದ.

ಸುರೇಶನ ಬೆನ್ನಹಿಂದೆ ನಿಂತಿದ್ದವನು ಸುರೇಶನ ಮೈಸೂರಿನ ಸಹಪಾಠಿ ನಾಗಮಂಗಲದ ರಾಜಪ್ಪ!

ಯಾವುದರಲ್ಲೂ ಸೀಟು ಸಿಗದಿದ್ದರಿಂದ ಕನ್ನಡಸಾಹಿತ್ಯ ಓದಲು ಬಂದಿದ್ದ ರಾಜಪ್ಪ ನಾಲ್ಕುವರ್ಷ ಸುರೇಶನ ಸಹಪಾಠಿಯಾಗಿ ಮೈಸೂರಿನಲ್ಲಿ ಓದಿದ್ದ. ಆದರೆ ಅನೇಕ ವರ್ಷಗಳ ತರುವಾಯ, ಎಲ್ಲಾಬಿಟ್ಟು ದೇವಪುರದ ಬೀದಿಯಲ್ಲಿ ಅವನ್ನು ಸಂಧಿಸುತ್ತೇನೆಂದು ಕನಸು ಮನಸಿನಲ್ಲಿಯೂ ಸುರೇಶ ನಿರೀಕ್ಷಿಸಿರಲಿಲ್ಲ. ಆದ್ದರಿಂದಲೇ ಅವನ ಬಾಯಿಂದ ಆಶ್ಚರ್ಯೋದ್ಗಾರ ಹೊಮ್ಮಿದ್ದು. ರಾಜಪ್ಪನಿಗಂತೂ ಸುರೇಶನನ್ನು ನೋಡಿ ಶಾಕ್ ಹೊಡೆದಹಾಗಾಯ್ತು. ಇಬ್ಬರೂ ಕೈ ಕುಲುಕಿಕೊಂಡು ಯೋಗಕ್ಷೇಮ ವಿಚಾರಿಸಿಕೊಂಡ ಮೇಲೆ ಸುರೇಶ ಗೌರಿಯನ್ನು "ನನ್ನ ಹೆಂಡತಿ" ಎಂದು ಪರಿಚಯ ಮಾಡಿಸಿದ.

ಅದನ್ನು ಕೇಳಿ ರಾಜಪ್ಪ ಇನ್ನಷ್ಟು ಆಶ್ಚರ್ಯಚಕಿತನಾಗಿ "ಅಲ್ಲಯ್ಯ, ಕ್ರಾಂತಿ ಮಾಡ್ತೀನಿ ಅಂತ ನಮಗೆಲ್ಲ ಹೇಳಿ ನಾಪತ್ತೆಯಾದವನು ಇಲ್ಲಿ ನೋಡಿದರೆ ಮದುವೆ ಮಾಡಿಕೊಂಡು ಠಳಾಯಿಸುತ್ತ ಇದಿಯಲ್ಲ! ಇದೇನ ನೀನು ಮಾಡಿದ್ದು ಕ್ರಾಂತಿ? ನಿನ್ನ ಮಾತು ಕಟ್ಟಿಕೊಂಡು ನಾನೇನಾದರು ಓದು ಬಿಟ್ಟಿದ್ದರೆ ಎಂಥಾ ಫೂಲಾಗುತ್ತಿದ್ದೆ! ಆ ಮುಠ್ಠಾಳ ಗಂಗೂಲಿ ಮಾತಿಗೆ ನಾನು ಮರುಳಾಗಿ ಹಾಳಾಗಿ ಹೋಗ್ತಿದ್ದೆ. ಸಧ್ಯ ಬಚಾವಾದೆ. ಮಕ್ಕಳೆಷ್ಟು ನಿಂಗೆ?" ಎಂದು ಕೇಳಿದ.

"ಮಕ್ಕಳು ಇನ್ನೂ ಇಲ್ಲ ಕಣಯ್ಯ" ಎಂದು ನಾಚುತ್ತಿದ್ದ ಗೌರಿ ಕಡೆಗೆ ನೋಡುತ್ತ ಸುರೇಶ ಉತ್ತರಿಸಿ "ಅಲ್ಲಯ್ಯ ನಿನ್ನ ಹಾಳ್ಮಾಡಕ್ಕೆ ಕುದುರೆ ರೇಸು ಇರ್‍ಬೇಕಾದರೆ ಗಂಗೂಲಿ

ಯಾಕೆ ಬೇಕೋ?'' ಎಂದ.

''ಏನಯ್ಯ ನಡುಬೀದೀಲಿ ನನ್ನ ಮರ್ಯಾದೆ ತೆಗೀಬೇಕಂತ ಇರೋಹಾಗಿದೆ ನೀನು! ಅದಿರ್ಲಿ, ಯಾಕಯ್ಯ ಮಕ್ಳಿಲ್ಲ ಅಂತೀಯ? ಏನ್ಮಾಡ್ತಾ ಇದ್ದೆ ಇಷ್ಟು ದಿನ? ಅದ್ಯಾಕೆ ಅದೊಂದು ಬಾಕಿ ಉಳಿಸ್ಕೊಂಡಿದೀಯ? ಎಷ್ಟು ದಿನ ಆಯ್ತು ಮದುವೆಯಾಗಿ?'' ಎಂದು ದಾರಿಮಧ್ಯದಲ್ಲೇ ನಿಂತು ಪಕ್ಕಾ ದೇಶಾವರಿ ಧಾಟಿಯಲ್ಲಿ ಸುರೇಶನ ಇತ್ಯೋಪರಿಗಳನ್ನೆಲ್ಲ ಒಂದೊಂದಾಗಿ ಕೇಳಿದ.

ರಾಜಪ್ಪ ಹಾಳಾಗಿದ್ದು ಕುದುರೆ ಜೂಜಿನಿಂದ. ಸದಾ ಕುದುರೆ ಬಾಲ ಹಿಡಿದು ಕಲ್ಕತ್ತ, ಬೊಂಬಾಯಿ, ಮದ್ರಾಸು, ಊಟಿ ಎಂದು ವಿದ್ಯಾರ್ಥಿ ದೆಸೆಯಲ್ಲೇ ಎಲ್ಲೆಲ್ಲಿ ಜೂಜು ನಡೆಯುತ್ತೋ ಅಲ್ಲಿಗೆಲ್ಲಾ ತಿರುಗುತ್ತಿದ್ದ. ಕುದುರೆ ಜಾತಕಗಳ ನೋಟ್ ಬುಕ್ ಒಂದು ಸದಾ ಅವನ ಜೇಬಿನಲ್ಲಿರುತ್ತಿತ್ತು. ಸುರೇಶನ ಕ್ಲಾಸ್‌ಮೇಟ್ ಆಗಿದ್ದಲ್ಲದೆ ಅವನು ಕೆಲವುಕಾಲ ಸುರೇಶನ ರೂಂಮೇಟ್ ಸಹ ಆಗಿ ಹಾಸ್ಟೆಲಿನಲ್ಲಿದ್ದ. ಹಾಸ್ಟೆಲಿಗೆಂದು ಕಟ್ಟಲು ತರಿಸಿಕೊಂಡ ಹಣವನ್ನೆಲ್ಲ ಅವನು ಕುದುರೆ ಬಾಲಕ್ಕೆ ಕಟ್ಟಿ, ಹಾಸ್ಟೆಲು ಬಿಲ್ ಕಟ್ಟಲಾಗದೆ ಅವನನ್ನು ಹಾಸ್ಟೆಲಿನಿಂದ ಹೊರಹಾಕಬೇಕಾದ ಪರಿಸ್ಥಿತಿ ಬಂದಾಗಲೆಲ್ಲ ಎಷ್ಟೋ ಸಾರಿ ಸುರೇಶನೇ ಬಿಲ್ ಕಟ್ಟಿ ಅವನನ್ನು ರಕ್ಷಿಸಿದ್ದ. ಒಂದಲ್ಲ ಒಂದುದಿನ ಜಾಕ್‌ಪಾಟ್ ಹೊಡೆದು ಕೋಟ್ಯಾಧಿಪತಿಯಾಗುತ್ತೇನೆಂದು ದೃಢವಾಗಿ ನಂಬಿದ್ದ ಅವನನ್ನು ಈ ಜೂಜಿನ ಚಾಳಿಯಿಂದ ವಿಮುಖಗೊಳಿಸಲು ಮೇಷ್ಟರುಗಳು ಪ್ರೊಫೆಸರ್‌ಗಳು ಯಾರಿಂದಲೂ ಸಾಧ್ಯವಾಗಲಿಲ್ಲ. ಮಿಕ್ಕೆಲ್ಲ ವಿಷಯಗಳಲ್ಲೂ ಒಳ್ಳೆಯವನಾಗಿದ್ದ ಇವನ ಮೇಲೆ ಯಾರಿಗೂ ಯಾವ ದ್ವೇಷವೂ ಇರಲಿಲ್ಲ. ಹಾಗಾಗಿ ಇವನ ದುರವಸ್ಥೆ ನೋಡಲಾರದೆ ಪ್ರೊಫೆಸರು ಇವನಿಗೆ ಓರಿಯಂಟಲ್ ರಿಸರ್ಚ ಇನ್‌ಸ್ಟಿಟ್ಯೂಟಿನಲ್ಲಿ ರಿಸರ್ಚ ಅಸಿಸ್ಟೆಂಟ್ ಕೆಲಸ ಕೊಡಿಸಿದ್ದರು. ಓಲೆಗರಿಯ ಕಡತಗಳ ನಡುವೆ ಯಾವಾಗಲೂ ಕುಳಿತಿರಬೇಕಾದ ರಾಜಪ್ಪ ಅದೇನು ರಿಸರ್ಚ ಮಾಡುತ್ತಿದ್ದನೋ ದೇವರೇ ಬಲ್ಲ. ಅಲ್ಲಿದ್ದಾಗಲೂ ಕುದುರೆ ಜೂಜಿನ ಚಾಳಿ ಅವನನ್ನು ಬಿಟ್ಟಿರಲಿಲ್ಲವೆಂದು ಬಲ್ಲವರು ಹೇಳುತ್ತಿದ್ದರು.

ಸುರೇಶ ತನ್ನ ಇತ್ಯೋಪರಿಯನ್ನು ಸಂಕ್ಷೇಪವಾಗಿ ಹೇಳಿದನಂತರ ರಾಜಪ್ಪ ''ನೋಡಯ್ಯ, ನಾವೆಲ್ಲ ನಿನ್ನ ಸಮಾಚಾರವೇ ಇಲ್ಲದ್ದು ನೋಡಿ ನಿನ್ನ ಗುರು ಗಂಗೂಲಿ ಮಹಾತ್ಮನ್ನ ಕೇಳಿದೆವು. ಆ ಕ್ರ್ಯಾಕು, ತಡೀರಿ ತಡೀರಿ, ಹಂಗೇ ಪೇಪರ್ ನೋಡ್ತಿರಿ, ಗೊತ್ತಾಗತ್ತೆ. ಬ್ಯಾಂಗಲೂರ್ ಮ್ಯಾಂಗಲೂರ್ ರೈಲ್ವೆ ಬ್ರಿಜ್ಜು ಬ್ಲಾಸ್ಟ್ ಆಗಲಿ, ಆಗ ಗೊತ್ತಾಗತ್ತೆ ಅವನೆಲ್ಲಿದಾನೆ ಅಂತ ಎಂದು ಕೇಳಿದಾಗೆಲ್ಲ ಉಡಾಫೆ ಹೊಡೀತಿದ್ದ. ಎಷ್ಟು ದಿನ ಆದರೂ ಯಾವ ಬ್ರಿಜ್ಜೂ ಬ್ಲಾಸ್ಟ್ ಆಗಲಿಲ್ಲ. ನಿನ್ನ ಪತ್ತೇನೂ ಗೊತ್ತಾಗಲಿಲ್ಲ. ಎಮರ್ಜನ್ಸಿ ತೆಗೆದ ಮೇಲೂ ನಿನ್ನ ಪತ್ತೆ ಇಲ್ಲದಿರೋದು ನೋಡಿ ಆ ಮುಠ್ಠಾಳ ಗಂಗೂಲಿಯ ಮಾತು ಕಟ್ಟಿಕೊಂಡು ಏನೋ ಮಾಡಕ್ಕೆ ಹೋಗಿ ನೀನು ಸತ್ತೇ ಹೋಗಿದೀಯ ಅಂತ ತಿಳಿದೆವು ಕಣಯ್ಯ. ಅದಕ್ಕೇ ನೀನು ಹಲ್ಲೋ ಅಂದಾಗ ಒಂದು

ಕ್ಷಣ ನೀನೋ, ನಿನ್ನ ದೇವ್ವಾನೋ ಅಂತ ಅನುಮಾನ ಆಯ್ತು ನನಗೆ. ಆದರೆ ಬದುಕಿದೀಯ, ಮದುವೇನೂ ಆಗಿದೀಯ, ಮಕ್ಳೂ ಮಾಡೋದ್ರಲ್ಲಿದೀಯ ಅಂತ ತಿಳಿದು ಸಂತೋಷ ಆಯ್ತು ಕಣಯ್ಯ'' ಎಂದು ಹೇಳಿ ಗೌರಿಕಡೆಗೆ ತಿರುಗಿ ''ಏನು ಮೇಡಮ್! ನಾ ಹೇಳ್ತೋದು ಕರೆಕ್ಟ್ ತಾನೆ? ಆಮಯ್ ರೈಟ್'' ಎಂದು ಪ್ರಶ್ನೆ ಕೇಳಿ ಹಲ್ಲು ಬಿಟ್ಟ.

ಏನೋ ಯೋಚನೆ ಮಾಡುತ್ತ ನಿಂತಿದ್ದ ಗೌರಿ ಯಾವುದು ರೈಟೋ ಯಾವುದು ತಪ್ಪೋ ಹೇಳಲು ಗೊತ್ತಾಗದೆ ಸುಮ್ಮನೆ ನಸುನಕ್ಕಳು. ಅವಳಿಗೆ ಶಾಪಿಂಗಿಗೆ ಹೊತ್ತಾಗುತ್ತದೆಂದು ಮೆಲ್ಲಗೆ ಅಸಮಾಧಾನ ಪ್ರಾರಂಭವಾಗಿತ್ತು. ಸುರೇಶನಿಗೆ ರಾಜಪ್ಪನನ್ನು ಎಷ್ಟೋ ದಿನಗಳ ತರುವಾಯ ಸಂಧಿಸಿದ್ದಕ್ಕೆ ಸಂತೋಷವಾಗಿದ್ದೇನೋ ನಿಜ. ಆದರೆ ಅವರಿಬ್ಬರೂ ಮಾತಿನಲ್ಲಿ ವ್ಯಕ್ತಪಡಿಸುತ್ತಿದ್ದಷ್ಟು ಪರಮಾಪ್ತ ಮಿತ್ರರೇನೂ ಆಗಿರಲಿಲ್ಲ. ಅವರ ಸ್ನೇಹ ತೀವ್ರತೆಯ ಅರ್ಧಭಾಗ ಅವರಿಗವರೇ ಆರೋಪಿಸಿಕೊಂಡುದಾಗಿತ್ತು. ರಾಜಪ್ಪ ಸುರೇಶನ ವಿದ್ಯಾರ್ಥಿ ಜೀವನದ ನೆನಪುಗಳನ್ನು ಸಾಕಷ್ಟು ಕೊರೆದ. ಇಡೀ ಯೂನಿವರ್ಸಿಟಿಯಲ್ಲಿ ಇವನು ಪ್ರಚಂಡ ಬುದ್ಧಿವಂತನಾಗಿದ್ದನ್ನು ನೆನೆದು, ಹಾಳು ಗಂಗೂಲಿ ಉಪದೇಶದಿಂದ ಸುರೇಶ ಈ ಕೊಂಪೆಗೆ ಬಂದು ಸಿಕ್ಕಿಕೊಂಡಿರುವುದನ್ನು ನೋಡಿ ಗಂಗೂಲಿಯನ್ನು ಶಪಿಸಿದ. ''ನೀನು ಬ್ರಿಲಿಯಂಟ್ ಆಗಿದ್ರೂ ನಿನಗೆ ಕಾಮನ್ ಸೆನ್ಸ್ ಇಲ್ಲ ಕಣಯ್ಯ. ಯಾಕೇ ಅನ್ನು, ಆ ಹೆದರುಪುಕ್ಕಲ ದಡ್ಡ ಗಂಗೂಲಿ ಮಾತಿಗೆ ಮರುಳಾಗಿದ್ದು ಒಂದು, ನನಗೆ ನಿನ್ನ ಬುದ್ಧಿ ಉಪಯೋಗಿಸಿ ರೇಸಲ್ಲಿ ಗೆಲ್ಲೋದಕ್ಕೆ ಸಹಾಯ ಮಾಡದ್ದಿದ್ದು ಇನ್ನೊಂದು, ಇವೆರಡೂ ನಿನಗೆ ಕಾಮನ್ ಸೆನ್ಸ್ ಇಲ್ಲ ಅನ್ನೋದಕ್ಕೆ ಸಾಕ್ಷಿ'' ಎಂದು ಸುರೇಶನಿಗೆ ಬಯ್ದ. ಗೌರಿ ಅವನ ವಾದವನ್ನು ಸಂಪೂರ್ಣ ಅನುಮೋದಿಸಿದ್ದನ್ನು ನೋಡಿ ಮತ್ತಷ್ಟು ಉತ್ಸಾಹದಿಂದ ಸಧ್ಯದಲ್ಲೇ ಮನೆಗೆ ಬಂದು ಸುರೇಶನ ಕತೆ ಎಲ್ಲವನ್ನೂ ತಿಳಿಸುತ್ತೇನೆಂದು ಗೌರಿಗೆ ಆಶ್ವಾಸನೆ ಕೊಟ್ಟ.

''ಇಲ್ಲಿವರೆಗೆ ಬಂದಿದ್ದೇನು ರಾಜಪ್ಪ?'' ಎಂದು ಸುರೇಶ ಕೇಳಿದ.

''ಟು ಬಿ ಫ್ರಾಂಕ್ ವಿತ್ ಯು, ಒಂದು ಜಾಕ್‌ಪಾಟ್ ಹೊಡೆದು ಇಲ್ಲಿಗೆ ಬಂದಿರೋದು ಕಣ್ಣಯ್ಯ.''

''ನಿನ್ನ ರೇಸ್ ವ್ಯವಹಾರ ಇನ್ನೂ ಮುಗಿದಿಲ್ಲ. ಜಾಕ್‌ಪಾಟ್ ಹೊಡೆಯೋವರೆಗೂ ಬಿಡಲಿಲ್ಲ!''

''ರೇಸು ತಂಟೆ ಬಿಟ್ಟು ತುಂಬ ದಿನ ಆಯ್ತು ಸುರೇಶ. ಅದರ ದೆಸೆಯಿಂದ ಕಂಪ್ಲೀಟು ಬೀದಿಗೆ ಬಿದ್ದು ಸೂಯಿಸೈಡ್ ಮಾಡ್ಕೊಳ್ಳೋವರೆಗೆ ಹೋಗಿಬಿಟ್ಟಿದ್ದೆ. ಇದು ಬೇರೆ ಜಾಕ್‌ಪಾಟು ಸುರೇಶ. ಒಂದು ಓಬೀರಾಯನ ಕಾಲದ ಕಡತ ಎಡಿಟ್ ಮಾಡಿ ಕೊಡೋದಕ್ಕೆ ಯಾರೋ ಕೇಳಿದರು. ಪಿಯುಸಿಗೋ ಎಸ್ಸೆಲ್ಸಿಗೋ ಪಠ್ಯ ಪುಸ್ತಕ ಮಾಡೋದಕ್ಕಂತೆ! ಅದ್ಯಾವುದಕ್ಕೋ ನನಗೆ ಸರಿಯಾಗಿ ಗೊತ್ತಿಲ್ಲ. ಒಟ್ನಲ್ಲಿ ನನಗೆ ಒಂದೂವರೆ ಲಕ್ಷ ಕೊಡ್ತಾರಂತೆ ಎಲ್ಲ ರೆಡೀ ಮಾಡಿ ಕೊಟ್ಟರೆ. ಎಲ್ಲಾ ಕಳಕೊಂಡು

ಭಿಕಾರಿ ಆದಮೇಲೆ ಏನೋ ದೇವರು ಕಣ್ಣು ಬಿಟ್ಟು ನೋಡಿದ ಕಣಯ್ಯ. ಗಾಡ್ ಈಸ್ ಗ್ರೇಟ್.''

''ಹಂಗಾದರೆ ಹೊಡೆದೆ ಒಂದು ಚಾನ್ಸು! ಅದಿರ್ಲಿ ಅದಕ್ಕೆ ಈ ಊರಿಗೆ ಯಾಕೆ ಬರಬೇಕಾಯ್ತು.''

''ಅಯ್ಯೋ, ಏನು ಚಾನ್ಸೋ ಏನೋ! ಆ ಕಡತದ ಮ್ಯಾನುಸ್ಕ್ರಿಪ್ಟು ಒಂದು ಹರುಕಲು ಚಿಂದಿ! ದುಡ್ಡಿನ ಆಸೆಗೆ ಒಪ್ಪಿಕೊಳ್ಳೋದೇನೋ ಒಪ್ಪಿಕೊಂಡೆ. ಈಗ ನೋಡಿದರೆ ಸಖತ್ತು ಕೆಲಸ ಹಿಡಿಯೋಹಂಗೆ ಕಾಣ್ತದೆ. ಬೈದಿಬೈ ನಿನಗದನ್ನೆಲ್ಲ ನಿಧಾನಕ್ಕೆ ಹೇಳ್ತೀನಿ. ನಿನ್ನ ಹತ್ತಿರ ಎಂತಿದ್ರೂ ನಾನು ಅದರ ಬಗ್ಗೆ ಡಿಸ್ಕಸ್ ಮಾಡೋದಕ್ಕೆ ಬರಲೇ ಬೇಕಾಗುತ್ತೆ. ಈಗ ನಿನ್ನ ಅಡ್ರಸ್ ಕೊಡು'' ಎಂದು ಹೇಳಿದ ರಾಜಪ್ಪ ಅಡ್ರಸ್ ತಗೊಂಡು ದಾರಿಯಲ್ಲಿ ಎದುರಾದಷ್ಟೆ ಹಠಾತ್ತಾಗಿ ನಿರ್ಗಮಿಸಿಬಿಟ್ಟ.

ರಾಜಪ್ಪನಿಗೆ ಬೈಬೈ ಹೈಳಿ ಅವನು ನಿರ್ಗಮಿಸಿದನಂತರ ಗೌರಿ ''ಇವತ್ತು ಹೊರಟಿದ್ದ ಗಳಿಗೆ ಸರಿ ಇಲ್ಲ ಕಣ್ರಿ'' ಎಂದಳು.

''ಯಾಕೆ ಸರಿ ಇಲ್ಲ. ಹೋದಸಾರಿ ಮುನ್ನೂರಕ್ಕೆ ಕೊಟ್ಟಿದ್ದ ಏಲಕ್ಕಿ ಈ ಸಾರಿ ಸಾವಿರಕ್ಕೆ ಹೋಗಿದೆ! ಕೈಯ್ಯಲ್ಲಿ ಅರವತ್ತು ಸಾವಿರ ಇಟ್ಕೊಂಡು, ನಿನ್ನ ಷಾಪಿಂಗಿಗೆ ತೊಂದರೆ ಆಯ್ತಂತ ಗಳಿಗೆ ಸರಿಯಿಲ್ಲ ಅಂದರೆ ಹ್ಯಾಗೆ?'' ಎಂದ ಸುರೇಶ ''ಸ್ನ್ಯಾಕ್ ಬಾರಿನಲ್ಲಿ ಹೊಟ್ಟೆಗೆ ಒಂಚೂರು ಉಪ್ಪಿಟ್ಟು ಹಾಕಿಕೊಂಡು ಷಾಪಿಂಗು ನೋಡೋಣ ನಡಿ'' ಎಂದ.

''ಅರುವತ್ತು ಸಾವಿರ ಹ್ಯಾಗ್ರಿ? ಶೇಷಪ್ಪನ ಕಮಿಷನ್ ಕಳದ್ರೆ ಐವತ್ತೆಂಟು ಸಾವಿರದ ಎಂಟುನೂರಲ್ಲವ?''

''ಸ್ನ್ಯಾಕ್ ಬಾರಿನಲ್ಲಿ ಕೂತುಕೊಂಡು ಅವೆಲ್ಲ ಲೆಕ್ಕ ಮಾಡಿ ಎಣಿಸಿಕೋ. ಬೀದಿಯಲ್ಲಿ ದುಡ್ಡು ತೆಗೆದು ಎಣಿಸುತ್ತ ಕೂರಬೇಡ'' ಎಂದ ಸುರೇಶ.

ಇಬ್ಬರೂ ತಮ್ಮ ಬಳಿ ಇರುವುದು ಕದ್ದು ತಂದ ದುಡ್ಡು ಎನ್ನುವಂತೆ, ಎಣಿಸಲು ಯಾರೂ ಇಲ್ಲದ ಏಕಾಂತವನ್ನು ಹುಡುಕಿಕೊಂಡು ಸ್ನ್ಯಾಕ್ ಬಾರಿನ ಕಡೆಗೆ ಹೋದರು.

* * *

ಸ್ನ್ಯಾಕ್ ಬಾರಿನ ಫ್ಯಾಮಿಲಿ ರೂಮಿನಲ್ಲಿ ಕುಳಿತು ಉಪ್ಪಿಟ್ಟಿಗೆ ಕಾಯುತ್ತ ಬ್ಯಾಂಕಿನ ಸೀಲಾದ ಹೊಸ ನೋಟಿನ ಕಂತೆಗಳನ್ನು ನೂರು ರೂಪಾಯಿ ನೋಟುಗಳೆಂದೇ ಭಾವಿಸಿ ಗೌರಿ ಎಣಿಸಿ, ಲೆಕ್ಕ ಸರಿಬರದೆ ಮತ್ತೊಮ್ಮೆ ಎಣಿಸುವಾಗ ನೋಡುತ್ತಾಳೆ! ಐನೂರು ರೂಪಾಯಿಯ ನೋಟುಗಳು! ಮೂರು ಕಂತೆಗಳಿಂದ ಒಂದೂವರೆ ಲಕ್ಷ! ಒಟ್ಟು ಲಕ್ಷದ ಐವತ್ತಾರು ಸಾವಿರದ ಎಂಟುನೂರು!

ಸುರೇಶನಿಗೆ ಇದನ್ನು ಗೌರಿ ಹೇಳಿದ ಕೂಡಲೆ ಒಂದೇಸಾರಿ ಅವನಿಗೆ ತಲೆ

ಬಿಸಿಯಾಯ್ತು.

ಶೇಷಪ್ಪನಿಗೆ ತಲೆ ಸಮ ಇದೆಯ? ಅಥವಾ ಇನ್ನೂ ಕಳ್ಳ ನೋಟು ಸ್ಟಾಕ್ ಇಟ್ಟುಕೊಂಡು ಬೇಗಬೇಗ ಖರ್ಚು ಮಾಡುವುದಕ್ಕೋಸ್ಕರ ಎಲ್ಲರಿಗೂ ಒಂದಕ್ಕೆ ಡಬ್ಬಲ್ ಕೊಡುತ್ತಿದ್ದಾನ? ಅಥವಾ ಅವನೂ ನೂರು ರೂಪಾಯಿ ನೋಟುಗಳೆಂದೇ ತಿಳಿದು ಕಂತೆ ತೆಗೆದು ಗಡಿಬಿಡಿಯಲ್ಲಿ ಕೊಟ್ಟನೋ! ಈಗೇನು ಮಾಡುವುದು! ಸಿಕ್ಕಿದ್ದೇ ಲಾಭ ಎಂದು ದುಡ್ಡು ಜೇಬಿಗಿಳಿಸೋಣವೋ! ಅಥವಾ ಹೋಗಿ ಯಾಕೆ ಇಷ್ಟು ಕೊಟ್ಟೆ ಮಹರಾಯ? ಎಂದು ಕೇಳೋಣವೋ? ಸುರೇಶನಿಗೆ ಏನು ಮಾಡಬೇಕೆಂದು ಹೊಳೆಯಲಿಲ್ಲ.

ಸುಮ್ಮನಿರಲಾರದೆ ಅದನ್ನು ಎಣಿಸಿ ಒಂದು ಸಮಸ್ಯೆ ಸೃಷ್ಟಿಸಿದ ಗೌರಿ ಮೇಲೆ ಅವನಿಗೆ ಸಿಟ್ಟು ಬಂದಿದ್ದು ನೋಡಿ ಗೌರಿಗೆ ಅವನ ಮೇಲೆ ಕೋಪ ಏರಿತು. ವ್ಯವಹಾರ ಜ್ಞಾನ ಇಲ್ಲದೆ ಏನೋ ಯೋಚನೆ ಮಾಡುತ್ತ ಕೆಲಸಮಾಡುವ ಸುರೇಶನ ಚಾಳಿಯಿಂದ ಪ್ರತಿದಿನವೂ ಅವನು ಇಂಥ ತಲೆ ನೋವುಗಳನ್ನು ಸೃಷ್ಟಿಸುತ್ತಿದ್ದ.

"ಥತ್, ನಿನ್ನ್ಯಾವನು ಎಣಿಸೋದಕ್ಕೆ ಹೇಳಿದವನು ಮಾರಾಯ್ತಿ, ಈಗ ನೋಡು ಎಂಥ ತರ್ಲೆ ತಂದಿಟ್ಟೆ" ಎಂದು ಸುರೇಶ ಅಸಹನೆಯಿಂದ ಗೌರಿ ಕಡೆಗೆ ತಿರುಗಿ ಗೊಣಗಿದ.

"ಅಲ್ರೀ, ನಿಮಗೇನಾದರು ಬುದ್ದಿಗಿದ್ದಿ ಇದಿಯ, ಬೆಳಗಿನಿಂದ ಕಣ್ಣುಮುಚ್ಚಿ ಕೊಂಡು ವ್ಯವಹಾರ ಮಾಡಿರೋರು ನೀವೆ! ನಾನು ಎಣಿಸಿದ್ದೆ ತಪ್ಪು ಅಂತ ಹೇಳ್ತೀರಲ್ಲ! ನಿಮ್ಮ ಫ್ರೆಂಡು ಈಗ್ತಾನೆ ನಿಮಗೆ ಕಾಮನ್ ಸೆನ್ಸು ಇಲ್ಲ ಅಂತ ಹೇಳಿದ್ದು ಮತ್ತೆ ಯಾಕೆ ಅಂತೀರ? ಇವತ್ತೇನೋ ದುಡ್ಡು ಹೆಚ್ಚಿಗೆ ಸಿಕ್ಕಿದೆ, ವಾಪಸ್ ಮಾಡಬಹುದು! ಈ ತರ ವ್ಯವಹಾರ ಮಾಡಿ ದಿನಾ ಎಷ್ಟು ಕಳೀತಿದ್ದೀರೋ ಏನೋ ಆ ಭಗವಂತನಿಗೇ ಗೊತ್ತು".

"ನಿನಗೆ ವ್ಯವಹಾರ ಮಾಡೋದು ಬ್ಯಾಡಾಂತ ಯಾರು ಹೇಳ್ದೋರು? ಬೆಳಗಿನಿಂದ ಚೆಕ್ಕೂ ನಿನ್ನ ಕೈಯ್ಯಲ್ಲೇ ಇತ್ತು! ದುಡ್ಡೂ ನಿನ್ನ ಕೈಯ್ಯಲ್ಲೆ ಇತ್ತು. ಅವಾಗೆಲ್ಲ ಅದನ್ನು ನೋಡದೆ ಈಗ ತಾಪತ್ರಯ ತಂದಿಟ್ಟೆಯಲ್ಲ. ನೀನು ಎಣಿಸದೆ ಇದ್ದರೆ ತಣ್ಣಗೆ ಬಸ್ಸು ಹತ್ತಿ ಹೋಗ್ತಿರಲಿಲ್ಲವ?"

"ಈಗ ಯಾರು ಬ್ಯಾಡಾಂದೋರು ತಣ್ಣಗೆ ಬಸ್ಸು ಹತ್ತಿ ಹೋಗೋದು. ನಿಮ್ಮನ್ನು ಕಟ್ಟಿಕೊಂಡು ಏಗೋದು ಇದೆ ನೋಡೀ!..... ದುಡ್ಡು ಸಿಕ್ಕಿದರೂ ಏನಾದರೂ ತರ್ಲೆ ಇರುತ್ತೆ. ದುಡ್ಡು ಹೋದರೂ ಏನಾದರೂ ತರ್ಲೆ ಇರುತ್ತೆ."

"ಹಂಗೇ ಮಾಡೋಣ ತಗ, ಅವನ್ಯಾವನು ದುಡ್ಡು ಕಳಕೊಂಡಿದಾನೋ ಅವನೇ ಬಂದು ಕೇಳಲಿ. ದುಡ್ಡು ಎಣಿಸೋನಿಗೆ ಇಲ್ದಿರೋ ದರ್ದು ನಮಗ್ಯಾಕೆ!"

"ಅಲ್ರೀ ಹತ್ತೋ ನೂರೋ ಸಾವಿರಾರನೋ ಆದರೆ ಸರಿಯಾಗಿ ಎಣಿಸದೆ ಜೇಬಿಗೆ ಹಾಕಿಕೊಂಡು ಹೋದರು ಅನ್ನಬಹುದು. ಒಂದು ಲಕ್ಷ ಅಂದರೆ ಗೊತ್ತಿದ್ದೇ ಮಾಡಿದರು ಅಂತಾಗೋಲ್ಲವ."

"ನೋಡು ಹ್ಯಾಗೆ ಹೇಳಿದರೂ ಅದಕ್ಕೆ ಒಂದು ತರಳೆ ತೆಗೀತಿದ್ದೀಯ? ದುಡ್ಡು ಲಪಟಾಯಿಸಿಕೊಂಡು ಹೋಗೋದಕ್ಕೆ ನಾವೇನು ಲಕ್ಷಗಳನ್ನ ನೋಡೇ ಇಲ್ಲ ಅಲ್ಲವ? ಈಗೇನು ಮಾಡಬೇಕಂತ ನಿನ್ನದು?"

"ಹೋಗಿ ಶೇಷಪ್ಪನಿಗೆ ಹೀಗಾಗಿದೆ ಅಂತ ಹೇಳೋಣ"

"ಶೇಷಪ್ಪ ಹೆಚ್ಚಿಗೆ ಎಣಿಸಿಕೊಟ್ಟಿರೋದು ನನಗೆ ಅನುಮಾನ! ಅವನು ಪ್ರತಿದಿನ ಇಂಥ ಲಕ್ಷಗಳು ಎಷ್ಟು ಎಣಿಸಿ ಕೊಡ್ತಾನೆ! ಒಬ್ಬರಿಗೆ ಒಂದು ಲಕ್ಷ ಹೆಚ್ಚಿಗೆ ಕೊಟ್ಟರೆ ಅವನ ವ್ಯವಹಾರದ ಎರಡು ವರ್ಷದ ಲಾಭ ಒಂದೇ ಏಟಿಗೆ ತೋಪಡ ಆಗುತ್ತೆ"

ಇಬ್ಬರಿಗೂ ಒಬ್ಬರಮೇಲೊಬ್ಬರಿಗೆ ವಿನಾಕಾರಣ ಬಂದಿದ್ದ ಸಿಟ್ಟು ಇಳಿಯುತ್ತ ಬಂದಹಾಗೂ ನಿಧಾನವಾಗಿ ತಾವು ಏನೋ ಒಂದು ರಹಸ್ಯಮಯ ಸನ್ನಿವೇಶದಲ್ಲಿ ಸಿಕ್ಕಿಕೊಂಡಿರಬಹುದೆಂಬ ಗುಮಾನಿ ಸಣ್ಣಗೆ ಶುರುವಾಯ್ತು.

ಹಾಗಾದರೆ ಜೀವನ್‌ಲಾಲ್ ಒಂದು ಲಕ್ಷ ಅರುವತ್ತು ಸಾವಿರಕ್ಕೆ ಚೆಕ್ ಕೊಟ್ಟನೆ! ತಿರುಪತಿ ಪ್ರಸಾದಕ್ಕೆ ಒಂದುಲಕ್ಷ ಅರುವತ್ತು ಸಾವಿರ ಚೆಲ್ಲುತ್ತಾನ! ಅದೂ ಈ ಮಾರ್ವಾಡಿ! ಅಥವಾ ಶೇಷಪ್ಪ ಸರಿಯಾಗಿ ನೋಡದೆ ಅಷ್ಟೊಂದು ಎಣಿಸಿ ಕೊಟ್ಟನೋ! ಗೌರಿಯೇನೋ ಶೇಷಪ್ಪನೆ ಸರಿಯಾಗಿ ನೋಡದೆ ಎಣಿಸಿ ಕೊಟ್ಟಿದ್ದಾನೆಂದೇ ದೃಢವಾಗಿ ನಂಬಿದ್ದಳು. ಆದರೆ ಸುರೇಶ ಅದನ್ನು ಸಂಪೂರ್ಣವಾಗಿ ಅಲ್ಲಗಳೆದ. ಶೇಷಪ್ಪ ಇಂಥ ಲಕ್ಷಗಳನ್ನು ಪ್ರತಿದಿನ ಎಷ್ಟೆಷ್ಟೋ ಎಣಿಸಿ ಕೊಡುತ್ತಾನೆ. ಅರುವತ್ತುಸಾವಿರವನ್ನು ಒಂದುಲಕ್ಷ ಅರುವತ್ತುಸಾವಿರ ಎಂದು ತಿಳಿದು ಕೊಡುವಷ್ಟು ಶೇಷಪ್ಪ ಮುಠ್ಠಾಳ ಅಲ್ಲವೇ ಅಲ್ಲ. ಒಂದು ಲಕ್ಷ ಅರುವತ್ತು ಸಾವಿರಕ್ಕೆ ಸರಿಯಾಗಿ ಶೇಕಡ ಎರಡು ಮುರಿದುಕೊಂಡು ಶೇಷಪ್ಪ ದುಡ್ಡು ಕೊಟ್ಟಿರುವುದರಿಂದಲೇ ಶೇಷಪ್ಪ ಚೆಕ್ ನೋಡಿ ಚೆನ್ನಾಗಿ ಆಲೋಚನೆ ಲೆಕ್ಕಾಚಾರ ಹಾಕಿ ದುಡ್ಡು ಕೊಟ್ಟಿದ್ದಾನೆ. ಇದು ಶೇಷಪ್ಪನ ಕಣ್ತಪ್ಪಿ ಬಂದ ಹಣ ಅಲ್ಲವೇ ಅಲ್ಲ. ಜೀವನ್ ಲಾಲ್ ಕೊಟ್ಟಿದ್ದೇ ಅಷ್ಟು. ಅದರಲ್ಲಿ ಅನುಮಾನವೇ ಬೇಡ ಎಂದು ಗೌರಿಗೆ ಖಡಾಖಂಡಿತವಾಗಿ ಸುರೇಶ ಹೇಳಿದ. ಮಾಣಿ ತಂದಿಟ್ಟ ಉಪ್ಪಿಟ್ಟು ತಣ್ಣಗಾಗುತ್ತ ಇತ್ತು. ಗಂಡ ಹೆಂಡತಿ ಇಬ್ಬರೂ ಏನು ಮಾಡಿದರು ಅರ್ಥವೇ ಆಗದ ಒಗಟೊಂದನ್ನು ಈಗ ಬಿಡಿಸಬೇಕಾಗಿತ್ತು. ಉಪ್ಪಿಟ್ಟಿನ ಕಡೆಗೆ ಗಮನ ಹೋಗುವುದಾದರೂ ಹೇಗೆ!

ಇದು ಯಾಕೆ ಕೊಟ್ಟ? ತಲೆ ತಿನ್ನುವ ಈ ಜಟಿಲ ರಹಸ್ಯದ ದೆಸೆಯಿಂದ ಸುರೇಶನಿಗೂ ಗೌರಿಗೂ ಏಲಕ್ಕಿಗೆ ಒಳ್ಳೆ ರೇಟು ಬಂದ ರೋಮಾಂಚನ ಹಾರಿಹೋಯ್ತು. ಒಬ್ಬರ ಮುಖ ಒಬ್ಬರು ನೋಡುತ್ತ ಒಂದು ಮಾತೂ ಆಡದೆ ತಣ್ಣಗಾದ ಉಪ್ಪಿಟ್ಟು ತಿನ್ನತೊಡಗಿದರು. ಇಬ್ಬರ ಕುಶಾಗ್ರಬುದ್ಧಿಯೂ ಒಂದೇಸಮ ಯೋಚಿಸುತ್ತಿತ್ತು. ನಮಗೆ ಗೊತ್ತಾಗದಹಾಗೆ ಏನೋ ನಡೆದಿದೆ!

ಅದೇನು?

ತಿಳಿಯುವುದಾದರೂ ಹೇಗೆ?

# ಸುರೇಶನ ವಿಶ್ಲೇಷಣೆ - ೧೮



ಸುರೇಶ ಗೌರಿ ಹೋಟೆಲಿನ ರೂಮಿನಿಂದ ಹೊರಬಿದ್ದಾಗ ಅವರು ಒಳಹೋದಾಗ ಇದ್ದಂತಿರಲಿಲ್ಲ. ಅವರಿಗೆ ಇಡೀ ಹೊರಪ್ರಪಂಚವೆಲ್ಲ ಒಂದು ದೊಡ್ಡ ಮುಖವಾಡದಂತೆ ಕಾಣುತ್ತಿತ್ತು. ರೂಮಿನಿಂದ ಅಚೆಗೆ ಕಾಲಿಡುತ್ತಿದ್ದಂತೆಯೆ ಆಚೀಚೆ ನೋಡಿಕೊಂಡು ಹೋಟೆಲಿನಲ್ಲಿ ಇನ್ನೂ ಯಾರು ಯಾರು ಇದ್ದಾರೆ ಗಮನಿಸಿ, ಹೋಟೆಲಿನ ಬಿಲ್ ಪಾವತಿ ಮಾಡಿ, ಶೇಷಪ್ಪನ ಸ್ಟಾಲಿನ ಕಡೆಗೆ ಹೊರಟರು. ದಾರಿಯಲ್ಲಿ ಅವರಿಗೆ ಶೇಷಪ್ಪನಾದರೂ ಎಷ್ಟು ನಂಬಲರ್ಹವಾದ ವ್ಯಕ್ತಿ ಎಂದು ಅನುಮಾನ ಶುರುವಾಯ್ತು. ಕಳ್ಳ ನೋಟಿನ ಖದೀಮರನ್ನು ಹಿಡಿದುಕೊಡಲು ಸಿ.ಐ.ಡಿಗಳೊಡನೆ ಶಾಮೀಲಾಗಿದ್ದೇನೆಂದು ಅವನೇ ಹೇಳಿದ್ದರಿಂದ ಅವನು ತನ್ನ ಉದ್ದೇಶಕ್ಕೆ ನಮ್ಮನ್ನು ಬಳಸಿಕೊಂಡು ನಮ್ಮನ್ನೂ ಜುಗಾರಿಕ್ರಾಸಿನ ಕಾಳ ವ್ಯವಹಾರಗಳ ಅಂತರಂಗಕ್ಕೆ ಎಳೆದುಬಿಟ್ಟರೆ ಏನು ಮಾಡುವುದು ಎಂದು ಚಿಂತೆಯಾಯ್ತು. ಹಾಗಾದರೆ ಇನ್ನೇನು ಮಾಡಬಹುದು?

ಸರ್ಕಾರ, ಅಧಿಕಾರಿಗಳು, ಪೋಲೀಸು, ಯಾರ ಬಳಿ ಹೋಗುವುದೂ ಅಪಾಯಕ್ಕೆ ಸಿಕ್ಕಿಕೊಂಡಂತೆಯೇ. ಸೆಂಟ್ರಲ್ ಸಿ.ಐ.ಡಿಗಳೇ ಇಲ್ಲಿಯ ಪ್ರತಿಯೊಬ್ಬರೂ ಎಲ್ಲದರಲ್ಲೂ

ಶಾಮೀಲಾಗಿದ್ದಾರೆಂದು ತಮ್ಮ ತನಿಖೆಯನ್ನೇ ಬೇರೊಬ್ಬರಿಗೆ ವಹಿಸಿದ್ದಾರೆಂದಮೇಲೆ ಪೋಲೀಸರ ಬಳಿಗೆ ಹೋದರೆ ಕೆಟ್ಟ ಹಾಗೇ. ಇದರೊಡನೆ ಇವರ ಕೈಯ್ಯಲ್ಲಿರುವ ಒಂದೂವರೆ ಲಕ್ಷ ಇವರ ಸಮಸ್ಯೆಯನ್ನು ಇನ್ನೂ ಕ್ಲಿಷ್ಟಗೊಳಿಸಿತ್ತು. ಶೇಷಪ್ಪನ ಬಳಿಗೆ ಹೋಗುತ್ತ ಸುರೇಶ ಗೌರಿ ಇದನ್ನೆಲ್ಲ ಯೋಚಿಸಿದರು.

ಆದರೆ ಆಶ್ಚಾರ್ಯಶ್ಚರ್ಯದ ಸಂಗತಿ ಎಂದರೆ ಇವೆಲ್ಲವನ್ನೂ ಮೀರಿ ಅವರಿಬ್ಬರಲ್ಲೂ ತಾವು ಸಿಕ್ಕಿಕೊಂಡಿದ್ದ ವಿಚಿತ್ರ ಪರಿಸ್ಥಿತಿಯ ಬಗ್ಗೆ ಕುತೂಹಲ ಬೆಳೆಯುತ್ತಾ ಹೋಯ್ತು. ತಮ್ಮೆಲ್ಲ ಅನುಮಾನ ಆಶಂಕೆಗಳನ್ನೂ ಮೀರಿ ಅವರು ಶೇಷಪ್ಪನ ಬಳಿ ಸಮಾಲೋಚನೆ ಮಾಡಲು ಹೋದರು.

* * * *

ಗೌರಿಯನ್ನು ದಾರಿಯಲ್ಲಿ ನಿಲ್ಲಿಸಿ ಶೇಷಪ್ಪನ ಸ್ಟಾಲಿನ ಕಡೆಗೆ ಹೋದ ಸುರೇಶ ಹೋದಾಗಿಗಿಂತ ಇಮ್ಮಡಿ ಗಡಿಬಿಡಿ ಗಾಬರಿಯಲ್ಲಿ ವಾಪಸ್ ಬಂದು, "ಶೇಷಪ್ಪನ್ನ ಯಾರೋ ಖೂನಿ ಮಾಡಿದರು ಅಂತಾರಲ್ಲೆ ಮಾರಾಯ್ತಿ!" ಎಂದು ಗೌರಿಗೆ ಹೇಳಿದ.

ಗೌರಿ ಬೆಚ್ಚಿಬಿದ್ದು "ಏನ್ರಿ ನೀವು ಹೇಳೋದು. ಈಗ್ತಾನೆ ಮಾತಾಡಿಸಿಕೊಂಡು ಬಂದಿದೀವಿ! ಈಗ ನೋಡಿದರೆ ಹೀಗನ್ನುತ್ತೀರಲ್ಲ?" ಎಂದಳು.

ಸುರೇಶ ಬೀಡಾಸ್ಟಾಲ್ ಬಳಿಗೆ ಹೋದಾಗ ಬೀಡಾ ಅಂಗಡಿಯ ಬಾಗಿಲು ಅರೆ ಮುಚ್ಚಿತ್ತು. ಅಂಗಡಿ ಎದುರು ಒಬ್ಬ ಪೋಲೀಸಿನವನೂ ಹಲವು ದಾರಿಹೋಕರೂ ನಿಂತುಕೊಂಡು ಕಳವಳದ ದನಿಯಲ್ಲಿ ಸಂಭಾಷಿಸುತ್ತ ಇದ್ದರು. ಅವರ ಮಾತುಕತೆಯಿಂದ ಸುರೇಶನಿಗೆ ಗೊತ್ತಾಗಿದ್ದೆಂದರೆ ಕೆಲ ಹೊತ್ತಿನ ಹಿಂದೆ ಯಾವನೋ ಶೇಷಪ್ಪನನ್ನು ಕೊಲೆ ಮಾಡಲು ಚೂರಿ ಹಾಕಿ ಓಡಿಹೋದನೆಂದೂ ಅಕ್ಕಪಕ್ಕದವರೆಲ್ಲ ಸೇರಿ ರಿಕ್ಷಾಮಾಡಿ ಶೇಷಪ್ಪನನ್ನು ಆಸ್ಪತ್ರೆಗೆ ಸಾಗಿಸಿದರೆಂದೂ ತಿಳಿಯಿತು. ಶೇಷಪ್ಪ ಗಾಯಗೊಂಡಿದ್ದಾನೋ! ಸತ್ತೇಹೋಗಿದ್ದಾನೋ ಸರಿಯಾಗಿ ಗೊತ್ತಿಲ್ಲದ ಪೋಲೀಸಿನವನು ದಾರಿಹೋಕರಿಗೆ ಶೇಷಪ್ಪನ 'ಮರ್ಡರ್' ಆಯ್ತೆಂದು ಒಟ್ರಾಸಿ ಹೇಳುತ್ತಿದ್ದ.

ಸುರೇಶ ಗೌರಿಗೆ ನಡೆದುದೆಲ್ಲದರ ವಿವರಣೆ ಕೊಟ್ಟನಂತರ ಇಬ್ಬರೂ ಕಿಂಕರ್ತವ್ಯ ಮೂಢರಂತೆ ದಾರಿಬದಿಯಲ್ಲಿ ಸುಮ್ಮನೆ ನಿಂತುಕೊಂಡರು. ಜುಗಾರಿ ಕ್ರಾಸಿನ ಕರಾಳ ಕಾಳ ವ್ಯವಹಾರಗಳ ಬಗ್ಗೆ ಏನೇನೋ ಕತೆಗಳನ್ನು ಕೇಳಿದ್ದ ಅವರಿಗೆ ಕುತೂಹಲದೊಡನೆ ಕೊಂಚ ದಿಗಿಲೂ ಆಯ್ತು. ಅವರ ಜೀವಮಾನದಲ್ಲಿ ಅನೇಕ ಬಿಕ್ಕಟ್ಟುಗಳನ್ನು ಎದುರಿಸಿದ್ದರೂ ಸಧ್ಯದ ಪರಿಸ್ಥಿತಿಗೆ ಹೋಲಿಸಿದರೆ ಅವೆಲ್ಲ ಕೇವಲ ಕಾಲ್ಪನಿಕವೆಂದು ಈಗ ಅವರಿಗೆ ಮನವರಿಕೆಯಾಯ್ತು. ತಮ್ಮೆದುರಿಗಿದ್ದ ವಿಚಿತ್ರ ಪರಿಸ್ಥಿತಿಯ ಸವಾಲನ್ನು ಎದುರಿಸದೆ ಅವರಿಗೆ ಬೇರೆ ವಿಧಿಯೇ ಇರಲಿಲ್ಲ.

ಯಾರಿಗೆ ಹೇಳುವುದು? ಯಾರನ್ನು ಕೇಳುವುದು? ಇಲ್ಲಿ ಯಾರನ್ನೂ ನಂಬುವ ಹಾಗೇ ಇಲ್ಲ! ಹಾಗಾದರೆ ಮುಂದೇನು? ತಮ್ಮ ಸುತ್ತಲಿನ ಸಮಾಜ ನಾಗರೀಕತೆಗಳೆಲ್ಲ

ನರಭಕ್ಷಕ ಕ್ರೂರ ಮೃಗಗಳಿಂದ ಕೂಡಿದ ಕಾಡಿಗಿಂತಲೂ ಘೋರವಾಗಿ ಅಪಾಯಕರವಾಗಿ ಅವರಿಬ್ಬರಿಗೂ ಅನ್ನಿಸಿತು.

"ಇಲ್ಲಿ ಯಾರನ್ನೂ ನಂಬುವಹಾಗೇ ಇಲ್ಲ ಕಣ್ರಿ. ನೀವು ನನ್ನನ್ನ, ನಾನು ನಿಮ್ಮನ್ನ ಮಾತ್ರ ನಂಬಬಹುದು ಅಷ್ಟೆ" ಎಂದಳು ಗೌರಿ. ಯಾವುದಕ್ಕೂ ಯಾವ ರೀತಿಯಿಂದಲೂ ಸಂಬಂಧಪಡದ ಅವರು ಏಲಕ್ಕಿ ಮಾರಿ ಶಾಪಿಂಗ್ ಮಾಡಲು ಮೂಟೆ ಹೊತ್ತುಕೊಂಡು ಮನೆಯಿಂದ ಹೊರಟವರು ಇದ್ದಕ್ಕಿದ್ದಹಾಗೆ ದುಃಸ್ವಪ್ನ ಒಂದಕ್ಕೆ ಸಿಕ್ಕಿಕೊಂಡಿದ್ದು ಗೌರಿಗೆ ಕುತೂಹಲದೊಡನೆ ಗಾಬರಿಯನ್ನೂ ಉಂಟುಮಾಡಿತ್ತು.

ಕೈಯ್ಯಲ್ಲಿ ಒಂದೂವರೆ ಲಕ್ಷರೂಪಾಯಿ ಇಟ್ಟುಕೊಂಡು ವಿಚಿತ್ರ ಮಾನಸಿಕ ತೊಳಲಾಟದಲ್ಲಿ ನಿಂತಿದ್ದ ಅವರ ಸ್ಥಿತಿ ಇಡೀ ಮನುಷ್ಯನ ಹಣೆಬರಹದ ಅಸಂಗತ ಸ್ಥಿತಿಗೆ ಸಂಕೇತದಂತಿತ್ತು. ಅಸ್ಪತ್ರೆ ಸೇರಿರುವ ಶೇಷಪ್ಪನನ್ನಂತೂ ಕೇಳುವಂತಿಲ್ಲ! ಅವನನ್ನು ಬಿಟ್ಟರೆ ಜೀವನ್‌ಲಾಲನನ್ನೇ ಕೇಳಬೇಕು. ಅಲ್ಲಿಗೆ ಕೇಳಿಕೊಂಡು ಹೋದ ಕ್ಷಣವೇ ಅವನಿಗೆ ಅವರ ಗುಟ್ಟು ಹೊಸಬನೊಬ್ಬನಿಗೆ ಗೊತ್ತಾಗಿರುವುದು ಅರಿವಿಗೆ ಬರುತ್ತದೆ. ಅಲ್ಲಿಂದ ಮುಂದೇನಾಗುತ್ತದೋ ಹೇಳಬರುವುದಿಲ್ಲ. ಇದು ಅಪಾಯವನ್ನು ನಾವೇ ಮೈಮೇಲೆ ಎಳೆದುಕೊಂಡಹಾಗೇ ಸರಿ! ಸುರೇಶ ಯೋಚಿಸುತ್ತ ನಿಂತಿರಬೇಕಾದರೆ ಗೌರಿ "ಈಗಾಗಲೆ ಏನೋ ಎಡವಟ್ಟಾಗಿದೆ ಅಂತ ಅವರಿಗೆ ಗೊತ್ತಾಗಿರೋಲ್ಲ ಅಂತೀರ" ಎಂದು ಕೇಳಿದಳು. ಶೇಷಪ್ಪನ ಖೂನಿ ಪ್ರಯತ್ನ ನಡೆದಿದ್ದನ್ನು ಯೋಚಿಸಿ ಅವಳಿಗೆ ಹಾಗನ್ನಿಸಿತ್ತು. ಆದರೆ ಜೀವನ್‌ಲಾಲನೇ ಏಜಂಟರ ಹತ್ತಿರ ಕ್ಯಾಶ್ ಮಾಡಿಸಿಕೊಳ್ಳಿ ಎಂದು ಹೇಳಿರಲಿಲ್ಲವೆ? ಅಂದಮೇಲೆ ಅವನೇಕೆ ಶೇಷಪ್ಪನನ್ನು ಕೊಲ್ಲಿಸಲು ಪ್ರಯತ್ನ ಮಾಡುತ್ತಾನೆ? ಶೇಷಪ್ಪನಿಗೆ ಒದಗಿದ ಅಪಾಯ ತಮಗೆ ಒದಗಬಹುದಾದ ಅಪಾಯದ ಮುನ್ನುಡಿಯಾಗಿ ಪರಿಭಾವಿಸಲು ಏನು ಮಾಡಿದರೂ ಸುರೇಶನಿಗೆ ಸಾಧ್ಯವಾಗಲಿಲ್ಲ.

ಸುರೇಶ ಗೌರಿ ನಡುಬೀದಿಯಲ್ಲಿ ಯೋಚಿಸುತ್ತ ನಿಂತಿರಬೇಕಾದರೆ ಸಣ್ಣಗೆ ಧೂಳಿನಂತೆ ಒಮ್ಮೆ ಮಳೆ ಉದುರಾಡಿತು. "ಥುತ್ತೇರಿ, ಇದು ಬೇರೆ ಮಧ್ಯ" ಎಂದು ಗೊಣಗುತ್ತ ಸುರೇಶ ಗೌರಿಯೊಡನೆ ಪಕ್ಕದಲ್ಲಿದ್ದ ಬಾಗಿಲು ಹಾಕಿದ ಅಂಗಡಿಯೊಂದರ ಮುಂಭಾಗಕ್ಕೆ ಓಡಿದ. ಇಬ್ಬರೂ ಅಲ್ಲಿ ಮಳೆ ನಿಲ್ಲುವುದನ್ನು ಕಾಯುತ್ತ ನಿಂತುಕೊಂಡು, ತಮಗಿರುವ ಅತ್ಯಲ್ಪ ಕಾಲಾವಕಾಶದಲ್ಲಿ ಮುಂದೇನು ಮಾಡೋಣೆಂದು ಯೋಚಿಸಿದರು. ಆಗ ಹಠಾತ್ತಾಗಿ ಗೌರಿಗೆ ಅವರೆಗೂ ಗಮನಕ್ಕೆ ಬರದಿದ್ದ ಒಂದು ಸಂಗತಿ ಜ್ಞಾಪಕಕ್ಕೆ ಬಂತು.

"ಅಲ್ರೀ, ನಾವು ತಂದಿದ್ದ ಏಲಕ್ಕಿ ಮೂಟೆಯಲ್ಲಿ ಒಂದು ಎರಡೂವರೆ ಕೇಜಿ ಹೆಚ್ಚಿಗೆ ಇತ್ತಲ್ಲವ?" ಎಂದು ಕೇಳಿದಳು.

ಹೌದು! ಸುರೇಶನಿಗೆ ಸ್ಪಷ್ಟವಾಗಿ ಜ್ಞಾಪಕಕ್ಕೆ ಬಂತು. ತೂಕ ಸರಿಯಾಗಿ ನೋಡದೆ ತಂದಿದ್ದೀರೆಂದು ಗೌರಿ ರೇಗಾಡಿದ್ದರಿಂದ ಸುರೇಶನಿಗೆ ನೆನಪಿಗೆ ಬರುವುದೇನೂ

ಕಷ್ಟವಾಗಲಿಲ್ಲ. ಸುರೇಶ ಯೋಚಿಸುತ್ತ ಗೌರಿಕಡೆ ನೋಡಿದ.

"ತೂಕ ಹೆಚ್ಚುಕಮ್ಮಿ ಇದ್ದಿದ್ದು ನಿಮ್ಮ ತಪ್ಪಿನಿಂದ ಅಲ್ಲ ಕಾಣ್ತದೆ ಕಣ್ರಿ. ಒಳಗಡೆ ಬೇರೆ ಏನೋ ಇತ್ತು. ಅದರಲ್ಲಿ ಅನುಮಾನವೇ ಇಲ್ಲ ಬಿಡಿ. ನಾವು ಬೇರೆ ಯಾರದ್ದೋ ಮಾಲನ್ನ ಬೆಳಗಿನಿಂದ ಹೊತ್ತುಕೊಂಡು ತಿರುಗಿದ್ದೇವೆ ಅಂತ ಕಾಣ್ತದೆ." ಗೌರಿ ಏನೋ ಗುಟ್ಟು ಗೊತ್ತಾದ ಖುಷಿಯಲ್ಲಿ ಹೇಳಿದಳು.

ಗೌರಿ ಇದನ್ನು ಹೇಳುತ್ತಿದ್ದಹಾಗೇ ಸುರೇಶನಿಗೆ ಬೆಳಗಿನಿಂದ ನಡೆದದ್ದು ಒಂದೊಂದಾಗಿ ಜ್ಞಾಪಕಕ್ಕೆ ಬರತೊಡಗಿತು. ತಿರುಪತಿಗೆ ಹರಕೆ ಹೊತ್ತಿದ್ದಾರೆಂದು ಕುನ್ನಿ ಹರಾಜಿಗೆ ಬಂದು ರೇಟು ಕೂಗಿದ್ದು! ಆಮೇಲೆ ದುಡ್ಡು ಕೊಡುವಾಗ ರೇಟು ಹೆಚ್ಚು ಕಡಿಮೆ ಮಾಡಿಕೊಳ್ಳೋಣೆಂದು ಹೇಳಿದ್ದು! ಎಲ್ಲಕ್ಕಿಂತ ಕೈಲಾಸ್ ಬಾರಿನೊಳಗೆ ಹೋದ ಆಗಂತುಕನಿಗೆ ಕುನ್ನಿ 'ಹೌದು ಹೌದು ಹಳದಿ ಅಮೋಫಾಸ್ ಮೂಟೆ' ಎಂದು ದೃಢಪಡಿಸಿದ್ದು! ಎಲ್ಲ ಅರ್ಥವತ್ತಾಗಿ ಸರಸರ ಜ್ಞಾಪಕಕ್ಕೆ ಬಂತು.

"ಕರೆಕ್ಟ್! ನಾವು ಬಸ್ಸಿನಿಂದ ಇಳೀತ ಗಡಿಬಿಡೀಲಿ ಬೇರೆ ಯಾರದ್ದೋ ಮೂಟೆಗೆ ಹೊತ್ತುಕೊಂಡು ಬಂದಿರಬೇಕು ಕಣೆ. ಇಲ್ಲಾ ಯಾರೋ ಮೂಟೆ ಬದಲಾಯಿಸಿದ್ದಾರೆ. ನೂಕು ನುಗ್ಗಲಲ್ಲಿ ನಮಗೆ ಗೊತ್ತಾಗಿಲ್ಲ" ಎಂದ ಸುರೇಶ.

"ಮೂಟೆ ಯಾರು ಬದಲಾಯಿಸುತ್ತಾರೆ? ನಿಮ್ಮ ಕಣ್ಣು ಮುಂದೇನೆ ಇಟ್ಟುಕೊಂಡು ಕೂತಿದ್ರಿ! ಹಳದಿ ಅಮೋಫಾಸ್ ಮೂಟೆ ಅಲ್ಲಿ ಬೇರೆ ಯಾರ ಹತ್ರ ಇತ್ತು? ಬಸ್ಸಿನ ಗಡಿಬಿಡೀಲಿ ಯಾರೋ ನಮ್ಮ ಮೂಟೆ ಒಳಗೆ ಎಂಥದನ್ನೋ ಇಟ್ಟಿದಾರೆ ಅಷ್ಟೆ. ನಿಮ್ಮ ಕಣ್ಣೆದುರು ಇದ್ರೂ ಅದೇನು ಕಷ್ಟ ಅಲ್ಲ ಬಿಡಿ. ನಿಮ್ಮ ಜೇಬೊಳಗೇ ಇಟ್ರೂ ನಿಮಗೇನು ಗೊತ್ತಾಗೋದಿಲ್ಲ. ಬೆಳಗಿನಿಂದ ಇಷ್ಟೆಲ್ಲ ನಿಮ್ಮ ಮೂಗಿನ ಅಡೀಲಿ ನಡೆದಿದೆ! ಒಂದು ಚೂರಾದರೂ ಅನುಮಾನ ಬರಬಾರದ ನಿಮಗೆ! ಅವನು ಚೆಕ್ ಕೊಟ್ಟಮೇಲೆ ಕ್ಯಾಶ್ ಮಾಡಿಸಿ ಎಣಿಸಿನೋಡಿ ಈಗ ಕಂಗಾಲಾಗಿ ಕೂತಿದ್ದೀವಲ್ಲ!" ಎಂದು ಗೌರಿ ಆದ ಅಚಾತುರ್ಯವನ್ನು ವಿಷಾದದಿಂದ ಹೇಳಿದಳು. ಅವಳ ಮಾತಿನಲ್ಲಿ ಸುರೇಶನ ವ್ಯವಹಾರದ ಮರ್ಜಿ ಬಗ್ಗೆ ಬೇಸರವೂ ಇತ್ತು.

ಹೊಗೆಯ ಹಾಗೆ ಕವಿದಿದ್ದ ಮಳೆಯ ತೆಳ್ಳನೆಯ ತೆರೆ ನಿಧಾನವಾಗಿ ಸರಿದು ದೂರದ ಕಾಡು ಗುಡ್ಡಗಳೆಲ್ಲ ಸ್ಪಷ್ಟವಾಗುತ್ತಿದ್ದುವು. ಆದರೂ ಹೊರಗೆ ಓಡಾಡುವಷ್ಟು ಹೊಳುವಾಗಿರಲಿಲ್ಲ. ಗೌರಿ ಬೆಳಗಿನಿಂದ ನಡೆದ ಘಟನೆಗಳ ಕೆಲವಂಶಗಳನ್ನು ಎತ್ತಿ ತೋರಿಸಿದಮೇಲೆ ಸುರೇಶ ಗೌರಿ ಇಬ್ಬರೂ ಸೇರಿ ಲೆಕ್ಕಾಚಾರ ಹಾಕತೊಡಗಿದರು.

ಹಾಗಾದರೆ ಯಾರೋ ನಮ್ಮನ್ನು ತಮ್ಮ ಉದ್ದೇಶಕ್ಕೆ ಬಳಸಿಕೊಂಡಿದ್ದಾರೆ! ಏನೋ ಕಳ್ಳ ಸಾಗಣೆಕೆಗೆ ನಮ್ಮ ಏಲಕ್ಕಿ ಮೂಟೆಗಳನ್ನು ಬಳಸಿಕೊಂಡು ನಿರಾಯಾಸಾಗಿ ಮಾಲು ಸಾಗಿಸಿದ್ದಾರೆ! ಅಷ್ಟೇ ತಾನೆ! ಯಾರು ಏನಾದರೂ ಸತ್ತುಕೊಳ್ಳಲಿ ಎಂದುಕೊಂಡು ನಾವೇಕೆ ಮನೆಗೆ ಬಸ್ಸು ಹತ್ತಬಾರದು? ಎಂದ ಗೌರಿ ಯೋಚಿಸಿದಳು.

''ಹಾಗಲ್ಲ ಗೌರಿ. ಕೊಂಚ ಸ್ಪಷ್ಟವಾಗಿ ಸೂಕ್ಷ್ಮವಾಗಿ ಯೋಚಿಸು. ಈಗ ನಮ್ಮ ಏಲಕ್ಕಿ ಮೂಟೆ ಕೊಂಡವನು ಹಾರಾಜಿನಲ್ಲಿ ಕೂಗಿದ ರೇಟನ್ನೋ ಅಥವಾ ಅದಕ್ಕಿಂತ ಐದೋ ಹತ್ತೋ ಹೆಚ್ಚಿಗೇನೋ ಕೊಟ್ಟಿದ್ದರೆ ಸುಮ್ಮನೆ ಬಸ್ಸು ಹತ್ತಿ ಮನೆಗೆ ಹೋಗಬಹುದಿತ್ತು. ಅವನು ಕೂಗಿದ ರೇಟಿಗಿಂತ ಮೂರರಷ್ಟು ಹೆಚ್ಚಿಗೆ ಕೊಟ್ಟಿದ್ದಾನೆ! ಅದು ಬಂದಿರೋದಲ್ಲವ ಈಗ ತಲೆ ನೋವು? ಆ ಒಂದು ಲಕ್ಷ ಹೆಚ್ಚಿಗೆ ಕೊಟ್ಟಿರೋದು ಯಾಕೆ ಗೊತ್ತ? ಏಲಕ್ಕಿ ಮೂಟೆಯಲ್ಲಿ ಎರಡೂವರೆ ಕೇಜಿ ಹೆಚ್ಚಿಗೆ ತೂಕ ಇತ್ತಲ್ಲ ಅದಕ್ಕೆ!''

''ಅವನು ಯಾವುದಾದಕ್ಕಾದರೂ ಕೊಟ್ಟುಕೊಳ್ಳಲಿ ನಮಗೇನು. ಈಗ ನಾವೇನು ಅವನಿಗೆ ಮೋಸ ಮಾಡಿ ದುಡ್ಡು ತಗೊಂಡಹಾಗೆ ಆಗಲಿಲ್ಲವಲ್ಲ''

''ಅದಲ್ಲ ಈಗ ಇರೋ ಪ್ರಶ್ನೆ. ನಮ್ಮ ಮೂಟೇನ ಕ್ಷೇವಲ ಉಪಯೋಗಿಸಿ ಕೊಂಡಿದ್ದರೆ ಅವನು ಬರೀ ಏಲಕ್ಕಿ ರೇಟು ಕೊಡ್ತಿದ್ದ. ಕಳ್ಳಸಾಗಾಣಿಕೆ ಮಾಡಿದ್ದರ ಕೂಲಿ ಕೊಡ್ತಿರಲಿಲ್ಲ. ನಾವೂ ಇದೇ ದಂಧೆಯವರು ಅಂತ ತಿಳಿದೇ ಅಲ್ಲವ ನಮಗೆ ಸಂಬಳ ಸೇರಿಸಿ ಒಂದುವರೆ ಲಕ್ಷ ಕೊಟ್ಟಿದ್ದು!''

''ಹೌದು, ಈಗಲೂ ನಮ್ಮ ಪಾಡಿಗೆ ನಾವು ದುಡ್ಡು ಜೇಬಿಗೆ ಹಾಕಿಕೊಂಡು ಬಸ್ಸು ಹತ್ತಿದರೆ ಏನು ತೊಂದರೆ?''

''ಏನು ತೊಂದರೆ ಅಂತ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಆದರೆ ಏನೋ ತೊಂದರೆ ಉಂಟು ಅಂತ ಮಾತ್ರ ಅನ್ನಿಸುತ್ತ ಇದೆ. ಯಾಕೆ ಅನ್ನು! ಈಗ ಅಕಸ್ಮಾತ್ ಅವರಿಗೆ ನಾವು ಅವರ ದಂಧೆಗೆ ಸೇರಿದವರಲ್ಲ ಅಂತ ಗೊತ್ತಾಯ್ತು ಅಂತಿಟ್ಟುಕೋ! ನಮ್ಮ ಐವತ್ತು ಸಾವಿರ ರೂಪಾಯಿ ಏಲಕ್ಕಿಗೆ ಮೇಲೆ ಒಂದು ಲಕ್ಷ ಕೊಟ್ಟು ಏನೋ ಕಳ್ಳವ್ಯವಹಾರ ಇಲ್ಲಿ ನಡೆಯುತ್ತಿದೆ ಅನ್ನುವುದರ ಸ್ಪಷ್ಟ ಸುಳಿವು ನಮಗೆ ಕೊಟ್ಟಿದಾರೆ! ನಾವು ಇದನ್ನೆಲ್ಲ ಬಾಯಿ ಬಿಟ್ಟರೆ ನಮ್ಮಿಂದ ಅವರಿಗೆ ಗ್ಯಾರೆಂಟಿ ಅಪಾಯ ಅಲ್ಲವ? ಹಾಗಾದರೆ ಅಂಥ ಸಂದರ್ಭದಲ್ಲಿ ಅವರೇನು ಮಾಡಬಹುದು ಊಹಿಸು?''

''ಕರೆಕ್ಟ್ ನೀವು ಹೇಳೋದು! ಏನು ಮಾಡಬೇಕೆಂದರೆ ಕಂಬಳಿ ಸಿದ್ದಪ್ಪನನ್ನೋ ದ್ಯಾವಮ್ಮನ ಗಂಡನನ್ನೋ ನಾಪತ್ತೆ ಮಾಡಿದಹಾಗೆ ಮಾಡಬೇಕಲ್ಲವ? ಒಳ್ಳೆ ಪೀಕಲಾಟಕ್ಕೆ ಬಂತಲ್ಲರೀ. ಏನ್ಮಾಡೋಣ ಹೇಳಿ''

''ನಾವು ಈಗೇನು ಮಾಡಬೇಕು ನನಗೆ ನಿಜವಾಗಿ ಹೊಳೆಯುತ್ತಿಲ್ಲ. ನಾವು ಕಾಳವ್ಯವಹಾರದ ಗುಂಪಿನ ಸದಸ್ಯರೇ ಅನ್ನುವ ಹಾಗೆ ನಟನೆ ಮಾಡಬಹುದು. ಆದರೆ ಹೇಗೆ ನಟನೆ ಮಾಡೋದು? ಅವರ ದಂಧೆ ನಮಗೇನು ಗೊತ್ತು? ಎಷ್ಟುದಿನ ಮಾಡೋದಕ್ಕಾಗುತ್ತೆ? ಹೀಗೇ ಮಾಡಹೋಗಿ ಕೊನೆಗೆ ನಿಜವಾಗಿಯೂ ಅವರ ಜೊತೆ ಸೇರಿಕೊಳ್ಳಬೇಕಾದ ಪರಿಸ್ಥಿತಿಯೇ ಬಂದರೆ! ಅದು ಬಿಟ್ಟರೆ ಅವರು ಊಹಿಸುವ ಹಾಗೆ ಅವರ ವಿರುದ್ಧ ಕೆಲಸ ಮಾಡಬೇಕು. ಮೇಲಿಂದ ಕೆಳಗಿನವರೆಗೆ ಯಾರನ್ನೂ ನಂಬೋದಕ್ಕೆ

ಆಗದೆ ಇರೋ ಪರಿಸ್ಥಿತೀಲಿ ಯಾರ ಜೊತೆ ಸೇರಿ ಅವರಿಗೆ ಬಲಿ ಹಾಕುತ್ತೀಯ?''

''ಥು, ಈ ದುಡ್ಡಿಗೆ ಬೆಂಕಿಹಾಕಲಿ. ಎಲ್ಲಾಬಿಟ್ಟು ನಮ್ಮ ಮೂಟೆ ಒಳಗೇ ಯಾವನೋ ಶನಿ ಎಂಥದನ್ನೋ ತುರುಕಬೇಕ?'' ಗೌರಿ ಬೇಸರದಲ್ಲಿ ಹಲುಬಿದಳು.

''ಒಂದು ಸಾರಿ ಆ ದೃಷ್ಟಿಯಿಂದ 'ಎಲ್ಲಾ ಬಿಟ್ಟು' ಅಂತ ಯೋಚನೆ ಮಾಡುತ್ತ ಹೋಗು ಗೌರಿ, ಇಡೀ ನಮ್ಮ ಜೀವನ ಇದೇ ಪ್ರಕಾರ ರೂಪುಗೊಂಡಿರೋದು ಗೊತ್ತಾಗತ್ತೆ. ಎಲ್ಲಾಬಿಟ್ಟು ನಾನ್ಯಾಕೆ ಇಲ್ಲಿಗೆ ಬರಬೇಕು? ಎಲ್ಲಾ ಬಿಟ್ಟು ನೀನ್ಯಾಕೆ ನನ್ನ ಕಟ್ಟಿಕೊಳ್ಳಬೇಕು? ಅದಿರಲಿ ಈಗ ಕುತ್ತಿಗೆಗೆ ಬಂದಿರುವಾಗ ಎಲ್ಲಾಬಿಟ್ಟು ತತ್ವಚಿಂತನೆ ಮಾಡುತ್ತಾ ನಿಲ್ಲುವುದು ಬೇಡ''

''ನಾವು ಸ್ವಲ್ಪ ಹುಷಾರಾಗಿ ಇರಬೇಕಿತ್ತು ಕಣ್ರಿ. ನೋಡಿ ಈಗ ನಮ್ಮ ಪಾಡಿಗೆ ನಾವಿದ್ದೋರು ಹ್ಯಾಗೆ ತೊಂದರೆಗೆ ಸಿಕ್ಕಿಕೊಂಡೆವು! ಎಲ್ಲಕ್ಕಿಂತ ಈಗ ಮುಂದೇನು ಮಾಡಬೇಕು ಅಂತ ತೋಚದ ಹಾಗೆ ಆಗಿದೆ.''

''ಎಷ್ಟೇ ಹುಷಾರಾಗಿದ್ದರೂ ನಮಗೆ ಈ ತೊಂದರೆ ತಪ್ಪುತ್ತಿರಲಿಲ್ಲ ಅನ್ನಿಸುತ್ತೆ. ನಮ್ಮ ಚೀಲದ ತೂಕ ಯಾವಾಗ ಎರಡೂವರೆ ಕೇಜಿ ಹೆಚ್ಚಾಯ್ತೋ ಆಗಲೇ ನಾವು ಈ ಗೋಜಲಿನೊಳಗೆ ಸಿಕ್ಕಿಬಿದ್ದಿದ್ದೇವೆ. ನಾವು ಏನೂ ತಿಳಿಯದೆ ಸಾಧಾರಣವಾಗಿ ವರ್ತಿಸುತ್ತ ಹೋಗಿ ಚೆಕ್ ಇಸುಗೊಂಡು ಬಂದಿದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಆಗಿರಬಹುದು ಅಂತ ಕಾಣ್ತದೆ. ಈಗ ಏನೋ ಎಡವಟ್ಟಾಗಿದೆ ಅಂತ ಅವರಿಗೆ ಅನುಮಾನ ಬರೋವರಿಗಾದರೂ ನಮಗೇನೂ ಅಪಾಯ ಇಲ್ಲ.''

''ಹಂಗಾದರೆ ಸಧ್ಯಕ್ಕೆ ನಮಗೇನೂ ತೊಂದರೆ ಇಲ್ಲಾಂತೀರ?''

''ಇಲ್ಲಾಂತ ಅನ್ನಿಸುತ್ತೆ''

''ಹಂಗಾದರೆ ಶೇಷಪ್ಪನಿಗೆ ಯಾರು ಚೂರಿ ಹಾಕಿದ್ದು''

''ಇದು ನನಗೆ ಅರ್ಥವಾಗ್ತ ಇಲ್ಲ. ಚೆಕ್ ಕೊಡ್ತ ಜೀವನ್‌ಲಾಲೇ ಏಜಂಟರ ಹತ್ರ ಕ್ಯಾಶ್ ಮಾಡಿಸಿಕೊಳ್ಳಿ ಅಂತ ಹೇಳಿದ್ದಾನೆ! ಅಂಥದರಲ್ಲಿ ಅವನ್ಯಾಕೆ ಶೇಷಪ್ಪನ್ನ ಖೂನಿ ಮಾಡಿಸೋದಕ್ಕೆ ಹೋಗ್ತಾನೆ. ಶೇಷಪ್ಪ ಯಾವ ಯಾವ ದಂಧೆಯಲ್ಲಿ ಸಿಕ್ಕಿಕೊಡಿದ್ದನೋ ಯಾರಿಗೆ ಗೊತ್ತು. ದುಡ್ಡು ಇಸುಗೊಂಡು ಅವನ ಅಂಗಡಿಯಿಂದ ಹೊರಬಂದೆವಲ್ಲ ಆಗ ಮತ್ತೆ ಕರೆದು ಯಾರನ್ನೊ ನನಗೆ ತೋರಿಸಿ ಅವನ ಬಗ್ಗೆ ಹುಷಾರಾಗಿರಿ ಅಂತ ಹೇಳಿದ. ಆ ರಾಜಪ್ಪ ಸಿಕ್ಕ ಗಡಿಬಿಡಿಯಲ್ಲಿ ಇದನ್ನ ನಿನಗೆ ಹೇಳೋದು ಮರೆತೇ ಹೋಯ್ತು''

''ಮಳೆ ನಿಂತಹಾಗಿದೆ. ಹೋಗೋಣ ನಡೀರಿ''

''ಎಲ್ಲಿಗೆ ಹೋಗೋಣ ಹೇಳು?''

''ಊರಿಗೆ! ಮತ್ತೆಲ್ಲಿಗೆ?''

''ಶಾಪಿಂಗ್ ಬೇಡವ?''

"ಥು, ಯಾರು ಕೊಲ್ತಾರೋ ಖೂನಿ ಮಾಡ್ತಾರೋ ಅಂತ ಹೆದರಿಕೊಳ್ತ ಶಾಪಿಂಗ್ ಮಾಡೋದು ಹ್ಯಾಗ್ರಿ?"

"ನಿನಗೆ ಅಷ್ಟೊಂದು ಹೆದರಿಕೆ ಆಗಿದೆಯೇನೆ?"

"ನಿಜ ಹೇಳಲ?"

"ಈಗತಾನೆ ನಾನು ನಿನ್ನ ಮಾತ್ರ ನಂಬಬಹುದು ಅಂತ ಹೇಳ್ತಿದ್ದೆ? ಈಗ ನಿಜ ಹೇಳಲ ಅಂತ ಕೇಳ್ತಿದ್ದೀಯಲ್ಲ?"

"ನೋಡ್ರಿ ಎಂಥ ಅಪಾಯಕ್ಕೆ ಸಿಕ್ಕಿಕೊಂಡರೂ ನನಗೇನೂ ಭಯ ಇಲ್ಲ. ಆದರೆ ಕೊನೇಪಕ್ಷ ಇವತ್ತು ನಾವು ಸಿಕ್ಕಿಬಿದ್ದಿರುವ ರಹಸ್ಯ ಏನು ಅಂತಾದರೂ ಗೊತ್ತಾಗಬೇಕು. ಸುಖಾ ಸುಮ್ಮನೆ ತೊಂದರೆಗೆ ಸಿಕ್ಕಾಕಿಕೊಂಡು ಸಾಯೋದಕ್ಕೆ ಯಾರು ಇಷ್ಟ ಪಡ್ತಾರೆ ಹೇಳಿ?"

ಅವಳ ಧೈರ್ಯ ನಿರ್ಲಕ್ಷಗಳನ್ನು ನೋಡಿ ಸುರೇಶನಿಗೆ ಹೆಮ್ಮೆಯೆನಿಸಿದರೂ ಅವಳ ಚಪಲ ನೋಡಿ ಒಂದುಸಾರಿ ಗಾಬರಿಯಾಯ್ತು. ಜುಗಾರಿಕ್ರಾಸಿನ ಕಾಳ ದಂಧೆಗಳ ಚಪಲ ಎಲ್ಲರಲ್ಲು ಒಂದಿಲ್ಲೊಂದು ಪ್ರಮಾಣದಲ್ಲಿ ಅಂತರಾಳದಲ್ಲಿ ಹುದುಗಿರುತ್ತೋ ಏನೋ ಎಂದುಕೊಂಡ. ಏಕೆಂದರೆ ಅವನ ಹೃದಯದಲ್ಲೂ ಎಲ್ಲೋ ಒಂದುಕಡೆ ಹಾಗೇ ಅನ್ನಿಸಿತ್ತು.

"ಹಂಗಾದರೆ ಶಾಪಿಂಗಿಗೆ ಯಾಕೆ ಹೆದರಿಕೆ? ನಡಿ ಅದೇನೇನು ಬೇಕೋ ಕೊಂಡೇಬಿಡು. ಆಸೆ ಇಟ್ಟುಕೊಂಡು ಸತ್ತರೆ ಮತ್ತೊಂದು ಜನ್ಮ ಎತ್ತಬೇಕಾಗುತ್ತೆ. ಎಂತಿದ್ದರೂ ಹಡಬಿಟ್ಟಿ ದುಡ್ಡು ಸಿಕ್ಕಿದೆ" ಎಂದ ಸುರೇಶ.

ಸುರೇಶ ಮಾತಿನಿಂದ ಗೌರಿಗೆ ಆ ಸಂದರ್ಭದಲ್ಲೂ ಜೋರಾಗಿ ನಗು ಬಂತು. "ಅಲ್ಲ ಶಾಪಿಂಗ್ ಅಂತ ತಿರುಗಿದರೆ ಬಸ್ಸಿಗೆ ಹೊತ್ತಾಗುತ್ತಲ್ಲ. ಈಗಾಗಲೇ ಸುಮಾರು ಹೊತ್ತಾಗಿದೆ. ಮಳೆ ನಿಂತಿದ್ದರೂ ಆಕಾಶ ನೋಡಿದರೆ ಈಗಲೋ ಆಗಲೋ ಜಡಿಮಳೇನೇ ಹಿಡಿಯೋಹಾಗೆ ಕಾಣ್ತದೆ" ಎಂದಳು.

"ಜುಗಾರಿಕ್ರಾಸ್ ಎಷ್ಟು ದೂರ ಇದೆಯೆ ಮಹಾ. ಒಂದಲ್ಲ ಒಂದು ಬಸ್ಸು ಸಿಕ್ಕೇ ಸಿಗ್ತದೆ. ಅದಿರಲಿ, ನಮ್ಮ ಚೀಲದ ಒಳಗೆ ಏನಿಟ್ಟಿದ್ದರು ಅವರು ಅಂತೀನಿ!"

"ಅಲ್ರೀ, ಬರೀ ತಂದುಕೊಟ್ಟಿದ್ದಕ್ಕೇ ಒಂದು ಲಕ್ಷ ಸಂಬಳ ಅಂದರೆ! ಅದರೊಳಗಿದ್ದಿದ್ದಕ್ಕೆ ಇನ್ನೆಷ್ಟು ಬೆಲೆ ಇರಬಹುದು? ಒಂದುಕೋಟಿ ರೂಪಾಯಿ ಆಗಬಹುದ?" ಎಂದು ಲೆಕ್ಕಾಚಾರ ಹಾಕಿದಳು ಗೌರಿ.

"ಎರಡೂವರೆ ಕೆಜಿ ಒಂದು ಕೋಟಿ ರೂಪಾಯಿ ಬೆಲೆ ಯಾವುದಕ್ಕೆ ಇದೆಯೋ ನನಗೆ ಗೊತ್ತಿಲ್ಲ. ಚಿನ್ನ ಇರಬಹುದ?"

"ಚಿನ್ನ ಕೆಜಿಗೆ ಹ್ಯಾಗ್ರಿ?"

"ಯಾರಿಗೆ ಗೊತ್ತು! ಚಿನ್ನ ಕೆಜಿ ಲೆಕ್ಕದಲ್ಲಿ ಕೇಳಿದ್ದರೆ ತಾನೆ ಅದೆಲ್ಲ

ಗೊತ್ತಾಗೋದು! ನಿನ್ನವು ಎರಡು ಬಳೆಗೆ ಮೂರು ಸಾವಿರ ಅಂತಿದ್ಯಲ್ಲ, ಅದೆಷ್ಟು ತೂಕ ಇರಬಹುದು''

''ಏನು ಹತ್ತಿಪ್ಪತ್ತು ಗ್ರಾಂ ಇರಬಹುದು!''

''ಅಯ್ಯ ಅಷ್ಟೇನ!''

''ಮತ್ತಿನ್ನೇನು ಕೇಜಿಗಟ್ಲೆ ಬಂಗಾರ ಮಾಡಿಸಿ ಕೊಟ್ಟಿದೀರ ನಂಗೆ!''

''ನಡಿ ಹಂಗಾದರೆ! ಒಂದೂವರೆ ಲಕ್ಷಕ್ಕೆ ಎಷ್ಟು ಚಿನ್ನ ಬರುತ್ತೋ ಅಷ್ಟೂ ಕೊಂಡುಕೊಂಡು ಕುತ್ತಿಗೆಗೆ ನೇತುಹಾಕಿಕೋ''

''ಥು ನಿಮ್ಮ ತಮಾಷೆ ಸಾಕು. ಯಾರಿಗೆ ಬೇಕ್ರಿ ಈ ಚಿನ್ನ ರನ್ನ ಎಲ್ಲ. ಸದ್ಯಕ್ಕೆ ಸ್ಟೇನ್‌ಲೆಸ್ ಸ್ಟೀಲಿನ ತುರಿಯೋ ಮಣೆ ನೋಡೋಣ ನಡೀರಿ''



# ಚಳ್ಳೆಹಣ್ಣು! - ೧೯



ಸುರೇಶ ಗೌರಿಯೊಡನೆ ಬಸ್ ಸ್ಟಾಂಡ್ ತಲುಪುವ ವೇಳೆಗೆ ಕತ್ತಲಾಗಿತ್ತು.

ದೇವಪುರದ ಬೀದಿಗಳಲ್ಲಿ ಅವರಿಬ್ಬರೂ ಅಷ್ಟೊಂದು ಜಾಗರೂಕತೆಯಿಂದ ಯಾವತ್ತೂ ಓಡಾಡಿರಲಿಲ್ಲ. ಸುರೇಶನಿಗೆ ಶೇಷಪ್ಪ ಯಾವನನ್ನೋ ತೋರಿಸಿ ಎಚ್ಚರಿಕೆ ಹೇಳಿ ಸುರೇಶ ಗೌರಿ ಇಬ್ಬರೂ ಅಕ್ಕಪಕ್ಕ ಹಿಂದೆಮುಂದೆ ಒಂದು ಕಣ್ಣು ಇಟ್ಟುಕೊಂಡೇ ಅಂಗಡಿ ಅಂಗಡಿ ತಿರುಗುವುದಾಗಿತ್ತು. ಅವರಿಗೆ ತಾವು ಸಿಕ್ಕಿಕೊಂಡಿರುವ ವಿಚಿತ್ರ ಸನ್ನಿವೇಶದ ಅರಿವು ಈಗ ಕೊಂಚ ಇದ್ದರೂ ಯಾರಿಂದ ಯಾವ ಕಾರಣಕ್ಕಾಗಿ ಎಂಥ ಅಪಾಯ ಬರಬಹುದೆಂದು ಅಂದಾಜು ಮಾಡಲು ಸಾಧ್ಯವೇ ಇರಲಿಲ್ಲ. ಹಾಗಾಗಿ ಯಾವ ನಿಶ್ಚಿತ ಪೂರ್ವೋದ್ದೇಶವೂ ಇಲ್ಲದೆ ಸುಮ್ಮನೆ ಗುಮಾನಿಯಿಂದ ಅತ್ತಿತ್ತ ನೋಡುತ್ತ ಶಾಪಿಂಗ್ ನಡೆಸುತ್ತಿದ್ದರಷ್ಟೆ.

ಈ ಮನಃಸ್ಥಿತಿಯಿಲ್ಲ ಅವರಿಗೆ ಕೇವಲ ತುರಿಂಯೋಮಣೆ ವ್ಯಾಪಾರ ಮಾಡುವುದರೊಳಗೇ ಸಾಕುಬೇಕಾಗಿಹೋಯ್ತು. ಸುರೇಶ ಶೇಷಪ್ಪ ತೋರಿಸಿದ ಮನುಷ್ಯರಿಬ್ಬರನ್ನೂ ಕನ್ನಡಿಯಲ್ಲಿ ನೋಡಿದ್ದರಿಂದ ಮಗ್ಗುಲು ಬದಲಾಗಿ ಕಂಡ ಆ ಬಿಂಬದ ಪ್ರತಿರೂಪವನ್ನು ಹೊರಗಡೆ ಕಲ್ಪಿಸಿಕೊಳ್ಳಲು ಪ್ರಯತ್ನಿಸಿದಂತೆಲ್ಲ ಪ್ರತಿಯೊಬ್ಬರೂ ಕನ್ನಡಿಯಲ್ಲಿ ಕಂಡವರಂತೆಯೇ ಕಾಣುತ್ತಿದ್ದರು. ಕಂಡವರ ಮುಖಗಳನ್ನೆಲ್ಲ ಕನ್ನಡಿಯಲ್ಲಿ ಮಗ್ಗುಲು ಬದಲಿಸಿ ನೋಡಿಯೇ ಅವನು ಪತ್ತೆ ಹಚ್ಚಬೇಕಾದ ಸ್ಥಿತಿಯಲ್ಲಿದ್ದ. ಹಲವು ವೇಳೆ ತಮ್ಮ ಹಿಂದೆ ಬರುತ್ತಿರುವವರು ತಮ್ಮನ್ನೇ ಹಿಂಬಾಲಿಸುತ್ತಿದ್ದಾರೋ ಇಲ್ಲವೋ

ಪರೀಕ್ಷಿಸಿದರು. ಹೇಗೆ ನೋಡಿದರೂ ಜಗತ್ತೆಲ್ಲ ತನ್ನಪಾಡಿಗೆ ತಾನು ತನ್ನ ಕೆಲಸದಲ್ಲಿ ಮಗ್ನವಾದಂತಿತ್ತು.

ಆದರೆ ಗುಮಾನಿ ಎನ್ನುವುದು ಎಂಥದೆಂದರೆ ಇತರರ ನಿರಾಸಕ್ತಿ, ಅನಾಸಕ್ತಿ, ಪ್ರತಿಯೊಂದೂ ಅನುಮಾನ ಹುಟ್ಟಿಸುತ್ತದೆ. ಒಂದುಸುತ್ತು ಪೇಟೆ ಬೀದಿಯೆಲ್ಲ ತಿರುಗುವುದರೊಳಗೆ ಅವರಿಬ್ಬರಿಗೂ ಅತ್ತಿತ್ತ ನೋಡುತ್ತ ಅವನಿರಬಹುದೆ? ಇವನಿರಬಹುದೆ? ಎಂದು ಸಂಶಯ ಪಡುತ್ತ ಓಡಾಡುವುದರ ಬಗ್ಗೆ ರೇಜಿಗೆ ಹುಟ್ಟಿ ತಮ್ಮ ಜಾಗರೂಕತೆ ಜೀವಭಯವೆಂದೆನ್ನಿಸಿ ನಾಚಿಗೆಯಾಗತೊಡಗಿತು. ಬರಿಯ ತುರಿಯೋ ಮಣಿಗೇ ತಮ್ಮ ಶಾಪಿಂಗ್ ಮುಗಿಸಿ, ಒಮ್ಮೆ ಮನೆ ಸೇರಿದರೆ ಸಾಕೆಂದು ಬಸ್ ಸ್ಟಾಂಡ್ ಕಡೆಗೆ ಹೊರಟರು.

ಜಗತ್ತೆಲ್ಲ ಕತ್ತಲೆಯ ಮುಸುಗಿನಲ್ಲಿ ಕಣ್ಮರೆಯಾಗುತ್ತಲೂ ಗೌರಿಗೆ ಅತ್ತಿತ್ತ ನೋಡಿ ಅವರಿವರ ಬಗ್ಗೆ ಸಂಶಯಪಡುತ್ತ ಓಡಾಡುವ ಅವಕಾಶ ತಪ್ಪಿದ್ದರಿಂದ ಒಂದು ಬಗೆಯ ಬೇಸರವೇ ಆಯ್ತೆಂದು ಹೇಳಬಹುದು. ಅವಳಿಗೆ ಅಪಾಯದ ಗಾಬರಿಗಿಂತ ಮಿಗಿಲಾಗಿ ಅಪಾಯದಿಂದ ಪಾರಾಗುವ ರೋಮಾಂಚನವೇ ಹೆಚ್ಚಿಗೆ ಇತ್ತೇನೋ! "ಅಲ್ರಿ, ಶೇಷಪ್ಪ ತೋರಿಸಿದ ಮನುಷ್ಯನಿಗೂ ನಿಮಗೆ ದುಡ್ಡು ಕೊಟ್ಟ ಜೀನವ್‌ಲಾಲ್‌ಗೂ ಸಂಬಂಧ ಇಲ್ಲಾಂತೀರ?" ಎಂದು ಸುಮ್ಮನೆ ಬರುತ್ತಿದ್ದ ಸುರೇಶನನ್ನು ಅನಾವಶ್ಯಕ ಮಾತಿಗೆಳೆದಳು.

"ನಾನೆಲ್ಲಿ ಹಾಗೆ ಹೇಳಿದೆನೆ?" ಎಂದ ಆಶ್ಚರ್ಯದಿಂದ ಸುರೇಶ.

"ಹಂಗಾದರೆ ಸಂಬಂಧ ಇದೆ ಅಂತೀರ?"

ಸುರೇಶ ಯೋಚಿಸಿದ! ಅವರಿಗೆ ಗೊತ್ತಿರುವ ಅಲ್ಪ ಸಂಗತಿಗಳಿಂದ ಗೌರಿ ಕೇಳಿದ ಪ್ರಶ್ನೆಗೆ ಉತ್ತರ ಹೇಳುವುದು ತುಂಬಾ ಕಷ್ಟವಿತ್ತು. ಆದರೂ ಯೋಚಿಸಿದ. ಶೇಷಪ್ಪನಿಗೆ ತಾವು ಸಿಕ್ಕಿ ಬಿದ್ದಿದ್ದ ವಿಚಿತ್ರ ಹಗರಣದ ವಿಷಯ ಏನೇನೂ ಗೊತ್ತಿರಲಿಲ್ಲ. ಆದ್ದರಿಂದ ಅವನು ಕನ್ನಡಿ ತೋರಿಸಿ ಎಚ್ಚರಿಕೆ ಕೊಟ್ಟಿದ್ದಕ್ಕೂ ಜೀವನ್‌ಲಾಲನ ಚೆಕ್ಕಿಗೂ ಯಾವುದೇ ಸಂಬಂಧ ಇರಲು ಸಾಧ್ಯವಿರಲಿಲ್ಲ. ಹಾಗಾದರೆ ಕನ್ನಡಿಯಲ್ಲಿ ಕಂಡವನು ದೇವಪುರದಲ್ಲಿ ಕಸುಬು ನಡೆಸುತ್ತಿರುವ ಯಾವನೋ ಮಾಮೂಲೀ ಕಳ್ಳನೋ ರೌಡಿಯೋ ಇರಬೇಕಲ್ಲವೆ! ಇನ್ನೂರು ರೂಪಾಯಿಗೆ ಖೂನಿ ಮಾಡಿದವನೆಂದು ಹೇಳಿದ ಮೇಲೆ ಅವನು ವೃತ್ತಿ ಕೊಲೆಪಾತಕಿ ಮಾತ್ರವಾಗಿರಬಹುದು. ಹಾಗಿದ್ದರೆ ಅವನು ಶೇಷಪ್ಪನನ್ನು ಖೂನಿ ಮಾಡಲು ಹೋಗಿರಲಾರ! ಮತ್ತೆ ಯಾರೋ ಯಾವುದೋ ಕಾರಣಕ್ಕೆ ಶೇಷಪ್ಪನಿಗೆ ಚೂರಿ ಹಾಕಲು ಹೋಗಿರಬಹುದಲ್ಲವೆ? ಹಾಗಿದ್ದರೆ ನಾವೇಕೆ ಗಾಬರಿ ಕಳವಳದಲ್ಲಿ ಓಡಾಡಬೇಕು?

ಗೌರಿ ಪ್ರಶ್ನೆ ಕೇಳಿದ ಮೇಲೆ ಕೊಂಚ ಹೊತ್ತು ಯೋಚಿಸಿ ಸುರೇಶ "ಸಂಬಂಧ ಇಲ್ಲಾಂತ ಕಾಣುತ್ತೆ" ಎಂದ. ಆದರೆ ಗೌರಿ ಇನ್ನೂ ಪ್ರಶ್ನಿಸುವಂತೆ ಅವನನ್ನು ನೋಡಿದ್ದರಿಂದ "ನೋಡೆ, ನಾವಿನ್ನೂ ಜೀವನ್‌ಲಾಲನ ಚೆಕ್ ಕ್ಯಾಶ್ ಮಾಡಿಸಿ ಅರ್ಧ ದಿನ ಸಹಿತ ಆಗಿಲ್ಲ. ಅಷ್ಟರೊಳಗೇ ಅವನಿಗೆ ಅನುಮಾನ ಬರುತ್ತ?. ಆಮೇಲೆ ಜೀವನ್

ಲಾಲೂ ಇದಕ್ಕೆ ನೇರವಾಗಿ ಸಂಬಂಧಪಟ್ಟಿಲ್ಲದೆ ಇರಬಹುದು. ನಾನು ನೋಡಿದ ಹಾಗೆ ಬೇರೆ ಯಾರದೋ ಪರವಾಗಿ ಅವನು ನನಗೆ ಚೆಕ್ ಕೊಟ್ಟಿದ್ದು. ಈ ವ್ಯವಹಾರ ಇಲ್ಲಿನವರೇ ಯಾರೋ ನಡೆಸುತ್ತಿದ್ದರೆ, ಅವರಿಗೆ ನಾನು ಯಾರು ಏನು ಇತ್ಯಾದಿಗಳೆಲ್ಲ ಗೊತ್ತಿದ್ದರೆ, ಎಲ್ಲಕ್ಕಿಂತ ಮುಖ್ಯವಾಗಿ ನಾವು ಅವರಿಗೆ ಅಪಾಯಕಾರಿಗಳೆನ್ನುವಂತೆ ಅನುಮಾನಾಸ್ಪದ ವಾಗಿ ವರ್ತಿಸಿದರೆ ಆಗ ಅಪಾಯ ಬರಬಹುದು ಅಲ್ಲವ?'' ಎಂದು ಸುರೇಶ ಮತ್ತೆ ಮುಂದುವರಿದು ವಿವರಿಸಿದ. ಆದರೆ ಈ ಎಲ್ಲ ವಿವರಣೆಗೂ ಗೌರಿಗಾಗಲೀ ಸುರೇಶನಿಗಾಗಲೀ ನಿಜವಾಗಿಯೂ ತೃಪ್ತಿಕರವಾಗಿತ್ತೆಂದು ಹೇಳುವುದು ಕಷ್ಟ. ಏಕೆಂದರೆ ಈ ಎಲ್ಲ ಲೆಕ್ಕಾಚಾರಕ್ಕೂ ಅವರ ಬಳಿ ಇದ್ದ ಮಾಹಿತಿಗಳು ತೀರಾ ಅತ್ಯಲ್ಪ.

ಸುರೇಶ ಬಸ್ ಸ್ಟಾಂಡ್ ಬಳಿಗೆ ಬರುವ ವೇಳೆಗಾಗಲೇ ಮತ್ತೆ ಎರಡನೆಯ ಸಾರಿ ಮಳೆ ಬರುವ ಸೂಚನೆಗಳು ಕಾಣಿಸಿದುವು. ದೂರದಲ್ಲೆಲ್ಲೋ ಮಳೆ ಬೀಳಲಾರಂಬಿಸಿತ್ತೆಂದೇ ತೋರುತ್ತದೆ. ಗಾಳಿಯಲ್ಲಿ ಮಳೆಯ ಮತ್ತು ಮಣ್ಣಿನ ವಾಸನೆ ಸಹ ಶುರುವಾಗಿತ್ತು. ಆದರೆ ಆಗಲೇ ಸಂಪೂರ್ಣ ಕತ್ತಲಾಗಿದ್ದರಿಂದ ಅವರಿಬ್ಬರಿಗೂ ಮಳೆಯ ತೆಳುಪರದೆ ಕಣ್ಣಿಗೆ ಕಾಣಿಸಲಿಲ್ಲ.

''ಹಿಂಗಾರು ಮಳೆ ಇರಬೇಕು ಕಣ್ರೀ, ಬಂಗಾಳ ಕೊಲ್ಲಿ ಕಡೆ ಎಲ್ಲೋ ಡಿಪ್ರೆಶನ್ ಶುರುವಾಗಿರಬೇಕು. ಇಲ್ಲದಿದ್ರೆ ಈ ತರ ಥಂಡಿ ಗಾಳಿ ಬೀಸ್ತಿರಲಿಲ್ಲ.'' ಎಂದು ತನಗೆ ತಾನೇ ಎನ್ನುವಂತೆ ಗೌರಿ ಹೇಳಿಕೊಂಡಳು. ಸುರೇಶ ಅವಳ ಮಾತಿಗೇನೂ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಅವನು ಏನನ್ನೋ ಯೋಚಿಸುತ್ತಾ ಇದ್ದ. ಮಳೆ ಸಣ್ಣಗೆ ಆವಿಯಂತೆ ಬೀಳತೊಡಗಿತ್ತು. ಬೀದಿ ದೀಪಗಳ ಸುತ್ತ ಬೆಳ್ಳಗೆ ಮಂಜಿನ ಮುಸುಗಿನಂತೆ ಮಳೆಯ ಪರಿವೇಷ ಕಾಣುತ್ತಿತ್ತು. ಮಳೆ ಎಷ್ಟೊಂದು ತೆಳ್ಳಗೆ ಬೀಳುತ್ತಿತ್ತೆಂದರೆ ಬಸ್ ಸ್ಟಾಂಡಿನಲ್ಲಿರುವ ಜನರ ಗಣನೆಗೆ ಸಹ ಅದು ಬರಲಿಲ್ಲ.

ಬಸ್ ಸ್ಟಾಂಡಿಗೆ ಸಮೀಪದಲ್ಲಿ ಬೀದಿ ದೀಪದ ಬೆಳಕಿಗೆ ಅಡ್ಡಲಾಗಿ ಯಾವುದರದ್ದೋ ನೆರಳು ಕಪ್ಪಗೆ ಬಿದ್ದಿತ್ತು. ಇಬ್ಬರೂ ನಡೆಯುತ್ತ ಅದರೊಳಗೆ ಕಾಲಿಡುತ್ತಲೂ ಸುರೇಶ ಸರಸರ ಮುಂದುವರಿಯುತ್ತಿದ್ದ ಗೌರಿಯ ಭುಜ ಹಿಡಿದು ನಿಲ್ಲಿಸಿ ''ಗೌರಿ, ಒಂದು ಕೆಲಸ ಮಾಡೋಣ ಕಣೆ. ಎಂತಿದ್ದರೂ ಇನ್ನೊಂದು ಅರ್ಧ ಗಂಟೆಗೆ ಸಮುದ್ರದಕಡೆ ಮೇಲ್ ಟ್ರೇನ್ ಹೊರಡುತ್ತೆ. ಸುಮ್ಮನೆ ಅದರಲ್ಲಿ ಹತ್ತಿ ಹೋಗಿ ಬಿಡೋಣ. ಏನಂತಿ?'' ಎಂದ.

ಗೌರಿಗೆ ಅರ್ಥವಾಗಲಿಲ್ಲ. ಜುಗಾರಿ ಕ್ರಾಸ್ ಕಡೆಗೆ ಹೋಗುವ ಕೊನೆಯ ಬಸ್ಸು ಇನ್ನೂ ಹೋಗಿರಲಿಕ್ಕಿಲ್ಲ. ಅದೇಕೆ ಡಬ್ಬಲ್ ಚಾರ್ಜು ಕೊಟ್ಟು ಈ ರಾತ್ರಿ ರೈಲಿಗೆ ಹೋಗೋದು ಎಂದು ಕೇಳಲು ಮಾತುಗಳು ಅವಳ ಬಾಯಿಗೆ ಬಂದಿದ್ದವು. ಅಷ್ಟರಲ್ಲಿ ಅವಳಿಗೆ ತಾವು ಸಿಕ್ಕಿಬಿದ್ದು ಎದುರಿಸುತ್ತಿರುವ ವಿಚಿತ್ರ ಸನ್ನಿವೇಶದ ನೆನಪು ಬಂದು ಅದನ್ನೆಲ್ಲ ಯೋಚಿಸಿಯೇ ಸುರೇಶ ಈ ಸಲಹೆ ಕೊಟ್ಟಿದ್ದಾನೆಂದೆನ್ನಿಸಿ ಮರು ಮಾತಾಡದೆ

"ಓಯಸ್, ಅದಕ್ಕೇನಂತೆ, ನಂಗಂತೂ ರೈಲಿನಲ್ಲಿ ಹೋಗೋದಂದರೆ ಇಷ್ಟಾನೇ" ಎಂದಳು.

"ಯಾಕೇ ಅಂತ ದಾರೀಲಿ ಹೇಳ್ತೀನಿ ನಿಂಗೆ, ನಡಿ. ನಮಗೆ ಚಳ್ಳೆಹಣ್ಣು ತಿನ್ನಿಸಿದೋರಿಗೆ ನಾವು ಸ್ವಲ್ಪ ಚಳ್ಳೆಹಣ್ಣು ಯಾಕೆ ತಿನ್ನಿಸಬಾರದು" ಎಂದು ಹೇಳುತ್ತ ಸುರೇಶ ಬಸ್ ಹಿಡಿಯುವ ತಮ್ಮ ಕಾರ್ಯಕ್ರಮ ಸಂಪೂರ್ಣ ಬದಲಾಯಿಸಿ ಗೌರಿಯೊಡನೆ ಬಸ್ ಸ್ಟ್ಯಾಂಡಿನ ಎಡಕ್ಕೆ ಇದ್ದ ಸಣ್ಣ ನಸುಗತ್ತಲಾದ ಓಣಿಯಲ್ಲಿ ರೈಲ್ವೆ ಸ್ಟೇಷನ್ ದಾರಿ ಹಿಡಿದ.

"ಚಳ್ಳೆಹಣ್ಣು ತಿನ್ನಿಸಿದ್ರೂ ದುಡ್ಡೂ ಕೊಟ್ಟಿದಾರಲ್ಲ. ಒಂದು ಲಕ್ಷ ಕೊಟ್ಟು ಚಳ್ಳೆಹಣ್ಣು ತಿನ್ನಿಸೋದಾದರೆ ಸುಮಾರು ಜನ ಚಳ್ಳೆಹಣ್ಣು ಸಂತೋಷವಾಗೇ ತಿನ್ನೋದಕ್ಕೆ ತಯಾರಿರ್ತಾರೆ!" ಎಂದಳು ಗೌರಿ.

"ಆಮೇಲೆ ಕುತ್ತಿಗೇಗೆ ಬರೋದಾದರೆ?" ಎಂದು ಸುರೇಶ ಪ್ರಶ್ನೆ ಕೇಳಿದ.

"ಅಯ್ಯೋ ಅದೆಲ್ಲಾ ಸದ್ಯಕ್ಕೆ ನಮ್ಮ ಊಹೆ ಅಲ್ಲವೇನ್ರಿ. ಕುತ್ತಿಗೆಗೆ ಬಂದಾಗ ನೋಡಿಕೊಳ್ಳೋಣ ತಗೊಳ್ಳಿ" ಎಂದಳು ಗೌರಿ.

ಗೌರಿ ಹಾಗೆ ಹೇಳುವುದೇನೋ ಹೇಳಿದಳು. ಆದರೆ ರೈಲ್ವೆ ಸ್ಟೇಷನ್ ದಾರಿಯ ಏಕಾಂತ, ಮೌನ, ಹಾಗು ಕವಿದ ಕತ್ತಲನ್ನು ನೋಡಿ ಅವಳಿಗೆ ಕೊಂಚ ದಿಗಿಲೇ ಆಯ್ತು. ಹಾಗಾದರೆ ಕೊಲೆಪಾತಕಿಗಳು ಹೇಗಿರುತ್ತಾರೆ? ಅವರನ್ನು ಹೇಗೆ ಪತ್ತೆ ಮಾಡುವುದು. ಈ ರಸ್ತೆಯಲ್ಲಿ ನಮ್ಮನ್ನು ಅಡ್ಡಗಟ್ಟಿ ಸುತ್ತುವರಿದು ಯಾವ ರೀತಿ ಕೊಲ್ಲಬಹುದು? ಇಬ್ಬರದೂ ಕುತ್ತಿಗೆ ಹಿಸುಕಿ ಕೊಲ್ಲುತ್ತಾರೋ? ಅಥವಾ ಕತ್ತಿ ತಗೊಂಡು ಕುತ್ತಿಗೆ ಕಡಿದುಹಾಕುತ್ತಾರೋ? ನಮಗೆ ಯಾಕೆ ಅಷ್ಟೊಂದು ಭಯವಾಗುತ್ತ ಇಲ್ಲ. ಸಾವು ಬಹು ದೂರದ ಸಾಧ್ಯತೆ ಎನ್ನಿಸಿರುವುದರಿಂದ ಇರಬೇಕು. ಖೂನಿ ಕೊಲೆಗಳನ್ನು ಕಣ್ಣಾರೆ ನೋಡಿದ್ದರೆ ಇಷ್ಟು ಹೊತ್ತಿಗೆ ಗಾಬರಿಗೇ ಅರ್ಧ ಜೀವವಾಗುತ್ತಿದ್ದೆವೋ ಏನೋ! ಗೌರಿ ಕತ್ತಲಲ್ಲಿ ನಡೆಯುತ್ತ ಯೋಚಿಸಿದಳು.

* * * *

ಬೇರೆ ಯಾವುದೇ ಸಂದರ್ಭಲ್ಲೂ ಸುರೇಶ ಜುಗಾರಿಕ್ರಾಸಿಗೆ ಬಸ್ಸು ಬಿಟ್ಟು ರೈಲಿನಲ್ಲಿ ಹೋಗೋಣ ಎಂದಿದ್ದರೆ ಗೌರಿ ಖಂಡಿತ ನಿಮಗೇನು ಹುಚ್ಚುಗಿಚ್ಚು ಹಿಡಿದಿದೆಯ? ಎಂದು ರೇಗಾಡುತ್ತಿದ್ದುದು ಗ್ಯಾರೆಂಟಿ. ಏಕೆಂದರೆ ಬಸ್ಸಿನಲ್ಲಿ ಕೆಲವೇ ಗಂಟೆಗಳೊಳಗೆ ಹೋಗಿ ಇಳಿಯಬಹುದಾಗಿದ್ದ ಜುಗಾರಿಕ್ರಾಸು ರೈಲಿನಲ್ಲಿ ಇಡೀ ಒಂದು ರಾತ್ರಿ ತಗೊಳ್ಳುತ್ತಿತ್ತು. ಅದೂ ಜುಗಾರಿ ಕ್ರಾಸಿನಿಂದ ಏಳು ಮೈಲು ದೂರದಲ್ಲಿದ್ದ ಅಂಬಳ ಸ್ಟೇಷನ್ನಿನಲ್ಲಿ ಇಳಿದು ಅಲ್ಲಿಂದ ಜುಗಾರಿ ಕ್ರಾಸಿಗೆ ಒಳದಾರಿಯಲ್ಲಿ ನಡೆದೋ ಅಥವಾ ಸ್ಟೇಷನ್ನಿನಲ್ಲಿ ಇದ್ದ ಐದು ರಿಕ್ಷಾಗಳಲ್ಲಿ ಒಂದನ್ನು ಹಿಡಿದೋ ಹೋಗಬೇಕಾಗಿತ್ತು. ಆದರೆ ತಾವು ಸಿಕ್ಕಿಕೊಂಡಿರುವ ವಿಚಿತ್ರ ವ್ಯೂಹಕ್ಕೆ ಏನೋ ಒಂದು ಪ್ರತಿ ವ್ಯೂಹ ಮಾಡಬೇಕೆಂದು ಸುರೇಶ ಕಾರ್ಯಕ್ರಮ ಬದಲಾಯಿಸಿದ್ದರಿಂದ ಗೌರಿ ಮರು ಮಾತಾಡದೆ ಹೋಗೋಣ

ನಡೀರಿ ಎಂದು ಹೇಳಿದ್ದು. ದೇವಪುರದಿಂದ ಅದಿನ್ನೂ ಒಂದುರೀತಿಯ ಹಂಗಾಮಿ ರೈಲು ಮಾರ್ಗದಂತೆಯೇ ಇತ್ತು. ಜುಗಾರಿ ಕ್ರಾಸಿಗೆ ಸಂಪೂರ್ಣ ವಿರುದ್ಧ ದಿಕ್ಕಿನಲ್ಲಿ ಸಾಗುವ ಅದು ಸಹ್ಯಾದ್ರಿ ಪರ್ವತಗಳ ಭಯಂಕರ ಕಮರಿ ಕಣಿವೆಗಳಲ್ಲೆಲ್ಲಾ ತಿರುಗಿ ಅಂಬಳ ತಲುಪುತ್ತಿತ್ತು. ಆದ್ದರಿಂದಲೆ ದೇವಪುರದಿಂದ ಜುಗಾರಿಕ್ರಾಸಿಗೆ ರೈಲಿನಲ್ಲಿ ಹೋಗಲು ಬಸ್ ಛಾರ್ಜಿನ ನಾಲ್ಕರಷ್ಟು ಹಣ ಬೇಕಾಗುತ್ತಿತ್ತು. ಇಷ್ಟಾದರೂ ಬೆಳಗಿನಹೊತ್ತು ಆ ರೈಲಿನಲ್ಲಿ ಹೋಗುವುದಾದರೆ ಅಷ್ಟು ದುಡ್ಡು ಖರ್ಚಾದರೂ ಆ ದಾರಿ ಹಿಡಿದದ್ದು ಸಾರ್ಥಕವಾಗುತ್ತಿತ್ತು. ಅಷ್ಟೊಂದು ರೋಮಾಂಚಕ, ನಯನ ಮನೋಹರ ಆ ರೈಲಿನ ದಾರಿ!

ದೇವಪುರದಿಂದ ಹೊರಟಕೂಡಲೆ ಇದಿರಾಗುವ ಪರ್ವತ ಶ್ರೇಣಿಗಳಲ್ಲಿ ಒಂದೇ ಮಟ್ಟ ಕಾಯ್ದುಕೊಂಡು ರೈಲು ರಸ್ತೆ ತಗೊಂಡು ಹೋಗಲು ಎಂಜಿನಿಯರುಗಳು ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ. ದೋಣಿಹೊಳೆಯನ್ನು ಸೇರುವ ಸಾವಿರಾರು ಹಳ್ಳಗಳೂ ಉಪನದಿಗಳೂ ವರ್ಷಾಂತರಗಳಿಂದ ಕೊರೆದು ಮಾಡಿರುವ ಭೀಕರ ಕಮರಿಗಳನ್ನೆಲ್ಲ ಸುತ್ತುಬಳಸಿ ರೈಲು ರಸ್ತೆ ತಗೊಂಡು ಹೋಗಬೇಕಾದ್ದರಿಂದ ರೈಲು ಸ್ಟೇಷನ್ನಿನಿಂದ ಹೊರಟು ಎಷ್ಟೋ ಹೊತ್ತಿನವರೆಗೂ ದೇವಪುರದ ಆಸುಪಾಸಿನಲ್ಲೇ ಹೊಗೆ ಬಿಟ್ಟುಕೊಂಡು ನಿಟ್ಟುಸಿರು ಬಿಡುತ್ತ ಸುತ್ತುಹೊಡೆಯುತ್ತದೆ. ಈ ರೈಲು ಹಾದಿಯಲ್ಲಿ ಇತ್ತೀಚೆಗಷ್ಟೆ ರೈಲು ಓಡಾಡಲು ಶುರುಮಾಡಿದ್ದಾದರೂ ಈ ಕೆಲಸ ಪ್ರಾರಂಭ ಮಾಡಿದ್ದು ದಶಕಗಳ ಹಿಂದೆ. ಒಂದೆರಡು ಕಡೆ ಪರ್ವತದಿಂದ ಪರ್ವತಕ್ಕೆ ರೈಲು ದಾಟಿಸಲು ಕಿಲೋಮೀಟರುಗಟ್ಟಲೆ ಉದ್ದದ ತೂಗು ಸೇತುವೆಗಳನ್ನೂ, ಅಡ್ಡನಿಂತ ಪರ್ವತಗಳನ್ನೂ, ದಾಟಿಸಲಸಾಧ್ಯವಾಗಿ ಮೈಲಿಗಟ್ಟಲೆ ಉದ್ದದ ಸುರಂಗಗಳನ್ನೂ ಕೊರೆಯಬೇಕಾಯ್ತು. ಅಯಸ್ಕಾಂತ ಶಿಲೆಯ ಈ ಮಹಾ ಪರ್ವತಗಳ ಹೊಟ್ಟೆಯೊಳಗೆ ಸುರಂಗಮಾರ್ಗದಲ್ಲಿ ಹೊಕ್ಕ ರೈಲು ಬೆಳಗಿನ ಹೊತ್ತಾದರೂ ಹತ್ತು ಹದಿನೈದು ನಿಮಿಷ ಕಗ್ಗತ್ತಲಲ್ಲೇ ಪ್ರಯಾಣ ಮಾಡುವುದು ಯಾತ್ರಿಕರಿಗೆ ಎದೆ ಝಲ್ಲೆನಿಸುತ್ತದೆ. ರೈಲಿನಲ್ಲಿ ಕುಳಿತಿರುವವರು ಎಡಬಲಕ್ಕೆ ಹಣಿಕಿದರೆ ಒಮ್ಮೆಲೆ ತಲೆ ತಿರುಗುವಷ್ಟು ಆಳದ ಕಮರಿಗಳು ಬಾಯಿ ಕಳೆದಿರುವುದು ಕಾಣುತ್ತದೆ. ಅಳ್ಳೆದೆಯವರು ಯಾಕಾದರೂ ಈ ರೈಲಿಗೆ ಟಿಕೆಟ್ ತಗೊಂಡೆವಪ್ಪಾ ಎಂದು ಚಿಂತಾಕ್ರಾಂತವಾಗಿ ಅಂಬಳ ತಲುಪುವವರೆಗೂ ನಿದ್ದೆ ಮಾಡುವವರಂತೆ ನಟಿಸುತ್ತ ಗಟ್ಟಿ ಕಣ್ಣು ಮುಚ್ಚಿಕೊಂಡು ಭಗವನ್ನಾಮಸ್ಮರಣೆಯಲ್ಲಿ ಕುಳಿತುಬಿಡುತ್ತಿದ್ದರು. ಸರ್ಕಾರದವರೇ ಅನೇಕ ವರ್ಷಗಳವರೆಗೆ ಈ ಮಾರ್ಗದಲ್ಲಿ ಪ್ಯಾಸೆಂಜರ್ ಗಾಡಿಗಳನ್ನು ಬಿಡುತ್ತಿರಲಿಲ್ಲ. ಸುರಂಗ ಕಣಿವೆ ಕಮರಿಗಳೆಡೆಯಲ್ಲಿ ಹೋಗುವ ಈ ಮಾರ್ಗದ ಅಕ್ಕಪಕ್ಕದ ಪರ್ವತಗಳ ಶಿಖರಗಳು ರೈಲು ರಸ್ತೆಗಾಗಿ ಕೊರೆದು ಕಡಿದು ಡೈನಮೈಟ್ ಬ್ಲಾಸ್ಟ್ ನಡೆಸಿ ಎಷ್ಟೊಂದು ಅಸ್ಥಿರವಾಗಿದ್ದುವೆಂದರೆ ಆಗೀಗ ರೈಲು ರಸ್ತೆಗೆ ಅಡ್ಡಲಾಗಿ ಹೆಬ್ಬಂಡೆಗಳು ಉರುಳುರುಳಿ ಬಂದು ಕುಳಿತುಬಿಡುವುದೂ, ಪರ್ವತಗಳ ಇಳುಕಲಿನ ಮಣ್ಣು ಜರಿದು ಸುರಂಗದ

ಬಾಯಿ ಮುಚ್ಚಿಬಿಡುವುದೂ, ಒಮ್ಮೊಮ್ಮೆ ಕಾಡಾನೆಗಳು ರೈಲು ರಸ್ತೆಗೆ ಅಡ್ಡಲಾಗಿ ಗುಂಪುಕೂಡಿ ನಿಲ್ಲುವುದೂ, ಅನೇಕ ವರ್ಷಗಳವರೆಗೆ ಸಂಭವಿಸುತ್ತಲೇ ಇತ್ತು. ಪ್ಯಾಸೆಂಜರ್ ಗಾಡಿಗಳನ್ನು ಆ ಮಾರ್ಗದಲ್ಲಿ ಓಡಿಸುವುದು ಅತ್ಯಂತ ಅಪಾಯಕರವಾದ್ದರಿಂದ ಮೊದಲೆಲ್ಲ ಇಲ್ಲಿ ಕೇವಲ ಗೂಡ್ಸ್ ಗಾಡಿಗಳನ್ನು ಮಾತ್ರ ಓಡಿಸಲಾಗುತ್ತಿತ್ತು. ಬರಿಯ ಸರಕು ಸಾಗಾಣಿಕೆಗೆ ಮಾತ್ರ ಮೀಸಲಾಗಿದ್ದ ಈ ಮಾರ್ಗದಲ್ಲಿ ಪ್ಯಾಸೆಂಜರ್ ಗಾಡಿಗಳನ್ನು ಓಡಿಸಲು ಪ್ರಾರಂಭಿಸಿದ್ದು ಇತ್ತೀಚೆಗಷ್ಟೆ. ಆದರೂ ಇದೂ ಕೂಡ ಕೇವಲ ಬೇಸಿಗೆಯಲ್ಲಿ ಮಾತ್ರ. ಮಳೆಗಾಲ ಆರಂಭವಾದಕೂಡಲೆ ಇಲ್ಲಿನ ರೈಲು ಸಂಚಾರವನ್ನೆ ಕೆಲವು ವೇಳೆ ನಿಲ್ಲಿಸಲಾಗುತ್ತಿತ್ತು. ಅನೇಕ ವೇಳೆ ಎರಡೆರಡು ಎಂಜಿನ್ನುಗಳನ್ನು ಜೋಡಿಸಿ ರೈಲು ಓಡಿಸಬೇಕಾದ ಪ್ರಮೇಯ ಬರುತ್ತಿತ್ತು. ಬ್ರಿಟಿಷರ ಕಾಲದ ಹಳೇ 'ವೈಡಿ' 'ವೈಬಿ' ಎಂಜಿನ್‌ಗಳನ್ನು ಅಲ್ಲಿ ಓಡಿಸುತ್ತಿದ್ದುದು. ಕಲ್ಲಿದ್ದಲು ಉಪಯೋಗಿಸುವ ಈ ಉಗಿ ಎಂಜಿನ್‌ಗಳು ಸಮುದ್ರ ಮಟ್ಟದಿಂದ ದೇವಪುರದವರೆಗೆ ಸುಮಾರು ನಾಲ್ಕು ಸಾವಿರ ಅಡಿಯೆತ್ತರಕ್ಕೆ ಹತ್ತಬೇಕಾದರೆ ಸುಸ್ತಾಗಿ ಸೋಲುತ್ತಿದ್ದುವು. ಅಲ್ಲಿನ ನೆಲ ಇನ್ನೂ ಸ್ಥಿರವಿಲ್ಲದ ಕಾರಣ ಬರಿಗಣ್ಣಿಗೆ ಅಂದಾಜು ಸಿಕ್ಕದಷ್ಟು ಸೂಕ್ಷ್ಮವಾಗಿ ಅಲ್ಲಲ್ಲಿ ಏರು ತಗ್ಗುಗಳುಂಟಾಗಿ ಭಾರ ಎಳೆದುಕೊಂಡು ಮುಂದುವರಿಯಲು ಈ ಉಗಿ ಎಂಜಿನ್ನುಗಳಿಗೆ ದೊಡ್ಡ ಕಂಟಕಗಳಾಗಿದ್ದವು. ಮಳೆಗಾಲ ಕಳೆದಮೇಲೆ ಅಂಥ ತೊಂದರೆಗಳಾವುವೂ ಇಲ್ಲದುದರಿಂದ ಪ್ಯಾಸೆಂಜರ್ ಗಾಡಿಗಳನ್ನು ಓಡಿಸಲಾಗುತ್ತಿತ್ತು.

ಸುರೇಶ ಗೌರಿ ಸ್ಟೇಷನ್ ತಲುಪಿದಾಗ ಸ್ಟೇಷನ್ನಿನಲ್ಲಿ ಒಂದು ನರಪಿಳ್ಳೆಯೂ ಕಾಣಲಿಲ್ಲ. ಸ್ಟೇಷನ್ ಖಾಲಿಯಾಗಿ ಹಾಳುಸುರಿದು ಬಿದ್ದಿರುವುದನ್ನು ನೋಡಿ ಇಬ್ಬರಿಗೂ ರೈಲು ಹೋಗಿ ಎಷ್ಟೋ ಹೊತ್ತಾಗಿರಬಹುದೆಂಬ ಭಾವನೆ ಬಂತು. ಟಿಕೆಟ್ ಕೌಂಟರಿನಲ್ಲಿ ಟಿಕೆಟ್ ಕೊಡುವವರೂ ಇರಲಿಲ್ಲ. ಸ್ಟೇಷನ್ ಮಾಸ್ಟರ್ ಸಹ ಇರಲಿಲ್ಲ. ಪ್ಲಾಟ್ ಫಾರ್ಮಿನಲ್ಲಿ ಯಾವ ಪ್ರಯಾಣಿಕರೂ ಇರಲಿಲ್ಲ. ಇಡೀ ಸ್ಟೇಷನ್ ಬಿಕೋ ಎನ್ನುತ್ತಿದೆ! ಸ್ಟೇಷನ್ ಕ್ಯಾಂಟೀನಿನಲ್ಲಿ ಏಕಾಂಗಿಯಾಗಿ ಕೆಲಸವಿಲ್ಲದೆ ಕುಳಿತಿದ್ದ ಸಪ್ಲೇಯರನ್ನು ಕೇಳಿದಾಗ ಇಡೀ ಸ್ಟೇಷನ್ ಸಿಬ್ಬಂದಿ ರೈಲು ಬರುವ ಕೆಲ ಹೊತ್ತಿನ ಮುಂಚೆ ಬರುತ್ತಾರೆಂದೂ, ಅನೇಕ ವೇಳೆ ರೈಲಿನೊಂದಿಗೆ ಬರುವ ಗಾರ್ಡೇ ಟಿಕೆಟ್ ಕೌಂಟರಿನಲ್ಲಿ ಟಿಕೆಟ್ ಕೊಡುತ್ತಾನೆಂದೂ ಹೇಳಿದರು. ಜನರಿಲ್ಲದೆ ಹಾಳು ಸುರಿಯುತ್ತಿದ್ದ ಸ್ಟೇಷನ್ ನೋಡಿ ಗೌರಿಗೂ ಸುರೇಶನಿಗೂ ಖುಷಿಯೇ ಆಯ್ತು. ಅಕ್ಕಪಕ್ಕದವರನ್ನೆಲ್ಲ ಗುಮಾನಿಯಿಂದ ನೋಡುತ್ತ ಕಾಯುವ ಬದಲು ಈ ಖಾಲಿ ಸ್ಟೇಷನಿನಲ್ಲಿ ನಿರಾತಂಕವಾಗಿ ಕಾಲ ಕಳೆಯಬಹುದೆಂದು ಅಂದುಕೊಂಡು, ಕ್ಯಾಂಟೀನಿನಲ್ಲಿದ್ದ ಮೊಸರವಲಕ್ಕಿ ಒಂದೊಂದು ಪ್ಲೇಟ್ ತಗೊಂಡು ತಿನ್ನುತ್ತ ಕುಳಿತರು. ಹೊರಗೆ ಮಳೆ ಧೂಳಿನಂತೆ ಉದುರುತ್ತ ಇದ್ದುದು ಗೊತ್ತೇ ಆಗದಂತೆ ನಿಧಾನವಾಗಿ ಜೋರಾಗುತ್ತ ಇತ್ತು.

# ಮೇಲ್ ಟ್ರೈನ್ - ೨೦



ಕಗ್ಗತ್ತಲೆ! ಮಳೆ ಹಿಡಿದಿದ್ದರಿಂದ ಆಕಾಶದಲ್ಲೆಲ್ಲ ಮೋಡ ಕವಿದು ನಕ್ಷತ್ರಗಳ ಬೆಳಕು ಸಹ ಇರಲಿಲ್ಲ. ರೈಲು ಬರುವುದು ದೂರದಲ್ಲಿ ಕಾಣುತ್ತಿದ್ದ ಚಲಿಸುವ ಬೆಳಕುಗಳಿಂದ ಗೊತ್ತಾಬೇಕಿತ್ತೇ ಹೊರತು ರೈಲು ಪ್ಲಾಟ್ ಫಾರ್ಮಿನ ಒಳಗೆ ಬರುವವರೆಗೂ ಅದರ ಸದ್ದು ಕೇಳಿಸಲೇ ಇಲ್ಲ. ಅಷ್ಟೊಂದು ಗಾಳಿಯ ಸದ್ದು ಇತ್ತು. ಸುರೇಶ ಗೌರಿ ಇಬ್ಬರನ್ನು ಬಿಟ್ಟರೆ ಅಲ್ಲಿ ರೈಲಿಗೆ ಹತ್ತುವ ಇನ್ನೊಂದು ವ್ಯಕ್ತಿ ಇರಲಿಲ್ಲ. ಇಳಿಯುವವರೇನೋ ಹಲವಾರು ಮಂದಿ ಇದ್ದರು. ಇಬ್ಬರೂ ಒಂದು ಕಂಪಾರ್ಟಮೆಂಟಿಗೆ ಹತ್ತಿ ಕುಳಿತಾಗ ಆ ಕಂಪಾರ್ಟಮೆಂಟಿನಲ್ಲಿ ಇಬ್ಬರೇ ಇಬ್ಬರು ಥ್ರೂ ಪ್ಯಾಸೆಂಜರುಗಳು ಮಾತ್ರ ಕುಗುರುತ್ತಾ ಕುಳಿತಿದ್ದರು. ಆ ಬಿಕೋ ಎನ್ನುತ್ತಿದ್ದ ಸ್ಟೇಷನ್ನಿನಲ್ಲಿ ತಮ್ಮನ್ನು ಹಿಂಬಾಲಿಸುತ್ತಿದಾರೆಂದು ಅನುಮಾನಿಸಲು ಸಹ ಗೌರಿಗೆ ಒಂದಿಬ್ಬರು ರೈಲು ಸಿಬ್ಬಂದಿಯವರನ್ನು ಬಿಟ್ಟರೆ ಬೇರೆ ಯಾರೂ ಜನ ಕಣ್ಣಿಗೆ ಬೀಳಲಿಲ್ಲ. ಆದರೂ ಗೌರಿ ಪ್ಲಾಟ್ ಫಾರ್ಮಿನತ್ತ ನೋಡುತ್ತಲೇ ಇದ್ದಳು, ಕೊನೆಯ ಗಳಿಗೆಯಲ್ಲಿ ಬಂದು ಹತ್ತಿಕೊಳ್ಳುವ ಖೇಡಿಯೊಬ್ಬನನ್ನು ನಿರೀಕ್ಷಿಸುತ್ತ! ಅಷ್ಟರಲ್ಲಿ ರೈಲು ಕಿರೋ ಎಂದು ಒಮ್ಮೆ ಕೂಗಿ ನಿಟ್ಟುಸಿರು ಬಿಡುತ್ತ ದಮ್ಮು ಕಟ್ಟಿ ಎಳೆಯತೊಡಗಿತು. ಗೌರಿಯ ಕಣ್ಣೆದುರಿಗೇ ನಿಧಾನವಾಗಿ ಸ್ಟೇಷನ್ನು, ದೇವಪುರದ ದೀಪಗಳು ಎಲ್ಲ ದೂರಾಗತೊಡಗಿದುವು. ಗೌರಿಗೆ

ಇದ್ದಕ್ಕಿದ್ದಹಾಗೆ ತಾವು ಯೋಚಿಸಿದ್ದು, ನಿರೀಕ್ಷಿಸಿದ್ದು, ಅನುಮಾನಿಸಿದ್ದು ಪ್ರತಿಯೊಂದೂ ಭ್ರಾಂತಿ ಎಂದೆನ್ನಿಸಿತು. ರೈಲಿನ ಲಯಬದ್ಧ ಚಲನೆ, ತೊಟ್ಟಿಲು ತೂಗಿದಂತೆ ತೂಗುತ್ತಿದ್ದ ಅದರ ಓಲಾಟ, ಅವಳಿಗೆ ತಾವು ಏನೋ ಒಂದರಿಂದ ಪಾರಾದ, ದೂರವಾದ ನಂಬಿಕೆ ಹುಟ್ಟಿಸಿತು. ಕೈಯ್ಯಲ್ಲಿ ಹಿಡಿದುಕೊಂಡಿದ್ದ ಒಂದೂವರೆ ಲಕ್ಷದ ಕಂತೆನ್ನು ಮುಂದೆ ಸಿಗುವ ಅಗಾಧವಾದ ಯಾವುದಾದರೂ ಕಮರಿಯೊಂದರೊಳಗೆ ಬೀಸಿ ಎಸೆದು ನಿರಾತಂಕವಾಗಿ ಅಂಬಳದವರೆಗೂ ನಿದ್ದೆ ಮಾಡುತ್ತ ಹೋದರೆ ಎಷ್ಟು ಚೆನ್ನ ಎಂದು ಯೋಚಿಸಿದಳು.

"ರೈಲು ಕಂಪ್ಲೀಟು ಖಾಲಿ. ಬಸ್ಸಿಗೆ ಹೋಗಿ ಹತ್ತಿದವರನ್ನೆಲ್ಲ ಗುಮಾನಿಯಿಂದ ನೋಡುತ್ತ ಹೋಗೋದರ ಬದಲು ರೈಲಿಗೆ ಬಂದಿದ್ದು ಒಳ್ಳೆಯದಾಯ್ತು. ಅವರಿಬ್ಬರು ಥ್ರೂ ಪ್ಯಾಸೆಂಜರುಗಳನ್ನು ಬಿಟ್ಟರೆ ಗಾಡಿ ಒಳಗೆ ಕೇಳೋದಕ್ಕೆ ಒಂದು ಹುಳ ಇಲ್ಲ" ಎಂದು ಸಮಾಧಾನದ ದನಿಯಲ್ಲಿ ಸುರೇಶ ಹೇಳಿದ.

"ಅಲ್ರಿ ಸುಮ್ಮನೆ ಗಾಬರಿ ಬಿದ್ದು ನಾವು ರೈಲು ಹತ್ತಿದೆವೋ ಏನೋ. ನಾವು ಯೋಚಿಸಿದ್ದೆಲ್ಲ ನಮ್ಮ ಭ್ರಾಂತಿ ಇರಬಹುದಲ್ಲವ?" ಗೌರಿ ಕೇಳಿದಳು.

"ನಾವು ಯೋಚಿಸಿದ್ದು ಸರಿ ಇಲ್ಲದೆ ಇರಬಹುದು. ಆದರೆ ನಿನ್ನ ಕೈಯ್ಯಲ್ಲಿ ಆ ದುಡ್ಡು ಇರೋವರೆಗೆ ನಿನ್ನ ಮನಸ್ಸು ಅದಕ್ಕೆ ವಿವರಣೆ ಕೇಳ್ತಿರುತ್ತದಲ್ಲ. ಸಮರ್ಪಕ ವಿವರಣೆ ಸಿಕ್ಕೋವರೆಗೂ ನಾವು ಯೋಚಿಸಲೇ ಬೇಕಲ್ಲ. ಕೊನೇ ಪಕ್ಷ ನಮ್ಮನ್ನು ಯಾರೂ ಹಿಂಬಾಲಿಸುತ್ತ ಇಲ್ಲ ಅಂತ ತಿಳಿಯೋದಕ್ಕಾದರೂ ನಾವು ರೈಲು ಹತ್ತಿದ್ದು ಒಳ್ಳೆಯದಾಯ್ತಲ್ಲವ?"

"ನಾನು ಇನ್ನೊಂದು ಸಾರಿ ದುಡ್ಡು ಎಣಿಸಿ ನೋಡಲೇನ್ರಿ?"

"ನಿನ್ನದೆಂಥ ಹಾಳು ದುಡ್ಡೆಣಿಸುವ ಚಪಲ ಮಾರಾಯ್ತಿ! ಒಂದು ಸಾರಿ ನೀನು ಎಣಿಸಿ ಇಷ್ಟೊಂದು ತಲೆ ನೋವು ಬಂದಿದೆ"

"ಇನ್ನೊಂದು ಸಾರಿ ಎಣಿಸಿದಾಗ ಖಾಲಿ ಐವತ್ತೆಂಟು ಸಾವಿರ ಇದ್ದರೆ ಖುಷಿಯಾಗೋದಿಲ್ಲವೇನ್ರಿ?"

"ದುಡ್ಡು ಕಳಕೊಂಡರೆ ಖುಷಿಯಾಗುತ್ತ?"

"ಥುತ್ ಆ ಹಾಳು ಒಂದುಲಕ್ಷ ಹೆಚ್ಚಿಗೆ ಇರೋದರಿಂದಲೇ ಅಲ್ವ ಈ ಗೋಳು ಶುರ್‍ವಾಗಿದ್ದು." ಎಂದು ಗೌರಿ ಎಣಿಸಿ ನೋಡೇಬಿಡುವ ಯೋಚನೆಯಲ್ಲಿದ್ದಳು.

"ನೋಡು ಅಲ್ಲಿ ಆ ಮೂಲೇಲಿ ಕೂತಿರೋವರು ಕಳ್ಳರೋ ಕಾಕರೋ ಮರ್ಯಾದಸ್ತರೋ ಒಂದೂ ಗೊತ್ತಿಲ್ಲ. ಮತ್ತೆ ದಾರಿ ಉದ್ದಕ್ಕೂ ಅವರ ಮೇಲೆ ಗುಮಾನಿ ಮಾಡಿಕೊಂಡು ಹೋಗೋದಕ್ಕೆ ಏರ್ಪಾಡು ಮಾಡ್ತಿದೀಯ ಅಷ್ಟೆ"

ಗೌರಿ ಕೊಂಚ ಯೋಚನೆ ಮಾಡಿ, ಆ ಕಡೆ ಕುಳಿತಿದ್ದ ಇಬ್ಬರ ಕಡೆ ಒಮ್ಮೆ ನೋಡಿ "ಎಣಿಸೋದಿಲ್ಲ ಬಿಡಿ, ಸುಮ್ಮನೆ ಅವರಿವರ ಮೇಲೆ ಗುಮಾನಿ ಮಾಡ್ತ ದಾರಿ ಸಾಗಿಸೋದು ಯಾಕೆ?" ಎಂದಳು.

ರೈಲಿನ ವೇಗ ಹೆಚ್ಚಾಗುವ ಹಾಗೆ ಕಾಣಲಿಲ್ಲ. ಮಳೆಯ ಒದ್ದೆಗೆ ಕಂಬಿಗಳು ಜಾರುತ್ತಿದ್ದುದರಿಂದ ಎಂಜಿನ್ನಿನ ಚಕ್ರಗಳು ಕಂಬಿಯ ಮೇಲೆ ಸ್ಲಿಪ್ಪಾಗುತ್ತಿದ್ದವು. ಆಗೆಲ್ಲ ಚುಸ್ ಫುಸ್ ಎಂದು ಮೆಲ್ಲಗೆ ಎಳೆಯುತ್ತಿದ್ದ ಎಂಜಿನ್ ಜುಗುಜುಗುಜುಗು ವೇಗವಾಗಿ ಸದ್ದು ಮಾಡುತ್ತಿತ್ತು.

ದೇವಪುರ ಸ್ಟೇಷನ್ ಬಿಟ್ಟು ಕಾಲು ಗಂಟೆಯಾದರೂ ರೈಲು ದೇವಪುರದಿಂದ ಎರಡು ಮೈಲು ದೂರದಲ್ಲಿದ್ದ ಹಳೆ ದೇವಪುರ ಅಥವಾ ಕುಂಬಾರ ಗುಂಡಿ ಸ್ಟೇಷನನ್ನು ಸಹ ದಾಟಿರಲಿಲ್ಲ. ರೈಲು ಇನ್ನೂ ಚಲಿಸುತ್ತಲೇ ಇರುವಾಗ ಯಾರೋ ರೈಲು ಗಾಡಿಯ ಬಾಗಿಲನ್ನು ತೆರೆಯಲು ಪ್ರಯತ್ನಿಸುತ್ತ ದಡದಡ ಸದ್ದು ಮಾಡಿದರು. ಸುರೇಶ ಎದ್ದು ಬಾಗಿಲಿಗೆ ಒಳಗಿಂದ ಹಾಕಿದ್ದ ಅಗುಳಿಯನ್ನು ತೆಗೆಯಲು ಪ್ರಯತ್ನಿಸಿದ. ಆದರೆ ಹೊರಗಿದ್ದಾತ ಬಾಗಿಲನ್ನು ಬಲವಾಗಿ ತಳ್ಳುತ್ತಿದ್ದುದರಿಂದಲೋ ಏನೋ ಸುಲಭದಲ್ಲಿ ತೆಗೆಯಲಾಗದೆ ಹೊರಗಿನಿಂದ ತಳ್ಳುತ್ತಿದ್ದವರ ಮೇಲೆ ''ಸ್ವಲ್ಪ ತಾಳ್ರಿ, ಯಾಕೆ ಹಾಗೆ ಗಡಿಬಿಡಿ ಮಾಡ್ತೀರಿ?'' ಎಂದು ರೇಗಿದ.

ಬಾಗಿಲು ತೆರೆದಾಗ ಸುರೇಶನಿಗೆ ಆಶ್ಚರ್ಯ ಕಾದಿತ್ತು. ಸುರೇಶ 'ಅರೆ!' ಎಂದು ಉದ್ಗಾರ ತೆಗೆಯುತ್ತಿದ್ದಂತೆಯೆ ರಾಜಪ್ಪ ಹೆಗಲಿಗೆ ನೇತುಕೊಂಡಿದ್ದ ಚೀಲದೊಡನೆ ಗಡಿಬಿಡಿಯಲ್ಲಿ ಒಳಬಂದ. ಮಳೆಯಲ್ಲಿ ಅವನು ಸಾಕಷ್ಟು ಒದ್ದೆಯಾಗಿದ್ದಂತೆ ತೋರಿತು. ರೈಲು ಇನ್ನೂ ಚಲಿಸುತ್ತಲೇ ಇತ್ತು.

''ರೈಲು ನಿಲ್ಲೋವರೆಗೆ ತಡೆಯಬಾರದೇನಯ್ಯ. ಹೆಚ್ಚೂ ಕಡಿಮೆ ಆದರೆ ಈ ಊರಲ್ಲಿ ಒಳ್ಳೆ ಆಸ್ಪತ್ರೆ ಸೈತ ಇಲ್ಲ'' ಎಂದು ಸುರೇಶ ಎಚ್ಚರಿಸಿದ.

''ನಾನು ಈ ಸ್ಟೇಷನ್ನಿನಲ್ಲಿ ರೈಲು ನಿಲ್ಲುತ್ತೆ ಅಂತ ತಿಳುಕೊಂಡು ಆಗಲಿಂದ ಕಾದಿದ್ದೀನಿ! ಈಗ ರೈಲು ಬರೋ ಹೊತ್ತಿಗೆ ಮೇಲ್ ಟ್ರೈನಿಗೆ ಇಲ್ಲಿ ಸ್ಟಾಪಿಲ್ಲ ಅಂತ ಹೇಳ್ತಾರಲ್ಲ! ಅದಕ್ಕೇ ಓಡೋಡಿ ಬಂದು ಹತ್ತೇಬಿಟ್ಟೆ'' ಎಂದು ತನ್ನ ಸಾಹಸವನ್ನು ಇವರಿಬ್ಬರೂ ಪ್ರಶಂಸಿಸಬಹುದೆಂದು ಊಹಿಸಿ ರಾಜಪ್ಪ ಹಲ್ಲು ಕಿರಿದ.

''ಅಲ್ಲವೋ, ನೀನೊಬ್ಬ ವಿಚಿತ್ರ ವ್ಯಕ್ತಿ ಕಣಯ್ಯ. ಬೆಳಗ್ಗೆ ಅತ್ಲಾಗಿ ಹೋದವ ಇಷ್ಟು ಹೊತ್ತಿನವರೆಗೆ ಏನ್ಮಾಡ್ತಿದ್ದೆ? ಇದ್ಯಾಕೆ ರಾತ್ರೋ ರಾತ್ರಿ ಬಂದು ಹೋಗ್ತಾ ಇರೋ ರೈಲಿಗೆ ಹತ್ತಿಕೊಂಡೆ? ಎಲ್ಲಿಗೆ ಹೋರಟಿದ್ದೀಯ?'' ಸುರೇಶ ಆಗತಾನೆ ಒಳಬಂದಿದ್ದ ರಾಜಪ್ಪನ ಮೇಲೆ ಪ್ರಶ್ನೆಗಳ ಮಳೆಯನ್ನೇ ಸುರಿಸಿದ.

''ರೇರೋ ರೇರೋ! ತಡಿಯೋ ಮಾರಾಯ. ಒಳ್ಳೆ ಕ್ರಿಮಿನಲ್ ಇನ್‌ವೆಸ್ಟಿಗೇಟರ್ ಥರ ಪ್ರಶ್ನೆ ಮಾಡ್ತಿದೀಯಲ್ಲ! ಸ್ವಲ್ಪ ಸುಧಾರಿಸಿಕೊಳ್ಳುತ್ತೇನೆ. ರೈಲಿನ ಜೊತೆ ಗಂಟೆಗೆ ಇಪ್ಪತ್ತು ಮೈಲಿ ವೇಗದಲ್ಲಿ ಓಡಬೇಕೆಂದರೆ ಹುಡುಗಾಟಾನ? ಏದುಸಿರು ಬರ್ತಾ ಇದೆ'' ಎಂದ ರಾಜಪ್ಪ ರೈಲು ಗಾಡಿಯ ಬಾಗಿಲು ಮುಚ್ಚಿ, ನಿಂತುಕೊಂಡೇ ಸುಧಾರಿಸಿಕೊಳ್ಳ ತೊಡಗಿದ. ಅವನು ರೈಲುಗಾಡಿಯ ಜೊತೆ ಕೊಂಚ ದೂರ ಓಡಿದ್ದರಿಂದ ಸುಸ್ತಾಗಿದ್ದಂತೂ

ನಿಜ.

"ಕೂತುಕೊಳ್ಳಿ" ಎಂದು ಎದುರಿನ ಬೆಂಚು ತೋರಿಸುತ್ತ ಗೌರಿ ರಾಜಪ್ಪನಿಗೆ ಹೇಳಿದಳು.

"ಓಹ್! ಥ್ಯಾಂಕ್ಯೂ ಥ್ಯಾಂಕ್ಯೂ ಮೇಡಮ್" ಎನ್ನುತ್ತ ರಾಜಪ್ಪ "ಕೂತುಕೊಳ್ಳೋದೇನು ಮಲಕ್ಕೊಂಡೇ ಹೋಗೋ ಅಷ್ಟು ಜಾಗ ಇರೋಹಂಗಿದೆ! ಈ ಕಾರಣಕ್ಕೇ ನಾನು ಇವತ್ತು ರೈಲು ಹಿಡಿದದ್ದು." ಎಂದು ಕುಳಿತುಕೊಳ್ಳುತ್ತ ರಾಜಪ್ಪ ಸುರೇಶನ ಕಡೆಗೆ ತಿರುಗಿ "ನೋಡಯ್ಯ ಇಡೀ ಜರ್ನಿ ಮಾತಾಡಬಹುದು. ಮನೆಗೆ ಬಂದು ಡಿಸ್ಕಸ್ ಮಾಡಬೇಕೆಂದಿದ್ದನ್ನೂ ಹೇಳೋದಕ್ಕೆ ನನಗೆ ಒಳ್ಳೆ ಸಮಯ ಸಿಕ್ಕಿದ ಹಾಗಾಯ್ತು. ಅದಿರ್ಲಿ ಈ ನಿಮ್ಮೂರಿನ ರೈಲು ಇದೇನು ರೈಲೋ! ಎತ್ತಿನ ಗಾಡೀನೋ? ನನ್ನಂಥ ನಾಗಮಂಗಲದ ಕೋಣ ಸಹಿತ ಓಡಿ ಬಂದು ಹತ್ತಬೌದು ಅಂದರೆ ಇದು ಎಷ್ಟು ಸ್ಪೀಡಾಗಿಹೋಗುತ್ತೆ ನೋಡಿಕೋ"ಎಂದು ರೈಲಿನ ಬಗ್ಗೆ ತಿರಸ್ಕಾರ ಪ್ರಕಟಿಸಿದ.

"ಮೈ ಡಿಯರ್ ಫೆಲೋ, ಇದು ಹೋಗೋ ದಾರಿ ಹಾಗಿದೆ ಕಣಯ್ಯ. ಸ್ಪೀಡಾಗಿ ಏನಾದರೂ ಹೋದರೆ ಒಂದೇಸಾರಿ ಯಮಲೋಕಕ್ಕೆ ಹೋಗ್ತೀಯ ಅಷ್ಟೆ. ಈ ರೈಲಿಗೆ ರಾತ್ರಿ ಹತ್ತಿರೋದರಿಂದ ನಿನಗೆ ಗೊತ್ತಾಗ್ತ ಇಲ್ಲ. ಬೆಳಗಿನ ಹೊತ್ತು ಬಾ. ಆಗ ನಿನಗೆ ಗೊತ್ತಾಗ್ತದೆ ಯಾಕೆ ನಿಧಾನ ಹೋಗ್ತಾನೆ ಅಂತ. ಅದೂ ಅಲ್ಲದೆ ಯಾಕೆ ಬೇಗ ಹೋಗಬೇಕು ಹೇಳು? ಅರ್ಧ ರಾತ್ರಿಯಲ್ಲಿ ತಗೊಂಡು ಹೋಗಿ ಯಾವುದಾದರೂ ಸ್ಟೇಷನ್ನಿನಲ್ಲಿ ಇಳಿಸಿದರೆ ಈ ಕತ್ಲಲ್ಲಿ ಈ ಕಾಡಲ್ಲಿ ನಮ್ಮ ಕತೆಯೇನು? ಯೋಚನೆ ಮಾಡು. ಸ್ಟೇಷನ್ನಿನಲ್ಲಿ ಕಪೇಸುತ್ತ ಕೂರೋದರ ಬದಲು ರೈಲಲ್ಲೆ ನಿದ್ದೆ ಮಾಡಬಹುದಲ್ಲ"

"ಸರಿ ಕಣೋ, ನೀನು ಹೇಳೋದೆಲ್ಲ ಸರಿ. ಆದರೂ ಇಷ್ಟು ನಿಧಾನ ಅಂದರೇನಯ್ಯ? ರೈಲು ಅಂದಮೇಲೆ ಹೆಸರಿಗೆ ಮರ್ಯಾದೆ ಬೇಡವೇನೋ? ಥೂತ್ತೇರಿ! ಇದು ಹೋಗೋ ಮರ್ಜಿ ನೋಡಿದರೆ ಬೆಳಗಿನ ಝಾವಕ್ಕೂ ಇದು ಇದ್ದಲ್ಲೆ ಇರೋಹಂಗೆ ಕಾಣ್ತದೆ" ಎಂದ ರಾಜಪ್ಪ. ಸುರೇಶನ ಯಾವ ಸಮಜಾಯಿಷಿಗೂ ಅವನು ಒಪ್ಪುವ ಹಾಗೆ ಕಾಣಲಿಲ್ಲ.

ರೈಲು ನಿಧಾನವಾಗೇ ಚಲಿಸುತ್ತಿತ್ತು. ದಾರಿಯುದ್ದಕ್ಕೂ ಗಳಿಗೆಗೊಮ್ಮೆ ಚಕ್ರಗಳು ಸ್ಲಿಪ್ಪಾಗುತ್ತ ಜುಗುಜುಗುಜುಗು ಸದ್ದಾಗುತ್ತಿತ್ತು.

ಗೌರಿಗೆ ತಮಗೆ ರೈಲಿನಲ್ಲಿ ಕಂಪೆನಿ ಕೊಡಲು ಇನ್ನೊಬ್ಬ ಪರಿಚಿತ ಸಿಕ್ಕಿದ್ದು ಸಂತೋಷವಾಗಿತ್ತು. ಏನೇ ಆಗಲಿ ಕಳ್ಳರು ಈಗೇನಾದರೂ ಹತ್ತಿದರೆ ನಮ್ಮದೇ ಮೆಜಾರಿಟಿ ಇರುವುದನ್ನು ನೋಡಿ ಸುಮ್ಮನಾಗಬೇಕಾಗುತ್ತೆ ಎಂದು ಯೋಚಿಸಿದಳು. ರಾಜಪ್ಪ ಎದುರುಗಡೆ ಬೆಂಚಿನ ಧೂಳು ಹೊಡೆಯುತ್ತ ತನ್ನ ಹೆಗಲಲ್ಲಿದ್ದ ಚೀಲ ಪಕ್ಕಕ್ಕಿಡುತ್ತ ಕುಳಿತು "ಹ್ಞೂ ಈಗ ಕೇಳಯ್ಯ ನಿನ್ನ ಪ್ರಶ್ನೆಗಳನ್ನ. ಉತ್ತರ ಕೊಡೋಣ. ರೈಲುಗಾಡಿ ಬಾಗಿಲು ತೆಗೆಯೋದಕ್ಕೆ ಮೊದಲೇ ಶುರು ಮಾಡಿದ್ಯಲ್ಲ. ಆ ಮಳೇಲಿ ಫುಟ್ ಬೋರ್ಡಿನ

ಮೇಲೆ ನಿಂತುಕೊಂಡು ನಿನಗೆ ಹ್ಯಾಗೆ ಉತ್ತರ ಹೇಳೋದು ಹೇಳು!'' ಎಂದು ಸಾವಧಾನವಾಗಿ ಹೇಳಿದ.

''ಮಳೇಲಿ ಸರಿಯಾಗಿ ನೆನೆದಹಾಗೆ ಕಾಣ್ತದಲ್ಲೋ. ನಿನ್ನ ಚೀಲದೊಳಗೆ ಟವಲ್ ಏನಾದರೂ ಇಟ್ಟಿದ್ದರೆ ತೆಗೆದು ಒರಸಿಕೋ'' ಎಂದು ರಾಜಪ್ಪನ ಕೂದಲೆಲ್ಲ ಒದ್ದೆಯಾಗಿದ್ದನ್ನು ನೋಡಿ ಸುರೇಶ ಹೇಳಿದ.

''ಮಾರಾಯ, ಬಟ್ಟೆ ಒದ್ದೆಯಾದರೂ ಪರ್ವಾಗಿಲ್ಲ. ಚೀಲ ಒದ್ದೆಯಾಗಬಾರದು. ನನ್ನದು ಮ್ಯಾನ್‌ಸ್ಕ್ರಿಪ್ಟ್ ಕಂತೆ ಎಲ್ಲ ಅದರೊಳಗೇ ಇಟ್ಕೊಂಡಿದೀನಿ. ತಲೆ ಒಂಚೂರು ಒದ್ದೆ ಆಗಿರಬಹುದು. ಅದೇನು ಮಹಾ ಬಿಡು. ಗಾಳಿಗೆ ತಾನಾಗೇ ಆರಿಕೊಳ್ಳತ್ತೆ.'' ಎಂದು ಬಟ್ಟೆ ಒದ್ದೆಯಾದ್ದರ ಬಗ್ಗೆ ನಿರ್ಲಕ್ಷ ತೋರಿ ರಾಜಪ್ಪ ಕ್ರಾಪಿನ ಮೇಲೆ ಕೈಯ್ಯಾಡಿಸಿದ.

''ರಾಜಪ್ಪ ನಿನ್ನ ವ್ಯವಹಾರಾನೆ ನನಗೆ ಅರ್ಥವಾಗ್ತ ಇಲ್ಲ. ಬೆಳಗ್ಗೆ ಯಾವುದೋ ಕಡತ ಎಡಿಟ್ ಮಾಡಿಕೊಡಬೇಕಾಗಿದೆ ಅಂತ ಹೇಳಿದವನು ಅದರ ವಿಚಾರ ಮುಂದೇನನ್ನೂ ತಿಳಿಸದೆ ಗಡಿಬಿಡಿಯಲ್ಲಿ ಮಾಯ ಆದೆ! ಈಗ ನೋಡಿದರೆ ಓಡ್ತಾ ಇರೋ ರೈಲೊಳಗೆ ಇದ್ದಕ್ಕಿದ್ದಹಾಗೆ ಪ್ರತ್ಯಕ್ಷ ಆಗಿ ನಿನ್ನ ಕಡತದ ಯೋಗಕ್ಷೇಮ ನೋಡುತ್ತ ಇದೀಯ. ಇದೇನು ನಿನ್ಕತೆ? ಅದನ್ನ ಯಾಕೆ ಹೊತ್ತುಕೊಂಡು ತಿರುಗ್ತಾ ಇದೀಯ? ವಿಚಿತ್ರ ಮನುಷ್ಯ ಕಣಯ್ಯ ನೀನು!'' ಎಂದು ಸುರೇಶ ಆಶ್ಚರ್ಯ ಸೂಚಿಸಿದ.

''ಸಿಂಪಲ್ ಸುರೇಶ! ಅದರಲ್ಲಿ ಆಶ್ಚರ್ಯ ಪಡುವಂಥದು ನಿನಗೇನಿದೆ ನನಗೆ ಅರ್ಥವಾಗ್ತ ಇಲ್ಲ. ಬೆಳಗ್ಗೆ ನಿನಗೆ ಹೇಳಿದೆನಲ್ಲ ಆ ಕಡತ, ಅದನ್ನ ರೆಡಿ ಮಾಡಿ ಕೊಡಬೇಕಂತಾನೇ ನಾನು ದೇವಪುರಕ್ಕೆ ಬಂದದ್ದು. ಈಗ ಓಡಿಬಂದು ರೈಲಿಗೆ ಹತ್ತಿಕೊಂಡಿದ್ದೂ ಅದಕ್ಕೇ. ಈಗ ನಿನ್ನಿಂದ ಒಂದು ಕೆಲಸ ಆಗಬೇಕಾಗಿದೆ. ಇಲ್ಲೆಲ್ಲೋ ಅಮ್ಮಾಡಲ ಅಂತ ಒಂದು ಊರಲ್ಲಿ ದೇವಸ್ಥಾನ ಇದಿಯಂತೆ. ನನಗೆ ಒಂಚೂರು ಕರೆಕ್ಟಾಗಿ ಗೈಡ್ ಮಾಡಬೇಕು ಕಣೋ. ನನ್ನ ಹತ್ತಿರ ಇರೋ ಕಡತದಲ್ಲಿ ಸುಮಾರು ಲೈನುಗಳೇ ಮಿಸ್ಸಿಂಗ್ ಕಣಯ್ಯ. ಎಷ್ಟು ತಿಪ್ಪರ್ ಲಾಗ ಹೊಡೆದರೂ ಅವುಗಳನ್ನು ತಿಳುಕೊಳ್ಳದೆ ಅದನ್ನ ಎಡಿಟ್ ಮಾಡೋದಕ್ಕೆ ಸಾಧ್ಯವೇ ಇಲ್ಲ. ಈ ಕಡತದ ಇನ್ನೊಂದು ಕಾಪಿ ಏನಾದರೂ ಇದೆಯ ಅಂತ ಇಡೀ ರಿಸರ್ಚ್ ಇನ್‌ಸ್ಟಿಟ್ಯೂಟನ್ನೆ ತಲೆಕೆಳಗು ಮಾಡಿ ನೋಡಿದೆ. ಇದರದ್ದು ಮೈಕ್ರೋ ಫಿಲ್ಮೂ ತೆಗೆದಿಲ್ಲ. ಇದರದ್ದು ಇನ್ನೊಂದು ಕಾಪೀನೂ ಇಲ್ಲ. ಈ ಕಡತ ಬರೆದ ಕವಿ ಇದ್ದಿದ್ದು ಅಮ್ಮಾಡಲ ಊರಿನ ದೇವಸ್ಥಾನದಲ್ಲಂತೆ. ಆದ್ದರಿಂದ ಈ ಕವಿಯೂ ಇಲ್ಲಿಯವನೇ ಅಂತಾಯ್ತು. ಅಮ್ಮಾಡಲ ದೇವಸ್ಥಾನದ ಕವಿಯಾಗಿದ್ದರಿಂದ ಈ ಕಡತದ ಪ್ರತಿಗಳು ಅಲ್ಲಿರೋದು ಗ್ಯಾರಂಟಿ. ಅದ್ಯಾವ ಊರು? ಅದ್ಯಾವ ದೇವಸ್ಥಾನ? ನನಗೆ ತಿಳಿಸಬೇಕು ನೀನು. ಇದನ್ನ ಎಡಿಟ್ ಮಾಡಿ ರೆಡಿಮಾಡಿ ಕೊಡೋದಕ್ಕೆ ನಿನ್ನ ಕೈಯ್ಯಲ್ಲಿ ಏನು ಸಹಾಯ ಆಗ್ತದೆ ಮಾಡಿಕೊಡಬೇಕು. ಆಯ್ತು

ತಾನೆ! ನಾನು ನಿನ್ನ ಹತ್ತಿರ ಡಿಸ್ಕಸ್ ಮಾಡೋದಕ್ಕೆ ಬರುತ್ತೇನೆ ಅಂತ ಹೇಳಿದೆನಲ್ಲ! ಇನ್ಯಾವುದಕ್ಕೂ ಅಲ್ಲ ಇದಕ್ಕೇ''

''ರಾಜಪ್ಪ, ನಾನು ಯೂನಿವರ್ಸಿಟಿ ಬಿಟ್ಟು ಎಷ್ಟು ದಿನ ಆಯ್ತು. ಹಳಗನ್ನಡ ಓದಕ್ಕೆ ಸಹಿತ ಮರೆತು ಹೋಗಿರುತ್ತೆ. ಅಂಥದರಲ್ಲಿ ನಾನು ಸಹಾಯ ಮಾಡೋದು ಎಂದರೆ ಹೇಗೋ. ನನಗೆ ಈಗ ಆ ಹಳಗನ್ನಡದ ಚಂಪೂ ಕಾವ್ಯಗಳು, ಆ ರಳಕುಳಕ್ಷಳಗಳು ಷಟ್ಪದಿ ರಗಳೆ! ಎಲ್ಲಾ ನೆನೆಸಿಕೊಂಡರೆ ನಡುಕ ಬರುತ್ತೆ'' ಎಂದು ಸುರೇಶ ಹೇಳುತ್ತಿರಬೇಕಾದರೆ ರೇಗಿದ ರಾಜಪ್ಪ ಅವನನ್ನು ಅರ್ಧಕ್ಕೇ ಮಾತು ನಿಲ್ಲಿಸುವಂತೆ ಮಾಡಿ ''ನೋಡೋ ನಿನ್ನದು ಅವೆಲ್ಲಾ ಸ್ಟಂಟು ಬೇಡ. ನೀನು ಈಗ ಇಲ್ಲೆಲ್ಲೋ ಕೊಂಪೆ ಸೇರಿರಬಹುದು. ನಿನ್ನ ಹಣೆಬರಹ. ನಾನೇನು ಮಾಡೋದಕ್ಕಾಗುತ್ತೆ. ಆದರೆ ನಿನ್ನ ಹೊಗಳೋದಕ್ಕಲ್ಲ, ಸತ್ಯವಾಗಲು ಹೇಳೋದಾದರೆ ನಮ್ಮ ಪ್ರೊಫೆಸರ್ ಹೋದಮೇಲೆ ಹಳಗನ್ನಡ ಪಾಂಡಿತ್ಯ ಇರೋರು ನಿನ್ನ ಬಿಟ್ಟರೆ ಇನ್ಯಾರೂ ಇಲ್ಲ. ನಿಜವಾಗಿಯೂ ಇನ್ನು ಯಾರಾದರೂ ಇದ್ದಾರೆ ಅನ್ನಿಸಿದರೆ ಅವರ ಹೆಸರು ಹೇಳು. ನಾನು ಸಂತೋಷವಾಗಿ ಅವರ ಹತ್ತಿರಾನೇ ಹೋಗುತ್ತೇನೆ. ನಿನ್ನಂಥಾ ಕಾಮನ್ ಸೆನ್ಸ್ ಇಲ್ಲದವನ ಹತ್ತಿರ ಏಗೋ ಗೋಳೇ ನನಗೆ ಬೇಡ'' ಎಂದು ಸಿಡುಕಿನಿಂದ ಹೇಳಿ, ಗೌರಿ ಕಡೆಗೆ ತಿರುಗಿ ''ನೋಡಿ ಮೇಡಂ. ನಿಮ್ಮ ಯಜಮಾನರನ್ನು ಬಯ್ತಿದ್ದೀನಂತ ಬೇಜಾರು ಮಾಡ್ಕೋ ಬೇಡಿ. ನೀವು ಇವನ್ನ ನಿನ್ನೆ ಮೊನ್ನೆಯಿಂದ ನೋಡಿರಬಹುದು. ನಾನು ಮಹಾರಾಜ ಕಾಲೇಜು ಸೇರಿದಾಗಲಿಂದಾ ನೋಡ್ತಿದೀನಿ. ದುಡ್ಡು ಸಂಪಾದನೆ ಮಾಡೋದೊಂದು ಬಿಟ್ಟು ಮಿಕ್ಕದರಲ್ಲೆಲ್ಲಾ ಇವನು ಪ್ರಚಂಡ. ಇದೇ ನನ್ನ ಕಡತ ಇವನಿಗೆ ಕಸದ ಬುಟ್ಟೀಲಿ ಸಿಕ್ಕಿದ್ದರೆ ಇಡೀ ಜೀವಮಾನ ಅದರಮೇಲೆ ರಿಸರ್ಚ್ ಮಾಡ್ತ ಕಾಲ ಕಳೀತಿದ್ದ. ಈಗ ಸಲ್ಪ ಸಹಾಯ ಮಾಡಯ್ಯ ನಾನಾದರೂ ನಾಲ್ಕು ಕಾಸು ಸಂಪಾದನೆ ಮಾಡ್ತೀನಿ ಅಂದರೆ ಹ್ಯಾಗೆ ತಕರಾರು ತೆಗೀತಿದ್ದಾನೆ ನೋಡಿದರ ?'' ಎಂದು ಗೌರಿಯ ಸಹಾನುಭೂತಿ ಗಳಿಸಲು ಪ್ರಯತ್ನ ಶುರು ಮಾಡಿದ.

''ನೀನು ಅರೆಮನಸ್ಸಿನಲ್ಲಿ ನನ್ನ ಬಯ್ತಾ ಇದ್ದೀಯ ಅನ್ನೋದು ನನಗೆ ಗೊತ್ತು. ಯಾಕೇ ಅನ್ನು, ದುಡ್ಡು ಹಾಳು ಮಾಡೋದರಲ್ಲಿ ನೀನು ಎಲ್ಲರಿಗೂ ಜಗದ್ಗುರು. ನೀನು ವಿವೇಕ ಬೋಧನೆ ಮಾಡಿದರೆ ಯಾರು ಕಿವಿಗೊಡ್ತಾರೆ ರಾಜಪ್ಪ, ನನ್ನ ಈ ಸದ್ಗುಣಗಳನ್ನೆಲ್ಲ ನೋಡೇ ಅವಳು ನನ್ನ ಮದುವೆ ಆಗಿರೋದರಿಂದ ಕಟ್ಟಿಕೊಂಡೋರಿಗೆ ಕೋಡಿಂಗ ಮುದ್ದು ಎನ್ನುವ ಹಾಗೆ ನಿನ್ನ ಬಯ್ಗುಳ ಎಲ್ಲ ಅವಳಿಗೆ ಹೊಗಳಿಕೆ ತರ ಕಾಣಬಹುದು ಕಣೋ''ಎಂದು ಸುರೇಶ ಹೇಳುತ್ತಿರಬೇಕಾದರೆ ಗೌರಿ ಇವರಿಬ್ಬರ ಮಾತೂ ತನ್ನಕಡೆಗೆ ತಿರುಗಿಸಿದ್ದನ್ನು ನೋಡಿ ''ಸಾಕು ಸುಮ್ಮನೆ ಇರ್ರಿ. ಅದ್ಯಾವ ದೇವಸ್ಥಾನ? ಅಲ್ಲಿ ಏನಾದರೂ ಇವರಿಗೆ ಬೇಕಾಗಿರೋ ಕಡತ ಸಿಗುತ್ತ ವಿಚಾರಿಸಿ ಸಹಾಯ ಮಾಡಿದರೆ ನಿಮ್ಮದೇನು ತಲೆ ಹೋಗುತ್ತ?''ಎಂದು ಜೋರು ಮಾಡಿದಳು.

"ಅಮ್ಮ್ಮಾಡಲ ಅನ್ನೋ ಊರಿನ ಹೆಸರೇ ಕೇಳಿಲ್ಲವಲ್ಲ ನಾನು. ಜುಗಾರಿಕ್ರಾಸಿನ ಆಸುಪಾಸಿನಲ್ಲಿ ಯಾವ ದೇವಸ್ತಾನದ ಅವಶೇಷವೂ ಇಲ್ಲವಲ್ಲೆ! ಇವನೇನಾದರೂ ಮಾಡ್ಲ ಊರನ್ನೆ ಅಮ್ಮ್ಮಾಡಲ ಅಂತಿದ್ದಾನೋ ಏನೋ!"

"ಇರಬಹುದು ಬಿಡಯ್ಯ, ಈ ಕಾವ್ಯ ಮುನ್ನೂರು ವರ್ಷ ಹಿಂದಿನದು. ಅಷ್ಟು ಹಿಂದೆ ಅದಕ್ಕೆ ಹಾಗೆ ಕರೀತಿದ್ರೋ ಏನೋ ಯಾರಿಗೆ ಗೊತ್ತು! ಅಲ್ಲಿ ಏನಾದರೂ ದೇವಸ್ಥಾನ ಇದೆಯ? ದೇವಸ್ಥಾನದ ಆಸ್ತಿ ಅಂತ ಪುಸ್ತಕ ಅದೂ ಇದೂ ಇದೆಯ?"

"ದೇವಸ್ಥಾನ ಇರಲಯ್ಯ ಅಲ್ಲಿ ಯಾವ ನರಮನುಷ್ಯರೂ ಇರೋಮಟ್ಟಿಗೆ ಕಾಣೆ. ಯಾವುದೋ ಒಂದು ಕಾಲದಲ್ಲಿ ದೇವಸ್ಥಾನ ಇತ್ತಂತೆ. ಈಗ ಅಲ್ಲಿ ಕಾಡು ಬಿಟ್ಟು ಇನ್ನೇನೂ ಇಲ್ಲ. ಆ ದೇವಸ್ಥಾನದ ಉಂಬಳಿ ಅಂತ ಅಲ್ಲೊಂದು ಹಾಳು ಅಡಕೆ ತೋಟ ತೋರಿಸ್ತಾರೆ. ಅದು ಯಾರಿಗೆ ಸೇರಿದ್ದೋ ಯಾರು ಅದನ್ನು ಈಗ ನೋಡಿಕೊಳ್ತಾರೋ ನನಗೆ ಚೂರೂ ಗೊತ್ತಿಲ್ಲ. ಅಕಸ್ಮಾತ್ ನಿನಗೋಸ್ಕರ ನಾನು ಅದನ್ನು ಹುಡುಕಿದರೂ ನಿನಗೆ ನಿನ್ನ ಕಡತದ ಮೂಲ ಪ್ರತಿ ಸಿಗೋದು ಅಸಾಧ್ಯವೆಂದೇ ಹೇಳಬಹುದು"

"ನನ್ನ ಉತ್ಸಾಹಕ್ಕೆ ತಣ್ಣೀರೆರೆಚುತ್ತ ಇದೀಯ ನೀನು ಸುರೇಶ. ಅಷ್ಟೊಂದು ದೂರದಿಂದ ನಾನು ಬಂದಿದ್ದು ವ್ಯರ್ಥ ಆಗುತ್ತಲ್ಲಯ್ಯ. ನನ್ನ ಕರ್ಮ ನೋಡು, ಯಾವನೋ ಹೊಸೆದ ಕಗ್ಗ ಕಟ್ಟಿಕೊಂಡು ಊರೂರು ತಿರುಗಬೇಕಾಗಿರೋದು"

"ನಿನ್ನ ತಲೆನೋವನ್ನ ತಂದು ನನಗೆ ಅಂಟಿಸಬೇಕಂತಿದ್ದೀಯಾ? ಅಡ್ರೆಸ್ ಇಲ್ಲದ ಊರಲ್ಲಿ ಒಂದಾನೊಂದು ಕಾಲದಲ್ಲಿ ದೇವಸ್ಥಾನ ಇತ್ತು ಅನ್ನೋ ಕತೆ ಕಟ್ಟಿಕೊಂಡು ಇಲ್ಲಿವರೆಗೆ ಬಂದಿದೀಯಲ್ಲ. ಹಿಂದೆ ಕುದುರೆ ಬೆನ್ನು ಬಿದ್ದು ದೇಶಾಂತರ ತಿರುಗುತ್ತಿದ್ದೆಯಲ್ಲ ಆ ಚಾಳಿ ನಿನಗೆ ಇನ್ನೂ ಹೋಗಿರೋಹಾಗೆ ಕಾಣಲ್ಲ ಕಣೋ!"

"ನೋಡೋ ಸುರೇಶ, ನೀನು ಒಳ್ಳೆ ಮಾತಲ್ಲಿ ನನಗೆ ದೇವಸ್ಥಾನ ತೋರಿಸಿ ಹಸ್ತಪ್ರತಿ ಹುಡುಕಿ ಕೊಟ್ಟೆಯೋ ಸಮ. ಇಲ್ಲದಿದ್ದರೆ ಇನ್ನೂ ದೊಡ್ಡ ತೊಂದರೆಗೆ ಸಿಕ್ಕಿಕೋತೀಯ. ಆ ಹಸ್ತ ಪ್ರತಿಯಲ್ಲಿ ಇಲ್ಲದಿರೋ ಸಾಲುಗಳನ್ನೆಲ್ಲ ನೀನೇ ಕರೆಕ್ಟಾಗಿ ಛಂದಸ್ಸು, ಮಾತ್ರೆ, ಗಣ ಎಲ್ಲಾ ನೋಡಿ ಬರೆದೇ ಕೊಡಬೇಕಾಗತ್ತೆ! ಈಗಲೇ ಹೇಳಿಬಿಟ್ಟಿದ್ದೇನೆ! ಹುಷಾರ್!" ಎಂದು ಸುರೇಶನಿಗೆ ಬೆದರಿಸುವವನಂತೆ ಮಾತಾಡುತ್ತ ರಾಜಪ್ಪ ತಮಾಷೆ ಮಾಡಿದ.

ಕಗ್ಗತ್ತಲಲ್ಲಿ ರೈಲು ನಿಂತಿದೆಯೋ ಮುಂದುವರಿಯುತ್ತಿದೆಯೋ ಎನ್ನುವುದು ಸಹ ಗೊತ್ತಾಗುತ್ತಿರಲಿಲ್ಲ.

"ರಾಜಪ್ಪ, ಹಳಗನ್ನಡದ ಕಾವ್ಯಗಳಲ್ಲಿ ಖಾಲಿ ಬಿದ್ದಲ್ಲಿ ಏನೇನಿತ್ತು ಅಂತ ಪತ್ತೆ ಮಾಡಿ ತುಂಬಿಸೋದು ಏನು ಬಾಳೆಹಣ್ಣು ತಿಂದಂಗೆ ಅಂತ ತಿಳುಕೊಂಡ್ಯ? ನಾನೂ ನೀನೂ ಸೇರಿಕೊಂಡು ಮನಸ್ಸಿಗೆ ಅನ್ನಿಸಿದ್ದನ್ನು ತುಂಬಿ ಪ್ರಕಟಿಸಿದರೆ ನಮ್ಮ ಕನ್ನಡ ಪಂಡಿತರುಗಳೆಲ್ಲ ಕಾದುಕೊಂಡಿರ್ತಾರೆ ನಿನ್ನ ಜನ್ಮ ಜಾಲಾಡಕ್ಕೆ"


“ಇನ್ನೊಂದು ಪ್ರತಿ ಯಾರ ಹತ್ತಿರಾನೂ ಇಲ್ಲದಿದ್ದರೆ ಅವರು ಜಾಲಾಡೋದು ಹ್ಯಾಗಯ್ಯ. ನೀನು ಬರಕೊಟ್ಟಿದ್ದೇ ಕೊನೇ ಮಾತಲ್ಲವ!” ಎಂದು ರಾಜಪ್ಪ ಸುರೇಶನಿಗೆ ಸಮಜಾಯಿಷಿ ಕೊಟ್ಟ.

“ನಿನ್ನ ಕಡತ ಒಂಚೂರು ಇತ್ಲಾಗಿ ಕೊಡು ರಾಜಪ್ಪ. ಅದೇನು ಕಗ್ಗ ಹೊಸೆದಿದ್ದಾನೆ ಈ ಕವಿ ಅಂತನಾದರೂ ನೋಡೋಣ. ಈ ಕವಿಯ ಹೆಸರು ಅದೇನಂತ ಹೇಳಿದೆ ಬೆಳಗ್ಗೆ? ಮರೆತೇ ಹೋಯ್ತು ನನಗೆ” ಎಂದು ಜ್ಞಾಪಿಸಿಕೊಳ್ಳಲು ಪ್ರಯತ್ನಿಸುತ್ತ ಸುರೇಶ ಕಡತ ತೆಗೆದುಕೊಳ್ಳಲು ಮುಂದೆ ಬಾಗಿದ.

“ಗುರ್ರಾಜ ಪಂಡಿತ! ಇವನ ಹೆಸರು ಸಹಿತ ನಾನು ಇಲ್ಲಿವರೆಗೆ ಕೇಳಿರಲಿಲ್ಲ. ಇವನ ಪುಸ್ತಕ ಎಡಿಟ್ ಮಾಡಿ ಪ್ರಕಟಿಸಿ ಯಾರಿಗೆ ಏನಾಗಬೇಕಿದೆಯೋ ದೇವರಿಗೇ ಗೊತ್ತು.”



# ಉತ್ತುಂಗ ರಾಜನ ಕಥೆ - ೨೧



ಮಳೆ ಹಿಡಿಯುತ್ತಿದ್ದಂತೆಯೇ ದೇವಪುರದ ಗಿರಿ ಶಿಖರಗಳಿಗೆಲ್ಲ ಮೋಡ ಮುಸುಗುತ್ತದೆ. ಅನಂತರ ಮೋಡ ನಿಧಾನವಾಗಿ ಗಿರಿಗಳ ಕಣಿವೆ ತಪ್ಪಲುಗಳ ಕಡೆಗೆ ಕುಸಿಯುತ್ತದೆ. ಆಮೇಲೆ ಇಡೀ ಸಹ್ಯಾದ್ರಿ ಸಮಸ್ತವೂ ಈ ಮಂಜಿನ ಸಮುದ್ರದಲ್ಲಿ ಮುಳುಗೇ ಹೋದಹಾಗೆ. ಬೆಳಗಿನ ಹೊತ್ತು ಸಹ ಎರಡು ಗಜಗಳಾಚೆಗೆ ಏನಿದೆ ಎಂದು ಗೊತ್ತಾಗುವುದಿಲ್ಲ. ಬೆಳಗಿನ ಹೊತ್ತೇ ಹೀಗಾಗುವುದಾದರೆ ಇನ್ನು ರಾತ್ರಿ ಕೇಳುವಂತೆಯೇ ಇಲ್ಲ. ರೈಲು ಗಾಡಿಯೊಳಗಿನ ದೀಪ ಕಿಟಕಿಯ ಮುಖಾಂತರ ಹೊರಗೆ ಬೀಳುತ್ತಿದ್ದುದು ಸುಣ್ಣ ಬಳಿದ ಗೋಡೆಯ ಮೇಲೆ ಬಿದ್ದಹಾಗೆ ಕಾಣುತ್ತಿತ್ತು. ಕಾರು ಬಸ್ಸುಗಳಂತೆ ರಸ್ತೆ ನೋಡಿಕೊಂಡು ರೈಲು ಬಿಡುವ ಅಗತ್ಯವಿಲ್ಲದ್ದರಿಂದ ರೈಲು ಮುಂದುವರಿಯುತ್ತಿತ್ತಷ್ಟೆ. ರೈಲು ನೆಲದ ಮೇಲೆ ಹೋಗುತ್ತಿದೆಯೋ ಆಕಾಶದಲ್ಲಿ ಮೋಡಗಳ ನಡುವೆ ಹೋಗುತ್ತಿದೆಯೋ ಎನ್ನುವ ಭ್ರಮೆ ಬರುತ್ತಿತ್ತು ಕಿಟಕಿಯಿಂದ ಇಣುಕಿದವರಿಗೆ.

ರಾಜಪ್ಪನಿಗೆ ಕೊರೆಯಲು ಕಡತದ ವಿಚಾರ ಇಲ್ಲದಿದ್ದರೆ ಬೇಜಾರಾಗಿ ಗೊರಕೆ ಹೊಡೆಯಲು ಶುರು ಮಾಡುತ್ತಿದ್ದನೇನೋ. ಉಭಯ ಕುಶಲೋಪರಿಗಳನ್ನು ಎಷ್ಟು ಹೊತ್ತು ತಾನೇ ಮಾತಾಡಲು ಸಾಧ್ಯ. ಗುರುರಾಜ ಪಂಡಿತನ ಕಡತ ತೆಗೆದು ಕೊಡುತ್ತಾ ರಾಜಪ್ಪ ಆಗಲೇ ಆ ಕಡತದ ಬಗ್ಗೆ ಕೊರೆತ ಶುರು ಮಾಡಿದ್ದ. ರಾಜಪ್ಪ ಕೊಟ್ಟ ಆ ಹಳೆಯ ಜೀರ್ಣವಾದಂತಿದ್ದ ಕಡತ ನೋಡಿ ಅದನ್ನು ಬಿಚ್ಚಿದರೆ ಇನ್ನೆಲ್ಲಿ ಅದು ಶತ

ಛಿದ್ರಗಳಾಗುತ್ತದೆಯೋ ಎಂದು ಓದಲು ಹಿಂದೆಗೆದು ಸುರೇಶ "ಯಾವದರ ಮೇಲೆ ಇವನು ಕಾವ್ಯ ರಚನೆ ಮಾಡಿದ್ದಾನಯ್ಯ? ಇದರ ಕಥೆ ಏನು?" ಎಂದು ಕೇಳಿದ.

"ಸ್ವಲ್ಪ ಓದಿ ನೋಡಯ್ಯ ಕನ್ನಡಾ ಪಂಡಿತ! ಎಂ.ಎ ನಲ್ಲಿ ಮೇಷ್ಟರಿಗೇ ಪ್ರತಿಪದಾರ್ಥ ಹೇಳಿ ಕೊಡ್ತಿದ್ದೆ! ಈಗ ಇದನ್ನ ಬಿಚ್ಚಿ ಓದಿದರೆ ಎಲ್ಲಿ ಇನ್ನು ನನ್ನ ತಲೇಗೇ ಕಟ್ಟುತ್ತಾನೋ ಅಂತ ಹೆದರಿಕೇನಾ? ಅದನ್ನ ಓದಿ ನಮಗೂ ಸಲ್ಪ ಕಥೆ ಹೇಳು. ನನಗೂ ಅದರ ಕಥೆ ಕರೆಕ್ಟಾಗಿ ಗೊತ್ತಿಲ್ಲ" ಎಂದು ರಾಜಪ್ಪ ಕಿಚಾಯಿಸಿದ.

"ಅಲ್ಲಯ್ಯ ಎಡಿಟ್ ಮಾಡಿ ಕೊಡ್ತೀನಿ ಅಂತ ತಗೊಂಡಿರೋನು ನೀನು. ನಿನಗೇ ಕಥೆ ಸರಿಯಾಗಿ ಗೊತ್ತಿಲ್ಲ ಅಂದರೆ ಆಯ್ತು. ಕನ್ನಡ ಸಾಹಿತ್ಯ ಓದೋದಕ್ಕೆ ಐದು ವರ್ಷ ಮಣ್ಣು ಹೊತ್ತು ಹೀಗೆ ಮಾತಾಡಿದರೆ ಮರ್ಯಾದೆ ಬರುತ್ತೇನಯ್ಯ. ಆ ಕಡತ ಇನ್ನೇನು ಧೂಳಾಗಿ ಹೋಗೋದ್ರಲ್ಲಿದೆ. ಇನ್ನು ಹತ್ತುಸಾರಿ ಬಿಚ್ಚಿ ಮುಚ್ಚಿದರೆ ಗುರುರಾಜ ಪಂಡಿತನ ಕಾವ್ಯ ಪಂಡಿತರ ಊಹೆ ಮಾತ್ರವಾಗುತ್ತೆ. ಅದಕ್ಕೇ ಅದರ ಕಥೆ ಏನು ಸಂಕ್ಷಿಪ್ತವಾಗಿ ಹೇಳಿಬಿಡು ಅಂದಿದ್ದು."

"ಮಾಮೂಲಿ ಕಥೆ ಕಣೋ! ಅದು ಅಕಸ್ಮಾತ್ ನಾಶವಾಗಿ ಹೋದರೆ ಕನ್ನಡ ಸಾಹಿತ್ಯಕ್ಕೇನೂ ಅಂಥ ಅಪಾರ ನಷ್ಟವಾಗುತ್ತೆ ಅಂತ ತಿಳಿದಿಲ್ಲ ನಾನು.

ಅದರ ಕಥೆ ಸರ್ವೇ ಸಾಧಾರಣ ಜೈನ ಸಾಹಿತ್ಯದ ಕಥೆ. ಒಬ್ಬ ರಾಜ ಇರುತ್ತಾನೆ. ಅವನ ಆಸ್ಥಾನದಲ್ಲಿ ಒಬ್ಬಳು ನರ್ತಕಿ ಒಂದು ದಿನ ನೃತ್ಯ ಮಾಡುತ್ತಾಳೆ. ಈ ರಾಜ ಅವಳ ನೃತ್ಯ ನೋಡುತ್ತಾ ನೋಡುತ್ತಾ ಅವನಿಗೆ ಅವಳಲ್ಲಿ ಅನುರಾಗ ಹುಟ್ಟಿಬಿಡುತ್ತೆ. ಆದರೆ ಅವಳು ತನ್ನ ನೃತ್ಯದಲ್ಲೇ ಯಾವಾಗಲೂ ನಿರತಳಾಗಿರುವವಳು. ರಾಜನ ಅನುರಾಗಕ್ಕೆ ಅವಳು ಯಾವ ರೀತಿಯ ಪ್ರತಿಕ್ರಿಯೆಯನ್ನೂ ತೋರಿಸುವುದೇ ಇಲ್ಲ. ರಾಜನಾದರೋ ಹೇಗಾದರೂ ಮಾಡಿ ಅವಳನ್ನು ಜಯಿಸಲೇ ಬೇಕೆಂದು ಹಟ ತೊಟ್ಟು ತನ್ನ ಹಣ ರಾಜ್ಯ ಎಲ್ಲವನ್ನೂ ಒಂದೊಂದಾಗಿ ತ್ಯಜಿಸುತ್ತಾ ಬರುತ್ತಾನೆ. ಕೊನೆಗೊಂದು ದಿನ ಆ ನರ್ತಕಿ ರಾಜನ ಪ್ರೀತಿ ತ್ಯಾಗ ಇತ್ಯಾದಿಗಳನ್ನೆಲ್ಲ ನೋಡಿ ಮನಕರಗಿ ಪ್ರೀತಿಸುತ್ತಾಳೆ. ಆಗ ಅವಳಿಗೆ ಗೊತ್ತಾಗುತ್ತೆ ರಾಜ ಪ್ರೀತಿಸುತ್ತಿದ್ದುದು ತನ್ನನ್ನಲ್ಲ, ತನ್ನ ಶಿಖೆಯಲ್ಲಿದ್ದ ಕೆಂಪು ಮಾಣಿಕ್ಯವನ್ನ ಎಂದು. ಅದಕ್ಕಾಗಿ ರಾಜ ಇಷ್ಟೆಲ್ಲ ಪರಿತಪಿಸಿದ್ದಾನೆಂದು ಅವಳಿಗೆ ಬೇಸರವಾಗುತ್ತೆ. ಆ ಮಾಣಿಕ್ಯವನ್ನು ಅವಳು ದಯಪಾಲಿಸಿದಾಗ ರಾಜನಿಗೆ ಜ್ಞಾನೋದಯವಾಗುತ್ತೆ! ಇದಕ್ಕೆ ಪಡುವ ಪಾಡನ್ನು ಕೈವಲ್ಯ ಪ್ರಾಪ್ತಿಗಾಗಿ ಮಾಡಿದ್ದರೆ ಇಷ್ಟರೊಳಗೆ ತನಗೆ ಪರಮಪದವೇ ಸಿಗುತ್ತಿತ್ತಲ್ಲಾ ಎಂದು. ತಕ್ಷಣ ಆಕೆಯ ಪದತಲದಲ್ಲೇ ತಪಸ್ಸಿಗೆ ಕುಳಿತುನಿರ್ವಾಣ ಪಡೆಯುತ್ತಾನೆ. ಇದು ನಾನು ಓದಿದಾಗ ತಿಳುಕೊಂಡ ಕಥೆ. ಈ ರಾಜ ಜೈನ ಮುನಿಯಾಗಿ ನಿರ್ವಾಣ ಪಡೆದುಕೊಂಡ ಸ್ಥಳವೇ ಅಮ್ಮಾಡಲ ದೇವಸ್ಥಾನ ಇದ್ದ ಜಾಗ ಇರಬೇಕೆಂದು ನನ್ನ ಊಹೆ. ಇದೇನೂ ಅಮೋಘ ಸಾಹಿತ್ಯ ಅಲ್ಲ. ನಮ್ಮ ವಡ್ಡಾರಾಧನೆಯಲ್ಲಿ ಈ ತರದ ಮುನಿಗಳ ಕಥೆಗಳು

ಇದಕ್ಕಿಂತ ಚೆನ್ನಾಗಿರುವುವು ಬೇಕಾದಷ್ಟು ಇಲ್ಲವೇನಯ್ಯ. ಸ್ಕೂಲು ಮಕ್ಕಳಿಗೆ ಪಠ್ಯಪುಸ್ತಕ ಅಂತ ಇಟ್ಟು ಕಡ್ಡಾಯ ಮಾಡಿ ಓದಿಸಬೇಕೆ ಹೊರತು ತಾವಾಗೆ ದುಡ್ಡು ಕೊಟ್ಟು ಪುಸ್ತಕ ಕೊಂಡು ಇದನ್ನು ಯಾರೂ ಓದಲಾರರು. ನಾನಂತೂ ಒಂದೂವರೆ ಲಕ್ಷದ ಆಸೆಗೆ ಇದನ್ನು ಹಿಡಿದುಕೊಂಡು ಓಡಾಡುತ್ತಿದ್ದೇನೆಯೇ ಹೊರತು, ಇದನ್ನು ಪರೀಕ್ಷೆಗಿಟ್ಟಿದ್ದರೂ ಸತ್ಯವಾಗಿಯೂ ಓದುತ್ತಿರಲಿಲ್ಲ'' ರಾಜಪ್ಪ ಗುರುರಾಜ ಪಂಡಿತನ ಕಾವ್ಯದ ಕಥೆ ಹೇಳಿ ಮುಗಿಸಿದ.

ಸುರೇಶನಿಗೆ ಕಥೆ ಕೇಳಿ ಆಶ್ಚರ್ಯವಾಯ್ತು. ಈ ಕವಿಯ ಹೆಸರು ಕೇಳಿದರೆ ಈತ ಬ್ರಾಹ್ಮಣನೆನ್ನಿಸುತ್ತೆ. ಹಾಗಿದ್ದರೆ ಇವನು ಈ ಜೈನರ ಕಥೆಯನ್ನೇಕೆ ಬರೆದ. ಅದೂ ಜೈನ ಸಂಸ್ಕೃತಿಯೇ ಅಳಿದು ಹೋಗಿ ಮಹಮದೀಯರ ಆಳ್ವಿಕೆಯೂ ಕೊನೆಗೊಳ್ಳುತ್ತಿದ್ದ ಕಾಲದವನು ತನಗಿಂತ ಸಾವಿರ ವರ್ಷ ಹಿಂದಿನ ವಡ್ಡಾರಾಧನೆಯ ಸಂಪ್ರದಾಯದ ಕಥೆಯನ್ನೇಕೆ ಬರೆದ? ಇತ್ಯಾದಿಗಳನ್ನೆಲ್ಲ ಯೋಚಿಸುತ್ತಿರಬೇಕಾದರೆ ಇದ್ದಕ್ಕಿದ್ದಂತೆ ತಾನು ಗೌರಿಯ ತಂದೆ ವಿಠ್ಠಲ ರೈಗಳಬಳಿ ಕೆಲಸಕ್ಕಿದ್ದಾಗ ನೋಡಿದ್ದ ಇದೇ ತರದ ಕಡತಗಳ ನೆನಪಾಯ್ತು. ಥಟ್ಟನೆ ಆ ಕಡತಗಳ ಕರ್ತೃ ಯೂರೋಪಿಯನ್ ಉಲ್ಲೇಖಿಸಿದ್ದ ಕವಿಯ ಹೆಸರಿಗೆ ಮನಸ್ಸು ಹುಡುಕಾಡಿತು.

ಒಂದೇ ಕ್ಷಣದಲ್ಲಿ ಆ ಯೂರೋಪಿಯನ್ ಹೆಸರಿಸಿದ್ದ ಜಿರಾಜ ಕವಿ ಇನ್ಯಾರೂ ಅಲ್ಲ, ಅವನು ಗುರುರಾಜ ಕವಿಯೇ ಇರಬೇಕು ಎಂದು ಮನಸ್ಸು ಬಲವಾಗಿ ಶಂಕಿಸಿತು. ಆ ಯುರೋಪಿಯನ್ ಇಂಗ್ಲಿಷಿನಲ್ಲಿ ಜಿಯು ಎಂದು ಬರೆದಿದ್ದ ಸ್ಪೆಲ್ಲಿಂಗನ್ನು ಅವನ ಮೋಡಿಅಕ್ಷರದ ದೆಸೆಯಿಂದ ನಾನು ಜಿಐ ಎಂದು ಓದಿಕೊಂಡು ಜಿರಾಜ ಕವಿ ಎಂದು ತಿಳಿದಿದ್ದೇನೆ! ಯೋಚಿಸಿದಂತೆ ಯೋಚಿಸಿದಂತೆ ಸುರೇಶನ ಅನುಮಾನ ಸ್ಪಷ್ಟವಾಗುತ್ತ ಕೊಂಚ ಹೊತ್ತಿನೊಳಗೆ ನಿಸ್ಸಂದೇಹವಾಗಿ ಗುರುರಾಜ ಕವಿಯನ್ನೇ ಆ ಯೂರೋಪಿಯನ್ ತನ್ನ ಡೈರಿಯಲ್ಲಿ ಉಲ್ಲೇಖಿಸಿರುವುದೆಂದು ನಿರ್ಧರಿಸಿದ. ಸುರೇಶ ಈ ಬಗ್ಗೆ ಯೋಚಿಸುತ್ತಿದ್ದಾಗ ರಾಜಪ್ಪ ಏನೇನನ್ನೋ ಆ ಕವಿಯ ಬಗ್ಗೆ ಹೇಳುತ್ತಲೇ ಇದ್ದ. ಆದರೆ ತನಗೆ ಹೊಳೆದುದರ ಬಗ್ಗೆ ಗಾಢವಾಗಿ ಯೋಚಿಸುತ್ತಿದ್ದ ಸುರೇಶನ ಕಿವಿಗೆ ಅದು ಬಿದ್ದೂ ಬೀಳಲಿಲ್ಲ.

ಹಾಗಿದ್ದರೆ ಇವನನ್ನು ಓದಿನೋಡಬೇಕು. ಏನಾದರೂ ಕುತೂಹಲಕರ ಸಂಗತಿಗಳು ಈ ಕಾವ್ಯದಲ್ಲಿ ಒಂದಾದರೂ ಇದ್ದೇ ಇರುತ್ತದೆ! ಸುರೇಶ ಮನದಲ್ಲೇ ನಿರ್ಧರಿಸಿದ.

ಸುರೇಶ ಅಂತರ್ಮುಖಿಯಂತೆ ಏನನ್ನೋ ಯೋಚಿಸುತ್ತ, ಆಡುತ್ತಿದ್ದ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೆ ಕುಳಿತಿರುವುದು ರಾಜಪ್ಪನ ಗಮನಕ್ಕೂ ಬಂದಿತೆಂದು ಕಾಣುತ್ತದೆ. ಅವನು ಆ ಮಾತು ಈ ಮಾತು ಆಡುತ್ತ ಕೊನೆಗೆ ಗೌರಿಕಡೆ ತಿರುಗಿ ಮಾತಾಡಲಾರಂಭಿಸಿದ. ಸುರೇಶ ತನ್ನ ಯೋಚನೆಯಲ್ಲೇ ಮಗ್ನನಾಗಿದ್ದ. ರಾಜಪ್ಪ ಗೌರಿ

ಕಡೆಗೆ ತಿರುಗಿ ತಮ್ಮ ವಿದ್ಯಾರ್ಥಿ ದೆಸೆಯ ನೆನಪುಗಳನ್ನೆಲ್ಲಾ ಸ್ವಾರಸ್ಯವಾಗಿ ಗೌರಿಗೆ ಹೇಳುತ್ತಿದ್ದುದೂ ಅವನ ಗಮನಕ್ಕೆ ಬರಲಿಲ್ಲ.

ಸುರೇಶ ಗಾಢವಾಗಿ ಆಲೋಚಿಸಿದಂತೆ, ನೆನಪಿನ ಆಳಗಳಿಗೆ ಮುಳುಗಿದಂತೆ, ಅವನ ವರ್ತಮಾನದ ಸಮಸ್ಯೆಗಳೆಲ್ಲ ಗೌಣವಾಗಿ ಭಯ ಕಾತರ ಚಿಂತೆಗಳೆಲ್ಲ ಕಡಿಮೆಯಾಗಿ ಲೆಕ್ಕಾಚಾರಕ್ಕೆ ಸಿಕ್ಕುವ ಅಂಕೆ ಸಂಖ್ಯೆಗಳಂತೆ ಗೋಚರಿಸಿದುವು. ಏನೇ ಇರಲಿ ಈ ಗುರುರಾಜ ಕವಿ ಬರೆದಿರುವುದಾದರೂ ಏನನ್ನು ನೋಡೋಣ ಎಂದು ಯೋಚಿಸುತ್ತ ಕಡತ ಮೆಲ್ಲಗೆ ಬಿಚ್ಚಿದ. ದಪ್ಪ ಕಾಗದದಲ್ಲಿ ಬರೆದು ಮಡಿಕೆ ಮಡಿಕೆಯಾಗಿ ಪುಸ್ತಕದಂತೆ ಮಡಚಿಟ್ಟು ಕಟ್ಟಲಾಗಿತ್ತು. ಅದನ್ನು ಬಿಚ್ಚಿದಾಗ ಅದನ್ನು ಎಡಿಟ್ ಮಾಡುವುದು ತಲೆನೋವೆಂದು ರಾಜಪ್ಪ ಹೇಳಿದ್ದು ಸರಿ ಎನ್ನಿಸಿತು. ಅನೇಕ ಕಡೆಗಳಲ್ಲಿ ಹುಳು ತಿಂದೋ ಏನೋ ತೂತು ಬಿದ್ದಿತ್ತು. ಅಂಚು ಅಲ್ಲಲ್ಲಿ ಹರಿದು ಜೂಲು ಜೂಲಾಗಿತ್ತು. ಅದರ ಸ್ಥಿತಿ ನೋಡಿದರೆ ಅದನ್ನು ನಕಲು ಮಾಡದಿದ್ದರೆ ಅದರ ಆಯುಸ್ಸು ಕೆಲವೇ ದಿನ ಎನ್ನುವಂತಿತ್ತು. ಅದರ ಮೊದಲಲ್ಲೇ 'ಗುರುರಾಜ ಕವಿ ವಿರಚಿತ ದ್ವಿಸಂಧಾನ ಕಾವ್ಯಂ' ಎನ್ನುವುದನ್ನು ಓದುತ್ತಾ ಸುರೇಶ ಮುಂದುವರಿಸಿದ.

ಇದ್ದನರಸನುರಣಕಡುಗಲಿಯು
ಅರಿಶಿರಕಠೋರನುಅಸೀಮ
ಪರಾಕ್ರಮಿನಾಮನೃಪಧೀರನುತ್ತುಂಗರಾಜ
ಹೇರಡವಿಗಳಉತ್ತುಂಗಶಿಖರಗಳ
ಗಿರಿಗಹ್ವರಗಳೊಡಲವಿಶಾಲ
ವಾರಿಧಿಯವಿಸ್ತಾರದೊಳುತುಳುನಾಡರಾಜ್ಯದಲಿ

ಶಾಂತಕಠೋರಸ್ಥಿತಕರುಣಾ
ರೌದ್ರಾದಿಸರಸಭರಿತಕಾವ್ಯ
ದೊಲುನಡೆದುದನುದಿನದನೃಪನಿಳೆಯಒಡ್ಡೋಲಗ.
ಆಸ್ಥಾನದಲಿನೆರೆದುದುನ್ನತ
ಕವಿವರೇಣ್ಯರಪಂಡಿತೋತ್ತಮರ
ಸರಸಸನ್ನಿಧಿಯೊಳಲ್ಲಿಅಗಣಿತನೃತ್ಯಸಲ್ಲಾಪ

ಸುರೇಶ ಇದ್ದಕ್ಕಿದ್ದಹಾಗೆ ಅದನ್ನು ಓದುವುದರಲ್ಲಿ ಮಗ್ನನಾದ. ಗುರುರಾಜ ಕವಿ ತುಳು ನಾಡಿನ ಉತ್ತುಂಗ ರಾಜನ ಆಸ್ಥಾನವನ್ನೂ, ಅವನ ರಾಜ್ಯದ ವಿಸ್ತಾರವನ್ನೂ, ಅದರ ಸರಹದ್ದುಗಳಾದ ಅರಬ್ಬಿ ಸಮುದ್ರವನ್ನೂ ಸಹ್ಯಾದ್ರಿಯ ದಟ್ಟಡವಿಗಳನ್ನೂ, ಗಿರಿಶಿಖರಗಳನ್ನೂ ವರ್ಣಿಸುತ್ತ ಮುಂದುವರಿದಂತೆ ಅಂಥ ಸಾಹಿತ್ಯಿಕ ಮೌಲ್ಯವುಳ್ಳ ಕೃತಿ ಏನೂ ಅಲ್ಲವೆಂದೆನ್ನಿಸಿದರೂ ಆತ ಶ್ಲೇಷೆ ಯಮಕ ಪ್ರಾಸಾನುಪ್ರಾಸ ಮುಂತಾದವುಗಳನ್ನು

ಉಪಯೋಗಿಸುವುದರಲ್ಲಿ ತೋರಿಸಿದ್ದ ಪಾಂಡಿತ್ಯ ಮಾತ್ರ ಅಸಾಧಾರಣವಾಗಿತ್ತು. ಆದರೆ ಈ ರೀತಿ ಚಿತ್ರ ಕವಿತೆಗಳ ಕಸರತ್ತು ತೋರಿಸುವ ಕವಿಗಳ ಬಗ್ಗೆಯಾಗಲಿ ಸಾಹಿತ್ಯದ ಬಗ್ಗೆಯಾಗಲಿ ಸುರೇಶನಿಗೆ ಅಂಥ ಆಸಕ್ತಿ ಇರಲಿಲ್ಲ. ಪದ ಒಡೆಯದೆ ಚರಣಗಳನ್ನು ಮಾತ್ರ ನಿರ್ದೇಶಿಸಿ ಉದ್ದಕ್ಕೆ ಬರೆದುಕೊಂಡು ಹೋಗಿದ್ದ ಗುರುರಾಜ ಕವಿಯ ಕಾವ್ಯ ರಚನಾ ವಿಧಾನವಂತೂ ಅವನನ್ನು ಸುಲಲಿತವಾಗಿ ಓದಲು ತುಂಬ ತೊಂದರೆ ಕೊಡುತ್ತಿತ್ತು.

ಯಾವುದೋ ಒಂದು ಪದ್ಯ ಓದುತ್ತಾ ಅದರ ಪದ ಒಡೆದು ಅರ್ಥೈಸಿಕೊಂಡು ಓದಲು ಸುರೇಶ ಹೆಣಗುತ್ತಿರಬೇಕಾದರೆ ಅವನಿಗೆ ಹಠಾತ್ತನೆ ಹೊಳೆಯಿತು! ಇದು ಲಿಪಿಕಾರನ ತಪ್ಪಲ್ಲ. ಕವಿಯೇ ಉದ್ದೇಶಪೂರ್ವಕವಾಗಿ ಹೀಗೆ ಬರೆದಿದ್ದಾನೆ! ಓದುವವರು ಬೇರೆ ಬೇರೆ ರೀತಿ ಪದಚ್ಛೇದ ಮಾಡಿದ ಹಾಗೂ ಈ ಕಾವ್ಯ ಬೇರೆ ಅರ್ಥ ಕೊಡುತ್ತದೆ! ಅದಕ್ಕೇ ಈ ಕವಿ ಇದರ ಮೊದಲಲ್ಲಿ ದ್ವಿಸಂಧಾನ ಕಾವ್ಯ ಎಂದು ಹೇಳಿಕೊಂಡಿದ್ದಾನೆ. ಹಾಗಿದ್ದರೆ ಇದು ಕೊಂಚ ಕ್ಲಿಷ್ಟವಾದ ಕಾವ್ಯವೇ ಸರಿ. ಎಂದರೆ ರಾಜಪ್ಪ ಹೇಳಿದಹಾಗೆ ಇದು ಕೇವಲ ಉತ್ತುಂಗರಾಜ ಜೈನ ಮುನಿಯಾಗಿ ಕೈವಲ್ಯ ಪದವಿ ಪಡೆದ ಕಥೆ ಮಾತ್ರವಲ್ಲ!

ಹಾಗಾದರೆ ಈ ಕಾವ್ಯದೊಳಗೆ ಇನ್ನೇನೋ ಅರ್ಥ ಇದೆ. ರಾಜಪ್ಪ ಹೇಳಿದ ಕಥೆಯ ಪೂರ್ವಗ್ರಹದ ದೆಸೆಯಿಂದ ಅದು ನನಗೆ ಹೊಳೆಯುತ್ತಿಲ್ಲ! ಈ ಕಾವ್ಯ ಯಾವ ಛಂದಸ್ಸಿನಲ್ಲಿ ಬರೆದಿದ್ದಾನೆ? ಷಟ್ಪದಿಯೋ?, ಸರಳ ರಗಳೆಯೋ? ವೃತ್ತ ಕಂದಗಳೋ? ಸಾಂಗತ್ಯವೋ? ಓದು ಮುಗಿಸಿ ಎಷ್ಟೋ ದಿನ ಆದಮೇಲೆ ಈಗ ಅದನ್ನೆಲ್ಲ ಜ್ಞಾಪಿಸಿಕೊಳ್ಳುವುದೆಂದರೆ ಹೇಗೆ? ಎಲ್ಲೋ ಹೇಗೋ ಪದಚ್ಛೇದ ಬದಲಿಸಿದರೆ ಬೇರೆ ಅರ್ಥ ಬರುತ್ತೆ. ಸ್ವಲ್ಪ ಬುದ್ಧಿಗೆ ಕಸರತ್ತು ಕೊಡಬೇಕು.

ಸುರೇಶನಿಗೆ ವಿಚಿತ್ರ ಅನ್ನಿಸಿತು. ಪ್ರಪಂಚವೆಲ್ಲ ಶೇಷಪ್ಪನ ವಿಚಿತ್ರ ಕನ್ನಡಿಯ ಪ್ರತಿಬಿಂಬದಂತೆ ಕಾಣುತ್ತಿದೆಯಲ್ಲಾ ಎಂದು ಯೋಚಿಸಿದ. ಈ ಗುರು ರಾಜ ಕವಿಯ ವಿಚಿತ್ರ ಕಗ್ಗ ಯಾವ ಕ್ಲಾಸಿಗೆ ಯಾರು ಪಠ್ಯಪುಸ್ತಕ ಮಾಡುತ್ತಾರೆಂದು ಒಂದೂವರೆ ಲಕ್ಷ ಕೊಟ್ಟು ರಾಜಪ್ಪನ ಕೈಲಿ ಎಡಿಟ್ ಮಾಡಿಸುತ್ತಿದ್ದಾರೆ? ಇವನು ಯಾಕೆ ಇದನ್ನು ಹೊತ್ತುಕೊಂಡು ಜುಗಾರಿ ಕ್ರಾಸಿನಲ್ಲಿ ತಿರುಗುತ್ತಿದ್ದಾನೆ! ರಾಜಪ್ಪ ತಾನು ಬಂದಿದ್ದಕ್ಕೆ ಕೊಟ್ಟ ವಿವರಣೆ ಸುರೇಶನಿಗೆ ಅಷ್ಟೊಂದು ಸಮಾಧಾನ ತರಲಿಲ್ಲ. ಬೆಳಗಿನಿಂದ ಸುರೇಶನಿಗಾದ ರಹಸ್ಯಮಯ ಅನುಭವಗಳ ಸಂದರ್ಭದಲ್ಲಿ ಸುರೇಶ ಚಿಂತಿಸುತ್ತಿದ್ದುದ ರಿಂದಲೋ ಏನೋ ಅವನ ಕೈಯ್ಯಲ್ಲಿದ್ದ ಗುರುರಾಜ ಕವಿಯ ಕಾವ್ಯ ಕೂಡಾ ಏನೋ ರಹಸ್ಯವನ್ನೊಳಗೊಂಡಿದ್ದಂತೆ ನಿಗೂಢವಾಗಿ ತೋರತೊಡಗಿತು.

ನಿಧಾನವಾಗಿ ಚಲಿಸುತ್ತಿದ್ದ ರೈಲು ಮೂವರಿಗೂ ನಿಂತಂತೆನಿಸಿದ್ದರಿಂದ ಸುರೇಶ ಓದುವುದನ್ನು ನಿಲ್ಲಿಸಿ ಕಾವ್ಯದಿಂದ ಕಣ್ಣೆತ್ತಿ ರಾಜಪ್ಪ ಗೌರಿಯ ಕಡೆಗೆ ನೋಡಿದ. ಆ

ದಾರಿಯಲ್ಲಿ ಪರ್ವತಗಳ ಕಿಬ್ಬಿಯ ಮಧ್ಯದಲ್ಲಿ ಕುಮರಿ ಎನ್ನುವ ಸ್ಟೇಷನ್ ಒಂದಿತ್ತು. ಆ ಸ್ಟೇಷನ್ನಿನಿಂದ ಕುಮರಿ ಊರು ಹನ್ನೊಂದು ಮೈಲು ಆಚೆ ಇದ್ದರೂ ಆ ಸ್ಟೇಷನ್ನಿಗೆ ಮತ್ತೇನೆಂದು ಕರೆಯಲೂ ಗೊತ್ತಾಗದೆ ಅದಕ್ಕೆ ಕುಮರಿ ಎಂದು ಕರೆಯುತ್ತಿದ್ದರೆಂದು ಕಾಣುತ್ತದೆ. ಅಲ್ಲಿ ಹತ್ತುವವರೂ ಇಳಿಯುವವರೂ ಯಾರೂ ಇರುತ್ತಿರಲಿಲ್ಲ. ಆದರೂ ಆ ಸ್ಟೇಷನ್ನು ಅಲ್ಲಿ ದೊರೆಯುವ ಸೆಟ್ ದೋಸೆ, ತಟ್ಟೆ ಇಡ್ಲಿಗಳಿಗೆ ಪ್ರಸಿದ್ಧವಾಗಿತ್ತು. ಆ ಹೋಟೆಲಿನ ಉಡುಪಿ ಬ್ರಾಹ್ಮಣ ರೈಲು ಸಿಬ್ಬಂದಿಗೆಲ್ಲ ಉಚಿತ ಊಟ ತಿಂಡಿಗಳನ್ನು ಸಾಕೆನ್ನಿಸುವಷ್ಟು ಕೊಟ್ಟು ಬುಕ್ ಮಾಡಿಕೊಳ್ಳುತ್ತಿದ್ದುದರಿಂದ ರೈಲು ಕಡ್ಡಾಯವಾಗಿ ಅಲ್ಲಿ ನಿಲ್ಲುವುದೂ, ಬಾಯಿಚಪಲ ತಾಳಲಾರದ ಪ್ರಯಾಣಿಕರು ಕೇವಲ ಒಂದು ಲೋಟ ಕಾಫಿ ಕುಡಿಯೋಣೆಂದು ಇಳಿದವರು, ಅಲ್ಲಿನ ಗರಿಗರಿ ವಡೆ, ಬಿಸಿಬಿಸಿ ಇಡ್ಲಿ, ದೋಸೆಗಳಿಗೆ ಮರುಳಾಗಿ, ಮುಂದೆ ಒಳ್ಳೆ ಕಾಫಿ ತಿಂಡಿ ಸಿಕ್ಕುತ್ತೋ ಇಲ್ಲವೋ ಎಂದು ಮುಂಜಾಗ್ರತೆ ಕ್ರಮವಾಗಿ ಅಲ್ಲಿರುವ ಎಲ್ಲಾ ಐಟಂಗಳನ್ನೂ ರುಚಿ ನೋಡುವುದೂ ಆ ರೈಲು ಮಾರ್ಗದಲ್ಲಿ ಸಂಪ್ರದಾಯವೆನ್ನುವಂತೆ ನಡೆಯುತ್ತಿತ್ತು.

ರೈಲು ನಿಂತಂತೆ ಅನ್ನಿಸಿದ್ದರಿಂದ ಬಹುಶಃ ಕುಮರಿ ಸ್ಟೇಷನ್ನೇ ಬಂದಿರಬೇಕೆಂದು ಸುರೇಶ ಭಾವಿಸಿ ರಾಜಪ್ಪನ ಕಡೆ ತಿರುಗಿ ''ಮಹರಾಯ ಬೆಳಗಿನಿಂದ ಊಟ ಇಲ್ಲ. ಹೊಟ್ಟೆ ತಾಳ ಹೊಡೀತಾ ಇದೆ. ಕುಮರಿ ಸ್ಟೇಷನ್ನಿನಲ್ಲಿ ಒಂಚೂರು ಕಾಫಿ ತಿಂಡಿ ತಿಂದು ಮಾತಾಡೋಣ. ನಿಮ್ಮಿಬ್ಬರಿಗೂ ಗಾಡಿಗೇ ತಿಂಡಿ ಕಳಿಸುತ್ತೇನೆ. ಮಳೆಯಲ್ಲಿ ಯಾಕೆ ಎಲ್ಲರೂ ನೆನೆಯಬೇಕು.'' ಎನ್ನುತ್ತ ಎದ್ದು ಸ್ಟೇಷನ್ ಬಂದಿದೆಯೇ ನೋಡಲು ಬಾಗಿಲ ಕಡೆಗೆ ತಿರುಗಿದ.

''ಯಾವುದೋ ಸುರೇಶ ಸ್ಟೇಷನ್ನು? ದೇವಪುರ ಬಿಟ್ಟು ಮುಂದೆ ಬಂದಿದೆಯೇನಯ್ಯ ಈ ಹಾಳು ರೈಲು? ಸುತ್ತ ಮಂಜು ಮುಸುಕಿರೋದರಿಂದ ನಮಗೆ ದೇವಪುರದ ಪೇಟೆ ದೀಪಗಳು ಕಾಣ್ತಿಲ್ಲ ಅಷ್ಟೆ. ಮಂಜು ಮುಸುಕಿದ ಈ ಕತ್ತಲಲ್ಲಿ ಗಾಡಿ ಒಳಗೆ ಕುಳಿತುಕೊಂಡು ಎಲ್ಲೆಲ್ಲೋ ಹೋದಹಾಗೆ, ಯಾವುದೋ ಸ್ಟೇಷನ್ ಬಂದಹಾಗೆ ನೀನು ಕನಸು ಕಾಣ್ತಿದೀಯ. ಕುತ್ಕೋ ಕುತ್ಕೋ'' ಎಂದು ರಾಜಪ್ಪ ಸುರೇಶನನ್ನು ಹಾಸ್ಯ ಮಾಡಿದ. ಸುರೇಶ ಬಾಗಿಲು ತೆರೆದು ಹೊರಗಿಣುಕಿದ. ಯಾವ ಸ್ಟೇಷನ್ನೂ ಕಾಣಲಿಲ್ಲ. ಸ್ಟೇಷನ್ನಿನ ದೀಪಗಳು ಸಹ ದೂರದಲ್ಲೆಲ್ಲೂ ಮಿನುಗುತ್ತಲು ಇರಲಿಲ್ಲ. ಕೆಳಗಿನ ಅಗಾಧ ಗಿರಿ ಪ್ರಪಾತಗಳಿಂದ ಗೌ ಎನ್ನುವ ಗಂಭೀರ ನಾದ ಅವುಗಳ ಅಸ್ಥಿತ್ವವನ್ನು ಶಬ್ದಮಾತ್ರವಾಗಿ ಸೂಚಿಸುತ್ತಿತ್ತು. ಬಾಗಿಲಲ್ಲಿ ನಿಂತ ಸುರೇಶನಿಗೆ ರೈಲು ಮೆಲ್ಲಗೆ ಮುಂದುವರಿಯುತ್ತಿದೆ ಎನ್ನಿಸಿತು. ರಾಜಪ್ಪ ಹೇಳಿದಹಾಗೆ ನಿಂತಲ್ಲೇ ನಿಂತು ಕೊಂಡು ಜುಗುಜುಗು ಸದ್ದು ಮಾಡುತ್ತ ರೈಲು ನಮ್ಮನ್ನು ಭ್ರಮಾಲೋಕಕ್ಕೆ ಒಯ್ದಿದ್ದರೆ ಹೇಗಿರುತ್ತಿತ್ತೆಂದು ಮನದಲ್ಲೇ ಕಲ್ಪಿಸಿಕೊಳ್ಳುತ್ತ ಸುರೇಶ ಬಾಗಿಲು ಮುಚ್ಚಿದ.

''ಏನಯ್ಯ, ರೈಲು ಹೋಗ್ತಾ ಇದಿಯ?'' ಎಂದ ರಾಜಪ್ಪ.

"ಹೋಗ್ತಾ ಇದೆ"

"ಹಿಂದಕ್ಕೋ ಮುಂದಕ್ಕೋ?"

"ಈ ರೈಲನ್ನ ಇಷ್ಟೊಂದು ಕಂಡೆಮ್ ಮಾಡ್ತೀಯಲ್ಲೋ"

"ಮತ್ತಿನ್ನೇನು ಬಿಡೋ. ನಮ್ಮ ನಾಗಮಂಗಲದ ರೋಡೆಂಜಿನ್ನು ಇದಕ್ಕಿಂತ ಜೋರಾಗಿ ಹೋಗ್ತವೆ, ತಿಳುಕೋ. ಫರ್ ಯುವರ್ ಇನ್‌ಫರ್ ಮೇಶನ್" ಎಂದು ರಾಜಪ್ಪ ರೈಲಿನ ಆಮೆ ಗತಿಯನ್ನು ಇನ್ನಷ್ಟು ಬಯ್ದ.



# ರತ್ನಮಾಲಾ - ೨೨



ಮಂದಲೆಯೆಬಿಳಿನೊರೆಯತುಹಿನ
ಮದಗಜಗಮನದಂದದಲಿನೆರೆ
ಬಂದಳಿಂದ್ರನಮರಾವತಿಗೆತಿರೆಯಮೋಹಿನಿಯೊಲು
ಅಂದದಲಿಪೆರ್ಬಂಡೆಕುಚಗಳಸುರ
ಸುಂದರಿಯು ------!-----------!
ಅಂದವೇನೆಂಬೆಶೃಂಗಶೃಂಗಾರಶಿಖಿಯಪರಿಯ

ಕಾವ್ಯ ಓದುತ್ತಿದ್ದ ಸುರೇಶನ ರಸಾಸ್ವಾದನೆ 'ಸುಂದರಿಯು' ಎನ್ನುವ ಪದ ಆದನಂತರ ಹುಳು ತಿಂದೋ ಏನೋ ಅಷ್ಟುದ್ದ ತೂತು ಬಿದ್ದಿದ್ದುದರಿಂದ ಭಂಗಬಂದಂತಾಗಿ ತಲೆ ಎತ್ತಿ ಮಾತಾಡುತ್ತ ಇದ್ದ ಗೌರಿ ರಾಜಪ್ಪನ ಕಡೆಗೆ ನೋಡಿದ.

''ಏನಯ್ಯ ಕಾವ್ಯಾನ ಬಹಳ ಎಂಜಾಯ್ ಮಾಡ್ತಿರೋಹಾಗಿದೆ'' ಎಂದು ಸುರೇಶ ತಲೆ ಎತ್ತಿದ್ದನ್ನು ನೋಡಿ ರಾಜಪ್ಪ ಕೇಳಿದ.

''ಏನ್ರಿ ಅಷ್ಟೊಂದು ಚೆನ್ನಾಗಿದ್ರೆ ನಮಗೂ ಒಂಚೂರು ಓದಿ ಹೇಳ್ರಿ'' ಎಂದು ಗೌರಿ ಕುತೂಹಲದಿಂದ ಕೇಳಿದಳು.

''ಚೆನ್ನಾಗೇನೋ ಇದೆ. ಆದರೆ ಇದನ್ನ ಸಾರ್ವಜನಿಕವಾಗಿ ಓದೋಹಾಗಿಲ್ಲ

ಕಣೆ. ಇದು ಏನಿದ್ರೂ ಅವರವರೆ ಓದಿ ಆನಂದ ಪಡಬೇಕಾದ ಕಾವ್ಯ''ಎಂದು ಸುರೇಶ ತಮಾಷೆಯಾಗಿ ಹೇಳಿದ.

ರೈಲು ನಿಧಾನವಾಗಿ ಮುಂದುವರಿಯುತ್ತಿದೆಯೆಂದಾದ ಮೇಲೆ ಮತ್ತೆ ಕುಳಿತು ಸುರೇಶ ಗುರುರಾಜ ಪಂಡಿತನ ಕಾವ್ಯವನ್ನು ಮುಂದಕ್ಕೆ ಓದತೊಡಗಿದ್ದ. ಗುರುರಾಜ ಕವಿ ತನ್ನ ಕಾವ್ಯವನ್ನು ಅಂತಿಮವಾಗಿ ವೈರಾಗ್ಯ ಪ್ರತಿಪಾದನೆಗೆ ಉಪಯೋಗಿಸಿದ್ದರೂ ಕಾವ್ಯವೆಲ್ಲಾ ಪಕ್ಕಾ ಶೃಂಗಾರ ಕಾವ್ಯವಾಗಿತ್ತು. ಉತ್ತುಂಗ ರಾಜನ ಆಸ್ಥಾನಕ್ಕೆ ಬಂದ ಆ ಮಹಾನ್ ನರ್ತಕಿಯ ಅಂಗೋಪಾಂಗಗಳ ಸವಿವರ ವರ್ಣನೆಗೆ ಅವನ ಕಾವ್ಯದ ಬಹು ಭಾಗ ಮೀಸಲಾಗಿತ್ತು.

''ಅಂಥ ಎ ಸರ್ಟಿಫಿಕೇಟು ವರ್ಣನೆಗಳು ಏನಿದೆಯೋ ಅದರಲ್ಲಿ? ಒಂದಷ್ಟು ಮಾಮೂಲಿ ಕವಿಸಮಯಗಳು, ಕುಚ ನಿತಂಬಗಳ ವರ್ಣನೆಗಳು ಇದ್ದಾವೆ. ಅವೆಲ್ಲ ನಮ್ಮ ಹಳೆ ಕವಿಗಳಲ್ಲಿ ಯಾರಲ್ಲಿಲ್ಲ? ಪಂಪನಿಂದ ಹಿಡಿದು ನಾರಣಪ್ಪನವರೆಗೆ ಎಲ್ಲ ಪುರುಸೋತ್ತಾಗುತ್ತಿದ್ದಂತೆಯೇ ಕುಚ ನಿತಂಬಗಳ ವರ್ಣನೆಗೆ ಇಳಿಯೋರೇ. ನೀನು ಹೇಳೋದು ನೋಡಿದರೆ ನಿನಗೇನೋ ಹೊಸ ಅರ್ಥಗಳು ಹೊಳೀತಿರೋ ಹಾಗಿದೆ. ಯಾರಿಗೆ ಗೊತ್ತು ಮಹರಾಯ! ಬ್ರಹ್ಮಚಾರಿಗಳಿಗೇ ಒಂದರ್ಥ, ಮದುವೆಯಾದೋರಿಗೇ ಒಂದರ್ಥ ಬರೋಹಾಗೆ ಬರ್ದಿದಾನೋ ಏನೋ!'' ಎಂದು ರಾಜಪ್ಪ ತಮಾಷೆ ಮಾಡಿದ.

''ಕರೆಕ್ಟ್ ನೀನು ಹೇಳೋದು. ನೀನು ಮದುವೆ ಮಾಡಿಕೊಂಡು ಆಮೇಲೆ ಎಡಿಟ್ ಮಾಡೋದು ಒಳ್ಳೇದು ರಾಜಪ್ಪ. ಇಲ್ಲದಿದ್ದರೆ ಅವನು ಹೇಳೋ ಡೀಟೇಲೆಲ್ಲ ನಿನಗೆ ಹ್ಯಾಗಯ್ಯ ಗೊತ್ತಾಗತ್ತೆ? ಹೇಳು'' ಎಂದು ರಾಜಪ್ಪನ ಹೇಳಿಕೆಯನ್ನು ಪ್ರತಿಪಾದಿಸಿ ಸುರೇಶ ತಮಾಷೆ ಮಾಡಿದ.

''ಸುಮ್ಮನಿರಯ್ಯ. ಈ ಗುರುರಾಜ ಕವಿ ಸ್ವಲ್ಪ ಸೆಕ್ಸ್ ಪರ್ವರ್ಟ್ ಥರ ಕಣ್ತಾನೆ ಕಣಯ್ಯ. ಈ ಕಾಮಾಂಧನ್ನ ಅರ್ಥ ಮಾಡಿಕೊಳ್ಳೋದಕ್ಕೆ ನಾನು ಮದುವೆ ಮಕ್ಕಳು ಮರಿ ಎಲ್ಲ ಮಾಡಿಕೋಬೇಕಾ? ಅವನು ಕುಚಗಳನ್ನ ಹೆಬ್ಬಂಡೆಗಳಿಗೆ ಗಿರಿಶಿಖರಗಳಿಗೆ ಎಲ್ಲ ಹೋಲಿಸ್ತಾನೆ. ಈಗ ನೀನು ಮದುವೆ ಮಾಡಿಕೊಂಡಿದ್ದೀಯಲ್ಲ ಏನು ಹೊಳೆದಿದ್ದು ಹೊಸ ಅರ್ಥ, ನಿಂಗೆ?'' ಎಂದು ಒರಟೊರಟಾಗಿ ಸುರೇಶನೊಡನೆ ರಾಜಪ್ಪ ವಾದಕ್ಕಿಳಿದವನು ಮತ್ತೆ ಪಕ್ಕದಲ್ಲಿ ಗೌರಿ ಕುಳಿತಿರುವುದನ್ನು ಗಮನಿಸಿ ಸುಮ್ಮನಾದ.

''ಏನ್ರಿ, ಯಾವಕಾಲದಿಂದಲೂ ಇದೇ ಅಂತ ಕಾಣ್ತದೆ, ಹೆಂಗಸರನ್ನ ಜಾಹೀರಾತಿಗೆ ಉಪಯೋಗಿಸಿಕೊಳ್ಳೋದು.''ಎಂದು ಗೌರಿ ಹೊಸದೊಂದು ವಿವಾದ ತೆಗೆಯುವುದಕ್ಕೆ ಸಿದ್ಧಳಾದಳು. ಆದರೆ ಆ ವೇಳೆಗಾಗಲೇ ಸುರೇಶ ಮತ್ತೆ ಆ ಕಡತದಲ್ಲಿ ತಲ್ಲೀನನಾದಂತಿದ್ದುದರಿಂದ ಸುಮ್ಮನಾದಳು.

ರಾಜಪ್ಪ ಕ್ವಚಿತ್ತಾಗಿ ಕುಚ ನಿತಂಬಗಳನ್ನು ಹೆಬ್ಬಂಡೆಗಳಿಗೆ ಗಿರಿಶಿಖರಗಳಿಗೆ ಕವಿ ಹೋಲಿಸಿದ್ದನ್ನು ಪ್ರಸ್ತಾಪಿಸಿದ್ದು ಸುರೇಶನ ಮನಸ್ಸಿನಲ್ಲಿ ಏನೇನೋ ನೂರಾರು ವಿಚಿತ್ರ

ಆಲೋಚನೆಗಳನ್ನು ಪ್ರಚೋದಿಸಿದ್ದುವು. ಗುರುರಾಜ ಕವಿ ಉದ್ದಕ್ಕೂ ಆ ನರ್ತಕಿಯ ಹಾವಭಾವ ನಡೆ ಬಳುಕು ವೈಯ್ಯಾರಗಳನ್ನೆಲ್ಲ ಕೇವಲ ನದಿಯ ಉಪಮಾನಗಳಲ್ಲೇ ನಿರ್ವಹಿಸುತ್ತಾ ಹೋಗಿದ್ದು ಸುರೇಶನಿಗೆ ಆಶ್ಚರ್ಯಕರವಾಗಿ ಕಂಡಿತ್ತು. ಯೋಚಿಸಿದಂತೆ ಇದು ಕೇವಲ ಕವಿಸಮಯವಾಗಲೀ ಅಥವಾ ರಾಜಪ್ಪ ಹೇಳಿದಂತೆ ಕವಿಯ ಸೆಕ್ಸ್ ಪರ್ವರ್ಷನ್ ಆಗಲಿ ಅಲ್ಲವೆಂದೇ ಅವನ ಮನಸ್ಸು ಹೇಳುತ್ತಿತ್ತು. ಏನೋ ರಹಸ್ಯ ಸಂದೇಶವನ್ನು ಅರಸುತ್ತಲೇ ಸುರೇಶ ಓದುತ್ತಿದ್ದ. ದ್ವಿಸಂಧಾನ ಕಾವ್ಯ ಎಂದಮೇಲೆ ಇವನ ಉಪಮಾನ ಉಪಮೇಯಗಳಿಗೆಲ್ಲ ಇನ್ನೊಂದೇನೋ ಅರ್ಥ ಇರಬಹುದಲ್ಲವೆ? ಸುರೇಶನ ಮನಸ್ಸು ಒಂದೇಸಮ ಚಿಂತಿಸಿತು. ಏನಿರಬಹುದು? ರಾಜಪ್ಪನನ್ನು ಕೇಳುವುದರಿಂದ ಏನೂ ಸುಖವಿಲ್ಲ. ಇದರಲ್ಲೆಲ್ಲ ಇವನು ಸ್ವಲ್ಪ ದಡ್ಡನೇ. ಏಕೆಂದರೆ ಈ ರೀತಿ ಗೂಢಾರ್ಥಗಳ ಪದ್ಯ ಹೊಸೆಯುತ್ತಾರೆಂದೇ ಇವನು ನವ್ಯಕಾವ್ಯವನ್ನೂ ಕನ್ನಡದ ನವ್ಯ ಕವಿಗಳನ್ನೂ ಬಾಯಿಗೆ ಬಂದಹಾಗೆ ಬಯ್ಯುತ್ತಿರಲಿಲ್ಲವೆ! ಎಂದೆಲ್ಲ ಯೋಚಿಸುತ್ತ ಮನಸ್ಸಿನಲ್ಲೇ ಮೆಲುಕು ಹಾಕುತ್ತಿರಬೇಕಾದರೆ ಸುರೇಶನಿಗೆ ಒಂದು ಯೋಚನೆ ಮಿಂಚಿನಂತೆ ಹೊಳೆಯಿತು. ಗುರುರಾಜ ಕವಿ ನರ್ತಕಿಯನ್ನು ನದಿಗೆ ಹೋಲಿಸುತ್ತಿದ್ದಾನೋ ನದಿಯನ್ನು ನರ್ತಕಿಗೆ ಹೋಲಿಸುತ್ತಿದ್ದಾನೋ! ದ್ವಿಸಂಧಾನ ಕಾವ್ಯ ಅಂದಮೇಲೆ ಇವನು ಇಲ್ಲೇ ಏನೋ ಕರಾಮತ್ತು ಮಾಡಿದ್ದಾನೆ! ಆದರೆ ಯಾವ ನದಿ ಇದು. ಅಥವಾ ಈ ನರ್ತಕಿಯ ಹೆಸರೇನು?

''ಅಲ್ವೋ ರಾಜಪ್ಪ. ಇವಳು ನರ್ತಕಿ ಅನ್ನುವುದೇನೋ ಸರಿ. ಆದರೆ ಯಾವಳಯ್ಯಾ ಇವಳು? ಇವಳ ಹೆಸರೇನು? ಇವಳೇನು ರಂಭೆಯೋ? ಊರ್ವಶಿಯೋ? ಅಥವಾ ನರಮನುಷ್ಯರಿಗೇ ಹುಟ್ಟಿದವಳೋ? ಯಾವುದೂ ಇಲ್ವಲ್ಲಯ್ಯ?'' ಎಂದು ಮತ್ತೆ ರಾಜಪ್ಪನೊಡನೆ ಸುರೇಶ ಮಾತಿಗಾರಂಭಿಸಿದ.

''ಏನಯ್ಯ? ಭಾಳ ಸೀರಿಯಸ್ಸಾಗಿ ಓದುತ್ತ ಇರೋಹಾಗಿದೆ. ನೀನದನ್ನು ರಿಪೇರಿ ಮಾಡಿ ಕೊಟ್ಟರೆ ನಿಂಗೂ ಪರ್ಸೆಂಟೇಜ್ ಕೊಡ್ತೀನಯ್ಯ. ನನ್ನದು ಹಾಸ್ಟೆಲ್ ಬಿಲ್ಲು ನೀನು ಕಟ್ಟಿದ್ದು ಋಣ ಇನ್ನೂ ನನ್ನಮೇಲಿದೆಯಲ್ಲ''

''ನಿನ್ನ ಸಾಲ ವಸೂಲಿ ಮಾಡ್ಕೊಳ್ಳೋದಿರಲಿ. ಇವಳ ಹೆಸರೇನು ಹೇಳೋ ಅಂದರೆ ಎಂಥದೋ ಪುರಾಣ ತೆಗೀತಿದ್ದೀಯ''ಎಂದು ಸುರೇಶ ರಾಜಪ್ಪನ ಹುಡುಗಾಟಿಕೆಯ ಬಗ್ಗೆ ಅಸಮಾಧಾನದಿಂದ ಗೊಣಗಿದ.

''ಯಾರಿಗೆ ಗೊತ್ತೋ ಅವಳ ಹೆಸರು. ಜೈನರ ಕತೆಯಾಗಿರೋದರಿಂದ ಅವಳ ಹೆಸರು ನೀಲಾಂಜನೆಯೋ ರತ್ನಪ್ರಭೆಯೋ ಇರಬಹುದು. ಸ್ವಲ್ಪ ಸರಿಯಾಗಿ ನೋಡು. ಆ ಕಡತದಲ್ಲಿ ಕೊಟ್ಟಿಲ್ಲವಾ? ನನಗೆ ಓದಿದ ಜ್ಞಾಪಕ ಇಲ್ಲ. ಅಷ್ಟಕ್ಕೂ ಅವಳ ಹೆಸರು ಕಟ್ಟಿಕೊಂಡು ನಿನಗೇನು ಆಗಬೇಕಾಗಿದೆ. ಯಾರೋ ಎಕ್ಸ್ ಅಂತ ಇಟ್ಟುಕೋ. ಅದೇನು ನಿನಗೆ ಅಷ್ಟೊಂದು ಮುಖ್ಯಾನಾ?'' ಎಂದು ರಾಜಪ್ಪ ಉತ್ತರಿಸಿದ. ಅವನಿಗೆ ಅದರ

ಬಗ್ಗೆ ಏನೂ ಅಷ್ಟೊಂದು ಆಸ್ಥೆ ಇದ್ದಂತಿರಲಿಲ್ಲ.

ಅದೇಕೋ ಸುರೇಶನಿಗೆ ಅವಳ ಹೆಸರು ತಿಳಿಯುವುದು ಮುಖ್ಯ ಎನ್ನಿಸಿತು. ಇಡೀ ಕಾವ್ಯ ಸರಸರ ತಿರುವಿಹಾಕಿದ. ಎಲ್ಲೂ ಯಾವ ಮೂಲೆಯಲ್ಲೂ ಆ ನರ್ತಕಿಯ ನಾಮಧೇಯ ಮಾತ್ರ ಇಲ್ಲ. ಎಲ್ಲಕ್ಕಿಂತ ಕಾವ್ಯದ ಪ್ರಾರಂಭದಲ್ಲೇ ನರ್ತಕಿ ಪಾತ್ರ ಕಾವ್ಯದೊಳಗೆ ಪ್ರವೇಶ ಮಾಡುವಲ್ಲೂ ನರ್ತಕಿಯ ಹೆಸರಿಲ್ಲ. ಕಾವ್ಯ ಅಲ್ಲಲ್ಲಿ ಹುಳು ತಿಂದು ಮುಕ್ಕಾಗಿರುವಲ್ಲೇನಾದರೂ ಅವಳ ಹೆಸರು ಇತ್ತೋ! ಎಂದು ಅನುಮಾನಿಸಿ ಒಂದು ಪದ್ಯ ಹುಳು ತಿಂದು ತೂತು ಬಿದ್ದರುವಲ್ಲಿ ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷೆ ಮಾಡಿದ! ಸುರೇಶನ ಅನುಮಾನ ಜೋರಾಯ್ತು! ಆರು ಮಾತ್ರಾಗಣದ ಒಂದು ಪದ ಇರಬೇಕಾದಲ್ಲಿ ತೂತು ಬಿದ್ದಿದೆ! ಇಲ್ಲೇ ಈ ನರ್ತಕಿಯ ಅಥವಾ ಈ ನದಿಯ ಹೆಸರಿರಬೇಕಿತ್ತು! ಹಾಗಿದ್ದರೆ ಮುಂದೆಲ್ಲಾದರೂ ಇದೇತರ ತೂತು ಬಿದ್ದಿರುವ ಜಾಗ ಪರೀಕ್ಷಿಸೋಣ ಎಂದು ಮೂರು ಪುಟ ಮುಂದೆ ಸರಿಸಿ ಮತ್ತೊಂದೆಡೆ ತೂತು ಬಿದ್ದಿರುವ ಚರಣವನ್ನು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿದ. ಕರೆಕ್ಟ್! ಇಲ್ಲೂ ಹೆಸರಿರಬೇಕಾದ ಜಾಗದಲ್ಲೆ ಹಾಳೆ ತಿಂದು ಹೋಗಿದೆ. ಹಾಗಾದರೆ ಇದು ಹುಳು ತಿಂದು ಹೋಗಿದ್ದಲ್ಲ! ಹುಳು ತಿಂದಿದ್ದರೆ ಅದು ತಿಂದಷ್ಟು ಉದ್ದಕ್ಕೂ ಎಲ್ಲ ಹಾಳೆಗಳಲ್ಲೂ ಒಂದೇಕಡೆ ತೂತು ಬಿದ್ದಿರಬೇಕು! ಹುಳು ಎಲ್ಲಾದರೂ ಹಾಳೆ ಹಾಳೆಗಳೊಳಗೆ ನುಸುಳಿ ನಿರ್ದಿಷ್ಟ ಪದಪದಗಳನ್ನೇ ಹುಡುಕಿ ತಿನ್ನುತ್ತದೆಯೆ? ಅಷ್ಟೇ ಅಲ್ಲ ಈ ಕಡತಗಳೊಳಗೆ ಇರುವ ತೂತಿನ ಉದ್ದ ಅಗಲಗಳನ್ನು ನೋಡಿದರೆ ಆರು ಮಾತ್ರಾ ಗಣದ ಯಾವುದೋ ಒಂದೇ ಪದವನ್ನು ಗೊತ್ತಾಗದ ಹಾಗೆ ನಾಶ ಮಾಡಿದ್ದಾರೆ! ಏನೋ ರಹಸ್ಯ ಇದೆ ಇದರಲ್ಲಿ. ಈ ದ್ವಿಸಂಧಾನ ಕಾವ್ಯದ ಇನ್ನೊಂದು ಅರ್ಥ ಸ್ಫುರಿಸದಹಾಗೆ ಮಾಡುವುದೇ ಈ ಕಡತದ ಕೆಲವು ಪದಗಳನ್ನು ತೆಗೆದಿರುವ ಉದ್ದೇಶ ಅಲ್ಲವೆ? ಏನಿರಬಹುದು? ಯಾಕಿರಬಹುದು? ರಾಜಪ್ಪನ ಜೊತೆ ಸಮಾಲೋಚನೆ ಮಾಡಬೇಕೆಂದು ತಲೆ ಎತ್ತಿದವನು ಹಠಾತ್ತಾಗಿ ಜಾಗರೂಕನಾದ. ಬೆಳಗಿನಿಂದ ತನ್ನ ಬುದ್ಧಿಯೆಲ್ಲ ಕಂಗಾಲಾಗುವಂತೆ ನಡೆದಿರುವ ರಹಸ್ಯಮಯ ಘಟನೆಗಳೆಲ್ಲದರ ಕೀಲಿಕೈ ಇದರಲ್ಲೇ ಎಲ್ಲೋ ಇದೆ ಎನ್ನಿಸಿದ್ದರಿಂದ ಸುರೇಶ ಅದರ ಸಮಾಲೋಚನೆ ಮಾಡದೆ ಬಾಯಿ ಬಿಗಿ ಹಿಡಿದು ರೈಲಿನ ಕಿಟಕಿ ಹೊರಗೆ ಕವಿದಿದ್ದ ಮಂಜನ್ನು ನಿಟ್ಟಿಸುತ್ತ ತಾನು ಯೋಚಿಸುತ್ತಿರುವುದು ಸರಿಯೆ ಎಂದು ಸಿಂಹಾವಲೋಕನ ಮಾಡಿದ. ಅವನಿಗೆ ನಿಧಾನವಾಗಿ ರಾಜಪ್ಪನ ಕೆಲಸ, ಉದ್ದೇಶಗಳ ಬಗ್ಗೆಯೂ ಸೂಕ್ಷ್ಮ ಅನುಮಾನಗಳು ಶುರುವಾಯ್ತು.

ಸುರೇಶನಿಗೆ ತಾವು ಒಯ್ದು ಮಾರಿದ ಏಲಕ್ಕಿಯನ್ನು ತಾರಾಮಾರಿ ದುಡ್ಡು ಕೊಟ್ಟು ಕೊಂಡು ಜೀವನ್‌ಲಾಲ್ ಸೃಷ್ಟಿಸಿದ ರಹಸ್ಯಕ್ಕೂ ಈ ರಾಜಪ್ಪ ಗುರುರಾಜ ಕವಿಯ ಕಾವ್ಯ ಹೊತ್ತುಕೊಂಡು ಅಮ್ಮಾಡಲ ದೇವಸ್ಥಾನ ಹುಡುಕಿ ತಿರುಗುತ್ತಿರುವುದಕ್ಕೂ, ನಿಗೂಢ ಅಂತರಾರ್ಥಗಳನ್ನುಳ್ಳ ಕಾವ್ಯವಾಗಿ ಗುರುರಾಜ ಕವಿಯ ಕಾವ್ಯ

ಕಾಣುತ್ತಿರುವುದಕ್ಕೂ ಎಲ್ಲಿಲ್ಲಿಯ ಸಂಬಂಧ? ಇದೆಲ್ಲ ನನ್ನ ಅತಿಬುದ್ಧಿಯ ಅವಾಂತರವೇ ಹೊರತು ಮತ್ತೇನೂ ಅಲ್ಲ ಎಂದೆನ್ನಿಸಿತು. ಆದರೆ ಮತ್ತೆ ಯೋಚಿಸಿದಾಗ ಇವುಗಳೊಳಗೆ ಯಾವುದೋ ಒಂದು ಸಣ್ಣ ಸಂಬಂಧದ ಎಳೆ ಇದೆ ಎನ್ನುವ ಅನುಮಾನ!

ಏಕೆ ನನ್ನ ಮನಸ್ಸು ಎಲ್ಲವನ್ನೂ ರಹಸ್ಯ, ನಿಗೂಢ ಎಂದು ಅರ್ಥೈಸುತ್ತಿದೆ? ಬೆಳಗಿನಿಂದ ನಾನು ಎದುರಿಸಬೇಕಾಗಿ ಬಂದ ವಿಚಿತ್ರ ಸನ್ನಿವೇಶಗಳ ದೆಸೆಯಿಂದ ನನಗೊದಗಿರುವ ಭ್ರಾಂತಿಯೆ ಇದು? ರಾಜಪ್ಪನ ಬಗ್ಗೆ ಯಾಕೆ ನನಗೆ ಗುಮಾನಿ ಶುರುವಾಗಿದೆ? ಜುಗಾರಿ ಕ್ರಾಸಿನ ಯಾವುದೋ ಕಾಳದಂಧೆಗಳಿಗೆ ಸಂಬಂಧಪಟ್ಟಿದ್ದರಿಂದ ಇವನು ಇಲ್ಲಿ ತಿರುಗುತ್ತಿರಬಹುದೆ? ಓಡುವ ರೈಲಿಗೆ ನಾವಿದ್ದ ಗಾಡಿಗೇ ಇವನು ಹತ್ತಿಕೊಂಡಿದ್ದೇನೋ ಆಕಸ್ಮಿಕವಿರಬಹುದು. ಏಕೆಂದರೆ ನಾವು ರೈಲಿಗೆ ಹತ್ತಬೇಕೆಂದು ತೀರ್ಮಾನಿಸಿದ್ದೇ ಕೊನೇ ಗಳಿಗೆಯಲ್ಲಿ. ಅದನ್ನು ಮುಂದಾಗಿಯೇ ಅವನಿಗೆ ಯಾರೂ ತಿಳಿಸಿರಲು ಸಾಧ್ಯವಿಲ್ಲ. ಆದರೆ ಈ ಗುರುರಾಜ ಕವಿಯ ಕಾವ್ಯ ಒಂದೂವರೆ ಲಕ್ಷ ಕೊಟ್ಟು ಇವನ ಕೈಲಿ ಎಡಿಟ್ ಮಾಡಿಸುತ್ತಿರುವುದರಲ್ಲಿ ಸತ್ಯಾಂಶ ಎಷ್ಟು? ಈ ದ್ವಿ ಸಂಧಾನ ಕಾವ್ಯವನ್ನು ಯಾವ ಕ್ಲಾಸಿಗೂ ಪಠ್ಯ ಪುಸ್ತಕ ಮಾಡಲು ಕಷ್ಟವೇ ಸರಿ. ಅವನು ಈ ಬಗ್ಗೆ ಹೇಳುತ್ತಿರುವುದು ನಿಜವೋ ಸುಳ್ಳೋ? ರಾಜಪ್ಪ ನಮ್ಮ ಗಾಡಿಗೆ ಹತ್ತಿಕೊಂಡಿದ್ದು ನಿಜವಾಗಿಯ ಆಕಸ್ಮಿಕವೇ ಎಂದಾದರೆ ಮಿಕ್ಕ ಅವನ ಹೇಳಿಕೆಗಳನ್ನೆಲ್ಲ ನಾವು ನಂಬಬಹುದೆಂದು ಕಾಣುತ್ತೆ!

ಸುರೇಶ ಕೊಂಚ ಹೊತ್ತು ಕಿಟಕಿ ಕಡೆಗೆ ನೋಡುತ್ತ ಯೋಚಿಸಿದವನು ಮತ್ತೆ ಗುರುರಾಜ ಕವಿಯ ಕಾವ್ಯಾಭ್ಯಾಸಕ್ಕೆ ತೊಡಗಿದ.

ಈಗ ಮಸಲ ಈ ನರ್ತಕಿಯ ಹೆಸರು ಆರು ಮಾತ್ರಾಗಣದ ಏನಾದರೂ ಒಂದೆಂದು ಪರಿಭಾವಿಸಿ ಕಾವ್ಯ ಓದಿ ನೋಡೋಣ ಎಂದು ಎಷ್ಟು ಯೋಚಿಸಿದರೂ ಆರು ಮಾತ್ರಾ ಗಣದ ಒಂದು ಹೆಸರೂ ಸರಿಯಾದ್ದು ಜ್ಞಾಪಕಕ್ಕೆ ಬರುತ್ತಿಲ್ಲ.

''ರಾಜಪ್ಪ, ಈ ಕಾವ್ಯದಲ್ಲಿ ಎಲ್ಲೂ ಈ ನರ್ತಕಿಯ ಹೆಸರೇ ಪ್ರಸ್ತಾಪ ಆಗಿರೋ ಹಾಗೆ ಕಾಣೋಲ್ಲ ಕಣೋ. ಎಲ್ಲೋ ಹುಳುತಿಂದೋ ಹರಿದೋ ನಾಪತ್ತೆಯಾಗಿದೆ. ಅವಳ ಹೆಸರು ಏನಿರಬಹುದು ಒಂದು ಊಹೆ ಮಾಡಿ ಹೇಳು ನೋಡೋಣ'' ಸುರೇಶ ರಾಜಪ್ಪನಿಗೆ ಹೇಳಿದ.

''ಹೆಂಗಸರ ಹೆಸರಿಗೇನ್ರಿ ಬರಗಾಲ. ನನ್ನ ಹೆಸರೇ ಇಡಿ ಅದಕ್ಕೇನಂತೆ''ಎಂದು ವಿನೋದದ ದನಿಯಲ್ಲಿ ಗೌರಿ ಹೇಳಿದಳು.

''ಪಾಪ ಇನ್ನೂ ಹಾಲು ಕುಡಿಯೋ ಮಗು ನೋಡ್ರಿ. ಹೆಂಗಸರ ಹೆಸರು ಸಹ ಗೊತ್ತಿಲ್ಲ. ನನ್ನಂಥ ಬ್ರಹ್ಮಚಾರಿ ಇವನಿಗೆ ಹೇಳಿಕೊಡಬೇಕು.'' ಎಂದು ರಾಜಪ್ಪನೂ ನಗೆಯಾಡಿದ.

''ರಾಜಪ್ಪ, ಒಂದು ಹಳಗನ್ನಡ ಪದ್ಯದೊಳಗೆ ಹೆಸರು ತೂರಿಸೋದು ಅಂದರೆ


ಹುಡುಗಾಟ ಅಂದುಕೊಂಡಿದಿಯೇನು? ಇದು ಆರು ಮಾತ್ರಾಗಣದ ಹೆಸರೇ ಆಗಬೇಕು. ಅದಕ್ಕಾಗಿಯೇ ಕೇಳಿದ್ದು ನಾನು. ಅಂಥದು ಯಾವುದೂ ಥಕ್ಕನೆ ಜ್ಞಾಪಕಾನೆ ಬರ್ತಿಲ್ಲವಲ್ಲೋ''ಎಂದ ಸುರೇಶ

ಮೂವರೂ ಕುಳಿತು ಸಮಾಲೋಚನೆ ಮಾಡಿದರು. ರಾಜಪ್ಪ ಲೀಲಾವತಿ ಅನ್ನುವುದು ಆರು ಮಾತ್ರಾಗಣದ್ದು ಎಂದು ಸಲಹೆ ಮಾಡಿದ. ಮತ್ರಾಗಣವೇನೋ ಸರಿ. ಆದರೆ ಅದು ಪದ್ಯದಲ್ಲಿ ಹೊಂದುತ್ತದೆಯೆ ಎಂದು ಸುರೇಶ ಹುಳು ತಿಂದು ತೂತು ಬಿದ್ದಿದ್ದ ಜಾಗಕ್ಕೆ ಅದನ್ನು ಹೊಂದಿಸಿ ಪರೀಕ್ಷೆ ಮಾಡಿದ. ಒಂದುಕಡೆ ಅಂತ್ಯಪ್ರಾಸವಿದ್ದಲ್ಲಿ ಲೀಲಾವತಿಯ 'ತಿ' ಹೊಂದಿಕೆಯಾಗದೆ ಹೋಯ್ತು. ಹಾಗಿದ್ದರೆ ಲಕಾರಾಂತ್ಯವಿರುವ ಆರು ಮಾತ್ರಾಗಣದ ಹೆಸರು ಯಾವುದಾಗಬಹುದೆಂದು ತುಂಬ ಹೊತ್ತು ಅನೇಕ ಹೆಸರುಗಳನ್ನು ಇಬ್ಬರೂ ಸೂಚಿಸುವುದೂ ಸುರೇಶ ಅವನ್ನು ಛಂದಸ್ಸು ಮಾತ್ರ ಲಯ ಇತ್ಯಾದಿಗಳೆಲ್ಲ ಹೊಂದುತ್ತದೆಯೆ ಎಂದು ತೂತು ಬಿದ್ದೆಡೆಗಳಲ್ಲಿಟ್ಟು ಅಕ್ಕಪಕ್ಕದ ಪದಗಳೊಡನೆ ಪರೀಕ್ಷಿಸಿ ತಿರಸ್ಕರಿಸುವುದೂ ನಡೆಯಿತು. ಕೊನೆಗೆ ಬೇಜಾರಾಗಿ ಎಲ್ಲ ಸುಮ್ಮನಾಗಿ ಅದೂ ಇದೂ ಮಾತಾಡತೊಡಗಿದರು.

ಆದರೆ ಸುರೇಶ ಸುಮ್ಮನೆ ಕುಳಿತಿದ್ದರೂ ಗಾಢವಾಗಿ ಯೋಚಿಸುತ್ತಿದ್ದ. ಗೌರಿ ಮತ್ತು ರಾಜಪ್ಪ ತಮಗೆ ತೋಚಿದ ಪದಗಳನ್ನು ಸೂಚಿಸಿ ತಮಾಷೆ ಮಾಡುತ್ತಿರಬೇಕಾದರೆ ಆ ಪದ ಯಾವುದೆಂದು ಕಂಡು ಹಿಡಿಯುವುದು ಸಾಧ್ಯ ಎಂದು ಅಸ್ಪಷ್ಟವಾಗಿ ಸುರೇಶನಿಗೆ ಅನ್ನಿಸಿತ್ತು. ಅಂತ್ಯ ....ಲ ಎನ್ನುವುದರ ಕೆಳಗೆ ಒಂದುಸಾರಿ ಆ ಪದ ಬಂದಿತ್ತು. ಇನ್ನೊಮ್ಮೆ ಆದಿಪ್ರಾಸ ವಿಪುಲಪ್ರ—ಯತ್ನದೊಳ್ ಎನ್ನುವಲ್ಲಿ ಯತ್ನದ ಕೆಳಗೆ ಬಂದಿತ್ತು. ಹಾಗಿದ್ದರೆ ಆರು ಮಾತ್ರಾಗಣದ ಆ ಪದದ ಎರಡನೆಯ ಅಕ್ಷರ 'ತ್ನ' ಕೊನೆಯ ಅಕ್ಷರ 'ಲ'ಅಲ್ಲವೆ!

ಇಷ್ಟು ಪತ್ತೆಹಚ್ಚುವುದಕ್ಕೇ ಸುರೇಶ ತಲೆ ನೋಯುವಷ್ಟು ಯೋಚಿಸಬೇಕಾಯ್ತು. ಚೆಸ್ ಆಟಗಾರನಂತೆ ಆ ಕಡತ ನೋಡುತ್ತಾ ಎಲ್ಲವನ್ನೂ ಮರೆತು ಸುರೇಶ ಚಿಂತಿಸುತ್ತಿದ್ದ. ಇದ್ದಕ್ಕಿದ್ದಹಾಗೆ ಅವನಿಗೆ ತಾನು ಮಾಡುತ್ತಿದ್ದ ತಪ್ಪೊಂದು ಗಮನಕ್ಕೆ ಬಂತು. ಇದು ದ್ವಿಸಂಧಾನ ಕಾವ್ಯ ಎನ್ನುವುದನ್ನು ಮರೆತು ಹೆಂಗಸಿನ ಹೆಸರನ್ನೇ ಯೋಚಿಸುತ್ತಿದ್ದೇನೆ! ನರ್ತಕಿಯನ್ನು ಹೊಳೆಗೂ, ಹೊಳೆಯನ್ನು ನರ್ತಕಿಗೂ ಹೋಲಿಸಿದ್ದರೆ ಹೊಳೆಯ ಹೆಸರನ್ನು ಯಾಕೆ ಯೋಚಿಸಬಾರದು? ಈ ಗುರುರಾಜ ಕವಿ ಇಲ್ಲಿಯವನೇ ಆದರೆ ಇಲ್ಲಿರುವ ಯಾವುದೋ ಹೊಳೆಯ ಹೆಸರನ್ನೆ ಯೋಚಿಸಿರುತ್ತಾನೆ! ಯಾವುದಿರಬಹುದು? ಸೀತಾ ನದಿ, ದೋಣಿ ಹೊಳೆ, ಕಾಳೀ, ಶರಾವತಿ, ನೇತ್ರಾವತಿ! ಏನು ಎಲ್ಲಾ 'ದಿ' 'ತಿ' 'ಳಿ'ಇವೇ ಅಂತ್ಯಾಕ್ಷರ ಇದ್ದಾವಲ್ಲ! ಲ ಅಂತ್ಯಾಕ್ಷರ ಇರುವ ನದಿಯ ಹೆಸರು ಒಂದೂ ಹಾಗಾದರೆ ಇಲ್ಲವೆ? ಲ ಅಂತ್ಯಾಕ್ಷರ ಇರುವ ನದಿ ಎಂದರೆ ಕಪಿಲಾ ನದಿ ಒಂದು ನೆನಪಿಗೆ ಬರುತ್ತಿದೆಯಪ್ಪ. ನಂಜನಗೂಡಿನ ಹತ್ತಿರ ಹರಿಯೋ ಈ ನದಿಯನ್ನ ಜುಗಾರಿ ಕ್ರಾಸಿನ ಕಡೆಗೆ ಹೇಗೆ ಹರಿಯುವ ಹಾಗೆ ಮಾಡುವುದು? ಹೀಗೇ ಒಂದೊಂದಾಗಿ ಯೋಚಿಸುತ್ತಿರ

ಬೇಕಾದರೆ ತಟಕ್ಕನೆ ಇಡೀ ಪದ ಒಂದೇಸಾರಿ ಸುರೇಶನ ತಲೆಗೆ ಚಕ್ಕನೆ ಹೊಳೆಯಿತು. ಮುನ್ನೂರು ವರ್ಷದ ಹಿಂದೆ ದೋಣಿಹೊಳೆಗೆ ಈ ಹೆಸರೇ ಇರಲಿಲ್ಲ. ಆಗ ಅದಕ್ಕಿದ್ದ ಹೆಸರು ರತ್ನಮೂಲ! ಕರೆಕ್ಟ್, ರತ್ನಮೂಲ ಎಂದರೆ ಹೊಳೆಯ ಹೆಸರಾಯ್ತು! ರತ್ನಮಾಲ ಎಂದರೆ ನರ್ತಕಿಯ ಹೆಸರಾಯ್ತು! ದ್ವಿಸಂಧಾನ ಕಾವ್ಯಕ್ಕೆ ಸರಿ ಹೊಂದುವ ಪದ ಇದೇಸರಿ! ಸುರೇಶನ ಮುಖ ಹಠಾತ್ತನೆ ಪ್ರಸನ್ನವಾಗಿದ್ದನ್ನು ನೋಡಿ ಗೌರಿ "ಏನ್ರಿ? ಏನೋ ನಿಮ್ಮ ತಲೆಗೆ ಹೊಳೆದಹಾಗಿದೆ?" ಎಂದು ಕೇಳಿದಳು. "ಏನಿಲ್ಲ ಯೋಚನೆ ಮಾಡ್ತಿದ್ದೇನೆ"ಎಂದು ಚುಟುಕದಲ್ಲಿ ಉತ್ತರಿಸಿ ತನ್ನ ಸಂಶೋಧನೆಯ ಸರಿ ತಪ್ಪುಗಳನ್ನು ಒರೆ ಹಚ್ಚಿ ನೋಡಲು ಮತ್ತೆ ಸುರೇಶ ಕಡತದಲ್ಲೇ ಮುಳುಗಿದ. "ಆ ನರ್ತಕಿಯ ಹೆಸರು ಏನಾಗಿದ್ದರೇನು ಬಿಡೋ ಸುರೇಶ. ಹಳೆಗನ್ನಡ ಓದೋದೇ ಮರೆತು ಹೋಗಿದೆ ಅಂತಿದ್ದೋನು ಮಾತಾಡೋದನ್ನೆ ನಿಲ್ಲಿಸಿ ಓದಕ್ಕೆ ಶುರು ಮಾಡಿದೆಯಲ್ಲೋ" ಎಂದು ರಾಜಪ್ಪ ಸುರೇಶನಿಗೆ ಹೇಳಿದ್ದೂ ಸುರೇಶನ ಗಮನಕ್ಕೆ ಬರಲಿಲ್ಲ.



# ನರ್ತಕಿಯೋ? ನದಿಯೋ? - ೨೩



ಸುರೇಶ ತನಗೆ ಹೊಳೆದ ಹೆಸರನ್ನು ಖಾಲಿ ಬಿದ್ದ ಜಾಗದಲ್ಲಿಟ್ಟು ಓದಿ ಪರೀಕ್ಷಿಸಲು ಶುರು ಮಾಡಿದ ಕೆಲ ಹೊತ್ತಿನಲ್ಲೇ ಅದನ್ನು ಇನ್ನು ಪರೀಕ್ಷಿಸುವ ಅಗತ್ಯವೇ ಇಲ್ಲವೆಂದು ಅರಿವಾಯ್ತು. ಆ ಕಾವ್ಯದಲ್ಲಿ ಕೆಲವು ನಿಜವಾಗಿಯೂ ಹುಳು ತಿಂದು ತೂತು ಬಿದ್ದ ಜಾಗಗಳಿದ್ದುವಾದರೂ ಮುಕ್ಕಾಲು ಭಾಗಗಳಿಗಿಂತಲೂ ಹೆಚ್ಚುಕಡೆ ರತ್ನಮೂಲ ಪದ ಇರುವೆಡೆಗಳಲ್ಲೇ ಹರಿದು ತೂತು ಬಿದ್ದಿತ್ತು. ಹಾಗಿದ್ದರೆ ಯಾರು ಯಾವ ಕಾರಣದಿಂದಾಗಿ ಇದನ್ನು ಈ ರೀತಿ ಮಾಡಿದ್ದಾರೆ. ಸುರೇಶನಿಗೆ ಆಶ್ಚರ್ಯವಾಯ್ತು. ಆ ಕಾವ್ಯವನ್ನು ಮತ್ತೊಮ್ಮೆ ಸರಸರ ಓದತೊಡಗಿದ. ನಾನಾ ರೀತಿಯ ಪದಚ್ಛೇದಗಳೊಡನೆ ಪರೀಕ್ಷಿಸಿ ಈ ದ್ವಿಸಂಧಾನ ಕಾವ್ಯದ ಶ್ಲೇಷಾರ್ಥ ಧ್ವನ್ಯರ್ಥಗಳೆಲ್ಲವನ್ನೂ ಪತ್ತೆ ಮಾಡಲು ದೃಢ ನಿಶ್ಚಯ ಮಾಡಿಯೇ ಓದಲು ಪ್ರಾರಂಭಿಸಿದ್ದ.

ಕೊಂಚ ಓದುತ್ತಿದ್ದಂತೆಯೇ ಸುರೇಶನಿಗೆ ದಿಗಿಲಾಗಿ ಮೈ ಬೆವರಿತು. ಏಕೆಂದರೆ ಖಾಲಿ ಬಿದ್ದ ಜಾಗ ಸುರೇಶ ಭರ್ತಿ ಮಾಡಿಕೊಂಡು ಓದುತ್ತಿದ್ದಂತೆಯೇ ಸುರೇಶನಿಗೆ ಅದು ಕಾವ್ಯದ ಸೋಗಿನಲ್ಲಿ ಬರೆದ ರಹಸ್ಯ ದಾಖಲೆ ಎನ್ನುವಂತೆ ಕಾಣತೊಡಗಿತು. ದೋಣಿ ಹೊಳೆಯ ದಂಡೆಗುಂಟ ತಿರುಗಾಡಿ ಸಾಕಷ್ಟು ಪರಿಚಯ ಇದ್ದುದರಿಂದ ಗುರುರಾಜ ಕವಿ ನರ್ತಕಿಯನ್ನು ಅಥವಾ ದೋಣಿಹೊಳೆಯನ್ನು ಉಪಮಾನ ಉಪಮೇಯಗಳಲ್ಲಿ

ಬಣ್ಣಿಸುತ್ತ ಹೋದಂತೆ ಹೊಳೆಯ ಪ್ರತಿಯೊಂದು ತಿರುವು ಮುರುವನ್ನೂ, ಪ್ರತಿಯೊಂದು ಗುಂಡಿ ಜಲಪಾತ ಬಂಡೆಗಳನ್ನೂ ಕರಾರುವಾಕ್ಕಾಗಿ ನಿರ್ದೇಶಿಸುತ್ತ ಹೋಗಿರುವುದು ಸುರೇಶನ ಗಮನಕ್ಕೆ ಬಂತು! ಆದರೆ ದೋಣಿ ಹೊಳೆಯ ಪಾತ್ರವನ್ನು ಸಾದ್ಯಂತವಾಗಿ ನೋಡಿಲ್ಲದ ಸುರೇಶ ಆ ಕಾವ್ಯದ ವರ್ಣನೆಗಳನ್ನು ತನಗೆ ಗೊತ್ತಿರುವ ಮಟ್ಟಿಗೆ ಮಾತ್ರ ಹಿಂಬಾಲಿಸಿ ಅರ್ಥಮಾಡಿಕೊಳ್ಳಲು ಸಮರ್ಥನಾಗಿದ್ದ. ಸುರೇಶ ತಮಾಷೆ ಮಾಡಿದಂತೆ ಮದುವೆಯಾಗದ ರಾಜಪ್ಪನಿಗೆ ಗುರುರಾಜ ಕವಿಯ ವರ್ಣನೆಗಳನ್ನು ನರ್ತಕಿ ಎಂದು ತಿಳಿದೂ ಅರ್ಥ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ, ದೋಣಿಹೊಳೆಯ ಪರಿಚಯ ವಿಲ್ಲದ್ದರಿಂದ ಅದನ್ನು ಹೊಳೆ ಎಂದು ಪರಿಭಾವಿಸಿಯೂ ಅರ್ಥ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ. ಗುರುರಾಜ ಕವಿಯ ಕಾವ್ಯ ಒಂದು ಅರ್ಥದಲ್ಲಿ ಉತ್ತುಂಗ ರಾಜನಿಗೆ ರತ್ನಮಾಲ ನರ್ತಕಿಯು ತನ್ನ ಶಿಖೆಯಲ್ಲಿನ ಕೆಂಪು ಮಣಿಕ್ಯವನ್ನು ಕೊಟ್ಟ ಕಥೆಯಾದರೆ ಇನ್ನೊಂದು ಅರ್ಥದಲ್ಲಿ ರತ್ನಮೂಲ ಅಥವಾ ದೋಣಿಹೊಳೆಯ ಮೂಲದಲ್ಲೆಲ್ಲೋ ಸಹ್ಯಾದ್ರಿಯ ಶೃಂಗ ಶಿಖೆಯಲ್ಲಿ ಕೆಂಪು ರತ್ನ ದೊರೆಯುವ ಜಾಗ ನಿರ್ದೇಶಿಸುವ ನೀಲ ನಕ್ಷೆಯಾಗಿತ್ತು.

ತಾನು ದೋಣಿ ಹೊಳೆ ತಿಳಿದಿರುವಮಟ್ಟಿಗೆ ಈ ದ್ವಿಸಂಧಾನಕಾವ್ಯದ ಗುಪ್ತ ನಿರ್ದೇಶನಗಳು ಕರಾರುವಾಕ್ಕಾಗಿದ್ದರೆ ಮುಂದೂ ಕರಾರುವಾಕ್ಕಾಗೇ ಇರುತ್ತದಲ್ಲವೆ? ಹಾಗಿದ್ದರೆ ಶೇಷಪ್ಪ ಬೆಳಗ್ಗೆ ತೋರಿಸಿದ ಕೆಂಪು ರತ್ನ ದೋಣಿಹೊಳೆಯ ಮೂಲದಲ್ಲೆಲ್ಲೋ ಸಿಕ್ಕುವುದು ನಿಜ! ಮುನ್ನೂರು ವರ್ಷದ ಹಿಂದೂ ನಿಜ! ಈಗಲೂ ನಿಜ! ಎಲಾ ಬಡ್ಡೀಮಗನೆ! ಈ ಗುರುರಾಜ ಕವಿ ಯಾರೋ ಪುರಾಣ ಕಾಲದ ಜುಗಾರಿಕ್ರಾಸಿನ ಕಾಳ ವ್ಯವಹಾರದ ಖದೀಮನೇ ಇರಬೇಕು! ಆದರೆ ಇವನ ಬುದ್ಧಿಗೆ ಮೆಚ್ಚಬೇಕು. ಎರಡು ಅರ್ಥ ಇಟ್ಟು ಉತ್ತುಂಗ ರಾಜನ ಆಸ್ಥಾನಕ್ಕೆ ಬಂದ ನರ್ತಕಿಯ ಸ್ತನ ನಿತಂಬಗಳನ್ನು ವರ್ಣಿಸುತ್ತಲೇ ಗೂಢವಾಗಿ ದೋಣಿ ಹೊಳೆಯ ಕಗ್ಗಾಡಿನೊಳಗೆ ಕೆಂಪು ಕಲ್ಲು ಸಿಕ್ಕುವ ಕಳ್ಳದಾರಿಗಳ ಜಾಡು ತಿಳಿಸಿದ್ದಾನಲ್ಲ! ಇವನು ಯಾವನೋ ಪ್ರಳಯಾಂತಕ ಬ್ರಾಹ್ಮಣನೇ ಸರಿ! ಆದರೆ ಇದು ನಿಜವೆ? ಅಥವಾ ನನ್ನ ಭ್ರಾಂತಿಯೊ! ಇವತ್ತು ನನಗೂ ಗೌರಿಗೂ ಸಂಭವಿಸಿದ ಘಟನೆಗಳೆಲ್ಲ ಈ ಕಾವ್ಯದ ಅರ್ಥ ತಿಳಿಸುವುದಕ್ಕಾಗಿ ನಮಗೆ ಸಂಭವಿಸಿದ ಘಟನೆಗಳಂತೆ ಕಾಣುತ್ತದಲ್ಲ. ಆಕಸ್ಮಿಕಗಳು ಇಷ್ಟೊಂದು ಅರ್ಥಪೂರ್ಣವಾಗಿ ಎಲ್ಲಾದರೂ ಸಂಭವಿಸುತ್ತದೆಯೆ! ಏಕೆಂದರೆ ನಾನು ಇವತ್ತು ಇಲ್ಲಿ, ಈ ಸನ್ನಿವೇಶದಲ್ಲಿ ಈ ಕಾವ್ಯ ಓದದಿದ್ದರೆ ಇದಕ್ಕಿರುವ ಇನ್ನೊಂದು ಅರ್ಥ ಸುತರಾಂ ಹೊಳೆಯಲು ಸಾಧ್ಯವಿರಲಿಲ್ಲ. ಇದು ನಿಜವೋ ನನ್ನ ಭ್ರಾಂತಿಯೋ ಎಂದು ಯೋಚಿಸಿ ಯಾವ ಫಲವೂ ಇಲ್ಲ. ಗುರುರಾಜ ಕವಿಯ ವರ್ಣನೆ ಪ್ರಕಾರ ಜಾಡು ಹಿಡಿದು ಪರೀಕ್ಷಿಸಿಯೇ ನೋಡಬೇಕು. ಬೇರೆ ಮಾರ್ಗವೇ ಇಲ್ಲ! ಸುರೇಶ ಎಷ್ಟು ಗಾಢವಾಗಿ ಯೋಚಿಸುತ್ತಿದ್ದನೆಂದರೆ ಅವನಿಗೆ ರೈಲು, ರಾಜಪ್ಪ, ಗೌರಿ ಎಲ್ಲ ಮರೆತೇ ಹೋದರು.

ಒಮ್ಮೆ ವಿವರವಾಗಿ ಓದಿ ನೋಡೋಣ. ಕೆಂಪು ವಜ್ರ ಅದೆಲ್ಲಿ ಸಿಗುತ್ತೆ ಎಂದು ಹೇಳಿದ್ದರೆ ಜ್ಞಾಪಕ ಇಟ್ಟುಕೊಂಡು ಒಂದುಸಾರಿ ಧೈರ್ಯ ಮಾಡಿ ಆ ಕಾಡೊಳಗೆ ಹೊಕ್ಕು ನೋಡೇಬಿಡಬೇಕು ಎಂದು ಮನಸ್ಸಿನಲ್ಲೇ ತೀರ್ಮಾನಿಸಿ ಗಮನಕೊಟ್ಟು ಮುಂದಕ್ಕೆ ಓದತೊಡಗಿದ. ಗುರುರಾಜ ಕವಿ ಕಮರಿಗಳಂಥ ಕಣ್ಣುಗಳನ್ನು ಅಥವಾ ಕಣ್ಣುಗಳಂಥ ಕಮರಿಗಳನ್ನು, ನರ್ತಕಿಯ ನೀಳ ಕೇಶ ರಾಶಿಗಳನ್ನು ಅಥವಾ ಬಂಡೆಗಳಿಂದ ಧುಮ್ಮಿಕ್ಕುವ ಜಲಪಾತಗಳನ್ನು, ಅಲೆಗಳ ಮೇಲೆ ಪ್ರಜ್ವಲಿಸುವ ಸೂರ್ಯ ಕಿರಣಗಳನ್ನು ಅಥವಾ ಮಂದಹಾಸದೊಂದಿಗೆ ಮಿಂಚುವ ನರ್ತಕಿಯ ದಂತ ಪಂಗ್ತಿಗಳನ್ನು, ಜೊತೆಜೊತೆಯಾಗಿ ವಿವರಿಸುತ್ತಾ ಒಂದರೊಳಗೊಂದು ಬೆಸೆಯುತ್ತಾ ಸಾಗಿದ್ದ. ಓದುತ್ತ ಮುಂದುವರಿದಂತೆ ಸುರೇಶನಿಗೆ ವಿಧಿವೈಚಿತ್ರ್ಯವನ್ನು ಯೋಚಿಸಿದಷ್ಟೂ ಅಚ್ಚರಿಯಾಯ್ತು. ಏಕೆಂದರೆ ತಾನು ಕನ್ನಡ ಸಾಹಿತ್ಯಾಭ್ಯಾಸ ಮಾಡಿಲ್ಲದಿದ್ದರೆ, ಜುಗಾರಿಕ್ರಾಸಿನ ಗೋಜಲುಗಳೊಳಗೆ ಸಿಕ್ಕಿಕೊಳ್ಳದಿದ್ದರೆ, ದೋಣಿ ಹೊಳೆಯ ದಂಡೆಗುಂಟ ಗಾಳ ಹಿಡಿದು ಮಹಷೀರ್ ಮೀನು ಹಿಡಿಯಲು ಓಡಾಡಿಲ್ಲದಿದ್ದರೆ, ಇವುಗಳಲ್ಲಿ ಯಾವೊಂದು ಇಲ್ಲದಿದ್ದರೂ ಇವತ್ತು ಗುರುರಾಜ ಕವಿಯ ದ್ವಿಸಂಧಾನ ಕಾವ್ಯದ ಗೂಡಾರ್ಥಗಳು ಹೊಳೆಯುವುದು ಸಾಧ್ಯವೇ ಇರಲಿಲ್ಲ. ಅಥವಾ ಕಾವ್ಯಗಳ ಹಣೆಬರಹವೇ ಹೀಗೋ! ಓದಿದವರಿಗೆಲ್ಲ ಅವರವರ ಸಂಸ್ಕಾರ ಆಸೆ ಅಭೀಪ್ಸೆಗಳಿಗೆ ತಕ್ಕಂತೆ ಅರ್ಥ ಕೊಡುತ್ತಾ ಹೋಗುತ್ತೋ?

ಸುರೇಶ ಮುಂದಕ್ಕೆ ಓದುತ್ತಾ ಹೋದಂತೆ ಗುರುರಾಜ ಕವಿ ಉದ್ದೇಶಪೂರ್ವಕವಾಗಿಯೇ ವಿವರಗಳನ್ನು ಹೇಳಿದ್ದಾನೆ, ಬುಡುಬುಡುಕೆಯವರ ಭಾಷೆಯಂತೆ ಅವರವರಿಗೆ ಅವರವರ ರೀತಿಯಂತೆ ಅರ್ಥ ಬರುವ ಹಾಗೆ ಮಾತಾಡಿರುವುದಲ್ಲ ಎನ್ನುವುದು ಸ್ಪಷ್ಟವಾಯ್ತು. ಏಕೆಂದರೆ ಕೇವಲ ಓದಿ ಜ್ಞಾಪಕ ಇಟ್ಟುಕೊಂಡು ಆ ನರ್ತಕಿಯ ಶಿಖೆಯನ್ನಾಗಲಿ ಕೆಂಪು ರತ್ನವನ್ನಾಗಲೀ ಕಂಡು ಹಿಡಿಯಲು ಸಾಧ್ಯವೇ ಇರಲಿಲ್ಲ. ಗುರುರಾಜ ಕವಿ ನರ್ತಕಿಯ ಲಕ್ಷಾಂತರ ಕೂದಲಿನಂತೆ ಜಟಿಲ ಜಾಲವಾಗಿ ಹಬ್ಬಿದ್ದ ದೋಣಿ ಹೊಳೆಯ ಅಸಂಖ್ಯ ನದಿ ಉಪನದಿಗಳ ಜಾಲವನ್ನೂ ಅವುಗಳ ಕಗ್ಗಾಡಿನ ಅಗಮ್ಯ ಮೂಲಗಳನ್ನೂ ವರ್ಣಿಸಲಾರಂಭಿಸಿದೊಡನೆ ಸುರೇಶನ ಬುದ್ಧಿ ತತ್ತರಿಸಿ ಕಾಡಿನೊಳಗೆ ದಿಕ್ಕು ತಪ್ಪಿದಂತೆ ಪುಸ್ತಕದೊಳಗೇ ದಿಕ್ಕು ತಪ್ಪಿತು. ಒಂದಂತೂ ಸ್ಪಷ್ಟ. ಪುಸ್ತಕದ ಸಹಾಯವಿಲ್ಲದೆ ಕಾಡಿನೊಳಗೆ ಹೋಗುವುದಾಗಲಿ ರತ್ನಮೂಲವನ್ನು ಹುಡುಕುವುದಾಗಲಿ ಸುಳ್ಳು ಎನ್ನುವುದಂತೂ ಖಚಿತವಾಯ್ತು. ಇದು ಮೂಲತಃ ಕಾವ್ಯವೇ ಅಲ್ಲ. ಇದೊಂದು ನಿಧಿ ಸಂಶೋಧಕರ ನೀಲ ನಕ್ಷೆ. ಅಮ್ಮಾಡಲ ದೇವಸ್ಥಾನದ ಈ ಕವಿ ನಿಧಿ ಸಂಶೋಧಕನೂ ಇರಬೇಕು. ಅದಕ್ಕೇ ಕೈಪಿಡಿಯಂತೆ ಈ ಕಾವ್ಯ ಬರೆದಿದ್ದಾನೆ. ರತ್ನಮೂಲದ ಗುಟ್ಟು ಬರೆದಿಟ್ಟುಕೊಂಡಹಾಗೂ ಆಯ್ತು. ಎಲ್ಲರೂ ಇದನ್ನು ಕಾವ್ಯ ಎಂದು ಭಾವಿಸುವುದರಿಂದ ಗುಟ್ಟು ತಿಳಿದಿರುವ ಅಪಾಯದಿಂದ ಪಾರಾದಹಾಗೂ ಆಯ್ತು. ಸುರೇಶ ಗುರುರಾಜ ಕವಿಯ ಉಪಾಯ ಬುದ್ಧಿವಂತಿಕೆಗಳಿಗೆ ಒಳಗೊಳಗೇ

ಮೆಚ್ಚುಗೆಯಿಂದ ತಲೆದೂಗಿದ.

ಸುರೇಶ ಯೋಚಿಸುತ್ತ ಕುಳಿತು ಎಷ್ಟು ಹೊತ್ತಾಗಿತ್ತೋ ಏನೋ! ಗಂಟೆಗಳೇ ಕಳೆದಿರಬಹುದು, ಅಥವಾ ಹಲವಾರು ಸೆಕೆಂಡುಗಳೊಳಗೆ ಇಷ್ಟೆಲ್ಲ ಯೋಚಿಸಿರಬಹುದು! ಅವನು ತಲೆ ಎತ್ತಿ ನೋಡಿದಾಗ ರಾಜಪ್ಪ, ಗೌರಿ ಅವನ ಮಾತು ಕೇಳುತ್ತಿದ್ದಾಳೋ ಇಲ್ಲವೋ ಎನ್ನುವುದನ್ನೂ ಲಕ್ಷಿಸದೆ ಸತತವಾಗಿ ಮಾತಾಡುತ್ತಿದ್ದ. ಗೌರಿ ತಲೆ ಎತ್ತಿದ ಸುರೇಶನಕಡೆಗೊಮ್ಮೆ ನೋಡಿ ನಸುನಕ್ಕಳು. ಸುರೇಶನಿಗೆ ತನ್ನ ಯೋಚನೆ ಮತ್ತು ಸಂಶೋಧನೆಗಳನ್ನು ಗೌರಿಗೆ ಹೇಳಬೇಕೆಂದು ನಾಲಗೆ ಕಡಿಯುತ್ತಿದ್ದರೂ ಈ ವಿಷಯ ಯಾರಲ್ಲೂ ಪ್ರಸ್ತಾಪಿಸಲೇ ಕೂಡದೆಂದು ದೃಢನಿಶ್ಚಯ ಮಾಡಿದ. ಅದಕ್ಕೆ ಮುಖ್ಯ ಕಾರಣ ಈ ಗುಟ್ಟು ಯಾರಿಗೆ ತಿಳಿದರೂ ಅದು ಇನ್ನೊಬ್ಬರಿಗೆ ಗೊತ್ತಾದರೆ ಅವರಿಗೆ ಪ್ರಾಣಾಪಾಯ ಖಚಿತ ಎನ್ನಿಸಿತು.

ಆದರೆ ಇದು ಯಾರಿಗೋ ಗೊತ್ತಿದೆ! ಅದೂ ಈ ದ್ವಿಸಂಧಾನ ಕಾವ್ಯದಲ್ಲಿ ಉತ್ತುಂಗ ರಾಜನ ಕಥೆಯಲ್ಲದೆ ಇನ್ನೊಂದು ಕಥೆ ಇದೆ ಎನ್ನುವುದೇ ಯಾರಿಗೋ ಗೊತ್ತಿದೆ! ಆದ್ದರಿಂದಲೇ ಇನ್ನೊಬ್ಬರಿಗೆ ಅದು ಗೊತ್ತಾಗಿ ಜಾಡು ಸಿಕ್ಕಬಾರದೆಂದೇ ರತ್ನಮೂಲ ಎನ್ನುವ ಹೆಸರು ಕಾವ್ಯದ ಯಾವೆಡೆಯಲ್ಲೂ ಕಾಣದ ಹಾಗೆ ತೆಗೆದುಹಾಕಿದ್ದಾರೆ! ಆದರೆ ಆ ಜಾಗ ಹುಡುಕಲು ಈ ಕಾವ್ಯದ ಸಹಾಯ ಅಗತ್ಯ! ಅದಕ್ಕಾಗೇ ಗುರುರಾಜ ಕವಿಯ ಕಾವ್ಯ ನಾಶಮಾಡಿಲ್ಲ. ಅದರ ಇನ್ನೊಂದು ಅರ್ಥವನ್ನು ಮಾತ್ರ ನಾಶ ಮಾಡಲಾಗಿದೆ. ಆದ್ದರಿಂದಲೇ ಇದು ತಿಳಿದಿದೆ ಎನ್ನುವುದು ಯಾರಿಗಾದರೂ ತಿಳಿದರೆ ಮೊದಲು ತಿಳಿದವನು ಬುದ್ಧಿವಂತನಾದರೆ ಇನ್ನೊಬ್ಬನನ್ನು ಮುಗಿಸಬೇಕಾಗುತ್ತದೆ. ಹಾಗಾದರೆ ಜುಗಾರಿಕ್ರಾಸಿನ ಸರಣಿ ಕೊಲೆಗಳಿಗೆಲ್ಲ ಇದೇ ಕಾರಣವೆ! ಅನೇಕರು ನಾಪತ್ತೆಯಾದುದಕ್ಕೆ ಇದು ಕಾರಣವಿದ್ದರೂ ಇರಬಹುದಲ್ಲವೆ!

ಇದನ್ನೆಲ್ಲ ಯೋಚಿಸುತ್ತಿದ್ದಂತೆಯೇ ಸುರೇಶನಿಗೆ ಒಂದುಸಾರಿ ಮೈಯೆಲ್ಲ ನಡುಗುವಂತೆ ಭಯವಾಯ್ತು. ತನ್ನ ಕೈಯ್ಯಲ್ಲಿದ್ದ ಗುರುರಾಜ ಕವಿಯ ಕಾವ್ಯ ಅತ್ಯಂತ ಅಪಾಯಕಾರಿ ಸಿಡಿಮದ್ದಿನಂತೆ ತೋರಿತು. ಅದನ್ನು ರೈಲಿನ ಕಿಟಕಿಯಿಂದ ಆಚೆಗೆ ಎಸೆದುಬಿಡಲೆ ಎಂದು ಯೋಚಿಸಿದ. ಆದರೆ ಅಷ್ಟೇ ಪ್ರಬಲವಾಗಿ ಆ ಹಸ್ತಪ್ರತಿ ಅಮೂಲ್ಯವಾಗಿ ಅನರ್ಘ್ಯವಾಗಿ, ಶೇಷಪ್ಪ ತೋರಿಸಿದ ಕೆಂಪುವಜ್ರದಂತೆ ಕಂಗೊಳಿಸಿತು. ಜುಗಾರಿಕ್ರಾಸಿನ ಪ್ರಲೋಭನೆ ಎಲ್ಲರ ಹೃದಯದಲ್ಲೂ ಎಷ್ಟ ಆಳವಾಗಿರುತ್ತದೆಂದು ಅವನಿಗೇ ಅವನಬಗ್ಗೆ ಅಚ್ಚರಿಯಾಯ್ತು. ಅಯಸ್ಕಾಂತ ಶಿಲೆಯ ಶಿಖರಗಳು ವಿಮಾನಗಳನ್ನು ಸೆಳೆಯುವಂತೆ ಸೆಳೆಯುವ ಈ ಚಾಳಿ ಯಾರನ್ನು ಎಲ್ಲಿಗೆ ಒಯ್ಯುತ್ತೋ ಹೇಳುವುದು ಕಷ್ಟ. ಇದು ತಿಳಿದಮೇಲೆ ನಾವು ಮೂವರೇ ಯಾವರೀತಿ ವರ್ತಿಸುತ್ತೇವೋ ಹೇಳಲಾಗದೆಂದು ಸುರೇಶನ ಮನಸ್ಸಿನಲ್ಲಿ ಆಳವಾದ ಚಿಂತೆ ಕಳವಳಗಳುಂಟಾದುವು. ಆ ಗುಟ್ಟನ್ನು ಮನಸ್ಸಿನಲ್ಲೇ ಅದುಮಿಟ್ಟಹಾಗೂ ಸುರೇಶ ಏಕಾಂಗಿಯಾಗುತ್ತ ಹೋದ.

ತಾನು ಏಕಾದರೂ ಈ ಪುಸ್ತಕ ಓದಿದೆನೋ! ಯಾಕಾದರೂ ಅದರ ಇನ್ನೊಂದು ಅರ್ಥ ಸಂಶೋಧಿಸುವ ಚಪಲ ಹುಟ್ಟಿತೋ ಎಂದ ತನ್ನನ್ನು ತಾನೆ ಬಯ್ದುಕೊಂಡ.

ಸುರೇಶನ ಹೊಸ ಸಂಶೋಧನೆಗಳು ಅನೇಕ ಉತ್ತರವಿಲ್ಲದ ಪ್ರಶ್ನೆಗಳಿಗೆ ದಾರಿಮಾಡಿಕೊಟ್ಟವು. ಅವುಗಳಲ್ಲಿ ಪ್ರಬಲವಾಗಿ ಸುರೇಶನ ಮನಸ್ಸನ್ನು ಕಾಡಿದ್ದೆಂದರೆ ಈ ಕಡತ ಎಲ್ಲಾ ಬಿಟ್ಟು ರಾಜಪ್ಪನ ಕೈಗೆ ಹೇಗೆ ಬಂತು. ರಾಜಪ್ಪ ಇದರ ಬಗ್ಗೆ ಕೊಡುತ್ತಿರುವ ವಿವರಣೆಯೇನೋ ಸುಸಂಬದ್ಧವಾಗೇ ಕಾಣುತ್ತದೆ. ಇಲ್ಲಾ ಇದನ್ನು ಇವನಿಗೆ ಕೊಟ್ಟವರು ರಾಜಪ್ಪನಿಗೆ ಸುಳ್ಳು ಹೇಳಿರಬೇಕು. ಅಥವಾ ರಾಜಪ್ಪನೇ ಒಂದು ಸುಸಂಬದ್ಧವಾಗಿ ಕಾಣುವಂಥ ಕಗ್ಗ ಹೊಸೆದು ನಮಗೆ ಹೇಳುತ್ತಿರಬಹುದು. ಆದರೆ ಈ ಕಡತದಬಗ್ಗೆ ಏನು ಪ್ರಶ್ನೆ ಹಾಕಿ ವಿವರಣೆ ಕೇಳುವುದೂ ಅತ್ಯಂತ ಅಪಾಯಕಾರಿ. ಅಕಸ್ಮಾತ್ ರಾಜಪ್ಪ ಖದೀಮನೇ ಇದ್ದು ಈ ಕಾವ್ಯದ ರಹಸ್ಯದ ಬಗ್ಗೆ ಕೆಲವು ಊಹೆಗಳು ಗೊತ್ತಿದ್ದವನಾದರೂ ನಾವು ಇನ್ನಷ್ಟು ತೊಂದರೆಗಳನ್ನು ಮೈಮೇಲೆ ತಂದುಕೊಂಡ ಹಾಗೇ. ಕ್ಷೇಮವಾಗಿ ಮನೆಗೆ ಹೋಗೋಣೆಂದುಕೊಂಡು ರೈಲು ಹತ್ತಿ ಇಲ್ಲೂ ಗೋಳಿಗೆ ಸಿಕ್ಕಿಕೊಂಡೆವಲ್ಲ! ಈಗ ರಾಜಪ್ಪ ಸಾಚಾ ಮನುಷ್ಯನೇ ಎಂದು ಹೇಗೆ ಪತ್ತೆ ಮಾಡುವುದು?

ಜುಗಾರಿ ಕ್ರಾಸಿನ ಕಾಳದಂಧೆಗಳ ಖದೀಮರು ಯಾರಿಗೋ ಕೆಂಪುಕಲ್ಲು ಸಿಕ್ಕುವ ಜಾಗ ಸ್ಪಷ್ಟವಾಗಿ ಗೊತ್ತಿರಬೇಕು. ಇಲ್ಲದಿದ್ದರೆ ಈ ದಂಧೆ ಇಲ್ಲಿ ನಡೆಯಲು ಸಾಧ್ಯವೇ ಇರಲಿಲ್ಲ. ಅದೂ ನನಗೆ ಚೆಕ್ ಕೊಟ್ಟ ಜೀವನ್‌ಲಾಲ್ ಜೂಯಲರಿ ಮಾರ್ಟ್ ಇಟ್ಟಿರುವ ಮನುಷ್ಯ ಎಂದಮೇಲೆ ಇಲ್ಲಿಂದ ವಜ್ರದ ಕಳ್ಳಸಾಗಾಣಿಕೆ ನಡೆಯುತ್ತಿದೆ ಎಂದು ಶಂಕಿಸಬಹುದು. ಈ ಖದೀಮರು ಆ ಜಾಗದ ಗುಟ್ಟು ಗೊತ್ತಾಗದಹಾಗೆ ಸರ್ಪಕಾವಲಿನಲ್ಲಿ ಕಾಯುತ್ತ, ಸುಳಿವು ತಿಳಿದವರನ್ನು ಮುಗಿಸಿಬಿಡುವುದೋ ನಾಪತ್ತೆ ಮಾಡುವುದೋ ಮಾಡುತ್ತಿರಬಹುದು. ಈ ಕಾಳ ಜಗತ್ತಿಗೆ ಸೇರಿದವರೇ ಬೇರೆ ಯಾರೋ ಗುಟ್ಟು ತಿಳಿಯಲು ರಾಜಪ್ಪನಿಗೆ ಎಡಿಟ್ ಮಾಡಲು ಕೊಟ್ಟಿರಬಹುದು. ರಾಜಪ್ಪ ಈ ವಿಷಯ ಏನೂ ಗೊತ್ತಿಲ್ಲದೆ ಪೆದ್ದುಪೆದ್ದಾಗಿ ಇದನ್ನು ಹೊತ್ತುಕೊಂಡು ತಿರುಗುತ್ತಿದ್ದರೆ ಅವನಿಗೆ ಪ್ರಾಣಾಪಾಯವಂತೂ ಖಂಡಿತ. ಆದರೆ ಈ ಜೂಜಿನ ಜಗದ್ಗುರು ಅಷ್ಟೊಂದು ಮೂರ್ಖ, ಮುಗ್ಧ ಎಂದು ನಂಬಲು ಸಾಧ್ಯವಿಲ್ಲ. ಅದೇನೇ ಇರಲಿ ಇವನು ಮೂರ್ಖ, ಮುಗ್ಧ ಎಂದು ಸಾಬೀತಾದರೂ ಇವನ ಹತ್ತಿರ ಈ ಕಾವ್ಯದ ಗೂಢಾರ್ಥಗಳನ್ನು ಪ್ರಸ್ತಾಪಿಸುವಂತಿಲ್ಲ! ಇವೆಲ್ಲದರ ಇತ್ಯೋಪರಿಗಳನ್ನು ಸಾದ್ಯಂತವಾಗಿ ತಿಳಿದ ಹೊರತೂ ಗೌರಿಗೆ ಸಹ. ಈ ವಿಷಯ ಹೇಳುವಂತಿಲ್ಲ....

ಸುರೇಶ ಮೌನವಾಗಿ ಯೋಚಿಸಿ ತೀರ್ಮಾನ ತಗೊಂಡು ಕಡತವನ್ನು ನಿಧಾನವಾಗಿ ಮಡಚಿದ. ರಾಜಪ್ಪ''ಏನಯ್ಯ ಓದಾಯ್ತ? ಹೆಂಗಿದೆಯೋ ಕಾವ್ಯ?''ಎಂದು ಕೇಳಿದ. ಸುರೇಶ ಮಾತಾಡಲಿಲ್ಲ. ಪರವಾಗಿಲ್ಲ ಎನ್ನುವಂತೆ ತಲೆಯಾಡಿಸಿದ. ರಾಜಪ್ಪ ಸುರೇಶ ಹೊಗಳುತ್ತಿದ್ದಾನೆಂದು ತಿಳಿದು ''ಏನೋ ಸುರೇಶ! ನೀನು ಸತ್ಯಣಾಭ್ಯವಹಾರಿ ಕಣಯ್ಯ.

ಕೆಲಸಕ್ಕೆ ಬಾರದ ಕಗ್ಗಗಳನ್ನೆಲ್ಲ ಪರ್ವಾಗಿಲ್ಲ ಅಂತೀಯಲ್ಲ. ವಿಮರ್ಶಕ ಅಂದಮೇಲೆ ಸ್ವಲ್ಪ ಅರೋಚಿಯೂ ಆಗಿರಬೇಕು ಕಣೋ! ನಮ್ಮ ಇನ್‌ಸ್ಟಿಟ್ಯೂಟಿಗೆ ಬಾ, ಅಲ್ಲಿ ಅಟ್ಟ ನೆಲಮಾಳಿಗೆ ಎಲ್ಲ ಭರ್ತಿಯಾಗೋ ಅಷ್ಟು ಈ ರೀತಿ ಕಡತಗಳು ಬಿದ್ದಿರೋದು ತೋರಿಸುತ್ತೇನೆ''ಎಂದು ಹೇಳಿದ. ಸುರೇಶ ಕಡತ ರಾಜಪ್ಪನ ಕೈಗೆ ಕೊಡುತ್ತ ಕೈ ಜಾರಿ ಅದು ಕೆಳಗೆ ಬಿದ್ದು ಬಿಚ್ಚಿಕೊಂಡಿತು.

''ಅಯ್ಯಯ್ಯೋ, ಜೋಪಾನ ಮಹರಾಯ. ಅದು ಎಂಥ ಪಡಪೋಸಿ ಕಡತ ಆದರೂ ಸಧ್ಯಕ್ಕೆ ಅದರ ಬೆಲೆ ಒಂದುವರೆ ಲಕ್ಷ ಕಣೋ!'' ಎಂದು ರಾಜಪ್ಪ ಕೂಗಿದ.

''ರಾಜಪ್ಪ, ಆ ಕಡತದ ಬೆಲೆ ಒಂದುವರೆ ಲಕ್ಷ ಅಲ್ಲ ಕಣಯ್ಯ. ಒಂದೂವರೆ ಕೋಟಿ'' ಎಂದು ಸುರೇಶ ಹೇಳಿದ. ಸುರೇಶ ರಾಜಪ್ಪನ ಪ್ರತಿಕ್ರಿಯೆಯನ್ನು ನೋಡಲೆಂದೇ ಆಲೋಚನೆ ಮಾಡಿ ಹಾಗೆ ಹೇಳಿದ್ದ. ಹಾಗೆ ಹೇಳಿ ರಾಜಪ್ಪನ ಮುಖವನ್ನು ಸೂಕ್ಷ್ಮವಾಗಿ ಅವಲೋಕಿಸಿದ.

''ಕರೆಕ್ಟಾಗಿ ಹೇಳಿದೆ ಸುರೇಶ. ಬೆಲೆ ಕಟ್ಟೋದಕ್ಕೇನಯ್ಯ. ಯಾರೇನು ಕೊಡೋದಿಲ್ಲ. ಯಾರೇನು ತಗೊಳ್ಳೋದಿಲ್ಲ. ಒಂದೂವರೆ ಕೋಟಿ ಹೇಳಿದರೂ ನಡೆಯುತ್ತೆ. ಸಾವಿರ ಕೋಟಿ ಹೇಳಿದರೂ ನಡೆಯುತ್ತೆ. ಈಗ ಒಂದು ಕೆಲಸ ಮಾಡು. ನನಗೆ ಒಂದೂವರೆ ಲಕ್ಷ ಕೊಡು. ಇದನ್ನ ನೀನು ತಗೊಂಡು ಎಷ್ಟಕ್ಕಾದರೂ ಮಾರಿಕೋ. ಕೋಟಿಗಾದರೂ ಮಾರಿಕೋ! ಶತ ಕೋಟಿಗಾದರೂ ಮಾರಿಕೋ, ಮಿಕ್ಕಿದ್ದೆಲ್ಲಾ ನಿಂಗೇ. ನನಗೆ ಕೊಡೋದಕ್ಕೆ ಅಷ್ಟೊಂದು ದುಡ್ಡು ನಿನ್ನತ್ರ ಈಗ ಇಲ್ಲದಿದ್ದರೆ ನಿಧಾನಕ್ಕೆ ಕೊಡಯ್ಯ. ಈ ದರಿದ್ರ ಕಡತ ಹೊತ್ತುಕೊಂಡು ಕಾಡುಮೇಡು ಅಲೆಯೋದು ತಪ್ಪಿತಂತ ತಣ್ಣಗೆ ಮನೆಗೆ ಹೋಗ್ತೀನಿ. ಅಷ್ಟುಪಕಾರ ಮಾಡು ಮಾರಾಯ'' ಎಂದು ರಾಜಪ್ಪ ಸುರೇಶ ಬೆಲೆ ಕಟ್ಟಿದ್ದನ್ನು ಅಪಹಾಸ್ಯ ಮಾಡಲು ಹೇಳಿ ಸುರೇಶನನ್ನು ಸರಿಯಾಗಿ ಇಕ್ಕಟ್ಟಿಗೆ ಸಿಗಿಸಿದೆನೆಂದು ಅವನತ್ತ ತುಂಟತನದ ನಗೆ ಬೀರಿದ. ಸುರೇಶ ತನ್ನ ಮಾತನ್ನು ಕೇಳಿ ರಾಜಪ್ಪ ಅಪ್ರತಿಭನಾಗಬಹುದೆಂದು ಊಹಿಸಿದ್ದ. ಆದರೆ ರಾಜಪ್ಪನ ಪ್ರತಿಕ್ರಿಯೆ ಅವನು ನಿರೀಕ್ಷಿಸಿದಂತಿರಲಿಲ್ಲ.

ರಾಜಪ್ಪನ ಚೇಷ್ಟೆ ಮಾತು ಸುರೇಶನನ್ನೆ ಜೂಜಾಟಕ್ಕೆ ಎಳೆಯಿತು. ''ಆಯ್ತು ಬಿಡಯ್ಯ. ಒಂದೂವರೆ ಲಕ್ಷಕ್ಕೆ ಒಪ್ಪಿದೀಯ ತಾನೆ. ಸ್ವಲ್ಪ ಯೋಚನೆ ಮಾಡೋದಕ್ಕೆ ಟೈಮ್ ಕೊಡು.. ವ್ಯಾಪಾರ ಮಾಡೇ ಬಿಡುತ್ತೇನೆ. ಒಪ್ಪಂದ ಆದಮೇಲೆ ಮಾತ್ರ ನೀನು ತರಳೆ ತೆಗಿಯಬಾರದು! ಹೇಳಿದ್ದೇನೆ!'' ಎಂದು ಎಚ್ಚರಿಸಿದ.

''ಅಲ್ಲವೋ. ನಿನಗೇನಾದರೂ ಹುಚ್ಚುಗಿಚ್ಚು ಹಿಡಿದಿದಿಯೇನೋ? ಈ ಚಿಂದಿ ಕಡತಾನ ನಾನು ನಿನಗೆ ಒಂದೂವರೆ ಲಕ್ಷಕ್ಕೆ ಮಾರಿದರೆ ಬೇರೆಯವರು ಏನು ತಿಳುಕೋತಾರೆ! ನಿನ್ನ ಹೆಂಡತಿ ಇಲ್ಲೇ ಇದ್ದಾರಲ್ಲ ಅವರೇನು ತಿಳುಕೋತಾರೆ! ಈ ಕಡತಾನ ನಿನಗೆ ಬೇಕಾದರೆ ಫ್ರೀಯಾಗೇ ಬಹುಮಾನಾಂತ ಕೊಟ್ಟುಬಿಡ್ತಿದ್ದೆ ಕಣೋ,

ದುಡ್ಡಿನ ಆಸೆಗೆ ಎಡಿಟಿಂಗಿಗೆ ಒಪ್ಕೊಂಡಿರೋದರಿಂದ ಏನ್ಮಾಡಲಿ ಹೇಳು. ನನ್ನ ಎಡಿಟಿಂಗ್ ಮುಗಿದಮೇಲೆ ಖಂಡಿತ ಇದನ್ನು ನಿನಗೇ ಕೊಟ್ಟುಬಿಡ್ತೀನಿ. ನಾನು ನಿನಗೆ ತಮಾಷೆಗೆ ಹೇಳಿದೇ ಅಂದರೆ ಅದನ್ನೇ ನೀನು ಸೀರಿಯಸ್ಸಾಗಿ ತಗೊಂಡು ಆಡಿದ ಮಾತಿಗೆ ಕಟ್ಟುಬಿದ್ದು ಮುತ್ಠಾಳ ಕೆಲಸಗಳಿಗೆಲ್ಲ ಹೋಗಬೇಡ'' ಎಂದು ಸುರೇಶನ ನಿರ್ಧಾರದ ಮಾತುಗಳನ್ನು ಕೇಳಿ ಗಾಬರಿಬಿದ್ದ ರಾಜಪ್ಪ ಹೇಳಿದ.

''ಲೋ ರಾಜಪ್ಪ, ನಾನಿನ್ನೂ ನಿನ್ನ ಕಡತ ಕೊಂಡುಕೊಳ್ಳೋದಕ್ಕೆ ನಿರ್ಧಾರ ಮಾಡಿಲ್ಲ ತಡಿಯೋ! ಯಾಕೆ ಹಾಗೆ ಒಂದು ಕಣ್ಣಲ್ಲಿ ಅಳುತ್ತೀಯ. ನಾನೇ ಆಗಲಿ ನೀನೇ ಆಗಲಿ ಯಾರ ಬುದ್ಧಿವಾದಾನೂ ಕೇಳೋರಲ್ಲ ಅನ್ನೋದು ನಮ್ಮಿಬ್ಬರಿಗೂ ಗೊತ್ತಿದೆ. ಹಂಗಿದ್ದಮೇಲೂ ಯಾಕೆ ಕಂಠ ಶೋಷಣೆ ಮಾಡಿಕೋತೀಯ? ನೀನು ಎಡಿಟ್ ಮಾಡಿ ಅದರ ಅನೇಕ ಆವೃತ್ತಿಗಳು ಪಬ್ಲಿಷ್ ಆದಮೇಲೆ ಆ ಕಡತಕ್ಕೆ ಏನು ಬೆಲೆ ಇರುತ್ತೆ ಹೇಳು. ನಾನು ಕೊಂಡುಕೊಳ್ಳೋದಾದರೆ ನೀನು ಎಡಿಟಿಂಗ್ ಗಿಡಿಟಿಂಗ್ ಎಲ್ಲ ಬಿಲ್‌ಕುಲ್ ನಿಲ್ಲಿಸಿಬಿಡಬೇಕು. ಗುರುರಾಜ ಕವಿಯ ಕಾವ್ಯ ಪ್ರಂಚದಮೇಲೆ ಅದೊಂದೇ ಇರೋದು ಅಂತಾದರೆ ಮಾತ್ರ ನಾನು ಕೊಂಡುಕೊಳ್ಳೋದು ತಿಳುಕೋ. ಬೇರೆ ಪ್ರತಿ ಎಲ್ಲಿದ್ದರೂ ಅದನ್ನು ಹುಡುಕಿ ನಾಶಮಾಡೋದು ನಿನ್ನ ಜವಾಬ್ದಾರಿ''

''ನೀನು ಮದುವೆಯಾದರೂ ಏನೂ ರಿಪೇರಿ ಆದಹಾಗೆ ಕಾಣೋಲ್ಲ ಕಣೋ. ಮದುವೆಯಾದಮೇಲೆ ಗಂಡಸರು ಸರಿಹೋಗ್ತಾರೆ ಅನ್ನೋದು ಸುಳ್ಳು ಬಿಡು. ಒಂದು ಸಾರಿ ನಮ್ಮಪ್ಪನ ಹತ್ರ ನಿನ್ನ ಕರಕೊಂಡು ಹೋಗಿ ತೋರಿಸೋದು ಒಳ್ಳೇದು. ಯಾವಾಗ ನೋಡಿದರೂ ಮದುವೆ ಮಾಡಿಕೋ ಎಂದು ಹೇಳ್ತಿರ್ತಾರೆ''



# ಪಿಸುಗುಟ್ಟಿದ ಕಾಳರಾತ್ರಿ - ೨೪



ಕುಮರಿ ಸ್ಟೇಷನ್ನಿನಲ್ಲಿ ಸುರೇಶ ಇಳಿದು ಹೋಟೆಲಿನ ಹುಡುಗನಿಗೆ ರೈಲುಗಾಡಿಗೆ ತಟ್ಟೆ ಇಡ್ಲಿ, ಕಾಫಿ ಕೊಟ್ಟುಬರಲು ಹೇಳಿದಾಗ ಅವನ ಮನಸ್ಸು ಅಸ್ತವ್ಯಸ್ತಗೊಂಡಂತೆ ತೊಳಲಾಡುತ್ತಿತ್ತು. ರೈಲುಗಾಡಿಯಲ್ಲಿ ಸಂಭವಿಸುತ್ತಿರುವ ಘಟನೆಗಳೂ ಕೂಡ ರಹಸ್ಯಮಯವಾಗಿ ಬೆಳಗಿನಿಂದ ನಡೆದ ಘಟನೆಗಳ ಹಾದಿಯಲ್ಲೇ ಇರುವಂತೆ ತೋರತೊಡಗಿತ್ತು. ಗುರುರಾಜ ಕವಿಯ ದ್ವಿಸಂಧಾನ ಕಾವ್ಯದ ಅರ್ಥ ಪತ್ತೆ ಹಚ್ಚಿದಮೇಲೆ ಬೆಳಗಿನಿಂದ ನಡೆದ ಘಟನೆಗಳ ಅರ್ಥ ಹೊಳೆದಂತಾಗಿ ಮನಸ್ಸು ಕೊಂಚ ತಿಳಿಯಾದಂತೆನ್ನಿಸಿದರೂ ರಾಜಪ್ಪನ ಕೈಲಿದ್ದ ಕಡತ ಒಂದೂವರೆ ಲಕ್ಷಕ್ಕೆ ಕೊಳ್ಳೋಣವೆ ಎಂದು ಗೌರಿಯನ್ನು ಕೇಳಿದಕೂಡಲೆ ಗೌರಿ ಸುರೇಶನಿಗಿಂತ ಜೋರಾಗಿ ದುಂಬಾಲುಬಿದ್ದು ತನ್ನ ಕೈಯ್ಯ ಹಣವನ್ನು ರಾಜಪ್ಪನಿಗೆ ಕೊಟ್ಟು ಅವನ ಕಡತ ತಗೊಂಡು ಪ್ಲಾಸ್ಟಿಕ್ ಪ್ಯಾಕೆಟ್ಟಿನೊಳಗೆ ಹಾಕಿಕೊಂಡಿದ್ದು ಸುರೇಶನಿಗೆ ಶಾಕ್ ಆದಹಾಗೆ ಆಯ್ತು. ದುಡ್ಡನ್ನು ಧಾಳಾಧೂಳಿ ಮಾಡುವುದರಲ್ಲಿ, ಹುಚ್ಚು ಕಲ್ಪನೆಗಳ ಬೆನ್ನುಹತ್ತಿ ದುಡ್ಡು ಹುಡಿಮಾಡು ವುದರಲ್ಲಿ ತನಗಿಂತ ಯಾವ ರೀತಿಯಲ್ಲೂ ಅವಳು ಕಡಮೆಯಲ್ಲವೆಂದು ಚೆನ್ನಾಗಿ ಗೊತ್ತಿದ್ದರೂ ರಾಜಪ್ಪ ಅವಾಕ್ಕಾಗುವಂತೆ ದುಡ್ಡನ್ನು ಅವನ ಕೈಗಿತ್ತು ಅವನ ಚೀಲದೊಳಗಿಂದ ಕಡತ ತೆಗೆದು ಅನಾಮತ್ ಪ್ಯಾಕೆಟ್ಟಿಗೆ ಹಾಕಿಕೊಳ್ಳುತ್ತಾಳೆಂದು ಸುರೇಶ

ಭಾವಿಸಿರಲಿಲ್ಲ. ರಾಜಪ್ಪನಂತೂ ಇವರಿಬ್ಬರೂ ಮೊದಲೇ ಮಾತಾಡಿಕೊಂಡು ಪೂರ್ವಯೋಜಿತ ನಾಟಕ ಆಡಿದರೋ ಏನೋ ಎಂದು ಅನುಮಾನಕ್ಕೆ ಸಿಕ್ಕಿಹಾಕಿಕೊಂಡ. ರಾಜಪ್ಪ ಗೌರಿಗೆ ಖಂಡಿತ ಇದು ಹುಚ್ಚಾಟ, ಹೀಗೆ ಮಾಡಬೇಡಿ ಎಂದು ಎಷ್ಟು ಹೇಳಿದರೂ ಗೌರಿ ಅವನ ಮಾತನ್ನು ಸರಿಯಾಗಿ ಕಿವಿಗೂ ಹಾಕಿಕೊಳ್ಳದೆ "ದುಡ್ಡು ಸರಿಯಾಗಿದೆಯ ಎಣಿಸಿಕೊಳ್ರಿ. ನಮ್ಮ ಹಣ ಹಾಳುಮಾಡಿದೆವಲ್ಲ ಎಂದು ನಾವೇ ಯೋಚಿಸುತ್ತಿಲ್ಲ! ಇನ್ನು ನಿಮಗ್ಯಾಕ್ರಿ ಚಿಂತೆ" ಎಂದು ಉಪೇಕ್ಷೆಯಿಂದ ಹೇಳಿದವಳೇ, ಪ್ಲಾಸ್ಟಿಕ್ ಪ್ಯಾಕೆಟ್ಟನ್ನು ತುರಿಯೋಮಣೆ ಪಕ್ಕ ಇಟ್ಟು ನಿದ್ದೆ ಮಾಡಲು ಶುರು ಮಾಡಿದಳು. ರಾಜಪ್ಪ ಸುರೇಶನ ಕಡೆಗೆ ತಿರುಗಿ "ಸುರೇಶ ನೀನು ಹೇಳಿದ್ದು ಕರೆಕ್ಟ್ ಕಣಯ್ಯ. ನಿನ್ನ ಹುಚ್ಚಾಟಗಳನ್ನೆಲ್ಲ ನೋಡೇ ಮೆಚ್ಚಿ ಮದುವೆಯಾಗಿರೋದು ಅಂತ ನೀನು ಹೇಳಿದ್ದು ನಿಜ. ಇಷ್ಟೊಂದು ಅನುರೂಪವಾದ ಜೋಡಿಗೆ ಬುದ್ಧಿವಾದ ಹೇಳೋದು ಪ್ರಯೋಜನವಿಲ್ಲ ಬಿಡು. ಆದರೆ ಮಾತ್ರ ಈ ದುಡ್ಡು ಎಷ್ಟುದಿನ ನನ್ನಕೈಲಿ ಇರುತ್ತೆ ಅನ್ನೋದು ನಿಂಗೊತ್ತಲ್ಲ! ಮನಸ್ಸು ಬದಲಾಯಿಸಿ ವಾಪಸ್ ತಗೊಳ್ಳೋದಿದ್ದರೆ ನಿನಗೆ ಅಂಬಳದವರೆಗೂ ಟೈಮ್ ಕೊಟ್ಟಿದ್ದೀನಿ ನೋಡು" ಎಂದು ಎಚ್ಚರಿಸುವವನಂತೆ ಹೇಳಿದ. "ಎಣಿಸಿ ನೋಡಿಕೊಳ್ಳಯ್ಯ ಸರಿಯಾಗಿದೆಯ ಅಂತ, ವಾಪಸ್ ಕೇಳಿದಾಗ ಕಡಮೆ ಇದ್ದರೆ ಏನ್ಮಾಡ್ತೀಯ?" ಎಂದು ಅವನ ಎಚ್ಚರಿಕೆಯನ್ನು ನಿರ್ಲಕ್ಷಿಸಿ ಸುರೇಶ ಹಾಸ್ಯ ಮಾಡಿದ. "ಇರಲಿ ಬಿಡೋ! ಎಂತಿದ್ದರೂ ಜಾಕ್‌ಪಾಟ್ ಹೊಡೆದಹಾಗೆ ಹಡಬಿಟ್ಟಿ ಸಿಕ್ಕಿರೋ ದುಡ್ಡಲ್ಲವ! ನೂರೋ ಇನ್ನೂರೋ ಸಾವಿರಾನೋ ಹೆಚ್ಚು ಕಮ್ಮಿ ಇದ್ದರೆ ನಾನು ಕಳಕೊಳ್ಳೋದೇನು?" ಎಂದು ರಾಜಪ್ಪ ನಕ್ಕ. "ನಮಗೆ ಸಿಕ್ಕಿದ್ದೂ ಒಂದು ರೀತಿಯಲ್ಲಿ ಹಂಗೇ ಅಂತ ಹೇಳಿದರೂ ನಡೆಯುತ್ತೆ ತಗೋ" ಎಂದ ಅನಾಸಕ್ತನಂತೆ ಸುರೇಶ ಉದ್ಗರಿಸಿದ. ಅವನ ಮಾತು ಕೇಳಿ ಅಚ್ಚರಿಗೊಂಡ ರಾಜಪ್ಪ "ಏನಯ್ಯ ಹಿಂಗೇಳ್ತಿ? ಒಂದೂವರೆ ಲಕ್ಷ ಕೈಯ್ಯಲ್ಲಿ ಹಿಡುಕೊಂಡು ನೀವು ಓಡಾಡ್ತಿರೋದು ನೋಡಿಯೇ ನನಗೆ ಆಶ್ಚರ್ಯ ಆಯ್ತು. ಅದೇನು ದುಡಿದ ದುಡ್ಡೋ, ಅಥವಾ ಲಾಟ್ರಿಗೀಟ್ರೀಲಿ ಸಿಕ್ಕಿದ ದುಡ್ಡೋ ಮಾರಾಯ?" ಎಂದು ಕೇಳಿದ. ಸುರೇಶ ರಾಜಪ್ಪನ ಕಡೆ ತಿರುಗಿ "ಆ ಕತೇನೆಲ್ಲ ಈಗ ಹೇಳೋದಕ್ಕೆ ನನಗೆ ಪುರುಸೊತ್ತಿಲ್ಲ. ಅದು ದುಡಿದ ದುಡ್ಡೇ. ಕದ್ದುಕೊಂಡು ಬಂದ ದುಡ್ಡಲ್ಲವೋ! ಏಲಕ್ಕಿ ಮಾರಿ ತಂದಿದ್ದು. ಹೆದರ್ಕೋ ಬೇಡ ಇಟ್ಟುಕೋ. ಮಿಕ್ಕಿದ್ದೆಲ್ಲಾ ನಿಧಾನಕ್ಕೆ ಹೇಳ್ತೇನೆ" ಎಂದ. ಆ ಮೂರು ಜನರಿಗೂ ದುಡ್ಡಿನ ಬಗೆಗೆ ಇದ್ದ ಧೋರಣೆ ನೋಡಿದರೆ ಅವರು ಕೋಟ್ಯಾಧಿಪತಿಗಳಿರಬಹುದೆಂದು ಬೇರೆಯವರು ಅನುಮಾನಿಸುವಂತಿತ್ತು.

ಕುಮರಿ ಸ್ಟೇಷನ್ನಿನಲ್ಲಿ ಕಗ್ಗತ್ತಲು ಕವಿದಿತ್ತು. ವಾಸ್ತವವಾಗಿ ರೈಲಿನ ಕಿಟಕಿಗಳಿಂದ ಜಿನುಗಿದಂತೆ ಬೀಳುತ್ತಿದ್ದ ದೀಪ ಇಲ್ಲದಿದ್ದರೆ ಅಲ್ಲಿ ದಟ್ಟವಾಗಿ ಕವಿದಿರುವ ಮಂಜು ಸಹ ಯಾರ ಗಮನಕ್ಕೂ ಬರುತ್ತಿರಲಿಲ್ಲ. ಸ್ಟೇಷನ್ನಿನ ಕ್ಯಾಂಟಿನಿನಲ್ಲಿ ಹೊಗೆ ಕಾರುತ್ತಾ ಉರಿಯುತ್ತಿದ್ದ ಚಿಮಣಿಬುಡ್ಡಿ ನೀರಿನೊಳಗೆ ಕಾಣುವ ಪ್ರತಿಬಿಂಬದಂತೆ ಕವಿದ ಮಂಜಿನಲ್ಲಿ

ಮಬ್ಬುಮಬ್ಬಾಗಿ ಕಾಣುತ್ತಿತ್ತು. ಹೊಟ್ಟೆ ತಾಳ ಹೊಡೆಯುತ್ತಿದ್ದ ಪ್ರಯಾಣಿಕರೆಲ್ಲ ಕೇವಲ ಮಸಾಲೆ ವಡೆ ವಾಸನೆ ಹಿಡಿದೇ ದಾರಿ ಕಂಡುಕೊಂಡು ನುಗ್ಗತ್ತಿದ್ದರು. ಹೊಟೆಲಿನ ಭಟ್ಟ ನುಗ್ಗಾಡುವವರಿಗೆ "ತಾಳ್ರಿ, ತಾಳ್ರಿ, ಯಾಕೆ ಹಾಗೆ ನುಗ್ಗಾಡುತ್ತೀರ! ಇಂಜನ್ ಡ್ರೈವರ್ ಊಟಕ್ಕೆ ಇನ್ನೂ ಬಂದೇ ಇಲ್ಲ, ಏನು ರೈಲು ಅಷ್ಟರಲ್ಲಿ ಹೊರಟು ಹೋಗತ್ತ?" ಎಂದು ದಬಾಯಿಸುತ್ತಿದ್ದ.

ಸುರೇಶ ತನ್ನ ತಟ್ಟೆಯ ಎರಡು ಇಡ್ಲಿಗಳನ್ನು ಖಾಲಿ ಮಾಡಿ ತಟ್ಟೆ ವಾಪಸ್ ಇಟ್ಟು, ಕಾಫಿ ಲೋಟ ಹಿಡಿದು ದೂರ ಬಂದು, ಕಾಫಿ ಲೋಟದ ಬಿಸಿಯನ್ನು ಕೈ ಮೂಲಕ ಅನುಭವಿಸುತ್ತ ನಿಂತ. ಮಳೆ ಎಂದಿನಂತೆಯೆ ಧೂಳಿನಂತೆ ಬೀಳುತ್ತ ಇದ್ದುದು ಅವನ ಗಮನಕ್ಕೆ ಬಂದೂ ಬರದಂತಿತ್ತು. ಕತ್ತಲು ಎಷ್ಟು ಗಾಢವಾಗಿತ್ತೆಂದರೆ ಸಮೀಪದ ರೈಲುಗಾಡಿಗಳ ದೀಪಗಳು ಮತ್ತು ಕ್ಯಾಂಟಿನಿನ ಚಿಮಣಿ ಬುಡ್ಡಿಗಳಿಲ್ಲದಿದ್ದರೆ ಯಾವುದೋ ಆಕಾಶದ ಅಂತರಾಳದಲ್ಲಿ ನಿಂತಿರುವಂತೆ ಭಾಸವಾಗುತ್ತಿತ್ತು. ತಿಂಡಿ ತಿನ್ನುತ್ತ ಮಾತಾಡುತ್ತಿದ್ದ ಜನಗಳ ಮಾತುಗಳು ಶೂನ್ಯದಿಂದ ಉಗ್ಗುವ ಹನಿಗಳಂತೆ ಕೇಳುತ್ತಿದ್ದವು. ಸುರೇಶ ಅದೃಶ್ಯ ಮನುಷ್ಯನಂತೆ ನಿಂತುಕೊಂಡು ಆಕಾಶವಾಣಿಯ ನಾಟಕ ಕೇಳುವವನಂತೆ ಆ ಮುಖರಹಿತ ಮಾತುಗಳನ್ನು ಕೇಳುತ್ತಿದ್ದ. ಇದ್ದಕ್ಕಿದ್ದಂತೆ ಕತ್ತಲು ಅವನ ಮೈ ರೋಮವೆಲ್ಲ ನೆಟ್ಟಗಾಗುವಂತೆ ಅವನ ಕಿವಿಯಲ್ಲಿ ಪಿಸುಗುಟ್ಟಿತು.

"ಅದು ಸರಿ, ಆದರೆ ನಿನ್ನ ಚೂರಿ ಹಾಕಿ ಬಾಂತ ಹೇಳಿದೋರು ಯಾರು?"

"ಮತ್ತೇನ್ಮಾಡ್ತೀಯ ಬಾಸ್. ಏನ್ಮಾಡಿದರೂ ಬಾಯಿ ಬಿಡಲಿಲ್ಲವಲ್ಲ."

"ಆದರೆ ಅವನ ಮೈಮುಟ್ಟಿದ್ದು ಸರಿ ಅಲ್ಲ. ಅವನ ಮರ್ಜಿ ನೋಡಿದರೆ ಅವನದೂ ಒಂದು ಗ್ಯಾಂಗ್ ಇರಬೇಕು"

"ಅದಕ್ಕೇ ಮತ್ತೆ ಅವನಿಗೆ ಡಿನ್ನರ್ ಕೊಟ್ಟಿದ್ದು. ಏನು ತರಕೋತಾನೆ ಈ ಶೇಷಪ್ಪ ನೋಡೋಣ ತಗೋ"

"ನಮ್ಮ ಆದ್ಮಿ ಬಸ್ಸು ತಪ್ಪಿಸಿ ರೈಲು ಹಿಡಿದಿದ್ದು ನೋಡಿದರೆ ಆ ಸೂಳೇಮಗ ಏನೋ ಹೇಳ್ಕೊಟ್ಟಿರಬೇಕು"

"ಹೇಳ್ಕೊಡ್ಲಿ ಬಿಡು, ಈಗೇನಂತೆ! ಬೆಳಗಾಗೋದ್ರೊಳಗೆ ಕೇಸು ಖಲಾಸ್ ಆಗುತ್ತಲ್ಲ"

"ರೈಲು ನಿಧಾನ ಬಂತು. ಇಲ್ಲದಿದ್ದರೆ ನಾವು ಕುಮರಿಗೆ ಬರೋದ್ರೊಳಗೆ ಹಕ್ಕಿ ತಪ್ಪಿಸಿಕೊಂಡು ಹೊರಟುಹೋಗಿರೋದು"

ಸುರೇಶ ಬಾಯಲ್ಲಿದ್ದ ಬಿಸಿ ಕಾಫಿಯನ್ನು ನುಂಗದೆ ಮೈಯ್ಯೆಲ್ಲ ಕಿವಿಯಾಗಿ ಆಲಿಸಿದ. ಮಾತು ಎಲ್ಲಿಂದ ಬರುತ್ತಿದೆ ಎಂದು ತಿಳಿಯಲಿಲ್ಲ. ಯಾವುದೋ ಅಶರೀರ ಪಿಶಾಚಿಯೊಂದು ಕಿವಿಯಬಳಿ ಈ ದಿಗಿಲಿಕ್ಕಿಸುವ ಪಿಸುಮಾತುಗಳನ್ನು ಉಸುರುವಂತೆ ತೋರಿತು. ಯಾರಿರಬಹುದೆಂದು ಅನುಮಾನಿಸುತ್ತ ಏನಾದರೂ ಕಾಣಬಹುದೇನೋ

ಎಂದು ಸುತ್ತಮುತ್ತ ಗಾಢವಾಗಿದ್ದ ಕತ್ತಲನ್ನು ದಿಟ್ಟಿಸುತ್ತ ಬೆಚ್ಚನೆಯ ಕಾಫಿ ಲೋಟ ಕೈಯ್ಯಲ್ಲಿ ಒತ್ತಿಹಿಡಿದು ಸುಮ್ಮನೆ ನಿಂತ. ಸಂಭಾಷಣೆ ನಿಂತುಹೋಯ್ತು. ಬಹಶಃ ಮಾತಾಡುತ್ತಿದ್ದವರು ತಿಂಡಿ ತಿನ್ನತೊಡಗಿದರೋ ಏನೋ. ಅಥವಾ ಇದೆಲ್ಲ ಸುರೇಶನ ಸ್ವಕಪೋಲ ಕಲ್ಪಿತ ಭ್ರಾಂತಿಯೆ!

ಯಾರೋ ತಮ್ಮನ್ನು ಹಿಂಬಾಲಿಸಿದ್ದಾರೆ! ತಾವು ಬಸ್ಸು ತಪ್ಪಿಸಿ ರೈಲಿಗೆ ಹತ್ತಿದ್ದನ್ನು ಪತ್ತೆಮಾಡಿ ಕುಮರಿ ಸ್ಟೇಷನ್ನಿಗೆ ಬಂದಿದ್ದಾರೆ! ಸಧ್ಯ ಕತ್ತಲಿರುವುದರಿಂದ ನಾನು ಅವರ ಪಕ್ಕದಲ್ಲೇ ನಿಂತಿರುವುದು ಅವರಿಗೆ ಕಾಣುತ್ತಿಲ್ಲ. ಇಲ್ಲದಿದ್ದರೆ ನನ್ನ ಕಥೆ ಈಗ ಇಲ್ಲೇ ಮುಕ್ತಾಯವಾಗುತ್ತಿತ್ತೋ ಏನೋ. ಆದರೆ ಈ ಕತ್ತಲಿನ ದೆಸೆಯಿಂದ ಅವರು ಯಾರೆನ್ನುವುದೂ ನನಗೆ ಕಾಣುತ್ತಿಲ್ಲ! ಇವರು ಮಾತಾಡುತ್ತ ಶೇಷಪ್ಪನ ಹೆಸರು ಪ್ರಸ್ತಾಪ ಮಾಡಿರುವುದರಿಂದ ಇದು ಖಂಡಿತ ನಮ್ಮನ್ನು ಹಿಂಬಾಲಿಸುತ್ತಿರುವ ಗ್ಯಾಂಗೇ! ಈಗೇನು ಮಾಡುವುದು! ಸುರೇಶ ಹಠಾತ್ತಾಗಿ ಸೃಷ್ಟಿಯಾದ ಈ ಹೊಸ ಭಯದ ಬಗ್ಗೆ ಗಾಬರಿ ಕಳವಳಗಳಲ್ಲಿ ಯೋಚಿಸಿದ. ರೈಲಿನಲ್ಲಿ ಹೋದರೆ ಕ್ಷೇಮವಾಗಿ ನಿರ್ಯೋಚನೆಯಿಂದ ಅಂಬಳದವರೆಗೂ ಹೋಗಬಹುದೆಂಬ ಅವನ ಯೋಚನೆ ಸುಳ್ಳಾಗಿತ್ತು.

ಸುರೇಶ ಯೋಚಿಸುತ್ತಿರಬೇಕಾದರೆ ಯಾರೋ ಚಕ್ಕನೆ ಕಡ್ಡಿ ಗೀರಿದರು. ಬೆಂಕಿಕಡ್ಡಿ ಭುಗ್ಗನೆ ಹತ್ತಿಕೊಂಡಾಗ ಒಮ್ಮೆ ಅಲ್ಲಿ ನಿಂತಿದ್ದವರ ಮೇಲೆಲ್ಲ ಪ್ರಕಾಶ ಬಿತ್ತು. ಆದರೆ ನಿಂತಿದ್ದ ಅಷ್ಟೊಂದು ಜನದಲ್ಲಿ ಯಾರು ಮಾತಾಡಿದ್ದು? ಯಾರನ್ನು ಸಂಶಯಿಸುವುದು! ಕಡ್ಡಿ ಜಾಜ್ವಲ್ಯಮಾನವಾಗಿ ಹೊತ್ತಿ ಉರಿದ ಆ ಒಂದು ಕ್ಷಣದಲ್ಲಿ ಸುರೇಶನಿಗೆ ಆಚೀಚೆ ಅನೇಕರು ನಿಂತು ಕಾಫಿ ಕುಡಿಯತ್ತ, ತಿಂಡಿ ತಿನ್ನುತ್ತ ಇರುವುದು ಕಂಡಿತು. ಆದರೆ ಬೀಳುತ್ತಿದ್ದ ತುಂತುರು ಮಳೆಗೋ ಅಥವಾ ಚಳಿಗೋ ಎಲ್ಲ ಮುಸುಗು ಹಾಕಿಕೊಂಡಂತೆ ಕಂಬಳಿ ಶಾಲು ಟವಲ್ಲು ಇತ್ಯಾದಿಗಳನ್ನು ಮುಖ ಕಾಣದಹಾಗೆ ಸುತ್ತಿಕೊಂಡಿದ್ದರು. ಜೊತೆಗೆ ಕಡ್ಡಿ ಗೀರಿದವ ಕಡ್ಡಿ ನಂದಿಹೋಗದಂತೆ ಬೆಂಕಿಗೆ ಹಸ್ತ ಕೌಚಿ ಹಿಡಿದಿದ್ದರಿಂದ ಸುರೇಶನಿಗೆ ಅಲ್ಲಿದ್ದ ಮುಖರಹಿತ ಆಕೃತಿಗಳಲ್ಲದೆ ಬೇರೇನೂ ಕಾಣಲಿಲ್ಲ. ಕಡ್ಡಿಯ ಬೆಂಕಿ ಆರಿದನಂತರ ಬೀಡಿ ತುದಿಯ ಕೆಂಡ ಮಾತ್ರ ಹಾರಾಡುವ ಮಿಣುಕು ಹುಳುವಿನಂತೆ ಮೇಲೂ ಕೆಳಗೂ ಓಡಾಡುವುದು ಕತ್ತಲಲ್ಲಿ ಕಾಣುತ್ತಿತ್ತು.

ಶೇಷಪ್ಪ ಈ ಬಗ್ಗೆ ಗುಮಾನಿ ಮಾಡಿದ್ದು ಸರಿ. ಹಾಗಾದರೆ ಯಾರೋ ನಮ್ಮನ್ನು ಮುಗಿಸಲೆಂದೇ ಶೇಷಪ್ಪನ ಅಂಗಡಿ ಬಳಿ ಅಡ್ಡಾಡುತ್ತಿದ್ದಂ? ಶೇಷಪ್ಪನ ಹತ್ತಿರ ಏನು ಬಾಯಿ ಬಿಡಿಸಲು ಹೋಗಿದ್ದರು? ಕೆಂಪು ಕಲ್ಲಿನ ಕಾಳ ದಂಧೆ ಗುಟ್ಟು ಶೇಷಪ್ಪನಿಗೆ ಏನಾದರೂ ಗೊತ್ತಿರಬಹುದೆ? ಜುಗಾರಿಕ್ರಾಸಿನ ಕಾಳವಾಸ್ತವಗಳು ತನ್ನ ಕಲ್ಪನೆ ಯೋಚಿಸಿದ್ದನ್ನೆಲ್ಲ ಸತ್ಯವೆನ್ನುವಂತೆ ಮಾಡುತ್ತಿವೆಯಲ್ಲ! ಎಂದು ಸುರೇಶನಿಗೆ ಒಂದುಸಾರಿ ಕೊಂಚ ದಿಗಿಲಾಯ್ತು. ಆದರೆ ಅದರೊಡನೆ ಬೆಳಗಿನಿಂದ ನಡೆದ ಘಟನೆಗಳ ಬಗ್ಗೆ ತಾನು ಯೋಚಿಸುತ್ತಿರುವುದು ಸರಿ ಎಂದು ಆತ್ಮವಿಶ್ವಾಸವೂ ಮೂಡಿತು. ತಾನು

ಪತ್ತೆಮಾಡಿರುವ ಗುರುರಾಜ ಕವಿಯ ಕಾವ್ಯದ ಅರ್ಥ ಹಾಗಾದರೆ ಕರಾರುವಾಕ್ಕಾಗಿದೆ ಅಲ್ಲವೆ! ಇವರು ನನ್ನನ್ನು ಮುಗಿಸಲು ಬೆನ್ನುಹತ್ತಿದಷ್ಟೂ ದ್ವಿಸಂಧಾನ ಕಾವ್ಯದ ಮತ್ತೊಂದು ಅರ್ಥ ಮತ್ತೂ ಖಚಿತವಾಗುತ್ತ ಹೋಗುತ್ತೆ. ಏನೂ ಗೊತ್ತಿಲ್ಲದ ಮುಠ್ಠಾಳನಾಗಿದ್ದರೆ ನನ್ನ ಕತೆಯೇನು. ಈ ಖದೀಮರ ಹತ್ತಿರ ನಿಸ್ಸಹಾಯಕನಾಗಿ ಸಿಕ್ಕಿಕೊಳ್ಳುತ್ತಿದ್ದೆನಲ್ಲ! ಎಂದು ಯೋಚಿಸಿದ. ಈ ವ್ಯವಹಾರಗಳೊಂದಿಗೆ ಯಾವ ಸಂಬಂಧವೂ ಇಲ್ಲದ ನಾವು ಹೇಗೆ ಸಿಕ್ಕಿಕೊಂಡೆವೆಂದು ಯೋಚಿಸಿ ವಿಧಿ ವೈಚಿತ್ರ್ಯದ ಬಗ್ಗೆ ಅಚ್ಚರಿ ಪಟ್ಟ. ಇವರೇ ತಮ್ಮ ಕಳ್ಳಸಾಗಾಣಿಕೆಯ ಕೆಂಪು ರತ್ನಗಳನ್ನು ನಮ್ಮ ಚೀಲದೊಳಕ್ಕೆ ತುರುಕಿ, ಇವರೇ ಅದನ್ನು ತಾರಾಮಾರಿ ರೇಟಿಗೆ ಕೊಂಡು, ಇವರೇ ಎಲ್ಲಿ ತಮ್ಮ ಗುಟ್ಟು ರಟ್ಟಾಗುತ್ತೋ ಎಂದು ಭಯಬಿದ್ದು, ನಮ್ಮನ್ನು ಮುಗಿಸಲು ಬೆನ್ನುಹತ್ತಿ ತಿರುಗುತ್ತಿದ್ದಾರೆ. ಎಷ್ಟುಜನ ಯಾವಯಾವರೀತಿ ಈ ದಂಧೆಗೆ ಸಿಕ್ಕಿ ಅಹುತಿಯಾಗಿದ್ದಾರೋ! ಅವರಲ್ಲಿ ಎಷ್ಟು ಜನ ನಿಸ್ಸಹಾಯಕ ಮುಗ್ಧರೋ ಯಾರಿಗೆ ಗೊತ್ತು!

ಸುರೇಶ ಕತ್ತಲಲ್ಲಿ ಪ್ರಜ್ಞೆ ಮಾತ್ರವಾಗಿ ಯೋಚಿಸುತ್ತಾ ನಿಂತಿದ್ದ. ಬೆಳಗಿನಿಂದ ಅವನಿಗೆ ಇದಿರಾದ ನೂರಾರು ಸಮಸ್ಯೆಗಳ ಬಗ್ಗೆ ಯೋಚನೆ ಮಾಡಿ ಅವನಿಗೆ ತಲೆ ಚಿಟ್ಟು ಹಿಡಿದಿತ್ತು. ಆದರೆ ಮಾಡುವುದೇನು? ಈಗ ಬೆಳಗಾಗುವುದರೊಳಗೆ ಕೇಸ್ ಖಲಾಸ್ ಮಾಡುತ್ತೇವೆಂದು ಬೇರೆ ಮಾತಾಡಿಕೊಂಡಿದ್ದಾರೆ! ಅಂದರೆ ಬೆಳಕು ಬಿಡುವುದರೊಳಗೆ ಏನಾದರೊಂದು ಪ್ರತಿವ್ಯೂಹ ಯೋಚನೆ ಮಾಡಬೇಕು. ಏನು ಮಾಡಬಹುದು? ಅತ್ಯುತ್ತಮ ಉಪಾಯ ಎಂದರೆ ಕಣ್ಣು ಕಾಣದ ಈ ಕತ್ತಲಲ್ಲಿ ಮೆಲ್ಲಗೆ ರೈಲಿನಿಂದ ಇಳಿದು ಕಾಡಿನಲ್ಲಿ ನಾಪತ್ತೆಯಾಗುವುದು. ಆದರೆ ಸಾವಿರಾರು ಚದರ ಮೈಲು ದೂರದ ಈ ಕಗ್ಗಾಡಿನಲ್ಲಿ ಹೋಗುವುದೆಲ್ಲಿಗೆ. ಎಲ್ಲಕ್ಕಿಂತ ಗೌರಿ ಬೇರೆ ಜೊತೆಗಿದ್ದಾಳೆ. ಅವಳನ್ನು ಕರೆದುಕೊಂಡು ಈ ಅರಣ್ಯದಲ್ಲಿ ಎಲ್ಲಿ ಎಂದು ಅಡ್ಡಾಡುವುದು! ನೋಡೋಣ! ಮುಂದೆಲ್ಲಾದರೂ ಈ ಖದೀಮರಿಗೆ ಕೈ ಕೊಟ್ಟು ಚಳ್ಳೆಹಣ್ಣು ತಿನ್ನಿಸಲು ಸಾಧ್ಯವೆ? ಎಂದು ಯೋಚಿಸುತ್ತಿರಬೇಕಾದರೆ ರೈಲು ಹೊರಡುತ್ತದೆ ಎಂದು ಪ್ರಯಾಣಿಕರಿಗೆ ಎಚ್ಚರಿಕೆ ಕೊಡಲೆಂದೋ ಏನೋ ಒಮ್ಮೆ ಡ್ರೈವರ್ ಗಟ್ಟಿಯಾಗಿ ಎಂಜಿನನ್ನು ಕೂಗಿಸಿದ. ಪ್ರಯಾಣಿಕರೆಲ್ಲ ಗಡಿಬಿಡಿಯಿಂದ ತಟ್ಟೆ ಲೋಟ ಒಯ್ದಿಟ್ಟು ಹಿಂದಿರುಗತೊಡಗಿದರು. ಸುರೇಶ ಬಿಲ್ ಎಷ್ಟೆಂದು ಕೇಳಿದಾಗ ಗಾಡಿಯಲ್ಲಿದ್ದವರೇ ಕೊಟ್ಟಿದ್ದಾರೆಂದು ಭಟ್ಟ ಹೇಳಿದ್ದರಿಂದ ಲಗುಬಗೆಯಿಂದ ಬಂದು ಗಾಡಿ ಹತ್ತಿದ. ಸುರೇಶ ಗಾಡಿ ಹತ್ತುವುದಕ್ಕೂ ರೈಲಿನ ದೀಪಗಳು ಆರಿಹೋಹೊಗುವುದಕ್ಕೂ ಸರಿ ಹೋಯ್ತು.

"ಏನ್ರಿ ಮಳೇಲ್ಯಾಕೆ ನಿಂತುಕೊಂಡು ಕಾಫಿ ಕುಡೀತಿದ್ರಿ. ಬಟ್ಟೆಯೆಲ್ಲ ಒದ್ದೆಯಾದಹಾಗೆ ಕಾಣ್ತದಲ್ರಿ" ಎಂದು ಗೌರಿ ಆಕ್ಷೇಪಿಸಿದಳು.

"ಇದು ಬೇರೆ ಗೋಳು! ಏನು ಎಂಜಿನ್ನಿನ ಬ್ಯಾಟ್ರಿ ಡೌನಾಗಿ ಹೋಯ್ತೋ ಏನೋ? ಬಸ್ಸು ಸ್ಟಾರ್ಟ್ ಮಾಡಿದ ಹಾಗೆ ನಿಮ್ಮೂರು ರೈಲನ್ನ ತಳ್ಳಿ ಸ್ಟಾರ್ಟ್ ಮಾಡಬೇಕಂತ

ಕಾಣ್ತದೆ'' ಎಂದು ರಾಜಪ್ಪ ರೈಲಿನ ದೀಪಗಳು ಆರಿಹೋಗಿದ್ದಕ್ಕೆ ಗೊಣಗಿದ.

ಅಷ್ಟರಲ್ಲಿ ಹಲವಾರು ಜನ ಗಾಡಿ ಹತ್ತಿಕೊಳ್ಳುತ್ತಿದ್ದಂತೆ ಕಂಡಿತು. ಕಣ್ಣು ಕಾಣದೆ ಕುಳಿತಿದ್ದವರಿಗೆಲ್ಲ ಢಿಕ್ಕಿ ಹೊಡೆಯುತ್ತ ತಂತಮ್ಮ ಗಾಡಿಯೊಳಗಿದ್ದ ಪರಿಚಿತರ ಹೆಸರನ್ನು ಕರೆಯುತ್ತ, ತಾವು ಇಳಿದ ಗಾಡಿಯೆ ಇದು ಎಂದು ಗುರುತಿಸಲು ಹಲವರು ಪ್ರಯತ್ನಿಸುತ್ತಿದ್ದರು. ಯಾರೋ ''ಸಧ್ಯಕ್ಕೆ ಕೂತು ಕೊಳ್ರಿ. ಮತ್ತೆ ಮುಂದಿನ ಸ್ಟೇಷನ್ನಿನಲ್ಲಿ ನಮ್ಮ ಬೋಗಿಗೆ ನಾವು ಹತ್ತಿಕೊಂಡರಾಯ್ತು'' ಎಂದು ಗಡಿಬಿಡಿಯಲ್ಲಿರುವವರಿಗೆ ಸಮಾಧಾನ ಹೇಳುತ್ತಿದ್ದರು

ರೈಲು ಹೊರಟರೂ ಗಾಡಿಗಳಿಗೆ ದೀಪ ಬರಲಿಲ್ಲ. ಎಲ್ಲೋ ಲೂಸ್ ಕಾಂಟಾಕ್ಟ್ ಇರಬೇಕು. ಒಂದೆರಡು ಸಾರಿ ಮಿಂಚು ಬಂದ ಹಾಗೆ ದೀಪ ಮಿಂಚಿ ಮತ್ತೆ ಆರಿಹೋಯ್ತು ದೀಪ ಕ್ಷಣಕಾಲ ಬಂದು ಹೋದಾಗ ಅತ್ತಿತ್ತ ನೋಡಿದ ಸುರೇಶನಿಗೆ ಕೆಲವರು ಕಂಬಳಿ ಹೊದ್ದವರು, ಕೆಲವರು ಪೇಟಗಳಂತೆ ತಲೆಗೆ ಟವಲ್ ಸುತ್ತಿಕೊಂಡವರು ತಮ್ಮೆದುರಿಗೇ ಕುಳಿತಿದ್ದು ಕಾಣಿಸಿತು.

ಗೌರಿ ಸುರೇಶನ ಪಕ್ಕ ನಿರಾತಂಕವಾಗಿ ನಿದ್ದೆಮಾಡುತ್ತಿದ್ದಳು. ರಾಜಪ್ಪನೂ ನಿದ್ದೆ ಮಾಡಲು ಪ್ರಯತ್ನಿಸುತ್ತಿದ್ದನೇನೋ! ಏಕೆಂದರೆ ಅವನ ಒಟಗುಟ್ಟುವಿಕೆ ಸಂಪೂರ್ಣ ನಿಂತಿತ್ತು. ಸುರೇಶ ಸುಮ್ಮನೆ ಕಣ್ಣುಬಿಟ್ಟುಕೊಂಡು ಯೋಚನೆ ಮಾಡುತ್ತ ಕುಳಿತ. ಈ ವರೆಗೂ ಗುರುರಾಜ ಕವಿಯ ಕಾವ್ಯದ ಬಗ್ಗೆ ಚಿಂತಿಸುತ್ತಿದ್ದ ಅವನಿಗೆ ಹೊಸ ಬೆಳವಣಿಗೆಯಿಂದ ತಮ್ಮನ್ನು ಹಿಂಬಾಲಿಸುತ್ತಿರುವ ಕೊಲೆಗಡುಕರು ಯಾರಿರಬಹುದು? ಈ ಗಡಿಬಿಡಿಯಲ್ಲಿ ಅವರು ನಮ್ಮ ಗಾಡಿಗೇ ಹತ್ತಿಕೊಂಡರೋ? ಎಂದು ಚಿಂತೆಯಾಗಿತ್ತು. ಆದರೆ ಕಗ್ಗತ್ತಲು! ಈ ಕಗ್ಗತ್ತಲಲ್ಲಿ ಯಾರು ಯಾರನ್ನು ಎಂದು ಕೊಲ್ಲುತ್ತಾರೆ? ಬೆಳಕು ಹರಿಯುವವರೆಗೂ ರೈಲು ಹೀಗೇ ಕತ್ತಲಲ್ಲಿ ಮುಂದುವರಿದರೆ ಜೀವಕ್ಕೆ ಅಪಾಯವಿಲ್ಲ ಎಂದು ಅಂದುಕೊಂಡು ಧೈರ್ಯದಿಂದಿರಲು ಪ್ರಯತ್ನಿಸಿದ. ಆದರೂ ಅವನ ಕಳವಳ ಹೆಚ್ಚುತ್ತಾ ಹೋಯ್ತು.


ಕತ್ತಲಲ್ಲಿ ಮುಂದವರಿಯುತ್ತಿದ್ದ ರೈಲು ಒದ್ದೆ ಕಂಬಿಗಳು ಜಾರುತ್ತಿದ್ದುದ ರಿಂದಲೋ ಏನೋ ಆಗಾಗ ಜುಗುಜುಗುಜುಗು ಉಸಿರು ಬಿಡುತ್ತ ಎಳೆಯಲಾರದೆ ಗಲಾಟೆ ಮಾಡುತ್ತಿತ್ತು. ಎಲ್ಲಕ್ಕಿಂತ ಕಿಲೋಮೀಟರು ಉದ್ದದ ತೂಗು ಸೇತುವೆಯ ಮೇಲೆ ಎಂಜಿನ್ ಮುಂದಕ್ಕೆಳೆಯುತ್ತಿದ್ದರೂ ಗಾಡಿಗಳ ತೂಕ ನಿಧಾನವಾಗಿ ಎಂಜಿನ್ನನ್ನು ಸೇತುವೆಯ ನಡುಭಾಗಕ್ಕೆ ಎಳೆದು ನಿಲ್ಲಿಸಿಬಿಟ್ಟಿತು. ಎಂಜಿನ್ ಡ್ರೈವರು ನಾಲ್ಕಾರು ಸಾರಿ ರೈಲನ್ನು ಹಿಂದಕ್ಕೇ ಒಯ್ದು ಮತ್ತೆ ದೂರದಿಂದ ಗಾಡಿಗಳನ್ನು ಎಳೆತಂದು ಸೇತುವೆ ದಾಟಿಸಲು ಹಲವು ಬಾರಿ ಪ್ರಯತ್ನಿಸಿ ಕೊನೆಗೊಮ್ಮೆ ಸಫಲನಾದ. ನಿಜಕ್ಕೂ ರೈಲಿನ ಒಳಗೂ ಹೊರಗೂ ಕವಿದಿದ್ದ ಕತ್ತಲೆಯೇ ಗಾಡಿಯೊಳಗಿನ ಪ್ರಯಾಣಿಕರಿಗೆ ಶ್ರೀರಕ್ಷೆಯಾಗಿತ್ತು. ತಲೆ ತಿರುಗುವಷ್ಟು ಆಳವಾದ ಆ ಕಮರಿಯಮೇಲೆ ರೈಲು ಜಾರುತ್ತಾ

ತೂಗು ಸೇತುವೆಯಲ್ಲಿ ಹಿಂದಕ್ಕೂ ಮುಂದಕ್ಕೂ ಜಗ್ಗಾಡುವುದನ್ನು ಬೆಳಗಿನ ಹೊತ್ತೇನಾದರೂ ಪ್ರಯಾಣಿಕರು ನೋಡಿದ್ದರೆ ಅರ್ಧ ಜನ ಮೂರ್ಛೆಹೋಗುತ್ತಿದ್ದರು. ಸುರೇಶನ ಕಣ್ಣಿಗೇನೂ ಕಾಣದಿದ್ದರೂ ಆಳದಲ್ಲಿ ಭೋರ್ಗರೆಯುತ್ತ ಹರಿಯುವ ನದಿಯ ಸದ್ದಿನಿಂದಲೇ ಎಲ್ಲವನ್ನೂ ಊಹಿಸಿದ.

ಅಷ್ಟರಲ್ಲಿ ಗಾಡಿಯೊಳಗೆ ಯಾರೋ ಬೀಡಿ ಹತ್ತಿಸಿಕೊಳ್ಳಲು ಮತ್ತೆ ಕಡ್ಡಿ ಗೀರಿದರು. ಸುರೇಶನಿಗೆ ಅಂಥ ಏನೂ ಕುತೂಹಲವಿಲ್ಲದಿದ್ದರೂ ಕತ್ತಲಲ್ಲಿ ಕಾಣುವ ಬೆಳಕಾದುದರಿಂದ ಅತ್ತಕಡೆ ನೋಡುತ್ತಿದ್ದ. ಕಡ್ಡಿ ಗೀರಿದವ ಬೀಡಿ ಹತ್ತಿಸಿಕೊಳ್ಳಲು ಬೆಂಕಿಯನ್ನು ಮುಖದ ಹತ್ತಿರ ಒಯ್ದಾಗ ಅವನ ಮುಖ ಸುರೇಶನಿಗೆ ಚೆನ್ನಾಗಿ ಕಾಣಿಸಿತು. ಅದಕ್ಕಿಂತ ಮುಖ್ಯವಾಗಿ ಅವನು ಕುತ್ತಿಗೆಗೆ ಸುತ್ತಿಕೊಂಡಿದ್ದ ಕೆಂಪು ಮಫ್ಲರಿನ ಒಂದು ಭಾಗ ಕಂಬಳಿಯ ಸಂದಿಯಿಂದ ಸ್ಪಷ್ಟವಾಗಿ ಕಾಣಿಸಿತು. ಶೇಷಪ್ಪ ತೋರಿಸಿದ ತಂತಿ ಕಂಬಕ್ಕೆ ವಾಲಿ ನಿಂತಿದ್ದ ವ್ಯಕ್ತಿ ಇವನೇ ಎನ್ನುವುದರಲ್ಲಿ ಸುರೇಶನಿಗೆ ಹೆಚ್ಚಿನ ಅನುಮಾನವೇನೂ ಉಳಿಯಲಿಲ್ಲ.



# ಕತ್ತಲಿಗೆ ಜಿಗಿತ - ೨೫



ರೈಲು ಕಾಳರಾತ್ರಿಯ ಹೆಬ್ಬಂಡೆಯಡಿ ಮೆಲ್ಲನೆ ತೆವಳುತ್ತಿತ್ತು. ಬಿರುಮಲೆ ಪರ್ವತದ ಅಡಿ ಕೊರೆದಿರುವ ನಾಲ್ಕು ಕಿಲೋಮೀಟರು ಸುರಂಗವನ್ನು ಒಮ್ಮೆ ದಾಟಿಬಿಟ್ಟರೆ ಆಮೇಲೆ ಅಲ್ಲಿಂದ ಸುಮಾರು ನೂರು ಮೈಲಿಯ ಕಡಲ ತೀರದವರೆಗೂ ಇಳಿಜಾರೇ ಇದೆ. ಅ ನೂರು ಮೈಲುಗಳನ್ನು ರೈಲು ನಾಲ್ಕು ಸಾವಿರ ಅಡಿ ಎತ್ತರದಿಂದ ಸಮುದ್ರಮಟ್ಟದವರೆಗೂ ಇಳಿಯುವುದರಿಂದ ಅದಕ್ಕೆ ಎಂಜಿನ್ನಿನ ಅಗತ್ಯವೇ ಇರಲಿಲ್ಲ. ಒಮ್ಮೆ ಅತ್ತಣಿಂದ ಬರುತ್ತಿದ್ದ ರೈಲಿನ ಕೊನೆಯ ಎರಡು ಗಾಡಿಗಳು ಅಂಬಳದ ಹತ್ತಿರ ಹೇಗೋ ಕೊಂಡಿ ಕಳಚಿ ಕೊಂಡು, ಒಳಗೆ ಮಲಗಿದ್ದ ಪ್ರಯಾಣಿಕರು ಬೆಳಗ್ಗೆ ಎದ್ದಾಗ ಹೊರಟಲ್ಲೇ ಇದ್ದುದನ್ನು ನೋಡಿ ಕಂಗಾಲಾಗಿದ್ದರು. ರಾತ್ರಿಯಾದ್ದರಿಂದ ಮತ್ತು ಹೋಗಿ ಬರುವ ರೈಲುಗಳು ಯಾವೂ ಇಲ್ಲದ್ದರಿಂದ ಆ ಗಾಡಿಗಳ ಪ್ರಯಾಣಿಕರಿಗೆ ಪ್ರಾಣಾಪಾಯವೇನೂ ಸಂಭವಿಸಲಿಲ್ಲ. ಆದರೆ ಸದ್ಯಕ್ಕಂತೂ ಬಿರುಮಲೆ ಪರ್ವತದ ಸುರಂಗದವರೆಗೆ ಹೋಗುವುದೇ ರೈಲಿಗೆ ಪ್ರಯಾಸಕರವಾಗಿತ್ತು. ಜೋರಾಗಿ ಮಳೆ ಬಂದು ಕಂಬಿಗಳ ಮೇಲೆ ನೀರು ಹರಿದರೂ ಎಂಜಿನಿನ ಚಕ್ರಗಳಿಗೆ ಹಿಡಿತ ಸಿಗುತ್ತದೆ. ಆದರೆ ಸಣ್ಣ ಇಬ್ಬನಿಯ ರೀತಿ ತುಂತುರು ಮಳೆ ಬಂದು ರೈಲು ಹಳಿಗಳ ಮೇಲೆ ಹನಿಗಳು ಕುಳಿತರೆ ಮಾತ್ರ ಎಂಜಿನ್ ಚಕ್ರಗಳಿಗೆ ಬಿಗಿ ಸಿಗದೆ ಜಾರುತ್ತವೆ. ಅದೂ ಕಂಬಿಗಳು ಉಬ್ಬಿನ ಕಡೆಗೆ ಹೋಗಿದ್ದರಂತೂ ಮುಗಿದೇ ಹೋಯ್ತು, ಚಕ್ರಗಳು ಕಂಬಿಯ ಮೇಲೆ

ಜಾರಿಜಾರಿ ಕಾದು ಕೆಂಡವಾಗುವಷ್ಟು ತಿಕ್ಕಿಬಿಡುತ್ತವೆ.

ರಾಜಪ್ಪ ನಿದ್ದೆಮಾಡುತ್ತಿದ್ದ. ಗೌರಿ ನಿದ್ದೆಮಾಡುತ್ತಿದ್ದಳು. ಸುರೇಶ ಒಬ್ಬನೇ ಕಣ್ಣು ಬಿಟ್ಟುಕೊಂಡು ರೆಪ್ಪೆ ಮಿಟುಕಿಸುತ್ತ ಯೋಚನೆ ಮಾಡುತ್ತಿದ್ದ. ಇದ್ದಕ್ಕಿದ್ದಹಾಗೆ ಸುರೇಶನಿಗೆ ಭಯವಾಯ್ತು. ಯಾರೋ ತನ್ನ ಪಕ್ಕದಲ್ಲೇ ತೀರಾ ಸಮೀಪದಲ್ಲಿ ನಿಂತಿದ್ದಾರೆ ಎನ್ನಿಸಿತು. ಗಾಬರಿಯಿಂದ ಮೈ ಮುರಿಯುವವನಂತೆ ಕೈಯ್ಯಾಡಿಸುತ್ತ ಅಕ್ಕ ಪಕ್ಕ ಯಾರಾದರೂ ನಿಂತಿದ್ದರೆ ಕೈಗೆ ತಾಗಿ ಗೊತ್ತಾಗಬಹುದೆಂದು ಪರೀಕ್ಷಿಸಿದ. ಕೈಗೆ ಏನೂ ತಾಗಲಿಲ್ಲ. ಎಲ್ಲ ತನ್ನ ಮನಸ್ಸಿನ ಭ್ರಮೆ ಎಂದು ಚಿಂತಿಸಿದ. ಆದರೆ ಮನಸ್ಸು ಭ್ರಮೆಗಳನ್ನು ಸೃಷ್ಟಿಸಿ ಎರಚತೊಡಗಿದರೆ ಅದರಿಂದ ತಪ್ಪಿಸಿಕೊಳ್ಳುವುದು ಅಷ್ಟೊಂದು ಸುಲಭವಲ್ಲ. ಅದೂ ಬೆಳಗಿನಿಂದ ಅನುಭವಿಸಿದ ಅರ್ಥವಾಗದ ನೂರಾರು ಘಟನೆಗಳ ಪ್ರಭಾವವಲಯದಲ್ಲಿ ಇನ್ನೂ ಪರಿಭ್ರಮಿಸುತ್ತಿದ್ದ ಸುರೇಶನ ಮೆದುಳಿಗಂತೂ ಅದು ದುಸ್ತರವೇ ಆಗಿತ್ತು. ಕೆಲವು ಕಾಲದನಂತರ ಯಾರದೋ ಕೈ ಬೆರಳುಗಳು ನಿಧಾನವಾಗಿ ಸುರೇಶನ ಕುತ್ತಿಗೆಯನ್ನು ಬಳಸಿ ಬರುತ್ತಿರುವಂತೆನ್ನಿಸಿತು. ಕುತ್ತಿಗೆಯ ಸುತ್ತ ಕೈಯ್ಯಾಡಿಸಿ ಮುಖಕ್ಕೆ ಮುತ್ತುವ ನೊಣ ಓಡಿಸುವವನಂತೆ ಕೈ ಬೀಸಿದ. ಬರೀ ಗಾಳಿ! ಕತ್ತಲಲ್ಲಿ ಅವನಿಗೆ ಬೀಸಾಡಿದ ತನ್ನ ಕೈ ಸಹ ಕಾಣಿಸಲಿಲ್ಲ. ಹಾಗಿದ್ದರೆ ತನಗೇಕೆ ಈ ರೀತಿ ಭ್ರಾಂತಿ ಮುಸುಗಿದೆ! ತಾನು ಇಷ್ಟೊಂದು ಹೇಡಿಯೆ? ಎಂದು ಯೋಚಿಸುತ್ತ ತನ್ನ ಮನಃತುಮುಲಗಳನ್ನೆಲ್ಲ ವಿಶ್ಲೇಷಿಸಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ.

ಸುರೇಶನಿಗೆ ಯೋಚಿಸುತ್ತಿರಬೇಕಾದರೆ ಹಠಾತ್ತನೆ ತಾನ ನಿಜವಾಗಿಯೂ ಅಪಾಯದಲ್ಲಿದ್ದೇನೆಂದು ಅನ್ನಿಸಿತು. ಮೃತ್ಯು ಪಂಜರದಂಥ ರೈಲು ಗಾಡಿಯೊಳಗೆ ಈ ಕಾಳರಾತ್ರಿಯಲ್ಲಿ ಕುಳಿತು, ದೊರೆತಿರುವ ಅತ್ಯಲ್ಪ ಕಾಲಾವಕಾಶವನ್ನು ಹಾಳುಮಾಡುತ್ತಿದ್ದೇನೆ. ಕಾಲ ಮಿಂಚಿದಮೇಲೆ ಚಿಂತಿಸಿ ಫಲವಿಲ್ಲ. ರಾಜಪ್ಪನ ಬಗ್ಗೆಯೂ ಅವನು ಹೇಳಿದ್ದನ್ನೆಲ್ಲ ನಂಬುವಂತಿಲ್ಲ. ಕೆಂಪು ಮಫ್ಲರಿನ ಕೊಲೆಪಾತಕಿಯ ತಂಡ ನಮ್ಮನ್ನು ಹಿಂಬಾಲಿಸಿಕೊಂಡು ಕುಮರಿ ಸ್ಟೇಷನ್ನಿನಲ್ಲಿ ರೈಲು ಹಿಡಿದಿರಬೇಕಾದರೆ ರಾಜಪ್ಪನೂ ಇದೇರೀತಿ ನಮ್ಮನ್ನು ಹಿಂಬಾಲಿಸಿ ಬಂದೇ ರೈಲು ಹತ್ತಿರಬೇಕು. ನಾನು ಕುಮರಿ ಸ್ಟೇಷನ್ನಿನಲ್ಲೇ ಮೆಲ್ಲಗೆ ಗೌರಿಯನ್ನು ಇಳಿಸಿಕೊಂಡು ಕಾಡಿನಲ್ಲಿ ನಾಪತ್ತೆಯಾಗಿದ್ದರೆ ಬೀಸುವ ದೊಣ್ಣೆಯಿಂದ ಸುಲಭವಾಗಿ ತಪ್ಪಿಸಿಕೊಳ್ಳಬಹುದಿತ್ತು. ಈ ವೃತ್ತಿ ಕೊಲೆಗಡುಕರ ಹತ್ತಿರ ಧೈರ್ಯ, ಸಾಹಸ, ಸಹಾನುಭೂತಿ ಇವನ್ನೆಲ್ಲ ತೋರಿಸುವುದು, ನಿರೀಕ್ಷಿಸುವುದು ಮೂರ್ಖತನ. ಅವರಿಗೇನೂ ನಮ್ಮ ಬಗ್ಗೆ ದ್ವೇಷವಾಗಲಿ ಕೋಪವಾಗಲೀ ಇರಲು ಸಾಧ್ಯವೇ ಇಲ್ಲ. ಸುಮ್ಮನೆ ತರಕಾರಿ ಕತ್ತರಿಸಿದಂತೆ ಕೊಂದು ದುಡ್ಡು ಕಿತ್ತುಕೊಂಡು ಮಾಯವಾಗುತ್ತಾರೆ. ಶೇಷಪ್ಪನಿಗೆ ಚೂರಿ ಹಾಕಿದ್ದರ ಬಗ್ಗೆ ಅವರು ಮಾತಾಡಿದ್ದ ತರದಲ್ಲೇ ಇವರು ತೀರಾ ಥಂಡಿರಕ್ತದ ಕೊಲೆ ಪಾತಕಿಗಳೆಂದು ಚೆನ್ನಾಗಿ ಗೊತ್ತಾಗುವುದಿಲ್ಲವೆ! ಬೆಳಗಾವುದರೊಳಗೇ ಕೇಸ್ ಖಲಾಸ್ ಮಾಡೋಣವೆಂದು ಅವರು ತೀರ್ಮಾನಿಸಿರುವ

ಸ್ಪಷ್ಟ ಸೂಚನೆಗಳು ಸಿಕ್ಕಿದ್ದರೂ ತಪ್ಪಿಸಿಕೊಂಡು ಹೋಗಲು ಸಿಕ್ಕಿರುವ ಅಮೂಲ್ಯ ಅತ್ಯಲ್ಪ ಕಾಲಾವಕಾಶವನ್ನು ಚಿಂತನೆಯಲ್ಲಿ ಕಳೆಯುತ್ತ ಹಾಳು ಮಾಡುತ್ತಿದ್ದೇನಲ್ಲ. ಯಾವ ಪವಾಡ ಸಂಭವಿಸಿ ನಾನು ಪಾರಾಗುತ್ತೇನೆಂದು ನಿರೀಕ್ಷಿಸುತ್ತಿದ್ದೇನೆ? ಯಾರು ನಮ್ಮ ಸಮಸ್ಯೆಗಳನ್ನು ಪರಿಹರಿಸಿ ಕೊಡುತ್ತಾರೆಂದು ಕಾಯುತ್ತಿದ್ದೇನೆ?

ತೀರಾ ಕಳವಳದಿಂದ ಸುರೇಶ ಯೋಚಿಸಿದ. ರೈಲು ಗಾಡಿಯೊಳಗೆ ಕುಳಿತು ಯೋಚಿಸುವುದು ವಿನಃ ಮತ್ತೇನನ್ನೂ ಮಾಡಲು ಅವಕಾಶವಿರುವಂತೆ ತೋರಲಿಲ್ಲ. ವಿಧಿಯ ರೀತಿ ಸಾವು ಅವನನ್ನು ಬೆಂಬತ್ತಿರುವಂತೆ ತೋರಿತು.

ತಾನಿನ್ನೂ ಎಚ್ಚರವಾಗೇ ಇದ್ದೇನೆಂದು ತೋರಿಸಿಕೊಳ್ಳಲು ಗಟ್ಟಿಯಾಗಿ ಕೆಮ್ಮಿ ಕ್ಯಾಕರಿಸಿ ಕಿಟಕಿಯಿಂದಾಚೆಗೆ ಉಗಿದ.

"ಏನ್ರೀ ಮಳೇಲಿ ನೆಂದು ಕೆಮ್ಮು ಶುರುವಾಗಿರೋಹಾಗೆ ಕಾಣುತ್ತೆ!"ಎಂದು ಗೌರಿ ಪಕ್ಕದಿಂದ ಕೇಳಿದಳು.

ಗೌರಿ ಸಹ ಎಚ್ಚರಾಗಿರುವುದು ನೋಡಿ ಸುರೇಶನಿಗೆ ಇದ್ದಕ್ಕಿದ್ದಹಾಗೆ ಏನೋ ಒಂದು ರೀತಿ ಸಮಾಧಾನವಾಗತೊಡಗಿತು. ತಾನು ವಿಶ್ಲೇಷಿಸಿ ತಿಳಿದ ರಹಸ್ಯಗಳನ್ನೆಲ್ಲ ಯಾರಿಗೂ ಹೇಳಲಾರದೆ ತನ್ನೊಳಗೇ ಇಟ್ಟುಕೊಂಡು ಮಾನಸಿಕವಾಗಿ ಎಲ್ಲರಿಂದ ಪ್ರತ್ಯೇಕವಾಗುತ್ತ ಅಪರಿಚಿತನಾಗುತ್ತ ದೂರವಾಗುತ್ತಿದ್ದ ಅವನಿಗೆ ಆ ಕತ್ತಲಲ್ಲಿ ಗೌರಿ ಪಕ್ಕದಿಂದ ಮಾತಾಡಿದ್ದು ವಿಚಿತ್ರವಾದ ನೆಮ್ಮದಿಯನ್ನು ತಂದಿತು.

"ಗೌರಿ, ಈಗ ನಾವು ಇಲ್ಲಿಂದ ಪಾರಾಗಬೇಕು ಕಣೆ. ಯಾಕೆ? ಏನು? ಎಲ್ಲ ಈಗ ಕೇಳಬೇಡ" ಎಂದು ಸುರೇಶ ರೈಲಿನ ಸದ್ದಿನೊಳಗೇ ಮಿಳಿತವಾಗುವಂತೆ ಅತಿ ಕ್ಷೀಣ ದನಿಯಲ್ಲಿ ಗೌರಿ ಕಿವಿಯಲ್ಲಿ ಉಸುರಿದ.

"ಹ್ಯಾಗ್ರಿ? ರೈಲೊಳಗೆ ಕೂತಿದ್ದೀವಲ್ಲ"ಎಂದು ಗೌರಿ ಪಿಸುಗುಟ್ಟಿದಳು.

"ಹೇಗಾದರೂ ಸರಿ. ಮೊದಲು ರೈಲಿಂದ ಪಾರಾಗಬೇಕು"

"ಬಾಗಿಲು ತೆಗೆದು ಆಚೆಗೆ ಹಾರಿ ಬಿಡೋಣವಾ? ಕಗ್ಗತ್ತಲು! ಕಣ್ಣಿಗೆ ಏನೂ ಕಾಣೋದೇ ಇಲ್ಲ. ನೆಲಾನೋ ಕಲ್ಲೋ ಮುಳ್ಳೋ ಒಂದೂ ಗೊತ್ತಾಗೋಲ್ಲವಲ್ಲ. ಹೇಗೆ ಪಾರಾಗೋದು? ನೀವು ಹೆಂಗೇಳ್ತಿರೋ ಹಂಗೆ" ಎಂದಳು ಗೌರಿ. ಗೌರಿಯ ಮಾತು ಕೇಳಿ ಇವಳು ತನಗಿಂತ ಎಷ್ಟೋ ಪಾಲು ಧೈರ್ಯಸ್ತೆ ಎನ್ನಿಸಿತು ಸುರೇಶನಿಗೆ. ಬೆಳಗ್ಗೆ "ನೀವು ನನ್ನನ್ನ ನಾನು ನಿಮ್ಮನ್ನ ಬಿಟ್ಟು ಬೇರೆ ಯಾರನ್ನೂ ನಂಬೋಹಂಗಿಲ್ಲ" ಎಂದು ಗೌರಿ ಹೇಳಿದ್ದು ಸುರೇಶನ ನೆನಪಿಗೆ ಬಂತು. ಆದರೆ ಈ ಮಟ್ಟದವರೆಗೆ ಅವಳು ನಂಬಿರುವುದನ್ನು ನೋಡಿ ಗಾಬರಿಯಾಯ್ತು.

ಗೌರಿಯ ಪ್ರಶ್ನೆ ಕೇಳಿ ಸುರೇಶ ತುಂಬ ಹೊತ್ತು ಯೋಚಿಸಿದ. ಕಾಲ ಸರಿದಂತೆ ಸುರೇಶನ ಅವಸರ ಹೆಚ್ಚುತ್ತಾ ಹೋಯ್ತು. ರೈಲೇನೋ ಅದರಿಂದ ಪ್ರಾಣಾಪಾಯವಿಲ್ಲದೆ ನೆಗೆಯುವಷ್ಟು ನಿಧಾನವಾಗೇ ಹೋಗುತ್ತಿತ್ತು. ಜೊತೆಗೆ ಈ ಕಗ್ಗತ್ತಲಲ್ಲಿ ಯಾರಿಗೂ

ಯಾವ ಸುಳಿವನ್ನೂ ಕೊಡದೆ ಸುಲಭವಾಗಿ ನೆಗೆಯುವುದೂ ಸಾಧ್ಯವಿತ್ತು. ಆದರೆ ಕಾಲಕೆಳಗೆ ಏನಿದೆ ಎಂದು ತಿಳಿಯದೆ ಹೇಗೆ ನೆಗೆಯುವುದು? ನೆಗೆದು ಯಾವುದಾದರೂ ಕಮರಿಗೆ ಬಿದ್ದರೆ! ಸೇತುವೆಯಾದರಂತೂ ಇಬ್ಬರೂ ಒಟ್ಟಿಗೇ ಸಾಯುವುದರಿಂದ ಒಬ್ಬರು ಸತ್ತು ಒಬ್ಬರು ಉಳಿಯುವ ಅಪಾಯವಿಲ್ಲ. ಆದರೆ ಇವನ್ನೆಲ್ಲ ತಪ್ಪಿಸಿ ಹೇಗಾದರೂ ನೆಗೆಯಬೇಕಲ್ಲ! ನಾವು ಮಾಡುವ ಪ್ರಯತ್ನ ಬದುಕುವುದಕ್ಕಾಗಿರಬೇಕೇ ಹೊರತು ಸತ್ತು ಈ ಖದೀಮರ ಹಾದಿಯನ್ನು ಸುಗಮ ಮಾಡಿಕೊಡುವುದಕ್ಕಲ್ಲವಲ್ಲ!

ಸುರೇಶ ಯೋಚಿಸಿ ಬಿರುಮಲೆ ಪರ್ವತದ ಸುರಂಗ ಬರುತ್ತಲೂ ಸುರಂಗದೊಳಗೆ ಹೋಗುವ ರೈಲಿನ ಸದ್ದಿನಿಂದ ಸುರಂಗ ಎಂದು ಸ್ಪಷ್ಟವಾಗಿ ಗೊತ್ತಾಗುವುದರಿಂದ ಅಲ್ಲೇ ಸಮಯ ಸಾಧಿಸಿ ರೈಲಿನಿಂದ ನೆಗೆದುಬಿಡುವುದೆಂದು ನಿರ್ಧರಿಸಿ ''ನಾನು ನಿನಗೆ ಹೇಳುತ್ತೇನೆ. ರೆಡಿಯಾಗಿರು'' ಎಂದು ಗೌರಿಗೆ ಹೇಳಿ ಸುಮ್ಮನೆ ಹೊರಗೆ ದಿಟ್ಟಿಸುತ್ತ ಕುಳಿತ. ಕಣ್ಣು ಮುಚ್ಚಿಕೊಂಡು ಕುಳಿತಷ್ಟೆ ಕಗ್ಗತ್ತಲು! ಅವನಿಗೆ ಇನ್ನು ಯೋಚಿಸುವುದೇನೂ ಉಳಿದಂತೆ ತೋರಲಿಲ್ಲ. ಬೆಳಗಿನಿಂದ ಸಿನಿಮಾಗಳಲ್ಲಿ ಪರದೆಯ ಮೇಲೆ ನಡೆಯುವ ದೃಶ್ಯಾವಳಿಗಳಂತೆ ಸಂಭವಿಸಿದ ಅನುಭವಗಳೆಲ್ಲ ಮನಃಪಟಲದ ಮೇಲೆ ಮಿಂಚಿದವು. ಇಷ್ಟೆಲ್ಲ ಚಿಂತಿಸಿ ತೀರ್ಮಾನ ತಗೊಂಡಮೇಲೂ ಅವನೊಳಗೆ ಇನ್ನೂ ಒಂದು ಅನುಮಾನದ ರೇಖೆ ಇತ್ತು. ಇದೆಲ್ಲ ನಿಜವೆ? ಅಥವಾ ನನ್ನ ಊಹೆ ಭ್ರಾಂತಿಯೆ? ಆದರೆ ಇದು ಸಾವು ಬದುಕಿನ ಪ್ರಶ್ನೆಯಾದಾಗ ಪರೀಕ್ಷಿಸುವ ರಿಸ್ಕ್ ತಗೊಳ್ಳುವ ಹಾಗಿರಲಿಲ್ಲ.

ಗೌರಿ ಸಹ ಆಗ ಹೀಗೇ ಯೋಚಿಸುತ್ತಿದ್ದಳು. ನಾವು ಊಹಿಸಿರುವುದೆಲ್ಲ ನಿಜವೆ? ಜೀವನ್‌ಲಾಲ್ ಒಂದಕ್ಕೆ ಮೂರರಷ್ಟು ದುಡ್ಡು ಕೊಟ್ಟಿದ್ದನ್ನು ಬಿಟ್ಟರೆ ಇನ್ಯಾವ ಗಟ್ಟಿ ಆಧಾರವೂ ಅವಳಿಗೆ ಕಾಣಲಿಲ್ಲ. ಕೈಲಿದ್ದ ಒಂದೂವರೆ ಲಕ್ಷ ರಾಜಪ್ಪನಿಗೆ ಕೊಟ್ಟು ಕಡತ ತಗೊ ಎಂದಾಗ ಮಾತ್ರ ಅವಳಿಗೆ ಸುರೇಶನಿಗೆ ಇನ್ನೇನೋ ಗೊತ್ತಾಗಿದೆ ಎಂದು ಅನುಮಾನ ಬಂದಿತ್ತು. ಆದರೆ ಓಡುತ್ತಿರುವ ರೈಲಿನಿಂದ ಸಿನೆಮಾ ಹೀರೊಯಿನ್‌ಗಳ ಥರ ಜಿಗಿಯಲು ಅವಳಿಗೆ ಯಾವ ಸಾಕ್ಷಾಧಾರಗಳ ಅಗತ್ಯ ಬೇಕೆಂದು ಅನ್ನಿಸಲಿಲ್ಲ. ಆಮೆ ಥರ ತೆವಳುತ್ತಿರುವ ರೈಲಿಗೆ ರಾಜಪ್ಪ ಓಡಿಬಂದು ಹತ್ತಿರಬೇಕಾದರೆ ಇನ್ನು ರೈಲಿನಿಂದ ಜಿಗಿದು ಇಳಿಯುವುದೇನು ದೊಡ್ಡದೆ? ಎಂತಿದ್ದರೂ ರೈಲು ಕಂಬಿ ಇದ್ದೇ ಇರುತ್ತದೆ. ಅದನ್ನು ಹಿಡಿದು ಯಾವ ದಿಕ್ಕಿಗೆ ಹೋದರೂ ಒಂದಲ್ಲ ಒಂದು ಊರು ಸಿಕ್ಕೇ ಸಿಕ್ಕುತ್ತೆ. ಗೌರಿ ಹೆಚ್ಚೇನೂ ಯೋಚಿಸಲಿಲ್ಲ. ಕಡತದ ಪ್ಯಾಕೆಟ್ಟನ್ನು ಸುರೇಶನ ಕೈಗೆ ಕೊಡುತ್ತ, ''ಇಬ್ಬರೂ ಒಂದೊಂದನ್ನು ಹಿಡುಕೊಳ್ಳೋಣ ಕಣ್ರೆ'' ಎಂದು ಹೇಳಿ ತಾನು ಕೈಯ್ಯಲ್ಲಿ ತುರಿಯೋ ಮಣೆ ಹಿಡಿದುಕೊಂಡು ರೆಡಿಯಾಗೇಬಿಟ್ಟಳು. ರೈಲು ಗಾಡಿಯ ಬಾಗಿಲು ಎಲ್ಲಿದೆ ಎಂದು ಕಂಡುಕೊಳ್ಳುವುದೂ ಆ ಕತ್ತಲಲ್ಲಿ ದುಸ್ತರವಾಗಿತ್ತು.

ಸೇತುವೆ ದಾಟಿದ ತಕ್ಷಣ ಸಿಕ್ಕುವ ಸುರಂಗವೇ ಬಿರುಮಲೆ ಸುರಂಗ. ಆ ದುರ್ಗಮ

ರೈಲುದಾರಿಗೆ ಅದೇ ಕೊನೆಯ ಸುರಂಗ. ಆ ಸುರಂಗದ ಆಚೆತುದಿಯಿಂದ ಅಂಬಳ ಕೇವಲ ಮೂರು ನಾಲ್ಕು ಮೈಲುಗಳಾಗಬಹುದಷ್ಟೆ. ರೈಲು ಸುರಂಗ ಹೊಕ್ಕ ಕೂಡಲೆ ಜಿಗಿಯುವುದಕ್ಕಿಂತಲೂ ಸುರಂಗದ ಆಚೆ ತುದಿಗೆ ಸಮೀಪವಾದಾಗ ಜಿಗಿಯುವುದು ಒಳ್ಳೆಯದು. ಸುಮಾರು ದೂರ ನಡೆಯುವುದು ತಪ್ಪುತ್ತೆ ಎಂದು ಸುರೇಶ ಯೋಚಿಸಿದ.

* * * * *

ಸುರಂಗಕ್ಕೆ ಕಾಯತೊಡಗಿದೊಡನೆ ಸುರಂಗ ಎಲ್ಲೋ ಇರುವ ಎಷ್ಟು ಹೊತ್ತಾದರೂ ಬರದಿರುವ ಅತಿ ದೂರದ ವಸ್ತುವಾಯ್ತು. ರೈಲಂತೂ ಮುಂದಕ್ಕೇ ಹೋಗದೆ ಹಿಂದುವರಿಯುತ್ತಿರುವ ಭ್ರಮೆ ಹುಟ್ಟಿಸಿತು. ಈ ಹಾಳು ರೈಲು ಹೀಗೇ ತೆವಳಿದರೆ ಸುರಂಗ ಬರುವುದರೊಳಗೆ ಬೆಳಗಾಗುತ್ತದೆ. ನನ್ನ ಪಾಲಿಗೆ ಇದೇ ಕೊನೆಯ ರಾತ್ರಿಯಾಗುತ್ತದೆ! ಸುರೇಶ ಉದ್ವೇಗದಿಂದ, ಆತಂಕದಿಂದ ಯೋಚಿಸಿದ.

ಎಂಜಿನ್ ಸುರಂಗದೊಳಕ್ಕೆ ಹೋದಕೂಡಲೆ ಅದರ ಸದ್ದು ಬಾವಿಯೊಳಗಿಂದ ಬಂದಹಾಗೆ ಕೇಳಿಸಿತು. ಗವಿಯೊಳಗಿನ ಸದ್ದಿನಂತೆ ಶಬ್ದ ಉಲ್ಬಣಿಸಿ ಒಂದಕ್ಕೆ ನೂರ್ಮಡಿಯಾಯ್ತು. ಗಾಡಿಯ ಚಕ್ರಗಳು ಕಂಬಿಯಿಂದ ಕಂಬಿಗೆ ಹಾರುವಾಗ ಬರುವ ಡಬ್‌ಡಬ್ ಸದ್ದು ಸಿಡಿಲಿನಂತೆ ಫಟಾಫಟ್ ಎಂದು ಕಿವಿ ಗಡಚಿಕ್ಕುವಂತೆ ಕೇಳಿಸಿತು. ಈ ಶಬ್ದದ ಭರಾಟೆಯಲ್ಲಿ ಯಾರಿಗೂ ಸುರೇಶ ಗೌರಿ ಮೆಲ್ಲಗೆ ಎದ್ದುದಾಗಲೀ, ಗಾಡಿಯ ಬಾಗಿಲು ತೆಗೆದುದಾಗಲೀ ಕೇಳಿಸಲೇ ಇಲ್ಲ. ರಾಜಪ್ಪನ ಗಾಢನಿದ್ರೆಗೆ ರೈಲಿನ ಸದ್ದೇ ಕೇಳದಿರುವಾಗ ಇನ್ನು ಇವರು ಎದ್ದುದು ತಿಳಿಯುವುದಾದರೂ ಹೇಗೆ. ಸುರೇಶ ಗೌರಿ ಇಬ್ಬರೂ ರೈಲು ಸುರಂಗ ಪ್ರವೇಶಿಸುತ್ತಿದ್ದಂತೆಯೇ ಬಾಗಿಲು ತೆಗೆದು ಫುಟ್ ಬೋರ್ಡಿನ ಮೇಲೆ ನಿಂತರು. ಸುರೇಶ ರೈಲು ಸುರಂಗದೊಳಗೆ ಆದಷ್ಟು ದೂರ ಹೋದಮೇಲೆ ನೆಗೆಯಬೇಕೆಂದು ಕಾಯುತ್ತಿದ್ದ. ಆದರೆ ಎಲ್ಲ ಅವನು ನೆನೆಸಿದಂತೆ ನಡೆಯುವ ಹಾಗೆ ಕಾಣಲಿಲ್ಲ. ಸುರಂಗದ ಹೊರಗಿದ್ದ ಮಳೆ ಸುರಂಗದ ಒಳಗಿರಲಿಲ್ಲ. ಹಾಗಾಗಿ ರೈಲಿನ ಚಕ್ರಗಳು ಸುರಂಗದೊಳಗೆ ಜಾರುತ್ತಿರಲಿಲ್ಲ. ರೈಲಿನ ವೇಗ ಮೆಲ್ಲಗೆ ಹೆಚ್ಚತೊಡಗಿತು. ಇನ್ನು ತಡಮಾಡಿ ರೈಲಿನ ವೇಗ ಹೆಚ್ಚಿದರೆ ನಾವು ಹಾರಿ ಬಿದ್ದು ಕೈಕಾಲು ಮುರಿದಕೊಳ್ಳುವುದು ಖಾತ್ರಿ ಎಂದೆನ್ನಿಸಿ "ನೆಗೆದವಳು ರೈಲಿನ ಜೊತೆಯೇ ಎರಡು ಹೆಜ್ಜೆ ಓಡು. ಆಗ ಮುಗ್ಗುರಿಸಿ ಬೀಳುವುದಿಲ್ಲ" ಎಂದು ಗೌರಿಗೆ ಕೊನೆಯ ಎಚ್ಚರಿಕೆ ಕೊಟ್ಟು ಸುರೇಶ ನೆಗೆದೇ ಬಿಟ್ಟ. ಅವನ ಬೆನ್ನಿಗೆ ತಾಗಿಕೊಂಡಂತೆಯೇ ನಿಂತಿದ್ದ ಗೌರಿಗೆ ಸುರೇಶ ನೆಗೆದದ್ದು ಗೊತ್ತಾದ ಕೂಡಲೆ ಹಿಂದು ಮುಂದು ನೋಡದೆ ನೆಗೆದೇ ಬಿಟ್ಟಳು.

ರೈಲಿನ ಜೊತೆ ನಾಲ್ಕು ಹೆಜ್ಜೆ ಓಡೆಂದು ಗೌರಿಗೆ ಸುರೇಶ ಹೇಳಿದ್ದೇ ಹೊರತು ನೆಲ ಎಲ್ಲಿದೆ ಎಂದೂ ಗೊತ್ತಾಗದ ಆ ಕತ್ತಲಲ್ಲಿ ಅದೆಲ್ಲಾ ಮಾಡುವುದು ಸಾಧ್ಯವೇ ಇರಲಿಲ್ಲ. ಇಬ್ಬರೂ ರೈಲು ಕಂಬಿ ಉದ್ದಕ್ಕೂ ಹಾಕಿರುವ ಜಲ್ಲಿ ಪಕ್ಕದ ನೆಲದಮೇಲೆ ಉರುಳುರುಳಿ ಬಿದ್ದರು. ಸುರಂಗದೊಳಗಿಂದ ಜಿನುಗಿ ಇಳಿಯುವ ನೀರಿಗೆ ದಾರಿ ಮಾಡಿ

ಪಕ್ಕದಲ್ಲಿ ತೋಡಿದ್ದ ಚಿಕ್ಕ ಕಾಲುವೆಗಳ ಚರಂಡಿಯ ಕೆಸರು ಮೈ ಕೈ ಎಲ್ಲಾ ಅಯ್ತು. ಮಂಡಿ ತೊಡೆಗಳಿಗೆಲ್ಲಾ ಮೂಗೇಟುಗಳೂ ತರಚು ಗಾಯಗಳೂ ಆದುವು. ರೈಲಿನ ಕೊನೆಯ ಗಾರ್ಡ ಗಾಡಿ ಹೋಗುವವರೆಗೂ ಇಬ್ಬರೂ ಬಿದ್ದಲ್ಲಿಂದ ಏಳಲಿಲ್ಲ. ರೈಲು ನಿರ್ಗಮಿಸಿದ ಅನಂತರ ಮೆಲ್ಲಗೆ ಎದ್ದರು. ಗವಿಯಂಥ ಸುರಂಗದೊಳಗೆ ಕಗ್ಗತ್ತಲು. ಯಾರು ಎಲ್ಲಿ ಬಿದ್ದರು ಎನ್ನುವುದೇ ಇಬ್ಬರಿಗೂ ಅಂದಾಜಿಲ್ಲ. ಕೆಲವೇ ಗಜಗಳ ದೂರದಲ್ಲಿ ಬಿದ್ದಿದ್ದ ಅವರಿಬ್ಬರಿಗೂ ಒಬ್ಬರನ್ನೊಬ್ಬರು ಪತ್ತೆಹಚ್ಚಬೇಕಾದರೆ ಒಂದು ಗಂಟೆಯ ಮೇಲಾಯ್ತು. ಇಬ್ಬರೂ ಒಬ್ಬರನ್ನೊಬ್ಬರು ಹಿಡಿದುಕೊಂಡು ಮೆಲ್ಲಗೆ ಹೆಜ್ಜೆ ಇಡುತ್ತ ರೈಲು ಕಂಬಿಯಮೇಲೆ ಕುಳಿತುಕೊಂಡು ತಮಗೆ ಎಲ್ಲೆಲ್ಲಿ ಗಾಯಗಳಾಗಿವೆ ಎಂದು ಅಂದಾಜು ಮಾಡಿದರು.

"ಗೌರಿ" ಎಂದು ಕೊಂಚ ಗಟ್ಟಿಯಾಗಿ ಕರೆದ ಸುರೇಶ. ಸುರೇಶ ಇನ್ನೂ ಹೇಳಿ ಮುಗಿಸಿಲ್ಲ ಮುಂದಿನ ಮಾತುಗಳೊಂದೂ ಕಿವಿಗೆ ಬೀಳದಂತೆ ಸುರಂಗದೊಳಗಿನ ಪ್ರತಿಧ್ವನಿ ನೀಳ ಸಿಂಹ ಘರ್ಜನೆಯ ರೀತಿ ಮತ್ತೆ ಕಿವಿಗೆ ಹಿಮ್ಮರಳಿ ಅಪ್ಪಳಿಸಿತು 'ಗೌರಿ ಗೌರಿ ಗೌರಿ ಗೌರಿ ರಿ ರಿ ರಿ' ಎಂದು ಮೊಳಗಿ ಮುಗಿಯಲು ಅವಾಕ್ಕಾದ ಇಬ್ಬರೂ ತುಂಬ ಹೊತ್ತೇ ಕಾಯಬೇಕಾಯ್ತು. ತಮ್ಮ ಗಾಯದ ನೋವು, ತಮ್ಮ ಸದ್ಯದ ಚಿಂತಾಜನಕ ಸ್ಥಿತಿ ಎಲ್ಲ ಮರೆತ ಇಬ್ಬರೂ 'ಗೌರಿ, ಸುರೇಶ' ಎಂದು ಒಬ್ಬರ ಹೆಸರನ್ನು ಒಬ್ಬರು ಅನೇಕಬಾರಿ ಕರೆಯುತ್ತಾ ಕಿರುಚಿದರು. ಸುರಂಗದೊಳಗೆ ಒಂದು ಶಬ್ದ ಪ್ರಳಯವೇ ಸಂಭವಿಸಿತು. ಸುರಂಗದೊಳಗೆ ಸಿಕ್ಕಿಕೊಂಡ ಶಬ್ದ ತರಂಗಗಳು ಪಕ್ಕದ ಬಂಡೆ ಕಲ್ಲುಗಳಿಂದೆಲ್ಲ ಅಪ್ಪಳಿಸಿ ಮಾರ್ದನಿಗೈಯ್ಯುತ್ತ ಇಡೀ ಬಿರುಮಲೆಯ ಶಿಖರವನ್ನೇ ಅಲ್ಲಾಡಿಸುವಂತೆ ತೋರಿತು. ಶಬ್ದ ತರಂಗಗಳ ಸಂಘಟ್ಟನೆಯಿಂದ ಹೊರಗಿನ ಗಿರಿ ಶಿಖರಗಳ ಕಲ್ಲುಗಳೆಲ್ಲ ಉರುಳತೊಡಗಿದುವೇನೋ ಎಂದು ಇಬ್ಬರಿಗೂ ಒಮ್ಮೆಲೆ ಗಾಬರಿಯಾಗಿ ಕಿರುಚಾಟ ನಿಲ್ಲಿಸಿ ಸುಮ್ಮನಾದರು.

"ಅಲ್ಲ ಕಣೆ, ಬರಿ ಬಾಯಿ ಮಾತಿನ ಮೇಲೆ ನನ್ನ ಸುರೇಶ ಅಂತ ತಿಳುಕೊಂಡು ಹಾರಿದೀಯಲ್ಲ! ಬೆಳಗಾದಾಗ ಇನ್ನ್ಯಾವನೋ ಆಗಿದ್ದರೆ ಏನ್ಮಾಡ್ತಿ" ಸುರೇಶ ಕೊಂಚ ಗೆಲುವಿನಿಂದ ತಮಾಷೆ ಮಾಡಿದ.

"ಹಾರಿದೋಳು ಗೌರಿ ಅಂತ ತಿಳುಕೊಂಡಿದ್ದೀರಲ್ಲ ನೀವೆಂಥ ಮುಠ್ಠಾಳರು. ಬೆಳಗ್ಗೆ ನೋಡಿದಾಗ ಇನ್ನ್ಯಾವಳೋ ಇದ್ದರೆ"

"ಒಳ್ಳೆಯದೇ ಆಯ್ತಂತ ಅನ್ನಿಸಬಹುದೋ ಏನೋ! ಅದಿರಲಿ ಗೌರಿ, ಇಲ್ಲಿ ಕುಳಿತಿದ್ದರೆ ನಾನು ಯಾರಂತ ನೀನೂ, ನೀನು ಯಾರಂತ ನಾನೂ ಎಂದೆಂದಿಗೂ ಪತ್ತೆ ಹಚ್ಚೋದು ಸಾಧ್ಯವಿಲ್ಲ ಅನ್ನೋದು ಮರ್ತಿದೀಯ! ಈಗ ನಾವಿರೋದು ಸುರಂಗದ ಒಳಗಡೆ. ಇಲ್ಲಿ ಎಂದೂ ಬೆಳಗಾಗೋದೇ ಇಲ್ಲ ಅನ್ನೋದು ಗೊತ್ತ? ಹುಚ್ಚಿ! ಈಗ ಬಿರುಮಲೆ ಪರ್ವತದ ಹೊಟ್ಟೆಯೊಳಗೆಲ್ಲೋ ಮಧ್ಯೆ ಇದ್ದೀವಿ. ನಮ್ಮ ತಲೆ ಮೇಲೆ

ಕೋಟಿಗಟ್ಟಲೆ ಟನ್ನು ಕಗ್ಗಲ್ಲು ಕೂತಿದೆ! ರೈಲು ಯಾವ ದಿಕ್ಕಿಗೆ ಹೋಯ್ತನ್ನೋದನ್ನು ಚೆನ್ನಾಗಿ ಜ್ಞಾಪಕ ಇಟ್ಟುಕೋ. ಈ ಕತ್ತಲಲ್ಲಿ ದಿಕ್ಕು ತಪ್ಪಿದರೆ ವಾಪಾಸು ಹೋಗ್ತಿದ್ದೇವೋ ಮುಂದುವರೀತಿದ್ದೇವೋ ಅನ್ನೋದು ಸಹ ಗೊತ್ತಾಗೋದಿಲ್ಲ.''

ಕೊಂಚವೇ ಗಟ್ಟಿಯಾಗಿ ಮಾತಾಡಿದರೂ ಮಾರ್ದನಿ ಪ್ರಾರಂಭವಾಗುತ್ತಿದ್ದ ಸುರಂಗದಲ್ಲಿ ಪಿಸುಮಾತಿನಲ್ಲಿ ಅವರಿಬ್ಬರೂ ಸಂಭಾಷಿಸುತ್ತಿದ್ದರು. ರೈಲಿನಿಂದ ಯಾಕೆ ಜಿಗಿಯಬೇಕಾಯ್ತು ಎಂದು ಹೇಳುವುದಾಗಲೀ ಕೇಳುವುದಾಗಲಿ ಮಾಡದೆ, ''ಅಲ್ರೀ ಈ ಸುರಂಗದೊಳಗೆ ಹುಲಿ ಸಿಂಹ ಮನೆ ಮಾಡಿಕೊಂಡಿರೋಲ್ಲವೇನ್ರಿ?'' ಎಂದು ಪ್ರಶ್ನಿಸಿದಳು ಗೌರಿ.

''ಹುಲಿ ಸಿಂಹ ಇದ್ರೇನಂತೆ! ನಾವಿಬ್ಬರೂ ಗಟ್ಟಿ ನಾಯಿತರ ಭೌ ಭೌ ಅಂತ ಬೊಗಳಿದರೆ ಸಾಕು ಒಂದು ಸಾವಿರ ನಾಯಿ ಬೊಗಳಿದ ಹಾಗಾಗುತ್ತೆ. ಹುಲಿ ಸಿಂಹ ಸತ್ವೋ ಕೆಟ್ವೋ ಅಂತ ಓಡೋಗ್ತವೆ.''


'' ಕರೆಕ್ಟ್ ನೀವು ಹೇಳೋದು'' ಎಂದು ಒಂದು ಸಾರಿ ಭೌಭೌ ಎಂದು ಗಟ್ಟಿಯಾಗಿ ನಾಯಿತರ ಗೌರಿ ಕೂಗಿದಳು. ಸುರಂಗ ಒಂದು ಸಾವಿರ ನಾಯಿಗಳಂತೆ ಬೊಗಳಿ ಉತ್ತರಿಸಿತು.

''ಯಾಕೇ, ನಿನಗೆ ಕಾಡುಪ್ರಾಣಿಗಳ ಹೆದರಿಕೆ ಏನೆ? ಬೊಗಳಿ ರಿಹರ್ಸಲ್ ತಗೋತಾ ಇದೀಯಲ್ಲ''

''ಖಂಡಿತ ಇಲ್ಲ ಕಣ್ರಿ. ಆ ಹಾಳು ಊರಿಗಿಂತ ಕಾಡು ಸಾವಿರಪಾಲಿಗೆ ವಾಸಿ. ಯಾರನ್ನೂ ಯಾರೂ ನಂಬೋಹಂಗೆ ಇಲ್ಲವಲ್ರೀ ಊರಲ್ಲಿ. ನಂಗಂತೂ ಒಂದೇದಿನಕ್ಕೆ ಸಾಕಾಗಿಹೋಯ್ತು. ಈ ಸುರಂಗದೊಳಗೇ ಬೇಕಾದರೆ ಇದ್ದುಬಿಡ್ತೀನಿ''

''ಈಗ ಅವರೆಲ್ಲಾ ಕಾಡೊಳಗು ಶುರು ಮಾಡ್ಕೊಂಡಿದಾರೆ! ಏಳು ಏಳು. ನಡಿ. ಈ ಸುರಂಗ ಸುಮಾರು ದೂರ ಇದೆ. ಆ ಕತೇನೆಲ್ಲ ನಿನಗೆ ನಡೀತಾ ಹೇಳ್ತೀನಿ'' ಎಂದು ಸುರೇಶ ಕತ್ತಲಲ್ಲಿ ಪಕ್ಕ ಕುಳಿತಿದ್ದ ಗೌರಿಯನ್ನು ತಡವಿ ಹುಡುಕಿ ಎಬ್ಬಿಸಿದ. ಇಬ್ಬರೂ ಎದ್ದು ತಡವರಿಸುತ್ತಾ ಎಡವುತ್ತಾ ರೈಲು ಹಳಿಗಳ ನಡುವೆ ಸುರಂಗದ ಕತ್ತಲಲ್ಲಿ ನಡೆದು ಹೊರಟರು.

# ಅಶರೀರ ವಾಣಿ - ೨೬



ಕೈ ಕೈ ಹಿಡಿದುಕೊಂಡು ನಡೆಯುತ್ತಿದ್ದರೂ ಮೌನವಾಗಿ ನಡೆಯುತ್ತಿದ್ದರಿಂದ ಅವರಿಬ್ಬರಿಗೂ ಏನೋ ಒಂದು ರೀತಿಯ ಏಕಾಂಗಿತನ ಬಾಧಿಸತೊಡಗಿತು. ಮಾತು ಕತೆಯ ಸಂವಾದ ಇಲ್ಲದಿದ್ದರೆ ಮೈಗೆ ಮೈ ತಾಗಿದ್ದರೂ ಅದು ಸಜೀವ ಸಾನ್ನಿಧ್ಯವಾಗುವುದಿಲ್ಲವೆಂದು ಕಾಣುತ್ತದೆ. ಸುರಂಗದ ಕತ್ತಲಲ್ಲಿ ಕೊಂಚ ದೂರ ನಡೆದಮೇಲೆ ಮಾತಾಡದೆ ನಡೆಯುವುದು ಬೇಸರವಾಗಿ ಗೌರಿ ಸುರೇಶನ ಬಳಿ ಆ ಕಡತದಲ್ಲಿ ಅಷ್ಟೊಂದು ಅಮೂಲ್ಯವಾದದ್ದು ಇರುವುದಾದರೂ ಏನು ಎಂದು ಕೇಳಿದಳು

''ಅಮೂಲ್ಯವೋ ಅಲ್ಲವೋ ಹೇಗೆ ಹೇಳಲಿ ಗೌರಿ? ಒಟ್ಟಿನಲ್ಲಿ ಬೆಳಗಿನಿಂದ ನಡೆದ ಅನೇಕ ಘಟನೆಗಳ ಅರ್ಥ ಅದನ್ನು ಓದಿದಾಗ ಹೊಳೆಯಿತೆಂದಷ್ಟೆ ಹೇಳಬಹುದು! ಅದನ್ನು ಓದಿದಾಗ ನನಗೆ ಹೊಳೆದಿದ್ದು, ಅದರ ಮುಖಾಂತರ ಬೆಳಗಿನಿಂದ ನಡೆದದ್ದನ್ನು ನಾನು ಅರ್ಥ ಮಾಡಿಕೊಂಡಿರುವ ರೀತಿ, ನಿನಗೆ ಹೇಳ ಬಲ್ಲೆ. ರೈಲುಗಾಡಿಯಲ್ಲಿ ಅದನ್ನು ರಾಜಪ್ಪನಿಂದ ತಗೊಳ್ಳುವಾಗ ನನಗೆ ಅದು ತೀರಾ ಅನರ್ಘ್ಯ ಅನ್ನಿಸಿತ್ತು. ಈಗ ಈ ಸುರಂಗದ ಕತ್ತಲಲ್ಲಿ ನಡೆಯುತ್ತಾ ಯೋಚಿಸಿದರೆ ಇಷ್ಟೆಲ್ಲಾ ಪಾಡು ಪಡುವಷ್ಟು ಅದು ಅಮೂಲ್ಯವಾದುದ್ದೇ! ಎಂದು ಸಂಶಯವಾಗುತ್ತೆ. ಕೈಯ್ಯಲ್ಲಿದ್ದ ದುಡ್ಡು ಪೋಲು ಮಾಡಿದೆವಲ್ಲಾ ಅಂತ ನಿನಗೇನೂ ಬೇಸರವಿಲ್ಲಷ್ಟೆ?''

''ನೋಡ್ರಿ, ನನ್ನ ಕೈಯ್ಯಲ್ಲಿದ್ದ ಆ ಶನಿ ದುಡ್ಡಿನ ಬಗ್ಗೆ ಮಾತ್ರ ನನಗೆ ಯಾವ

ಮೋಹವೂ ಇರಲಿಲ್ಲ. ಅದಕ್ಕೇ ನಾನು ನೀವು ಈ ಕಡತ ಕೊಳ್ಳೋಣವ? ಅಂತ ಹೇಳುತ್ತಿದ್ದ್ಹಾಗೇ ಅದನ್ನು ಅವರಿಗೆ ದಾಟಿಸಿದ್ದು. ನನ್ನ ಜೀವಮಾನದಲ್ಲಿ ಯಾವತ್ತೂ ನನಗೆ ದುಡ್ಡಿನ ಬಗ್ಗೆ ಇವತ್ತು ಆದಷ್ಟು ಬೇಸರ ಆಗಿರಲಿಲ್ಲ. ನೀವು ಅದನ್ನು ತೆಗೆದು ರೈಲು ಕಿಟಕಿಯಿಂದ ಹೊರಕ್ಕೆ ಕಮರಿಗೆ ಬಿಸಾಕು ಅಂತ ಹೇಳಿದ್ದರೂ ಅದನ್ನು ಎಸೆದುಬಿಡುತ್ತಿದ್ದೆ''

''ಹಾಗಾದರೆ ಎಸೆದೇ ಬಿಡಬೇಕಿತ್ತು. ಮತ್ಯಾಕೆ ಕೈಯ್ಯಲ್ಲಿಟ್ಟು ಕೊಂಡು ಇನ್ನೊಂದುಸಾರಿ ಎಣಿಸಲ? ಅಂತ ಕೇಳಿದ್ದು'' ಎಂದು ಸುರೇಶ ತಮಾಷೆ ಮಾಡಿದ.

''ಹೋಗ್ರಿ! ತಮಾಷೆ ಮಾಡ್ತಿದೀರ. ಅದ್ರಾಗೆ ನಮ್ಮದೊಂದಷ್ಟು ದುಡಿದ ದುಡ್ಡೂ ಇರಲಿಲ್ಲವ! ಹಂಗಾಗಿ ಎಸಿಯೋದಕ್ಕೆ ಮನಸ್ಸು ಬರ್ಲಿಲ್ಲ ಅಷ್ಟೆ. ಅದು ಹೋಯ್ತಲ್ಲಾಂತ ಹೊಟ್ಟೆ ಉರ್ಕೊಳೋದಕ್ಕೆ ನಾನೇನು ಧನ ಪಿಶಾಚಿ ಅಂತ ತಿಳುಕೊಂಡಿದೀರ?'' ಎಂದು ಗೌರಿ ಸಿಟ್ಟು ಬಂದವಳಂತೆ ಸುರೇಶನನ್ನು ಕತ್ತಲಲ್ಲೇ ತಳ್ಳಿದಳು.

''ಅಯ್ಯೋ, ತಳ್ಳಬೇಡವೆ ಮಾರಾಯ್ತಿ! ನಾವಿಬ್ಬರೂ ಒಂದು ಗಜ ಅತ್ಲಾಗಿತ್ಲಾಗಾದರೆ ಮತ್ತೆ ಮುಂದಿನ ಜನ್ಮದಲ್ಲೇ ಒಬ್ಬರ ಮುಖ ಒಬ್ಬರು ನೋಡೋದು'' ಎಂದು ಸುರೇಶ ಗೌರಿಗೆ ಆಕ್ಷೇಪಿಸಿದ.

ಗೌರಿ ಆದನ್ನು ರಾಜಪ್ಪನಿಗೆ ಬಲಾತ್ಕಾರವಾಗಿ ಕೊಟ್ಟು ಅವನ ಕಡತ ತಗೊಂಡಿದ್ದೇ ಸ್ವತಸ್ಸಿದ್ಧ ಪ್ರಮಾಣವಾಗಿರುವಾಗ ಸುರೇಶನಿಗೆ ಗೌರಿ ಹೇಳಿದ್ದರಲ್ಲಿ ಉತ್ಪ್ರೇಕ್ಷೆ ಇದೆಯೆಂದು ಅನ್ನಿಸಿರಲಿಲ್ಲ. ಸುಮ್ಮನೆ ಹಾಗೆಂದು ಗೌರಿಗೆ ಚುಡಾಯಿಸಲು ತಮಾಷೆ ಮಾಡಿದ್ದನಷ್ಟೆ. ರೈಲು ಹಳಿಗಳ ಮೇಲಿನ ಜಲ್ಲಿ ತುಳಿಯುತ್ತ ಇಬ್ಬರೂ ಕೈ ಕೈ ಹಿಡಿದು ಮುಂದುವರಿದರು. ಸುರೇಶ ಕುಮರಿ ಸ್ಟೇಷನ್ನಿನಲ್ಲಿ ಕಾಫಿ ಕುಡಿಯುತ್ತ ತಾನು ಕೇಳಿದ ಸಂಭಾಷಣೆಯನ್ನೂ, ಕೆಂಪು ಮಫ್ಲರಿನ ಖದೀಮರ ಗ್ಯಾಂಗು ತಮ್ಮನ್ನು ಬೆನ್ನು ಹತ್ತಿ ಬಂದಿರುವುದನ್ನೂ ಗೌರಿಗೆ ಹೇಳಿದ.

''ಅಲ್ಲ ಕಣ್ರಿ, ಆ ಪೇಟೆ ಬೀದೀಲಿ ಹೇಳಿದ್ರಿ, ಸಧ್ಯಕ್ಕೆ ನಮಗೇನೂ ಅಪಾಯ ಇಲ್ಲಾಂತ. ಈಗ ನೋಡಿದರೆ ರೈಲು ಒಳಗೂ ನಮ್ಮನ್ನ ಬೆನ್ನು ಹತ್ತಿ ಬಂದಿದ್ದಾರೆ ಅಂತೀರಲ್ಲ! ಎಷ್ಟು ದಿನಾಂತ ಹೀಗೆ ಇವರಿಂದ ತಪ್ಪಿಸಿಕೊಂಡು ಓಡಿಹೋಗೋದಕ್ಕೆ ಆಗತ್ತೆ! ರೈಲೊಳಗೆ ಅಷ್ಟೊಂದು ಜನ ಇದ್ದರು. ಎಲ್ಲರಿಗೂ ಹೇಳಿ ಅವರನ್ನು ಹಿಡಿದು ರೈಲ್ವೆ ಪೋಲೀಸರಿಗೆ ಕೊಡೋದಕ್ಕೆ ಆಗ್ತಿರಲಿಲ್ಲವ? ಗೂಂಡಾಗಳ ವಿರುದ್ಧ ಜನಸಾಮಾನ್ಯರಿಗೆ ರಕ್ಷಣೇನೇ ಇಲ್ಲವ?''

''ಗೌರಿ, ಇಲ್ಲಿ ಎರಡು ಮೂರು ಸಮಸ್ಯೆ ಇದೆ. ಈಗ ನಾವು ಅವರನ್ನು ಹಿಡುಕೊಡೋದಕ್ಕೆ ಪೋಲೀಸರ ಹತ್ತಿರ ಹೋದೆವು ಅಂತಿಟ್ಟುಕೋ, ಜುಗಾರಿ ಕ್ರಾಸಿನಲ್ಲಿ ಮೊದಲನೇ ಸಮಸ್ಯೆ ಅಂದರೆ ಪೋಲೀಸರು ಯಾವ ಕಡೆಯವರು ಅನ್ನೋದು. ಎರಡನೆಯದು ಅವರು ಯಾವ ಕಡೆಗೂ ಸೇರಿಲ್ಲದವರಾದರೆ ನಾವು ಹೇಳಿದ್ದನ್ನು

ನಂಬುತ್ತಾರ? ಎನ್ನುವುದು. ನಮಗೇ ನಾವು ತಿಳಿದಿರುವುದು, ಯೋಚಿಸಿರುವುದು ಎಲ್ಲಾ ನಮ್ಮ ಭ್ರಾಂತಿಯೆ ಎನ್ನುವ ಅನುಮಾನ ಇರುವಾಗ ಮತ್ತೊಬ್ಬರನ್ನು ನಂಬುವ ಹಾಗೆ ಮಾಡುವುದು ಹೇಗೆ? ಮೂರನೆಯದು ನಮ್ಮ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಪ್ರಶ್ನೆ. ಈ ಖದೀಮರು ನಮ್ಮನ್ನು ಬೆನ್ನು ಹತ್ತಿರುವುದಕ್ಕೆ ನಾವು ತಿಳಿದಿರುವ ಕಾರಣವನ್ನು ಬಹಿರಂಗ ಪಡಿಸಲು ನಾವು ತಯಾರಿದ್ದೀವಾ ಎನ್ನುವುದು''

ಗೌರಿ ಚಕಿತಳಾಗಿ ''ಹಾಗೆಂದರೆ! ನಿಮ್ಮ ಮಾತು ಕೇಳಿದರೆ ನಾವೂ ಈ ಖದೀಮರ ಕೂಟದ ಸದಸ್ಯರು ಅನ್ನೋ ಅರ್ಥ ಬರುತ್ತಲ್ರೀ''ಎಂದಳು. ತಮ್ಮ ಸನ್ನಿವೇಶದ ಸಂಕೀರ್ಣತೆ ಸುರೇಶನಿಗೆ ತಿಳಿದಿರುವಷ್ಟು ಸ್ಪಷ್ಟವಾಗಿ ಅವಳಿಗೆ ಗೊತ್ತಿರಲಿಲ್ಲ.

ಸುರೇಶ ಬೆಳಗಿನಿಂದ ನಡೆದುದೆಲ್ಲದರ ವಿಶ್ಲೇಷಣೆ ಹೇಳಿ ಗುರುರಾಜ ಪಂಡಿತನ ದ್ವಿಸಂಧಾನ ಕಾವ್ಯದ ಮತ್ತೊಂದು ಅರ್ಥ ತಾನು ಪತ್ತೆಮಾಡಿದುದನ್ನೂ, ಅದು ಜುಗಾರಿ ಕ್ರಾಸಿನ ಕಗ್ಗಾಡಿನೊಳಗೆ ಎಲ್ಲೋ ಕೆಂಪು ರತ್ನಗಳು ದೊರೆಯುವುದನ್ನು ನಿರ್ದೇಶಿಸಿರುವ ನೀಲನಕ್ಷೆ ಎನ್ನುವ ಸಂಗತಿಯನ್ನು ಹೇಳಿದ.

''ಹೌದೇನ್ರಿ? ಸರಿಯಾಗಿ ಅರ್ಥ ತಿಳುಕೊಂಡು ಹೇಳ್ತಿದೀರೋ ಸುಮ್ಮನೇ ಅಂದಾಜಿನ ಮೇಲೆ ಹೇಳಿ ನನ್ನ ತಲೆ ಕೆಡಿಸ್ತಿದೀರೋ'' ಎಂದು ಗೌರಿ ಪರಮಾಶ್ಚರ್ಯದಿಂದ ಕೇಳಿದಳು. ಅವಳ ಕಣ್ಣುಗಳಲ್ಲಿ ಶೇಷಪ್ಪನ ಹತ್ತಿರ ನೋಡಿದ ಕೆಂಪು ರತ್ನದ ದಿವ್ಯ ಪ್ರಭೆ ಮಿನುಗತೊಡಗಿದ್ದನ್ನು ಸುರೇಶ ಆ ಕತ್ತಲಲ್ಲೂ ಸುಲಭವಾಗಿ ಊಹಿಸಬಲ್ಲವನಾಗಿದ್ದ.

''ನನಗೂ ನಿನ್ನಷ್ಟೇ ಅನುಮಾನ ಇದೆ ಗೌರಿ! ಆದರೆ ನಮಗೆ ಅಪಾಯ ಇರುವುದು ಖಾತ್ರಿಯಾದ ಹಾಗೂ, ಈ ಖದೀಮರು ನಮ್ಮನ್ನು ಬೆನ್ನಟ್ಟಿದ ಹಾಗೂ, ನನಗೆ ಆ ದ್ವಿಸಂಧಾನ ಕಾವ್ಯದ ಇನ್ನೊಂದು ಅರ್ಥ ಸ್ಪಷ್ಟವಾಗುತ್ತ ಇದೆ''

''ಹಂಗಾದರೆ ನೀವು ಇದನ್ನು ಯಾರಿಗೂ ಹೇಳದಿದ್ದುದು ಒಳ್ಳೇದೇ ಆಯ್ತು!'' ಗೌರಿ ತನ್ನಲ್ಲಿ ಹೆಡೆ ಎತ್ತುತ್ತಿದ್ದ ಆಸೆಯನ್ನು ಮುಚ್ಚಿಡುವ ಯಾವ ಪ್ರಯತ್ನವನ್ನೂ ಮಾಡದೆ ಹಿಗ್ಗಿನಿಂದ ''ಸತ್ರೂ ಚಿಂತೆ ಇಲ್ಲ, ಇದರ ಹಿಂದಿನ ರಹಸ್ಯ ಏನಂತ ತಿಳಿದುಕೊಳ್ಳಬೇಕು ಅಂತ ಮಾತಾಡಿದ್ದೆವಲ್ಲ'' ಎಂದಳು.

''ಏನು ಒಳ್ಳೇದೋ! ರೈಲಿನಿಂದ ಸುರಂಗದೊಳಕ್ಕೆ ಹಾರಿಕೊಳ್ಳಬೇಕಾದ ಹಣೆಬರಹ ನೋಡಿದರೆ ಯಾರಿಗೆ ಬೇಕಿತ್ತು ಈ ಎಲ್ಲ ಗೋಳು ಅನ್ನಿಸುತ್ತದೆ. ಅದಿರ್ಲಿ ನಿನಗೇನು ಆ ಕೆಂಪು ಕಲ್ಲು ಪ್ರಾಣಕ್ಕಿಂತ ಮುಖ್ಯ ಅನ್ನಿಸುತ್ತೇನೆ?''

''ಹಾಗಲ್ಲ ಕಣ್ರಿ. ಯಾವ ಸಾಹಸಾನೆ ಆಗಲಿ, ಅದರಲ್ಲಿ ಸ್ವಲ್ಪವಾದರೂ ರಿಸ್ಕ ಇದ್ದರೆ ತಾನೆ ನಮಗೆ ಅದು ಮುಖ್ಯ ಅಂತ ಅನ್ನಿಸೋದು. ಸುಮ್ಮನೇ ಹೊಳೆ ಬದಿಯಲ್ಲಿದ್ದ ಕಲ್ಲು ಹೆರಕೋದಾದರೆ ಯಾರಿಗೆ ಕುತೂಹಲ ಇರುತ್ತೆ? ಈಗ ನೀವೆ ಹೇಳಲಿಲ್ವೆ ಈ ಖದೀಮರು ನಮ್ಮನ್ನು ಮುಗಿಸಬೇಕಂತ ಬೆನ್ನು ಹತ್ತಿದ ಹಾಗೂ ನಿಮ್ಮ ಊಹೆ ಸರಿ ಅಂತ ನಿಮಗೆ ನಂಬಿಕೆ ಬರ್ತಿದೆ ಅಂತ. ಹಂಗೇ ಇದೂನೂ. ಈ ಕೆಂಪು ಕಲ್ಲಿಗಾಗಿ

ನೂರಾರು ಜನ ಪ್ರಾಣದ ಹಂಗು ಬಿಟ್ಟು ಕಾಡು ಸುತ್ತಿರೋದರಿಂದಲೆ ರಾಜಪ್ಪನ ಹತ್ತಿರ ನೀವು ಒಂದೂವರೆ ಲಕ್ಷ ಕೊಟ್ಟು ಕಡತ ತಗೊಂಡಿದ್ದಲ್ಲವ?''

''ಈ ಕಗ್ಗತ್ತಲ ಗವಿಯೊಳಗೆ ಹೇಳೋದು ಸುಲಭ ಗೌರಿ. ಅದರೆ ನಿಜಕ್ಕೂ ಪ್ರಾಣಕ್ಕೆ ಬಂದಾಗ ನಮಗೆ ಹೇಗನ್ನಿಸುತ್ತೋ ಯಾರಿಗೆ ಗೊತ್ತು!

''ಹಾಗಾದರೆ ರಾಜಪ್ಪನಿಗೆ ಈ ವಿಚಾರ ಚೂರೂ ಗೊತ್ತಿಲ್ಲವ?''

''ಅವನ ವರ್ತನೆ ನೋಡಿದರೆ ಅವನಿಗೆ ಈ ದ್ವಿಸಂಧಾನ ಕಾವ್ಯದ ಇನ್ನೊಂದು ಅರ್ಥ ಗೊತ್ತಿರುವಹಾಗೆ ಕಾಣಲ್ಲ. ಆದರೆ ಅವನು ಆ ಕಡತ ಕೈಲಿ ಹಿಡುಕೊಂಡು ಇಲ್ಲಿ ಅಡ್ಡಾಡುತ್ತ ಇರುವುದು ನೋಡಿದರೆ ಏನೇನೋ ಸಂದೇಹಗಳು ಅನುಮಾನಗಳು ಉಂಟಾಗ್ತವೆ. ಅ ಕೆಂಪು ಮಫ್ಲರಿನ ಖದೀಮರು ನಾವು ರೈಲು ಹತ್ತಿದ್ದನ್ನು ಪತ್ತೆ ಮಾಡಿಕೊಂಡು ನಮ್ಮ ಬೆನ್ನು ಹತ್ತಿರಬೇಕಾದರೆ ಇವನೂ ಯಾಕೆ ಪತ್ತೆ ಮಾಡಿಯೇ ನಮ್ಮ ಗಾಡಿಗೆ ಹತ್ತಿರಬಾರದು''

ಕತ್ತಲಲ್ಲಿ ನಡೆಯುತ್ತಾ ಅವರಿಗೆ ನಿಧಾನವಾಗಿ ಕಂಬಿಗಳ ನಡುವೆ ಹಾಕಿರುವ ಮರದ ಸ್ಲೀಪರಿಂದ ಸ್ಲೀಪರಿಗೆ ಧಾಪುಗಾಲಿಟ್ಟು ನಡೆಯುವುದು ಅಭ್ಯಾಸವಾಗಿ ಈಗ ಸರಸರ ನಡೆಯುತ್ತ ಎಷ್ಟೋ ದೂರ ಬಂದಿದ್ದರು. ಆದರೆ ಇಬ್ಬರೂ ಬೆಳಗಿನಿಂದ ತಮಗೆ ಸಂಭವಿಸಿದ ಅನುಭವಗಳನ್ನೂ ಜುಗೌರಿಕ್ರಾಸಿನ ಇತ್ಯೋಪರಿಗಳನ್ನೂ ಕುರಿತು ಗಾಢ ಚಿಂತನೆ ನಡೆಸುತ್ತಾ ಸಾಗಿದ್ದರಿಂದ ಅವರಿಗೆ ತಾವು ನಡೆದಿರುವ ದೂರವಾಗಲಿ, ನಡೆಯಬೇಕಾಗಿರುವ ದೂರವಾಗಲಿ ಮನಸ್ಸಿಗೆ ಬರಲೇ ಇಲ್ಲ. ಸುಮ್ಮನೆ ಕತ್ತಲಲ್ಲಿ ಅದೂ ಇದೂ ಮಾತಾಡುತ್ತ ನಡೆಯುತ್ತಲೇ ಇದ್ದರು. ಸುರಂಗದ ಕೊನೆ ಹತ್ತಿರ ಹತ್ತಿರವಾದಾಗ ಮಾತಾಡುತ್ತಿದ್ದ ಗೌರಿ ಒಮ್ಮೆಲೆ ಮಾತು ನಿಲ್ಲಿಸಿ ಶಬ್ದ ಮಾಡದೆ ನಿಂತಳು. ಏನೆಂದು ಕೇಳಬೇಕೆಂದು ಬಾಯಿ ಬಿಟ್ಟಿದ್ದ ಸುರೇಶನನ್ನು ತಟ್ಟಿ ಮಾತಾಡದಂತೆ ಸೂಚಿಸಿದಳು. ಇಬ್ಬರೂ ಉಸಿರನ್ನು ಸಹ ಜೋರಾಗಿ ಬಿಡದೆ 'ಗೌ' ಎನ್ನುತ್ತಿದ್ದ ಸುರಂಗದಲ್ಲಿ ಮೌನವಾಗಿ ನಿಂತು ಆಲಿಸಿದರು.

ಘನೀಭೂತವಾದಂತಿದ್ದ ಮೌನದಲ್ಲಿ ಅಲ್ಲಲ್ಲಿ ಸುರಂಗದ ಕಲ್ಲು ಗೋಡೆಗಳಿಂದ ಬೀಳುತ್ತಿದ್ದ ನೀರಿನ ಹನಿಗಳ ಟುಮುಕ್ ಟುಮುಕ್ ಸದ್ದಲ್ಲದೆ ಬೇರಾವ ಸದ್ದೂ ಕೇಳಿಬರಲಿಲ್ಲ.

''ಯಾಕೆ? ಏನಾದರೂ ಸದ್ದು ಕೇಳಿತ?''ಎಂದು ಸುರೇಶ ಕೇಳಿದ.

''ಯಾರೋ ಇಲ್ಲೂ ನಮ್ಮನ್ನು ಹಿಬಾಲಿಸುತ್ತಿದ್ದಾರೆ ಅನ್ನಿಸುತ್ತೆ. ನಾನು ಸ್ಪಷ್ಟವಾಗಿ ನಿಟ್ಟುಸಿರಿನ ಸದ್ದು ಕೇಳಿದ ಹಾಗಾಯ್ತು. ಇದು ನನ್ನ ಭ್ರಾಂತಿಯಂತೂ ಅಲ್ಲವೇ ಅಲ್ಲ. ನಿಮಗೆ ಕೇಳಿಸಲಿಲ್ಲವ?''

''ಖಂಡಿತ ಇಲ್ಲ. ನೀನು ಮಾತಾಡುತ್ತಿದ್ದುದರಿಂದ ನಿನ್ನ ಮಾತೊಂದನ್ನು ಬಿಟ್ಟರೆ ನನಗೆ ಮತ್ತೇನೂ ಕೇಳಿಸಿಯೇ ಇಲ್ಲ. ಈ ಸುರಂಗದೊಳಗೆ ಯಾವಾದರೂ ಹುಲಿ

ಕರಡಿ ತೋಳಗಳು ಹೊಕ್ಕೊಂಡಿರಬಹುದೇ ಹೊರತು ಮನುಷ್ಯಮಾತ್ರದವರು ಇದರೊಳಗೆ ನಮ್ಮನ್ನು ಹಿಂಬಾಲಿಸುವುದನ್ನು ನೀನು ಊಹಿಸುವುದೂ ಬೇಡ. ನಡಿ ನಡಿ'' ಎಂದು ಮುಂದುವರಿಯಲು ಸುರೇಶ ಗಡಿಬಿಡಿ ಮಾಡಿದ.

ಮತ್ತೆ ಇಬ್ಬರೂ ಮಾತಾಡುತ್ತ ನಡೆಯತೊಡಗಿದರು. ಸುರೇಶ ಗುರುರಾಜ ಕವಿಯ ದ್ವಿಸಂಧಾನ ಕಾವ್ಯದ ಇನ್ನೊಂದು ಅರ್ಥ ಕಂಡು ಹಿಡಿದ ಬಗೆಯನ್ನು ವಿವರಿಸುತ್ತಿದ್ದಾಗ ಆ ಕಡತದಲ್ಲಿ ತೆಗೆದುಹಾಕಿರುವುದು ಯಾವ ಪದ ಎಂದು ಗೌರಿ ಕೇಳಿ, ಅದನ್ನು ಮಾತ್ರ ಈಗ ಕೇಳಬೇಡವೆಂದು ಸುರೇಶ ಹೇಳಿದ್ದರಿಂದ ಸುರೇಶನ ಬಗ್ಗೆ ಗೌರಿಗೆ ಸಿಟ್ಟು ಬಂದು, ಆ ವಾಗ್ವಾದದಲ್ಲಿ ಅವರಿಬ್ಬರಿಗೂ ಸುರಂಗದೊಳಗೆ ಯಾರೋ ತಮ್ಮನ್ನು ಹಿಂಬಾಲಿಸುತ್ತಿರಬಹುದೆಂದಿದ್ದ ಗುಮಾನಿ ಮರೆತೇ ಹೋಯ್ತು.

ಗೌರಿಗೆ ಇದ್ದಕ್ಕಿದ್ದಹಾಗೆ ಅನಾಥಳಾದಂತೆ ಅನ್ನಿಸಿತು. ಕಣ್ಣುಕಾಣದ ಕಗ್ಗತ್ತಲಲ್ಲಿ ಸುರೇಶನೊಡನೆ ರೈಲಿನಿಂದ ಹಾರಿದರೂ ಈಗ ಕಡತದಲ್ಲಿ ಕಳೆದು ಹೋಗಿರುವ ಪದ ಯಾವುದು ಹೇಳೆಂದರೆ ತಿಳಿಸದೆ ಅದನ್ನು ಮಾತ್ರ ಗುಟ್ಟು ಮಾಡುತ್ತಿದ್ದಾನಲ್ಲ! ಹಾಗಾದರೆ ನಾನು ಈ ಪ್ರಪಂಚದಲ್ಲಿ ಯಾರನ್ನು ನಂಬುವುದು! ಇದ್ದಕ್ಕಿದ್ದಹಾಗೆ ಎಲ್ಲರೂ ಕೈಬಿಟ್ಟಹಾಗೆನ್ನಿಸಿ ದುಃಖವಾಗತೊಡಗಿತು.

''ನಿಮಗೆ ನನ್ನ ಹತ್ತಿರ ಗುಟ್ಟು ಮಾಡುವುದಿದೆ ಅಂತ ಗೊತ್ತಿರಲಿಲ್ಲ ಕಣ್ರಿ. ಯಾಕೋ ಹೊಸಬರ ತರ ಕಾಣ್ತಿದ್ದೀರ. ಸುರಂಗದ ಆಚೆತುದಿ ಬೆಳಕಿಗೆ ಹೋದಾಗ ನೀವು ಹೇಳಿದಹಾಗೆ ಬೇರೊಬ್ಬ ಇರ್ತಾನೋ ಏನೋ!'' ಎಂದು ಉಕ್ಕುತ್ತಿದ್ದ ದುಃಖ ಅದುಮಿಟ್ಟುಕೊಂಡು ಹೇಳಿದಳು. ಅವಳಿಗೆ ಹಾಗೆನ್ನಿಸಬಹುದೆಂದು ಸುರೇಶನಿಗೆ ಮೊದಲೇ ಅನ್ನಿಸಿತ್ತು. ಸುರಂಗದ ಕಗ್ಗತ್ತಲಲ್ಲಿ ಅವಳನ್ನು ತಬ್ಬಿಕೊಂಡು ''ನಿನ್ನ ಹತ್ತಿರ ಮುಚ್ಚಿಡ್ತಾ ಇಲ್ಲ ಕಣೆ. ನಿನ್ನ ಒಳ್ಳೇದಕ್ಕಾಗೇ ಈಗ ನಿನಗೆ ಅದನ್ನ ಹೇಳ್ತಾ ಇಲ್ಲ. ಬೆಳಗಿನಿಂದ ನನ್ನ ಜೊತೆ ನೀನು ಪಟ್ಟಿರೋ ಪಾಡು ನೋಡಿ ನನಗೂ ಬೇಜಾರಾಗಿಹೋಗಿದೆ. ಈಗ ಅದನ್ನ ಯಾರಿಗೆ ತಿಳಿಸೋದೂ ತುಂಬ ಅಪಾಯ ಅನ್ನಿಸುತ್ತಾ ಇರೋದರಿಂದ ಹೇಳ್ತಿಲ್ಲ ಅಷ್ಟೆ. ಆ ಸುಡುಗಾಡು ಪದ ನಿನ್ನಿಂದ ಮುಚ್ಚಿಡೋ ಅಷ್ಟು ಅಮೂಲ್ಯವಾದದ್ದಾ ಹೇಳು? ಹೇಳದೆ ಏನು! ಖಂಡಿತ ಹೇಳುತ್ತೇನೆ. ಅಲ್ಲಿವರೆಗೆ ಸುಮ್ಮನಿರು'' ಎಂದು ಸಮಾಧಾನ ಮಾಡಿದ. ಗೌರಿಗೆ ಏನೋ ಒಂದು ಉದ್ದೇಶದಿಂದಲೇ ಸುರೇಶ ಸಧ್ಯಕ್ಕೆ ಹೇಳುತ್ತಿಲ್ಲ ಎಂದೆನ್ನಿಸಿದರೂ ಸಂಪೂರ್ಣ ಸಮಾಧಾನ ಆಯ್ತೆಂದು ಹೇಳುವುದು ಕಷ್ಟ. ಸುರೇಶ ಹೇಳುವಷ್ಟು ಅಪಾಯಕಾರಿಯೆ ಆ ಪದ! ಎಂದು ಯೋಚಿಸುತ್ತಾ ಮೆಲ್ಲನೆ ಮುಂದಕ್ಕೆ ಕಾಲು ಹಾಕಿದಳು. ''ನಮಗೆ ಆ ಪದ ಗೊತ್ತಿದೆ ಅನ್ನೋದು ಇತರರಿಗೆ ಗೊತ್ತಾದರೂ ನಮ್ಮ ಕಥೆ ಮುಗಿದ ಹಾಗೆ. ಅದಕ್ಕೋಸ್ಕರ ಸ್ವಲ್ಪ ತಡಕೋ. ಆಮೇಲೆ ಹೇಳೇ ಹೇಳ್ತೀನಿ.''ಎಂದು ಸುರೇಶ ನಡೆಯುತ್ತಾ ಇನ್ನಷ್ಟು ಅವಳ ಸಮಾಧಾನಕ್ಕೆ ಪ್ರಯತ್ನಿಸಿದ. ''ಅದನ್ನು ನನಗೆ ಹೇಳಿದರೆ ಅಕಸ್ಮಾತ್ ನಿಮಗೆ ಮರೆತುಹೋದರೆ ನನಗಾದರೂ ಜ್ಞಾಪಕ

ಇರುತ್ತಲ್ಲ. ಅ ಪದ ಯಾವುದೆಂದು ಗೊತ್ತಿಲ್ಲದೆ ಇದ್ದರೆ ಆ ಕಡತ ನಿಷ್ಪ್ರಯೋಜಕ ವಾಗುತ್ತಲ್ಲವ?'' ಎಂದು ಮತ್ತೂ ಗೌರಿ ಅದನ್ನೇ ಕೆದಕಿದಳು.

''ಅದನ್ನು ನಾನು ಮರೆಯುವುದು ಹೇಗೆ? ನಾನೇ ಯೋಚನೆಮಾಡಿ ಅದನ್ನು ಕಂಡು ಹಿಡಿದಿರಬೇಕಾದರೆ! ಅಲ್ಲದೆ ಅಕಸ್ಮಾತ್ ಅದನ್ನು ನಾನು ಮರೆತರೆ ಆಕಾಶ ಬಿದ್ದುಹೋಗುವುದೇನೂ ಇಲ್ಲ. ಅ ಕಡತ ತೆಗೆದು ದೋಣಿ ಹೊಳೆಗೆ ಎಸೆದು ನೆಟ್ಟಗೆ ಮನೆಗೆ ಹೋಗೋಣ. ನಿನಗೆ ನಿನ್ನ ಕೈಯ್ಯಲ್ಲಿದ್ದ ದುಡ್ಡಿನ ಕಂತೆ ಮೇಲೆ ಹೇಗೆ ರೇಜಿಗೆ ಹುಟ್ಟಿತ್ತೋ ಹಾಗೇ ನನಗೆ ಆ ಕಡತದ ಬಗ್ಗೆ ರೇಜಿಗೆಯಾಗಿದೆ''

''ಏನ್ರಿ ನಮ್ಮ ಜೀವಮಾನದಲ್ಲಿ ನಾವು ಊಹಿಸಲೂ ಸಾಧ್ಯವಾಗದಂಥ ಅವಕಾಶ ಸಿಕ್ಕಿರಬೇಕಾದರೆ ಅದನ್ನು ಬಿಡೋದಕ್ಕೆ ಮನಸ್ಸು ಬರುತ್ತ. ನೀವು ಹೇಳೋದೆಲ್ಲ ನಿಜ ಆಗಿದ್ದರೆ ಎಷ್ಟು ಚೆನ್ನಾಗಿರುತ್ತೆ''

''ನಿನಗೇನನ್ನಿಸುತ್ತದೆ? ನಿಜ ಅಂತ ಅನ್ನಿಸುತ್ತದೋ ಸುಳ್ಳು ಅನ್ನಿಸುತ್ತದೋ?'' ಎಂದು ಸುರೇಶ ಕೇಳಿದ.

ಗೌರಿ ಉತ್ತರಿಸಲು ತನಗೆ ಏನೆನ್ನಿಸುತ್ತದೆ ಎಂದು ತನ್ನ ಮನಸ್ಸನ್ನೆ ಅವಲೋಕನ ಮಾಡುತ್ತಾ ಇದ್ದಳು. ಅಷ್ಟರಲ್ಲಿ ಮೂರನೆಯದೊಂದು ಸ್ವರ ''ನಿಜ'' ಎಂದು ಹಿಂದಿನಿಂದ ಹೇಳಿದಂತಾಯ್ತು. ಗೌರಿ ಸುರೇಶ ಇಬ್ಬರೂ ಒಮ್ಮೆಲೆ ಬೆಚ್ಚಿಬಿದ್ದರು. ಅವರಿಗೆ ತಮ್ಮ ಕಿವಿಯನ್ನೇ ತಾವು ನಂಬಬೇಕೋ ಬಿಡಬೇಕೋ ಯೋಚನೆಯ್ಹಾಯ್ತು. ತಮ್ಮ ಮಾತಿನ ಪ್ರತಿಧ್ವನಿಯೇ ಸುರಂಗದೊಳಗೆ ಪ್ರತಿಫಲಿಸಿ ಆ ರೀತಿ ಕೇಳಿತೇನೋ ಎಂದೂ ಸಂಶಯವಾಯ್ತು.

ಕೊಂಚ ಹೊತ್ತು ಸಂಶಯಾಕುಲಿತರಾಗಿ ಆಲೈಸಿ, ಸುರೇಶ ಯಾರೂ ಇಲ್ಲವೆಂದು ತೀರ್ಮಾನಿಸಿ, ಅದನ್ನು ದೃಢಪಡಿಸಿಕೊಳ್ಳಲು ''ಯಾರದು?''ಎಂದು ಹಿಂದಕ್ಕೆ ತಿರುಗಿ ಸುರಂಗದೊಳಗೆ ಏಳುವ ಮಾರ್ದನಿಯನ್ನು ಮರೆತು ಕೂಗಿದ. ಸುರೇಶನ ದನಿ ಇಮ್ಮಡಿ ಗಟ್ಟಿಯಾಗಿ ಮಾರ್ದನಿಸಿ ಸುರಂಗದೊಳಗೆ ಹತ್ತುನಿಮಿಷ ಮೊಳಗಿ ತುಳುಕಿತು.

''ಯಾಕರೀ ಕೂಗಿಕೋತೀರ! ಕುಂಟರಾಮನ ಹೆಸರು ಕೇಳಿಲ್ಲವ? ನನ್ನ ಫೋಟೋ ನೂರು ರೂಪಾಯಿ ನೋಟಿನ ಮೇಲೆಲ್ಲ ಪ್ರಿಂಟಾಗಿರತ್ತೆ! ನೋಡಿಲ್ಲವ? ಯಾವೂರಿನೋರು ನೀವು?'' ಎಂದು ಒಂದು ದನಿ ಸುರಂಗದ ಕತ್ತಲಲ್ಲಿ ಕ್ಷೀಣವಾಗಿ ಕೇಳಿಸಿತು. ದೇವಪುರದ ಬೀದಿಗಳಲ್ಲಿ ಬಾಯಿಗೆ ಬಂದಹಾಗೆ ಕೂಗುತ್ತ ದೊಡ್ಡ ಪಿಡುಗಾಗಿದ್ದ ಈ ಹುಚ್ಚನ ಬಗ್ಗೆ ಸುರೇಶ ಗೌರಿ ಇಬ್ಬರಿಗೂ ಏನೂ ಗೊತ್ತಿರಲಿಲ್ಲ. ಆದರೆ ಅವನ ಮಾತಿನ ಪರಿಯಿಂದ ಯಾರೋ ಕೊಂಚ ತಲೆ ಕೆಟ್ಟವನಿರಬೇಕೆಂಬುದಂತೂ ಸ್ಪಷ್ಟವಾಯ್ತು. ಈ ಸುರಂಗದೊಳಗೆ ಸೇರಿಕೊಂಡು ಈತ ಏನು ಮಾಡುತ್ತಿದ್ದಾನೆಂದು ಇಬ್ಬರಿಗೂ ಕೇಳಲು ವಿಪರೀತ ಕುತೂಹಲವಾದರೂ ಹುಚ್ಚನಾಗಿದ್ದರೆ ಮಾತಾಡುವುದು ಹೇಗೆ. ಅವನ ಮಾತಿನಲ್ಲಿ ಸುಸಂಬದ್ಧ ಎಷ್ಟಿರುತ್ತೆ? ಎಂದೆಲ್ಲ ಯೋಚಿಸುತ್ತ ಒಂದು

ಕ್ಷಣ ನಿಂತರು.

"ಯಾರಯ್ಯಾ ನೀನು? ಇಲ್ಯಾಕೆ ಇದ್ದೀಯೋ?" ಎಂದು ಸುರೇಶ ತನ್ನೆದುರಿನ ಕತ್ತಲ ಶೂನ್ಯವನ್ನು ಪ್ರಶ್ನಿಸಿದ.

"ಅಯ್ಯೋ! ನನ್ನ ಕತೆ ಕೇಳೋದಕ್ಕೆ ಇಷ್ಟು ದೂರ ಬರಬೇಕಾಯ್ತ? ಅಂಬಳದ ಸ್ಟೇಷನ್ನಿನಲ್ಲಿ ರಾತ್ರಿ ಯಾವಾಗಲು ಕುಂತಿರ್ತೀನಿ. ಅಲ್ಲೇ ಸಿಗ್ತಿದ್ದೆ. ಆದಿರ್ಲಿ! ನೀವು ಯಾರು? ನಿಮ್ಮ ಹೆಸರೇನು ಹೇಳ್ರಿ ಸಾಕು. ಮಿಕ್ಕಿದ ನಿಮ್ಮ ಕತೆ ಎಲ್ಲಾ ನಿಮ್ಮ ಬೆನ್ನ ಹಿಂದೆ ನಡಕೊಂಡು ಬರ್ತ ಕೇಳಿಸಿಕೊಂಡಿದೀನಿ" ಎಂದಿತು ಆ ಅಶರೀರ ವಾಣಿ.



# ಪ್ರತಿರೂಪ - ೨೭



"ನೀವೇನು ನನ್ನ ನಿಜವಾಗಲೂ ಹುಚ್ಚಾಂತ ತಿಳುಕೊಂಡಿರೋ ಹಂಗಿದೆ! ನಾನು ನಿಜವಾಗಲು ಹುಚ್ಚಾಗಿದ್ದರೆ ಜುಗಾರಿಕ್ರಾಸಿನ ಖದೀಮರ ಗ್ಯಾಂಗು ನನ್ನ ಮುಗಿಸೋದಕ್ಕೆ ಮೂರುಸಾರಿ ಪ್ರಯತ್ನ ಮಾಡುತಿದ್ದರ? ಸ್ವಲ್ಪ ಯೋಚನೆ ಮಾಡಿ! ಹುಚ್ಚನ ಮಾತನ್ನ ಯಾರು ತಲೆಗೆ ಹಚ್ಚಿಗೋತಾರ್‍ರೀ! ನೀವೇ ಹೇಳಿ. ತಿಳುಕೊಂಡಿರಬಹುದು ಎಲ್ಲ ಇವನು ಹುಚ್ಚಾಂತ. ಆದರೆ ಗೊತ್ತಾಗಬೇಕಾದೋರಿಗೆ ಚೆನ್ನಾಗಿ ಗೊತ್ತಿದೆ, ಇವನನ್ನು ಹುಚ್ಚಾಂತ ತಿಳುಕೊಂಡಿರೋರೇ ಹುಚ್ಚರೂ ಅಂತ. ಅದಕ್ಕೇ ಸ್ವಾಮಿ ಒಂದಲ್ಲ ಎರಡಲ್ಲ ಮೂರು ಸಾರಿ ಜನ ಬಂದರು ನನ್ನ ಖೂನಿ ಮಾಡೋದಕ್ಕೆ! ಮೂರು ಸಾರಿ ಬಂದವರನ್ನೂ ಮುಗಿಸಿದೀನಿ ಇಲ್ಲೆ! ಈ ಸುರಂಗದೊಳಗಡೇನೆ. ಹುಚ್ಚನ ಕೈಲಿ ಈ ಕೊಲೆಗಡಕರನ್ನ ಖಲಾಸ್ ಮಾಡೋದಕ್ಕಾಗತ್ತ? ಯೋಚನೆ ಮಾಡಿ! ಆ ನನಮಕ್ಕಳಿಗೆ ಹುಚ್ಚನ ಸಾವಾಸ ಏನಂತ ಗೊತ್ತಾಗಿರಬೇಕು! ಮತ್ತೆ ಕಳಿಸಲಿ ಅಂತ ಕಾಯ್ತಿದ್ದೀನಿ. ನಿಜ ಹೇಳಬೇಕಂದರೆ ನೀವು ಬಂದಾಗ, ಬಂತಪ್ಪ ಇನ್ನೊಂದು ಪಟಾಲಂ ಅಂತ ನಿಮ್ಮನ್ನ ಕೈಲಾಸಕ್ಕೆ ಕಳಿಸೋದಕ್ಕೆ ರೆಡಿಯಾಗಿದ್ದೆ. ಅಷ್ಟರಲ್ಲಿ ಹೆಂಗಸಿನ ದನಿ ಕೇಳಿದಂಗಾಯ್ತು. ಯಾರಿರಬಹುದೂ ಅಂತ ನಿಮ್ಮ ಬೆನ್ನ ಹಿಂದೇನೆ ಇಲ್ಲೀವರೆಗೆ ಬಂದಿದೀನಿ. ನಿಮ್ಮ ಮಾತು ಕೇಳಿಸಿಕೊಳ್ತ ಇಲ್ಲೀವರೆಗೂ ಬಂದಮೇಲೆ ನೀವೂ ನನ್ನ ಹಂಗೇ ಜೀವ ಉಳಿಸಿಕೊಳ್ಳೋದಕ್ಕೆ ಈ ಸುರಂಗದೊಳಗೆ ಹಾರಿಕೊಂಡೋರು ಅಂತ ಗೊತ್ತಾಯ್ತು! ನೀವು ಇಲ್ಲಿರೋವರೆಗೆ ನಿಮ್ಮ ಜೀವಕ್ಕೆ ಅಪಾಯ ಇಲ್ಲಾಂತ ಬೇಕಾದರೆ ನಾನು ಗ್ಯಾರೆಂಟಿ ಕೊಡ್ತೀನಿ. ಇಲ್ಲಿ ನನಗಿಷ್ಟಾ

ಇದ್ದವನು ಬದುಕುತ್ತಾನೆ. ಇಲ್ಲಾಂತಾದರೆ ಖಲಾಸ್. ನೀವು ನಿಮ್ಮ ಜೀವಕ್ಕೆ ಅಪಾಯ ಇಲ್ಲಾಂತ ಗ್ಯಾರೆಂಟಿಯಾಗೋವರೆಗೂ ಇಲ್ಲೆ ಇರಬಹುದು. ಅವರು ಎಷ್ಟು ಜನ ಬೇಕಾದರೂ ಬರಲಿ, ಕತ್ತಿ, ಕೊಡಲಿ, ಮದ್ದುಗುಂಡು ಬೇಕಾದ್ದು ತರಲಿ, ನನ್ನ ಒಂದು ರೋಮ ಅಲುಗಿಸೋದಕ್ಕೆ ಆಗೋದಿಲ್ಲ. ಬಿಲ್ ಕುಲ್ ಆಗೋದಿಲ್ಲ. ಅಷ್ಟಕ್ಕೂ ನನ್ನ ಹತ್ತಿರ ಏನಿದೇ ಅಂತೀರ? ಕತ್ತಿ ಇಲ್ಲ, ಕೊಡಲಿ ಇಲ್ಲ. ನನ್ನ ಬೆಳಕಲ್ಲಿ ನೋಡಿದರೆ ಗೊತ್ತಾಗತ್ತೆ ನಿಮಗೆ, ಕೈಕಾಲು ಸಮೇತ ನೆಟ್ಟಗಿಲ್ದಿರೋ ಮನ್‌ಷಾ ನಾನು. ಕುಂತರೆ ಏಳೋದಕ್ಕೆ ಅರ್ಧಗಂಟೆ. ಎದ್ದರೆ ಮುಂದೆ ಹೋಗೋದಕ್ಕೆ ಅರ್ಧಗಂಟೆ. ಖೇಡಿಗಳನ್ನಿರಲಿ ಮೈಮೇಲೆ ಕುಂತ ನೊಣಾ ಹೊಡೆಯೋದಕ್ಕೂ ನನ್ನಿಂದಾಗೋದಿಲ್ಲ. ಅಂತದರಲ್ಲೂ ಮೂರುಸಾರಿ ಖೂನಿ ಮಾಡೋದಕ್ಕೆ ನನ್ನ ಬೆನ್ನು ಹತ್ತಿ ಬಂದರು. ಆದದ್ದೇನು ಕೊನೆಗೆ? ಸುರಂಗದೊಳಗೆ ಬಂದೋರು ವಾಪಾಸ್ ಹೋಗಲೇ ಇಲ್ಲ. ಎಲ್ಲ ನನ್ನ ಬುದ್ಧಿಶಕ್ತಿ ಅಷ್ಟೆ, ಮತ್ತೇನಿಲ್ಲ! ನನ್ನದೇನೋ ಹಣೇಲಿ ಸುರಂಗದೊಳಗೆ ಕತ್ತಲ್ಲಿ ಕೊನೆಗಾಲ ಕಳೀಬೇಕಂತ ಬರೆದಿತ್ತು. ಹ್ಯಾಗೋ ನಡೆಯುತ್ತೆ ಬಿಡಿ. ಆದರೆ ನೀವು ಈ ಖದೀಮರ ಗ್ಯಾಂಗಿನ ಕೈಲಿ ಸಿಕ್ಕಾಕಿಕೊಂಡಿದ್ದು ಮಾತ್ರ ಯೋಚಿಸಿದರೆ ಬಾಳ ಬೇಜಾರಾಗ್ತದೆ. ಈ ಮಾದರಚತ್ ಸೂಳೇಮಕ್ಕಳು ಇನ್ನೆಷ್ಟು ಜನಾ ಇದಾರೋ ಗೊತ್ತಿಲ್ಲ. ಎಲ್ಲಾ ಒಟ್ಟಿಗೆ ಒಂದುಸಾರಿ ಈ ಸುರಂಗದೊಳಗೆ ಹೊಕ್ಕರೆ ಅಷ್ಟೂ ಜನರನ್ನೂ ಮುಗಿಸಿ ಕೈ ತೊಳಕೊಂಡು ಹೊರಗೆ ಹೊಂಟುಬಿಡಬಹುದಿತ್ತು. ಏನ್ಮಾಡ್ತೀರಾ ಈ ಉಪದ್ರಮಾರಿಗಳು ಖಾಲಿಯಾಗೋಹಂಗೆ ಕಾಣ್ತಿಲ್ಲ! ಹಂಗಾಗಿ ನಾನು ಹೊರಗೆ ಹೊರಡೋಹಂಗಿಲ್ಲ''

ಹುಚ್ಚರಾಮ ಮಾತುಮಾತಿಗೂ ತಾನು ಹುಚ್ಚನಲ್ಲವೆಂದು ಹೇಳಿಕೊಂಡರೂ ಅವನ ನಿರರ್ಗಳ ವಾಗ್ಝರಿಯಲ್ಲಿ ಹುಚ್ಚಿನ ಅಂಶವೊಂದು ಇರುವಂತೆ ಇವರಿಬ್ಬರಿಗೂ ಕಂಡಿತು. ಹುಚ್ಚರಾಮನ ಭಯಾನಕ ದುರ್ದೆಸೆ ನೋಡಿ ಸುರೇಶನಿಗೂ ಗೌರಿಗೂ ನಡುಕವುಂಟಾಯ್ತು. ಕೊಲೆಗಡುಕರಿಗೆ ಹೆದರಿ ಇವನು ಶಾಶ್ವತವಾಗಿ ಹಾಗಾದರೆ ಈ ಸುರಂಗದ ಕತ್ತಲಲ್ಲಿ ಕಾಲಹಾಕುತ್ತಿದ್ದಾನೆಯೆ! ಅವನೂ ನಮ್ಮಂತೆಯೇ ಪ್ರಾಣ ಉಳಿಸಿಕೊಳ್ಳಲು ರೈಲಿನಿಂದ ಹಾರಿಕೊಂಡವನೆಂದು ಹೇಳಿದನಲ್ಲ! ಬನ್ನಿಬನ್ನಿ ಇಲ್ಲಿ ಕೊಲೆಪಾತಕಿಗಳಿಂದ ರಕ್ಷಣೆ ಕೊಡುತ್ತೇನೆ ಎಂದು ಹೇಳಿ ಸ್ವಾಗತಿಸಿದನಲ್ಲ! ನಮ್ಮ ಭವಿಷ್ಯ ಕೂಡಾ ಇನ್ನು ಶಾಶ್ವತವಾಗಿ ಸುರಂಗದೆಳಗೆ ಬಂದಿಯಾಗಿದೆಯೆ? ಕೊಲ್ಲಲು ಬಂದವರನ್ನೆಲ್ಲಾ ಮುಗಿಸಿದೆನೆಂದು ಹೇಳುತ್ತಾನಲ್ಲ, ಹೇಗೆ ಮುಗಿಸಿರಬಹುದು?. ಇಬ್ಬರಿಗೂ ಆ ಹುಚ್ಚನ ಅಸಂಬದ್ಧ ಹಾಗೂ ಅರೆಸಂಬದ್ಧ ಪ್ರಲಾಪಗಳ ಬಗ್ಗೆ ಆಳವಾದ ಭಯ ಕಳವಳಗಳೂ ಮತ್ತೊಂದು ಕಡೆ ತಾಳಲಾರದ ಕುತೂಹಲಗಳೂ ಉಂಟಾದವು. ಹುಚ್ಚನ ಪ್ರಲಾಪಗಳಿಗೂ ಬೆಳಗಿನಿಂದ ಅವರಿಗೆ ಸಂಭವಿಸಿದ ವಿಚಿತ್ರ ಘಟನಾವಳಿಗಳಿಗೂ ಸಂಬಂಧವಿದ್ದುದರಿಂದ ಅವನ ಮಾತುಗಳನ್ನು ಅಸಂಬದ್ಧ ಪ್ರಲಾಪವೆಂದು ತಳ್ಳಿತಹಾಕಲು ಅವರಿಬ್ಬರಿಗೂ ಅಸಾಧ್ಯವಾಗಿತ್ತು. ಕಣ್ಣಾಕಾಣದ ಕತ್ತಲಲ್ಲಿ ಅವನ ಧ್ವನಿ ವಿವರಣೆಗಳಿಂದಲೇ

ಅವನ ಆಕೃತಿಯೊಂದನ್ನು ಕಲ್ಪಿಸಿಕೊಳ್ಳುತ್ತಾ, ಅವನ ಇತ್ಯೋಪರಿಯನ್ನು ಒಂದು ಕಡೆಯಿಂದ ಕೇಳಬೇಕೆಂದು ಸುರೇಶ ಯೋಚಿಸಿದ. ಆದರೆ ಕುಂಟರಾಮ ಏನು ಪ್ರಶ್ನೆ ಕೇಳಲೂ ಅವಕಾಶವೇ ಕೊಡದೆ ನಿರರ್ಗಳ ವಾಗ್ಝರಿಯ ಪ್ರವಾಹ ಹರಿಸಿದ. ಎಷ್ಟೋ ದಿನಗಳಿಂದ ಯಾರೊಡನೆಯೂ ಮಾತಾಡದೆ ಗವಿಯೊಳಗಿದ್ದರಿಂದಲೋ ಏನೋ ಸುರೇಶ ಗೌರಿ ಅವನೆದುರು ಇದ್ದಾರೋ ಇಲ್ಲವೋ ಎಂದೂ ಸಹ ಒರೆ ಹಚ್ಚದೆ, ಇಬ್ಬರೂ ಒಮ್ಮೆಯೂ ಹ್ಞೂಗೊಡದಿದ್ದರೂ ನಿರಂತರವಾಗಿ ಮಾತಾಡುತ್ತಿದ್ದ.

"ನನ್ನ ಹತ್ತಿರ ಇದ್ದ ಕೆಂಪು ಕಲ್ಲನ್ನೆಲ್ಲ ಕದ್ದಿದ್ದಲ್ಲದೆ ಕಳ್ಳಸೂಳೇಮಕ್ಕಳು ನನ್ನ ಕೊಂದೇ ಹಾಕಬೇಕಂತ ಮಾಡಿದ್ದರು. ನನ್ನ ಗಂಟುಮೂಟೆ ಸಮೇತ ಎಳಕೊಂಡು ಬಂದು ರೈಲೊಳಗೆ ತುಂಬಿದಾಗಲೇ ನನಗೆ ಇವರ ಉದ್ದೇಶ ಖೂನಿ ಮಾಡೋದಕ್ಕೇ ಇರಬೇಕಂತ ಅಂದಾಜಾಯ್ತು. ಅವರು ಇಸ್ಪೀಟಾಡ್ತ ಕೂತಿರಬೇಕಾದರೆ ನಾನು ರೈಲಿಂದ ನೆಗದೇಬಿಟ್ಟೆ. ನೀವಾದರೆ ಕೈಕಾಲು ನೆಟ್ಟಗಿದ್ದವರು. ನಾನು ಕುಂಟ. ನನ್ನ ಕತೆ ಏನಾಗಿರಬೇಕು ಹೇಳಿ. ಅವತ್ತಿಂದ ನಾನು ಇಲ್ಲೇ ಠಿಕಾಣಿ. ಆವಾಗವಾಗ ಭಿಕ್ಷ ಬೇಡೋದಕ್ಕೆ ಮಾತ್ರ ಕತ್ತಲಾದಮೇಲೆ ಅಂಬಳಕ್ಕೆ ಹೋಗ್ತೀನಿ. ನಾನ್ಯಾರು? ಎಲ್ಲಿರ್ತೀನಿ? ಒಬ್ಬರಿಗೂ ಗೊತ್ತಿಲ್ಲ. ಅಂತದ್ರಲ್ಲೂ ಮೂರುಸಾರಿ ನನ್ನ ಹುಡುಕಿಕೊಂಡು ಬಂದಿದ್ದರು ನೋಡಿ. ಮೂರು ಸಾರೀನೂ ಬಂದೋರು ಹಿಂದಕ್ಕೆ ಹೋಗಲಿಲ್ಲ. ನೀವು ಸುಳ್ಳೇಳ್ತಿದೀನಂತ ತಿಳೀಬಹುದು. ಕುಂಟ ಕೈಲಾಗದವನು ಅಂತ." ಎಂದು ಕುಂಟರಾಮ ತನ್ನನ್ನು ಕೊಲ್ಲಲು ಬೆನ್ನುಹತ್ತಿ ಬಂದ ಪಾತಕಿಗಳನ್ನು ಬಾಯಿಗೆ ಬಂದಹಾಗೆ ಬಯ್ಯುತ್ತ ಮುಂದವರಿಸಿದ. ಅವನ ಮಾತಿನ ಪರಿ ಎಷ್ಟೊಂದು ತರ್ಕಹೀನವಾಗಿ ವಿಚಿತ್ರವಾಗಿತ್ತೆಂದರೆ ಗುರುರಾಜ ಕವಿಯ ದ್ವಿಸಂಧಾನ ಕಾವ್ಯದ ಅರ್ಥ ಪತ್ತೆಹಚ್ಚಿದಂತೆಯೇ, ರಾಮನ ಇತ್ಯೋಪರಿಗಳನ್ನೂ ಕ್ರಮಬದ್ಧವಾಗಿ ಜೋಡಿಸಬೇಕಾದರೆ ಸುರೇಶನಿಗೆ ಪ್ರಯಾಸವಾಯ್ತು.

ಕುಂಟರಾಮ, ಅರ್ಥಾತ್ ರಾಮಪ್ರಸಾದನಿಗೆ ಹೆಂಡತಿ ಮಕ್ಕಳಿರಲಿಲ್ಲ. ಮಂಗಳೂರಿನಲ್ಲಿ ರತ್ನಪರೀಕ್ಷಕನಾಗಿ 'ಡೈಮಂಡ್ ಕನ್ಸಲ್ಟೆಂಟ್' ಆಗಿದ್ದ ರಾಮಪ್ರಸಾದನಿಗೆ ಮೂರು ಕಾಸಿನ ಕರ್ಚಿಲ್ಲದೆ, ಚೂರೂ ಬೆವರು ಸುರಿಸದೆ ಕುಳಿತಲ್ಲಿಗೆ ದುಡ್ಡು ಬರುತ್ತಿತ್ತು. ಯಾವ ವಜ್ರ ಯಾರು ಕೊಳ್ಳಬೇಕಾದರೂ ಅವರು ರಾಮಪ್ರಸಾದನನ್ನು ಸಲಹೆ ಕೇಳದೆ ಕೊಳ್ಳುತ್ತಿರಲಿಲ್ಲ. ರಾಮಪ್ರಸಾದ ಸಲಹೆ ಕೊಟ್ಟು ವ್ಯಾಪಾರ ಕುದುರಿಸಿದರೆ ಮಾರಿದವನೂ ಕೊಂಡವನೂ ವಜ್ರದ ಬೆಲೆಯ ಶೇಕಡ ಒಂದರಷ್ಟು ಹಣ ರಾಮಪ್ರಸಾದನಿಗೆ ಕೊಡಬೇಕಿತ್ತು. ವಜ್ರದ ಬೆಲೆ ಕಟ್ಟುವುದರಲ್ಲಿ ರಾಮಪ್ರಸಾದ್ ಎಷ್ಟು ನಿಷ್ಣಾತನಾಗಿದ್ದ ನೆಂದರೆ ದೇಶ ವಿದೇಶಗಳಿಂದೆಲ್ಲ ಅವನ ಸಲಹೆ ಪಡೆಯಲು ಗಿರಾಕಿಗಳು ವಜ್ರದೊಡನೆ ಆಗಮಿಸುತ್ತಿದ್ದರು. ಆಗಲೇ ರಾಮಪ್ರಸಾದನಿಗೆ ಜುಗಾರಿ ಕ್ರಾಸಿನ ಕೆಂಪು ಮಾಣಿಕ್ಯಗಳ ಸುಳಿವು ಸಿಕ್ಕಿದ್ದು.

"ದೋಣಿ ಹೊಳೆ ದಂಡೆಯಲ್ಲಿ ಕೆಂಪು ಕಲ್ಲು ಸಿಕ್ಕೋ ಸಮಾಚಾರ ಯಾರಿಗೇನು

ಗೊತ್ತಿಲ್ಲದ್ದಲ್ಲ ಬಿಡಿ. ನನ್ನ ಹತ್ತಿರಾನೂ ಆಗೀಗ ಕೆಂಪು ಕಲ್ಲು ತಗೊಂಡು ಬರ್‍ತಿದ್ದರು. ಅದರಲ್ಲಿ ಮುಕ್ಕಾಲುಪಾಲು ಅಸಲಿ ಮಾಣಿಕ್ಯಗಳಲ್ಲ. ಬಹಳ ಕಡಮೆ ದುಡ್ಡಿನವು. ಮೆಶೀನುಗಳಿಗೆ, ಪಾಲಿಷಿಂಗಿಗೆ, ಭೈರಿಗೆಗಳಿಗೆ ಆಗುವಂಥವು. ಹಂಗಂತ ಅವಕ್ಕೇನು ಮೂರುಕಾಸಿನ ಬೆಲೆ ಅಂತ ತಿಳೀಬೇಡ್ರಿ. ಅವಕ್ಕೂ ಸಾವಿರಾರು ರೂಪಾಯಿ ಬೆಲೆ ಉಂಟು. ಆದರೆ ಅಸಲಿ ಕಲ್ಲಿಗೆ ಇದ್ದಹಾಗೆ ಲಕ್ಷಗಳವರೆಗೆ ಕೋಟಿಗಳವರೆಗೆ ಹೋಗೋದಿಲ್ಲ." ಮಾತಾಡುತ್ತಾ ಮಾತಾಡುತ್ತಾ ಕುಂಟರಾಮನ ಮಾತಿನಲ್ಲಿ ಸ್ಪಷ್ಟತೆ ಕೊಂಚಕೊಂಚ ಮೂಡಿತು. ಪ್ರಾಣಾಪಾಯದಿಂದ ಪಾರಾಗಲು ಬಿಲ ಸೇರಿದ ಇಲಿಯಂತೆ ಸುರಂಗ ಸೇರಿದ್ದ ಅವನು ಸುರೇಶ ಗೌರಿ ಅವನನ್ನು ಹುಚ್ಚನೆಂದು ಪರಿಗಣಿಸದೆ ಮಾತು ಕೇಳುತ್ತಿದ್ದಾರೆಂದು ಅನ್ನಿಸಿದ್ದರಿಂದಲೋ ಏನೋ ಹೆಚ್ಚು ಹೆಚ್ಚು ತರ್ಕಬದ್ಧವಾಗಿ ಮಾತಾಡತೊಡಗಿದ.

"ನನಗೆ ನಿಜವಾಗಲು ಹುಚ್ಚು ಹಿಡಿಯುತ್ತೆ ಅನ್ನಿಸಿದ್ದು ಒಂದುದಿನ ಯಾರೋ ರತ್ನ ಪರೀಕ್ಷೆಗೆ ಕಣ್ಣುಕಟ್ಟಿ ಕರಕೊಂಡು ಹೋದಾಗ ಕಣ್ರಿ! ಅದೇನು ಎಲ್ಲಿಗೆ ಕರಕೊಂಡು ಹೋದರೋ ಏನೋ! ಇವತ್ತಿಗೂ ಗೊತ್ತಿಲ್ಲ. ದಿನ ಎಲ್ಲಾ ಕಣ್ಣುಕಟ್ಟಿಸಿಕೊಂಡು ಕೂತಹಾಗೆ ಇವತ್ತಿಗೂ ಅನ್ನಿಸುತ್ತೆ. ಕಣ್ಣು ಬಿಚ್ಚಿದಾಗ ತರಾನುತರದ ಕೆಂಪುತೊಗಲಿನ ಮನುಷ್ಯರೆಲ್ಲಾ ಅಲ್ಲಿದ್ದರಪ್ಪ. ದುಡ್ಡು ಕಾಸು ಎಲ್ಲಾ ನನ್ನ ಹತ್ತಿರ ಇದ್ದೂ ಕಣ್ಣುಕಟ್ಟಿಸಿಕೊಂಡು ಅವರ ಜೊತೆ ಹೋಗಿ ಅದೇನು ತೋರಿಸುತ್ತಾರೋ ನೋಡಬೇಕೆಂಬ ಚಪಲ ನನಗೆ ಶುರುವಾಗಿದ್ದು ನನ್ನ ದೊಡ್ಡ ದುರಾದೃಷ್ಟ ಅಂತ ಈಗ ನನಗನ್ನಿಸುತ್ತೆ. ಈ ಸುರಂಗದ ಕತ್ತಲಲ್ಲಿ ಕಾಲ ಹಾಕುತ್ತಾ ಒಂದೊಂದುಸಾರಿ ಅವರ ಜೊತೆ ಕಣ್ಣು ಕಟ್ಟಿಸಿಕೊಂಡೇ ಇನ್ನೂ ಹೋಗುತ್ತಿದ್ದೇನೆಂದು ಅನ್ನಿಸುತ್ತೆ. ಅವರು ಕಣ್ಣು ಬಿಚ್ಚಿದಾಗ ನನ್ನ ಕಣ್ಣಿಗೆ ಬಿದ್ದಿದ್ದನ್ನು ಇವತ್ತಿಗೂ ನನಗೆ ನಂಬೋದಕ್ಕೆ ಆಗಿಲ್ಲ. ಕೆಂಡದ ಉಂಡೆಗಳ ರಾಶಿಯೇ ಚರ್ಮದ ಚೀಲದ ಒಳಗೆ ಇತ್ತು. ಅವುಗಳ ಎದುರು ನಿಮ್ಮ ಕೊಹಿನೂರೂ ಇಲ್ಲ, ಗೋಲ್ಕೊಂಡಾನೂ ಇಲ್ಲ, ಅವಕ್ಕೆ ಬೆಲೆ ಕಟ್ಟೋದಕ್ಕೆ ನನ್ನ ಕರಕೊಂಡು ಹೋಗಿದಾರಲ್ಲ ಮುಠ್ಠಾಳರು. ಅವುಗಳ ಬೆಲೆ ನನ್ನ ಕೇಳಿದರೆ ಇಡೀ ಭೂಮಂಡಲ ಕಣ್ರಿ. ಆದರೆ ಏನ್ಮಾಡ್ತೀರ! ಹಾಗಂತ ಹೇಳಿದರೆ ಯಾರಾದರೂ ನಂಬ್ತಾರ! ಹುಚ್ಚಂತಾರೆ ಅಲ್ವ? ಹೌದು ತಾನೆ!?... ನೋಡಿದರಾ! ನನ್ನ ಯಾಕೆ ಹುಚ್ಚಾಂತಾರೆ ಅಂತ ಈಗ ಗೊತ್ತಾಗುತ್ತಲ್ಲ ನಿಮಗೆ. ನೀವೂ ಈಗ ನನ್ನ ಪರಿಸ್ಥಿತೀಲಿ ಇದ್ದೀರ ತಿಳ್ಕಳಿ. ಅದಕ್ಕೇ ನಿಮಗೆ ಗೊತ್ತಾಗ್ತಾ ಇದೆ ನಾನು ಹೇಳ್ತಿರೋದು ಹುಚ್ಚಲ್ಲಾಂತ. ಅವತ್ತು ಆ ಕೆಂಪು ಕಲ್ಲಿನ ರಾಶಿಯನ್ನು ನೋಡುತ್ತಿದ್ದಹಾಗೇ ನನಗೆ ಗೊತ್ತಾಯ್ತು, ಕಣ್ಣುಕಟ್ಟಿಸಿಕೊಂಡು ಇವರ ಹಿಂದೆ ಹೋಗಬೇಕೆಂದು ನನಗೆ ಅನ್ನಿಸಿದ್ದು ನನ್ನ ಒಳ್ಳೇದಕ್ಕಲ್ಲ ಅಂತ. ಆದರೂ ಮನಃಸ್ಥಿಮಿತ ಕಳಕೊಳ್ಳದೆ ಈ ಕಲ್ಲುಗಳು ಕಟಿಂಗ್ ಹ್ಯಾಗೆ ತಗೊಳ್ತವೆ ನೋಡದೆ ಅದರ ರೇಟು ಕಟ್ಟೋದಕ್ಕೆ ಸಾಧ್ಯ ಇಲ್ಲ. ಒಂದೆರಡನ್ನಾದರೂ ಕಟ್ ಮಾಡಿ ಪಾಲಿಷ್ ಮಾಡಿ ತನ್ನಿ. ಆಮೇಲೆ ರೇಟು ಕಟ್ಟುತ್ತೇನೆ

ಎಂದು ಹೇಳಿ ಅವತ್ತು ಜೀವ ಉಳಿಸಿಕೊಂಡೆ. ಆದರ ರೇಟು ನಾನು ಹೇಳಿ ಶಿಫಾರಸ್ಸು ಪತ್ರ ಕೊಟ್ಟುಬಿಟ್ಟಿದ್ದರೆ ಆ ದಿನ, ಆಮೇಲೆ ಅವರಿಗೆ ನಾನು ಬದುಕಿರಬೇಕಾದ ಅಗತ್ಯವೇ ಇರಲಿಲ್ಲ. ಆದರೂ ನನ್ನ ಒಳಮನಸ್ಸು ಹೇಳ್ತಾನೇ ಇತ್ತು, ಇದು ನಿನ್ನ ಒಳ್ಳೇದಕ್ಕಲ್ಲ ಅಂತ. ಕಣ್ಣು ಕಟ್ಟಿಸಿಕೊಂಡು ಕೆಂಪುಕಲ್ಲುಗಳನ್ನು ನೋಡಿ ಬಂದ ಒಂದು ವಾರದೊಳಗೇ ನನ್ನ ಕನ್ಸ್‌ಲ್ಟೆನ್ಸಿ ಅಂಗಡಿ ಬಂದ್ ಮಾಡಿ ಊರನ್ನೇ ಬಿಟ್ಟುಬಿಟ್ಟೆ. ಆದರೆ ನನ್ನ ಗ್ರಾಚಾರ ನಾನು ಅಂಗಡಿ ಮುಚ್ಚಿ ಈ ದಂಧೆ ಬಿಟ್ಟರೂ ದುರ್ಬುದ್ಧಿ ನನ್ನ ಬಿಡಬೇಕಲ್ಲ! ಹೆಂಗಾದರೂ ಮಾಡಿ ಈ ಕಾಡೊಳಗೆ ಎಲ್ಲೋ ಇರೋ ಕೆಂಪು ಕಲ್ಲಿನ ಜಾಗ ಪತ್ತೆ ಮಾಡಲೇಬೇಕೆಂದು ಮಿಲಿಟರಿ ವಿಮಾನ ಹುಡುಕೋದಕ್ಕೆ ಹೊರಟಿದ್ದ ಸರ್ಚ್‌ಪಾರ್ಟಿ ಜೊತೆ ಅಡಿಗೆಗೆ ಬಟ್ಲರು ಕೆಲಸಕ್ಕೆ ಸೇರ್‍ಕೊಂಡೆ''

ಸುರೇಶನಿಗೂ ಗೌರಿಗೂ ಹುಚ್ಚನ ಸ್ವಗತ ಭಾಷಣ ಕೇಳುತ್ತಾ ಮೈ ಜುಂ ಎಂದಿತು. ತಾವು ಸಿಕ್ಕಿಕೊಂಡಿರುವ ಪರಿಸ್ಥಿತಿ ಕುಂಟರಾಮನ ಮಾತು ಮುಂದುವರಿದಂತೆ ತಮ್ಮೆಲ್ಲಾ ಊಹೆಯನ್ನೂ ಮೀರಿ ಜಟಿಲವಾಗಿರುವುದು ಅರಿವಾಗತೊಡಗಿತು. ಜುಗಾರಿ ಕ್ರಾಸಿನ ಪ್ರಲೋಭನೆಗಳು ಅತಿಸೂಕ್ಷ್ಮವಾಗಿ ವಿಚಿತ್ರವಾಗಿ ಯಾರ್‍ಯಾರನ್ನೋ ಯಾವಯಾವ ತರದಲ್ಲೋ ಕಾಡಿರುವುದನ್ನು ಕಂಡು ಇಬ್ಬರೂ ವಿಸ್ಮಯದಲ್ಲಿ ಮೂಕರಾದರು. ಕುಂಟರಾಮ ಸರ್ಚ್‌ಪಾರ್ಟಿ ಜೊತೆ ಕಾಡಿಗಿಳಿದು ಆ ಮಹಾರಣ್ಯದಲ್ಲಿ ದಾರಿತಪ್ಪಿ ಪಡಬಾರದ ಪಾಡು ಪಟ್ಟು ಕೊನೆಗೂ ಕೆಂಪು ಕಲ್ಲುಗಳು ಸಿಗುವ ಜಾಗ ಪತ್ತೆ ಮಾಡಿದ್ದನ್ನೂ ಹೇಳಿದ. ಆದರೆ ಇನ್ನೊಮ್ಮೆ ಆ ಜಾಗ ತನಗೂ ಪತ್ತೆಮಾಡಲು ಸಾಧ್ಯವೇ ಇಲ್ಲವೆಂದು ನುಡಿದ. ಆ ಜಾಗ ಎಲ್ಲಿದೆಯೆಂದು ಹೇಳಬಹುದೇನೋ ಎಂದು ನಿರೀಕ್ಷಿಸಿದ್ದ ಗೌರಿಗೂ ಸುರೇಶನಿಗೂ ಕೊಂಚ ನಿರಾಸೆಯಾದಂತಾಯ್ತು.

''ಆ ಕಲ್ಲುಗಳನ್ನ ಕಣ್ಣಲ್ಲಿ ನೋಡಿದವರಿಗೆ ಶಾಪ ಉಂಟು ಅಂತ ಅನ್ನಿಸುತ್ತೆ. ಇಲ್ಲದಿದ್ದರೆ ನೋಡಿ, ವಾಪಸ್ ಬಂದರೆ ಒಬ್ಬರಿಗೂ ನನ್ನ ಗುರ್ತ ಹತ್ತಲಿಲ್ಲ! ನಾನು ಆಡಿದ ಮಾತನ್ನ ಕೇಳಿದವರೆಲ್ಲಾ ನಗುತ್ತಿದ್ದರು. ಸ್ಕೂಲು ಮಕ್ಕಳು ಹುಚ್ಚಾ ಹುಚ್ಚಾ ಅಂತ ಕಲ್ಲಲ್ಲಿ ಹೊಡೆದು ನನ್ನ ಹತ್ತಿರ ಇದ್ದ ಕೆಂಪು ಕಲ್ಲಲ್ಲಿ ಒಂದಷ್ಟನ್ನ ಹೊತ್ಕೊಂಡು ಓಡೋದರು! ಯಾರ ಹತ್ತಿರ ಹೇಳುತ್ತೀರ! ಯಾರಿಗೆ ಪುಕಾರು ಕೊಡ್ತೀರ? ಆ ಪುಂಡ ಮುಂಡೇಗಂಡರ ಅಪ್ಪಾ ಅಮ್ಮಂದಿರಿಗೆ ಹೇಳೋದಕ್ಕೆ ಹೋದರೆ ಅಲ್ಲೂ ಅಷ್ಟು ಕಲ್ಲು ಕಿತ್ತುಕೊಂಡು ಓಡಿಸಿದರು. ಪೋಲೀಸರಿಗೆ ಪುಕಾರು ಕೊಡೋದಕ್ಕೆ ಹೋದರೆ ಬೂಟುಕಾಲಲ್ಲಿ ಒದ್ದು ಲಾಕಪ್ಪಿಗೇ ಹಾಕಿಬಿಟ್ಟರು! ಆದರೆ ಹುಚ್ಚಾಂತ ಇವರೆಲ್ಲಾ ನಗ್ತಿದ್ದರೇ ವಾಸಿ ಇತ್ತು ಅನ್ನಿಸುತ್ತೆ. ಯಾಕೆಂದರೆ ನನ್ನ ಮಾತಿನ ಅರ್ಥ ಯಾರಿಗೋ ಗೊತ್ತಾಗಿದೆ, ಈ ಹುಚ್ಚ ಹೇಳ್ತಿರೋದು ನಕಲೀ ಮಾತಲ್ಲ. ಇವನು ಈ ಕಗ್ಗಾಡಲ್ಲಿ ಎಲ್ಲೋ ಅಸಲಿ ಕಲ್ಲು ನೋಡೇಬಿಟ್ಟಿದಾನೆ ಅಂತ! ಇಲ್ಲದಿದ್ದರೆ ನನ್ಯಾಕೆ ಕೊಲ್ಲೋದಕ್ಕೆ ಪ್ರಯತ್ನ ಮಾಡಬೇಕು? ಹುಚ್ಚನ ಮಾತು ಕೇಳಿ ಬಿದ್ದು ಬಿದ್ದು ನಗ್ತಿದ್ದೋರ ಹಿಂದೆ ಯಾವುದೋ

ಒಂದು ಹುಬ್ಬಗಂಟಿಕ್ಕಿದ ಮುಖ ನನ್ನ ಕಿರಿಚಾಟಗಳನ್ನು ಗಮನ ಕೊಟ್ಟು ಕೇಳಿರಲೇ ಬೇಕು. ಇಲ್ಲದಿದ್ದರೆ ನನ್ನನ್ಯಾಕೆ ಕೊಲ್ಲೋದಕ್ಕೆ ಬರಬೇಕು ಅವರು? ಅದೂ ಒಂದಲ್ಲ, ಎರಡಲ್ಲ, ಮೂರುಸಾರಿ!''

ಮೈ ಮೇಲೆ ದೆವ್ವ ಬಂದವರಂತೆ ಒಂದೇಸಮ ಒದರುತ್ತಿದ್ದ ಕುಂಟರಾಮನ ಮಾತು ಕೇಳುತ್ತಾ, ಇದ್ದಕ್ಕಿದ್ದಂತೆ ಸುರಂಗದ ಗಾಢ ಕತ್ತಲಲ್ಲಿ ಆ ನಿರಾಕಾರ ಧ್ವನಿ ತಮ್ಮಿಬ್ಬರ ಭವಿಷ್ಯವಾಣಿಯೆಂದಿನ್ನಿಸಿ ಇಬ್ಬರಿಗೂ ಮೈ ಬೆವರಿತು. ಗಂಗೂಲಿಯ ಮಾತು ಕೇಳಿ ಹುಚ್ಚು ಸಾಹಸಗಳ ಬೆನ್ನು ಹತ್ತಿ ಹೊರಟಲ್ಲಿಂದ ಇವತ್ತಿನ ರಾಜಪ್ಪನ ಕುಂಟರಾಮನ ಮಾತುಗಳವರೆಗಿನ ಸುರೇಶನ ಚರಿತ್ರೆಯನ್ನೆಲ್ಲಾ ಕುಂಟರಾಮನ ಮಾತುಗಳು ಕೆದಕಿ ಅಪಹಾಸ್ಯ ಮಾಡುವಂತೆ ತೋರಿದವು. ಯಾವುದೋ ಆಕಸ್ಮಿಕ ಒಂದರಲ್ಲಿ ತಾವಿಬ್ಬರೂ ಕೊನೆಯಿಲ್ಲದ ಸುರಂಗವೊಂದನ್ನು ಹೊಕ್ಕಂತೆನಿಸಿತು. ಗೌರಿ "ಇನ್ನೂ ಎಷ್ಟುದೂರ ಇದಿಯೋ ಏನೋ ಈ ಸುರಂಗ. ನಡೀತಾನೇ ಮಾತಾಡೋಣ ಕಣ್ರಿ" ಎಂದು ಸುರೇಶನಿಗೆ ಹೇಳಿದಳು.

ಕುಂಟರಾಮ ಅದು ತನ್ನನ್ನೇ ಕುರಿತು ಹೇಳಿದ್ದೆಂದು ತಿಳಿದನೋ ಏನೋ! "ನಾನು ಬೆಳಗಿನಹೊತ್ತು ಹೊರಗೆ ಬರೋದೇ ಇಲ್ಲ. ನಾಳೆ ತಪ್ಪಿದರೆ ನಾಳಿದ್ದು ಅಂಬಳಕ್ಕೆ ಕತ್ತಲಾದಮೇಲೆ ಹೋಗ್ತೀನಿ. ಪುಣ್ಯಾತ್ಮರು ಬೇಕಾದಷ್ಟು ಜನ ಇದ್ದಾರೆ. ಒಂದುವಾರ ಕ್ಕಾಗುವಷ್ಟು ಅಕ್ಕಿ ಕೊಡ್ತಾರೆ. ಸುರಂಗ ಇನ್ನೇನು ಹೆಚ್ಗೆ ದೂರ ಇಲ್ಲ. ರೈಲು ಕಂಬಿ ಮೇಲೇ ಮುಂದೆ ಹೋಗಿ, ಅಪ್ಪಿತಪ್ಪಿ ಕೂಡಾ ಕಂಬಿ ಬಿಟ್ಟು ಅಡ್ಡಾಡ ಬೇಡ್ರಿ. ಒಂದು ಸಾರಿ ಇಲ್ಲಿ ದಾರಿ ತಪ್ಪಿದರೆ ಮತ್ತೆ ನಾನು ಕೂಡಾ ನಿಮ್ಮನ್ನ ಬಚಾವು ಮಾಡೋದಕ್ಕೆ ಆಗೋದಿಲ್ಲ. ಮೂರುಸಾರಿ ನನ್ನ ಖೂನಿ ಮಾಡೋದಕ್ಕೆ ಬಂದೋರನ್ನ ನಾನು ಮುಗಿಸಿದ್ದೇ ಹಂಗೆ. ಅದರ ಕತೆ ನಿಮಗೆ ಹೇಳಲಿಲ್ಲ ಅಲ್ವ. ಈ ಸುರಂಗ ರೈಲ್ವೆ ಡಿಪಾರ್ಟಮೆಂಟಿನವರು ಮಾಡಿದ್ದು. ಈ ಸುರಂಗದೊಳಗೆ ಅಡ್ಡ ಸುರಂಗಗಳು ಒಂದಷ್ಟು ಇದಾವೆ. ಅವೆಲ್ಲ ಹ್ಯಾಗಾದವೋ! ಯಾಕಾದವೋ! ಎಲ್ಲಿಗೆ ಹೋಗ್ತವೋ ಯಾರಿಗೂ ಗೊತ್ತಿಲ್ಲ. ಇಲ್ಲಿ ಅಡ್ಡ ಸುರಂಗಗಳಿವೆ ಅನ್ನೋದೇ ಮೊದಲಾಗಿ ಯಾರಿಗೂ ಗೊತ್ತಿಲ್ಲ! ಇನ್ನು ಈ ಪರ್ವತದ ಹೊಟ್ಟೆಯೊಳಗೆ ಅದೆಲ್ಲಿಗೆ ಹೋಗ್ತದೆ ಅಂತ ಯಾರು ನೋಡಿದ್ದಾರೆ! ಅದರೊಳಗೆ ಎರಡೇಮಾರು ಹೋದರೆ ಸಾಕು ಮತ್ತೆ ಬಂದ ದಾರಿ ತಿಪ್ಪರಲಾಗ ಹೊಡೆದರೂ ಪತ್ತೆಮಾಡೋದಕ್ಕೆ ಆಗೋದಿಲ್ಲ. ನನ್ನ ಬೆನ್ನುಹತ್ತಿ ಬಂದರಲ್ಲ ಅವರನ್ನ ಮುಗಿಸೋದಕ್ಕೆ ನಾನು ಮಾಡಿದ್ದು ಇಷ್ಟೆ! ಅವರಿಗೆ ಕಾಣೋಹಾಗೆ ಅದರೊಳಗೆ ಹೊಕ್ಕು ಅಲ್ಲೆ ಅವಿತು ನಿಂತೆ. ಬಡ್ಡಿಮಕ್ಕಳು ಇವನು ಸರಿಯಾಗಿ ಸಿಕ್ಕಿಬಿದ್ದಾ ಅಂತ ಗಡಿಬಿಡಿಯಲ್ಲಿ ಒಳನುಗ್ಗಿದವರು ಇವತ್ತಿನವರೆಗೂ ವಾಪಾಸಾಗಿಲ್ಲ. ಅದಕ್ಕೇ ಹೇಳಿದ್ದು ರೈಲು ಕಂಬಿ ಬಿಟ್ಟು ಆಚೀಚೆ ಅಡ್ಡಾಡಬೇಡ್ರಿ ಅಂತ. ನಿಮಗೆ ಏನು ಅಪಾಯ ಬಂದರೂ ಇಲ್ಲಿಗೆ ಬನ್ನಿ. ನಿಮ್ಮ ಬೆನ್ನು ಹತ್ತಿದವರು ಒಂದಲ್ಲ ಎರಡಲ್ಲ ಸಾವಿರ ಜನ ಬೇಕಾದರೂ

ಇರಲಿ, ಅಷ್ಟು ಜನರನ್ನೂ ಪಾತಾಳಲೋಕಕ್ಕೆ ರವಾನೆ ಮಾಡಿಬಿಡೋಣ''

ರೈಲು ಕಂಬಿಯ ಜಾಡು ಹಿಡಿದು ನಡೆಯುತ್ತಾ ಸುರೇಶ ಗೌರಿ ಸುರಂಗದ ಹೊರಬಾಯಿಯ ಕಡೆಗೆ ಮುಂದುವರಿದರು. ಕುಂಟರಾಮನ ಸ್ವಗತ ಭಾಷಣ ಮುಂದುವರಿದೇ ಇತ್ತು. ಅವನ ಮಾತಿನ ಗೊಣಗಾಟದಲ್ಲಿ ಇವರಿಬ್ಬರೂ ದೂರಾಗುತ್ತಿರುವುದು ಅವನ ಅರಿವಿಗೇ ಬರಲಿಲ್ಲೆಂದು ಕಾಣುತ್ತದೆ. ಕೊಂಚ ದೂರ ನಡೆಯುತ್ತಿದ್ದಂತೆಯೇ ಎದುರಿಂದ ರೈಲು ಬರುತ್ತಿರುವಂತೆ ಕಂಡಿತು. ರೈಲು ಚಕ್ರಗಳು ಉರುಳಿ ಉರುಳಿ ಹೊಳಪು ಬಂದಿದ್ದ ಕಂಬಿಯ ಹೊಳೆಯುವ ಮೇಲ್ಮೈ ದೂರದಲ್ಲಿ ಕಾಣುವ ಬೆಳಕಿನವರೆಗೂ ಗೀರೆಳೆದಂತೆ ಸಾಗಿ ಒಂದರೊಳಗೊಂದು ಲೀನವಾಗಿದ್ದವು. ರೈಲು ಹೋದಮೇಲೆ ಮುಂದುವರಿಯೋಣವೆಂದು ಇಬ್ಬರೂ ಕಂಬಿ ಪಕ್ಕಕ್ಕೆ ನಿಂತು ಕಾದರು. ಎಷ್ಟು ಹೊತ್ತು ಕಾದರೂ ರೈಲಿನ ದೀಪ ನಿಂತಲ್ಲೇ ನಿಂತಿದ್ದನ್ನು ನೋಡಿದಮೇಲೆ ಇಬ್ಬರಿಗೂ ಅದು ರೈಲಲ್ಲ, ಅದೇ ಸುರಂಗದ ಹೊರಬಾಯಿ! ನಮಗೆ ದೀಪದಂತೆ ಕಾಣುತ್ತಿರುವುದು ರೈಲಿನ ದೀಪ ಅಲ್ಲ, ಹೊರಜಗತ್ತಿನ ಬೆಳಕು ಎಂದು ಅರಿವಾಯ್ತು. ಏಣಿಯಂತೆ ಕಾಣುತ್ತಿದ್ದ ಹೊಳೆಯುವ ಕಂಬಿಗಳೆರಡರ ಮಧ್ಯೆ ಇಬ್ಬರೂ ಕೈಕೈ ಹಿಡಿದು ನಡೆದರು. ದೂರದಲ್ಲಿ ಚುಕ್ಕಿಯಂತೆ ಕಾಣುತ್ತಿದ್ದ ಬೆಳಕು ನಿಧಾನವಾಗಿ ದೊಡ್ಡದಾಗುತ್ತ ವೃತ್ತಾಕಾರಕ್ಕೆ ತಿರುಗಿತು. ಸುರಂಗದೊಳಗೆ ಸಿಕ್ಕಿಬಿದ್ದಿರುವ ಕುಂಟರಾಮನ ಹಣೆಬರಹವನ್ನು ನೆನೆದು ಗೌರಿ "ಅಲ್ರೀ ಅವನ್ನ ಖೂನಿ ಮಾಡೋದಕ್ಕೆ ಬಂದವರನ್ನ ಅಡ್ಡ ಸುರಂಗದೊಳಗೆ ಸಿಕ್ಕಿಸಿದೆ ಅಂತಾನಲ್ಲ, ಇವನೂ ಹಂಗೇ ಸಿಕ್ಕಿಕೊಂಡಿದಾನಲ್ಲ!'' ಎಂದಳು.



# ಒಳದಾರಿ - ೨೮



ಸುರಂಗದ ಕಗ್ಗತ್ತಲಿಂದ ಹೊರಗಿನ ಬೆಳಕಿಗೆ, ಬೆಳಗಿನ ತಂಗಾಳಿಗೆ ಮೈಯೊಡ್ಡಿ ಹೊಸ ಹುಮ್ಮಸ್ಸು ಚೈತನ್ಯ ಅವರಲ್ಲಿ ಮೂಡಿತ್ತು. ಆದರೂ ಮಾನಸಿಕವಾಗಿ ಅವರಿಗೆ ಸುರಂಗದೊಳಗೇ ಮುಂದುವರಿಯುತ್ತಿರುವ ಭಾವನೆ ಹೋಗಲಿಲ್ಲ. ಏಕೆಂದರೆ ಅವರು ಎದುರಿಸುತ್ತಿದ್ದ ಸಮಸ್ಯೆಗಳಾವುವಕ್ಕೂ ಯಾವ ಪರಿಹಾರವೂ ಹೊಳೆದಿರಲಿಲ್ಲ. ನೂರಾರು ವದಂತಿಗಳಲ್ಲಿ ಜಾನಪದ ಕಥೆಗಳಲ್ಲಿ ಮಿಳಿತವಾಗಿದ್ದ ಕೆಂಪುಕಲ್ಲಿನ ದಂತಕಥೆ ಕುಂಟರಾಮನ ವೃತ್ತಾಂತದಿಂದ ಸುರಂಗದಿಂದ ಹೊರಬರುವ ವೇಳೆಗೆ ಅವರಿಗೆ ವಾಸ್ತವ ಎಂದು ಅನುಮಾನಕ್ಕೆಡೆ ಇಲ್ಲದಂತೆ ಅರಿವಾಗಿತ್ತು. ಆದರೆ ಕುಂಟರಾಮನ ಅಸಂಬದ್ಧ ಪ್ರಲಾಪಗಳಲ್ಲಿ ಈ ದಂಧೆಯ ಹಿಂದಿರುವ ವ್ಯಕ್ತಿಗಳಾಗಲೀ ಸೂತ್ರಧಾರರು ಯಾರೆಂಬುದಾಗಲೀ ಸ್ಪಷ್ಟವಾಗಲಿಲ್ಲ. ಅದು ಅವನಿಗೆ ಗೊತ್ತಿತ್ತೋ ಇಲ್ಲವೋ! ಅಥವಾ ಇದೊಂದು ತಂತಾನೇ ನಡೆದುಕೊಂಡು ಹೋಗುವ ವ್ಯವಸ್ಥೆಯಾಗಿದ್ದು ಜೂಜಿನ ಚಪಲದ ಖದೀಮರೆಲ್ಲ ಬೇಕೆಂದಾಗ ಬಂದು ಸೇರಿ ಲಾಭ ಮಾಡಿಯೋ, ಪ್ರಾಣ ತೆತ್ತೋ ನಿರ್ಗಮಿಸುತ್ತಿದ್ದರೂ ಇರಬಹುದು!

ಈಗ ಅದರ ರಹಸ್ಯ ಅನ್ಯರಿಗೆ ಅರಿಯದಂತೆ ಸರ್ಪಕಾವಲಿನಲ್ಲಿ ಕಾಯುತ್ತಿರುವ ಖದೀಮರಿಂದ ತಪ್ಪಿಸಿಕೊಳ್ಳುವುದು ಹೇಗೆ? ತಮಗೆ ಈ ವ್ಯವಹಾರದ ಗೊಡವೆಯೇ ಬೇಡದಿದ್ದರೂ ತಾನಾಗಿಯೇ ತಿಳಿದ ಇದನ್ನು ಮರೆಯುವುದು ಹೇಗೆ? ಮರೆತರೂ

ಅದನ್ನು ಮರೆತಿದ್ದಾರೆಂದು ತಮ್ಮನ್ನು ಬೆನ್ನಟ್ಟಿರುವವರಿಗೆ ತಿಳಿಯುವುದು ಹೇಗೆ? ಹಾಗಾದರೆ ಹುಟ್ಟಿದವರೆಲ್ಲಾ ಒಂದಲ್ಲ ಒಂದು ದಿನ ಸಾಯಲೇಬೇಕೆಂಬಂತೆ ಈ ಖದೀಮರ ಕೈಲಿ ಸಾಯಬೇಕೆನ್ನುವುದನ್ನು ವಿಧಿ ಎಂದು ಒಪ್ಪಿಕೊಳ್ಳಬೇಕೆ? ಇದೊಂದು ಚಿತ್ತಸ್ಥೈರ್ಯವನ್ನು ಅಲ್ಲಾಡಿಸುವಂಥ ಸನ್ನಿವೇಶವಾದರೂ ತಮ್ಮ ಜೀವನದಲ್ಲಿ ಅನೇಕಾನೇಕ ಬಿಕ್ಕಟ್ಟುಗಳನ್ನೂ ಪ್ರತಿರೋಧಗಳನ್ನೂ ಎದುರಿಸಿ ಎದುರಿಸಿ ಪಳಗಿಹೋಗಿದ್ದ ಗೌರಿ ಸುರೇಶರು ಸೋಲೊಪ್ಪಿಕೊಂಡು ಶರಣಾಗುವ ವ್ಯಕ್ತಿತ್ವದವರಂತೂ ಆಗಿರಲಿಲ್ಲ. ಜೊತೆಗೆ ಅವರ ಕೈಲಿದ್ದ ಕಡತ ಬೇರೆ ಅವರಿಗೆ ಅನೇಕ ಸಾಹಸಗಳನ್ನೂ, ಹೊಸಹೊಸ ಹುಚ್ಚಾಟಗಳ ಅಗಣಿತ ಸಾಧ್ಯತೆಗಳನ್ನೂ ಪ್ರಚೋದಿಸಿ ದಿಗಿಲಿಗಿಂತ ಹೆಚ್ಚಾಗಿ ಹುಮ್ಮಸ್ಸನ್ನೇ ಕೆರಳಿಸಿತು. ಮೊದಲೇನೋ ಗೌರಿ ತಮ್ಮ ತಂದೆ ವಿಠ್ಠಲ ರೈಗಳಿಗೆ ಹೇಳಿ ಸಲಹೆ ಸಹಾಯ ಪಡೆಯೋಣ ಎಂದರೂ, ಕುಂಟರಾಮ ತಮ್ಮ ಮಾತನ್ನು ಯಾರೂ ನಂಬದ ಶಾಪಕ್ಕೆ ಸಿಕ್ಕಿಕೊಳ್ಳುತ್ತೇವೆಂದು ಹೇಳಿದ್ದು ನೆನಪಿಗೆ ಬಂದು, ಅಕ್ಷರಶಃ ಅದು ನಿಜ ಎನ್ನಿಸಿ ಯಾರಿಗೂ ಹೇಳಕೂಡದೆಂದು ಅವಳು ತೀರ್ಮಾನಿಸಿದಳು. ತಮ್ಮನ್ನು ಬೆನ್ನಟ್ಟಿರುವವರ ವಿರುದ್ಧ ಯಾರ ಸಹಾಯ ತೆಗೆದುಕೊಳ್ಳಬೇಕೆಂದಾದರೂ ತಮ್ಮ ಗುಟ್ಟು ಬಿಟ್ಟುಕೊಡ ಬೇಕೆಂದಾಗುತ್ತದೆ. ಆದ್ದರಿಂದ ಯಾರಿಗೂ ಹೇಳದೆ ಯಾರ ಸಹಾಯವನ್ನೂ ಯಾಚಿಸದೆ ಪರಿಸ್ಥಿತಿಯನ್ನು ಎದುರಿಸಬೇಕೆಂದು ಇಬ್ಬರೂ ನಡೆಯುತ್ತಾ ಮಾತಾಡಿಕೊಂಡು ತೀರ್ಮಾನಿಸಿದರು. ಅವರಿಬ್ಬರಿಗೂ ಎಲ್ಲರಂತೆಯೇ ಭಯ ಕಾತರ ಸಂಶಯ ಉದ್ವಿಗ್ನತೆ ಎಲ್ಲ ಇದ್ದರೂ ಸಾವಿನ ನೆರಳಿನಲ್ಲಿ ಸಾಹಸವೆಸಗುವ ಒಂದು ವಿಚಿತ್ರ ಮಾದಕ ಅಮಲು ಸೂಕ್ಷ್ಮವಾಗಿ ಒಳಗೇ ಕುಳಿತಿತ್ತು.

ಗೌರಿ ಕುಂಟರಾಮನ ನಿಸ್ಸಹಾಯಕ ಸ್ಥಿತಿಯ ಬಗ್ಗೆ ಮತ್ತು ಅವನು ಬಿಲದೊಳಗಿನ ಇಲಿಯಂತೆ ಕಾಲ ಹಾಕುತ್ತಿರುವುದರ ಬಗ್ಗೆ ಅನುತಾಪ ಸೂಚಿಸಿದ್ದಕ್ಕೆ ಸುರೇಶ "ಅವನಾದರೂ ಈ ತೊಂದರೆಗೆ ಗೊತ್ತಿದ್ದೇ ಹೋಗಿ ಸಿಕ್ಕಿಕೊಂಡವನು ಗೌರಿ. ಆದರೆ ನಮ್ಮ ಪರಿಸ್ಥಿತಿ ಹಾಗಲ್ಲ. ನಾವು ಯಾವುದನ್ನೂ ಬಯಸದೆ ಆಕಸ್ಮಿಕವಾಗಿ ಇದರೊಳಗೆ ಸಿಕ್ಕಿಬಿದ್ದಿದ್ದೇವೆ. ಇದೊಂದು ಹೊರದಾರಿಗಳಿಲ್ಲದ ಸುರಂಗ ಎಂದು ನಮಗೇನು ಗೊತ್ತಿತ್ತು ಹೇಳು?" ಎಂದು ಕೇಳಿದ.

ಗೌರಿ ಯೋಚಿಸಿದಳು. ಈ ದಂಧೆಯ ಕರಾಳಮುಖಗಳು ಅವರಿಗೆ ಗೊತ್ತಿರಲಿಲ್ಲ ಎನ್ನುವುದು ನಿಜ. ಆದರೆ ಗೊತ್ತಿದ್ದರೆ ಅವರು ಇದರಿಂದ ದೂರ ಇರುತ್ತಿದ್ದರೆ? ಈ ಪ್ರಶ್ನೆಗೆ ಉತ್ತರ ಮಾತ್ರ ಅವಳಿಗೆ ಯೋಚಿಸುವುದು ಕಷ್ಟವಾಯ್ತು. "ಅಲ್ಲರೀ ನಮಗೆ ಗೊತ್ತಿರಲಿಲ್ಲ ಅನ್ನುವುದು ನಿಜ. ಆದರೆ ಗೊತ್ತಿದ್ದರೆ ನಾವು ಬೇರೆ ರೀತಿ ವರ್ತಿಸುತ್ತಿದ್ದೆವಾ, ಸ್ವಲ್ಪ ಸರಿಯಾಗಿ ಯೋಚಿಸಿ. ಈಗ ನಮ್ಮ ಕೈಯ್ಯಲ್ಲಿದ್ದ ದುಡ್ಡನ್ನಷ್ಟೂ ಕೊಟ್ಟು ಆ ರಾಜಪ್ಪನ ಕಡತ ಕೊಂಡುಕೊಂಡಿದ್ದೇಕೆ? ಅದನ್ನು ಓದುತ್ತ ಅದರ ಇನ್ನೊಂದು ಅರ್ಥ ತಿಳಿಯುತ್ತಿದ್ದಹಾಗೇ ನಿಮಗೆ ಅಪಾಯದ ಸಾಧ್ಯತೆಗಳೆಲ್ಲ ಹೊಳೆದಿರಲೇಬೇಕಲ್ಲವ? ಕೆಂಪು

ಕಲ್ಲನ್ನ ಪತ್ತೆಮಾಡಬೇಕೆಂದು ನಮಗೂ ಇಷ್ಟ ಇದೆ ಅಲ್ಲವ?'' ಎಂದು ಸುರೇಶನನ್ನು ಕೇಳಿದಳು.

ಸುರೇಶ ಮಾತಾಡಲಿಲ್ಲ. ಆದರೆ ರೈಲು ಕಂಬಿ ಪಕ್ಕ ನಡೆಯುತ್ತಾ ಆ ಬಗ್ಗೆ ಗಾಢವಾಗಿ ಯೋಚಿಸಿದ. ಗೌರಿಯ ಮಾತುಗಳಲ್ಲಿ ಒಂದುಬಗೆಯ ನಿರ್ಭೀತಿ, ಇಂಥ ಅಪಾಯಕರ ಸಾಹಸಕ್ಕೆ ಸಾವಿನ ಭೀತಿ ಅನಿವಾರ್ಯ ಎಂದು ಒಪ್ಪಿಕೊಳ್ಳುವ ಧೋರಣೆ ಇತ್ತು. ಜುಗಾರಿ ಕ್ರಾಸಿನ ಸಾವು ಬದುಕಿನ ಜೂಜಾಟದ ಪ್ರಚಂಡ ಗುರುತ್ವಾಕರ್ಷಣೆಯಲ್ಲಿ ತಪ್ಪಿಸಿಕೊಳ್ಳಲಾಗದಂತೆ ತಾವೂ ಸಿಕ್ಕಿಕೊಳ್ಳುತ್ತಿರುವುದು ಅವನಿಗೆ ಗೌರಿಯ ಪ್ರಶ್ನೆಗಳ ಬಗ್ಗೆ ಯೋಚಿಸಿದಂತೆ ಯೋಚಿಸಿದಂತೆ ಚೆನ್ನಾಗಿ ಅರ್ಥವಾಯಿತು. ಆದರೆ ಈಗ ಮಾಡುವುದೇನು?

"ಅದೆಲ್ಲಾ ಏನಾದರೂ ಇರಲಿ. ಈಗ ಮಾಡುವುದೇನು? ಅದನ್ನು ಯೋಚಿಸು. ಅಲ್ಲಿ ಎಷ್ಟು ಕೋಟಿ ರೂಪಾಯಿಯ ಮಾಣಿಕ್ಯಗಳು ಬೇಕಾದರೂ ಬಿದ್ದಿರಲಿ. ಏಳು ಹೆಡೆ ಸರ್ಪಗಳು ನಿಧಿ ಕಾಯುವಹಾಗೆ ಈ ಕೊಲೆಗಡುಕರ ಗ್ಯಾಂಗುಗಳು ಕಾದುಕೊಂಡಿದ್ದಾವಲ್ಲ!'' ಎಂದು ಸುರೇಶ ಗೌರಿಗೆ ಹೇಳಿದ. ಅವನ ಮಾತಿನಲ್ಲಿ ಕೆಂಪು ಕಲ್ಲುಗಳ ಬಗ್ಗೆಯೋ ಅಥವಾ ಅದರಿಂದ ಸಿಗಬಹುದಾದ ಕೋಟ್ಯಂತರ ರೂಪಾಯಿಗಳ ಬಗ್ಗೆಯೋ ಗೌರಿಗೆ ಆಸೆ ಇದೆ ಎನ್ನುವ ಛಾಯೆಯೂ ಇತ್ತು.

"ಅಲ್ರೀ ಆ ಕೋಟಿರೂಪಾಯಿ ಯಾರಿಗೆ ಬೇಕಾಗಿದೆ. ಅಷ್ಟೊಂದು ದುಡ್ಡು ಕಟ್ಟಿಕೊಂಡು ನಾವೇನು ಮಾಡುತ್ತೇವೆ ಹೇಳಿ? ಇಲ್ಲೀವರೆಗೂ ಸಿಕ್ಕಿದ ದುಡ್ಡಿಗೆಲ್ಲಾ ನಾವು ಕೊಂಡುಕೊಂಡಿರೋದು ಗಂಡಾಂತರಗಳನ್ನೆ ಅಲ್ಲವ. ಕೆಂಪು ಕಲ್ಲು ಸಿಕ್ಕು ನಾವು ದುಡ್ಡು ಮಾಡಿದರೂ ಅದರಿಂದ ನಮಗೆ ನೆಮ್ಮದಿ ಸಿಗುತ್ತೆ ಅಂತ ನಾನಂತೂ ತಿಳಿದಿಲ್ಲ. ನೀವು ನನಗೆ ದುಡ್ಡಿನ ಆಸೆಯೋ! ಅಥವಾ ಕೆಂಪು ವಜ್ರಗಳ ಆಸೆಯೋ ಇರುವುದರಿಂದ ಹೀಗೆ ಮಾತಾಡುತ್ತಿದ್ದೇನೆ ಅಂತ ಖಂಡಿತಾ ತಿಳೀಬೇಡಿ. ಇಷ್ಟು ದಿನದ ನಮ್ಮ ಹಣೆಬರಹ ನೋಡಿದರೆ ಈ ತರದ ಹಗರಣಗಳಲ್ಲೇ ಬದುಕೋದು ನಮ್ಮ ರಕ್ತಕ್ಕೆ ಇಳಿದಿರೋಹಾಗೆ ಕಾಣ್ತದೆ. ಇಲ್ಲೀವರೆಗೆ ಬದಲಾಗದೆ ಇರೋ ನಮ್ಮ ಗ್ರಹಗತಿ ಈಗ ಫಕ್ಕನೆ ದಿಕ್ಕು ಬದಲಾಯಿಸುತ್ತ? ಇಷ್ಟೆಲ್ಲಾ ಅನುಭವಿಸಿ ಈಗ ನಮ್ಮ ಪಾಡಿಗೆ ನಾವು ಎಲ್ಲೋ ನೆಮ್ಮದಿಯಾಗಿದ್ದುಬಿಡೋಣ ಅಂತ ತಲೆತಪ್ಪಿಸಿಕೊಂಡು ಹೋಗೋದಕ್ಕಾಗುತ್ತ? ಎಲ್ಲಿಗೆ ಹೋಗ್ತೀರಿ? ಎಷ್ಟುದಿನ ಓಡುತ್ತೀರಿ ಹೇಳಿ?'' ಎಂದು ಗೌರಿ ಕೊಂಚ ಪ್ರತಿಭಟನೆಯ ದನಿಯಲ್ಲೇ ಮಾತನಾಡಿದಳು. ಇಷ್ಟೆಲ್ಲಾ ತೊಂದರೆ ತಾಪತ್ರಯ ಅನುಭವಿಸಿಯೂ ಗಡುಸಾಗಿಯೇ ಮಾತಾಡುತ್ತಿರುವ ಅವಳನ್ನು ನೋಡಿ ಇವಳು ಎಲ್ಲರಂತೆ ಅಳ್ಳೆದೆಯ ಹೆಂಗಸಂತೂ ಅಲ್ಲ ಎಂದು ಸುರೇಶ ತೀರ್ಮಾನಿಸಿದ.

"ಗೌರಿ, ಈಗಲೂ ನನಗೆ ನಮ್ಮನ್ನು ನಿಜವಾಯೂ ಕೊಲ್ಲುವುದಕ್ಕೆ ಬೆನ್ನುಹತ್ತಿದ್ದಾರೆ ಅನ್ನುವುದರ ಬಗ್ಗೆ ಅನುಮಾನ ಇದೆ. ಆದರೆ ಇಲ್ಲಿ ದೊಡ್ಡ ತಾಪತ್ರಯ

ಎಂದರೆ ನಮ್ಮ ಸಂಶಯಗಳು ಸಾಬೀತಾಗುವುದು ಅವರು ನಮ್ಮನ್ನು ಕೊಂದುಹಾಕಲು ಬಂದಾಗಲೇ. ಆಗ ನಮಗೆ ಸತ್ಯ ಗೊತ್ತಾಗಿ ಯಾವ ಪ್ರಯೋಜನವೂ ಇರುವುದಿಲ್ಲ. ನನಗೆನ್ನಿಸುವುದು ಈ ಕೆಂಪುಕಲ್ಲುಗಳ ಸಂಬಂಧದಲ್ಲಿ ಇಷ್ಟೊಂದು ಅಪಾಯ ಇರುವುದಕ್ಕೆ ಮೂಲ ಅದೊಂದು ಪರಮರಹಸ್ಯವಾಗಿರುವುದರಿಂದಲೇ ಎನ್ನಿಸುತ್ತದೆ''

''ಹಂಗಿದ್ದರೆ ಒಂದಷ್ಟು ಜನಕ್ಕೆ ಹೇಳಿಬಿಡೋಣ''

''ಯಾರಿಗೆ ಹೇಳ್ತೀಯ? ಯಾವ ಕಾರಣಕ್ಕೆ ಹೇಳ್ತೀಯ? ಕುಂಟರಾಮನ ತರ ಸಂತೆಯಲ್ಲಿ ನಿಂತುಕೊಂಡು ಕೂಗುತ್ತೀಯಾ? ಈಗ ನಾವು ಒಂದೇಒಂದು ತಪ್ಪು ಹೆಜ್ಜೆ ಇಟ್ಟರೂ ಸ್ಕೂಲು ಮಕ್ಕಳ ಕೈಲಿ ಕಲ್ಲು ಹೊಡೆಸಿಕೊಂಡು ಕುಂಟರಾಮನ ತರ ಸುರಂಗವಾಸಕ್ಕೆ ಮರಳಬೇಕಾಗುತ್ತದೆ. ಇಲ್ಲಾ ಖದೀಮರ ಕೈಗೆ ಸಿಕ್ಕಿಕೊಳ್ಳಬೇಕಾಗುತ್ತದೆ.''

''ಹಾಗಿದ್ದರೆ ಈ ಪ್ರಪಂಚದಲ್ಲಿ ನಮ್ಮ ಮಾತು ನಂಬುವವರು ಒಬ್ಬರೂ ಇಲ್ಲವ?''

''ಹೊರ ಜಗತ್ತಿನಲ್ಲಿ ಒಬ್ಬನೇ ಒಬ್ಬ ಇದಾನೆ''

''ಯಾರು?''

''ಕುಂಟರಾಮ!''

''ಥುತ್, ನೀವು ಬೇಕಾದರೆ ಅವನ ಜೊತೆ ಹೋಗಿ ಆ ಬಿಲದ ಒಳಗೆ ಹೊಕ್ಕೊಳ್ಳಿ. ನಾನು ಮಾತ್ರ ಸತ್ತರೂ ಪರ್ವಾಇಲ್ಲ, ಅಲ್ಲಿಗೆ ಬರೋದಿಲ್ಲ. ತಲೆ ತಪ್ಪಿಸಿಕೊಂಡು ಎಲ್ಲೋ ಬದುಕಿ ಮುದಿಯಾಗಿ ಕಾರಣವಿಲ್ಲದೆ ಸಾಯುವುದಕ್ಕಿಂತ ಸಕಾರಣವಾದ ಸಾವನ್ನು ಎದುರಿಸೋದು ಎಷ್ಟೋ ವಾಸಿ ಅಂತ ನನಗೆ ನಿಜವಾಗಲೂ ಅನ್ನಿಸಿದೆ. ಅವನ್ನ ಬಿಟ್ಟು ಬೇರೆ ಯಾರಾದರೂ ಇದ್ರೆ ಹೇಳಿ''

''ಬೇರೆ ಬೇಕಾದಷ್ಟು ಜನಕ್ಕೆ ನಾವು ಹೇಳುವುದು ನಿಜ ಅಂತ ಗೊತ್ತು. ಆದರೆ ಅವರೆಲ್ಲ ಕಾಳಜಗತ್ತಿನ ದಂಧೆಯವರು. ಇದನ್ನು ಬಹಿರಂಗ ಪಡಿಸುವುದಕ್ಕೆ ಒಂದೇಒಂದು ಸರಿಯಾದ ಉಪಾಯ ನನಗೆ ಗೊತ್ತಿರೋದು ಅಂದರೆ ಈ ಗುರುರಾಜ ಕವಿಯ ದ್ವಿಸಂಧಾನ ಕಾವ್ಯ ಸರಿಯಾಗಿ ಎಡಿಟ್ ಮಾಡಿ ವ್ಯಾಖ್ಯಾನದೊಂದಿಗೆ ಪ್ರಕಟಿಸಿಬಿಡೋದು. ಇಡೀ ಲೋಕಕ್ಕೆ ಈ ಕಾಳ ದಂಧೆಗಳ ಕತೆ ಗೊತ್ತಾಗುತ್ತೆ''

''ಅಲ್ಲಾಕಣ್ರಿ, ನೋಡಿದಿರಾ ನಿಮ್ಮ ಬುದ್ಧಿ! ಆ ಕಡತದಲ್ಲಿ ತೆಗೆದುಹಾಕಿರೋ ಪದ ಯಾವದು ಹೇಳ್ರಿ ಅಂದರೆ ನನಗೆ ಸೈತ ಹೇಳದೆ, ಈಗ ಲೋಕಕ್ಕೆಲ್ಲ ಹೇಳ್ತೀನಿ ಅಂತ ಹೇಳ್ತೀರಲ್ಲ! ನನಗೆ ಗೊತ್ತಾದರೆ ಏನು ಅಲ್ಲಿರೋ ಕೆಂಪು ಕಲ್ಲನ್ನೆಲ್ಲಾ ಹೋಗಿ ಬಾಚಿಕೊಂಡು ಬಂದುಬಿಡ್ತೀನಲ್ಲವ?'' ಎಂದು ಅರ್ಧ ಕೋಪ ಅರ್ಧ ಚುಡಾಯಿಸುವ ದನಿಯಲ್ಲಿ ಗೌರಿ ಹೇಳುತ್ತಾ ಜಗಳ ತೆಗೆಯುವಂತೆ ಸುರೇಶನ ಕಡೆಗೆ ತಿರುಗಿ ನಿಂತಳು. ಜಗಳದ ಸಂಪ್ರದಾಯದಂತೆ ಅವಳು ಸೆರಗು ಸೊಂಟಕ್ಕೆ ಸಿಕ್ಕಿಸಿದ್ದನ್ನು ನೋಡಿ ಸುರೇಶನಿಗೆ ಆ ಪರಿಸ್ಥಿತಿಯಲ್ಲೂ ಜೋರಾಗಿ ನಗು ಬಂತು.

''ಗೌರಿ, ನಾನು ಅದನ್ನು ಯಾರಿಗೆ ಹೇಳುವುದೂ ಅಪಾಯ ಅಂತ ನಿಜವಾಗಿಯೂ ತಿಳಿದಿದ್ದೇನೆ. ಶೇಷಪ್ಪನ ಗತಿ, ಕುಂಟರಾಮನ ಅವಸ್ಥೆ ಎಲ್ಲವನ್ನು ನೋಡಿಯೂ ನಿನಗೆ ನಾನು ಗುಟ್ಟು ಮಾಡುತ್ತಿದ್ದೇನೆಂದು ಅನ್ನಿಸಿದರೆ ನೀನು ಆ ಕೆಂಪು ಕಲ್ಲಿನ ಆಕರ್ಷಣೆಗೆ ಸಂಪೂರ್ಣ ಸಿಕ್ಕಿದ್ದೀಯ ಎಂದೇ ಅನುಮಾನಿಸಬೇಕಾಗುತ್ತೆ.''

''ಹಂಗಲ್ಲ, ನಾವು ಇಷ್ಟೆಲ್ಲ ಕಷ್ಟಪಟ್ಟು, ಪಾಡುಪಟ್ಟು, ಕಾಡುಬಿದ್ದು, ಕೈಲಿದ್ದ ದುಡ್ಡು ಕೊಟ್ಟು ಆ ಕಡತ ಕೊಂಡುಕೊಂಡು, ಈಗ ಅದನ್ನು ನೀವು ಪಬ್ಲಿಷ್ ಮಾಡಿ ಇಡೀ ಲೋಕಕ್ಕೇ ಹೇಳಿಬಿಡ್ತೀನಿ ಅಂತೀರಲ್ಲ! ಹಂಗಾರೆ ನಮಗೆ ನಮ್ಮ ಕೂಲಿ ಸೈತ ಇಲ್ಲವ? ನಿಮ್ಮ ಮಾತೇ ನಡೀಬೇಕಂತಿದ್ದರೆ ಕೊನೇಪಕ್ಷ ಒಂದು ಕೆಲಸ ಮಾಡೋಣ. ಮೊದಲು ಆ ಕಾವ್ಯ ಎಷ್ಟು ಕರಾರುವಾಕ್ಕಾಗಿದೆ ಒಂದುಸಾರಿ ಪರಿಶೀಲಿಸಿ ನೋಡೋಣ. ಆಮೇಲೆ ಪ್ರಕಟಿಸಿಬಿಡೋಣ. ಯಾಕೆ ಅನ್ನಿ ಇದನ್ನೂ ಕೂಡ ಕುಂಟರಾಮನ ವೃತ್ತಾಂತದಂತೆಯೆ ಎಲ್ಲ ಅಲಕ್ಷಿಸಿಬಿಡಬಹುದು''

''ನಿನಗೀಗ ಆ ಕಲ್ಲು ಸಿಕ್ಕುವ ಜಾಗ ಪತ್ತೆ ಮಾಡಿ ಹತ್ತು ಕಲ್ಲನ್ನಾದರೂ ಹೊತ್ತುಕೊಂಡು ಬರಬೇಕಾಗಿದೆ! ಅದಕ್ಕೇ ದಾರಿಮಧ್ಯೆ ಜಗಳ ತೆಗೆದಿದ್ದೀಯ ಅಷ್ಟೆ. ಹಾಗೆಲ್ಲಾ ನೀನು ಅನುಮಾನಿಸುವ ಅಗತ್ಯವೇ ಇಲ್ಲ. ನಮ್ಮ ಸಾಹಿತ್ಯಲೋಕದಲ್ಲಿ ಕುಂಟರಾಮನನ್ನು ಮೀರಿಸುವ ಹುಚ್ಚರಿದ್ದಾರೆ. ಕೆಂಪು ರತ್ನಗಳಿವೆ ಎಂದರೂ ಗಮನ ಕೊಡದವರು, ಗುರುರಾಜ ಕವಿಯ ದ್ವಿಸಂಧಾನ ಕಾವ್ಯದ ಅರ್ಥ ಪತ್ತೆಹಚ್ಚಬೇಕೆಂದೋ ಅಥವಾ ಒರೆಹಚ್ಚಬೇಕೆಂದೋ ಹೇಳಿದರೆ ಎಂಥ ಕಗ್ಗಾಡಿಗಾದರೂ ನುಗ್ಗಲು ತಯ್ಯಾರಾಗುವ ಮುತ್ಠಾಳರಿದ್ದಾರೆ. ತಿಳುಕೋ''

''ಇರಬಹುದು ಬಿಡಿ. ನಿಮ್ಮನ್ನೂ ರಾಜಪ್ಪನನ್ನೂ ನೋಡಿದರೆ ಗೊತ್ತಾಗುತ್ತಲ್ಲ ಸಾಹಿತ್ಯ ಲೋಕದ ಸ್ಥಿತಿ!'' ಎಂದು ಗೌರಿ ಸುರೇಶನ ಮಾತಿಗೆ ಹಾಸ್ಯ ಮಾಡಿದಳು.

ಇಬ್ಬರೂ ಮಾತಾಡುತ್ತಾ ಸುತ್ತಮುತ್ತಲ ಪರಿವೆ ಇಲ್ಲದೆ ಸುರಂಗದಿಂದ ಸಾಕಷ್ಟು ದೂರ ನಡೆದು ಬಂದಿದ್ದರು. ಹಠಾತ್ತಾಗಿ ರೈಲೆಂಜಿನ್ನಿನ ಕೂಗು ಕೇಳಿ ತಮ್ಮದೇ ಆಲೋಚನೆಗಳಲ್ಲಿ ಮುಳುಗಿದ್ದ ಅವರಿಗೆ ಎಚ್ಚರಾಯ್ತು. ಯಾವುದೋ ರೈಲು ಬರುತ್ತಿರಬಹುದೆಂದು ಮುಂದೆ ನೋಡಿದ ಅವರಿಗೆ ತಾವು ಹತ್ತಿ ಬಂದ ರೈಲೇ ದೂರದಲ್ಲಿ ನಿಂತು ಕೂಗು ಹಾಕುತ್ತಿರುವಂತೆ ಕಂಡಿತು. ಸುರೇಶ ಗೌರಿ ಇಬ್ಬರೂ ಗಾಬರಿಯಲ್ಲಿ ಬೇಗಬೇಗ ರೈಲುಕಂಬಿ ಪಕ್ಕದಲ್ಲಿದ್ದ ಪೊದೆಗಳ ಮರೆಗೆ ಸರಿದರು.

''ಇದೇನು ಅದೇ ರೈಲೋ! ಬೇರೇ ರೈಲೋ?'' ಎಂದು ಆಶಂಕೆ ಗಾಬರಿಗಳಲ್ಲಿ ಉದ್ಗರಿಸುತ್ತಾ ಗೌರಿ ''ಅಲ್ಲ ಕಣ್ರಿ, ನಾವು ಸುರಂಗದೊಳಗಿಂದ ಇಲ್ಲೀವರೆಗೆ ನಡೆದು ಬಂದರೂ ಇದು ಸ್ಟೇಷನ್ನು ಕೂಡ ತಲುಪಿಲ್ಲವಲ್ಲ. ರಾಜಪ್ಪ ಅದಕ್ಕೇ ಇದನ್ನ ನಿನ್ನೆ ರೋಡೆಂಜಿನ್ನಿಗಿಂತ ಕಡೆ ಅಂತ ಕಂಡೆಮ್ ಮಾಡಿದ್ದು''ಎಂದಳು.

ಸುರೇಶನಿಗೆ ಏನೂ ಹೊಳೆಯಲಿಲ್ಲ. ಗಾಡಿಯಲ್ಲಿ ನಾವಿಬ್ಬರೂ ಇಲ್ಲದಿರುವುದು

ಗಮನಕ್ಕೆ ಬಂದಕೂಡಲೇ ಯಾರಾದರೂ ಏನೋ ಅಪಘಾತವಾಗಿದೆ ಎಂದು ಶಂಕಿಸಿ ಅಪಾಯದ ಸರಪಳಿ ಎಳೆದು ರೈಲು ನಿಲ್ಲಿಸಿದರೇ? ಅಥವಾ ರೈಲೇ ಕೆಟ್ಟು ನಿಂತಿದೆಯೇ? ಅಥವಾ ಮುಂದೆ ಹೋಗಲಾರದಂತೆ ಕಂಬಿಯೇನಾದರೂ ಜಖಂ ಆಗಿದೆಯೇ? ಒಂದೂ ಅರ್ಥವಾಗಲಿಲ್ಲ. ಕೆಲವರು ಅಲ್ಲೇ ಕಂಬಿ ಪಕ್ಕ ಕುಳಿತು ಆರಾಮ ತಗೊಳ್ಳುತ್ತಿರುವುದನ್ನು ನೋಡಿದರಂತೂ ರೈಲು ನಿಂತು ಬಹಳ ಹೊತ್ತೇ ಕಳೆದಿರಬಹುದೆಂದು ಅವರಿಗೆ ಅನ್ನಿಸಿತು.

ರೈಲು ಏನಾದರಾಗಲಿ ಎಂದು ಉಪೇಕ್ಷಿಸಿ ಅವರು ದಾರಿ ಹಿಡಿದು ಹೋಗುವಂತೆಯೂ ಇರಲಿಲ್ಲ. ಏಕೆಂದರೆ ರೈಲು ನಿಂತಲ್ಲಿಂದ ಕೊಂಚವೇ ಮುಂದೆ ಜುಗಾರಿಕ್ರಾಸಿನ ಕಡೆಗೆ ಹೋಗಿರುವ ಕಾಡೊಳಗಿನ ಒಳದಾರಿ ಇದ್ದಿದ್ದು. ಏನು ಮಾಡಲೂ ತೋರದೆ ಇಬ್ಬರೂ ಅವಿತು ನಿಂತು ರೈಲಿನ ಬಳಿ ನಡೆಯುತ್ತಿದ್ದ ಚಟುವಟಿಕೆಗಳನ್ನು ವೀಕ್ಷಿಸಿ ಊಹಿಸಲೆತ್ನಿಸಿದರು. ರೈಲು ಇನ್ನೂ ನಾಲ್ಕಾರುಬಾರಿ ನೀಳವಾಗಿ ಕೂಗಿದಮೇಲೆ ದೂರದಲ್ಲಿ ಒಬ್ಬ ದೊಣ್ಣೆ ತಗೊಂಡು ಮೆಲ್ಲಗೆ ಬರುತ್ತಿರುವುದು ಕಾಣಿಸಿತು. ಸ್ಟೇಷನ್ನಿನಿಂದ ತುಂಬಾ ದೂರದಲ್ಲಿ ರೈಲು ನಿಂತಲ್ಲೆ ನಾಲ್ಕುಮಾರಿನ ಆಚೆ ರೈಲಿನ ಸಿಗ್ನಲ್ ಕೈ ಕಂಬ ಇತ್ತು. ಅದನ್ನು ನೋಡಿದ್ದರೆ ಸುರೇಶನಿಗೂ ಗೌರಿಗೂ ರೈಲು ನಿಂತಿರುವುದಕ್ಕೆ ಕಾರಣ ಸುಲಭವಾಗಿ ಗೊತ್ತಾಗುತ್ತಿತ್ತು. ಕೈ ಕಂಬ ಕೆಳಗೆ ಬಿದ್ದು ರೈಲು ಮುಂದುವರಿಯಲು ಸಿಗ್ನಲ್ ಸಿಕ್ಕಿರಲಿಲ್ಲ ಅಷ್ಟೆ. ಮಲೆನಾಡಿನ ಮಳೆಗಾಲಕ್ಕೆ ಸ್ಟೇಷನ್ನಿನಿಂದ ಅಲ್ಲಿಯವರೆಗೆ ಎಳೆದಿರುವ ಕೇಬಲ್ಲುಗಳಲ್ಲಿ ಎಲ್ಲಿ ತುಕ್ಕು ಹಿಡಿಯುತ್ತಿತ್ತೋ ಅಥವಾ ಕಂಬದಲ್ಲೇ ತುಕ್ಕು ಹಿಡಿಯುತ್ತಿತ್ತೋ! ಅಂತೂ ಆಗಾಗ ಅದು ಸ್ಟೇಷನ್ನಿನ ಸಿಗ್ನಲನ್ನೇ ತಗೊಳ್ಳುತ್ತಿರಲಿಲ್ಲ. ಈ ಕೈ ಕಂಬದ ಹಣೆಬರಹ ತಿಳಿದ ಡ್ರೈವರುಗಳು ಕೈ ಕಂಬದ ಸಿಗ್ನಲನ್ನು ಅಲಕ್ಷಿಸಿ ರೈಲನ್ನು ನಿಧಾನವಾಗಿ ಸ್ಟೇಷನ್ನಿನವರೆಗೂ ಒಯ್ದೇಬಿಡುತ್ತಿದ್ದರು. ಆದರೆ ಈ ದಿನಚರಿಯಲ್ಲಿ ಒಮ್ಮೆ ಒಂದು ಚಿಕ್ಕ ಅಪಘಾತ ಸಂಭವಿಸಿ ವಿಚಾರಣೆಯಲ್ಲಿ ಅದರ ಪೂರ್ತೀ ತಪ್ಪೂ ಸಿಗ್ನಲ್ ಅಲಕ್ಷಿಸಿ ಸ್ಟೇಷನ್ನಿಗೆ ಬಂದ ಡ್ರೈವರಿನದೇ ಎಂದು ತೀರ್ಮಾನವಾಗಿ ಅವನು ಕೆಲಸ ಕಳೆದುಕೊಳ್ಳಬೇಕಾಗಿ ಬಂದುದರಿಂದ ಈಗ ಎಲ್ಲ ಡ್ರೈವರ್‌ಗಳೂ ಸಿಗ್ನಲ್ ಕೊಡದಿದ್ದರೆ ಎಷ್ಟೇ ಹೊತ್ತಾಗಲಿ ಬಿಲ್‌ಕುಲ್ ಮುಂದುವರಿಯುತ್ತಿರಲಿಲ್ಲ. ಎಷ್ಟು ಹೊತ್ತಾದರೂ ರೈಲು ಸ್ಟೇಷನ್ನಿಗೆ ಬರದೆ ಕಾಡಿನೊಳಗೆಲ್ಲೋ ಸಿಳ್ಳೆ ಹೊಡೆಯುತ್ತಾ ನಿಂತಿದ್ದರೆ ಸ್ಟೇಷನ್ ಮಾಸ್ತರು ಕೈ ಕಂಬ ಕೈ ಕೊಟ್ಟಿದೆಯೆಂದು ಅಂದಾಜು ಮಾಡಿ ಸ್ಟೇಷನ್ನಿನಿಂದ ಒಬ್ಬ ಗ್ಯಾಂಗ್‌ಮನ್ನನ್ನು ದೊಣ್ಣೆ ಕೊಟ್ಟು ಕಳಿಸುತ್ತಿದ್ದರು. ಗ್ಯಾಂಗ್‌ಮನ್ ಗೊಣಗುತ್ತಾ, ಬಯ್ಯುತ್ತಾ, ಸಿಳ್ಳೆ ಕೂಗಿಸುತ್ತಿದ್ದ ಡ್ರೈವರ್ ಅಸಹನೆಗೆ ಮುಯ್ಯಿ ತೀರಿಸಲು ಆದಷ್ಟು ನಿಧಾನವಾಗಿ ಬರುತ್ತಿದ್ದ. ಬಂದು ದೊಣ್ಣೆಯಿಂದ ಕಂಬಕ್ಕೆ ನಾಲ್ಕಾರುಬಾರಿ ಹೊಡೆದು ಕೈ ಕಂಬದ ಕೈ ಕೆಳಗಿಳಿಯುವಂತೆ ಮಾಡುತ್ತಿದ್ದ. ಕೆಲವು ವೇಳೆ ಕಂಬ ಹತ್ತಿ ಕಂಬದ ಕೈಯ್ಯನ್ನು ಅಕ್ಷರಶಃ ಕೆಳಗೆಳೆದು ಇಳಿಸಬೇಕಾಗುತ್ತಿತ್ತು.


ಮರೆಯಲ್ಲಿ ನಿಂತು ನೋಡುತ್ತಿದ್ದ ಇಬ್ಬರಿಗೂ ಡ್ರೈವರೂ ಗ್ಯಾಂಗ್‌ಮನ್ನೂ ಬಿಸಿಬಿಸಿ

ಮಾತಾಡಿದ್ದೂ, ಅನಂತರ ಕಂಬ ಹತ್ತಿ ಗ್ಯಾಂಗ್‌ಮನ್ ಕೈಯ್ಯನ್ನು ಕೆಳಗೆಳೆದು ರೈಲನ್ನು ಮುಂದೆ ಹೋಗಲು ಅನುವು ಮಾಡಿದ್ದೂ ಕಾಣಿಸಿತು. ರೈಲು ಹೊರಟ ಕೂಡಲೇ ಇಬ್ಬರೂ ಸಮಾಧಾನದ ನಿಟ್ಟುಸಿರು ಬಿಡುತ್ತಾ ಮುಂದುವರಿದರು.

ಕೈಕಂಬದ ಬಲಕ್ಕೇ ಜುಗಾರಿ ಕ್ರಾಸಿನ ಒಳದಾರಿ ನೇರವಾಗಿ ಕಾಡೊಳಗೆ ಕಣಿವೆ ಇಳಿಜಾರಿನಲ್ಲಿ ಮೂರು ಮೈಲಿ ಇಳಿದಿಳಿದು ಹೋಗುತ್ತದೆ. ಆ ಕಣಿವೆಯ ತಳದಲ್ಲೇ ದೋಣಿಹೊಳೆ ಕಲ್ಲುಗಳ ನಡುವೆ ಕುದಿಕುದಿಯುತ್ತಾ ಹರಿಯುವುದು. ಅದರ ಭೋರ್ಗರೆತ ಕಿವಿಗೊಟ್ಟು ಆಲಿಸಿದರೆ ರೈಲ್ವೆ ಲೈನಿನವರೆಗೂ ಸಹ ಕೇಳಿಸುತ್ತಿತ್ತು. ಹೊಳೆಯ ಆಚೆ ದಂಡೆಯಿಂದ ನೇರವಾಗಿ ಜುಗಾರಿ ಕ್ರಾಸ್ ಮೂರೇ ಮೈಲಿಗಳಾದರೂ ಅಬ್ಬರಿಸುವ ಹೆಬ್ಬುಲಿಯಂತೆ ಹರಿಯುವ ಅದನ್ನು ದಾಟಲು ಎಲ್ಲೂ ಸಾಧ್ಯವಿರಲಿಲ್ಲ. ಹೊಳೆ ದಂಡೆಯಲ್ಲೇ ಎರಡು ಮೈಲು ನಡೆದು ಹೋಗಿ ಅಂಬಳದಿಂದ ಜುಗಾರಿಕ್ರಾಸಿಗೆ ಹೋಗುತ್ತಿದ್ದ ಸರ್ಕಾರಿ ರಸ್ತೆ ಸೇರಿ ಸೇತುವೆ ದಾಟಿಯೇ ಆಚೆದಡಕ್ಕೆ ಹೋಗಬೇಕಿತ್ತು.



# ಕಮಾನು ಸೇತುವೆ - ೨೯



ಅಂಬಳದಿಂದ ಜುಗಾರಿಕ್ರಾಸಿಗೆ ಹೋಗುವ ರಸ್ತೆ ಬೆಟ್ಟದ ಕಣಿವೆಯಲ್ಲಿ ಹದಿನೇಳು ಹೇರ್‌ಪಿನ್ ತಿರುವುಗಳಲ್ಲಿ ಇಳಿದಿಳಿದು ದೋಣಿ ಹೊಳೆಯ ಸೇತುವೆಯ ಬಳಿಗೆ ಬರುತ್ತದೆ. ಆಳವಾದ ಪ್ರಪಾತಗಳಲ್ಲಿ, ಕೊರಕಲುಗಳಲ್ಲಿ ದೋಣಿಹೊಳೆ ಇಲ್ಲಿ ಅಕ್ಷರಶಃ ಕುದಿಯುತ್ತಾ ಹರಿಯುತ್ತದೆ. ಇದೊಂದು ಕಮಾನು ಸೇತುವೆ ಇಲ್ಲದಿದ್ದರೆ ಆಕಡೆಯಿಂದ ಈಕಡೆಗೆ, ಈಕಡೆಯಿಂದ ಆಕಡೆಗೆ ಯಾವ ಸಂಪರ್ಕವೂ ಸಾಧ್ಯವಿಲ್ಲ. ಸಾಧಾರಣವಾಗಿ ನದಿಗಳನ್ನೆಲ್ಲಾ ಸುಲಭವಾಗಿ ಈಜಿಯೇ ದಾಟಿಕೊಂಡು ಓಡಾಡುವ ಕಾಡು ಪ್ರಾಣಿಗಳು ಸಹ ದೋಣಿ ಹೊಳೆಯನ್ನು ಈ ಭಾಗದಲ್ಲಿ ಈಜಿ ದಾಟಲು ಸಾಧ್ಯವಾಗದೆ ಸರ್ಕಾರಿ ಸೇತುವೆಯನ್ನೆ ಉಪಯೋಗಿಸುತ್ತಿದ್ದುವೆಂದು ಕಾಣುತ್ತದೆ. ಏಕೆಂದರೆ ಕಮಾನು ಸೇತುವೆಯ ಆಚೀಚೆಕಡೆ ಆನೆ ಹುಲಿಗಳಿಂದ ಹಿಡಿದು ಪ್ರತಿಯೊಂದು ಕಾಡು ಪ್ರಾಣಿಗಳ ಹೆಜ್ಜೆಗುರುತುಗಳೂ ಒದ್ದೆಮಣ್ಣಿನಲ್ಲಿ ಮೂಡಿರುವುದನ್ನು ಕಾಣಬಹುದಿತ್ತು. ಉದ್ದಕ್ಕೂ ನದಿ ಧುಮುಕಿ ಧುಮುಕಿ ನೊರೆಯೇಳಿಸುತ್ತಾ ಸಾಗುವುದರಿಂದ ಸುರೇಶ ಗೌರಿ ದೋಣಿಹೊಳೆಯ ದಂಡೆಯ ಪಕ್ಕದಲ್ಲಿ ನಡೆದು ಬಂದ ದಾರಿ ಯಾವಾಗಲೂ ಹೊಳೆ ಎಬ್ಬಿಸುವ ತುಂತುರಿನ ಮೋಡದಿಂದ ಕವಿದಿರುತ್ತಿತ್ತು. ಸದಾ ತೇವದಿಂದ ಕೂಡಿರುವ ಆ ಭಾಗದಲ್ಲಿ ಪಾಚಿ ನೆಲವನ್ನೆಲ್ಲಾ ಹೊದ್ದಿಸಿದಂತೆ ಮುಸುಗಿ ಕಾಲಿಟ್ಟಲ್ಲಿ ಜಾರುತ್ತಿತ್ತು. ಸುತ್ತ ಕಿಕ್ಕಿರಿದ ಕಾಡಿನ ಪರ್ವತಗಳು! ತಲೆಯ ನೆತ್ತಿಯಲ್ಲೆಲ್ಲೋ ಅಂಗೈಯ್ಯಗಲ ಕಾಣುವ ಆಕಾಶ! ಈ ರೌದ್ರತೆಗೆ ಶ್ರುತಿಹಿಡಿದ ಹಾಗೆ ನಿರಂತರವಾಗಿ ಭುಸುಗಡುತ್ತಲೇ ಇರುವ

ನದಿಯ ಭೋರ್ಮೊರೆತ! ದಂಡೆಯ ಆ ಕಾಡು ದಾರಿ ಮನುಷ್ಯರಿಗಿಂತ ಹೆಚ್ಚಾಗಿ ಕಾಡು ಮೃಗಗಳೇ ಓಡಾಡಿ ಆದುದೆಂದು ಹೇಳಬಹುದು. ಅವು ಮಾಡಿಕೊಂಡ ಹಾದಿಯನ್ನು ಒಳದಾರಿ ಹಿಡಿದು ಓಡಾಡುವ ಮನುಷ್ಯರು ಆಗೀಗ ಉಪಯೋಗಿಸುತ್ತಿದ್ದರಷ್ಟೆ. ಅಲ್ಲಲ್ಲಿ ಜಾರುತ್ತಾ, ಅಕ್ಕಪಕ್ಕದ ಗಿಡ ಮರಗಳನ್ನು ಹಿಡಿದುಕೊಂಡು ತಡವರಿಸುತ್ತಾ ಎರಡು ಮೈಲು ಸವೆಸುವುದರೊಳಗೆ ಅಲ್ಲೆಲ್ಲ ಹೊಗೆಯಂತೆ ಕವಿದಿದ್ದ ತುಂತುರಿನ ಮೋಡದಿಂದ ಅವರಿಬ್ಬರ ಬಟ್ಟೆಬರೆಗಳೂ ಮೈಗೆ ಅಂಟಿಕೊಳ್ಳುವಷ್ಟು ಒದ್ದೆಯಾಗಿಹೋದವು. ಗುರುರಾಜ ಕವಿಯ ಕಾವ್ಯ ಹಿಡಿದುಕೊಂಡು ಕೆಂಪುಕಲ್ಲುಗಳನ್ನು ಹುಡುಕಹೊರಟರೆ ಇಂಥದೇ ದುರ್ಗಮ ಹಾದಿಯಲ್ಲಿ ಗೊತ್ತುಗುರಿ ಇಲ್ಲದೆ ನೂರಾರು ಮೈಲು ಅಡ್ಡಾಡಬೇಕಾಗುತ್ತದೆಂಬ ಯೋಚನೆಯಲ್ಲಿ ಅವರಿಬ್ಬರೂ ಒಬ್ಬರನ್ನೊಬ್ಬರು ಕಿಚಾಯಿಸುತ್ತ ಛೇಡಿಸುತ್ತ ಬರುತ್ತಿದ್ದಾಗ ಅಲ್ಲಿ ಬಂಡೆಯೊಡನೆ ಬಂಡೆಯಾಗಿ ನಿಂತಿದ್ದ ಎರಡು ಕಾಡಾನೆಗಳನ್ನು ತೀರಾ ಹತ್ತಿರ ಬರುವವರೆಗೂ ನೋಡಲೇ ಇಲ್ಲ. ಆದರೆ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡು ಮಾತಾಡುತ್ತ ಬರುತ್ತಿದ್ದ ಇವರಿಬ್ಬರನ್ನೂ ಆನೆಗಳು ಕೊಂಚ ದೂರದಿಂದಲೇ ನೋಡಿದ್ದುವೋ ಏನೋ! ಏಕೆಂದರೆ ಸುರೇಶನ ಕಣ್ಣಿಗೆ ಅವು ಬೀಳುವಹೊತ್ತಿಗಾಗಲೇ ಅವು ಇವರತ್ತ ಬೆನ್ನುತಿರುಗಿಸಿ ಕಾಲುಕೀಳುತ್ತಿದ್ದುವು. ದೋಣಿಹೊಳೆಯ ಹೆಬ್ಬಂಡೆಗಳಿಗೆ ಕೈಕಾಲು ಮೂಡಿ ಓಡಿಹೋದಹಾಗೆ ಕಂಡ ಅವುಗಳ ಬೃಹದಾಕಾರ ತಮ್ಮಿಬ್ಬರಿಗೂ ಅಷ್ಟು ಹತ್ತಿರ ಬರುವವರೆಗೆ ಗೋಚರಿಸದಿದ್ದುದು ಹೇಗೆಂದು ಇಬ್ಬರೂ ಅಚ್ಚರಿಪಟ್ಟು, ನಿರ್ಗಮಿಸುತ್ತಿದ್ದ ಅವು ದೂರಾದವೆಂದು ಖಾತರಿಯಾಗುವವರೆಗೂ ದೂರದಲ್ಲೇ ಅಡಗಿ ನಿಂತಿದ್ದು ಮುಂದುವರಿದರು

ಇಬ್ಬರೂ ಕಾಡು ದಾಟಿ ಸರ್ಕಾರಿ ರಸ್ತೆಗೆ ಇಳಿದಾಗ ತೊಯ್ದು ಮೈಗೆ ಅಂಟಿದ್ದ ಒದ್ದೆಬಟ್ಟೆಗಳಿಂದ ಹಿಂದಿನ ರಾತ್ರಿ ರೈಲಿನಿಂದ ಹಾರಿದಾಗ ಸುರಂಗದೊಳಗೆ ಹತ್ತಿದ ಕೆಸರು ನೀರಿನೊಂದಿಗೆ ಇಳಿಯುತ್ತಾ ಇತ್ತು. ಕೈಕಾಲುಗಳು ನೆಟ್ಟಗಿದ್ದುದೊಂದನ್ನು ಬಿಟ್ಟರೆ ಅವರು ನೋಡಲು ಕುಂಟರಾಮನ ಪರಿಷ್ಕೃತ ಆವೃತ್ತಿಗಳಂತೆ ಕಾಣುತ್ತಿದ್ದರು. ಇಷ್ಟು ಅಸಂಸ್ಕೃತ ಉಡುಗೆಗಳನ್ನುಟ್ಟು ಸರ್ಕಾರಿ ರಸ್ತೆಯಲ್ಲಿ ನಡೆಯುವುದು ಗೌರಿಗಂತೂ ತುಂಬಾ ನಾಚಿಕೆಯ ವಿಷಯವಾಗಿತ್ತು. ಬೇಗಬೇಗ ದೋಣಿಹೊಳೆ ಕಮಾನು ಸೇತುವೆ ದಾಟಿ ಮತ್ತೆ ಕಾಡುದಾರಿಯಲ್ಲೇ ನಡೆದು ಹೇಗಾದರೂ ಯಾರಿಗೂ ಕಾಣದಂತೆ ಜುಗಾರಿಕ್ರಾಸ್ ಸೇರಿಕೊಳ್ಳೋಣವೆಂದು ಅವರು ಉಪಾಯ ಮಾಡಿ ಸರಸರ ಕಮಾನು ಸೇತುವೆಯತ್ತ ಕಾಲುಹಾಕುತ್ತಿದ್ದರು. ಅಷ್ಟು ಹೊತ್ತಿಗೆ ಸರಿಯಾಗಿ ಯಾವುದೋ ವಾಹನ ಬರುವ ಸದ್ದಾಯ್ತು. ಅದು ಹೋಗುವವರೆಗೆ ರಸ್ತೆ ಪಕ್ಕದ ಪೊದೆಗಳಲ್ಲೇ ನಿಲ್ಲೋಣವೆಂದರೆ ಸೇತುವೆ ಬಳಿಗೆ ಬಂದಾಗಿದೆ! ಕೆಳಗೆ ಭೀಕರವಾಗಿ ನದಿ ಗುರುಗುಟ್ಟುತ್ತ ಹರಿಯುತ್ತಿದೆ! ಏನೂ ಮಾಡುವಂತೆಯೇ ಇಲ್ಲ! ಸೇತುವೆಯನ್ನು ಸರಸರ ದಾಟುವುದೊಂದೇ ಮಾರ್ಗ ಎಂದು ತೀರ್ಮಾನಿಸಿ ಮೆಲ್ಲಗೆ ಓಡಿದಂತೆ ಕಾಲು ಹಾಕಿದರು.

ಅವರು ಕಮಾನು ಸೇತುವೆಯುನ್ನು ಕಾಲುಭಾಗ ಕ್ರಮಿಸಿಲ್ಲ ಅಷ್ಟರಲ್ಲಿ ಒಂದು ಆಟೋರಿಕ್ಷಾ ವೇಗವಾಗಿ ಅವರಿಗೆ ಸಮೀಪಗತವಾಯ್ತು. ಆದು ತೀರ ಹತ್ತಿರಾದಾಗ ರಿಕ್ಷಾದೊಳಗಿನ ಮೂವರಲ್ಲಿ ಯಾವನೋ ಒಬ್ಬ "ಇವರೇ ಇವರೇ! ನಿಲ್ಲಿಸು" ಎಂದು ಗಟ್ಟಿಯಾಗಿ ಹೇಳಿದ್ದು ಕೇಳಿಸಿತು. ಇವರಿಗಿಂತ ನಾಲ್ಕು ಗಜ ಮುಂದೆ ರಿಕ್ಷಾ ನಿಂತಿದ್ದೇ ತಡ ಅದರಿಂದ ಮೂವರು ಮುಸುಕುಧಾರಿ ವ್ಯಕ್ತಿಗಳು ನೆಗೆದಂತೆ ಹಾರಿ ಇವರಿಬ್ಬರತ್ತ ಓಡಿ ಬಂದರು. ಎತ್ತಕಡೆಯೂ ಓಡಿ ತಪ್ಪಿಸಿಕೊಳ್ಳಲಸಾಧ್ಯಗುವಂತೆ ಕಮಾನು ಸೇತುವೆಯ ಇಕ್ಕಟ್ಟಿನಲ್ಲಿ ಇಬ್ಬರೂ ಕೊನೆಗೂ ಸಿಕ್ಕಿಬಿದ್ದಿದ್ದರು. ರಾಜಪ್ಪನ ಕಡತ ಎಡಿಟ್ ಮಾಡಿ ಪ್ರಕಟಿಸಿ ಲೋಕಕ್ಕೆಲ್ಲ ತಿಳಿಸುವುದರೊಳಗೇ ಈ ದುರಾತ್ಮರ ಕೈಗೆ ಸಿಕ್ಕಿಬಿದ್ದೆವಲ್ಲ ಎಂದು ಗೌರಿಗೂ ಸುರೇಶನಿಗೂ ಒಮ್ಮೆ ಬೇಸರವಾಯ್ತು. "ಏನು ಮಾಡ್ತಾರಿವರು ನೋಡೇ ಬಿಡೋಣ! ನಡೀರಿ. ಬೆಸ್ಟ್ ಆಫ್ ಲಕ್" ಎಂದು ಗೌರಿ ರೈಲಿನಲ್ಲಿ ಧುಮುಕಲು ರೆಡಿಯಾದ ಹಾಗೆ ಸಿದ್ಧಳಾಗಿ ಒಂದೆರಡು ಹೆಜ್ಜೆ ಮುಂದುವರಿದಳು. ಗೌರಿಯ ಮೊಂಡು ಧೈರ್ಯ ನೋಡಿ ಸುರೇಶನಿಗೆ ಒಮ್ಮೆ ಸಿಟ್ಟೇ ಬಂತು. ಇವರು ಕೊಲ್ಲುವುದೇ ನಿಜವಾದರೆ ಇವರಲ್ಲಿ ಒಬ್ಬನನ್ನಾದರೂ ಸೇತುವೆಯಿಂದ ಕೆಳಗೆ ತಳ್ಳಿ ಕೆಳಗಿನ ಹೆಬ್ಬಂಡೆಗಳಮೇಲೆ ಅಪ್ಪಳಿಸಿ ಬೀಳುವಂತೆ ಮಾಡಬೇಕೆಂದು ಅವನು ಉಪಾಯ ಚಿಂತಿಸುತ್ತಿರಬೇಕಾದರೆ ಗೌರಿ ಮುಂದಡಿಯಿಟ್ಟಿದ್ದಳು.

ಮುಂದೆ ಬರುತ್ತಿದ್ದ ಮುಸುಗುಧಾರಿ ಚಕ್ಕನೆ ಗೌರಿಯನ್ನು ಹಿಡಿದು ಕೈ ತಿರುಚಿ ಅವಳ ಮುಖವನ್ನು ಸುರೇಶನ ಕಡೆಗೆ ತಿರುಗಿಸಿ ಅವಳ ಹಿಂದಿನಿಂದ "ಬದ್ಮಾಷ್, ಹೇಳಿದಂಗೆ ಕೇಳಿದರೆ ನೀವಿಬ್ಬರೂ ಜೀವಸಮೇತ ಹೋಗಬಹುದು" ಎಂದ. ಅವನ ಕುತ್ತಿಗೆಯಲ್ಲಿ ಮುಖಕ್ಕೆ ಕಟ್ಟಿಕೊಂಡಿದ್ದ ಮುಸುಗಿನ ಕೆಳಗೆ ಕೆಂಪು ಮಫ್ಲರು ಚೆನ್ನಾಗಿ ಕಾಣುತ್ತಿತ್ತು. ಗೌರಿಯ ಕುತ್ತಿಗೆಯ ಹತ್ತಿರ ಅವನು ಹೊಳೆಹೊಳೆಯುವ ಚೂರಿ ಹಿಡಿದಿರುವುದನ್ನು ಸುರೇಶನಿಗೆ ಕಾಣುವಂತೆ ಮುಂದೆ ಮಾಡಿದ್ದ. ಗೌರಿ ಒಂದೇಒಂದು ನಿಮಿಷ ತಡಮಾಡಿದ್ದರೆ ಸುರೇಶ ಆ ಕೆಂಪು ಮಫ್ಲರಿನ ಖೇಡಿಯನ್ನು ಎತ್ತಿ ಸೇತುವೆಯಾಚೆ ಎಸೆದು ಕೋಳಿ ಮೊಟ್ಟೆಯಂತೆ ಅವನ ತಲೆ ಅಪ್ಪಚ್ಚಿಯಾಗುವುದನ್ನು ನೋಡಬೇಕೆಂದು ಯೋಚಿಸಿದ್ದ. ಗೌರಿ ದೊಡ್ಡದಾಗಿ ಧೈರ್ಯ ತೋರಿಸಹೋಗಿ ಈ ಖೇಡಿಸೂಳೇಮಗನ ಚೂರಿಗೆ ಕುತ್ತಿಗೆ ಕೊಟ್ಟಳಲ್ಲಾ! ಎಂದು ಒಂದುಸಾರಿ ಆ ಪರಿಸ್ಥಿತಿಯಲ್ಲೂ ಅವಳ ಮೇಲೆ ರುಮ್ಮನೆ ಸಿಟ್ಟು ಬಂತು. ಆದರೆ ಅವನ ಮಾತು ಕೇಳಿದ ತಕ್ಷಣ ಒಂದುಸಾರಿ ಸುರೇಶನಿಗೆ ಆಶ್ಚರ್ಯವೂ ಆಯ್ತು. "ಜೀವ ಸಮೇತ ಹೋಗಬಹುದು!!" ಏನಿದರರ್ಥ? ಹಾಗಾದರೆ ಏನೋ ಚೌಕಾಶಿ ಮಾಡಲು ಬಂದಿದ್ದಾನಲ್ಲವೆ?" ಅವನ ಹಿಡಿತ ಬಿಡಿಸಿಕೊಳ್ಳಲು ಕೊಸರಾಡಿದ ಗೌರಿಗೆ ಒಂದು ನಿಮಿಷ ಸುಮ್ಮನಿರು ಎನ್ನುವಂತೆ ಸಂಜ್ಞೆ ಮಾಡುತ್ತ ಅವರು ಮೂವರನ್ನೂ ಒಮ್ಮೆ ತೀವ್ರವಾಗಿ ನೋಡಿದ. ಗಂಗೂಲಿ ಜೊತೆ ಕ್ರಾಂತಿಗೆಂದು ಅಂಡರ್‌ಗ್ರೌಂಡ್ ವ್ಯವಹಾರಗಳಲ್ಲಿ ತೊಡಗಿದ್ದಾಗ ಸುರೇಶ ಅನೇಕ ರೌಡಿಗಳನ್ನು

ನೋಡಿದ್ದ. ಗೌರಿ ಕುತ್ತಿಗೆಗೆ ಚೂರಿ ಹಿಡಿದು ನಿಂತಿದ್ದ ಇವನು ತಣ್ಣಗೆ ಕಾರ್ಯಸಾಧನೆ ಮಾಡಿ ಕೆಲಸ ಮುಗಿಸಿ ತೆರಳಲಿಚ್ಛಿಸುವ ವೃತ್ತಿಕೊಲೆಗಾರರ ಮರ್ಜಿಯಲ್ಲಿರುವವನಂತೆ ಕಾಣಲಿಲ್ಲ. ಯಾವೋ ಹಿಂದಿ ಸಿನೆಮಾಗಳನ್ನು ನೋಡಿಕೊಂಡು ಕಮಾನು ಸೇತುವೆಯ ಮೇಲೆ ರಿಹರ್ಸಲ್ ತಗೊಳ್ಳುತ್ತಿರುವವನಂತೆ ಕಾಣಿಸಿದ. ತಾವು ಜೀವಸಮೇತ ಹೋಗಬಹುದಾದ ಒಂದೇಒಂದು ಕ್ಷೀಣ ಸಾಧ್ಯತೆ ಇದ್ದರೂ ಪ್ರಯತ್ನಿಸಲೇ ಬೇಕೆಂದು ಅವನಿಗೆ ಅನ್ನಿಸಿತು. ಆದರೆ ಗೌರಿಗೆ ಏನೇ ಅಪಾಯ ಆದರೂ ನಾನು ಸಾಯುವ ಮೊದಲು ಇವರಲ್ಲಿ ಒಬ್ಬನನ್ನಾದರೂ ಕೊಂದೇಕೊಲ್ಲುತ್ತೇನೆಂದು ನಿಶ್ಚಯಿಸಿ ''ಯಾರು ನೀನು? ಏನಾಗಬೇಕಾಗಿದೆ ನಿನಗೆ'' ಎಂದ.

''ನಾವು ಯಾರು? ಏನಾಗಬೇಕಾಗಿದೆ? ನಿಂಗೊತ್ತಿಲ್ಲವಾ? ಗೊತ್ತಿಲ್ಲದಿದ್ದರೆ ಹಿಂಗೆ ಪ್ಲಾಸ್ಟಿಕ್ ಪ್ಯಾಕೆಟ್ಟು ಹಿಡುಕೊಂಡು ತಲೆತಪ್ಪಿಸಿಕೊಂಡು ಓಡೋಗುತ್ತಿದ್ದೆಯಾ?'' ಎಂದ ಕೆಂಪು ಮಫ್ಲರಿನವನ ಹಿಂದೆ ನಿಂತಿದ್ದವ.

''ಏಯ್ ನಡುಬೀದೀಲಿ ನಿತ್ಕೊಂಡು ಟೈಮ್ ಕಳೀತೀಯೇನೋ'' ಎಂದು ಹಿಂದೆ ನಿಂತಿದ್ದವನ ಮೇಲೆ ಕೆಂಪುಮಫ್ಲರಿನವ ರೇಗಿದ. ಹಿಂದೆ ನಿಂತಿದ್ದವ ಮುಂದೆಬಂದು ಸುರೇಶನ ಕೈಯ್ಯಿಂದ ಕರಿಯ ಪ್ಲಾಸ್ಟಿಕ್ ಪ್ಯಾಕೆಟ್ಟು ಕಿತ್ತುಕೊಂಡ. ಪ್ಲಾಸ್ಟಿಕ್ ಪ್ಯಾಕೆಟ್ಟು ಅವನ ಕೈಗೆ ಬಂದಕೂಡಲೇ ಕೆಂಪು ಮಫ್ಲರಿನವ ಗೌರಿಯ ಹಿಡಿತಸಡಲಿಸಿ ಕೋಪದಿಂದ ಭುಸುಗುಡುತ್ತಿದ್ದ ಅವಳನ್ನು ಸುರೇಶನತ್ತ ತಳ್ಳಿದ. ಸುರೇಶನಿಗೆ ಮತ್ತೆ ಮನಸ್ಸಿನಲ್ಲಿ ಗೊಂದಲ ಶುರುವಾಯ್ತು. ಇವರು ನಮ್ಮ ಕೈಯ್ಯಲ್ಲಿದ್ದ ಪ್ಲಾಸ್ಟಿಕ್ ಪ್ಯಾಕೆಟ್ಟು ಕಿತ್ತುಕೊಂಡಿದ್ದು ನೋಡಿದರೆ ಕೆಂಪುಕಲ್ಲಿನ ರಹಸ್ಯ ಈ ಕಾವ್ಯದಲ್ಲಿದೆ ಎನ್ನುವುದು ಇವರಿಗೂ ಗೊತ್ತಿರುವಂತೆ ಕಾಣುತ್ತದೆ. ಹಾಗಾದರೆ ಇವರು ನಮ್ಮನ್ನು ಬೆನ್ನಟ್ಟಿಬಂದಿದ್ದು ಆ ದಾಖಲೆಯನ್ನು ನಾಶಮಾಡಿ ಹೋಗಲು ಮಾತ್ರವೆ? ಮಾಡಿದರೆ ಮಾಡಿಕೊಳ್ಳಲಿ! ಅದೇನೂ ಜೀವಕ್ಕಿಂತ ಅಮೂಲ್ಯವಾದದ್ದೆ! ಆದರೆ ಪ್ಲಾಸ್ಟಿಕ್ ಪ್ಯಾಕೆಟ್ಟಿನಲ್ಲಿ ಅದು ಇರುವುದು ಇವರಿಗೆ ಹೇಗೆ ಗೊತ್ತಾಯ್ತು? ನಾವು ರಾಜಪ್ಪನ ಹತ್ತಿರ ಅದನ್ನು ತಗೊಂಡಿದ್ದು ಯಾರೂ ನೋಡಿಯೇ ಇಲ್ಲವಲ್ಲ! ಇದರಿಂದ ಏನೋ ಅಪಾಯ ಉಂಟೆಂದು ತಿಳಿದೇ ಇದನ್ನು ನಮಗೆ ದಾಟಿಸಿದನೆ ರಾಜಪ್ಪ! ಸುರೇಶನ ಮನಸ್ಸು ಮಿಂಚಿನ ವೇಗದಲ್ಲಿ ಈವರೆಗೂ ಸಂಗ್ರಹಿಸಿದ್ದ ಮಾಹಿತಿಗಳನ್ನು ಹೊಸರೀತಿ ಸಂಯೋಜಿಸತೊಡಗಿತ್ತು. ಅಷ್ಟರಲ್ಲಿ ಸುರೇಶನ ಕೈಯ್ಯಿಂದ ಪ್ಲಾಸ್ಟಿಕ್ ಪ್ಯಾಕೆಟ್ ಕಿತ್ತುಕೊಂಡವ ''ಇದರಲ್ಲೇನೂ ಇಲ್ಲ ಬಾಸ್. ಬರೀ ಎಂಥದೋ ಹಳೇ ಕಾಗದ'' ಎಂದು ಕೂಗಿದ. ಕೆಂಪು ಮಫ್ಲರಿನವ ಅದನ್ನು ತಗೊಂಡು ಒಳಗೊಮ್ಮೆ ನೋಡಿ ಎರಡು ಮೂರು ನಿಮಿಷ ಅಂತರ್ಮುಖಿಯಂತೆ ಏನನ್ನೋ ಯೋಚಿಸುತ್ತಾ ನಿಂತ. ಅವನ ಮುಖದಲ್ಲಿ ಬೇಸ್ತು ಬಿದ್ದವನ ಮುಖಭಾವವಿತ್ತು. ಅಷ್ಟರಲ್ಲಿ ದೂರದಲ್ಲೆಲ್ಲೋ ಯಾವುದೋ ವಾಹನ ಬರುವ ಸದ್ದು ಕ್ಷೀಣವಾಗಿ ಕೇಳಿಸಿತು. ಕೆಂಪು ಮಫ್ಲರಿನವನು ಸದ್ದಿನಿಂದ ಎಚ್ಚತ್ತವನಂತೆ ಸುರೇಶನ ಕಡೆಗೆ ತಿರುಗಿ ಚೂರಿ ತೋರಿಸುತ್ತಾ

''ಏನಾಯ್ತು ಅರವತ್ತು ಸಾವಿರ?'' ಎಂದು ಕೇಳಿದ.

''ಯಾವುದು ಅರವತ್ತು ಸಾವಿರ! ಅದರೊಳಗಿದ್ದಿದ್ದು ಒಂದೂವರೆ ಲಕ್ಷ ಚಿಲ್ಲರೆಯಲ್ಲವೆ? ಒಹ್ಹೋ! ಇವನು ಅರುವತ್ತುಸಾವಿರ ಎನ್ನುವುದನ್ನು ನೋಡಿದರೆ ಇವನಿಗೆ ಗೊತ್ತಿರುವುದು ನಮ್ಮ ಏಲಕ್ಕಿಗೆ ಹರಾಜಿನಲ್ಲಿ ಕೂಗಿದ ರೇಟು! ಇವನು ಕೆಂಪು ಕಲ್ಲಿನ ಖದೀಮರ ಗ್ಯಾಂಗಿಗೆ ಸೇರಿದ್ದರೆ ಇವರಿಗೆ ಅದರೊಳಗಿರುವುದು ಒಂದು ಲಕ್ಷದ ಐವತ್ತು ಸಾವಿರ ಚಿಲ್ಲರೆ ಎಂದು ಗೊತ್ತಿರುತ್ತಿರಲಿಲ್ಲವೆ! ಅದು ರಾಜಪ್ಪನ ಚೀಲದೊಳಗಿದೆ ಎಂದು ಗೊತ್ತಿಲ್ಲದೆ ನಮ್ಮನ್ನು ಬೆನ್ನು ಹತ್ತಿ ಬಂದಿದ್ದಾರೆ ಮುಠ್ಠಾಳರು! ಶೇಷಪ್ಪ ಹೇಳಿದಹಾಗೆ ಇವರು ದುಡ್ಡಿಗೋಸ್ಕರ ಬಂದಿರುವ ಕಳ್ಳರು. ಏನಾದರಾಗಲಿ ದುಡ್ಡಂತೂ ನಮ್ಮಬಳಿ ಇಲ್ಲ''. ಸುಮ್ಮನೆ ನಿಂತಿದ್ದ ಸುರೇಶನ ಮನಸ್ಸು ಆ ಮುಸುಗಿನ ಖದೀಮರ ಪ್ರತಿಯೊಂದು ವರ್ತನೆಗೂ ಒಳಗೇ ಹೊಸ ಹೊಸ ಸಮೀಕರಣಗಳನ್ನು ರಚಿಸಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿತ್ತು.

ಕೆಂಪು ಮಫ್ಲರಿನ ಪಕ್ಕನಿಂತಿದ್ದವನು ವಾಹನದ ಸದ್ದು ಹತ್ತಿರಾಗುತ್ತಿದ್ದ ಗಡಿಬಿಡಿಯಲ್ಲಿ ಬೇಗಬೇಗ ಗೌರಿಯ ಕೈಯ್ಯಲ್ಲಿದ್ದ ತುರಿಯೋ ಮಣೆ ಪ್ಯಾಕೆಟ್ಟನ್ನು ಕಿತ್ತುಕೊಂಡು ನೋಡಿ, ಅವಜ್ಞೆಯಿಂದ ಸೇತುವೆ ಪಕ್ಕಕ್ಕೆಸೆದ. ಕೆಂಪು ಮಫ್ಲರಿನವನ ಮುಸುಗಿನ ಬಿರುಕಿನಲ್ಲಿ ಸಿಟ್ಟಿನಿಂದ ಅವನ ಕಣ್ಣು ಕೆಂಪಾಗಿದ್ದು ಸುರೇಶನಿಗೂ ಗೌರಿಗೂ ಚೆನ್ನಾಗಿ ಕಾಣಿಸಿತು. ಚೂರಿ ಹಿಡಿದು ಅವನು ಎರಡು ಹೆಜ್ಜೆ ಮುಂದೆ ಬಂದ. ಶೇಷಪ್ಪ ಇವರು ಕೇವಲ ಇನ್ನೂರು ರೂಪಾಯಿಗೆ ಕೊಲೆ ಮಾಡಿದ ನೀಚರು ಎಂದು ಹೇಳಿದ್ದು ಸುರೇಶನಿಗೆ ಜ್ಞಾಪಕಕ್ಕೆ ಬಂತು. ಮತ್ತೆ ಗೌರಿ ಮುಂದುವರಿದು ಅವನ ತೆಕ್ಕೆಯೊಳಗೆ ಸಿಕ್ಕಿಕೊಳ್ಳುವ ಮೂರ್ಖ ಕೆಲಸ ಎಲ್ಲಿಯಾದರೂ ಮಾಡಿಯಾಳೆಂದು ಪಕ್ಕದಲ್ಲಿ ನಿಂತಿದ್ದ ಅವಳನ್ನು ಸುರೇಶ ಕೊಂಚ ಹಿಂದಕ್ಕೆ ತಳ್ಳಿದ. ''ಅರುವತ್ತು ಸಾವಿರ ಎಲ್ಲೋಯ್ತು'' ಎಂದು ಅವನು ಇನ್ನೊಮ್ಮೆ ಸುರೇಶನನ್ನು ಕೇಳಿದ. ಅವನ ದನಿಯಲ್ಲಿದ್ದ ನಿರುದ್ವೇಗವನ್ನು ನೋಡಿ ಚಕಿತನಾದ ಸುರೇಶ ಅವನಿಗಿಂತ ಸಮಾಧಾನದ ದನಿಯಲ್ಲಿ ''ಅಷ್ಟು ಕೊಟ್ಟು ಅದನ್ನು ತಗೊಂಡೆವು'' ಎಂದು ಅವನ ಕೈಯ್ಯ ಪ್ಲಾಸ್ಟಿಕ್ ಪ್ಯಾಕೆಟ್ಟು ನಿರ್ದೇಶಿಸಿ ಹೇಳಿದ.

''ಇದು!!'' ಎಂದು ಆಶ್ಚರ್ಯ ಅವಜ್ಞೆ ಜುಗುಪ್ಸೆ ತಿರಸ್ಕಾರಗಳೆಲ್ಲ ಮಿಳಿತವಾಗಿದ್ದ ದನಿಯಲ್ಲಿ ಉದ್ಗರಿಸಿ ''ಥುತ್'' ಎಂದ ಅವನು ಅದರಕಡೆ ಉಗುಳಿ ಆ ಪ್ಲಾಸ್ಟಿಕ್ ಪ್ಯಾಕೆಟ್ಟನ್ನು ಪಕ್ಕಕ್ಕೆ ಎಸೆದ. ಅತ್ತಿತ್ತ ಗೋಡೆಗಟ್ಟಿ ನಿಂತಿದ್ದ ಪರ್ವತಗಳ ಮಧ್ಯೆ ಬೀಸುವ ಗಾಳಿ ಓಣಿಯಂತಿದ್ದ ದೋಣಿಹೊಳೆಯ ಪಾತ್ರದಲ್ಲಿ ನುಗ್ಗಿ ಸಾಗುತ್ತಿದ್ದುದರಿಂದ ಸೇತುವೆಯ ಮೇಲೆ ಭರ್ರೋ ಎಂದು ಬೀಸುತ್ತಿತ್ತು. ಪ್ಲಾಸ್ಟಿಕ್ ಪ್ಯಾಕೆಟ್ಟು ಕಡತದ ಸಮೇತ ತೂರಿ ಹೋಗಿ ಕಮಾನು ಸೇತುವೆಯಿಂದ ಕೆಳಗೆ ಆಳದ ಕಮರಿಯಲ್ಲಿ ಕೊತಕೊತ ನೊರೆಯೆದ್ದು ಹರಿಯುತ್ತಿದ್ದ ದೋಣಿ ಹೊಳೆಯೊಳಗೆ ಉದ್ದಕ್ಕೆ ಬಿಚ್ಚಿಕೊಂಡು ಬಿತ್ತು. ಮೊದಲೇ ಜೂಲಾಗಿ ಜರ್ಝರಿತವಾಗಿದ್ದ ಅದು ಮೊರೆಯುತ್ತ ಹರಿಯುತ್ತಿದ್ದ ನದಿಯ

ನೀರಿನಲ್ಲಿ ಹಾಳೆಹಾಳೆ ಹರಿದುಕೊಂಡು ಒಂದೆರಡುಸಾರಿ ಮೇಲೆದ್ದಿದ್ದು ಸೇತುವೆಯ ಕಟಕಟೆ ಹಿಡಿದು ಕೆಳಗೆ ನೋಡುತ್ತಿದ್ದ ಗೌರಿ ಸುರೇಶರ ಕಣ್ಣಿಗೆ ಬಿತ್ತು. ಆಮೇಲೆ ಪ್ಲಾಸ್ಟಿಕ್ ಪ್ಯಾಕೆಟ್ಟೂ, ಕಡತದ ಹಾಳೆಗಳೂ ನದಿಯ ಭಯಂಕರ ತಳಮಳದಲ್ಲಿ ಮಾಯವಾದುವು. ಹಿಂದುಗಡೆ ಕೆಂಪು ಮಪ್ಲರಿನವನು ''ಬನ್ರೋ ಬನ್ರೋ'' ಎಂದು ಮಿಕ್ಕವರಿಗೆ ಹೇಳಿದ್ದೂ, ''ಆ ಗಾಂಚಲಿ ಸೂಳೇಮಗ ನಿಮಗೆ ದುಡ್ಡು ಸಿಕ್ಕಮೇಲೇ ನನ್ನ ಕಮಿಷನ್ ಕೊಡಿ ಅಂತ ಹೇಳಿದ್ದು ಇದಕ್ಕೇ ಇರಬೇಕು'' ಎಂದು ಯಾವನೋ ಮಾತಾಡಿದ್ದೂ ಗೌರಿ ಸುರೇಶರ ಕಿವಿಗೆ ಬಿತ್ತು. ಅವರು ಹಿಂದಿರುಗಿ ನೋಡುವ ಹೊತ್ತಿಗೆ ಅಲ್ಲಿ ಯಾರೂ ಇರಲಿಲ್ಲ. ವಾಹನ ಒಂದು ದೂರಾಗುತ್ತಿರುವ ಸದ್ದು ಮಾತ್ರ ಕೇಳಿಸುತ್ತಿತ್ತು. ಕೆಲವು ನಿಮಿಷಗಳ ಅನಂತರ ಆ ಸದ್ದು ಹೊಳೆಯ ಮೊರೆತದಲ್ಲಿ ಲೀನವಾಗುವ ಹೊತ್ತಿಗೆ ಮತ್ತಾವುದೋ ವಾಹನ ಬರುತ್ತಿರುವ ಸದ್ದು!

ಕಮಾನು ಸೇತುವೆಯ ಮೇಲಿನ ಕಟಕಟೆಗೆ ವಾಲಿ ನಿಂತಿದ್ದ ಇಬ್ಬರೂ ಮೌನವಾಗಿ ಕೊಂಚ ಹೊತ್ತು ಒಬ್ಬರ ಮುಖ ಒಬ್ಬರು ನೋಡಿ ಕೊಂಡರು. ಕಡತ ದೋಣಿ ಹೊಳೆಗೆ ಬಿದ್ದು ಕರಗಿಹೋದ ಮೇಲೆ ತಮ್ಮ ಜೀವನದ ಯಾವುದೋ ಒಂದು ಅಧ್ಯಾಯ ಮುಗಿದಂತೆನ್ನಿಸಿತ್ತು ಅವರಿಗೆ.

''ಹಂಗಾದರೆ ಇವರು ಯಾರ್ರಿ?'' ಎಂದು ತನಗೆ ತಾನೆ ಎಂಬಂತೆ ಗೌರಿ ಮಾತಾಡಿದಳು. ಕೆಲವೇ ಹೊತ್ತಿನ ಹಿಂದೆ ಹುಂಬ ಧೈರ್ಯದಲ್ಲಿ ಮುಂದೆ ಹೋಗಿ ಕೆಂಪು ಮಪ್ಲರಿನವನ ತೆಕ್ಕೆಗೆ ಅವಳು ಸಿಕ್ಕಿಕೊಂಡಿದ್ದು ಸುರೇಶನ ನೆನಪಿಗೆ ಬಂದು ಅವಳಿಗೆ ಬಾಯಿಗೆ ಬಂದಹಾಗೆ ಬಯ್ಯಬೇಕೆನ್ನುವಷ್ಟು ಕೋಪ ಬಂದರೂ ನಿನ್ನೆಯಿಂದ ತನ್ನ ಜೊತೆ ಅವಳೂ ಪಟ್ಟ ಪಾಡೆಲ್ಲ ಜ್ಞಾಪಕಕ್ಕೆ ಬಂದು ಕೋಪ ತಡೆದುಕೊಂಡ.

''ನಿನ್ನೆಯಿಂದ ನೂರಾರುತರ ಯೋಚನೆ ಮಾಡಿ ಮಾಡಿ ನನ್ನ ತಲೆ ಒಂದು ಗೊಬ್ಬರದ ಗುಂಡಿ ಆಗಿದೆ. ನನಗೆ ಏನೂ ಹೊಳೆಯುತ್ತಲೇ ಇಲ್ಲ. ಇವರು ಬಂದು ಅದೂ ಇದೂ ಮಾತಾಡಿ ಚೂರಿ ತೋರಿಸಿ ಬೆದರಿಸಿ, ಕೊನೆಗೆ ಕಡತ ಹೊಳೆಗೆ ಎಸೆದು ಪರಾರಿಯಾಗಿದ್ದು ನೋಡಿದರೆ ಕೆಂಪುಕಲ್ಲಿನ ದಂಧೆಯವರೇನೋ ಎನ್ನಿಸುತ್ತದೆ. ಆದರೊಳಗಿನ ದುಡ್ಡು ಎಲ್ಲಿ ಎಂದು ಕೇಳಿದ್ದು ನೋಡಿದರೆ ಇವರು ಬರೀ ದರೋಡೆಕೋರರು ಅನ್ನಿಸುತ್ತದೆ. ಪ್ಲಾಸ್ಟಿಕ್ ಪ್ಯಾಕೆಟ್ಟಿನೊಳಗಿದ್ದುದು ಅರವತ್ತು ಸಾವಿರ ಎಂದು ಅವರು ಹೇಳಿದ್ದು ನೋಡಿದರೆ ಇವರು ಆ ಕೈಲಾಸ್ ಬಾರಿನ ಕುನ್ನಿ ಕಡೆಯವರಿರಬಹುದು ಅನ್ನಿಸುತ್ತದೆ! ಈ ನೀಚರು ನಮ್ಮನ್ನು ಖೂನಿ ಮಾಡಲು ಬೆನ್ನು ಹತ್ತಿದ್ದಾರೆಂದು ನಾವು ಊಹಿಸಿದ್ದು ತಪ್ಪೊ ಏನೋ. ನಾನು ಯಾವತರ ಯೋಚಿಸಿದರೂ ಅದು ಸರಿಯಲ್ಲ ಎನ್ನುವಂತೆ ಏನಾದರೂ ನಡೆಯುತ್ತೆ. ಒಟ್ಟಿನಲ್ಲಿ ನಿನ್ನೆಯಿಂದ ನಡೆದಿದ್ದನ್ನೆಲ್ಲಾ ಜ್ಞಾಪಿಸಿಕೊಂಡರೆ ಒಂದು ದೊಡ್ಡ ದುಃಸ್ವಪ್ನದೊಳಗೆ ಅಡ್ಡಾಡಿದ ಹಾಗಾಗುತ್ತೆ'' ಎಂದ ಸುರೇಶ, ವಾಹನ ಹತ್ತಿರಾಗುತ್ತಿದ್ದ ಸದ್ದು ಕೇಳಿಸಿಕೊಂಡು ''ನಡಿ

ನಡಿ, ಯಾವುದೋ ಬಸ್ಸೋ ಕಾರೋ ಬರೋ ಶಬ್ದ ಆಗ್ತಿದೆ. ಬೇಗ ರಸ್ತೆ ದಾಟಿ ಒಳದಾರಿ ಹಿಡಿಯೋಣ'' ಎಂದ.

''ಅಯ್ಯೋ ಹೋಗ್ರಿ, ಯಾರು ನೋಡಿ ಏನಾಗಬೇಕಿದೆ ನಮಗೆ! ಬಂದರೆ ಬರಲಿ. ಹೋದರೆ ಹೋಗಲಿ. ಇಲ್ಲಿರೋರು ಪ್ರತಿಯೊಬ್ಬರೂ ಕಳ್ಳರು, ಕೊಳಕರು.'' ಎಂದು ಒಂದು ಬಗೆಯ ವಿರಕ್ತ ದನಿಯಲ್ಲಿ ಗೌರಿ ಹೇಳಿದಳು.

''ಏನೆ? ಉತ್ತುಂಗ ರಾಜನಿಗೆ ಕೆಂಪು ಕಲ್ಲು ಸಿಕ್ಕಿದಮೇಲೆ ವಿರಕ್ತಿ ಉಂಟಾದರೆ, ನಿನಗೆ ಈಗಲೇ ಆದಹಾಗೆ ಕಾಣುತ್ತಲ್ಲ!'' ಎಂದು ಸುರೇಶ ತಮಾಷೆ ಮಾಡಿದ.

''ಏನ್ರಿ, ಆ ಕಡತ ಇಟ್ಟುಕೊಂಡು ಕನಸಾದರೂ ಕಾಣುತ್ತ ಕಾಲ ಹಾಕಬಹುದಿತ್ತು. ಈಗ ಆದೂ ಇಲ್ಲವಲ್ಲ'' ಎಂದು ಗೌರಿ ಖಿನ್ನಳಾಗಿ ಕಡತ ನೀರುಪಾಲಾಗಿದ್ದಕ್ಕೆ ವಿಷಾದ ಸೂಚಿಸಿದಳು.

ಅಷ್ಟರಲ್ಲಿ ಸದ್ದು ಹತ್ತಿರಾಗಿ ಮತ್ತೊಂದು ಆಟೋರಿಕ್ಷಾ ರಸ್ತೆ ತಿರುವಿನಲ್ಲಿ ಕಾಣಿಸಿತು. ಅದನ್ನು ನೋಡಿ ಗೌರಿ ''ಮತ್ತೆ ಬಂದರು ಅಂತ ಕಾಣುತ್ತೆ ಇವರು'' ಎಂದಳು. ''ಅದು ಈ ರಿಕ್ಷಾ ಅಲ್ಲ ಕಣೆ. ಅವರು ಗುರುತು ಸಿಗದಿರಲಿ ಅಂತ ನಂಬರ್ ಪ್ಲೇಟಿಗೆ ಕೆಸರು ಬಳಿದುಕೊಂಡು ಬಂದಿದ್ದರು'' ಎಂದು ಸುರೇಶ ಗೌರಿಯ ಶಂಕೆಗೆ ಸಮಾಧಾನ ಹೇಳಿದ.

ರಿಕ್ಷಾ ಇವರನ್ನು ದಾಟುವಾಗ ಅದರೊಳಗೆ ಯಾರೋ ಕುಳಿತಿದ್ದು ಕಂಡಿತೇ ವಿನಃ ಯಾರೆಂದು ಇಬ್ಬರಿಗೂ ಗೊತ್ತಾಗಲಿಲ್ಲ. ಆದರೂ ರಿಕ್ಷಾ ಇವರನ್ನು ದಾಟುತ್ತಿದ್ದಂತೆಯೇ ಅದರೊಳಗಿಂದ ''ಅರೆ!! ಸ್ವಲ್ಪ ನಿಲ್ಲಿಸು ನಿಲ್ಲಿಸು!'' ಎಂದು ಯಾರೋ ಯಾರಿಗೋ ಹೇಳುತ್ತಿರುವುದು ಗೌರಿ ಸುರೇಶ ಇಬ್ಬರಿಗೂ ಕೇಳಿಸಿತು. ತುಂಬ ವೇಗವಾಗಿ ಬರುತ್ತಿದ್ದ ರಿಕ್ಷಾ ಕೂಡಲೆ ನಿಲ್ಲಿಸಲಾಗಲಿಲ್ಲ. ಅದು ಸೇತುವೆಯನ್ನೂ ದಾಟಿ ನಾಲ್ಕು ಮಾರು ಮುಂದೆ ಹೋಗಿ ನಿಂತಿತು. ಗೌರಿ ಸುರೇಶ ಇಬ್ಬರೂ ಯಾರಿರಬಹುದೆಂದು ಕುತೂಹಲದಿಂದ ನೋಡುತ್ತಿರ ಬೇಕಾದರೆ ''ಹಲ್ಲೋ! ಇದೇನಯ್ಯ ಇಲ್ಲಿ! ಈ ಅವತಾರದಲ್ಲಿ!'' ಎಂದು ಹಲ್ಲು ಕಿರಿಯುತ್ತ ರಾಜಪ್ಪ ಯಥಾಪ್ರಕಾರ ಹೆಗಲಿಗೆ ಬ್ಯಾಗ್ ನೇತುಹಾಕಿಕೊಂಡು ರಿಕ್ಷಾದಿಂದ ಇಳಿದ.

# ಇಪ್ಪತ್ನಾಲ್ಕನೆಯ ಘಂಟೆ - ೩೦



"ಅಲ್ಲಕಣಯ್ಯ! ನೀನೂ ಒಳ್ಳೆ ರುಸ್ತುಮ. ಅಂಬಳ ಸ್ಟೇಷನ್ ಬರತ಼್ಲ್ಲ ಒಂಚೂರು ತಟ್ಟಿ ಎಬ್ಬಿಸಬೇಡವ! ಸುಮ್ಮನೆ ನಿಮ್ಮಪಾಡಿಗೆ ನೀವು ರೈಲಿಳಿದು ನಡೆದುಬಿಡೋದ! ನನಗೆ ಎಚ್ಚರಾಗೋದು ಒಂಚೂರು ತಡಾ ಆಗಿದ್ರೆ ಮುಂದಿನ ಸ್ಟೇಷನ್ನಿನಿಂದ ರಿಕ್ಷಾ ಮಾಡಿಕೊಂಡು ಬರಬೇಕಾಗಿತ್ತು! ಅದಿರಲಿ ಇದೇನು ನಿಮ್ಮದು ಅವತಾರ? ಒದ್ದೆ ಬಟ್ಟೆ, ಮೈಯ್ಯೆಲ್ಲಾ ಕೆಸರು! ಎಲ್ಲಿ ಜಾರಿ ಬಿದ್ದಿರಿ? ಏನುಕತೆ. ನಿಮ್ಮ ನಡವಳಿಕೆ ನೋಡಿದರೆ ಅನುಮಾನಾಸ್ಪದವಾಗಿ ಕಾಣುತ್ತೆ" ಎಂದು ರಿಕ್ಷಾದವನಿಗೆ ಬಾಡಿಗೆ ಕೊಟ್ಟು ಅವನು ನಿರ್ಗಮಿಸುವವರೆಗೂ ಸಹ ಕಾಯದೆ, ರಿಕ್ಷಾ ಇಳಿದಲ್ಲಿಂದಲೇ ಕೊರೆಯುತ್ತ ರಾಜಪ್ಪ, ಸುರೇಶ ಗೌರಿ ನಿಂತಲ್ಲಿಗೆ ನಡೆದು ಬಂದ. ರಾಜಪ್ಪನ ಮಾತುಗಳಿಂದ, ರಾತ್ರೆ ರೈಲಿನಲ್ಲಿ ನಡೆದಿದ್ದೆಲ್ಲಾ ನಿದ್ದೆ ಹೊಡೆಯುತ್ತಿದ್ದ ಈ ಕುಂಭಕರ್ಣನಿಗೆ ಗೊತ್ತೇ ಇಲ್ಲವೆಂದು ಸುರೇಶನಿಗೆ ಅನ್ನಿಸಿದರೂ ಅವನ ಮೇಲೆ ಯಾವುದೇ ನಿರ್ದಿಷ್ಟ ಕಾರಣವೂ ಇಲ್ಲದ ವಿಚಿತ್ರ ಗುಮಾನಿ ಸೂಕ್ಷ್ಮವಾಗಿ ಇದ್ದೇ ಇತ್ತು. ತಮ್ಮ ಈ ಅವತಾರಕ್ಕೆ ನಿಜವಾದ ಕಾರಣವೇನೆಂಬುದನ್ನು ಇವನಿಗೆ ಹೇಳಬೇಕೋ ಬೇಡವೋ ಎಂದು ಸುರೇಶನಿಗೆ ಚಿಂತೆಯಾಯ್ತು. ಯಾರಿಂದಲೂ ಪತ್ತೆಮಾಡಲಸಾಧ್ಯವಾದ ಪ್ರಚಂಡ ನಾಟಕ ಇವನು ಆಡುತ್ತಿರಬಹುದೆ! ಎಂದು ಸುರೇಶ ಯೋಚಿಸಿದ. ಏಕೆಂದರೆ ರಾಜಪ್ಪನನ್ನು ಇದಿರುಗೊಂಡಾಗಿನಿಂದಲೂ ಅವನದು ನಟನೆಯೆ ಎಂದು ಪತ್ತೆ ಹಚ್ಚಲು ಸುರೇಶ ತನ್ನೆಲ್ಲಾ ಬುದ್ಧಿಶಕ್ತಿಯನ್ನೂ ಉಪಯೋಗಿಸಿ ಗಮನಿಸಿದ್ದ.

ಆದರೆ ಸುರೇಶ ಕೇಳಿದ್ದಕ್ಕೆಲ್ಲಾ ರಾಜಪ್ಪ ಅತ್ಯಂತ ಸಮರ್ಪಕ ಮತ್ತು ಸಮಂಜಸ ಉತ್ತರ ಕೊಟ್ಟಿದ್ದ. ಇವನದು ಏನೋ ನಾಟಕ ಎನ್ನುವ ಅಂತಃಪ್ರೇರಣೆಯೊಂದನ್ನು ಬಿಟ್ಟರೆ ಸುರೇಶ ತನ್ನ ಅನುಮಾನಕ್ಕೆ ಯಾವ ಕಾರಣವನ್ನೂ ಕೊಡಲು ಸಾಧ್ಯವಿರಲಿಲ್ಲ. ನಿನ್ನೆಯಿಂದ ಬೆನ್ನುಹತ್ತಿದ ಬೇತಾಳದಂತೆ ಯಾಕೆ ಇವನು ನಾವು ಹೋದಲ್ಲೆಲ್ಲ ಪ್ರತ್ಯಕ್ಷವಾಗುತ್ತಿದ್ದಾನೆ? ಕೇಳಿದರೆ ಅನುಮಾನಿಸಲಸಾಧ್ಯವಾದಷ್ಟು ಸರ್ವ ಸಮರ್ಪಕ ಉತ್ತರ ಇವನ ತಲೆಯೊಳಗೆ ರೆಡಿಯಾಗಿರುತ್ತೆ. ಇಷ್ಟು ಅನುಮಾನಾತೀತವಾಗಿ ನಡಕೊಳ್ಳಲು ಪೂರ್ವಾಭ್ಯಾಸ ಮಾಡಿಕೊಂಡ ನಟರಿಗೆ ಮಾತ್ರ ಸಾಧ್ಯವಲ್ಲವೆ? ನಮ್ಮ ನಡವಳಿಕೆ ಅನುಮಾನಾಸ್ಪದವಾಗಿದೆ ಅನ್ನುತ್ತಾನಲ್ಲ! ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಅನ್ನುವಂತೆ, ಇವನು ನಾಟಕ ಆಡುತ್ತಿರುವುದರಿಂದಲೇ ಇವನಿಗೆ ನಮ್ಮಮೇಲೆ ಗುಮಾನಿ, ಎಂದೆಲ್ಲ ಯೋಚಿಸಿದ ಸುರೇಶ ''ರಾಜಪ್ಪಾ ನಮ್ಮ ನಡವಳಿಕೆ ಅನುಮಾನಾಸ್ಪದ ಎಂದು ನಿನಗನ್ನಿಸಿರುವ ಹಾಗೆಯೇ ನಮಗೂ ನಿನ್ನಬಗ್ಗೆ ಅನ್ನಿಸಿದೆ ಕಣಯ್ಯ. ನೀನು ನಮ್ಮ ಬೆನ್ನುಹತ್ತಿ ಇಲ್ಲೀವರೆಗೂ ಯಾಕೆ ಬಂದೆ ಹೇಳು? ಆಮೇಲೆ ನಮ್ಮ ಕತೆ ಹೇಳುತ್ತೇನೆ'' ಎಂದು ಹೇಳಿದ. ಆದರೆ ಸುರೇಶನಿಗೆ ತಮ್ಮನ್ನು ಹಿಂಬಾಲಿಸಿ ಬಂದ ಕೆಂಪು ಮಫ್ಲರಿನ ಖೇಡಿಗ್ಯಾಂಗು ಕೇವಲ ದುಡ್ಡು ಲಪಟಾಯಿಸಲು ಬಂದಿದ್ದವರು ಎಂದು ತಿಳಿದಮೇಲೆ, ಅದಕ್ಕಿಂತಲೂ ಹೆಚ್ಚಾಗಿ ಗುರುರಾಜ ಕವಿಯ ಕಾವ್ಯ ದೋಣಿಹೊಳೆಯಲ್ಲಿ ಅಂತರ್ಧಾನವಾದಮೇಲೆ ಇನ್ನು ಉಳಿಸಿಕೊಳ್ಳಬೇಕಾದ ಗುಟ್ಟು ಯಾವುದೂ ಇದೆಯೆಂದು ಅನ್ನಿಸಲಿಲ್ಲ. ರಾಜಪ್ಪನ ಗುಟ್ಟುಗಳನ್ನು ಹೊರಡಿಸಬೇಕೆಂದು ಮಾತ್ರವೇ ಅವನು ನಡೆದುದನ್ನೆಲ್ಲಾ ನೇರವಾಗಿ ಹೇಳದೆ ರಾಜಪ್ಪನನ್ನೇ ಪ್ರಶ್ನಿಸಿದ್ದು.

''ನಾನು ಹೇಳಬೇಕಾದ್ದು ತುಂಬ ಇದೆ ಕಣಯ್ಯ. ಅದೇನು ಫಕ್ಕನೆ ಮುಗಿಯೋ ಪುರಾಣ ಅಲ್ಲ. ಆದಕ್ಕೇ ರಿಕ್ಷಾದವನಿಗೆ ಬಾಡಿಗೆ ಕೊಟ್ಟು ವಾಪಸ್ ಕಳಿಸಿದ್ದು. ನಾನು ಬಂದಿದ್ದು ನಿಮ್ಮ ದುಡ್ಡು ನಿಮಗೆ ಕೊಟ್ಟು ಕಡತ ವಾಪಸ್ ಇಸುಗೊಂಡು ಹೋಗೋದಕ್ಕೆ''

''ಅಲ್ಲಯ್ಯ, ನಿನಗೆ ಎಡಿಟ್ ಮಾಡಿದರೆ ಸಿಕ್ಕುವಷ್ಟೇ ದುಡ್ಡು ಸಿಕ್ಕಿದೆ! ಮತ್ಯಾಕೆ ನಿನಗೆ ಆ ಕಡತದ ಗೊಡವೆ! ದುರದೃಷ್ಟದ ಸಂಗತಿ ಎಂದರೆ ಈಗ ನಾವು ನಿನಗೆ ಕೊಡಬೇಕೆಂದರೂ ಅದನ್ನು ನಿನಗೆ ಕೊಡೋ ಸ್ಥಿತಿಯಲ್ಲಿಲ್ಲ''

''ಅದನ್ನ ಎಡಿಟ್ ಮಾಡಬೇಕೆಂದು ನಾನು ತಗೊಂಡಿದ್ದು ಸುಳ್ಳುಕಣೋ! ಅದನ್ನು ನೀವು ಕೊಟ್ಟರೂ ಸರಿ ಕೊಡದಿದ್ದರೂ ಸರಿ. ಮುಖ್ಯ ನಿಮ್ಮ ದುಡ್ಡು ನೀವು ತಗೊಳ್ಳಿ. ನನ್ನನ್ನ ಶೇಷಪ್ಪ ಕಳಿಸಿದ್ದೇ ನಿಮ್ಮನ್ನೂ ನಿಮ್ಮ ದುಡ್ಡನ್ನೂ ಜೋಪಾನ ಮಾಡಲಿಕ್ಕೆ. ಹಿಡೀರಿ, ಈ ದುಡ್ಡು ನೀವು ತಗೊಳ್ಳಿ. ಆಮೇಲೆ ಮಿಕ್ಕ ಸಮಾಚಾರ'' ಎಂದು ಅವರ ದುಡ್ಡಿನ ಕಂತೆಗಳನ್ನು ಅವರತ್ತ ಹಿಡಿದ.

''ತಡಿ ತಡಿ, ಆ ದುಡ್ಡಿನ ಕಂತೆಗಳನ್ನು ಸಧ್ಯಕ್ಕೆ ನಿನ್ನ ಚೀಲದೊಳಗೇ ಇಟ್ಟುಕೊ. ಇಲ್ಲಿ ಎಲ್ಲಾದರೂ ಕೈ ತಪ್ಪಿದರೆ ನೆಟ್ಟಗೆ ಅದು ದೋಣಿ ಹೊಳೆಗೆ ಹೋಗಿ ಬೀಳ್ತದೆ. ನಿನ್ನ

ಕಡತ ನೀರು ಪಾಲಾಗಿದ್ದೇ ಹಂಗೆ. ನನಗೆ ನಿನ್ನ ವ್ಯವಹಾರವೆಲ್ಲ ಸಂಪೂರ್ಣ ಅರ್ಥವಾದ ಹೊರತೂ ನಿನ್ನ ದುಡ್ಡು ನಾನು ಮುಟ್ಟೋದಿಲ್ಲ. ಶೇಷಪ್ಪ ಯಾಕೆ ಕಳಿಸಿದ ನಿನ್ನನ್ನ? ನಾವು ಶೇಷಪ್ಪನ ಅಂಗಡಿ ಹತ್ತಿರ ಹೋದಾಗ ಅವನ ಮರ್ಡರ್ ಆಯ್ತೆಂದು ಅಲ್ಲಿ ಕಾವಲು ನಿಂತಿದ್ದ ಪೋಲೀಸ್ ಹೇಳಿದನಲ್ಲ?''

``ಕರೆಕ್ಟ್. ನೀವು ದುಡ್ಡಿಸುಗೊಂಡು ಆ ಕಡೆ ಹೋದಕೂಡಲೆ ಯಾವನೋ ಶೇಷಪ್ಪನಿಗೆ ಚೂರಿ ತೋರಿಸಿ ನಿಮಗೆ ಎಷ್ಟು ಹಣ ಕೊಟ್ಟೆ ಹೇಳು ಅಂತ ಬೆದರಿಸಿದನಂತೆ. ಮಾತಿಗೆ ಮಾತಾಗಿ ಶೇಷಪ್ಪ ನಿಮ್ಮನ್ನು ಒಳಗೆ ಹಾಕಿಸೋದು ಹ್ಯಾಗೆ ಅಂತ ನನಗೆ ಗೊತ್ತೆಂದು ಬೆದರಿಸಿದ್ದಕ್ಕೆ ಅವನು ಚೂರಿ ಹಾಕಿ ಓಡಿಹೋಗಿದ್ದು ಸತ್ಯ. ಆದರೆ ಮರ್ಡರ್ ಆಗಿದ್ದು ನಿಜವಲ್ಲ. ನಾನು ಆಸ್ಪತ್ರೆಗೆ ಶೇಷಪ್ಪನ್ನ ನೋಡಲು ಹೋದಾಗ ಅವನು ಪಿಕ್ ಪಾಕೆಟ್ ಜಾನಿ ಗ್ಯಾಂಗಿನವನೇ ಚೂರಿ ಹಾಕಿದವನಿರಬಹುದು. ಅವರು ನಿಮ್ಮನ್ನು ಬೆನ್ನುಹತ್ತುವುದು ಖಂಡಿತ. ಹೇಗಾದರೂ ಅವರನ್ನು ಊರು ತಲುಪಿಸಿ ಬಾ ಎಂದು ನನಗೆ ಹೇಳಿದ. ನಿನ್ನ ಮಾವನಿಂದ ಶೇಷಪ್ಪನಿಗೆ ತುಂಬಾ ಉಪಕಾರವಾಗಿದೆಯಂತೆ. ಆ ಋಣ ತೀರಿಸಲು ನನ್ನ ತಲೆಯಮೇಲೆ ಈ ಜವಾಬ್ದಾರಿ ಹಾಕಿದ. ನಾನು ಊರೆಲ್ಲಾ ಹುಡುಕಿ ಕೊನೆಗೆ ರೈಲಿನಲ್ಲಿ ನಿನ್ನ ಪತ್ತೆ ಮಾಡಿದೆ. ಅಷ್ಟೇ. ಈಗಲಾದರೂ ಪರಿಹಾರ ಆಯ್ತೇನಯ್ಯ ನಿನ್ನ ಅನುಮಾನ? ಇನ್ನಾದರೂ ದುಡ್ಡು ವಾಪಸ್ ಮಾಡಬಹುದೋ ನಾನು?''

``ಏನು ಹೇಳ್ತೀಯ ನೀನು! ಅನುಮಾನ ಪರಿಹಾರ ಆಗೋದು ಹೇಗಯ್ಯ. ಶೇಷಪ್ಪ ನಿನಗೆ ಗೊತ್ತಾಗಿದ್ದು ಹೇಗೆ? ಅವನು ಯಾಕೆ ನಿನಗೆ ನಮ್ಮ ಯೋಗಕ್ಷೇಮದ ಜವಾಬ್ದಾರಿ ವಹಿಸಿದ? ನೀನು ಅವನ ಅಂಗಡಿ ಮುಂದೆ ಅಡ್ಡಾಡುತ್ತಿದ್ದಾಗ ಅವನು ನಿನ್ನತ್ತ ತಿರುಗಿಯೂ ನೋಡಲಿಲ್ಲ! ಇಪ್ಪತ್ತನಾಲ್ಕು ಗಂಟೆಯಿಂದ ತರಾನುತರ ಯೋಚಿಸಿ ನನ್ನ ತಲೆ ಕೆಟ್ಟು ಹೋಗಿದೆ. ಇವಕ್ಕೆಲ್ಲಾ ಸಮಂಜಸ ಉತ್ತರ ಕೊಡಲೇ ಬೇಕು ನೀನು''

``ಲೋ ಸುರೇಶ, ನಿಜ ಹೇಳಬೇಕೆಂದರೆ ತಲೆ ಕೆಡುತ್ತಾ ಇರೋದು ನನಗೆ. ಯಾಕೇ ಅನ್ನು, ನಿನಗೆ ಒಂದೂವರೆ ಲಕ್ಷ ಚಿಲ್ಲರೆ ನಿನ್ನೆಪಾವತಿ ಮಾಡಿದೋನು ನಮಗೆ ಬೇಕಾಗಿರೋ ವ್ಯಕ್ತಿ. 'ವಾಂಟೆಡ್ ಪರ್ಸನ್ನು'. ನೀನು ನನ್ನ ವಿಷಯ ಎಲ್ಲ ತಿಳುಕೋ ಬೇಕಂತಿದ್ದರೆ ಆ ಚೆಕ್ಕು ಅವನು ನಿನಗೇಕೆ ಕೊಟ್ಟ? ಅವನ ಹತ್ತಿರ ನೀನು ಏನು ವ್ಯವಹಾರ ನಡೆಸುತ್ತಿದ್ದೀ ಅನ್ನೋ ಪ್ರಶ್ನೆಗೆ, ಆಮೇಲೆ ಆ ದುಡ್ಡನ್ನ ಅನಾಮತ್ತು ನೀನೂ ನಿನ್ನ ಹೆಂಡತೀನೂ ಸೇರಿಕೊಂಡು ನನ್ನ ಚೀಲದೊಳಗೆ ತುರುಕಿ ಕಡತ ಕೊಂಡುಕೊಂಡರಲ್ಲಾ ಅದ್ಯಾಕೆ? ಅನ್ನೋ ಪ್ರಶ್ನೆಗೆ ಉತ್ತರ ಹೇಳಬೇಕು. ನೀವಿಬ್ಬರೂ ತೋರಿಸಿಕೊಳ್ಳುವಷ್ಟು ಮುಗ್ಧರಲ್ಲಾಂತ ನನಗೆ ಗುಮಾನಿ ಶುರುವಾಗಿದೆ. ಅದಕ್ಕೇ''

``ಹಂಗಲ್ಲಾ ರಾಜಪ್ಪ, ನಾವು ಯಾವ ಖದೀಮರ ಗ್ಯಾಂಗಿಗೂ ಸೇರಿದವರಲ್ಲ ಅಂತ ಭಾಷೆ ಕೊಡುತ್ತೇನೆ. ಆದರೆ ಅದೆಲ್ಲಾ ನಿನಗೆ ಹೇಳುವ ಮೊದಲು ನೀನು ಯಾವ

ಗ್ಯಾಂಗಿನವನೂ ಅಲ್ಲ ಅಂತ ನನಗೆ ಗ್ಯಾರೆಂಟಿಯಾಗಬೇಕು. ನನಗೆ ಚೆಕ್ಕುಕೊಟ್ಟ ಜೀವನ್ ಲಾಲ್ ನಮಗೆ ಬೇಕಾಗಿರೋನು ಅಂದೆಯಲ್ಲಾ ಯಾರಯ್ಯಾ ಈ ಬಹುವಚನದ ನಾವು? ಎಷ್ಟು ಜನ ಇದ್ದಾರೆ ನಿನ್ನ ಜೊತೆ? ಬೇಕಾಗಿರೋನು ಅಂದರೆ ಏನರ್ಥ? ಬಹಳ ಆಪ್ತ ಅಂತಾನೋ? ಅಥವಾ ಬಂಧಿಸಲು ಬೇಕಾಗಿದ್ದಾನೆ ಅಂತಲೋ? ಇದೆಲ್ಲಾ ಅನುಮಾನಕ್ಕೆ ಉತ್ತರ ಸಿಕ್ಕಬೇಕು. ಅಲ್ಲೀವರೆಗೆ ನೀನಲ್ಲ ನಿಮ್ಮಜ್ಜ ಬಂದರೂ ನನ್ನ ಬಾಯಿ ಬಿಡಿಸೋದಕ್ಕೆ ಸಾಧ್ಯವಿಲ್ಲ. ಯಾವ ರಿಸ್ಕನ್ನೂ ತಗೊಳ್ಳೋದಕ್ಕೆ ನಾನು ತಯಾರಿಲ್ಲ. ತಿಳುಕೋ! ನೀನು ಸುಳ್ಳಾದರೂ ಹೇಳು. ನಿಜಾನಾದರೂ ಹೇಳು. ಒಟ್ಟಿನಲ್ಲಿ ನನ್ನ ತಲೆ ಒಳಗಿರುವ ಸಮಸ್ಯೆಗಳು ಪರಿಹಾರವಾದರೆ ಸರಿ!''

''ಇಲ್ಲಪ್ಪಾ, ನಿಜಾನೆ ಹೇಳುತ್ತೇನೆ ಕೇಳು. ನಿನ್ನ ತಲೆ ಒಳಗಿನ ಸಮಸ್ಯೆಗಳೆಲ್ಲ ಅದರಿಂದ ಪರಿಹಾರವಾಗ್ತವೆ ಅಂತ ಗ್ಯಾರೆಂಟಿ ಮಾತ್ರ ಕೊಡೋದಕ್ಕಾಗಲ್ಲ. ನೀನೂ ನಿನ್ನ ಸಮಸ್ಯೆಗಳನ್ನೆಲ್ಲ ಕೂಲಂಕಶವಾಗಿ ಹೇಳಿದರೆ ಇಬ್ಬರೂ ಕೂತುಕೊಂಡು ಜುಗಾರಿ ಕ್ರಾಸಿನ ಒಗಟುಗಳನ್ನೆಲ್ಲ ಬಿಡಿಸೋದಕ್ಕೆ ಪ್ರಯತ್ನಿಸಬಹುದು.

ನಾನು ನನ್ನ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟಿನ ಕೆಲಸ, ನೀನು ಮೈಸೂರು ಬಿಟ್ಟ ಆರು ತಿಂಗಳ ಮೇಲೆ ಬಿಟ್ಟು 'ವಿಘ್ನೇಶ್ವರ ಸೆಕ್ಯೂರಿಟೀಸ್' ಅಂತ ಒಂದು ಡಿಟೆಕ್ಟಿವ್ ಏಜನ್ಸಿ ತೆರೆದೆ. ಅದ್ಯಾಕೆ ತೆರೆದೆ? ಈ ಕೆಲಸಕ್ಕೆ ನಾನೇಕೆ ಹೋಗಬೇಕಾಯ್ತು? ಅವೆಲ್ಲ ವಿವರಗಳು ಈಗ ಬೇಡ. ನಾನು ಬಿಟ್ಟ ಮೇಲೆ ಆ ಕೆಲಸಕ್ಕೆ ರಾಮಾನುಜ ಅಂತ ಒಬ್ಬ ಸೇರಿಕೊಂಡ. ನಿನಗೆ ಗೊತ್ತಿರಬಹುದು, ನಮಗಿಂತ ಒಂದು ವರ್ಷ ಜೂನಿಯರ್ ಕಣೋ, ಪಿಳ್ ಜುಟ್ಟು ಬಿಟ್ಟುಕೊಂಡು ಕಾಲೇಜಿಗೆ ಬರ್‍ತಾನೆ ಅಂತ ಹಾಸ್ಯ ಮಾಡ್ತಿದ್ದರಲ್ಲ ಎಲ್ಲ, ಅವನೇ! ಅವನು ಕೆಲಸಕ್ಕೆ ಸೇರಿ ಒಂದು ತಿಂಗಳಿಗೇ ಅವನನ್ನು ಯಾರೋ ಮರ್ಡರ್ ಮಾಡಿದರು. ಬೆಳ್ಳಿಯಪ್ಪ ಅಂತ ಒಬ್ಬ ಕೊಡಗ ಈ ಅಯ್ಯಂಗಾರಿ ಹೆಣ್ತಿಗೆ ಕಣ್ಣು ಹಾಕಿದ್ದನಂತೆ. ಅವನೇ ಇದಕ್ಕೆ ಕಾರಣ ಅಂತ ಪೋಲೀಸಿನವರು ಅವನ ಮೇಲೆ ಖೂನಿ ಕೇಸು ಹಾಕಬೇಕೆಂದಿದ್ದಾಗ ಅವನು ನನ್ನ ಹತ್ತಿರ ಬಂದು ತಾನು ನಿರಪರಾಧಿ, ಹೇಗಾದರೂ ಬಚಾವ್ ಮಾಡಬೇಕು ಅಂತ ಗೋಗರೆದ. ಹಂಗಾಗಿ ನಾನು ಈ ಕೇಸು ಕೈಗೆ ತಗೊಂಡೆ. ಅವನನ್ನೇನೋ ಬಚಾವ್ ಮಾಡಿದೆ ಅನ್ನು. ಯಾಕಂದರೆ ಅವನಮೇಲೆ ಕೇಸ್ ಹಾಕಲು ನಿಜವಾಗಿಯೂ ಪೋಲೀಸರಿಗೆ ಯಾವ ಸಾಕ್ಷಾಧಾರಗಳೂ ಇರಲೇ ಇಲ್ಲ. ಆದರೂ ಬೆಳ್ಳಿಯಪ್ಪ ನಿರಪರಾಧಿ ಅನ್ನೋದನ್ನು ಪ್ರತಿಪಾದಸ್ತ ನನಗೆ ಒಂದು ಸಮಸ್ಯೆ ಶುರುವಾಯ್ತು! ಹಾಗಾದರೆ ಯಾರು ಯಾಕೆ ಈ ಅಯ್ಯಂಗಾರಿಯನ್ನು ಖೂನಿ ಮಾಡಿದರು ಅಂತ. ಅದನ್ನು ತನಿಖೆ ಮಾಡುತ್ತ , ನಿನಗೆ ಕೊಟ್ಟ ಕಡತ ಸಿಕ್ಕಿದ್ದು ನನಗೆ ಅವಾಗಲೇ. ಅವನು ಅದರಮೇಲೆ ಮಾಡಿದ ಸಂಶೋಧನೆಯ ಕರಡು ಪ್ರತಿಗಳನ್ನ ನೋಟ್ಸುಗಳನ್ನ ಎಲ್ಲಾ ನಾಶಮಾಡಿದ್ದರು. ಬರೇ ಈ ಕಡತ, ಆಮೇಲೆ ಇದನ್ನು ಎಡಿಟ್ ಮಾಡಿಕೊಡಲು ಯಾರೋ ಅಯ್ಯಂಗಾರಿಗೆ ಕೊಟ್ಟ ಮುಂಗಡ ಹಣ, ಇಷ್ಟೇ ನನಗೆ ಸಿಕ್ಕಿದ್ದು. ಅವನಿಗೆ

ಕೊಟ್ಟ ಹಣದಮೇಲೆ ಏನಾದರೂ ಕೊಲೆಪಾತಕಿಗಳ ಬೆರಳಚ್ಚು ಮೂಡಿರುತ್ತ ಎಂದು ಪರೀಕ್ಷೆಗೆ ತಗೊಂಡು ಹೋದಾಗ, ಯಾವ ಬೆರಳಚ್ಚೂ ಸಿಗದಿದ್ದರೂ, ಇನ್ನೊಂದು ದೊಡ್ಡ ಜಾಡು ಪತ್ತೆಯಾಯ್ತು. ಆ ನೋಟುಗಳು ಅದ್ಭುತ ಕೋಟಾ ನೋಟುಗಳಾಗಿದ್ದುವು. ಬೆರಳಚ್ಚು ಮೂಡಿದೆಯ ಅಂತ ಪರೀಕ್ಷೆ ಮಾಡಲು ಒಯ್ಯದಿದ್ದರೆ ಅವು ಕೋಟಾ ನೋಟುಗಳು ಅಂತ ನಾನು ಇರಲಿ ಬ್ಯಾಂಕಿನವರಿಗೂ ಪತ್ತೆಹಚ್ಚೋದಕ್ಕೆ ಸಾಧ್ಯವಿರಲಿಲ್ಲ. ಅದರ ಜಾಡಿನಲ್ಲಿ ಹಾಗೇ ಪತ್ತೆ ಮುಂದುವರಿಸಿದೆ. ಆ ನೋಟುಗಳು ಬೆಂಗಳೂರು ಪುಸ್ತಕದ ವ್ಯಾಪಾರಿ ಮಂಘಾರಾಮನಿಂದ ಬಂದವೆಂದೂ, ಅಲ್ಲಿಂದ ಮುಂದೆ ಆ ನೋಟಿನ ಜಾಡು ಎಲ್ಲೆಲ್ಲೋ ಸುತ್ತಿ ಜುಗಾರಿಕ್ರಾಸ್ ಜೀವನ್ ಲಾಲ್‌ವರೆಗೂ ಬಂತು. ನಾನು ಅದರ ಜಾಡು ಹಿಡಿದು ಇಲ್ಲೀವರೆಗೂ ಬರುತ್ತಿರಲಿಲ್ಲ. ಕೇಂದ್ರ ಗೂಢಚಾರ ಶಾಖೆಯವರು ನನಗಿಂತ ಮೊದಲೇ ಇದರ ಜಾಡು ಹಿಡಿದು ತನಿಖೆ ನಡೆಸುತ್ತಾ ಇದ್ದರು. ಆದರೆ ಅವರಿಗೆ ಪೋಲೀಸು ಡಿಪಾರ್ಟಮೆಂಟಿನವರು ರಾಜಕಾರಣಿಗಳು ಎಲ್ಲ ಈ ದಂಧೆಯಲ್ಲಿ ಸೇರಿಕೊಂಡಿದ್ದುದರಿಂದ ತನಿಖೆ ತುಂಬ ಕ್ಲಿಷ್ಟವಾಗಿ ನಮ್ಮ ಖಾಸಗಿ ಡಿಟೆಕ್ಟಿವ್ ಏಜನ್ಸಿಯ ಸಹಾಯ ಕೋರಿದರು. ಲಕ್ಷಾಂತರ ರೂಪಾಯಿ ಫೀಸು ಕೊಡುತ್ತೇವೆಂದು ಹೇಳಿದ್ದರಿಂದ ನಾನೇ ಖುದ್ದು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದೆ. ಈ ದಂಧೆಗೆ ಅಪ್ರೂವರ್ ಆಗಲು ಶೇಷಪ್ಪ ಒಪ್ಪಿಕೊಂಡಿದ್ದರಿಂದ ಅವನ ಪರಿಚಯವಾಯ್ತು. ಈ ಕೇಸು ಇವತ್ತು ನಾಳೆಯಲ್ಲಿ ಕ್ಲೋಸಾಗಿ ಆಪಾದಿತರೆಲ್ಲ ಒಳಗೆ ಹೋಗೋ ಹಂತದಲ್ಲಿರೋದರಿಂದ ನಿನಗೆ ಹೇಳಿದರೆ ತೊಂದರೆ ಇಲ್ಲವೆಂದು ಹೇಳಿದ್ದೇನೆ. ಈಗ ನಿನ್ನ ಸಂಶಯ ಸಾಕಷ್ಟು ಪರಿಹಾರ ಆಗಿರಬಹುದಲ್ಲವ?''

''ಇಲ್ಲ! ಏನೇನೂ ಆಗಿಲ್ಲ. ನನ್ನ ಸಂಶಯ ಹೆಚ್ಚಾಗ್ತಾ ಇದೆ''

''ಹಾಗಿದ್ದರೆ ಸಂಶಯಾತ್ಮಾ ವಿನಶ್ಯತಿ! ನಿನ್ನ ಕತೆ ಮುಗೀತು ಬಿಡು. ನಾನಂತೂ ಸುಳ್ಳು ಹೇಳುತ್ತಾ ಇಲ್ಲಪ್ಪ''

''ನಿನಗೆ ಆ ಕಾವ್ಯ ಅಯ್ಯಂಗಾರಿ ಎಡಿಟ್ ಮಾಡ್ತ ಇದ್ದಿದ್ದಕ್ಕೂ ಖೂನಿಗೂ ಏನು ಸಂಬಂಧ ಅಂತ ಅನುಮಾನ ಬರಲಿಲ್ಲವ? ಆ ಕಾವ್ಯ ಓದಿ ನೋಡಿದಾಗ ಏನನ್ನಿಸಿತು?''

''ಅನ್ನಿಸೋದೇನು! ಅದೊಂದು ಹಳಗನ್ನಡದ ಕಗ್ಗ. ಈ ದರಿದ್ರ ಕಡತಗಳಿಂದ ಕಗ್ಗಗಳಿಂದ ತಪ್ಪಿಸಿಕೊಳ್ಳೋದಕ್ಕೇ ಅಲ್ಲವೇನಯ್ಯ ನಾನು ಕೆಲಸ ಬಿಟ್ಟು ಸೆಕ್ಯೂರಿಟಿ ಏಜನ್ಸಿ ತೆಕ್ಕೊಂಡು ಕಳ್ಳರನ್ನು ಕಾಯ್ತ ಕಾಲ ಹಾಕ್ತಿರೋದು. ನೀನು ಒಂದೂವರೆ ಲಕ್ಷ ಕೊಡ್ತೀನಂದಾಗಲೇ ನನಗೆ ಅರ್ಥವಾಯ್ತು, ಗಂಡಾ ಹೆಣ್ತಿ ಇಬ್ಬರೂ ಜಂಟಿ ಹುಚ್ಚರು ಅಂತ''

''ಹುಚ್ಚರೂ ಅಲ್ಲ ಬೆಪ್ಪರೂ ಅಲ್ಲ. ನೀನು ಜೀವನ್ ಲಾಲ್ ಗ್ಯಾಂಗಿನ ಮೇಲೆ ಇದೂ ಒಂದು ಕೇಸ್ ಫೈಲ್ ಮಾಡಬಹುದು. ರಾಮಾನುಜ ಅಯ್ಯಂಗಾರಿ ರೀತಿಯಲ್ಲಿ

ಇಲ್ಲಿ ಹತ್ತಾರು ಜನ ನಾಪತ್ತೆಯಾಗಿರೋದಕ್ಕೆ ಸಂಬಂಧಪಟ್ಟಿರೋ ಕೇಸು ಇದು'' ಎಂದು ಸುರೇಶ ನಿನ್ನೆ ಕ್ಯಾಪ್ಟನ್ ಖುದ್ದೂಸನ ಘಾಟಿ ಎಕ್ಸ್‌ಪ್ರೆಸ್ ಹತ್ತಿದಾಗಲಿಂದ ಕಮಾನು ಸೇತುವೆವರೆಗೆ ನಡೆದ ಘಟನೆಗಳನ್ನೂ, ಅದನ್ನು ಅವನು ವಿಶ್ಲೇಷಿಸಿ ಅರ್ಥ ಮಾಡಿಕೊಂಡಿರುವ ಬಗೆಯನ್ನೂ ರಾಜಪ್ಪನಿಗೆ ವಿವರಿಸಿದ.

''ಜೀವನ್ ಲಾಲನ ಮೇಲೆ ಹೇಗೆ ಕೇಸು ಹಾಕುತ್ತೀರ್ರೀ? ಕಡತ ನದಿಯಲ್ಲಿ ಕೊಚ್ಚಿಕೊಂಡು ಹೋಯ್ತಲ್ಲ! ಎವಿಡೆನ್ಸೇ ಇಲ್ಲವಲ್ಲ ಈಗ'' ಎಂದಳು ಗೌರಿ.

''ಷ್!!ಷ್!!''ಎಂದು ಗಟ್ಟಿ ಮಾತಾಡದಂತೆ ಗೌರಿಗೆ ಸೂಚಿಸುತ್ತ ರಾಜಪ್ಪ ''ಜೀವನ್ ಲಾಲ್ ಬಾಯಿಗೆ ಮಣ್ಣು ಹಾಕಲಿ. ಅವನೂ ಅವನ ಗ್ಯಾಂಗೂ ಒಟ್ಟಿಗೆ ಎಲ್ಲ ಒಳಗೆ ಹೋಗುತ್ತಾರೆ. ಅವನ ಮನೆ ಕಕ್ಕಸ್ಸಿನ ಸೆಪ್ಟಿಕ್‌ಟ್ಯಾಂಕ್ ಗುಂಡಿಯೊಳಗೆ ಕಳ್ಳನೋಟು ಪ್ರಿಂಟ್ ಮಾಡಿದ ಹೈಡೆಲ್‌ಬರ್ಗ ಮುದ್ರಣ ಯಂತ್ರ, ಎನ್‌ಗ್ರೇವಿಂಗುಗಳು ಎಲ್ಲ ಇರೋದು ಪತ್ತೆಯಾಗಿದೆ. ಎಲ್ಲರನ್ನೂ ರೌಂಡಾಫ್ ಮಾಡ್ತಾ ಇದ್ದಾರೆ. ನಾಳೆ ಒಳಗೆ ಅರ್ಧಕ್ಕರ್ಧ ಜನ ದೇವಪುರದೋರು ಲಾಕಪ್ಪಿನ ಒಳಗಿರ್ತಾರೆ, ನೋಡ್ತಿರಿ! ಆದ್ದರಿಂದ ನಿಮಗೆ ಇನ್ನು ಪ್ರಾಣ ಭಯದಲ್ಲಿ ತಪ್ಪಿಸಿಕೊಂಡು ಓಡೋ ಪ್ರಮೇಯವೇ ಬರೋದಿಲ್ಲ'' ಎಂದು ರಾಜಪ್ಪ ಗೌರಿಗೂ ಸುರೇಶನಿಗೂ ಕೆಂಪು ಕಲ್ಲಿನ ಗುಟ್ಟು ಗೊತ್ತಾಗಿರುವುದರಿಂದ ಉಂಟಾಗಿರುವ ಪ್ರಾಣ ಭೀತಿ ನಿರಾಧಾರವಾದುದೆಂದು ಧೈರ್ಯ ಹೇಳಿದ.

''ಹಂಗಿದ್ದರೆ ನಡೀರ್ರಿ! ದುಡ್ಡಿಸುಗೊಂಡು ತಣ್ಣಗೆ ಮನೆಗೆ ಹೋಗಿ ಬಟ್ಟೆ ಬದಲಾಯಿಸಿ ನಿದ್ದೆ ಮಾಡೋಣ'' ಎಂದು ನಿಶ್ಚಿಂತೆಯ ಭಾವದಲ್ಲಿ ಗೌರಿ ಹೇಳಿದಳು. ರಾಜಪ್ಪ ಮಾತಾಡದೆ ಹೊಳೆ ಕಡೆ ದಿಟ್ಟಿಸುತ್ತ ಸುಮ್ಮನೆ ನಿಂತಿದ್ದ. ಸುರೇಶ ''ಏನಯ್ಯ ಬಹಳ ಆಳವಾಗಿ ಏನನ್ನೋ ಚಿಂತಿಸುತ್ತ ಇರುವಹಾಗೆ ತೋರುತ್ತೆ'' ಎಂದು ಕೇಳಿದ. ''ನೀನು ಹೇಳಿದ ಗುರುರಾಜ ಕವಿಯ ಕಾವ್ಯದ ಅರ್ಥ ನಿಜವ ಅಂತ ಯೋಚಿಸುತ್ತಾ ಇದೀನಿ ಕಣೋ. ಹೌದ? ಅಲ್ಲವ? ನೋಡೋಣ ಅಂದರೆ ಅದನ್ನ ತೆಗೆದು ಹೊಳೆಗೆ ಎಸೆದಿದ್ದೀರ! ಅದ್ಯಾವ ಪದ ಅದರಲ್ಲ ಮಿಸ್ ಆಗಿರೋದು?'' ಎಂದು ಕೇಳಿದ.

''ಅದನ್ನು ನಾನು ನನ್ನ ಹೆಂಡತೀಗೂ ಹೇಳಿಲ್ಲ! ಅಂತದರಲ್ಲಿ ನಿನಗೆ ಹೇಳ್ತೀನೇನಯ್ಯ. ಹೇಳಿದರೆ ಅದನ್ನು ಇಡೀ ಲೋಕಕ್ಕೆ ಹೇಳಬೇಕು. ಇಲ್ಲಾ ಯಾರಿಗೂ ಹೇಳಬಾರದು. ಮತ್ತೆ ಹೊಸ ಗಂಡಾಂತರಗಳನ್ನ ಮೈಮೇಲೆ ಎಳಕೊಳ್ಳೋದಕ್ಕೆ ನಾನಂತೂ ತಯಾರಿಲ್ಲ. ನೀನು ಇದನ್ನೂ ಜೀವನ್‌ಲಾಲ್ ಕೇಸಿನಲ್ಲಿ ಸೇರಿಸಿ ಕೋರ್ಟಿನಲ್ಲಿ ಕೇಳಿದರೂ ನಾನು ಬಾಯಿಬಿಡೋದಿಲ್ಲ ತಿಳುಕೋ!''

''ಅಂಥ ಮುಠ್ಠಾಳ ಕೆಲಸ ಮಾಡೋದಕ್ಕೆ ನಾನು ಹೋಗೋದಿಲ್ಲ. ನೋಡೋ ಸುರೇಶ, ಸರ್ಕಾರಕ್ಕೆ ಅಗತ್ಯ ಇಲ್ಲದಿರೋ ಕೇಸಿನ ತಂಟೆಗೇ ಹೋಗಕೂಡದು. ಅವುಗಳ ಹಿಂದೆ ಯಾವಯಾವ ಕುಳಗಳ ಕೈವಾಡ ಇರ್ತದೋ ಯಾರಿಗೆ ಗೊತ್ತಯ್ಯ. ಜನಗಳ ಕಣ್ಣು ಒರಸೋದಕ್ಕೆ ನಮಗೆ ಈ ಕಡೆಯಿಂದ ಹಿಡಿಯಿರಿ ಅಂತ ಹೇಳಿಬಿಡ್ತಾರೆ,

ಆಕಡೆಯಿಂದ ಇಂಥವನೊಬ್ಬ ಆಸಾಮಿ ಬರ್ತಿದಾನೆ, ಖಲಾಸ್ ಮಾಡಿ ಅಂತ ವರ್ತಮಾನಾನೂ ಕೊಟ್ಟುಬಿಡ್ತಾರೆ. ಅದಕ್ಕೇ ಅಧಿಕಾರಿಗಳೆಲ್ಲ ಮೇಲಿನಿಂದ ಆರ್ಡರಿಲ್ಲದಿದ್ದರೆ ಕಣ್ಣೆದುರ ಅನ್ಯಾಯ ನಡೀತಿದ್ದರೂ ಸುಮ್ಮನಿದ್ದುಬಿಡ್ತಾರೆ, ಮೇಲಿನವರಿಗೆ ಇದೆಲ್ಲ ಅಗತ್ಯ ಇದೆಯೋ ಏನೋ ಅಂತ. ಹಿಂಗಿದೆ ದೇಶದ ಪರಿಸ್ಥಿತಿ! ಅಂಥದರಲ್ಲಿ ನಾನು ಯಾಕೆ ಮೇಲೆ ಬಿದ್ದು ಯಾರಿಗೂ ಬೇಡದ ಕೇಸ್ ಫೈಲ್ ಮಾಡಲು ಹೋಗಲಿ ಹೇಳು. ನೀನೂ ಆ ಕಾವ್ಯ ಪಬ್ಲಿಷ್ ಮಾಡಿದ್ದರೆ ದೊಡ್ಡ ಮುಠ್ಠಾಳತನ ಆಗ್ತಿತ್ತು! ಅಲ್ಲಕಣಯ್ಯ ಇಂಥದೊಂದು ಸೀಕ್ರೆಟ್ ನಮಗೆ ಗೊತ್ತಾಗಿರೋದು ನಮ್ಮ ಪೂರ್ವಜನ್ಮದ ಪುಣ್ಯ ಅಲ್ಲವೇನಯ್ಯ? ನಿಜ ಹೇಳಬೇಕೆಂದರೆ ನೀನು ಹೇಳಿರುವ ಇನ್‌ಫರ್‌ಮೇಷನ್ನಿಗೇ ಕೋಟಿಗಟ್ಟಲೆ ಬೆಲೆ ಆಗುತ್ತೆ''

''ಹಂಗಾದರೆ ಒಂದು ಕೋಟಿ ಇಡ್ರಿ ಇಲ್ಲಿ'' ಎಂದಳು ನಗುತ್ತಾ ಗೌರಿ.

''ಅದಕ್ಕೆ ಮೊದಲು ಈ ಒಂದೂವರೆ ಲಕ್ಷ ವಾಪಸ್ ತಗೊಳ್ರಿ. ಒಂದುಸಾರಿ ಹೋಗಿ ಆ ಕೆಂಪು ಕಲ್ಲು ಅದೆಲ್ಲಿ ಸಿಗುತ್ತೆ ನೋಡಿಕೊಂಡು ಬರೋಣ. ಆಮೇಲೆ ನಿಮ್ಮ ಒಂದುಕೋಟಿ ತೀರಿಸೋದು ಕಷ್ಟವ? ಅಲ್ಲೆ ಸ್ಪಾಟಲ್ಲೆ ತೀರ್ಮಾನ ಮಾಡಿಬಿಡ್ತೀನಿ'' ಎಂದು ಹೊಸದೊಂದು ಗಂಡಾತರಕಾರಿ ಯೋಜನೆಯನ್ನು ರಾಜಪ್ಪ ತಮಾಷೆಯಾಗೇ ಅವರ ಮುಂದಿಟ್ಟ. ಆ ಕಲ್ಪನೆಗೇ ಗೌರಿಗೆ ರೋಮಾಂಚನವಾಗಿ ''ಅದರ ಬೆಲೆ ಇಡೀ ಭೂಮಂಡಲ ಅಂತೆ ಕಣ್ರಿ. ಕುಂಟರಾಮ ನಮಗೆ ಸುರಂಗದೊಳಗೆ ಹೇಳಿದ. ಕಲ್ಲು ಸಿಕ್ಕಮೇಲೆ ಶಿಫಾರಸ್ ಪತ್ರ ತಗೊಳ್ಳೋದಕ್ಕೆ ಅವನ್ನ ಕರಕೊಂಡು ಬರಬೇಕಾಗುತ್ತೆ'' ಎಂದಳು.

''ಕುಂಟರಾಮ ಪ್ರಾಣ ಉಳಿಸಿಕೊಳ್ಳೋದಕ್ಕೆ ಆ ಸುರಂಗದಲ್ಲಿ ಕದ್ದು ಕಾಲ ಹಾಕ್ತಿದ್ದಾನೆ. ಇವಳು ಇಲ್ಲಿ ಅವನ ಸಂಗತಿ ಟಾಂಟಾಂ ಮಾಡ್ತಿದಾಳೆ. ನಾನು ಗುರುರಾಜ ಕವಿಯ ಕಳೆದು ಹೋದ ಪದ ಯಾಕೆ ಯಾರಿಗೂ ಹೇಳಲ್ಲ ಈಗ ಇಬ್ಬರಿಗೂ ಗೊತ್ತಾಯ್ತು! ಒಂದು ವಿಷಯ ನೀವಿಬ್ಬರೂ ಸ್ಪಷ್ಟವಾಗಿ ತಿಳಿದುಕೊಂಡಿರಿ, ಗುರುರಾಜ ಕವಿಯ ಕಾವ್ಯ ಕೈಯ್ಯಲ್ಲಿಲ್ಲದೆ ಯಾವ ಬ್ರಹ್ಮನಿಗೂ ಆ ಜಾಗ ಪತ್ತೆ ಮಾಡೋದಕ್ಕೆ ಸಾಧ್ಯವಿಲ್ಲ''

''ಥುತ್, ನೀನೊಬ್ಬ ತರ್ಲೆ ಕಣೋ'' ಎಂದು ನಿರುತ್ಸಾಹಗೊಳಿಸುತ್ತಿರುವುದಕ್ಕೆ ರಾಜಪ್ಪ ರೇಗಿ ಸುರೇಶನಿಗೆ ಬಯ್ದ.

''ತರ್ಲೆನೂ ಅಲ್ಲ ಏನೂ ಅಲ್ಲ. ಕುಂಟರಾಮನೇ ಸ್ಪಷ್ಟವಾಗಿ ಹೇಳಿದನಲ್ಲ! ಅವನಿಗೆ ಸಹಿತ ಆ ಜಾಗ ಮತ್ತೊಂದು ಸಾರಿ ಪತ್ತೆ ಹಚ್ಚೋದಕ್ಕೆ ಸಾಧ್ಯವೇ ಇಲ್ಲಾಂತ, ಬೇಕಾದರೆ ಗೌರಿಯನ್ನೇ ಕೇಳು. ಇದೊಂದು ಕಗ್ಗತ್ತಲೆಯ ಕಾಡು ಕಣೋ! ಸರಿಯಾದ ನಕಾಶೆ ಇಲ್ಲದೆ ಒಳಗೆ ಹೋದೋನು ವಜ್ರ ಪತ್ತೆಮಾಡೋದಿರಲಿ ಆಚೆ ಬರೋದಕ್ಕೂ ಆಗೋದಿಲ್ಲ. ಈ ಪರ್ವತಗಳೆಲ್ಲ ಅಯಸ್ಕಾಂತ ಪರ್ವತಗಳಾಗಿರೋದರಿಂದ ನೀನು ಕಾಂಪಾಸ್ ತಗೊಂಡು ಹೋದರೂ ದಾರಿ ಸಿಕ್ಕೋದಿಲ್ಲ. ಅದಕ್ಕೇ ಇಲ್ಲಿ ವರ್ಷಾ ವರ್ಷಾ

ವಿಮಾನಗಳು ಢಿಕ್ಕಿ ಹೊಡೆದು ಬೀಳೋದು. ಇಲ್ಲೀವರೆಗೆ ಬಿದ್ದೋರದ್ದು ಹೆಣ ಅಥವಾ ಅವಶೇಷ ಸಿಕ್ಕಿದೆಯ?''

''ನೋಡೋ ಸುರೇಶ. ನೀನು ಜುಗಾರಿ ಕ್ರಾಸಿನ ಅಮಲು ಇವನಿಗೂ ಹಿಡಿದಿದೆ ಅಂತ ತಿಳುಕೊಂಡರೂ ಪರ್ವಾಗಿಲ್ಲ. ನಾನಂತೂ ಇದನ್ನು ಇಲ್ಲಿಗೇ ಬಿಡೋದಕ್ಕೆ ತಯಾರಿಲ್ಲ.'' ರಾಜಪ್ಪ ದೃಢನಿರ್ಧಾರದ ದನಿಯಲ್ಲಿ ಹೇಳಿದ.

''ಕರೆಕ್ಟ್ ನೀವು ಹೇಳೋದು. ನಾನು ಹೇಳಿದರೆ ನನಗೆ ಧನಪಿಶಾಚಿ ಹಿಡುಕೊಂಡಿದೆ ಅನ್ನುತ್ತಾರೆ. ದುಡ್ಡು ಮುಖ್ಯ ಅಲ್ಲ ಇಲ್ಲಿ. ಇಂಥದೊಂದು ಅದ್ಭುತ ಸಂಗತಿ ಇರುವಾಗ ಅದರ ಬಗ್ಗೆ ಕುತೂಹಲವಾದರೂ ಬೇಡವ ನಮಗೆ. ನದೀ ಮೂಲ ಕಂಡುಹಿಡಿಯೋದಕ್ಕೆ, ಎವರೆಸ್ಟ್ ಹತ್ತೋದಕ್ಕೆ ಎಷ್ಟೊಂದು ಜನ ಪ್ರಯತ್ನಪಟ್ಟಿದಾರೆ. ಅವರಿಗೆಲ್ಲ ದುಡ್ಡಿನ ಆಸೆ ಇತ್ತ.'' ಎಂದು ಗೌರಿ ರಾಜಪ್ಪನ ಅಭಿಪ್ರಾಯವನ್ನು ಬಲವಾಗಿ ಪ್ರತಿಪಾದಿಸಿದಳು.

''ನೋಡೋ! ಆ ಗುರುರಾಜ ಕವಿಯ ಕಾವ್ಯದಲ್ಲಿ ನೀನು ಕಂಡುಹಿಡಿದಿರೋ ಅರ್ಥ ಸರಿ ಇರಬೇಕಂತ ಅನ್ನಿಸುತ್ತೆ. ಈ ಜೀವನ್‌ಲಾಲ್‌ಗೆ ಎಲ್ಲೆಲ್ಲಿಯದೋ ದೇಶಾಂತರದ ಸಂಬಂಧಗಳಿರೋದನ್ನು ಪತ್ತೆಮಾಡಿದಾಗ ನನಗೆ ಕೇವಲ ಕಳ್ಳನೋಟಿನ ವ್ಯವಹಾರಕ್ಕೆ ಇವನಿಗೆ ಇಷ್ಟೊಂದೆಲ್ಲ ಕನೆಕ್ಷನ್ ಅಗತ್ಯವಿದೆಯ ಅಂತ ಆಶ್ಚರ್ಯವಾಗಿತ್ತು. ಕೆಂಪುವಜ್ರದ ದಂಧೆ ವಿಚಾರ ನೀನು ಹೇಳತ್ಲೂ ಈಗ ಎಲ್ಲ ಅರ್ಥವಾಗ್ತ ಇದೆ.'' ಎಂದು ರಾಜಪ್ಪ ಸುರೇಶ ಊಹಿಸಿದ ದ್ವಿಸಂಧಾನ ಕಾವ್ಯದ ಅರ್ಥ ಸರಿ ಅನ್ನುವುದಕ್ಕೆ ತನ್ನದೇ ಆದ ಪ್ರತಿಪಾದನೆಗಳನ್ನು ಕೊಡುತ್ತಾ ಇದ್ದಕ್ಕಿದ್ದಂತೆ ಸಂಶಯಾಕುಲಿತನಾಗಿ ''ಅಲ್ವೋ ಸುರೇಶ, ಈಗ ಈ ಕಳ್ಳನೋಟುಗಳು ಖೂನಿಯಾದ ರಾಮಾನುಜ ಅಯ್ಯಂಗಾರಿ ಹತ್ರ ಸಿಕ್ಕಿದ್ದರಿಂದ ಗುರುರಾಜ ಕವಿಯ ಕಡತ ಜೀವನ್‌ಲಾಲನೇ ಎಡಿಟ್ ಮಾಡಿಸುತ್ತಿದ್ದವನು ಅಂತ ಭಾವಿಸೋದಾದರೆ, ಈ ಕೆಂಪು ಕಲ್ಲಿನ ದಂಧೆ ಗೊತ್ತಿದ್ದೋನಿಗೆ ಆ ಕಡತ ಕಟ್ಟಿಕೊಂಡು ಏನಯ್ಯ ಆಗಬೇಕಾಗಿದೆ?'' ಎಂದು ಸುರೇಶನನ್ನು ಕೇಳಿದ.

''ಅದನ್ನು ನಾನೂ ಯೋಚಿಸ್ತಿದೀನಿ ಕಣೋ, ಎರಡು ಸಾಧ್ಯತೆ ನನಗೆ ಹೊಳೆಯುತ್ತೆ. ಒಂದು ಜೀವನ್‌ಲಾಲನಿಗೆ ಅದರ ಇತ್ಯೋಪರಿ ಗೊತ್ತಿಲ್ಲ. ಯಾರೋ ತಂದುಕೊಡ್ತಿದ್ದಾರೆ ಇವನು ಈ ಕಾಳಧಂದೆಯ ಸೂತ್ರ ಹಿಡುಕೊಂಡಿದ್ದಾನೆ. ಇದು ಸರಿ ಅನ್ನೋಹಾಗಿದ್ದರೆ ಜೀವನ್‌ಲಾಲ್ ತಾನೆ ಪತ್ತೆ ಹಚ್ಚೋದಕ್ಕೆ ಪ್ರಯತ್ನ ಮಾಡ್ತಿದಾನೆ. ಇನ್ನೊಂದು, ಅವನಿಗೆ ಎಲ್ಲಾ ಗೊತ್ತಿದ್ದು ನಿಯಂತ್ರಿಸುತ್ತಾ ಇದ್ದಾನೆ ಅಂತಾದರೆ, ಇವನ ದಂಧೆಯೊಳಗಿನ ಇನ್ಯಾರೋ ಖದೀಮರು ಇದನ್ನು ತಿಳುಕೊಳ್ಳೋದಕ್ಕೆ ಪ್ರಯತ್ನ ಪಡ್ತಿದಾರೆ. ಇವನು ಆ ಪ್ರಯತ್ನ ಮಟ್ಟ ಹಾಕ್ತಿದ್ದಾನೆ. ಒಟ್ಟಿನಲ್ಲಿ ಈ ವ್ಯವಹಾರದಲ್ಲಿ ಎರಡು ಪಾರ್ಟಿಗಳು ಇರಬಹುದು. ಇವರ ಗುಂಪಿನೊಳಗೆಲ್ಲಾ ಚಲಾವಣೆಯಲ್ಲಿರೋ ಕಳ್ಳನೋಟುಗಳು ರಾಮಾನುಜ ಅಯ್ಯಂಗಾರಿ ಹತ್ರ ಸಿಕ್ಕಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ

ಬಿಡು''

''ಹಂಗಿದ್ದರೆ ಆ ಬುಟ್ಟಿ ಹೆಣೀತಾಳಲ್ಲ ಮೂಕಿ ದ್ಯಾವಮ್ಮನ ಗಂಡಾನೆ ಇವರಿಗೆ ಕೆಂಪು ಕಲ್ಲು ತಂದುಕೊಡ್ತಾ ಇರಬಹುದು ಕಣ್ರಿ. ಅವನನ್ನ ಹೆಂಗಾದರೂ ನಮ್ಮ ಜೊತೆ ಸೇರಿಸಿಕೊಂಡರೆ ನಮಗೆ ಅನುಕೂಲ ಅಲ್ಲವ?'' ಎಂದು ಗೌರಿ ಮಧ್ಯೆ ಬಾಯಿ ಹಾಕಿ ಹೇಳಿದಳು.

''ಹುಚ್ಚಿ! ಇಷ್ಟು ದಿನ ಅವನು ಬದುಕಿರ್ತಾನೆ ಅಂತೀಯ? ಆಗಾಗ ಒಬ್ಬೊಬ್ಬರು ಮಾಯ ಆಗ್ತಿರೋದನ್ನ ನೋಡಿದರೆ ಆ ಕಲ್ಲುಗಳ ಮೌಲ್ಯ ತಂದುಕೊಡೋರಿಗೆ ಗೊತ್ತಾಗುತ್ತಿದ್ದಹಾಗೇ ಅವರನ್ನ ಕೈಲಾಸಕ್ಕೆ ಕಳಿಸುತ್ತಾ ಇದ್ದಾರೆ ಅಂತ ಅನ್ನಿಸುತ್ತೆ. ದ್ಯಾವಮ್ಮನ ಗಂಡ ಆಕಸ್ಮಾತ್ ಇನ್ನೂ ಬದುಕಿದ್ದು ನೀನೇನಾದರೂ ಈ ವಿಷಯ ಅವನ್ನ ಕೇಳಿದರೆ, ಇಲ್ಲಾ ಅವನು ಬುದ್ಧಿವಂತನಾಗಿದ್ದರೆ ನಿನ್ನ ಖೂನಿಮಾಡಬೇಕು ಅಥವಾ ಮುಠ್ಠಾಳನಾಗಿದ್ದರೆ ಅವನು ಖೂನಿಯಾಗ್ತಾನೆ. ಅಷ್ಟೇ ತಿಳುಕೋ''

''ಕರೆಕ್ಟ್ ಕಣಯ್ಯ ನೀನು ಹೇಳೋದು. ಏನಿದ್ದರೂ ಸ್ವಂತ ಜವಾಬ್ದಾರಿ ಮೇಲೆ ಯಾರ ಹತ್ರಾನೂ ಚಕಾರ ಎತ್ತದೆ ನಾವೇ ಏನು ಮಾಡೋದಿದ್ರೂ ಮಾಡಬೇಕು'' ಎಂದು ರಾಜಪ್ಪ ಸುರೇಶನ ಮಾತಿಗೆ ಸಮ್ಮತಿ ಸೂಚಿಸುವಂತೆ ಅಂದ.

''ಸರಿ ಈಗ ಆ ಕಾವ್ಯ ದೋಣಿಹೊಳೆಯಲ್ಲಿ ಚೂರು ಚೂರಾಗಿ ಕರಗೇ ಹೋಗದೆಯಲ್ಲ!''ಎಂದ ಸುರೇಶ.

''ಕೈಲಿದ್ದಿದ್ದರೆ ಹುಡುಕಲು ಬರ್ತಿದ್ದೆಯ?''

''ಮತ್ತೆ ಮನೇಲಿ ಕೂತುಗೊಂಡು ಏನ್ಮಾಡ್ತಿ''

''ಹ್ಞಾ! ಹಂಗೆ ಬಾ ದಾರಿಗೆ. ಇಷ್ಟೆಲ್ಲಾ ತಿಳುಕೊಂಡು ಈ ಹಂತದಲ್ಲಿ ಅದನ್ನು ಕೈ ಬಿಡಲು ಸಾಧ್ಯವೇ ಇಲ್ಲ. ನಾನು ಇಡೀ ಭೂಮಂಡಲ ತಲೆಕೆಳಗು ಮಾಡಿ ಅದರದ್ದೊಂದು ಕಾಪಿ ಎಲ್ಲಾದರೂ ಸಿಕ್ಕುತ್ತ ಹುಡುಕುತ್ತೇನೆ ಇಷ್ಟಕ್ಕೇ ಬಿಡುಗಿಡೋ ಮನ್‌ಷಾ ಅಲ್ಲ ನಾನು. ಅಲ್ಲೀವರೆಗೆ ಆ ಕಳೆದು ಹೋಗಿರೋ ಪದ ಪತ್ತೆ ಮಾಡಿದೀಯಲ್ಲ ಅದನ್ನು ಮರೀಬೇಡ ಮಾರಾಯ. ನಮಗ್ಯಾರಿಗೂ ಹೇಳದಿದ್ರೂ ಪರ್ವಾಗಿಲ್ಲ, ನೀನು ಒಂದುಕಡೆ ಎಲ್ಲಾದರೂ ಗುಟ್ಟಾಗಿ ಬರ್ದಿಟ್ಟುಕೊಂಡರೆ ವಾಸಿ. ಈಗಲೇ ಕರಾರು ಮಾಡ್ಕೊಳ್ಳೋಣ. ನಿಧಿ ಸಿಕ್ಕರೆ ನಮ್ಮಿಬ್ಬರಿಗೂ ಫಿಫ್ಟಿ ಫಿಫ್ಟಿ. ಏನಂತೀಯ'' ಎಂದ ರಾಜಪ್ಪನ ಮಾತಿಗೆ ಗೌರಿ ರೇಗಿ ''ಏನ್ರಿ, ಹೆಂಗಸೂ ಅಂತ ನೀವು ನನ್ನನ್ನು ಲೆಕ್ಕಕ್ಕೇ ಇಟ್ಟುಕೊಂಡಿರೋ ಹಾಗೆ ಕಾಣೋದಿಲ್ಲ'' ಎಂದಳು. ''ಅಯ್ಯಯ್ಯೋ ಸಾರಿ ಸ್ಸಾರಿ ಮೇಡಂ. ನಿಮ್ಮನ್ನ ಮರೆಯೋದಕ್ಕೆ ಆಗತ್ತೆ! ಒನ್ ಬೈ ತ್ರೀ ಮಾಡೋಣ'' ಎಂದು ನಗುತ್ತ ರಾಜಪ್ಪ ಹೇಳಿದ.

''ಏನು ಆ ವಜ್ರಗಳೆಲ್ಲ ನಿಮ್ಮಪ್ಪನ ಮನೆ ಆಸ್ತಿ ಅನ್ನುವ ಹಾಗೆ ಹಂಚಿಗೋತ ಇದ್ದೀರಲ್ಲ. ಆ ಪುಸ್ತಕದ ಪ್ರತಿ ಇನ್ನೊಂದು ಸಿಕ್ಕೋದರಲ್ಲಿ ನನಗೆ ಚೂರೂ ನಂಬಿಕೆ

ಇಲ್ಲ. ಅಲ್ಲೀವರೆಗೆ ನೀವು ಹಂಚಿಕೊಳ್ತಿರೋದೆಲ್ಲ ಕನ್ನಡಿ ಗಂಟು, ತಿಳುಕೋ'' ಎಂದ ಸುರೇಶ ಹಠಾತ್ತನೆ ಮಾತು ನಿಲ್ಲಿಸಿ ದೂರದಲ್ಲಿ ಬರುತ್ತಿದ್ದ ವಾಹನದ ಸದ್ದು ಕಿವಿಗೊಟ್ಟು ಆಲಿಸಿ ''ಯಾವುದೋ ಬಸ್ಸೋ ಕಾರೋ ಬರ್‍ತಿದೆ. ನಡಿ ಮನೆಗೆ ಹೋಗಿ ಮಾತಾಡೋಣ'' ಎಂದು ರಾಜಪ್ಪನಿಗೆ ಹೇಳಿದ. ಮೂವರೂ ನಡೆಯುತ್ತಾ ಕಮಾನು ಸೇತುವೆ ದಾಟಿದರು. ಅಷ್ಟರಲ್ಲಿ ವಾಹನದ ಸದ್ದು ಹತ್ತಿರಾಗಿ ರಸ್ತೆ ಇಳಿಜಾರಿನಲ್ಲಿ ಕ್ಯಾಪ್ಟನ್ ಖುದ್ದೂಸನ ಘಾಟಿ ಎಕ್ಸ್‌ಪ್ರೆಸ್ ಬರುತ್ತಿರುವುದು ಕಂಡಿತು.

''ಕರೆಕ್ಟಾಗಿ ನಿನ್ನೆ ಟೈಮಿಗೇ ಇವತ್ತೂ ಬಂದಿದಾನೆ. ನಾವು ಊರು ಬಿಟ್ಟು ಸರಿಯಾಗಿ ಈಗ ಇಪ್ಪತ್ತನಾಲ್ಕನೆ ಘಂಟೆ, ಅಂದರೆ ಒಂದು ದಿನ ಕಳೆದಿದೆ ಅಷ್ಟೆ'' ಎಂದ ಸುರೇಶ.

''ನಂಗಂತೂ ಒಂದು ವರ್ಷ ಕಳೆದ ಭಾವನೆ ಬರ್‍ತಿದೆ'' ಎಂದು ಗೌರಿ ಹೇಳುತ್ತಿರಬೇಕಾದರೆ ಖುದ್ದೂಸ್ ಬ್ರೇಕ್ ಒತ್ತಿ ಬಸ್ ನಿಲ್ಲಿಸಿದ.

ಕಂಡಕ್ಟರ್ ಬೆರಳು ನಾಲಗೆಗೆ ತಿಕ್ಕುತ್ತ ಸುರೇಶನತ್ತ ಟಿಕೆಟ್ ಪುಸ್ತಕ ಹಿಡಿದು ''ಎಷ್ಟು ಟಿಕೆಟ್?'' ಎಂದ.

''ಮೂರು''

''ಎಲ್ಲಿಗೆ ''

''ಜುಗಾರಿ ಕ್ರಾಸ್!!''

